Digitized by Arya Samaj Foundation Chennai and eGangotri



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DONATION

ಗ್ರಾಮ ಸಮಾಜ

पुस्तकालय
पुस्तकालय
गुरुकुल कांगड़ी विश्वविद्यालय
100826

ಡಾ. ಜೋಗನ್ ಶಂಕರ್

Presented free of cost with compliments from
the Central Institute of Indian Languages
(Govt. of India), Mysore-570 006

ಜೀವ ಪ್ರಕಾಶನ, ಮೈಸೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

GRAMA SAMAJA — A Kannada book on Indian Rural Society by Dr. Jogan Shankar, Reader, P. G. Department of Sociology, University of Mysore-570 006, and Published by Jeeva Prakashana, No. 85, Gangotri Layout, II stage, III cross, Mysore-5700 09.

Pages : VIII + 246

ಮೊದಲ ಮುದ್ರಣ : 1995

© ಶ್ರೀಮತಿ ಶಶಿಕಲಾ ಶಂಕರ್

ಬೆಲೆ : 50 ರೂಪಾಯಿಗಳು

ಮುದ್ರಕರು :
ಶ್ರೀ ಮೀರಾ ಪ್ರಿಂಟರ್ಸ್,
ಶಿವರಾಂಪೇಟೆ, ಮೈಸೂರು-570 001

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಪಣೆ

ನನ್ನ ಪ್ರೀತಿಯ ಗುರುಗಳಾದ ಪ್ರೊ. ಪುನೀತ್ ಎ. ಇ. ಮತ್ತು ಅತ್ತಾರ್ ಯು. ಎ. ಇವರಿಗೆ —

ಈ ಪುಸ್ತಕದಲ್ಲಿನ ಒಪ್ಪುಗಳೆಲ್ಲವೂ ತಮ್ಮವೇ
ತಪ್ಪುಗಳೆಲ್ಲವೂ ನನ್ನವು
ತಪ್ಪು ಒಪ್ಪುಗಳೆಲ್ಲ ತಮಗೆ ಅರ್ಪಿತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ನನ್ನ ಸಹೋದ್ಯೋಗಿ ಹಾಗೂ ಮಿತ್ರರಾದ ಡಾ. ಜೋಗನ್‌ಶಂಕರ್ ಅವರು ಅನುಭವಶಾಲಿಗಳಾದ ಬೋಧಕರೂ ಶಕ್ತಿವಂತರಾದ ಸಂಶೋಧಕರೂ ಆಗಿದ್ದಾರೆ. ಕನ್ನಡದಲ್ಲಿ ಸಮಾಜ ಶಾಸ್ತ್ರ ಬರವಣಿಗೆ ಮಾಡುತ್ತಿರುವ ತರುಣರು. ಅವರ "ದೇವದಾಸಿ ಸಂಪ್ರದಾಯ" ಎಂಬ ಪ್ರಬಂಧ ರಚನಾ ವಿಷಯಕವಾದ ಗ್ರಂಥ ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟು ಈಗಾಗಲೇ ಎರಡನೆಯ ಮುದ್ರಣವನ್ನು ಮುಟ್ಟಿದೆ. ವಿಸ್ತಾರವಾದ ಅವರ ವ್ಯಾಸಂಗ ಪೂರ್ಣವಾದ ಅನುಭವ. ಅವರು ಬರೆದಿರುವ "ಗ್ರಾಮ ಸಮಾಜ" ಎಂಬ ಗ್ರಂಥದಲ್ಲಿ ಪ್ರಚುರಗೊಂಡಿದೆ.

ಹಳ್ಳಿಗಾಡಿನ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಒಡೆದು ನೋಡುವುದಕ್ಕಾಗಿ ಸಮಾಜ ಶಾಸ್ತ್ರಜ್ಞರು ಯಾವ ಮಾರ್ಗದಲ್ಲಿ ಹೊರಟರು. ಅವರು ಉಪಯೋಗಿಸಿದ ತಂತ್ರಗಳೇನು, ಅವರ ವಿಚಾರ ಸರಣಿ ಹೇಗಿದೆ, ತರ್ಕ ಎಷ್ಟು ಹರಿತವಾದದ್ದು, ಅವರ ಸಾಧನೆಗಳೇನು ಮುಂತಾದ ವಿಚಾರಗಳನ್ನು ಈ ಗ್ರಂಥದಲ್ಲಿ ಕಾಣುತ್ತೇವೆ. ಗ್ರಾಮೀಣ ಸಮಾಜದ ವಿಷಯ ವಿಸ್ತಾರವಾದುದ್ದು, ಅಲ್ಲಿನ ಸಮಸ್ಯೆಗಳು ಬಹುಮುಖವಾದವು, ವಾದ-ವಿವಾದಗಳು ಸಂಕೀರ್ಣವಾದವುಗಳು. ಜನ ಸಾಮಾನ್ಯರಿಗೆ ಇಂತಹ ಪ್ರಮುಖ ವಿಷಯವನ್ನು ಸುಲಭ ಮತ್ತು ಸರಳವಾಗಿ ವಿವರಿಸಲು ಡಾ. ಜೋಗನ್ ಶಂಕರ್ ಪ್ರಯತ್ನಿಸಿದ್ದಾರೆ. ವಿಷಯಗಳು ಹಳ್ಳಿಗಳ ಮತ್ತು ಪಟ್ಟಣಗಳ ವಿದ್ಯಾರ್ಥಿಗಳ ಅನುಭವಕ್ಕೆ ಒಳಪಟ್ಟು ಅವರ ಮನಸ್ಸಿಗೆ ಹಿಡಿಸುವ, ಮನಸ್ಸನ್ನು ಸೆಳೆಯುವ, ಬಾಳುಬದುಕುಗಳು, ಸಾಮಾಜಿಕ ಪರಿಸರ, ನೀತಿ ಇವುಗಳನ್ನು ಒಳಗೊಂಡಿವೆ.

ಹಲವು ವರ್ಷಗಳ ಹಿಂದೆ ಕನ್ನಡದಲ್ಲಿ ಸಮಾಜಶಾಸ್ತ್ರ ಬರಹಗಳು ಕಡಿಮೆ ಇದ್ದವು ಇಂದು ಆ ಕೊರತೆ ತುಂಬಲು ಹಲವಾರು ಬರಹಗಾರರು ಮುಂದೆ ಬರುತ್ತಿದ್ದಾರೆ. ಡಾ. ಜೋಗನ್‌ಶಂಕರ್ ಈ ಗುಂಪಿನಲ್ಲಿ ಒಬ್ಬರು. ಉತ್ತಮ ವಿಷಯಗಳನ್ನೊಳಗೊಂಡಿರುವ ಈ ಗ್ರಂಥವನ್ನು ಸಮಾಜ ಶಾಸ್ತ್ರದ ವಿದ್ಯಾರ್ಥಿಗಳು ಆದರದಿಂದ ಬರಮಾಡಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಡಾ. ಸತ್ಯನಾರಾಯಣ
ಅಧ್ಯಕ್ಷರು
ಸಮಾಜ ಶಾಸ್ತ್ರದ ಸ್ನಾತಕೋತ್ತರ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು–570 006.

1–1–1995
ಮೈಸೂರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೃತಜ್ಞತೆಗಳು

ಕರ್ನಾಟಕ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರದ ಪ್ರಾಧ್ಯಾಪಕರಾದ ಡಾ.ಎ.ಇ ಪುನೀತ್ ಅವರು ಅನೇಕ ವರ್ಷಗಳಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಗ್ರಾಮ ಸಮಾಜದ ಬಗ್ಗೆ ಬೋಧನೆ ಮಾಡುತ್ತಿದ್ದಾರೆ. ಅವರ ಬೋಧನಾಕೌಶಲ್ಯ ಮತ್ತು ಸಂಗ್ರಹಿಸುತ್ತಿದ್ದ ಮಾಹಿತಿ ಅಗಾಧವಾದದ್ದು, ಆದರೆ ಅವರ ಬರಹ ಮತ್ತು ಬೋಧನೆಗಳೆರಡೂ ಬಹುತೇಕ ಆಂಗ್ಲಭಾಷೆಯಲ್ಲಿಯೇ. ಅವರು ಬರೆದ 'ರೂರಲ್ ಸೋಷಿಯಲ್ ಸಿಸ್ಟಂ ಇನ್ ಇಂಡಿಯಾ' ಪುಸ್ತಕವು ನನ್ನ ಮೇಲೆ ಪ್ರಭಾವ ಬೀರಿತು. ಇಂತಹದೊಂದಾದರೂ ಪುಸ್ತಕವು ಕನ್ನಡ ಭಾಷೆಯಲ್ಲಿಲ್ಲವೆಂಬ ಕೊರತೆಯು ಸಮಾಜ ಶಾಸ್ತ್ರದ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಕಾಡುತ್ತಿತ್ತು. ಈ ವಿಷಯದ ಬಗ್ಗೆ ಡಾ. ಪುನೀತ್ ಅವರೊಂದಿಗೆ ಪ್ರಸ್ತಾಪ ಮಾಡಿದಾಗ ಅವರು ನನಗೇ ಬರೆಯಲು ಆಜ್ಞಾಪಿಸಿ ತಮ್ಮಲ್ಲಿರುವ ಮಾಹಿತಿ ಹಾಗೂ ತಮ್ಮ ಗ್ರಂಥಗಳನ್ನು ಯಥೇಚ್ಛವಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಪ್ರೋತ್ಸಾಹಿಸಿದ್ದಾರೆ. ಹಾಗೂ ಪ್ರೊ. ಅತ್ತಾರ್ ಯು.ಎ. ಅವರು ನನ್ನ ಶೈಕ್ಷಣಿಕ ಜೀವನದ ಎಲ್ಲ ಹಂತಗಳಲ್ಲಿಯೂ ಮಾರ್ಗದರ್ಶಕರಾಗಿ ಬೆಂಬಲಿಸಿರುತ್ತಾರೆ. ಇವರಿಬ್ಬರ ಪ್ರೋತ್ಸಾಹದ ಫಲವೇ ಈ ಪುಸ್ತಕ. ಅವರುಗಳಿಗೆ ನಾನು ಋಣಿಯಾಗಿದ್ದೇನೆ. ಅವರಿಬ್ಬರಿಗೂ ಈ ಪುಟ್ಟ ಪುಸ್ತಕವನ್ನು ಅರ್ಪಿಸಿದ್ದೇನೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಹೆಚ್.ವಿ. ನಾಗೇಶ್ ಅವರು ನನಗೆ ಅನೇಕ ಸಲಹೆಗಳನ್ನು ನೀಡಿದ್ದಾರೆ. ಅವರ ಗ್ರಂಥಗಳನ್ನು ಬಳಸಲು ನನಗೆ ಅನುಮತಿ ನೀಡಿದ್ದಾರೆ. ಅವರಿಗೂ ನಾನು ಕೃತಜ್ಞ.

ಮೈಸೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ. ಸತ್ಯನಾರಾಯಣ ಅವರು ಈ ಪುಸ್ತಕಕ್ಕೆ ಮುನ್ನುಡಿ ಬರೆದು ಅದರ ಮೌಲ್ಯವನ್ನು ಹೆಚ್ಚಿಸಿದ್ದಾರೆ. ನಮ್ಮ ವಿಭಾಗದ ಹಿರಿಯ ಶಿಕ್ಷಕರಾದ ಪ್ರೊ. ಆರ್. ಇಂದಿರಾ, ಡಾ. ಪರೇಶ ಕುಮಾರ್, ಡಾ. ಆರ್.ಎನ್. ಹಾದಿಮನಿ, ಶ್ರೀ ಗುರುರಾಜ ಬಿಡಿಕರ್ ನನಗೆ ಸದಾಕಾಲ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಇವರೆಲ್ಲರಿಗೂ ನನ್ನ ವಂದನೆಗಳು ಸಲ್ಲಬೇಕು. ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ. ಮುಹಮ್ಮದ್ ಪೀರ್ ಮತ್ತು ಗುಲಬರ್ಗ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ. ಎಂ. ಎಸ್. ಧಡವೇ ಅವರು ನನಗೆ ಅನೇಕ ಸಲಹೆಗಳನ್ನು ನೀಡಿದುದ್ದಕ್ಕಾಗಿ ಅವರನ್ನೂ ನೆನೆಯುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನ್ನ ಸ್ನೇಹಿತರಾದ ಡಾ. ಕೆ. ಟಿ. ಶಿವಣ್ಣ, ಎಂ. ಸತೀಶ್ ಆರ್. ಹೆಚ್. ಎಲ್. ವೆಂಕಟೇಶ್, ಶ್ರೀಕೋದಂಡರಾಮು, ಡಾ. ಕೆ. ಎಂ. ಮೈತ್ರಿ. ಶ್ರೀ ಬಿ. ನಾರಾಯಣ ರಾವ್. ಶ್ರೀ ಮರಾಣಿಕ ಕಟ್ಟಿಮನಿ, ಸದಾಶಿವ ಮರ್ಜಿ, ಪ್ರೊ॥ ಕಲ್ಲೋಳಿಕರ್, ಪ್ರೊ॥ ದಯಾನಂದ ಮಾನೆ, ರಾಜಶೇಖರ್, ಜಯಶೀಲ ಎಂ, ಶ್ರೀಮತಿ ನಾಗರತ್ನಮ್ಮ ಇವರು ಈ ಪುಸ್ತಕದ ಪ್ರಕಟಣೆಯಲ್ಲಿ ವಿವಿಧ ರೀತಿಯಿಂದ ಸಹಾಯ ನೀಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಪುಸ್ತಕದ ಕೈಬರಹದ ಪ್ರತಿಯನ್ನು ಸಂಪೂರ್ಣ ಓದಿ ಅನೇಕ ಟೀಕೆ ಸಲಹೆ ಗಳನ್ನು ನೀಡಿದ ಅಶ್ವತ್ಥನಾರಾಯಣ ಅವರಿಗೂ, ಪ್ರಕಟಣೆಗಾಗಿ ಸಹಕಾರ ನೀಡಿದ ಶ್ರೀ ಶಿವಮಲ್ಲು ಅವರಿಗೂ ವಂದನೆಗಳು, ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಮೀರಾ ಪ್ರಿಂಟರ್ಸ್ ಅವರಿಗೂ ನನ್ನ ಧನ್ಯವಾದಗಳು.

1-1-1995
ಮೈಸೂರು

ಡಾ. ಜೋಗನ್ ಶಂಕರ್
ಪ್ರವಾಚಕ
ಸಮಾಜಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ
ಮೈಸೂರು—570006

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿವಿಡಿ

1.	ಗ್ರಾಮ ಸಮಾಜದ ಅಧ್ಯಯನ	1
2.	ಭೂಮಿ ಮತ್ತು ಸಮಾಜ	9
3.	ಗ್ರಾಮಗಳ ಭೌತಿಕ ಸ್ವರೂಪ	40
4.	ಕುಟುಂಬ	47
5.	ಬಂಧುತ್ವ	72
6.	ಜಾತಿ ಮತ್ತು ಬದಲಾಗುತ್ತಿರುವ ಸ್ತರ ವಿನ್ಯಾಸಗಳು	91
7.	ಜನ ಸಂಖ್ಯೆ	122
8.	ಗ್ರಾಮ ಪಂಚಾಯಿತಿಗಳು	151
9.	ಸಮುದಾಯ ಅಭಿವೃದ್ಧಿ ಯೋಜನೆ	191
10.	ಸರ್ವೋದಯ	209
11.	ಭೂ ಸುಧಾರಣೆ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳು	218
12.	ರೈತ ಹೋರಾಟಗಳು	233

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ-1

ಗ್ರಾಮ ಸಮಾಜದ ಅಧ್ಯಯನ

ಪ್ರವೇಶ

ಗ್ರಾಮ ಸಮಾಜವು ಬದಲಾವಣೆಯ ಬಿರುಗಾಳಿಗೆ ಒಳಗಾಗಿ ಕೇಳರಿಯದ ಸಮಸ್ಯೆಗಳಿಂದ ತಲ್ಲಣಿಸುತ್ತಿರುವಾಗ ಆಯಾ ದೇಶದ, ಕಾಲದ ಜಿಜ್ಞಾಸುಗಳು ಅವುಗಳನ್ನು ಬಗೆಹರಿಸುವ ಸಲುವಾಗಿ ಆಳವಾಗಿ ಚಿಂತಿಸಿರುವುದನ್ನು ಇತಿಹಾಸದ ಪುಟಗಳಿಂದ ತಿಳಿದುಕೊಳ್ಳಬಹುದು. ಆದರೆ ಗ್ರಾಮೀಣ ಜನರ ಜೀವನ ವಿಧಾನ, ಅವರ ವಿಶಿಷ್ಟ ಸಮಸ್ಯೆಗಳ ಬಗ್ಗೆ ವೈಜ್ಞಾನಿಕ ಅಧ್ಯಯನಗಳು ಪ್ರಾರಂಭವಾದದ್ದು ಇತ್ತೀಚೆಗಷ್ಟೆ.

ಔದ್ಯೋಗಿಕ ಕ್ರಾಂತಿಯು ಪ್ರಪಂಚದ ಎಲ್ಲ ಪ್ರದೇಶಗಳ ಗ್ರಾಮೀಣ ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ರಚನೆಯ ಮೇಲೆ ಪ್ರಬಲವಾದ ಪರಿಣಾಮ ಬೀರಿತು. ಅನೇಕ ಸಂಶೋಧಕರು ಈ ಪರಿಣಾಮಗಳ ಅಧ್ಯಯನ ಕೈಗೊಂಡರು. ಗ್ರಾಮಗಳು ಬೆಳೆದು ಬಂದ ಬಗೆ, ಅವುಗಳ ವಿಧಗಳು, ಬದಲಾವಣೆ ಮತ್ತು ಅಭಿವೃದ್ಧಿ ಮುಂತಾದವುಗಳು ಅವರ ಆಸಕ್ತಿಯ ವಿಷಯಗಳಾಗಿದ್ದವು. ಅವರ ಸಂಶೋಧನಾ ತೀರ್ಪುಗಳು ಗ್ರಂಥಗಳಾಗಿ ಪ್ರಕಟವಾಗಿ ಗ್ರಾಮೀಣ ಸಮಾಜದ ಬಗೆಗಿನ ಸಾಹಿತ್ಯ ಬೆಳೆಯತೊಡಗಿತು. ಗ್ರಾಮ ಸಮಾಜ ಅಧ್ಯಯನ ಅಥವಾ ಗ್ರಾಮೀಣ ಸಮಾಜಶಾಸ್ತ್ರವು ಒಂದು ವಿಜ್ಞಾನವಾಗಿ ಬೆಳೆದು ಬಂದ ಕತೆಯು ಕುತೂಹಲಕರವಾದದ್ದು. ಇಂದು ಪ್ರಪಂಚದಲ್ಲಿಯೇ ಅತಿಹೆಚ್ಚಿನ ಪ್ರಮಾಣದಲ್ಲಿ ನಗರೀಕರಣಗೊಂಡ ಅಮೇರಿಕೆಯಲ್ಲಿ ಈ ಶಾಸ್ತ್ರವು ಮೊದಲು ಜನ್ಮತಾಳಿ ಜಗತ್ತಿನ ಎಲ್ಲೆಡೆಯೂ ಹರಡಿತು.

1890-1920ರ ಅವಧಿಯನ್ನು ಅಮೇರಿಕೆಯ ಇತಿಹಾಸದಲ್ಲಿ 'ಸಂಕಟಕಾಲ'ವೆಂದು ಗುರುತಿಸಲಾಗಿದೆ. ಈ ಅವಧಿಯಲ್ಲಿ ಅತಿಯಾದ ಔದ್ಯೋಗಿಕರಣದಿಂದ ಅಮೇರಿಕೆಯ ಗ್ರಾಮಗಳು ನಿರ್ಲಕ್ಷಿಸಲ್ಪಟ್ಟು ಅವುಗಳ ಅವಸಾನದ ಪರಮಾವಧಿ ಕಾಲ. ಗ್ರಾಮಗಳಲ್ಲಿ ಅಶಾಂತಿ, ಸಂಕಟಗಳು, ಗೊಂದಲಗಳು ಹೆಚ್ಚಾಗಿ ಅವುಗಳ ಪರಿಹಾರಕ್ಕಾಗಿ ಚರ್ಚೆ, ವಾದ-ವಿವಾದಗಳು ಪ್ರಾರಂಭವಾದವು. ಆಗ ರೂಜವೆಲ್ಟರು ಅಮೇರಿಕೆಯ ಅಧ್ಯಕ್ಷರಾಗಿದ್ದರು. ಅಮೇರಿಕೆಯ ಗ್ರಾಮಗಳು ಎದುರಿಸುತ್ತಿದ್ದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಸ್ಯೆಗಳ ಪರಿಹಾರೋಪಾಯಗಳನ್ನು ಪಡೆಯಲೇಬೇಕೆಂಬ ನಿರ್ಧಾರ ಹೊಂದಿದ್ದ ರೂಜವೆಲ್ಟರು, ಸುಪ್ರಸಿದ್ಧ ಸಂಶೋಧಕರಾದ ಬೇಲಿಯವರ ಅಧ್ಯಕ್ಷತೆಯಲ್ಲಿ ಗ್ರಾಮ ಜೀವನ ಆಯೋಗ (ಕಂಟ್ರಿ ಲೈಫ್ ಕಮೀಷನ್) ದ ನೇಮಕ ಮಾಡಿದರು. ಈ ಆಯೋಗದ ಮುಖ್ಯ ಉದ್ದೇಶವು ಗ್ರಾಮೀಣ ಜನರ ಸಮಸ್ಯೆಗಳ ಅಧ್ಯಯನ ಹಾಗೂ ಪರಿಹಾರೋಪಾಯಗಳನ್ನು ಸೂಚಿಸುವುದಾಗಿತ್ತು. ಅನೇಕ ಕಾರಣಗಳಿಂದಾಗಿ ಈ ಆಯೋಗದ ವರದಿಯು ಐತಿಹಾಸಿಕವಾದುದು. ಗ್ರಾಮ ಸಮಾಜದ ಸಮಸ್ಯೆಗಳ ತಜ್ಞರಾದ ಬೇಲಿ ಅವರು ತಮ್ಮ ವರದಿಗಾಗಿ ಮಾಹಿತಿ ಸಂಗ್ರಹಿಸುವ ಸಲುವಾಗಿ 5 ಲಕ್ಷ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ ಗ್ರಾಮೀಣ ಜನರು ಮತ್ತು ಅವರ ನಾಯಕರಿಗೆ ಕಳುಹಿಸಿದ್ದರು. ಅವುಗಳಲ್ಲಿ 1 ಲಕ್ಷ ರೈತಾಪಿ ಜನರು ಮಾತ್ರ ಪ್ರಶ್ನಾವಳಿಗಳಲ್ಲಿ ಮಾಹಿತಿಗಳನ್ನು ಭರ್ತಿಮಾಡಿ ಹಿಂದಿರುಗಿಸಿದರು. ಹೀಗೆ ಪಡೆದ ಮಾಹಿತಿಯ ಆಧಾರದ ಮೇಲೆ ಅಮೇರಿಕೆಯ ಗ್ರಾಮ ಸಮಾಜವು ಎದುರಿಸುತ್ತಿದ್ದ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಗ್ರಾಮ ಪುನರುಜ್ಜೀವನಕ್ಕಾಗಿ ಕೆಲವು ಸಲಹೆಗಳನ್ನು ಸೂಚಿಸಿ ವರದಿಯನ್ನು ಸಲ್ಲಿಸಲಾಯಿತು. ಈ ವರದಿಯನ್ನು ಗ್ರಾಮೀಣ ಸಮಾಜಶಾಸ್ತ್ರದ 'ಚಾರ್ಟರ್' ಎಂದು ಪರಿಗಣಿಸಲಾಗಿದೆ.

ಇದೇ ಅವಧಿಯಲ್ಲಿ ಅಂಕಿ ಸಂಖ್ಯೆಗಳ ಹಾಗೂ ಐತಿಹಾಸಿಕ ಅಂಶಗಳ ಆಧಾರ ಮತ್ತು ಸಂದರ್ಶನಗಳಿಂದ ಪಡೆದ ಮಾಹಿತಿಗಳನ್ನಾಧರಿಸಿ ಅಮೇರಿಕೆಯಲ್ಲಿನ ಗ್ರಾಮ ಸಮುದಾಯಗಳ ಅಧ್ಯಯನಗಳೂ ನಡೆದವು. ಸಂಶೋಧನಾ ವಿದ್ಯಾರ್ಥಿಗಳು ಗ್ರಾಮೀಣ ಸಮಾಜದ ಸಮಸ್ಯೆಗಳನ್ನು ಕುರಿತ ಮಹಾಪ್ರಬಂಧಗಳನ್ನು ವಿಶ್ವವಿದ್ಯಾನಿಲಯಗಳಿಗೆ ಸಲ್ಲಿಸತೊಡಗಿದರು. 1906 ರಿಂದ 1912 ರ ಅವಧಿಯಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯದ ಜೇಮ್ಸ್ ಮೈಕಲ್ ವಿಲಿಯಮ್ಸ್ ಮತ್ತು ವಾರನ್ ಹೆಚ್. ವಿಲ್ಸನ್ ಮುಂತಾದವರೂ ಇಂತಹ ಸಂಶೋಧನೆಗಳನ್ನು ಕೈಗೊಂಡರು. 1915ರಲ್ಲಿ ಡಾ।। ಸಿ. ಜೆ. ಗಾಲ್ಪಿನ್‌ರವರು ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯದ ಸಹಕಾರದೊಂದಿಗೆ ಕೈಗೊಂಡ ಅಮೇರಿಕೆಯ ಗ್ರಾಮೀಣ ಬದುಕಿಗೆ ಸಂಬಂಧಿಸಿದ ಸಂಶೋಧನೆಯು ಈ ದಿಶೆಯಲ್ಲಿ ಮಹತ್ವವಾದದ್ದು. 1916ರಲ್ಲಿ ಜಾನ್ ಎಂ. ಗಿಲೆಟಿಯವರು 'ಗ್ರಾಮೀಣ ಸಮಾಜ ಶಾಸ್ತ್ರ' (Rural Sociology) ಎಂಬ ಗ್ರಂಥವನ್ನು ಬರೆದರು. ಅದು ಗ್ರಾಮೀಣ ಸಮಾಜಶಾಸ್ತ್ರದ ಪ್ರಪ್ರಥಮ ಪಠ್ಯಪುಸ್ತಕವೆಂಬ ಹೆಗ್ಗಳಿಕೆ ಪಡೆಯಿತು. 1930ರಲ್ಲಿ ಪ್ರಕಟವಾದ ಗ್ರಂಥ 'ಎ ಸಿಸ್ಟ್ಯಮ್ಯಾಟಿಕ್ ಸೋರ್ಸ್ ಬುಕ್ ಇನ್ ರೂರಲ್ ಸೋಶಿಯಾಲಜಿ' ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯನ್ನು ತೀವ್ರಗೊಳಿಸಲು ಸಹಾಯ ಮಾಡಿತು. ಕ್ರಮೇಣ ಇನ್ನೂ ಅನೇಕ ಅಮೇರಿಕೆಯ ಬುದ್ಧಿಜೀವಿಗಳು, ಸಂಶೋಧಕರು ಗ್ರಾಮೀಣ ಸಮಾಜಶಾಸ್ತ್ರ ಒಂದು ವಿಜ್ಞಾನವಾಗಿ ಬೆಳೆಯಲು ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸಾರೋಕಿನ್, ಜಿಮರ್‌ಮನ್, ಗಾಲ್ಪಿನ್, ಟೈಲರ್, ಡ್ವೈಟ್ ಸ್ಯಾಂಡರ್‌ಸನ್, ಲ್ಯಾಂಡಿಸ್ ಮತ್ತು ರೆಡ್‌ಫೀಲ್ಡರು ಪ್ರಮುಖರು.

ಭಾರತದ ಗ್ರಾಮ ಸಮುದಾಯಗಳು ಅತೀ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದರೂ ಕೂಡ ಅವುಗಳ ಇತಿಹಾಸ ಮಾತ್ರ ಇತ್ತೀಚಿನದು. ಸುಮಾರು ಎರಡು ಮಿಲೇನಿಯಂಗಳಷ್ಟು ವರ್ಷಗಳ ಸಾಹಿತ್ಯದ ಹಿನ್ನೆಲೆಯಿರುವ ಈ ರಾಷ್ಟ್ರದ ಪವಿತ್ರ ಗ್ರಂಥಗಳಾದ ಋಗ್ವೇದ, ಮಹಾಭಾರತ ಮತ್ತು ಮನು ಹಾಗೂ ಆತನ ಟೀಕಾಕಾರರ ಕೃತಿಗಳಲ್ಲಿ ಗ್ರಾಮ ಸಮಾಜದ ಬಗ್ಗೆ ಕೇವಲ ಮಸಕು ಚಿತ್ರಗಳನ್ನಷ್ಟೆ ಕಾಣಬಹುದು. ಈ ಕೃತಿಗಳಲ್ಲೇ ಗ್ರಾಮಸಮುದಾಯದ ರಚನೆ ಮತ್ತು ಕಾರ್ಯಗಳ ಬಗ್ಗೆ ಸಿಗುವ ಮಾಹಿತಿ ತುಂಬ ವಿರಳ. ಏಕೆಂದರೆ ಅವು ಮೂಲತಃ ಧಾರ್ಮಿಕ ಗ್ರಂಥಗಳಾಗಿದ್ದು ಗ್ರಾಮ ಸಮುದಾಯಗಳ ಬಗ್ಗೆ ವಿವರಣೆ ನೀಡುವುದಕ್ಕಿಂತ ದಾರ್ಶನಿಕ ಮತ್ತು ತತ್ವಜ್ಞಾನದ ವಿವಿಧ ಸಿದ್ಧಾಂತಗಳನ್ನು ವಿವರಿಸುವುದತ್ತ ವಿಶೇಷ ಗಮನ ಹರಿಸಿದವು. ಅವುಗಳಲ್ಲಿ ಕಂಡುಬರುವ ಹಳ್ಳಿಗಾಡುಗಳಲ್ಲಿನ ಜೀವನದ ಬಗೆಗಿನ ವಿವರಣೆಗಳು ಗೊಂದಲಮಯ. ಒಂದರ ವಿವರಣೆಯು ಇನ್ನೊಂದರ ವಿರುದ್ಧವಾಗಿಯೂ ಕಂಡು ಬಂದು ಯಾವುದು ನಿಜ ಯಾವುದು ಸುಳ್ಳು ಎಂಬ ಗೊಂದಲ ಉಂಟಾಗುವುದು ಸಹಜ.

ಮೌರ್ಯರ ಆಳ್ವಿಕೆಯ ಕಾಲದ ಗ್ರಾಮ ಸಮುದಾಯಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಖಚಿತವಾದ ವಿವರಗಳು ಸಿಗುತ್ತವೆ. ಚಂದ್ರಗುಪ್ತ ಮೌರ್ಯನ ರಾಜಕೀಯ ಮಾರ್ಗದರ್ಶಿಯಾದ ಕೌಟಿಲ್ಯನು ಅರ್ಥಶಾಸ್ತ್ರವೆಂಬ ಗ್ರಂಥವನ್ನು ಬರೆದನು. ಅರ್ಥಶಾಸ್ತ್ರದಲ್ಲಿ ಗ್ರಾಮ ಸಮುದಾಯಗಳು, ಅವುಗಳ ರಚನೆ, ಭೂಹಿಡುವಳಿ ಮತ್ತು ಜನಸಂಖ್ಯೆಯ ಆಧಾರದ ಮೇಲೆ ಗ್ರಾಮಗಳ ವಿಂಗಡಣೆ ಮುಂತಾದ ವಿವರಗಳಿವೆ. ಗ್ರಾಮಸ್ತರದ ಆಡಳಿತಾಧಿಕಾರಿಗಳ ಬಗ್ಗೆಯೂ ಉಲ್ಲೇಖವಿದೆ. ಪ್ರತಿಯೊಂದು ಗ್ರಾಮಕ್ಕೂ 'ಗ್ರಾಮಿಣಿ' ಎಂಬ ಗ್ರಾಮ ನಾಯಕನಿರುತ್ತಿದ್ದ. ಆತನನ್ನು ರಾಜನೇ ನೇಮಿಸುತ್ತಿದ್ದನೋ ಅಥವಾ ಗ್ರಾಮ ನಿವಾಸಿಗಳಿಂದ ಚುನಾಯಿತನಾಗುತ್ತಿದ್ದನೊ ಎಂಬುದರ ಬಗ್ಗೆ ಖಚಿತವಾಗಿ ತಿಳಿದು ಬಂದಿಲ್ಲ. ಗ್ರಾಮಿಣಿಯು ಆಯಾ ಗ್ರಾಮದ ಎಲ್ಲ ವ್ಯಕ್ತಿಗಳ ಮೇಲೆ ಪ್ರಭಾವ ಬೀರುವ ಅಧಿಕಾರಿಯಾಗಿದ್ದ. ಸಮಾಜದಲ್ಲಿ ಚಲಾವಣೆಯಲ್ಲಿದ್ದ ಮೂಢ ಸಂಪ್ರದಾಯಗಳನ್ನು ಮೀರಿದ ವ್ಯಕ್ತಿಗಳನ್ನು ಶಿಕ್ಷಿಸುವ ಅಧಿಕಾರ ಆತ'ಹೊಂದಿದ್ದನು. ಇಂತಹ ವಿಶೇಷ ಸಂದರ್ಭಗಳಲ್ಲಿ ಆಗಿನ ಸಮಾಜದ ರೀತಿ-ರಿವಾಜುಗಳನ್ನು ಹಾಗೂ ಜನಾಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡೇ ತನ್ನ ಅಧಿಕಾರವನ್ನು ಚಲಾಯಿಸುತ್ತಿದ್ದನು. ಆಗ ಅಧಿಕಾರದ ದುರುಪಯೋಗವಾಗುವ ಸಾಧ್ಯತೆಗಳಿರಲಿಲ್ಲ. ಈ ವ್ಯವಸ್ಥೆಯು ಬಹುಕಾಲ ಮುಂದುವರೆಯಿತು.

ಚಂದ್ರಗುಪ್ತ ಮೌರ್ಯನ ನಂತರವೂ ಕೂಡ ಕೌಟಿಲ್ಯನ 'ಅರ್ಥಶಾಸ್ತ್ರ' ವು ಮುಂದಿನ ಅರಸರ ರಾಜ್ಯಾಡಳಿತದ ಕೈಪಿಡಿಯಾಗಿ ಮುಂದುವರೆಯಿತು. ಶುಕ್ರಾಚಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರ್ಯರೂ ಕೂಡ ಅರ್ಥಶಾಸ್ತ್ರದ ಮಾದರಿಯಲ್ಲಿಯೇ ಶುಕ್ರನೀತಿಸಾರವೆಂಬ ಗ್ರಂಥ ವನ್ನು ಬರೆದರು. ಅರ್ಥಶಾಸ್ತ್ರದಲ್ಲಿ ಗಾತ್ರದ ಆಧಾರದ ಮೇಲೆ ಗ್ರಾಮಗಳನ್ನು ಜೇಷ್ಠ, ಮಧ್ಯಮ ಮತ್ತು ಕನಿಷ್ಠ ಎಂಬ ಮೂರು ವಿಧಗಳಾಗಿ ವಿಂಗಡಿಸಲಾಗಿತ್ತು. ಅದೇ ರೀತಿಯಾಗಿ ಶುಕ್ರನೀತಿಸಾರದಲ್ಲಿಯೂ ಕುಂಭ, ಪಲ್ಲಿ ಮತ್ತು ಗ್ರಾಮಗಳೆಂದು ವಿಂಗ ಡಿಸಲಾಗಿತ್ತು. ಹಳ್ಳಿಗಾಡುಗಳ ಆಡಳಿತ ನಡೆಸುವ ಸಲುವಾಗಿ ಇದ್ದ ಅಧಿಕಾರಿಗಳ ಒಂದು ಪಟ್ಟಿಯನ್ನೇ ಈ ಗ್ರಂಥದಲ್ಲಿ ಕೊಡಲಾಗಿದೆ. ಆಗ 'ಗ್ರಾಮಪ' ಅಥವಾ 'ಗ್ರಾಮ ನೇತಾ' ಎಂಬ ಗ್ರಾಮ ಮಟ್ಟದ ಅಧಿಕಾರಿಯು ತುಂಬ ಪ್ರಭಾವಶಾಲಿಯಾಗಿದ್ದ. ಆತ ಗ್ರಾಮಗಳಲ್ಲಿ ಶಾಂತಿ ಮತ್ತು ಸುರಕ್ಷತೆ ಕಾಪಾಡುವುದರ ಜೊತೆಗೆ ಅರಸನ ಪರ ವಾಗಿ ಕಂದಾಯವನ್ನು ವಸೂಲು ಮಾಡುವ ಜವಾಬ್ದಾರಿ ಹೊಂದಿದ್ದ. ಹೀಗೆ ವಸೂ ಲಾದ ಕಂದಾಯದ ಮೂಲಕವೇ ಇತರ ಅಧಿಕಾರಿಗಳ ಸಂಭಾವನೆಯನ್ನು ಕೊಡಲಾ ಗುತ್ತಿತ್ತು. ಈ ರೀತಿಯಾಗಿ ಅರ್ಥಶಾಸ್ತ್ರದಲ್ಲಿ ವಿವರಿಸಿದ ಗ್ರಾಮ ಆಡಳಿತ ವ್ಯವಸ್ಥೆಯೇ ಬಹುಕಾಲ ಮುಂದುವರೆಯಿತು ಎಂದು ಹೇಳಬಹುದು. ಅದು ಮುಸ್ಲಿಂ ಆಳ್ವಿಕೆಯ ಅವಧಿಯವರೆಗೂ ಮುಂದುವರೆಯಿತು. ಇದಕ್ಕೆ ಕಾರಣಗಳುಂಟು,ಮೊದಲನೆಯದಾಗಿ ಮುಸ್ಲಿಂ ಅರಸರು ಗ್ರಾಮ ಜೀವನದ ವಿಷಯದಲ್ಲಿ ಅನಾವಶ್ಯಕ ಅತಿಕ್ರಮಣ ಮಾಡ ದಿರುವ ಧೋರಣೆ ಹೊಂದಿದ್ದರು. ರಾಧಾಕುಮುದ ಮುಕರ್ಜಿಯವರು ಅಭಿಪ್ರಾಯ ಪಡುವಂತೆ "ಮುಸ್ಲಿಂ ಅರಸರು ರಾಜ್ಯಭಾರ ವಹಿಸಿಕೊಂಡ ಅವಧಿಯಲ್ಲಿ ನಮ್ಮ ದೇಶ ದಲ್ಲಿನ ಗ್ರಾಮಗಳು ತಮ್ಮ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಗಳನ್ನು ಕಾಪಾಡಿ ಕೊಂಡಿದ್ದವು. ಹಿಂದಿನ ಆಕ್ರಮಣಗಳಿಗೆ ಹೋಲಿಸಿದರೆ ಮುಸ್ಲಿಂರ ಆಕ್ರಮಣದಿಂದ ಹಳ್ಳಿಗಾಡುಗಳ ಮೇಲೆ ಆದ ಪ್ರಭಾವ ಅತ್ಯಲ್ಪ. ಏಕೆಂದರೆ ಮುಸ್ಲಿಮರು ರಾಜ್ಯ ಸಿಂಹಾಸನ ಮತ್ತು ರಾಜಧಾನಿಗಳ ಮೇಲೆ ತಮ್ಮ ಆಧಿಪತ್ಯ ಸ್ಥಾಪಿಸಲೋಸುಗಮಾತ್ರ ತಮ್ಮ ಹೋರಾಟವನ್ನು ಸೀಮಿತಗೊಳಿಸಿ, ಗ್ರಾಮ ಜೀವನದ ತಂಟೆಗೆ ಹೋಗಲಿಲ್ಲ. ಆದುದರಿಂದ ಮುಸ್ಲಿಂ ರಾಜರ ಆಳ್ವಿಕೆಯ ಕಾಲವನ್ನು 'ಮುಸ್ಲಿಂ-ಅವಧಿ' (Islamic Period) ಎಂದು ಇತಿಹಾಸಕಾರರು ವರ್ಣಿಸುವುದು ಸಮಂಜಸವಲ್ಲ. ಏಕೆಂದರೆ ಮುಸ್ಲಿಂ ಆಳ್ವಿಕೆಯ ಕಾಲದಲ್ಲಿಯೂ, ಹಳ್ಳಿಗಾಡುಗಳಲ್ಲಿಯ ಜನಜೀವನವು ಮೊದಲಿದ್ದ ಸನಾತನ ಹಿಂದೂ ಮಾದರಿಯಲ್ಲಿಯೇ ಮುಂದುವರೆಯಿತು. ಆಡಳಿತದಲ್ಲಿ ಅಲ್ಪಸ್ವಲ್ಪ ಮಾರ್ಪಾಟಾದುದು ಆ ಮೇಲೇಯೇ".

ಬ್ರಿಟೀಷರ ಆಳ್ವಿಕೆಯ ಅವಧಿಯಲ್ಲಿ ಗ್ರಾಮ ಸಮುದಾಯಗಳ ಜನಜೀವನದಲ್ಲಿ ಅನೇಕ ಬದಲಾವಣೆಗಳಾದವು. ಬ್ರಿಟೀಷರು ಭಾರತದ ಹಳ್ಳಿಗಳ ವಿಶಿಷ್ಟ ಗುಣಗಳಾದ ಸ್ಥಿತಿಸ್ಥಾಪಕತ್ವ ಮತ್ತು ಅವುಗಳಲ್ಲಿನ ಮುಂದುವರೆದುಕೊಂಡು ಸಾಗುವ ಛಲ ಇವು ಗಳ ಪ್ರಶಂಸಕರಾಗಿದ್ದರು. ಸರ್ ಮೆಟ್ಕಾಫೆಯವರು ಗ್ರಾಮಗಳನ್ನು 'ಪುಟ್ಟ ಪ್ರಜಾ ಪ್ರಭುತ್ವಗಳು' ಎಂದು ಮೆಚ್ಚುಗೆಯಿಂದ ಕರೆದರು. ಬ್ರಿಟೀಷರ ಗ್ರಾಮ ಜೀವನ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಅಧ್ಯಯನದ ಮುಖ್ಯ ಉದ್ದೇಶವು ತಮ್ಮ ಆಡಳಿತವನ್ನು ಬಿಗಿಗೊಳಿಸಲು ಬೇಕಾದ ಮಾಹಿತಿ ಸಂಗ್ರಹಣೆ ಮಾಡುವುದಷ್ಟೇ ಆಗಿತ್ತು. ಈ ಕಾಲದಲ್ಲಿ ಬರಗಾಲ ಪರಿಹಾರಕ್ಕಾಗಿ ಸಲಹೆ-ಸೂಚನೆ ನೀಡಲು ಅನೇಕ ಆಯೋಗಗಳನ್ನು ನೇಮಿಸಲಾಯಿತು. ಕೆಲವು ಆಯೋಗಗಳು ಸರಕಾರಕ್ಕೆ ಗ್ರಾಮಗಳ ವೈಜ್ಞಾನಿಕ ಅಧ್ಯಯನ ಕೈಗೊಳ್ಳಲು ಸೂಚಿಸಿದರೂ ಕೂಡ ಹೇಳಿಕೊಳ್ಳುವಂತಹ ಕೆಲಸಗಳೇನೂ ಈ ದಿಶೆಯಲ್ಲಿ ಆಗಲಿಲ್ಲ. ಬ್ರಿಟೀಷ್ ಅಧಿಕಾರಿ ಸಂಶೋಧಕರು ಕೈಗೊಂಡ ಅಧ್ಯಯನಗಳು ನಮ್ಮ ದೇಶದಲ್ಲಿ ಜರುಗಿದ ಪ್ರಪ್ರಥಮ ಗ್ರಾಮಸಮಾಜ ಅಧ್ಯಯನಗಳೆಂದು ಹೇಳಬಹುದು. ಈ ಅಧಿಕಾರಿ ಸಂಶೋಧಕರು ತಮ್ಮ ಆಡಳಿತದ ಕರ್ತವ್ಯದ ಅಂಗವಾಗಿಯೂ ಮತ್ತು ಕೆಲವೊಮ್ಮೆ ತಮ್ಮ ವೈಯಕ್ತಿಕ ಅಕ್ಯಾಡೆಮಿಕ್ ಕುತೂಹಲಕ್ಕಾಗಿಯೂ ಇಂತಹ ಅಧ್ಯಯನಗಳನ್ನು ಕೈಗೊಂಡರು. ಇವುಗಳಲ್ಲಿ ಗೆಜೆಟಿಯರ್‌ಗಳನ್ನು ಸಿದ್ಧಪಡಿಸಿದ ಅಧಿಕಾರಿಗಳ ಕಾರ್ಯವು ಪ್ರಶಂಸನೀಯವಾದುದು. ಅಂದಿನ ಗ್ರಾಮೀಣ ಸಮಾಜದಲ್ಲಿ ಪ್ರಚಲಿತವಿದ್ದ ರೂಢಿ ಸಂಪ್ರದಾಯಗಳ ವಿವರಗಳೂ, ವಿವಿಧ ಜನಸಮುದಾಯಗಳ ಚಿತ್ರಣ ಇಂದಿನ ಸಂಶೋಧನಾ ವಿದ್ಯಾರ್ಥಿಗಳಿಗೂ ಪೂರಕಗಳೆಂದು ಸಮ್ಮತಿ ಪಡೆದಿವೆ. ಈ ಅಧ್ಯಯನಗಳಲ್ಲಿ ಕೆಲವು ನ್ಯೂನತೆಗಳು ಉಂಟು. ತಾವು ಕಂಡ ಭಾರತದ ಗ್ರಾಮ ಸಮುದಾಯಗಳ ಬಗ್ಗೆ, ಅವರ ವಿಚಿತ್ರ ಜೀವನ ವಿಧಾನ, ವಿಶಿಷ್ಠ ರೂಢಿ-ಸಂಪ್ರದಾಯಗಳನ್ನು ಸ್ವಲ್ಪ ಬಣ್ಣ ಹಚ್ಚಿ ಅತಿರೇಕವೆನ್ನುವಷ್ಟು ವಿರೂಪಗೊಳಿಸಿ ಬ್ರಿಟನ್ನಿನ ಓದುಗರನ್ನು ಚಕಿತಗೊಳಿಸುವ ಸಲುವಾಗಿಯೇ ಬರೆದ ಹಾಗೆ ಕಂಡುಬರುತ್ತದೆ.

ಭಾರತದಲ್ಲಿ ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನದ ಪ್ರಾರಂಭವು ಹೆನ್ರಿಮೆಯ್ನ್‌ರವರು ಬರೆದ ಆ್ಯನ್ಸಿಯಂಟ್‌ಲಾ (1861), 'ವಿಲೇಜ್ ಕಮ್ಯುನಿಟೀಜ್ ಇನ್ ದಿ ಈಸ್ಟ್ ಆ್ಯಂಡ್ ವೆಸ್ಟ್' (1876), ಮತ್ತು 'ದಿ ಅರ್ಲಿ ಹಿಸ್ಟರಿ ಆಫ್ ಇನ್ಸ್‌ಟಿಟ್ಯೂಷನ್ಸ್' (1880) ಗ್ರಂಥಗಳ ಪ್ರಕಟಣೆಯಿಂದಾಯಿತೆಂದು ಹೇಳಬಹುದು. ಮೇಲೈ ಉಲ್ಲೇಖಿಸಿದ ಮೊದಲನಯ ಮತ್ತು ಕೊನೆಯ ಕೃತಿಗಳು ಜಗತ್ತಿನಾದ್ಯಂತ ಗ್ರಾಮ ಸಮಾಜದ ವಿಕಾಸದ ಬಗ್ಗೆ ನೀಡುವ ಸಿದ್ಧಾಂತಗಳನ್ನು ಒಳಗೊಂಡಿವೆ. ಅಲ್ಲಲ್ಲಿ ಭಾರತದ ಸಮುದಾಯಗಳ ಬಗ್ಗೆಯೂ ಉಲ್ಲೇಖಗಳಿವೆ. 'ವಿಲೇಜ್ ಕಮ್ಯುನಿಟೀಸ್ ಇನ್ ಇಂಡಿಯಾ' ಎಂಬ ಗ್ರಂಥವು ನಿಜವಾದ ಅರ್ಥದಲ್ಲಿ ನಮ್ಮ ಗ್ರಾಮ ಸಮಾಜದ ಅತ್ಯುತ್ತಮ ಅಧ್ಯಯನವೆಂದು ಹೇಳಬಹುದು. ಹೆನ್ರಿ ಮೇಯ್ನ್‌ರವರ ಕೃತಿಗಳನ್ನು ವಿಮರ್ಶಕರು ಕಟುವಾಗಿ ಟೀಕಿಸಿದರೂ ಕೂಡ ಅವು ಗ್ರಾಮೀಣ ಸಮಾಜ ಶಾಸ್ತ್ರದ ವಿದ್ಯಾರ್ಥಿಗಳಿಗೆ ಜ್ಞಾನದ ಹೊಸ ದಿಕ್ಕನ್ನು ಅನಾವರಣಗೊಳಿಸಲು ಸಹಕಾರಿಯಾಗಿದೆ.

ಹೆನ್ರಿಮೇಯ್ನ್‌ರವರ ನಂತರ 1892ರಲ್ಲಿ ಬಾಡೆನ್‌ಪಾವೆಲ್‌ರವರು 'ದಿ ಇಂಡಿಯನ್ ವಿಲೇಜ್ ಕಮ್ಯುನಿಟಿ' ಎಂಬ ಗ್ರಂಥವನ್ನು ಪ್ರಕಟಿಸಿದರು. ಈ ಗ್ರಂಥದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾರತದ ಗ್ರಾಮೀಣ ಸಮಾಜದ ಎಲ್ಲ ಸಂಕೀರ್ಣತೆಯನ್ನು ಸಶಕ್ತವಾಗಿ ಗ್ರಹಿಸಲಾಗಿದೆ. ಮೇಯ್ನರವರಿಗಿಂತ ಬಾಡೆನ್‌ಪಾವೆಲ್‌ರವರ ಗ್ರಾಮ ಸಮಾಜದ ಗ್ರಹಿಕೆ ಮತ್ತು ವಿವರಣೆ ಉನ್ನತವಾದದ್ದು ಎಂದು ಅಭಿಪ್ರಾಯಪಡಲಾಗಿದೆ. ಬಾಡೆನ್ ಪಾವೆಲ್‌ರವರು ಭೂಕಂದಾಯ ಅಧಿಕಾರಿಗಳಾಗಿದ್ದು ಗ್ರಾಮ ಸಮುದಾಯಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಈ ಗ್ರಂಥ ರಚಿಸಲು ಬೇಕಾದ ಮಾಹಿತಿಯನ್ನು ತಾವೇ ಸ್ವತಃ ಸಂಗ್ರಹಿಸಿದರು. ಅವರು ಗ್ರಾಮೀಣ ಜನಜೀವನ, ಅವರ ರೂಢಿ-ಸಂಪ್ರದಾಯಗಳು, ಭೂಹಿಡುವಳಿ ಮತ್ತು ವ್ಯವಸಾಯಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಅಭ್ಯಸಿಸಿದರು.

ಹೆನ್ರಿಮೇಯ್ನ್ ಮತ್ತು ಬಾಡೆನ್‌ಪಾವೆಲ್‌ರವರ ವಿವಾದ ತುಂಬ ಪ್ರಸಿದ್ಧ. ಭಾರತದ ಗ್ರಾಮಗಳ ಮೂಲ ಮತ್ತು ಬೆಳವಣಿಗೆಗೆ ಸಂಬಂಧಿಸಿದ ಹೆನ್ರಿ ಮೇಯ್ನ್‌ರವರ ವಿಚಾರಗಳನ್ನು ಬಾಡೆನ್‌ಪಾವೆಲ್‌ರು ಒಪ್ಪುವುದಿಲ್ಲ. ಗ್ರಾಮಗಳನ್ನು ಎರಡು ವಿಧಗಳಲ್ಲಿ ಅವರು ವರ್ಗೀಕರಿಸುತ್ತಾರೆ. ಅವುಗಳನ್ನು ರೈತವಾರಿ ಮತ್ತು ಸಂಯುಕ್ತ ಗ್ರಾಮಗಳೆಂದು ಕರೆದರು. ಸಂಯುಕ್ತ ಗ್ರಾಮಗಳ ಲಕ್ಷಣದ ಬಗ್ಗೆ ಅವರಿಬ್ಬರಲ್ಲಿ ಒಟ್ಟಾಭಿಪ್ರಾಯ ಇತ್ತು. ರೈತವಾರಿ ಗ್ರಾಮಗಳಲ್ಲಿ ವೈಯುಕ್ತಿಕ ಭೂ ಒಡೆತನವಿದ್ದು ಪ್ರತ್ಯೇಕ ವ್ಯವಸಾಯ ಪದ್ಧತಿ ಚಲಾವಣೆಯಲ್ಲಿತ್ತು. ಪ್ರತಿಯೊಂದು ಗ್ರಾಮಕ್ಕೂ ಒಬ್ಬ ವಂಶಪಾರಂಪರಿಕ ಆಧಾರದ ಮೇಲೆ ಗ್ರಾಮ ಮುಖ್ಯಸ್ಥನು ಗ್ರಾಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ.

ಜಗತ್ತಿನ ಇತರ ಭಾಗಗಳಲ್ಲಿ ಗ್ರಾಮಗಳು ವಿಕಾಸ ಹೊಂದಿದ ಬಗೆಯಲ್ಲಿಯೇ ಭಾರತದಲ್ಲಿಯೂ ಗ್ರಾಮಗಳು ವಿಕಾಸ ಹೊಂದಿದವು ಎಂದು ಹೆನ್ರಿಮೇಯ್ನ್ ಅಭಿಪ್ರಾಯಪಟ್ಟರೆ ಇದರ ವಿರುದ್ಧ ಅಭಿಪ್ರಾಯವನ್ನು ಬಾಡೆನ್‌ಪಾವೆಲ್‌ರವರು ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ ರೈತವಾರಿ ಗ್ರಾಮಗಳು ಭಾರತದ ಮೂಲ ಗ್ರಾಮಗಳು. ಸಂಯುಕ್ತ ಗ್ರಾಮಗಳು ಆರ್ಯರ ಆಗಮನದ ನಂತರವೇ ಹುಟ್ಟಿಕೊಂಡವು. ಆರ್ಯರಲ್ಲಿ ಪೂರ್ವಪಿತೃಗಳ ಬಗ್ಗೆ ಬಲವಾದ ನಂಬಿಕೆಯಿದ್ದರಿಂದ ಗ್ರಾಮಗಳ ರಚನೆಯ ಮೇಲೆ ಅದು ಪ್ರಭಾವ ಬೀರಿತು. ಗ್ರಾಮಗಳು ಪಿತೃಪ್ರಧಾನ ಸಂಯುಕ್ತ ಕುಟುಂಬದ ಮಾದರಿಯಲ್ಲಿ ಬದಲಾವಣೆ ಹೊಂದಿದವು. ಬಾಡೆನ್‌ಪಾವೆಲ್‌ರವರು ಈ ವಾದಕ್ಕೆ ಸಾಕ್ಷಿಯಾಗಿ ಸಂಯುಕ್ತ ಗ್ರಾಮಗಳು ಆರ್ಯರ ಪ್ರಭಾವ ಹೆಚ್ಚಾಗಿದ್ದ ವಿಂಧ್ಯಪರ್ವತ ಶ್ರೇಣಿಯ ಉತ್ತರ ಭಾಗದಲ್ಲಿ ಹೆಚ್ಚಾಗಿದ್ದು ದ್ರಾವಿಡರ ಪ್ರಾಬಲ್ಯವಿರುವ ದಕ್ಷಿಣ ಭಾರತದಲ್ಲಿ ರೈತವಾರಿ ಗ್ರಾಮಗಳು ಹೆಚ್ಚಾಗಿರುವುದನ್ನು ಎತ್ತಿತೋರಿಸುತ್ತಾರೆ. ಈ ವಿವಾದವು ಪ್ರಾರಂಭದಲ್ಲಿ ಗ್ರಾಮೀಣ ಸಮಾಜದ ಅಧ್ಯಯನ ಕೈಗೊಂಡ ಸಮಾಜ ಶಾಸ್ತ್ರದ ವಿದ್ಯಾರ್ಥಿಗಳ ಕುತೂಹಲ ಕೆರಳಿಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಂಧೀಜಿಯವರು ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನಕ್ಕೆ ಕರೆಕೊಟ್ಟಾಗ ಓಗೊಟ್ಟು ಬಂದ ಅವರ ಅನುಯಾಯಿಗಳಲ್ಲಿ ವಿದ್ಯಾರ್ಥಿಗಳು ಮತ್ತು ಸಂಶೋಧಕರೂ ಇದ್ದರು. ಗಾಂಧೀಜಿಯವರು ಅವರಿಗೆ ಗ್ರಾಮೀಣ ಸಮಾಜದ ಅಧ್ಯಯನ ಮತ್ತು ಅಲ್ಲಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಹೇಳಿದರು. ಗ್ರಾಮ ಅಭಿವೃದ್ಧಿಗಾಗಿ ಸರ್ವೋದಯ ಕಾರ್ಯಕ್ರಮವನ್ನೂ ಇದೇ ಸಂದರ್ಭದಲ್ಲಿ ರೂಪಿಸಲಾಯಿತು. ಇವುಗಳೊಂದಿಗೆ ಭಾರತದಲ್ಲಿನ ಆಗಿನ ರಾಜಕೀಯ ಪರಿಸ್ಥಿತಿ ಅನೇಕ ಸಂಶೋಧಕರಿಗೆ ಗ್ರಾಮ ಸಮಾಜದ ಅಧ್ಯಯನ ಕೈಗೊಳ್ಳಲು ಪ್ರೇರಣೆ ನೀಡಿತು. 'ವಿಲೇಜ್ ಗವರ್ನಮೆಂಟ್ ಇನ್ ಬ್ರಿಟೀಷ್ ಇಂಡಿಯಾ' ಮತ್ತು 'ಲೋಕಲ್ ಗವರ್ನಮೆಂಟ್ ಇನ್ ಏನ್ಸಿಯಂಟ್ ಇಂಡಿಯಾ' ಮುಂತಾದ ಗ್ರಂಥಗಳು ಈ ಅವಧಿಯಲ್ಲಿ ಪ್ರಕಟಗೊಂಡವು. ಆಗಿನ ಉಲ್ಲೇಖನೀಯ ಸಂಶೋಧಕರೆಂದರೆ ಜಾನ್ ಮಥಾಯ್ ಮತ್ತು ರಾಧಾಕುಮುದ್ ಮುಕರ್ಜಿ. ಇವರ ಕೃತಿಗಳು ನಮ್ಮ ದೇಶದಲ್ಲಿ ಗ್ರಾಮ ಸಮಾಜ ಶಾಸ್ತ್ರದ ಬೆಳವಣಿಗೆಯ ಇತಿಹಾಸದಲ್ಲಿ ಮೈಲಿಗಲ್ಲುಗಳು ಎಂದು ಹೇಳಬಹುದು.

ಸ್ವಾತಂತ್ರ್ಯ ನಂತರ ಗ್ರಾಮಸಮಾಜಕ್ಕೆ ಸಂಬಂಧಿಸಿದ ಸಾಹಿತ್ಯ ರಾಶಿಯಲ್ಲಿ ಅಭಿವೃದ್ಧಿಯಾಗತೊಡಗಿತು. ದೇಶೀಯ ಸಂಶೋಧಕರೊಂದಿಗೆ ವಿದೇಶಿಯ ಅದರಲ್ಲೂ ಅಮೇರಿಕೆಯ ಸಂಶೋಧಕರು ಅನೇಕ ಗ್ರಾಮ ಸಮುದಾಯಗಳ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳತೊಡಗಿದರು. ಈ ಸಂಶೋಧಕರು ಒಂದು ಅಥವಾ ಕೆಲವು ಹಳ್ಳಿಗಳ ಗುಂಪನ್ನು ಆರಿಸಿಕೊಂಡು ಹಲವಾರು ವರ್ಷಗಳ ಕಾಲ ಅಲ್ಲಿಯೇ ನೆಲೆಸಿ ಆಯಾ ಗ್ರಾಮಗಳ ಸಮಗ್ರ ಅಧ್ಯಯನ ಮಾಡತೊಡಗಿದರು. ಈ ತರಹದ ಅಧ್ಯಯನಗಳು ಗ್ರಾಮ ಸಮಾಜದ ವ್ಯವಸ್ಥಿತವಾದ, ವೈಜ್ಞಾನಿಕ ಚಿಂತನೆಗೆ ಸಹಕಾರಿಯಾದವು. ಕೆಲವು ಸಮಾಜ ವಿಜ್ಞಾನಿಗಳ ತಂಡದೊಂದಿಗೆ ಎಸ್. ಸಿ ದುಬೆ ಅವರು ಆಂಧ್ರಪ್ರದೇಶದ 'ಶಮೀರ್‌ಪೇಟೆ' ಎಂಬ ಗ್ರಾಮದ ಸಮಗ್ರ ಅಧ್ಯಯನ ಮಾಡಿ ತುಂಬ ಪ್ರಸಿದ್ಧಿಯಾದ ಗ್ರಂಥ 'ದಿ ಇಂಡಿಯನ್ ವಿಲೇಜ್' ಪ್ರಕಟಿಸಿದ್ದು ಇದೇ ಕಾಲದಲ್ಲಿ.

ಭಾರತದ ಗ್ರಾಮ ಸಮಾಜದ ರಚನೆ ಮತ್ತು ಸಂಘಟನೆಯ ಬಗ್ಗೆ ಖಚಿತ ವಿವರಣೆ ನೀಡುವ ಸಿದ್ಧಾಂತಗಳೇನೂ ಈ ತರಹದ ಸಂಶೋಧನೆಗಳಿಂದ ಹೊರಹೊಮ್ಮದಿದ್ದರೂ ಕೂಡ ಈ ದಿಶೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಯಿತು. ಗ್ರಾಮೀಣ ಸಮಾಜದ ರಚನೆ ಮತ್ತು ಬದಲಾವಣೆಗಳನ್ನು ಅರ್ಥೈಸಿ, ವಿಶ್ಲೇಷಣೆ ಮಾಡಲು ಕೆಲವು ಮೂಲ ಪರಿಕಲ್ಪನೆಗಳನ್ನು ಅಭಿವೃದ್ಧಿಗೊಳಿಸಿದ್ದು ಒಂದು ಮಹತ್ವದ ಸಾಧನೆಯೆನ್ನಬಹುದು.

ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದ ಅವಧಿಯಂತೂ ಗ್ರಾಮ ಪ್ರದೇಶಗಳಲ್ಲಿನ ನಾಯಕತ್ವ, ಸಾಮಾಜಿಕ ಬದಲಾವಣೆ, ಅಭಿವೃದ್ಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂತಾದ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನಗಳ ಹೊಸ ಯುಗವೇ ಪ್ರಾರಂಭವಾಯಿತು. ಯೋಜನಾ ಆಯೋಗವು ಅಮೇರಿಕೆಯ ಸುಪ್ರಸಿದ್ಧ ಮಾನವ ಶಾಸ್ತ್ರಜ್ಞರಾದ ಆಸ್ಕರ್‌ಲೇವೀಸ್ ಅವರನ್ನು ನಮ್ಮ ದೇಶದ ಗ್ರಾಮೀಣ ನಾಯಕತ್ವ, ಗ್ರಾಮ ಸಮುದಾಯಗಳ ಅಭಿವೃದ್ಧಿಯ ಸಾಧ್ಯತೆಯ ಬಗ್ಗೆ ಅಧ್ಯಯನ ಕೈಗೊಳ್ಳಲು ಆಮಂತ್ರಿಸಿತು. ಅವರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರಜ್ಞರು ಅನೇಕ ಅಧ್ಯಯನಗಳನ್ನು ಕೈಗೊಂಡು, ಪ್ರಕಟಿಸಿದರು. ಇಂತಹ ಅಧ್ಯಯನಗಳಲ್ಲಿ 'ಗ್ರೂಪ್ ಡೈನಾಮಿಕ್ಸ್ ಇನ್ ಎ ನಾರ್ತ್ ಇಂಡಿಯನ್ ವಿಲೇಜ್' (1954) ಹಾಗೂ 'ವಿಲೇಜ್ ಲೈಫ್ ಇನ್ ನಾರ್ದರ್ನ್ ಇಂಡಿಯಾ' (1958) ಉಲ್ಲೇಖನೀಯ.

ಪರಾಮರ್ಶನಗಳು

1. Desai A. R. *Rural Sociology in India* Bombay, Popular Prakashan 1982.
2. ನಾಗೇಶ ಹೆಚ್. ವಿ. **ಗ್ರಾಮಾಂತರ** ಧಾರವಾಡ, ಭಾರತ ಬುಕ್ ಡಿಪೋ ಮತ್ತು ಮತ್ತು ಪ್ರಕಾಶನ 1992. (ದ್ವಿ ಆವೃತ್ತಿ)
3. Punjt A. E. *Rural Social System in India,* New Delhi, Sterling Publishers.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ-2

ಭೂಮಿ ಮತ್ತು ಸಮಾಜ

ಅಲೆಮಾರಿಯಾಗಿದ್ದ ಮಾನವ ವ್ಯವಸಾಯ ಕಲೆಯನ್ನು ಕಲಿತು ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸಿಸಲು ತೊಡಗಿದಂದಿನಿಂದಲೇ ಅವನ ಸಾಮಾಜಿಕ ಇತಿಹಾಸ ಆರಂಭವಾಯಿತೆಂದು ಹೇಳಲಾಗುತ್ತದೆ. ತುಂಡು ಭೂಮಿಗಳಲ್ಲಿ ಸ್ವ-ಶ್ರಮದಿಂದ ಬಿತ್ತಿದ ಬೀಜಗಳು, ಚಿಗುರಿದ ಸಸಿಗಳು ಅವನ ಅಲೆಮಾರಿ ಕಾಲಿಗೆ ಕಡಿವಾಣಗಳಾದವು. ಇದೇ ಬಗೆಯಲ್ಲಿ ಮಾನವನ ಅಲೆಮಾರಿ ಸಮೂಹಗಳು ಜಮೀನನ್ನವಲಂಭಿಸಿ ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸಿದಾಗಲೇ ಗ್ರಾಮಗಳ ಉಗಮಕ್ಕೆ ನಾಂದಿಯಾಯಿತು. ಇಂದು ನಾವು ವಾಖ್ಯಾನಿಸುವಂತೆ ನಾಗರಿಕತೆಯ ವಿಕಾಸದಲ್ಲಿ ಮಾನವ ಕೃಷಿ ಹಂತವನ್ನು ತಲುಪಿದಾಗ ಹಳ್ಳಿಗಳು ಜನ್ಮ ತಳೆದಿವೆ. ಇದಕ್ಕಿಂತ ಮೊದಲಿನವುಗಳಾದ ಆಹಾರ ಸಂಗ್ರಹಣೆ ಹಾಗೂ ಪಶುಸಂಗೋಪನ ಹಂತಗಳಲ್ಲಿ ಅವನಿಗೆ ವ್ಯವಸಾಯ ಕಲೆ ತಿಳಿದಿರಲಿಲ್ಲ. ಆಗಿನ್ನೂ ಮಾನವನು ಪ್ರಾಣಿಗಳಂತೆಯೇ ಋತುಗಳನ್ನನುಸರಿಸಿ ಸ್ಥಳದಿಂದ ಸ್ಥಳಕ್ಕೆ ಆಹಾರವನ್ನು ಅರಸುತ್ತ ಅಲೆಯುತ್ತಲೇ ಇದ್ದ. ನೆಲೆನಿಂತ ಜೀವನ ಅವನಿಗೆ ಅಜ್ಞಾತವೂ ಅಸಾಧ್ಯವೂ ಆಗಿತ್ತು. ಆಹಾರ-ನೀರುಗಳ ಅನ್ವೇಷಣೆಯಲ್ಲಿ ನಿರಂತರವಾಗಿ ಚಲಿಸುತ್ತಲೇ ಇರಬೇಕಾಗುತ್ತಿತ್ತು. ಆ ದಿನಗಳಲ್ಲಿ ಮನುಷ್ಯನ ಜೀವನವು ತುಂಬ ಸರಳವಾಗಿದ್ದಿರಬೇಕು. ಚಲಿಸುತ್ತಲೇ ಸ್ಥಳಾಂತರ ಹೊಂದುತ್ತಲೇ ಇದ್ದ ಮಾನವನಿಂದ ಯಾವುದೇ ಸಂಪ್ರದಾಯಗಳನ್ನು ಉಳಿಸಿ, ಬೆಳೆಸಲು ಸಾಧ್ಯವಿಲ್ಲ. ಸಂಪ್ರದಾಯಗಳ ಅನುಪಸ್ಥಿತಿಯಲ್ಲಿ ಯಾವುದೇ ವ್ಯವಸ್ಥೆ ಹುಟ್ಟಿಬೆಳೆಯುವುದು ಸಾಧ್ಯವಾಗಲಾರದೆಂದೇ ಹೇಳಬೇಕು.

ಹೀಗೆ ಅಲೆಮಾರಿ ಜೀವನದ ತಳುವಾದ ಸಾಮಾಜಿಕ ವ್ಯವಸ್ಥೆಯೊಂದು ನೆಲೆನಿಂತು ಸಾಂಸ್ಥಿಕವಾದ ಗ್ರಾಮ ರಚನೆಯಾಗಿ ಮಾರ್ಪಟ್ಟದ್ದು ಒಂದು ಅತೀ ಮಹತ್ವದ ಪ್ರಸಂಗ. ಅದುವರೆಗೂ ಅಲೆಮಾರಿಗಳಿಗೆ ಅಮುಖ್ಯವಾಗಿದ್ದ ಭೂಮಿ ಮತ್ತು ವ್ಯವಸಾಯಗಳು ತದನಂತರ ಅವರ ಒಟ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸತೊಡಗಿದವು. ಭೂಮಿಯು ಕೇವಲ ಅವರ ಜೀವನಾಧಾರ ಮಾತ್ರವಾಗಿರದೆ ನಿರ್ದಿಷ್ಟ ಪ್ರದೇಶವೊಂದರಲ್ಲಿ ವಾಸಮಾಡುವ ಜನರ ನಡುವಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧ ಸೇತುವೆಯೂ ಆಯಿತು. ಹೊರ ಆಕ್ರಮಣಗಳಿಂದ ತಮ್ಮ ಭೂಮಿಯನ್ನು ರಕ್ಷಿಸಿಕೊಳ್ಳುವಷ್ಟರಮಟ್ಟಿಗೆ ಅವರನ್ನು ಪರಸ್ಪರ ಬಂಧಿಸಿತು. ಈ ನೆಲೆಯಲ್ಲಿ ಗ್ರಾಮ ಸಮುದಾಯಗಳು ಅಸ್ತಿತ್ವಕ್ಕೆ ಬಂದವು.

ಪ್ರಾಚೀನ ಕಾಲದಲ್ಲಿ ಗ್ರಾಮ ಸಮಾಜ :

ಭಾರತದಲ್ಲಿ ಗ್ರಾಮ ಸಮುದಾಯವು ಅತೀ ಪ್ರಾಚೀನವಾದದ್ದು ; ಚರಿತ್ರೆಯ ಉದ್ದಕ್ಕೂ ಎಷ್ಟು ದೂರ ಕ್ರಮಿಸಿದರೂ ನಾವು ಒಂದಿಲ್ಲೊಂದು ಬಗೆಯ ಗ್ರಾಮ ಸಮುದಾಯಗಳನ್ನು ಕಾಣುತ್ತೇವೆ. ಅತೀ ಪ್ರಾಚೀನ ಗ್ರಾಮ ಸಮುದಾಯಗಳನ್ನು ಕಾಣುತ್ತೇವೆ. ಅತೀ ಪ್ರಾಚೀನ ಗ್ರಾಮದ ಕಾಲ ನಿರ್ಣಯ ಮಾಡಲು ಅಧಿಕೃತವಾಗಿ ಇದುವರೆಗೂ ಯಾರೊಬ್ಬರಿಗೂ ಸಾಧ್ಯವಾಗಿಲ್ಲ. ಆದರ ಶೋಧನೆಯೂ ಈಗ ಅಸಾಧ್ಯ. 'ವೆಲ್ಲಾಲಿ' ಎಂಬ ಭಾರತದ ಅತೀ ಪ್ರಾಚೀನ ಆದಿವಾಸಿ ಸಮುದಾಯವೂ ಕೂಡ ಎಲ್ಲೋ ಒಂದು ಕಡೆ ಕೃಷಿ ಸಮೂಹವಾಗಿದ್ದುದು ತಿಳಿದು ಬರುತ್ತದೆ. ಈ ವೆಲ್ಲಾಲಿ ಆದಿವಾಸಿ ಸಮುದಾಯವು ನೆಲೆನಿಂತ ಜೀವನದ ಸೂತ್ರಗಳನ್ನು ಅರ್ಥಮಾಡಿ ಕೊಂಡಿದ್ದರೆಂದು ಸಕಾರಣವಾಗಿ ಹೇಳಬಹುದಾಗಿದೆ. ವೆಲ್ಲಾಲಿ ಜನಾಂಗವು ತಮ್ಮ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಗ್ರಾಮ ಸಮುದಾಯಗಳಲ್ಲಿ ಹಂಚಿಹೋದರು. ನೆಲೆ ನಿಂತ ಜೀವನದ ಪೂರ್ವಭಾವಿ ತಿಳುವಳಿಕೆಯಿಲ್ಲದೆ ಅಲೆಮಾರಿಗಳು ಗ್ರಾಮ ಸಮುದಾಯಗಳನ್ನು ಸೃಷ್ಟಿ ಮಾಡುವುದಾಗಲಿ, ಹೊಸ ಸಾಮಾಜಿಕ ಜೀವನದ ಪಥ ಗಳನ್ನು ಕಂಡುಕೊಳ್ಳುವುದಾಗಲಿ ಅಥವಾ ಸಾಮಾಜಿಕ ರೂಢಿಗಳನ್ನು ಉಂಟು ಮಾಡು ವುದನ್ನಾಗಲಿ ಗ್ರಹಿಸುವುದು ಕೂಡ ಅಸಾಧ್ಯ.

ಭಾರತೀಯ ಸಮಾಜದ ಪ್ರಾಚೀನ ಇತಿಹಾಸವನ್ನು ಕುರಿತು ನಡೆಸಿದ ಇತ್ತೀಚಿನ ಸಂಶೋಧನೆಯ ಪ್ರಕಾರ ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲಿಯೇ ಇಲ್ಲಿ ಪರಿಪೂರ್ಣವಾದ ಗ್ರಾಮ ಸಮುದಾಯಗಳಿದ್ದವು. ಭೂ ಅಗೆತದಲ್ಲಿ ದೊರೆತ ಪ್ರಾಚೀನ ಅವಶೇಷ ಮತ್ತಿತರ ಐತಿಹಾಸಿಕ ದಾಖಲೆಗಳ ಪ್ರಕಾರ ದ್ರಾವಿಡ ಅಥವಾ ಸುಮೇರಿಯನ್ ಆಗಿರಬಹುದಾದ ಆರ್ಯಪೂರ್ವ ಜನರ ಕೃಷಿ ಆಧಾರಿತವಾದ ಸುಸಂಘಟಿತವಾದ ಗ್ರಾಮ ಸಮುದಾಯಗಳನ್ನು ಭಾರತವು ಹೊಂದಿತ್ತು ಎಂಬುದನ್ನು ರುಜುವಾತು ಪಡಿಸಿವೆ. ಗ್ರಾಮಗಳ ಉಗಮ ಹಾಗೂ ನೆಲೆನಿಂತ ಜೀವನ ಕೇವಲ ಆರ್ಯರಿಂದಲೇ ಇಲ್ಲಿ ಸಾಧ್ಯವಾಯಿತೆಂದು ಸಾರುವ ಸಿದ್ಧಾಂತಗಳು ಈಗ ಸುಳ್ಳಾಗಿವೆ. ಆರ್ಯ ಜನಾಂಗದ ವಿಶಿಷ್ಟ ಲಕ್ಷಣಗಳಲ್ಲಿ ಒಂದೆನಿಸಿದ್ದ ನೈಸರ್ಗಿಕ ಗ್ರಾಮಗಳು, ಸ್ವಯಂ ಸೃಷ್ಟಿತ ಗ್ರಾಮ ಸಮುದಾಯಗಳು ತದನಂತರದಲ್ಲಿ ಸಂಸ್ಥೆ ಎನ್ನಿಸಿಕೊಳ್ಳಲು ಸಾಧ್ಯ ವಾಗಲಿಲ್ಲ. ಆರ್ಯರಷ್ಟೇ ಸಮನಾಗಿ ದ್ರಾವಿಡರು, ಸುಮೇರಿಯನ್ನರು ಮುಂತಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನಾಂಗಗಳಲ್ಲಿಯೂ ಗ್ರಾಮಗಳು ಇದ್ದವೆಂದು ಐತಿಹಾಸಿಕ ಶೋಧನೆಗಳು ನಿಸ್ಸಂಶಯ ವಾಗಿ ಸಾಬೀತುಪಡಿಸಿವೆ. ಆರ್ಯರು ಅಲೆಮಾರಿ ತಂಡಗಳು ಭರತ ಖಂಡವನ್ನು ಪ್ರವೇಶಿಸಿದಾಗ ಅಲ್ಲಿ ಅವರು ಸುಸಜ್ಜಿತ ಗ್ರಾಮ ಸಮುದಾಯಗಳನ್ನೂ ಕಂಡಿರಲೇ ಬೇಕು.

ಆರ್ಯಪೂರ್ವದ ಸಮಾಜಗಳಲ್ಲಿರಬಹುದಾದ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ನಿಶ್ಚಿತವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. ಆರ್ಯ–ಪೂರ್ವ ಭಾರತದಲ್ಲಿನ ಗ್ರಾಮ ಗಳನ್ನು ಕುರಿತು ಸಿಗುವ ಮಾಹಿತಿಯು ಅತ್ಯಲ್ಪ ಅಥವಾ ಇಲ್ಲವೆಂದರೂ ನಡೆದೀತು. ವೈದಿಕ ಮೊದಲಾದ ಪ್ರಾಚೀನ ಸಾಹಿತ್ಯ ಹಾಗೂ ಇನ್ನಿತರ ಮೂಲಗಳಿಂದ ದೊರಕುವ ಅತ್ಯಲ್ಪ ಮಾಹಿತಿಯನ್ನು ಅವಲಂಭಿಸಿ ಅಂದಿನ ಸಾಮಾಜಿಕ ಜೀವನವನ್ನು ಸ್ಪಷ್ಟವಾಗಿ ಚಿತ್ರಿಸಲು ಸಾಧ್ಯವಾಗುವುದಿಲ್ಲ. ಪ್ರಥಮತಃ ಧಾರ್ಮಿಕವಾದ ಈ ಸಾಹಿತ್ಯ ಮೂಲ ಗಳಿಂದ ದೊರೆಯುವ ಅಲ್ಪ ಮಾಹಿತಿಯು ಒಟ್ಟಾರೆ ಜೀವನದ ಬಗ್ಗೆ ಸಂಕ್ಷಿಪ್ತ ವಾಗಿಯೂ, ಅನಾರ್ಯ ಸಮುದಾಯಗಳ ಬಗ್ಗೆ ತುಂಬ ಕಡಿಮೆ ವಿವರಗಳನ್ನು ನೀಡುತ್ತವೆ ; ದೊರೆಯುವಷ್ಟು ಉಲ್ಲೇಖಗಳೆಲ್ಲವೂ ಕೂಡ ಪ್ರಮುಖವಾಗಿ ದೊರೆ ಗಳು, ಸಾಮ್ರಾಟರು ಹಾಗೂ ಆರ್ಯರು ಮತ್ತು ಮೂಲನಿವಾಸಿಗಳ ನಡುವೆ ನಡೆದ ಹೋರಾಟಗಳ ವಿಷಯಗಳಿಂದ ಕೂಡಿದೆ. ಪ್ರಕೃತಿ ಆರಾಧಕರಾದ ಬ್ರಾಹ್ಮಣೀಯ ಬರಹಗಾರರು ಪ್ರಕೃತಿ ತಾಯಿಯನ್ನು ಪ್ರಶಂಸಿಸಿ ಶ್ಲೋಕಗಳನ್ನು ರಚಿಸಿದರು. ಐತಿಹಾಸಿಕ ಔಚಿತ್ಯದ ಬಗ್ಗೆ ಈ ಜನರು ಲಕ್ಷವಹಿಸಿದುದು ಅತ್ಯಲ್ಪ.

ಆರ್ಯಪೂರ್ವದ ಭಾರತೀಯ ಸಮಾಜ ಕುರಿತು ವಿಶ್ವಾಸನೀಯ ಮಾಹಿತಿ ದೊರೆಯುವಲ್ಲಿ ಇಂತಹ ತೊಂದರೆಗಳಿರುವುದರಿಂದ ಸಾಂದರ್ಭಿಕ ಘಟನೆಗಳನ್ನು ಅನುಸರಿಸಿ ಕೆಲವು ಲಕ್ಷಣಗಳ ಬಗೆಗೆ ವಿವರಿಸುವುದೇ ಮೇಲು.

ಉದಾ : ಆರ್ಯಪೂರ್ವ ಸಮಾಜದ ಜನಜೀವನದ ಬಗೆಗೆ ಮಾಹಿತಿ ನೀಡು ವಂತಹ ಅಂಶಗಳು ನಮಗೆ ವೇದಗಳಲ್ಲಿ ದೊರೆಯುತ್ತವೆ. 'ಪುರಂದರರು' ಎಂದು ಸಂಭೋದಿಸಲ್ಪಡುವ ನಗರಗಳನ್ನು ನಾಶಮಾಡುವ ಜನರು ತಮ್ಮ ಬಲಾಢ್ಯ ದೇವತೆ ಗಳ ಮಹಿಮೆಯನ್ನು ಕೊಂಡಾಡುವ ಶ್ಲೋಕ ಒಂದು ವೇದದಲ್ಲಿ ಲಭ್ಯವಿದೆ. ಆರ್ಯ ಪೂರ್ವದ ಇತಿಹಾಸದಲ್ಲಿ ಕವಿದಿದ್ದ ಕತ್ತಲೆಯ ಮೇಲೆ ಈ ನಗರ ವಿನಾಶಕರ ದೇವತೆಗಳ ವಿಚಾರ ತುಸು ಬೆಳಕನ್ನು ಚೆಲ್ಲುತ್ತದೆ. ಇದರಿಂದಾಗಿ ಆರ್ಯಪೂರ್ವ ಕಾಲದ ನಿವಾಸಿ ಗಳು ದೊಡ್ಡ ನಗರಗಳನ್ನು ನಿರ್ಮಿಸಲು, ನಾಶಮಾಡಲೂ ಸಮರ್ಥರಾಗಿದ್ದರು ಎಂದು ಇತಿಹಾಸಕಾರರು ಇಂತಹ ಕೆಲವು ಸಾಕ್ಷಿಗಳ ಬಲದಿಂದ ನಿರೂಪಿಸಿದ್ದಾರೆ. ಇತ್ತೀಚೆಗೆ ಹರಪ್ಪ ಮಹೆಂಜೋದಾರೊಗಳಲ್ಲಿ ನಡೆದ ಶೋಧನೆಗಳೂ ಕೂಡ ಈ ದೃಷ್ಟಿಕೋನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ಬಲಪಡಿಸುತ್ತವೆ. ಹರಪ್ಪ ಮಹೆಂಜೋದಾರೋದ ಕೆಲವು ಶೋಧನೆಗಳನ್ನು ವಿಮರ್ಶಿಸುತ್ತಾ ಡಾ|| ಪಣೀಕರ್ ಹೀಗೆ ಹೇಳುತ್ತಾರೆ. ''ಸ್ವಯಂ ಸುಸಜ್ಜಿತವಾದ ಗ್ರಾಮಗಳು ಆರ್ಯ ಸೃಷ್ಟಿಯೇ ಅಥವಾ ಮೂಲನಿವಾಸಿಗಳ ಸಾಮಾಜಿಕ ವ್ಯವಸ್ಥೆಯ ಮುಂದುವರಿಕೆಯೇ ಎಂದು ಹೇಳುವುದು ಕಷ್ಟ. ಮಹೆಂಜೋದಾರೋದಂತಹ ನಗರವು ಮಾತ್ರ ಹಳ್ಳಿಗಳನ್ನಾಧರಿಸಿದ ಗ್ರಾಮೀಣ ಆರ್ಥಿಕ ವ್ಯವಸ್ಥೆ ಹಾಗೂ ವ್ಯಾಪಕ ವಾದ ಕೃಷಿ ವ್ಯವಸ್ಥೆ ಇವುಗಳ ಮೇಲೆ ಊರ್ಜಿತವಾಗಿರಲು ಸಾಧ್ಯ. ಆರ್ಯರು ಕೃಷಿಕರಾದಮೇಲೆ ಗ್ರಾಮ ವ್ಯವಸ್ಥೆಗಳನ್ನು ತಮ್ಮ ಸಂಪರ್ದಿಗೆ ತಗೆದುಕೊಂಡಿರಬಹುದು ಎಂಬ ಕಾರಣವೇ ಹೆಚ್ಚು ಯೋಗ್ಯವಾದುದಾಗಿದೆ, ಆರ್ಯಪೂರ್ವ ಕೃಷಿ ಸಮಾಜ ಗಳಲ್ಲಿ ವ್ಯವಸಾಯವು ಬಹುಮುಖ್ಯ ಪಾತ್ರವಹಿಸಿದೆ ಎಂದು ಊಹಿಸಬಹುದು. ಇಡೀ ಸಾಮಾಜಿಕ ರಚನೆಯೇ ಕೃಷಿಯ ಸುತ್ತ ಏರ್ಪಟ್ಟಿದೆ. ಭೂಮಿಯ ವ್ಯವಸಾಯವೇ ಗ್ರಾಮ ಸಮುದಾಯಗಳು ನಡೆಸಿದ ಪ್ರಯತ್ನದ ಫಲವು ಆಗಿದೆ. ಕೃಷಿ ಕುಟುಂಬ ಗಳನ್ನಲ್ಲದೆ ಅನುವಂಶಿಕವಾಗಿ ಇತರ ಕಲೆ ಹಾಗೂ ವ್ಯವಸಾಯ ಸಂಬಂಧಿತ ವೃತ್ತಿಗಳಲ್ಲಿ ತೊಡಗಿದ ಕುಟುಂಬಗಳು ಅಲ್ಲಿ ಇದ್ದಿರಬೇಕು.''

ಭಾರತದಲ್ಲಿ ಆರ್ಯರ ಆಳ್ವಿಕೆಯನ್ನು ಕುರಿತು ಗ್ರಂಥ ರಚಿಸಿದ 'ಹಾವೆಲ್' ಎಂಬ ವಿದ್ವಾಂಸರು ಈ ಮಾತನ್ನು ಒಪ್ಪುತ್ತಾರೆ. ಆರ್ಯರು ಭಾರತವನ್ನು ಪ್ರವೇಶಿಸುವ ಮೊದಲೇ ದ್ರಾವಿಡ ಹಾಗೂ ಇತರ ಅನಾರ್ಯ ಜನಾಂಗಗಳು ಗ್ರಾಮ ಸಮುದಾಯ ಗಳನ್ನ ಹೊಂದಿದ್ದರು ಎಂಬುದು ಅವರ ಅಭಿಪ್ರಾಯ. ಆರ್ಯರು ತಮ್ಮ ಅಲೆದಾಟ ವನ್ನು ಕೊನೆಗೊಳಿಸಿ ನೆಲೆನಿಂತ ಆವರು ಗ್ರಾಮ ಸಮುದಾಯಗಳ ರೂಪದಲ್ಲಿ ತಮ್ಮ ಜೀವನವನ್ನು ಕಂಡುಕೊಂಡರು. ಆರ್ಯರು ಹೀಗೆ ನೆಲೆನಿಂತ ನಂತರವೂ ಮೂಲ ನಿವಾಸಿಗಳಾದ ಅನಾರ್ಯರ ಗ್ರಾಮ ವ್ಯವಸ್ಥೆಯು ಮುಂದುವರೆಯಿತು. ಅನಾರ್ಯರ ಗ್ರಾಮಗಳು ಮುಖ್ಯವಾಗಿ ಕೃಷಿ ಪ್ರಧಾನ ಸಮುದಾಯಗಳಾಗಿದ್ದವು. ಅವರ ಸಮಗ್ರ ಸಾಮಾಜಿಕ ವ್ಯವಸ್ಥೆಗೆ ಮೂಲವು ಭೂ ವ್ಯವಸಾಯವಾಗಿತ್ತು. ಆದಿವಾಸಿ ಪದ್ಧತಿ ಗಳಿಂದ ಹೆಣೆಯಲ್ಪಟ್ಟಿದ್ದ ಈ ಪುರಾತನ ಗ್ರಾಮ ಸಮುದಾಯಗಳು ಮಾತೃ ಪ್ರಧಾನ ಪದ್ಧತಿಯನ್ನು ಹೊಂದಿದ್ದವು. ನೆಲೆನಿಂತ ಸಮಾಜದ ಜೀವ ಕೇಂದ್ರವಾಗಿ ಇಲ್ಲಿ ತಾಯಿಯು ಕಂಡುಬರುತ್ತಾಳೆ. ತಂದೆ ಮತ್ತು ಇತರ ಪುರುಷರು, ಯುವಕರು ಬೇಟೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿ ಹೊಂದಿದ್ದು ಮನೆಯಿಂದ ಹೆಚ್ಚುಕಾಲ ಹೊರಗೆ ಇರುತ್ತಿದ್ದು ಕೃಷಿಯನ್ನು ಮುಖ್ಯವಾಗಿ ಮಹಿಳೆಯರೆ ನಡೆಸುತ್ತಿದ್ದುದು ಕಂಡುಬರುತ್ತದೆ.

ಆರ್ಯಪೂರ್ವ ಭಾರತೀಯ ಸಮಾಜದ ಬಗ್ಗೆ ಬರೆಯುತ್ತಾ ತಮ್ಮ ಗ್ರಂಥ 'ಬುದ್ಧಿಸ್ಟ ಇಂಡಿಯಾ'ದಲ್ಲಿ ಲೇಖಕ ರೈಸ್ ಡೇವಿಡ್‌ರವರು ಅಲ್ಲಿನ ಜನಜೀವನವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುರಿತು ಉಲ್ಲೇಖಿಸಿದ್ದಾರೆ. ಆರ್ಯಪೂರ್ವದ ಜನರು ಸಂಸ್ಕೃತಿಹೀನರಾದ ಕಾಡು ಪಶುಗಳಾಗಿದ್ದರು ಎಂಬ ವಾದವನ್ನು ಇವರು ಅಲ್ಲಗೆಳೆದಿದ್ದಾರೆ. ಬದಲಾಗಿ ಆರ್ಯ ಪೂರ್ವದ ಜನ ಉತ್ತಮ ನೆಲೆ ನಿಂತ ಸಾಮುದಾಯಿಕ ಜೀವನವನ್ನೂ ಪಕ್ವ ಸಾಮಾಜಿಕ ವ್ಯವಸ್ಥೆಯನ್ನೂ ಆಕ್ರಮಣ ಪ್ರಿಯ ಆರ್ಯರ ಲೋಭವನ್ನು ಕೆರಳಿಸುವಂತಹ ಶ್ರೀಮಂತಿಕೆಯನ್ನು ಹೊಂದಿದ್ದರು. ಅವರ ಗ್ರಾಮ ಸಮುದಾಯಗಳ ಗಾತ್ರವು ಪ್ರಧಾನವಾಗಿ ಭೂಮಿಯ ಫಲವತ್ತತೆ ಹಾಗೂ ನೀರಿನ ಪ್ರಕೃತಿಗಳನ್ನ ಅವಲಂಭಿಸಿತ್ತು. ಹೀಗಾಗಿ ಆರ್ಯಪೂರ್ವದ ಗ್ರಾಮ ಸಮುದಾಯಗಳು ಗಾತ್ರದಲ್ಲಿ ಚಿಕ್ಕವಾಗಿದ್ದವು ಎಂಬುದು ವೇದ್ಯವಾಗುತ್ತಿದೆ.

ಹಾವೆಲ್ ಮತ್ತು ರೈಸ್ ಡೇವಿಡ್ಸ್‌ರವರು ಆರ್ಯಪೂರ್ವ ಭಾರತದ ಭೂ ಹಿಡುವಳಿಯ ಸ್ವರೂಪವನ್ನು ಉಲ್ಲೇಖಿಸಿದ್ದಾರೆ. ಹಾವೆಲ್ ಅವರ ಅಭಿಪ್ರಾಯದಲ್ಲಿ ದ್ರಾವಿಡರು ಹೊಂದಿದ್ದ ಕೃಷಿ ಭೂಮಿಯು ಸಮುದಾಯದ ಆಸ್ತಿ ಆಗಿತ್ತು. ನಿರ್ದಿಷ್ಟ ವಾದ ಭೂಮಿಯನ್ನು ಹೊಂದುವುದು ಹಾಗೂ ಭೂಮಿಯ ಖಾಸಗಿ ಒಡೆತನವನ್ನು ಬೆಳೆಸುವುದು ಈ ವಿಚಾರಗಳಲ್ಲಿ ಪರ್ಯಾಯ ಅಥವಾ ಪಾಳಿ ಕೃಷಿ ಪದ್ಧತಿಯನ್ನು ಅವರು ಹೊಂದಿದ್ದರು. ಭೂ ಹಿಡುವಳಿಗಳಲ್ಲಿ ಭಿನ್ನ ಭಿನ್ನ ಸಮೂಹಗಳು ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ಒಡೆತನವನ್ನು ಹೊಂದಿ ನಂತರ ಅದನ್ನು ಮತ್ತೊಂದು ಸಮುದಾಯಕ್ಕೆ ವರ್ಗಾಯಿಸುವಂತಹ ಪದ್ಧತಿಯನ್ನು ಅವರು ಇಟ್ಟುಕೊಂಡಿದ್ದರು. ಈ ಮರು ಹಂಚಿಕೆಯ ವಿಚಾರವು ಅವರ ಗ್ರಾಮ ಸಭೆಗಳಲ್ಲಿ ನಿರ್ಧಾರವಾಗುತ್ತಿತ್ತು. ಬೌದ್ಧ ಧರ್ಮದ ಕಾಲಕ್ಕೆ ಗ್ರಾಮದ ಭೂಮಿಯು ಸಾಮಾನ್ಯ ಒಡೆತನಕ್ಕೆ ಒಳಪಟ್ಟಿತ್ತು. ಗ್ರಾಮಗಳ ಎಲ್ಲಾ ಕುಟುಂಬಗಳು ಕೃಷಿಯೋಗ್ಯ ಭೂಮಿಯ ಉರುವಲು ಮುಂತಾದ ವಸ್ತುಗಳ ಮೇಲೆ ಸಾಮಾನ್ಯ ಹಕ್ಕುಗಳನ್ನು ಹೊಂದಿದ್ದರು. ಖಾಸಗಿ ಒಡೆತನವು ಕೇವಲ ದನಕರು ಮೊದಲಾದ ಚರಾಸ್ತಿಗಳಲ್ಲಿ ಕಂಡುಬರುತ್ತಿತ್ತು. ಆದಾಗ್ಯೂ ಗೋಮಾಳಗಳು ಸಾಮಾನ್ಯ ಒಡೆತನಕ್ಕೆ ಒಳಪಟ್ಟಿದ್ದವು.

ಆಶ್ಚರ್ಯವೆಂದರೆ ಗ್ರಾಮ ಸಮುದಾಯಗಳಲ್ಲಿ ವಾಸಮಾಡುವ ಜನಗಳ ಗೇಣಿ ಮೊದಲಾದ ಹಕ್ಕು ಬಾಧ್ಯತೆಗಳಂತಹ ಮುಖ್ಯ ವಿಷಯಗಳಲ್ಲಿ ಯಾವುದೇ ನಿರ್ದಿಷ್ಟ ನಿಯಮಗಳು ಇರಲಿಲ್ಲ. ಕೃಷಿ ಮತ್ತು ಭೂ ಒಡೆತನಗಳ ಸ್ಪಷ್ಟ ನಿಯಮಗಳು ಇರಲಿಲ್ಲವಾದಗ್ಯೂ ಕೃಷಿಯ ಪರ್ಯಾಯ ವ್ಯವಸ್ಥೆ ಕುರಿತು ಸಂಕೀರ್ಣ ಪದ್ಧತಿ ಗಳು. ನಡಾವಳಿಗಳು ಇದ್ದವು. ಈ ಪದ್ಧತಿಗಳು, ಸಂಪ್ರದಾಯಗಳು ಸ್ವರೂಪದಲ್ಲಿ ದ್ರಾವಿಡ ಅಥವಾ ಆರ್ಯಪೂರ್ವದ ಸಂಗತಿಗಳಾಗಿದ್ದವು ಎಂಬುದು ಅಂಗೀಕೃತ ವಿಷಯ ವಾಗಿದೆ. ಆದ್ದರಿಂದ ಕೃಷಿ ಅಥವಾ ಇನ್ನಾವುದೇ ಗ್ರಾಮ ಸಂಘಟನೆಯಂತಹ ವಿಷಯ ಗಳಲ್ಲಿ ಆರ್ಯರ ಪಾತ್ರ ಸ್ವಲ್ಪ ಮಾತ್ರ ಅಥವಾ ಇನ್ನಾವುದೇ ಗ್ರಾಮ ಸಂಘಟನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಂತಹ ವಿಷಯಗಳಲ್ಲಿ ಆರ್ಯರ ಪಾತ್ರ ಸ್ವಲ್ಪ ಮಾತ್ರ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಈ ವಾದವನ್ನು ಪಣೀಕರ್‌ರವರು ಸಮರ್ಥಿಸುತ್ತಾರೆ. ಅವರು ಬರೆದಿರುವ ಪ್ರಕಾರ, "ಆರ್ಯರ ಭಾರತದ ಮೇಲಿನ ದಾಳಿಯು ಅಲ್ಲಿನ ಗ್ರಾಮ ಸಮಾಜಗಳ ರಚನೆಯಲ್ಲಿ ಯಾವುದೇ ಮಹತ್ತರ ಬದಲಾವಣೆಯನ್ನು ತರಲಿಲ್ಲ. ಅಂತೆಯೇ ಗೇಣಿ ಪದ್ಧತಿಯಲ್ಲೂ ಅವರ ಪ್ರಭಾವ ಅತ್ಯಂತ ಕಡಿಮೆ ಮುಖರ್ಜಿಯವರು ಕೂಡ ಇಂತಹದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳುವಂತೆ ಪಶು ಸಂಗೋಪನೆಯು ಅತ್ಯಲ್ಪವಾದ್ದರಿಂದ ನೆಲೆ ನಿಂತ ಕೃಷಿ ಪದ್ಧತಿಯಲ್ಲಾಗಲೀ ಅಥವಾ ಭೂ ಒಡೆತನದ ಯಾವುದೇ ನಿರ್ದಿಷ್ಟ ನಿಯಮಗಳನ್ನಾಗಲಿ ಆರ್ಯರ ಪಾತ್ರ ಇಲ್ಲವೆನ್ನಬಹುದು.

ಆರ್ಯ ಮತ್ತು ದ್ರಾವಿಡರ ಸಾಂಗೀಕರಣ ಕ್ರಿಯೆ ಶತಮಾನಗಳುದ್ದಕ್ಕೂ ನಡೆದ ತತ್ಫಲವಾಗಿ ಇಂಡೋ ಆರ್ಯನ್ ಪದ್ಧತಿ ಜನ್ಮಿಸಿತು. "ಈ ಎರಡು ವಿಭಿನ್ನ ಸಂಸ್ಕೃತಿಗಳ ನಡುವಣ ಸಾಂಗೀಕರಣದ ಫಲವಾಗಿ ಗ್ರಾಮ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳು ಸಂಭವಿಸಿದವು. ಈ ಹೊಸ ಪದ್ಧತಿ ತನ್ನ ವ್ಯವಸ್ಥೆಯ ವಿವಿಧ ಅಂಶಗಳನ್ನು ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳಿಂದ ಪಡೆದಿದೆ. ಆರ್ಯರ ಪಶು ಸಂಗೋಪನೆ ಹಾಗೂ ಮೂಲ ನಿವಾಸಿಗಳಾದ ದ್ರಾವಿಡರ ಭೂ ವ್ಯವಸಾಯ ಈ ಎರಡು ಸಂಗತಿಗಳು ಹೊಸ ವ್ಯವಸ್ಥೆಯಾಗಿ ಜನಿಸಿದ ಗ್ರಾಮೀಣ ಆರ್ಥಿಕತೆ ಜೀವನದ ಮೂಲ ತತ್ವಗಳಾದವು.

ಸಾಮಾಜಿಕ ವ್ಯವಸ್ಥೆ :

ವೈದಿಕ ಕಾಲದ ಗ್ರಾಮ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಕುರಿತು ವಿಫಲವಾದ ಮಾಹಿತಿಯು ಅಂದಿನ ಬರಹಗಳಲ್ಲಿ ದೊರೆಯುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಘೋಷ್ ಮತ್ತು ಗ್ರಾಮ ಎಂಬೆರಡು ಗ್ರಾಮಗಳ ಉಲ್ಲೇಖವಿದೆ. ಮೊದಲನೆಯದು ಚಿಕ್ಕ ಗಾತ್ರದಾದರೆ ಎರಡನೆಯದು ಅದಕ್ಕಿಂತ ದೊಡ್ಡದು. ಈ ಗ್ರಾಮಗಳು ಅರಣ್ಯಕ್ಕೆ ಸಮೀಪದಲ್ಲಿರುವುದು ಕಂಡುಬರುತ್ತದೆ. ಈ ಚಿಕ್ಕ ಗ್ರಾಮ ಸಮುದಾಯಗಳ ನಿವಾಸಿಗಳನ್ನು ಗೋಪರು ಎಂದು ಕರೆಯಲಾಗಿದೆ, ಇವರ ಮುಖ್ಯ ಉದ್ಯೋಗ ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಪ್ರತಿಯೊಂದು ಗ್ರಾಮವು ಸ್ವಪರಿಪೂರ್ಣವಾದ, ಹೊರಜಗತ್ತಿನೊಂದಿಗೆ ಅತ್ಯಲ್ಪ ಸಂಪರ್ಕವನ್ನಿಟ್ಟುಕೊಂಡಿದಂತಹ ಸ್ವತಂತ್ರ ಅಸ್ತಿತ್ವಗಳಾಗಿ ಕಂಡುಬರುತ್ತದೆ. ಈ ಗ್ರಾಮಗಳ ಸರಹದ್ದು ಮರಗಳಿಂದಲೂ ತೊರೆಗಳಿಂದಲೂ, ಬೆಟ್ಟ ಸಾಲುಗಳಿಂದಲೂ, ನದಿ ಹಾಗೂ ಕೆರೆಗಳಿಂದಲೂ ನಿರ್ದಿಷ್ಟಪಡಿಸಲಾಗುತ್ತಿತ್ತು. ಇಲ್ಲಿನ ಭೂ ಹಿಡುವಳಿಯ ಸ್ವರೂಪ ಎಂತಹದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬುದು ತಿಳಿದುಬಂದಿಲ್ಲ. ಗ್ರಾಮದ ಭೂಮಿಯ ಮೇಲೆ ಗ್ರಾಮನಿವಾಸಿಗಳಿಗಿದ್ದ ವಿಶೇಷ ಹಕ್ಕುಗಳನ್ನು ಅತೀ ಕಾಳಜಿ ಪೂರ್ವಕವಾಗಿ ಕಾಯ್ದುಕೊಳ್ಳಲಾಗುತ್ತಿತ್ತು. ಅರಸನು ಎಷ್ಟೆ ಅಧಿಕಾರ ಪಡೆದಿದ್ದಾಗ್ಯೂ ಗ್ರಾಮದ ಭೂಮಿಯನ್ನು ಸ್ವಾಧೀನಪಡಿಸು ಕೊಳ್ಳುವಂತಿರಲಿಲ್ಲ. ಗ್ರಾಮದ ಜಮೀನಿನ ವ್ಯವಸಾಯ, ಅದರ ಭೂಬಾಡಿಗೆ ಮತ್ತು ಮತ್ತು ಕಂದಾಯಗಳಂತಹ ತೆರಿಗೆ ವಸೂಲಿಯಂತಹ ಕಾರ್ಯಗಳನ್ನು ವಿವಿಧ ಹೆಸರುಗಳಿಂದ ಗುರುತಿಸಲ್ಪಟ್ಟಿದ್ದ ಗ್ರಾಮದ ಮುಖ್ಯಸ್ಥನು ನೋಡಿಕೊಳ್ಳುತ್ತಿದ್ದನು.

ಬೌದ್ಧರ ಕಾಲದಲ್ಲಿ ಗ್ರಾಮದ ಸಾಮಾಜಿಕ ರಚನೆಯೊಳಗೆ ಯಾವುದೇ ಗಮನಾರ್ಹ ಪರಿವರ್ತನೆಗಳಾದುದು ಕಂಡುಬಂದಿಲ್ಲ. ಗ್ರಾಮ ಸಮುದಾಯಗಳು ಎಂದಿನಂತೆ ಕಾಳಜಿ ಪೂರ್ವಕವಾಗಿ ರಕ್ಷಿಸಲ್ಪಟ್ಟು ಅವುಗಳ ನಿರ್ದಿಷ್ಟ ಸೀಮೆಗಳೊಂದಿಗೆ ಸ್ವತಂತ್ರವಾಗಿ ಮುಂದುವರೆದಿದ್ದವು. ರೈಸ್ ಡೆವಿಡ್ಸ್‌ರ ಪ್ರಕಾರ "ಗ್ರಾಮದ ಜಮೀನು, ಗೋಮಾಳ ಹಾಗೂ ಬಂಜರು ಭೂಮಿಗಳು ಗ್ರಾಮದ ಸಾರ್ವತ್ರಿಕ ಒಡೆತನಕ್ಕೆ ಒಳಪಟ್ಟಿದ್ದವು. ಯಾರೊಬ್ಬರು ಕೂಡ ಕೃಷಿ ಭೂಮಿ ಗೋಮಾಳಗಳನ್ನು ಖಾಸಗಿ ಆಸ್ತಿಯಾಗಿ ಹೊಂದಿರಲಿಲ್ಲ. ಆದರೆ ಪಶುಪ್ರಾಣಿಗಳಂತ ಚರಾಸ್ತಿಗಳನ್ನು ಖಾಸಗಿ ಆಸ್ತಿಯಾಗಿ ಪರಿಗಣಿಸಲಾಗಿತ್ತು. ಈ ವೇಳೆಗಾಗಲೆ ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಲಾಯಿತು : ಸಮುದಾಯವೇ ನೀರಾವರಿಯ ನಾಲೆಗಳನ್ನು ರಚಿಸಿತ್ತು. ನೀರಿನ ಪೂರೈಕೆಯೂ ಕೂಡ ಪದ್ಧತಿ ಪ್ರಕಾರ ನಡೆಯುತ್ತಿತ್ತು. ಈ ಎಲ್ಲಾ ಸಮುದಾಯಿಕ ಚಟುವಟಿಕೆಗಳು ಗ್ರಾಮದ ಮುಖ್ಯಸ್ಥನ ಉಸ್ತುವಾರಿಯಲ್ಲಿ ನಡೆಯುತ್ತಿದ್ದವು. ವ್ಯವಸಾಯದ ಕೃಷಿಯೋಗ್ಯವಾದ ಭೂಮಿ ಎಲ್ಲಾ ತುಕಡಿಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಮನೆಯ ಮುಖ್ಯಸ್ಥರ ಸಂಖ್ಯೆಗನುಗುಣವಾಗಿ ಹಂಚಿಕೆಯಾಗುತ್ತಿತ್ತು. ಒಂದೊಂದು ಕುಟುಂಬಕ್ಕೂ ನಿರ್ದಿಷ್ಟ ಜಮೀನಿನ ತುಕಡಿಯನ್ನು ಹಂಚಿ ಅದರ ಫಲವನ್ನು ಕುಟುಂಬವು ಪಡೆಯುವ ವ್ಯವಸ್ಥೆಯಾಗಿತ್ತು. ಆದರೆ ತನ್ನ ಪಾಲಿನ ವಿನಹ ಕುಟುಂಬವು ಯಾವುದೇ ಹೆಚ್ಚುವರಿ ಹಕ್ಕನ್ನು ಹೊಂದಿರಲಿಲ್ಲ. ಸಮುದಾಯಕ್ಕೆ ವಿರುದ್ಧವಾಗಿ ಒಡೆತನದ ಹಕ್ಕು ಸಾಧ್ಯವಿರಲಿಲ್ಲ. ಗ್ರಾಮ ಸಮುದಾಯವು ಸಮಗ್ರವಾಗಿ ಗ್ರಾಮದ ಜಮೀನಿನ ಒಡೆತನವನ್ನು ಪಡೆದಿತ್ತು. ಒತ್ತುವರಿಯನ್ನು ಬಹಳ ಕಟ್ಟುನಿಟ್ಟಾಗಿ ನಿಷೇದಿಸಲಾಗಿತ್ತು. ಗ್ರಾಮದ ವ್ಯಕ್ತಿಗಳು ತಮ್ಮ ಪಾಲನ್ನು ಗ್ರಾಮದ ಹೊರ ವ್ಯಕ್ತಿಗಳಿಗೆ ಮಾರುವಂತೆ ಅಥವಾ ಒತ್ತೆ ಹಾಕುವಂತೆ ಇರಲಿಲ್ಲ. ಭೂಮಿಯು ಖಾಸಗಿ ಒಡೆತನವಂತೂ ಇರಲಿಲ್ಲ; ಮಾತ್ರವಲ್ಲದೆ ತನ್ನ ಕುಟುಂಬದ ಪಾಲನ್ನು ಕೂಡ ವಿಭಜಿಸುವುದಾಗಲಿ, ತ್ಯಜಿಸುವುದಾಗಲಿ ಮಾಡುವಂತಿರಲಿಲ್ಲ. ವ್ಯಕ್ತಿ ಎಷ್ಟೆ ಪ್ರಬಲನಾಗಿದ್ದಾಗ್ಯೂ ಗ್ರಾಮದ ಗೋಮಾಳವನ್ನಾಗಲಿ ಅಥವಾ ಉಪವಸ್ತುಗಳನ್ನಾಗಲಿ ಅನುವಂಶೀಯವಾಗಿ ಇಲ್ಲವೆ ಖರೀದಿಯ ಮೂಲಕವಾಗಲಿ ಪಡೆಯಬಹುದಾದ ಸಾಧ್ಯತೆಯೇ ಇರಲಿಲ್ಲ. ಅರಸರಿಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಡ ಭೂಮಿಯಂತಹ ಆಸ್ತಿ ಇರುತ್ತಿರಲಿಲ್ಲ ತೆರಿಗೆಯನ್ನು ಅರಸೊತ್ತಿಗೆಯ ಬೊಕ್ಕಸಕ್ಕೆ ಮಾತ್ರ ನೀಡಬೇಕಾಗಿತ್ತು. ಇದು ಭೂಮಿಯ ಒಡೆಯನು ಅರಸ ಎಂಬ ಕಾರಣಕ್ಕಾಗಿ ಅಲ್ಲ, ಬದಲಾಗಿ ಪರಕೀಯ ಆಕ್ರಮಣಗಳಿಂದ ಗ್ರಾಮಸ್ಥರನ್ನು ಆತ ರಕ್ಷಿಸುತ್ತಿದ್ದನು ಎಂಬ ಕಾರಣಕ್ಕಾಗಿ ರಾಜಮನ್ನಣೆಯ ವಿಚಾರದಲ್ಲಿ ಅರಸನು ಭೂಮಿಯನ್ನು ಉಂಬಳಿಯಾಗಿ ಕೊಡುತ್ತಿರಲಿಲ್ಲ; ಬದಲಾಗಿ ವಾರ್ಷಿಕ ತೆರಿಗೆಯಾಗಿ ಸರ್ಕಾರಕ್ಕೆ ಸಂದ ಭೂಉತ್ಪನ್ನಗಳನ್ನು ಕೊಡುತ್ತಿದ್ದ. ಅರಸೊತ್ತಿಗೆಯಲ್ಲಿ ಯಾವುದೇ ವ್ಯತ್ಯಾಸಗಳಾದರೂ, ಯಾರೇ ದೊರೆಗಳಾದರೂ ರೈತರಿಗೆ ಮಾತ್ರ ಚ್ಯುತಿ ಉಂಟಾಗುತ್ತಿರಲಿಲ್ಲ. ಯಾವ ದೊರೆಗಳೂ ರೈತರನ್ನು ಅವರ ಭೂಮಿಯಿಂದ ಉಚ್ಚಾಟಿಸುತ್ತಿರಲಿಲ್ಲ. ವಾಸ್ತವವಾಗಿ ಸರ್ಕಾರದಲ್ಲಾಗುತ್ತಿದ್ದ ಬದಲಾವಣೆಗಳು ಅಥವಾ ಆಳುವವರ ಬದಲಾವಣೆಗಳು ರೈತರ ಪರಿಸ್ಥಿತಿಯನ್ನು ಮತ್ತಷ್ಟು ಸುಧಾರಿಸುತ್ತಿದ್ದವು, ಹಿಂದೆ ಪಡೆಯುತ್ತಿದ್ದಷ್ಟೆ ತೆರಿಗೆಯನ್ನು ಪಡೆದು ಹೆಚ್ಚಿನ ರಕ್ಷಣೆಯನ್ನು ನೀಡಲಾಗುತ್ತಿತ್ತು.

ಅಧಿಕೃತ ಚರಿತ್ರೆ ಭಾರತದಲ್ಲಿ ಕ್ರಿ ಪೂ. 5ನೇ ಶತಮಾನದ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಆರಂಭವಾಯಿತೆನ್ನಬೇಕು. ಆ ಕಾಲದ ಗ್ರಾಮ ಸಮುದಾಯದ ಬಹುಮುಖ ಚಿತ್ರಣವೂ ಮೌರ್ಯ ಸಾಮ್ರಾಟ ಚಂದ್ರಗುಪ್ತನ ಕಾಲದಲ್ಲಿ ರಚಿತವಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ದೊರೆಯುತ್ತದೆ. ಆದರೆ ಈ ಅರ್ಥಶಾಸ್ತ್ರದಲ್ಲಿ ಗ್ರಾಮ ಸಮುದಾಯವನ್ನು ಕುರಿತು ಚಿತ್ರಿಸಲ್ಪಟ್ಟ ಅಂಶಗಳು ವಾಸ್ತವಕ್ಕಿಂತ ಆದರ್ಶ ಸ್ವರೂಪದ್ದಾಗಿವೆ ಎಂದು ಹೇಳಲಾಗುತ್ತದೆ. ಒಟ್ಟಿನಲ್ಲಿ ಆಡಳಿತದ ವಿಚಾರವಾಗಿ ಗ್ರಾಮವು ಅತೀ ಮುಖ್ಯವಾದ ಘಟಕವಾಗಿರಬಹುದೆಂದು ಊಹಿಸಬಹುದಾಗಿದೆ. ಅಂತೆಯೇ ಭೂಮಿಯ ಗೇಣಿ ವಿಚಾರದಲ್ಲಿ ಅಥವಾ ಭೂ ಒಡೆತನದ ವಿಚಾರವಾಗಿ ಮಾತ್ರ ಯಾವುದೇ ಉಲ್ಲೇಖಗಳು ಕಂಡುಬರುವುದಿಲ್ಲ. ಪ್ರತಿಯೊಂದು ಹಳ್ಳಿಗೂ ಮರ, ನದಿ ಮತ್ತು ಬೆಟ್ಟಗಳಿಂದ ಕೂಡಿದ ನಿಶ್ಚಿತ ಎಲ್ಲೆ ಕಂಡುಬರುತ್ತದೆ. ಗ್ರಾಮ ಸಮುದಾಯಗಳು 100 ರಿಂದ 500 ಕುಟುಂಬಗಳನ್ನು ಮಾತ್ರ ಹೊಂದಿರಬೇಕೆಂಬ ನಿಯಮವನ್ನು ಕಾಣುತ್ತೇವೆ.

'ಶುಕ್ರನೀತಿಸಾರ'ವು ಸ್ತಂಭ, ಪಳ್ಳಿ ಮತ್ತು ಗ್ರಾಮ ಎಂಬ ಮೂರು ಪ್ರಕಾರದ ಗ್ರಾಮ ಸಮುದಾಯಗಳನ್ನು ಉಲ್ಲೇಖಿಸುತ್ತದೆ. ಕುಂಭವು ಗಾತ್ರದಲ್ಲಿ ಪಳ್ಳಿಯ ಅರ್ಧದಷ್ಟಾದರೆ ಪಳ್ಳಿಯು ಗ್ರಾಮದ ಅರ್ಧದಷ್ಟಿರುತ್ತಿತ್ತು. ಭೂ ಒಡೆತನಕ್ಕೆ ಸಂಬಂಧಪಟ್ಟ ಹಾಗೆ ಗ್ರಾಮದ ಜಮೀನು ಇಡೀ ಗ್ರಾಮದ ಸ್ವಾಧೀನವನ್ನು ಪಡೆದಿತ್ತು ಎಂಬ ಉಲ್ಲೇಖಗಳಿವೆ. ಗ್ರಾಮದ ಜಮೀನನ್ನು ಕೃಷಿಗಾಗಿ ವರ್ಷದಿಂದ ವರ್ಷಕ್ಕೆ ವಿತರಿಸುವ ಕಾರ್ಯವನ್ನು ಮತ್ತು ಅದರ ನಿರ್ವಹಣೆ ಹಾಗೂ ಅರಸೊತ್ತಿಗೆಗೆ ಸಲ್ಲಿಸಬೇಕಾದಂತಹ ತೆರಿಗೆಯ ಕಾರ್ಯವನ್ನು ಪಂಚಾಯತಿಯು ಮಾಡುತ್ತಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಪ್ರಕಾರವಾಗಿ ಗ್ರಾಮದ ಭೂಮಿಯ ಒಡೆತನಕ್ಕೆ ನೈಜ ಸ್ವರೂಪವನ್ನು ಕುರಿತು ಪ್ರಾಚೀನ ಸಾಹಿತ್ಯದಲ್ಲಿ ಎಲ್ಲಿಯೂ ತೃಪ್ತಿಕರ ಮಾಹಿತಿ ಲಭಿಸುವುದಿಲ್ಲ. ತತ್ಕಾರಣ ಪೂರ್ವಕಾಲದ ಭಾರತೀಯ ಗ್ರಾಮಸಮುದಾಯಗಳಲ್ಲಿ ಒಡೆತನದ ಬಗ್ಗೆ ಭಿನ್ನಾಭಿಪ್ರಾಯಕ್ಕೆ ದಾರಿಮಾಡಿಕೊಟ್ಟಿದೆ. ಒಟ್ಟು ಭೂ ಒಡೆತನಕ್ಕೆ ಸಂಬಂಧಿಸಿದ ಮೂರು ಭಿನ್ನ ಸಾಧ್ಯತೆಗಳನ್ನು ನಾವು ನೋಡಬಹುದಾಗಿದೆ.

1) ಗ್ರಾಮದ ಭೂಮಿಯು ವಿವಿಧ ಕುಟುಂಬಗಳ ಒಡೆತನಕ್ಕೆ ಸೇರಿತ್ತು.

2) ಭೂಮಿಯ ಖಾಸಗಿ ಒಡೆತನವು ಮಾನ್ಯತೆಯನ್ನು ಪಡೆದಿರಲಿಲ್ಲ. ಗ್ರಾಮದ ಈ ಭೂಮಿಯು ಸಮುದಾಯದ ಆಸ್ತಿಯಾಗಿ ಗ್ರಾಮ ಸಭೆ ಅಥವಾ ಗ್ರಾಮದ ಮುಖ್ಯಸ್ಥನ ಮೇಲ್ವಿಚಾರಣೆಗೆ ಒಳಪಟ್ಟಿತ್ತು.

3) ಭೂ ಒಡೆತನವು ಊಳಿಗಮಾನ್ಯ ವ್ಯವಸ್ಥೆಗೂ ಒಳಪಟ್ಟಿತ್ತು. ಈ ಊಳಿಗ ವ್ಯವಸ್ಥೆಯು ತನ್ನ ರಚನೆಯಲ್ಲಿ ರೈತರನ್ನು ಕೆಳಮಟ್ಟದಲ್ಲಿಯೂ ಭೂ ಮಾಲಿಕರನ್ನು ಮೇಲಿನ ಹಂತದಲ್ಲೂ ಅರಸ ಅಥವಾ ಸಾಮ್ರಾಟರನ್ನು ತುತ್ತತುದಿಯಲ್ಲಿಯೂ ಇರಿಸಿತ್ತು.

ಪೊವೆಲ್‌ರವರು ಈ ಪ್ರಾಚೀನ ಭಾರತದಲ್ಲಿ ಗ್ರಾಮ ಸಮುದಾಯಗಳಲ್ಲಿನ ಭೂಮಿಯ ಖಾಸಗಿ ಒಡೆತನದ ಸಿದ್ಧಾಂತವನ್ನು ಬೆಂಬಲಿಸಿದ್ದಾರೆ. ಅವರು ಒಟ್ಟು ಗ್ರಾಮ ಸಮುದಾಯಗಳನ್ನು ರೈತ್‌ವಾರಿ ಗ್ರಾಮಗಳು ಹಾಗೂ ಜಮೀನ್ದಾರಿ ಅಥವಾ ಜಂಟಿ ನಮೂನೆಯ ಗ್ರಾಮಗಳೆಂದು ಎರಡು ವಿಧವಾಗಿ ವಿಂಗಡಿಸುತ್ತಾರೆ, ರೈತ್‌ವಾರಿ ಪದ್ಧತಿಯಲ್ಲಿ ಭೂ ಒಡೆತನವನ್ನು ಪ್ರತ್ಯೇಕ ಮನೆತನಗಳು ಹೊಂದಿದ್ದರೆ. ಜಂಟಿ ನಮೂನೆಯಲ್ಲಿ ಇಡೀ ಗ್ರಾಮದ ಜಮೀನನ್ನು ಕೆಲವು ಶ್ರೀಮಂತ ಕುಟುಂಬಗಳು ಸಾಮೂಹಿಕವಾಗಿ ಹೊಂದಿರುತ್ತವೆ. ಪೂರ್ವಕಾಲದಲ್ಲಿ ಪ್ರತಿಯೊಂದು ಕುಟುಂಬವು ಕಾಡನ್ನು ಕಡಿದು ಭೂಮಿಯನ್ನು ಉಳುಮೆಗೆ ಯೋಗ್ಯವನ್ನಾಗಿಸಿ ಅದರ ಮೇಲೆ ತಮ್ಮದೇ ಆದ ಪ್ರಭುತ್ವವನ್ನು ಸಾಧಿಸಿದ್ದರು. ಹೀಗಾಗಿ ಭಾರತದ ಮೂಲ ಗ್ರಾಮಗಳಾದ ರೈತ್‌ವಾರಿ ಗ್ರಾಮಗಳು ಅಸ್ತಿತ್ವಕ್ಕೆ ಬಂದವು. ಈ ನಂಬಿಕೆಗೆ ಆಧಾರವೆಂದರೆ ಅನಾರ್ಯರಾದ ಮೂಲ ನಿವಾಸಿಗಳು ನೆಲೆಸಿದ್ದಂತಹ ವಿಂಧ್ಯ ಶ್ರೇಣಿಯ ದಕ್ಷಿಣ ಭಾಗದಲ್ಲಿ ರೈತ್‌ವಾರಿ ಪದ್ಧತಿಯ ಗ್ರಾಮಗಳು ಕಂಡುಬಂದವು. ಅಲ್ಲಿ ಮಾತ್ರವೇ ಗ್ರಾಮಗಳ ಪ್ರಾಚೀನ ಸ್ವರೂಪವು ಮಾಸದೆ ಉಳಿದಿತ್ತು. ಜಂಟಿ ನಮೂನೆಯ ಹಳ್ಳಿಗಳು ಆರ್ಯರು ಭಾರತದ ಮೇಲೆ ದಾಳಿ ಮಾಡಿ ನೆಲೆಸಿದ ನಂತರ ಉಗಮಿಸಿದವು. ಆರ್ಯರಿಗೆ ಕುಲವೆಂಬ ಬಲಿಷ್ಠ ಸಂಘಟನೆಯೊಂದಿದ್ದು ತಮ್ಮ ಪೂರ್ವಜರನ್ನು ಕುರಿತಂತೆ ಆತ್ಮಾಭಿಮಾನವನ್ನು ಹೊಂದಿದ್ದವರಾಗಿದ್ದರು. ಈ ನಂಬಿಕೆಯು ಭೂಮಿಯ ಜಂಟಿ ಒಡೆತನಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾರಿಮಾಡಿಕೊಡುವುದರ ಮುಖಾಂತರ ಜಂಟಿ ಗ್ರಾಮಗಳ ಉದಯಕ್ಕೆ ಕಾರಣ ವಾಯಿತು.

ಗ್ರಾಮದ ಭೂಮಿಯ ವ್ಯವಸಾಯ ಹಾಗೂ ನಿರ್ವಹಣೆ ಇವುಗಳನ್ನು ಕುರಿತ ಪ್ರಾಚೀನ ಸಾಹಿತ್ಯವನ್ನು ಅವಲೋಕಿಸಿದರೆ ಗ್ರಾಮದ ಭೂಮಿಯು ಸಾಮಾನ್ಯವಾಗಿ ಗ್ರಾಮದ ಮುಖ್ಯಸ್ಥನ ಹಿರಿತನದಲ್ಲಿ ನಡೆಯುವ ಪಂಚಾಯಿತಿಯು ನಿರ್ವಹಿಸುತ್ತಿತ್ತು ಎಂದು ತಿಳಿದು ಬರುತ್ತದೆ. ಭೂಮಿಯು ಖಾಸಗಿ ಒಡೆತನದಲ್ಲಿ ಇರಲಿಲ್ಲವೆಂಬುದು ವೇದ್ಯವಾಗುತ್ತದೆ, ಗ್ರಾಮದ ಹಿರಿಯರಿಂದ ಕೂಡಿದ ಒಂದು ಮಂಡಳಿಯು ವ್ಯವಸಾಯ ಕ್ಕಾಗಿ ಭೂಮಿಯನ್ನು ಹಂಚುವ, ಕಾಲುವೆಯ ನೀರನ್ನು ಸರಬರಾಜು ಮಾಡುವ ಹಾಗೂ ಅದಕ್ಕಾಗಿ ತೆರಿಗೆಯನ್ನು ಸಂಗ್ರಹಿಸಿ ಅರಸನಿಗೆ ಒಪ್ಪಿಸುವ ಕೆಲಸವನ್ನು ನಿರ್ವಹಿಸುತ್ತಿತ್ತು. ಒಂದೊಮ್ಮೆ ವಿವಿಧ ಬಗೆಯ ತೊಂದರೆಗಳಿಂದ ಭೂಮಿಯನ್ನು ರಕ್ಷಿಸಲು ಬೇಲಿ ಹಾಕ ಬೇಕಿದ್ದ ಪಕ್ಷದಲ್ಲಿ ಸಂಬಂಧಪಟ್ಟ ರೈತನು ಬೇಲಿಯನ್ನು ಹಾಕಿ ಸುಗ್ಗಿಯ ನಂತರದಲ್ಲಿ ಮತ್ತೆ ಅದನ್ನು ತೆಗೆದು ಹಾಕಬೇಕಾಗಿತ್ತು, ಕಾರಣ ಭೂಮಿಯು ನಿಸರ್ಗಕ್ಕೆ ಸಂಬಂಧ ಪಟ್ಟುದಲ್ಲದೆ ಅದರ ಮೇಲೆ ಯಾವುದೇ ಕುಟುಂಬದ ನಿರ್ದಿಷ್ಟ ಹಕ್ಕು ಇರುವಂತಿರಲಿಲ್ಲ.

ಗ್ರಾಮದ ಭೂಮಿಯ ಒಟ್ಟು ಉತ್ಪನ್ನವನ್ನು ಪಂಚರ ಆಸ್ತಿ ಎಂದು ಭಾವಿಸ ಲಾಗುತ್ತಿತ್ತು. ಸುಗ್ಗಿಯ ನಂತರದಲ್ಲಿ ಉತ್ಪನ್ನಗಳನ್ನು ಎಲ್ಲರಿಗೂ ಒಂದೇ ಆಗಿದ್ದ ಗ್ರಾಮದ ಸುಗ್ಗಿಯ ಕಣಕ್ಕೆ ತರಲಾಗುತ್ತಿತ್ತು. ತದನಂತರದಲ್ಲಿ ಗ್ರಾಮದ ಕುಟುಂಬ ಗಳಿಗೆ ಅವುಗಳನ್ನು ವಿತರಿಸಲಾಗುತ್ತಿತ್ತು. ಕೃಷಿಯಲ್ಲಿ ನೇರವಾಗಿ ಪಾಳ್ಗೊಳ್ಳದೆ ಕೇವಲ ಕೃಷಿ ಉಪಕರಣಗಳನ್ನು ಮಾಡಿಕೊಡುವಂತಹ ಕೆಲಸಗಳ ಮುಖಾಂತರ ರೈತರಿಗೆ ನೆರ ವಾದ ಕಸುಬುದಾರರ ಕುಟುಂಬಗಳಿಗೆ ಅವರ ಪಾಲಿನ ಉತ್ಪನ್ನಗಳನ್ನು ನೀಡಲಾಗು ತ್ತಿತ್ತು. ಫಲವತ್ತಾದ ಉತ್ತಮ ಗುಣಮಟ್ಟದ ಭೂಮಿಯನ್ನು ಗ್ರಾಮದ ಎಲ್ಲರಿಗೂ ಸಿಗುವಂತೆ ಮಾಡಲು ಗ್ರಾಮ ಮಂಡಳಿಗಳು ಆವರ್ತನ ಪದ್ಧತಿಯನ್ನು ಜಾರಿಗೆ ತಂದಿ ದ್ದವು, ಈ ಪದ್ಧತಿ ಪ್ರಕಾರ ಒಂದು ಭೂಪ್ರದೇಶವನ್ನು ಆವರ್ತನದ ಮೇರೆಗೆ ಉಳುಮೆ ಯನ್ನು ಮಾಡುತ್ತಿದ್ದರು. ನಿರ್ದಿಷ್ಟ ಭೂ ಪ್ರದೇಶದೊಂದಿಗೆ ಯಾರೂಕೂಡ ಸ್ವಕೀಯ ಭಾವನೆ ಬೆಳೆಸಿಕೊಂಡು ತನ್ಮೂಲಕ ಖಾಸಗಿ ಆಸ್ತಿಯಾಗಿ ಅದು ಮಾರ್ಪಾಟಾಗದಂತೆ ಮಾಡುವುದು ಕೂಡ ಈ ವಿಧಾನದ ಮತ್ತೊಂದು ಉದ್ದೇಶವಾಗಿತ್ತು. ಈ ಆವರ್ತನ ಪದ್ಧತಿಯು ಬಂಗಾಳದ ಸಂತಾಲರಂತಹ ಆದಿವಾಸಿ ಸಮುದಾಯಗಳಲ್ಲಿ ಇಂದಿಗೂ ಬಳಕೆಯಲ್ಲಿರುವುದು ಕಂಡುಬರುತ್ತದೆ.

ಕಾಲಕ್ರಮೇಣ ಹಣ ಪ್ರಧಾನವಾದ ಆರ್ಥಿಕ ವ್ಯವಸ್ಥೆಯು ಜಾರಿಗೆ ಬಂದಾಗ ಪಂಚಾಯಿತಿಯಿಂದ ನಡೆಯುತ್ತಿದ್ದ ಭೂಮಿಯ ನಿರ್ವಹಣಾ ವ್ಯವಸ್ಥೆಯಲ್ಲಿ ಬದಲಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಣೆಗಳಾದುದನ್ನು ಕಾಣುತ್ತೇವೆ. ಸಾಟಿ ಪದ್ಧತಿಯಿಂದ ಹಣ ಪದ್ಧತಿಗೆ ಆರ್ಥಿಕ ವ್ಯವಸ್ಥೆಯು ಬದಲಾದ ಕಾಲದಿಂದಲೂ ಗ್ರಾಮದ ಅನೇಕ ಭೂಪ್ರದೇಶಗಳು ಪಂಚಾಯತಿಯಿಂದ ಹರಾಜಾಗತೊಡಗಿದವು. ಹೆಚ್ಚಿನ ಬಿಡ್ಡುದಾರರು ತಮಗಾದ ಭೂಮಿಯ ಉತ್ಪನ್ನಗಳನ್ನು ಐದು ವರ್ಷದವರೆಗೆ ಅನುಭವಿಸುವ ಹಕ್ಕನ್ನು ಪಡೆಯುತ್ತಿದ್ದರು. ಸುಗ್ಗಿಯ ನಂತರದಲ್ಲಿ ಈ ಹಕ್ಕು ಕೊನೆಗೊಳ್ಳುತ್ತಿತ್ತು. ಈ ಬಗೆಯ ಪದ್ಧತಿಯು ಇಂದಿಗೂ ಸಹ ಸರ್ಕಾರದ ಶಾಸನಗಳಿಗೆ ಬದ್ಧವಾಗಿದೆ. 'ಕಮ್ಯುನಿಡಾಡ್' ಎಂದು ಕರೆಯಲ್ಪಡುವ ಗೇಣಿ ಪದ್ಧತಿಯು ಗೋವೆಯಲ್ಲಿ ಜಾರಿಯಲ್ಲಿದೆ.

ಸಂಸ್ಥೆಗಳ ಅಭಿವೃದ್ಧಿಯನ್ನು ಕುರಿತು ಪ್ರಸಿದ್ಧ ಗ್ರಂಥವನ್ನು ಬರೆದ ಹೆನ್ರಿ ಮೇಯ್ನ ಎಂಬ ವಿದ್ವಾಂಸರು ಎಲ್ಲಾ ಕಡೆಗಳಲ್ಲಿರುವಂತೆ ಭಾರತದಲ್ಲೂ ಭೂಮಿಯು ಗ್ರಾಮದ ಎಲ್ಲಾ ನಿವಾಸಿಗಳ ಸಾಮಾನ್ಯ ಅಧಿಕಾರಕ್ಕೆ ಒಳಪಟ್ಟಿತ್ತು.

ಪಾಶ್ಚಿಮಾತ್ಯ ಟ್ಯೂಟೊನಿಕ್ ಸಮಾಜಗಳು ಮತ್ತು ಭಾರತದ ಗ್ರಾಮ ಸಮುದಾಯಗಳ ನಡುವೆ ಅನೇಕ ಸಾದೃಶ್ಯಗಳನ್ನು ಅವರು ಗುರುತಿಸಿದ್ದಾರೆ. ಆಕಸ್ಮಿಕವಾದಾಗ್ಯೂ ಕೂಡ ಈ ಹೋಲಿಕೆಗಳು ಹೆಚ್ಚು ನಿಕಟವಾಗಿವೆ. ಪ್ರಾಚೀನ ಟ್ಯೂಟಾನಿಕ್ ಸಮಾಜ ಮತ್ತು ಇತರ ಕಡೆಗಳಲ್ಲಿ ಕಂಡುಬಂದ ಇಂತಹದೆ ಸಮುದಾಯಗಳಲ್ಲಿನ ಹಾಗೆ ಭಾರತದ ಗ್ರಾಮ ಸಮುದಾಯಗಳಲ್ಲಿನ ಭೂಮಿಯು ಸಾಮಾನ್ಯ ಅಧಿಕರಣಕ್ಕೆ ಒಳಪಟ್ಟಿತ್ತು. ಈ ನಿಸರ್ಗ ಸಹಜವಾದ ಸಮತಾವಾದವು ಯಾವುದೇ ನಿರ್ಮಿತ ಸಿದ್ಧಾಂತ ರೀತಿಯಲ್ಲಿರಲಿಲ್ಲ ಅಥವಾ ಅನುಕೂಲಕರವಾದ ವಿಭಾಗಿಸುವ ನ್ಯಾಯ ತತ್ವದಿಂದಲೂ ಬಂದಿರಲಿಲ್ಲ. ಆದರೆ ಇದು ಸಾಧ್ಯವಾದುದು ಕುಲಸ್ಥರ ನಡುವೆ ಭೇದವನ್ನು ಸೃಷ್ಟಿಸಲು ಇದ್ದ ಅಸಾಧ್ಯತೆಯಲ್ಲಿ ತಾವೆಲ್ಲಾ ಒಬ್ಬನೆ ಪೂರ್ವ ಪಿತೃವಿಗೆ ಸಂಬಂಧಪಟ್ಟವರು ಎಂಬ ಗಾಢವಾದ ಶ್ರದ್ಧೆಯಿಂದ.

ಕೆಲವು ವೇಳೆ ಹೊರಗಿನಿಂದ ಬಂದ ಕುಲಸ್ಥರಲ್ಲದವರಿಗೂ ಕೂಡ ಸಾಂದರ್ಭಿಕವಾಗಿ ಇಂಥ ನೈಜ ಮತ್ತು ಸಹಜವಾದ ಸಮತೆಯ ಹಕ್ಕು ದೊರೆಯುತ್ತಿತ್ತು. ಹಾಗೆಯೇ ಸಮಾನತೆಯ ಈ ತತ್ವದ ನೈಸರ್ಗಿಕ ನೆಲೆಯಿಂದ ಭೂಮಿಯು ಮನುಷ್ಯ ಸಮೂಹದ ಒಡೆತನಕ್ಕೆ ಒದ್ದವಾಗಿತ್ತು. ಜೊತೆಗೆ ಈ ಒಡೆತನವು ಕುಲಸ್ಥರೂ ಆಗಿದ್ದ ಸಮೂಹದ ಹಿತ ಕಾಯುವ ಹಿರಿಯರ ಸಲಹೆಗಳ ಆಚಾರ ವಿಚಾರಗಳ ಕಟ್ಟುನಿಟ್ಟು ನಿಯಮಗಳಲ್ಲಿ ಜರುಗುತ್ತಿತ್ತು. ನಂತರದಲ್ಲಿ ಈ ಒಂದು ಹಂತದಲ್ಲಿಯೇ ಭೂಮಿ ಮತ್ತು ವ್ಯಕ್ತಿವಾದದ ಒಡೆತನ ಬಹುಸೂಕ್ಷ್ಮವಾಗಿ ವಿಕಾಸಗೊಳ್ಳುತ್ತಾ ಹೋಯಿತು.

ಭೂಮಿಯ ಖಾಸಗಿ ಒಡೆತನವು ಭಾರತದಲ್ಲಿ ಹಾಗೂ ಇತರ ಕಡೆಗಳಲ್ಲಿ ಹೇಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿವೃದ್ಧಿ ಹೊಂದಿತು ಎಂಬುದನ್ನು ಕುರಿತು ಹೆನ್ರಿ ಮೇಯ್ನರವರು ಕೆಲವು ಪ್ರಮುಖ ಉಪಕಲ್ಪನೆಗಳನ್ನು ಮುಂದಿಟ್ಟಿದ್ದಾರೆ.

ಸಮುದಾಯಗಳಲ್ಲಿ ಸಂಬಂಧಪಡದ ಹೊರಗಿನವರನ್ನು ಸೇರಿಸಿಕೊಂಡಿದ್ದರಿಂದ ಕಳ್ಳು ಬಳ್ಳಿ ಸಂಬಂಧದಲ್ಲಿ ಸಡಿಲತೆ ಇದ್ದರೂ ; ಪ್ರಾರಂಭದಲ್ಲಿ ಮಾನವನು ತನಗಿಂತ ಶಕ್ತಿಶಾಲಿಯಾದ ನಿಸರ್ಗದೊಂದಿಗೆ ಹೋರಾಡುತ್ತಿರುವಾಗ ಆತನ ಶಕ್ತಿಯು ಆತನೊಂದಿಗಿದ್ದ ಇತರ ಸದಸ್ಯರ ಸಂಖ್ಯೆಯೇ ಆಗಿತ್ತು. ಆದುದರಿಂದ ಅನ್ಯರನ್ನು ತನ್ನೊಂದಿಗಿರಲು ಆತ ಸ್ವಾಗತಿಸುತ್ತಿದ್ದ. ಇದರಿಂದ ವ್ಯವಸಾಯ ಮಾಡಲು, ಹೊರಗಿನವರ ದಾಳಿಯಿಂದ ರಕ್ಷಿಸಿಕೊಳ್ಳಲು ಅವಶ್ಯಕವಾದ ಜನಬಲ ಸಿಕ್ಕುತ್ತಾಗುತ್ತಿತು. ಅನ್ಯ ಸಮುದಾಯಗಳಿಂದ ಬಂದ ವ್ಯಕ್ತಿಗಳನ್ನು ತಮ್ಮ ಸಮುದಾಯದಲ್ಲಿ ಸೇರಿಸಿಕೊಳ್ಳುವಾಗ ಯಾವುದೋ ಒಂದು ಕಾಲ್ಪನಿಕ ಕಳ್ಳು-ಬಳ್ಳಿ ಸಂಬಂಧವನ್ನು ಹೊಂದಿದ ಜನರ ಸಂಖ್ಯೆಯೇ ಸಮುದಾಯದಲ್ಲಿ ಹೆಚ್ಚಾಗುತ್ತಾ ಹೋಗಿ ನಿಜವಾಗಿಯೂ ರಕ್ತ ಸಂಬಂಧಕ್ಕೆ ಬಾಂಧವ್ಯದ ಕೊಂಡಿಯು ಸಡಿಲಾಗತೊಡಗಿತು. ಒಂದು ಸಮುದಾಯದ ಬೆಸೆಯುವ ಸಾಧನವಾದ ಒಂದೇ ಪೂರ್ವಜರಿಗೆ ಹುಟ್ಟಿದವರು ಎಂಬ ಹೆಮ್ಮೆಯು ಅಳಿಸಿಹೋಗತೊಡಗಿತು. ಹೀಗಾಗಿ ಗ್ರಾಮಗಳು ರಕ್ತ ಸಂಬಂಧಿಗಳಿಂದ ಗುಂಪುಗಳಾಗಿರುವುದಕ್ಕಿಂತ ಹೆಚ್ಚಾಗಿ ಸಹಗ್ರಾಮವಾಸಿಗಳ ನೆಲೆಯಾಗಿ ಮಾರ್ಪಾಡಾಗತೊಡಗಿತು, ಸಾಮಾಜಿಕ ಸಂಬಂಧಗಳ ಸಹಜ ಪರಿಣಾಮವಾಗಿ ಪ್ರತಿಯೊಂದು ಮನೆತನವೂ ತಾನು ವ್ಯವಸಾಯಕ್ಕಾಗಿ ಪಡೆದ ಭೂಮಿಯ ಮೇಲೆ ತನ್ನ ವಿಶೇಷ ಅಧಿಕಾರ ಪಡೆಯುವ ಪ್ರವೃತ್ತಿಯನ್ನು ತೋರತೊಡಗಿದವು. ಹೀಗಾಗಿ ಸಾಮಾಜಿಕ ವ್ಯವಸಾಯ ಬೆಳೆಯ ಸಮಪಾಲು, ನಿಯಮಿತವಾಗಿ ಭೂಮಿಯ ಮರು ಹಂಚಿಕೆ ಇವೆಲ್ಲವುಗಳು ಕಾಲಕ್ರಮೇಣ ಕಾಣೆಯಾಗುತ್ತ ಬಂದು ಕೇವಲ ನೆಪಮಾತ್ರಕ್ಕೆ ಆಚರಿಸಲ್ಪಡುವ ರೂಢಿ. ಸಂಪ್ರದಾಯಗಳಾದವು. ಈ ರೀತಿಯಾಗಿ ವೈಯುಕ್ತಿಕ ಭೂಮಿಯ ಒಡೆತನವು ಸ್ಥಾಪಿಸಲ್ಪಟ್ಟಿತು.

ಒಂದೇ ವಂಶದವರು ಎಂಬ ಭಾವನೆ ಮತ್ತು ರಕ್ತಸಂಬಂಧದ ಕಲ್ಪನೆಗಳು ಸಮಯ ಸರಿದಂತೆ ಮಾಸಿಹೋಗ ತೊಡಗಿದಾಗ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದ ಹೊಸ ತಲೆಮಾರಿನವರು ಅವುಗಳನ್ನು ತಮ್ಮ ವೈಯುಕ್ತಿಕ ಆಸ್ತಿಗಳೆಂದು ಘೋಷಿಸತೊಡಗಿದರು. ಪ್ರತಿಯೊಂದು ಅವಿಭಕ್ತ ಕುಟುಂಬಗಳು ಇದೇ ರೀತಿಯಾಗಿ ತಮ್ಮ ಪಾಲಿನ ಜಮೀನಿನ ಮೇಲೆ ತಮ್ಮ ಅಧಿಕಾರವನ್ನು ಬಿಗಿಗೊಳಿಸಿಕೊಂಡು ಮುಂದೆ ತಾವು ಉಳಿದ ಕುಟುಂಬಗಳಿಂದ ಬೇರ್ಪಡೆಹೊಂದಿ ಭೂಮಿಯನ್ನು ಸಂಪೂರ್ಣವಾಗಿ ತಮ್ಮ ಖಾಸಗಿ ಆಸ್ತಿಗಳನ್ನಾಗಿ ಮಾಡಿಕೊಂಡವು.

ಪುಟ್ಟ ಸಮುದಾಯಗಳಲ್ಲಿನ ಮಿತಿಮೀರಿದ ಜಗಳಗಳು ಮತ್ತು ಜನಾಂಗೀಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲಹಗಳು ಕೂಡ ಭೂಮಿಯ ಮೇಲೆ ವೈಯಕ್ತಿಕ ಅಧಿಕಾರ ಪಡೆಯಲು ಪ್ರೋತ್ಸಾಹಿಸಿದ ಅಂಶವಾಗಿದ್ದವು. ಪಂಗಡಗಳ ನಡುವಿನ ಯುದ್ಧದಿಂದ ಪಡೆದ ಭೂಮಿ ಅಥವಾ ಲೂಟಿಯನ್ನು ಸಾಮಾನ್ಯವಾಗಿ ಜಯಶಾಲಿಯಾದ ಪಂಗಡವು ಉಳಿಸಿಕೊಳ್ಳುತ್ತಿತ್ತು. ವಿಜಯಶಾಲಿ ಗುಂಪಿನವರು ತಮ್ಮ ಗೆಲುವಿನ ಕಾಣಿಕೆಯಾಗಿ ಪಡೆದ ಭೂಮಿಯನ್ನು ಹಂಚಿಕೊಳ್ಳುವಾಗ ತಾರತಮ್ಯದ ಹಂಚಿಕೆಯ ವ್ಯವಸ್ಥೆಯನ್ನೂ ಅನುಸರಿಸಲಾಗುತ್ತಿತ್ತು. ಆಕ್ರಮಿಸಿದ ಭೂಮಿಯನ್ನು ಕೂಡ ಸಮನಾಗಿ ಹಂಚಲಾಗುತ್ತಿರಲಿಲ್ಲ. ಯುದ್ಧದಲ್ಲಿ ಮಹತ್ತರ ಹೋರಾಟ ಮಾಡಿ ಗೆಲುವಿಗೆ ಕಾರಣರಾದವರಿಗೆ ಅವರ ಸೇವೆಯ ಪ್ರಶಂಸಾರ್ಥವಾಗಿ ಸಿಂಹಪಾಲನ್ನು ನೀಡಲಾಗುತ್ತಿದ್ದರೆ ಇತರರು ತಮಗೆ ದಕ್ಕಿದ ಕಿರುಪಾಲಿನಲ್ಲಿಯೇ ಸಂತೃಪ್ತರಾಗುತ್ತಿದ್ದರು. ವೈರಿಗಳಿಂದ ಕಿತ್ತುಕೊಂಡ ಜಮೀನು ಪ್ರತ್ಯೇಕವಾದ ವ್ಯಕ್ತಿಗತ ಸ್ವಾಮ್ಯದಲ್ಲಿರುತ್ತಿತ್ತು.

ಕೆಲವೊಮ್ಮೆ ವಿಜೇತ ಜನಾಂಗವು ಸೋತ ಸಮುದಾಯದ ಸಮಸ್ತ ಸಂಪತ್ತನ್ನು ತಾನು ಪಡೆದ ನಂತರ ಸೋತವರು ತಮ್ಮನ್ನೇ ಪೂರ್ಣವಾಗಿ ಅವಲಂಬಿಸತೊಡಗಿದಾಗ ಮತ್ತೆ ಅವರಿಗೆ ಹಿಂತಿರುಗಿಸುತ್ತಿದ್ದರು. ಕೆಲವು ಪ್ರಕರಣಗಳಲ್ಲಿ ಭೂಮಿಯನ್ನು ಸೋತವರಿಗೆ ಹಿಂತಿರುಗಿಸಿದಾಗ್ಯೂ ಅದರ ಒಡೆತನದ ಹಕ್ಕು ಗೆದ್ದವರೊಂದಿಗೆ ಇರುತ್ತಿತ್ತು.

पुस्तकालय गुरुकुल कांगड़ी
100826

ವಸಾಹತು ನೆಲೆ : ಭೂಮಾಲಿಕತ್ವದ ಉಗಮವು ಕೇವಲ ಅಂತರ್‌ಜನಾಂಗೀಯ ತುಕಡಿಗಳ ನಡುವೆ ಏರ್ಪಟ್ಟ ಯುದ್ಧದ ಫಲಿತಾಂಶವಾಗಿರುತ್ತಿರಲಿಲ್ಲ. ಅಥವಾ ಯುದ್ಧದ ಜಯದ ವಿಶಿಷ್ಟ ಸೃಷ್ಟಿಯೂ ಆದಾಗಿರಲಿಲ್ಲ. ಕೆಲವೊಮ್ಮೆ ಸಮುದಾಯದಲ್ಲಿ ಜನಸಂಖ್ಯೆಯು ಹೆಚ್ಚಿದಾಗ ಮತ್ತು ವ್ಯಾಪಕವಾದ ಸಮೃದ್ಧ ಭೂಮಿ ದೊರೆಯುತ್ತಿದ್ದಾಗಲೆಲ್ಲ ಕೆಲವು ಕುಟುಂಬಗಳು ಆ ಭೂಮಿಯಲ್ಲಿ ವಾಸಿಸಲು ತೆರಳುತ್ತಿದ್ದವು. ಈ ಪ್ರಕಾರವಾಗಿ ಹೊಸ ಜಮೀನಿನಲ್ಲಿ ನೆಲೆನಿಂತ ಕುಟುಂಬಗಳಿಂದಾಗಿ ಮೂಲ ಸಮುದಾಯದ ಅಂಚಿನಲ್ಲಿ ಹೊಸದೊಂದು ಗ್ರಾಮ ನಿರ್ಮಾಣವಾಗುತ್ತಿತ್ತು. ಹೀಗೆ ಸಂಗಮಿಸಿದ ಗ್ರಾಮದಲ್ಲಿ ಕಂಡುಬರುವ ಮೂಲ ಮಾತೃ ಸಮುದಾಯವು ಆ ಇಡೀ ಸಮುದಾಯಕ್ಕೆ ಮೇಲ್ಪಂಕ್ತಿಯಲ್ಲಿರುತ್ತಿತ್ತು.

ಜಮೀನಿನ ಖಾಸಗಿ ಆಸ್ತಿಯ ಸ್ಥಾಪನೆಗೆ ಕುಲಶ್ರೇಷ್ಠತೆಯಲ್ಲಿನ ನಂಬಿಕೆ ಹಾಗೂ ಪೂರ್ವಜರಲ್ಲಿರಿಸಿದ ವಿನೀತ ಭಕ್ತಿ ಇವುಗಳೂ ಕೂಡ, ಮುಖ್ಯ ಕಾರಣಗಳಾಗಿದ್ದವು. ಪೂರ್ವದ ಈ ಗ್ರಾಮ ಸಮುದಾಯಗಳು ಪ್ರಜಾತಾಂತ್ರಿಕತೆ ಪಡೆದಿದ್ದರೂ ಸಹ ಸಮುದಾಯದೊಳಗಿನ ಕೆಲವು ಕುಟುಂಬಗಳಲ್ಲಿ ಹರಿಯುವ ಮೂಲಪಿತೃಗಳ ರಕ್ತ ಅತ್ಯಂತ ಶ್ರೇಷ್ಠವೆಂದೂ ಅದು ಅನೂನವಾಗಿ ಈ ಕುಟುಂಬಗಳಲ್ಲಿ ರಕ್ಷಿಸಲ್ಪಟ್ಟಿರುತ್ತದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬ ನಂಬಿಕೆಯಿತ್ತು. ಸಾಮಾನ್ಯವಾಗಿ ಸಮುದಾಯದ ಮುಖಂಡರಾದವರು ಇಂತಹ ಕುಟುಂಬಗಳ ವ್ಯಕ್ತಿಗಳಾಗಿದ್ದು ಅವರಿಗೆ ವಿಶೇಷವಾದ ಅನೇಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿತ್ತು. ಗೆದ್ದುಕೊಂಡ ಭೂಮಿಯಲ್ಲಿನ ಅತೀ ಹೆಚ್ಚಿನ ಹಾಗೂ ಫಲವತ್ತಾದ ಭಾಗವನ್ನು ಅವರಿಗೆ ನೀಡಲಾಗುತ್ತಿತ್ತು. ಕೆಲವೊಮ್ಮೆ ಅವರು ಮುಖಂಡರಾದ ಸಮುದಾಯಗಳಿಗೆ ಸೇರಿದ ಭೂಮಿಯಲ್ಲೂ ಕೂಡ ಹೆಚ್ಚಿನ ಪಾಲನ್ನು ಕಾಣಿಕೆಯಾಗಿ ಅವರಿಗೆ ಕೊಡಲಾಗುತ್ತಿತ್ತು.

ಮುಖಂಡನ ಹೆಚ್ಚುತ್ತಿರುವ ಅಧಿಕಾರವೂ ಕೂಡ ಭೂಮಿಯ ಮೇಲಿನ ವೈಯುಕ್ತಿಕ ಹಕ್ಕನ್ನು ಸ್ಥಾಪಿಸಲೇನೂ ಸಹಾಯ ಮಾಡಲಿಲ್ಲ. ಆದರೆ ಆಯಾ ಬುಡಕಟ್ಟುಗಳ ಮುಖಂಡನ ಅಧಿಕಾರ ವಲಯ ಮೊದಲು ಆತನ ಪಾಲಿನ ಭೂಮಿ ಆ ಮೇಲೆ ಇಡೀ ಬುಡಕಟ್ಟಿನ ಭೂಮಿಯ ಮೇಲೆ ಪಸರಿಸತೊಡಗಿದಂತೆ ಭೂಮಿಯ ಮೇಲಿನ ವೈಯಕ್ತಿಕ ಹಕ್ಕು ಸ್ಥಾಪನೆಯಾಗತೊಡಗಿತು. ಜನಾಂಗೀಯ ಯುದ್ಧಗಳ ಪರಿಣಾಮವಾಗಿ ಬಿಗಿಬಂಧದ ಸಂಬಂಧ ಹೊಂದಿದ ಗ್ರಾಮೀಣ ಸಮುದಾಯಗಳು ನಾಶಹೊಂದಿದವು. ಇಂತಹ ಸಮುದಾಯಗಳ ಕೆಲವು ಚೂರುಪಾರು ಗುಂಪುಗಳು ಎಲ್ಲೆಡೆಯೂ ಚದುರಿಹೋದವು. ಸೋತುಹೋದ ಜನಾಂಗವನ್ನು ದಿಕ್ಕೇಡಿಗಳನ್ನಾಗಿ ಮಾಡಲಾಯಿತು. ಅಂತಹವರಲ್ಲಿ ಕೆಲವರು ಸಂಪೂರ್ಣ ಶರಣಾಗತರಾದರು. ಸೋತು ಎಲ್ಲವನ್ನೂ ಕಳೆದುಕೊಂಡ ಸಮುದಾಯವು ಆಹಾರ, ರಕ್ಷಣೆ ಮತ್ತು ಆಶ್ರಯ ನೀಡುವ ನೆಲೆಯನ್ನು ಹುಡುಕುತ್ತ ಹೊರಡುತ್ತಿತ್ತು. ಕೆಲವೊಂದು ಪ್ರದೇಶದಲ್ಲಿ ಇಂತಹ ನಿರಾಶ್ರಿತರಿಗೆ ಪುನರ್ವ್ಯವಸ್ಥೆಯಾಗಿ ಅವರು ಅಲ್ಲಿಯೇ ನೆಲೆನಿಲ್ಲುತ್ತಿದ್ದರು. ಆದರೆ ಇಂತಹ ನಿರಾಶ್ರಿತರು ಸ್ಥಳೀಯ ಸಮುದಾಯಗಳ ಪೂರ್ಣಪ್ರಮಾಣ ಸದಸ್ಯರೆಂದು ಪರಿಗಣಿಸಲ್ಪಡುತ್ತಿರಲಿಲ್ಲ. ಈ ನಿರಾಶ್ರಿತರನ್ನು ಗ್ರಾಮ ಮುಖಂಡನು ತುಂಬ ಕಟ್ಟುನಿಟ್ಟಾಗಿ ನಿಯಂತ್ರಣದಲ್ಲಿಟ್ಟಿರುತ್ತಿದ್ದ ಅವರು ಈ ಮುಖಂಡನ ವೈಯಕ್ತಿಕ ಹಕ್ಕಿನ ಭೂಮಿಯಲ್ಲಿ ವ್ಯವಸಾಯ ಮಾಡಿ ಜೀವಿಸಬೇಕಾಗುತ್ತಿತ್ತು. ಹೀಗಾಗಿ ಈ ಸಮುದಾಯದ ಜನ ಮತ್ತೇ ನೆಲೆನಿಂತ ಸಮಾಜದ ಸದಸ್ಯರಾಗಬೇಕಾಗಿದ್ದರೆ ಈ ಮುಖಡನ ಮೂಲಕವೆ ಅದು ಸಾಧ್ಯವಿತ್ತು. ಆತನೇ ಅವರಿಗೆ ಆಶ್ರಯದಾತನೂ, ಅವರ ತಪ್ಪು-ಒಪ್ಪುಗಳಿಗೆ ಜವಾಬ್ದಾರನೂ ಆಗಿದ್ದನು. ಹೀಗಾಗಿ ಉಳಿದವರೆಲ್ಲ ಮುಖಂಡನ ಗೇಣಿದಾರರಾಗಿರಬೇಕಾಗಿತ್ತು.

ಹಳ್ಳಿಯ ಮುಖಂಡನು ಇಂತಹ ಆಶ್ರಯವಿಲ್ಲದೆ ಓಡಿ ಬಂದ ಅನ್ಯರಿಗೆ ಆಶ್ರಯ ನೀಡುವುದರ ಮೂಲಕ ಅನೇಕ ಲಾಭಗಳನ್ನು ಪಡೆದನು. ಇಂತಹ ವ್ಯಕ್ತಿಗಳಿಂದ ಮುಖಂಡನಿಗೆ ಲಾಭದಾಯಕವಾಗಿದ್ದರೂ ಆ ಸಮುದಾಯದ ಇತರ ಸದಸ್ಯರ ಹಕ್ಕುಗಳಿಗೆ ಹೊರಗಿನವರ ಆಗಮನದಿಂದ ಚ್ಯುತಿಯುಂಟಾಗತೊಡಗಿತು. ಆಶ್ರಯಕ್ಕಾಗಿ ಬಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನ್ಯರನ್ನು ಮೊದಲು ಗ್ರಾಮದ ಗೋಮಾಳಗಳಲ್ಲಿ ನೆಲೆಯೂರಲು ಅವಕಾಶ ನೀಡ ಲಾಗುತ್ತಿತ್ತು. ಹೀಗಾಗಿ ಇಂತಹ ಭೂಮಿಯ ಉಪಯೋಗದಿಂದ ಮೂಲ ಗ್ರಾಮದ ಜನರು ವಂಚಿತರಾಗಬೇಕಾಗುತ್ತಿತ್ತು. ಹೀಗಾಗಿ ಸಮುದಾಯದಲ್ಲಿನ ಮೊದಲಿನ ಸದಸ್ಯರ ಅಧಿಕಾರ ಕ್ರಮೇಣ ಕಡಿಮೆಯಾಗುತ್ತ ಕೇವಲ ಗ್ರಾಮನಾಯಕನ ಅಧಿಕಾರ ವೃದ್ಧಿಸ ತೊಡಗಿತು. ಅನ್ಯರಿಗೆ ಆಶ್ರಯಕೊಟ್ಟಾಗಲೆಲ್ಲ ಗ್ರಾಮ ನಾಯಕನ ಪ್ರತಿಷ್ಠೆ ಅಧಿಕಾರ ದಲ್ಲಿ ಹೆಚ್ಚಳವೂ, ಈ ಮೊದಲು ನೆಲೆನಿಂತ ಇತರ ಸದಸ್ಯರ ಅಧಿಕಾರ ಮತ್ತು ಹಕ್ಕು ಗಳಲ್ಲಿ ಕಡಿತವೂ ಉಂಟಾಗತೊಡಗಿತು. ಆಶ್ರಯಕ್ಕಾಗಿ ಓಡಿಬಂದ ಅನ್ಯರ ಮೇಲಿನ ಅಧಿಕಾರ ಮತ್ತು ವಿಶ್ವಾಸ ಹೊಂದಿದ ಗ್ರಾಮನಾಯಕ ಬಹು ಅಗ್ಗದ ಕೂಲಿಕಾರರನ್ನು ಪಡೆದನಷ್ಟೆ ಅಲ್ಲದೆ ಗ್ರಾಮದ ಇತರ ಸದಸ್ಯರನ್ನು ಹೆದರಿಸತೊಡಗಿದನು. ಹೊಸದಾಗಿ ಬಂದ ಅನ್ಯರ ಸಹಕಾರದಿಂದ ಸಮುದಾಯದ ಬೀಳು ಭೂಮಿಯನ್ನೂ ಅತಿಕ್ರಮಿಸಿ ತನ್ನದನ್ನಾಗಿಸತೊಡಗಿದನು. ಆ ಮೇಲೆ ಹುಲ್ಲುಗಾವಲುಗಳೂ, ಫಲವತ್ತಾದ ಜಮೀನೂ ಅವನ ಪಾಲಾಗತೊಡಗಿದವು. ಈ ಬೆಳವಣಿಗೆಯಿಂದ ಗ್ರಾಮ ಸಮುದಾಯಗಳಲ್ಲಿನ ಶಾಂತಿಯು ಮಾಯವಾಗತೊಡಗಿತು. ಗ್ರಾಮನಾಯಕ ತನ್ನ ಭೂ ಆಸ್ತಿಯನ್ನು ವಿಸ್ತರಿಸಿ ಕೊಂಡು ಕೊನೆಗೆ ಸಮುದಾಯದಿಂದ ಅದನ್ನು ಬೇರ್ಪಡಿಸುವಷ್ಟು ಶಕ್ತಿಶಾಲಿಯಾದಾಗ ಈ ಮೊದಲೇ ಶಿಥಿಲಗೊಂಡಿದ್ದ ಸಮೂಹ ವ್ಯವಸಾಯ ಗ್ರಾಮಗಳ ಸಾಮುದಾಯಿಕ ಭೂ ಒಡೆತನಗಳು ನಶಿಸಿಹೋದವು.

ಭಾರತದಲ್ಲಿ ಊಳಿಗಮಾನ್ಯ ಪದ್ಧತಿಯ ಉಗಮ :

ಆರ್ಯರ ಇತಿಹಾಸವನ್ನು ಬರೆದ ಅನೇಕ ಇತಿಹಾಸಕಾರರು ಮೊಗಲರ ಆಗಮನ ಕ್ಕಿಂತ ಮೊದಲೇ ಭಾರತದಲ್ಲಿ ಊಳಿಗಮಾನ್ಯ ಪದ್ಧತಿಯನ್ನು ಹೋಲುವ ಸಾಮಾಜಿಕ ರಚನೆಯು ಏರ್ಪಟ್ಟಿತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆ ಲೇಖಕರು ರಾಜ ಮತ್ತು ಗ್ರಾಮನಾಯಕ ಅಥವಾ ಸಮುದಾಯಗಳ ಮುಖ್ಯಸ್ಥರ ಸಂಬಂಧವನ್ನು ಊಳಿಗಮಾನ್ಯ ಪದ್ಧತಿಯಲ್ಲಿನ ತರಹದ ಸಂಬಂಧಗಳೇ ಎಂದು ತಪ್ಪಾಗಿ ಅಭಿಪ್ರಾಯ ಪಟ್ಟಿದ್ದರು. ಬಾಡೆನ್ ಪಾವೆಲ್‌ರವರು ರಾಜ ಮತ್ತು ಸಮುದಾಯಗಳ ಮುಖ್ಯಸ್ಥರ ನಡುವಿನ ಸಂಬಂಧದೊಂದಿಗೆ ಭೂ ಒಡೆಯ ಮತ್ತು ಆತನ ಸೇವಕನ ಮಧ್ಯದ ಸಂಬಂಧ ದಲ್ಲಿ ಹೋಲಿಕೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. ಪ್ರಪ್ರಥಮವಾಗಿ ರಾಜ ನಿಗೆ ಭೂಮಿಯ ಮೇಲೆ ಯಾವುದೇ ಅಧಿಕಾರವಿರಲಿಲ್ಲ. ಹಿಂದೂಧರ್ಮದ ಯಾವುದೇ ಧಾರ್ಮಿಕ ಗ್ರಂಥದಲ್ಲಿಯೂ ಕೂಡ ರಾಜನು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಕೂಡ ಆತನ ಆಳ್ವಿಕೆಯ ಭೂಮಿಯ ಮೇಲೆ ತನ್ನ ಅಧಿಕಾರ ಉಂಟು ಎಂದು ಎಲ್ಲಾ ಹಕ್ಕನ್ನು ಸಾಧಿಸಿದ್ದನ್ನು ಕಾಣಸಿಗುವುದಿಲ್ಲ. ಭೂಕಂದಾಯವನ್ನು ರಾಜನಿಗೆ ಸಲ್ಲಿಸುವುದು ಆತ ಗ್ರಾಮವಾಸಿಗಳಿಗೆ ದಾಳಿಕೋರರಿಂದ ರಕ್ಷಣೆಕೊಡುವುದಕ್ಕಾಗಿ ಇತ್ತೇ ಹೊರತಾಗಿ ಆತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂ ಒಡೆಯನೆಂಬ ನಂಬಿಕೆಯಿಂದಲ್ಲ. ಸೈನ್ಯ ಮತ್ತು ರಕ್ಷಣೆಯ ಕಾರಣಗಳಿಗೆ ಉಳಿದೆಲ್ಲರೂ ಒಬ್ಬರಾಜನಿಗೇ ವಿಧೇಯತೆ ಮತ್ತು ಅಧೀನತೆ ಹೊಂದಿರುವುದು ಅವಶ್ಯಕವಾಗಿತ್ತು, ಗ್ರಾಮವಾಸಿಗಳ ಗ್ರಾಮ, ಪಂಗಡಗಳ ನಾಯಕರುಗಳ ಸ್ವಯಂಪ್ರೇರಿತ ಅಧೀನತೆಯ ಮೇಲೆ ರಾಜನಿಗೆ ಯಾವ ನಿಯಂತ್ರಣವೂ ಇರಲಿಲ್ಲ. ನಾಯಕರುಗಳ ಮಂಡಲಿಗಳು ಅಯೋಗ್ಯ ರಾಜ್ಯರನ್ನು ಪಟ್ಟದಿಂದ ತೆಗೆದುಹಾಕಿರುವ ಮತ್ತು ಯೋಗ್ಯ ರಾಜರನ್ನು ಪಟ್ಟಕ್ಕೇರಿಸುವ ಉಲ್ಲೇಖನಗಳನ್ನು ನಾವು ವೇದಗಳಲ್ಲಿ ಕಾಣಬಹುದು. ರಾಜನು ಗ್ರಾಮ ಸಮುದಾಯಗಳ ಜನಜೀವನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಎಂದೂ ತಲೆಹಾಕುತ್ತಿರಲಿಲ್ಲ. ಗ್ರಾಮವಾಸಿಗಳೂ ಕೂಡ ತಮ್ಮ ಆಂತರಿಕ ವಿಷಯದಲ್ಲಿ ರಾಜನ ಅಂತರ್‌ಪ್ರವೇಶವನ್ನು ವಿರೋಧಿಸುತ್ತಿದ್ದರು. ಭೂಕಂದಾಯ ನೀಡುವಿಕೆಯ ಎರಡು ಉದ್ದೇಶಗಳನ್ನು ಈಡೇರಿಸುತ್ತಿತ್ತು, ಇದರಿಂದ ಒಂದು ಸಮುದಾಯವು ಒಬ್ಬ ರಾಜನಿಗೆ ನಿಷ್ಠೆ ತೋರಿದ ಹಾಗಾಯಿತು ಮತ್ತು ಇದಕ್ಕೆ ಪ್ರತಿಯಾಗಿ ಅವರಿಗೆ ರಾಜನಿಂದ ರಕ್ಷಣೆಯ ಭರವಸೆಯೂ ಲಭ್ಯವಾಗುತ್ತಿತ್ತು. ಆದುದರಿಂದ ಭೂಮಿಯ ಅಧಿಕಾರವನ್ನು ವಹಿಸಿಕೊಡುವಾಗ ಅಥವಾ ಪ್ರಾದೇಶಿಕ ಆಡಳಿತವನ್ನು ಸ್ಥಾಪಿಸುವಾಗ ಕೇವಲ ರಾಜಪಾಲನ್ನು ಮಾತ್ರ ಪಡೆದು ಜಮೀನಿನಲ್ಲಿ ವ್ಯವಸಾಯ ಮಾಡುವವರ ಹಕ್ಕುಗಳಿಗೆ ಯಾವುದೇ ಚ್ಯುತಿಯುಂಟಾಗದಂತೆ ಎಚ್ಚರವಹಿಸಲಾಗುತ್ತಿತ್ತು. ರಾಜನು ಕೇವಲ ಭೂಮಿಯ ಬಾಡಿಗೆ ಪಡೆಯುವ ಅಧಿಪತಿಯಾಗಿದ್ದನೇ ಹೊರತಾಗಿ ಭೂಮಿಯ ಹಿಡುವಳಿಯ ವಿಷಯದಲ್ಲಿ ತಲೆಹಾಕುತ್ತಲೇ ಇರಲಿಲ್ಲ. ಆದರೆ ರಾಜನು ಬಲಾಢ್ಯನಾದಂತೆಲ್ಲ ಹಳೆಯ ಗ್ರಾಮಪ್ರಮುಖರ ಸ್ಥಾನದಲ್ಲಿ ಅಥವಾ ಅವರ ಜೊತೆ–ಜೊತೆಯಲ್ಲಿಯೆ ಕಂದಾಯ ಸಂಗ್ರಾಹಕರನ್ನು ನೇಮಿಸಿದ. ರಾಜಕೀಯ ವರ್ಚಸ್ಸಿನ ಗ್ರಾಮಪ್ರಮುಖನಿಗೆ ಸಂಬಂಧಿಸಿದ, ಉಚ್ಚ ಎಂದು ಭಾವಿಸಲ್ಪಟ್ಟ ಕುಟುಂಬಗಳಿಗೆ ಕಂದಾಯ ಮನ್ನಾ ಮಾಡಲಾಗಿತ್ತಲ್ಲದೆ, ಕರಮುಕ್ತ ಜಮೀನನ್ನು ನೀಡಲಾಗಿತ್ತು. ಇತರ ಭೂಮಿಯಲ್ಲಿ ಕಂದಾಯಕ್ಕೆ ಒಳಪಟ್ಟಿದ್ದಲ್ಲದೆ, ರಾಜನ ಜಮೀನು ಎಂದು ಕರೆಯಲ್ಪಟ್ಟಿತು. ಮೊಘಲ್ ಚಕ್ರವರ್ತಿಗಳು ಈ ವ್ಯವಸ್ಥೆಯನ್ನು ಉಳಿಸಿಕೊಂಡು ಊಳಿಗಮಾನ್ಯಗೊಳಿಸಿದರು.

15ನೇ ಶತಮಾನದ ಮಧ್ಯದಲ್ಲಿ ಮೊಘಲ್ ಸಾಮ್ರಾಜ್ಯವು ಭದ್ರವಾಗಿ ನೆಲೆಯೂರಿತೆನ್ನಬಹುದು. ಅಕ್ಬರನ ಆಳ್ವಿಕೆಯು ಮೊಘಲರ ಉಚ್ಛ್ರಾಯಸ್ಥಿತಿಯಾಗಿತ್ತು. ತನ್ನ ಮಂತ್ರಿಯಾದ ರಾಜಾ ತೋಡರ್‌ಮಲ್‌ನ ಮಾರ್ಗದರ್ಶನದಲ್ಲಿ ಚಕ್ರವರ್ತಿಯು ಮಾಡಿದ ಕಂದಾಯ ನಿಷ್ಕರ್ಷೆಯು ವಿಖ್ಯಾತವಾದುದು. ಈ ಹೊಸ ಕಂದಾಯ ನಿಷ್ಕರ್ಷೆಯು ಯಾವುದೇ ಮೂಲಭೂತ ಬದಲಾವಣೆಯನ್ನುಂಟುಮಾಡಲಿಲ್ಲ, ಹಾಗೆಯೇ ಭೂ ಒಡೆತನದ ಬಗ್ಗೆ ಯಾವುದೇ ಹೊಸ ಸಿದ್ಧಾಂತದ ವ್ಯಾಖ್ಯಾನವನ್ನೂ ಮಂಡಿಸಲಿಲ್ಲ. ಬೆಳೆಯ ಆಧಾರ ಹಾಗೂ ಮಣ್ಣಿನ ಗುಣದ ಆಧಾರದ ಮೇಲೆ ಇದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಂದಾಯವನ್ನು ನಿಶ್ಚಿತಪಡಿಸಿತು. ನಿಚ್ಚಳವಾಗಿಯೂ ಅಲ್ಲಿ ಆಕ್ಷೇಪಿಸುವ ಅಥವಾ ಕಾಲಾನುಕಾಲದಿಂದಲೂ ನಡೆದು ಬಂದಿದ್ದ ಭೂಹಿಡುವಳಿ ಪದ್ಧತಿಗಳನ್ನು ಬದಲಾಯಿಸುವ ಉದ್ದೇಶವಿರಲಿಲ್ಲ. ನಿರುದ್ದಿಷ್ಟವಾಗಿದ್ದಾಗಲೂ ಸಹ ಅತಿ ಮಹತ್ವದ ಮಾರ್ಪಾಟುಗಳು ಅಲ್ಲಿ ಕಂಡುಬಂದವು. ಅಂತಹ ಮೂಲಭೂತ ಬದಲಾವಣೆಗಳಲ್ಲಿ ಒಂದಾಗಿ ಆ ವಿಚಾರಗಳನ್ನು ಸ್ಪಷ್ಟಗೊಳಿಸಿ, ಕೃತಿರೂಪಕ್ಕೆ ತರುವಂತಹ ಭೂಹಿಡುವಳಿಗೆ ಸಂಬಂಧಪಟ್ಟ ಹೊಸ ಹೆಸರು ಮತ್ತು ಪದಗಳ ಬಳಕೆಯಾಯಿತು. ಇದೂ ಸಹ ಅನಿರೀಕ್ಷಿತವೆ; ಹಳೆಯ ರಕಮುಗಳನ್ನೆ ಹೊಸ ಹೆಸರುಗಳಿಂದ ಕರೆಯಲಾಯಿತು. ಉದಾ : ಕಂದಾಯದ ಪಾಲಿನ ಮೇಲಿನ ಹಕ್ಕು, ಪಡುಭೂಮಿಯ ಮೇಲಿನ ಹಕ್ಕು ಹಾಗೂ ಲೇವಿ ಮತ್ತು ಕರಗಳ ಮೇಲಿನ ಹಕ್ಕುಗಳನ್ನು ಒಟ್ಟಾಗಿ 'ಜಮೀನ್ದಾರಿ' ಎಂದು ಕರೆಯಲಾಯಿತು. ಹಳೆಯ ಕುಲಸಂಬಂಧಿ ವಿಭಾಗಿತ ಪ್ರದೇಶ ವಿಚಾರದಿಂದ ಉಂಟಾದ ರಾಜೋಧ್ಯಾನಗಳನ್ನು 'ಖಾಲ್ಸಾ' ಎಂತಲೂ ಉಚ್ಚ ಕುಟುಂಬಗಳಿಗಿದ್ದ ಪಾರಂಪರಿಕ ಹಕ್ಕುಗಳನ್ನು 'ಮೀರಾಸಿ' ಎಂತಲೂ ಕರೆಯಲಾಯಿತು. ಹಕ್ಕಿನ ಸ್ವರೂಪದಲ್ಲಿ ಮಾತ್ರ ಯಾವುದೇ ಬದಲಾವಣೆಯೂ ಕಂಡುಬರಲಿಲ್ಲ. ಕಂದಾಯ ಪದ್ಧತಿಯು ಅದೇ ಹಳೆಯ ದೇಶಿಯ ರೀತಿಯಲ್ಲಿ ಮುಂದುವರೆಯಿತು. ಹೊಸ ಹೆಸರಿನ ಬಳಕೆಯಾಗಿತ್ತೇ ಹೊರತು ಮುಸ್ಲಿಮರ ಕರ ಅಥವಾ ಸೋತವರ ಮೇಲೆ ಹೇರಲಾಗಿದ್ದ ಖಿರಾಜಿನ ಕಾನೂನು ಸಿದ್ಧಾಂತಗಳಿಂದ ಇದು ಬಂಧಿತವಾಗಿರಲಿಲ್ಲ.

ಒಟ್ಟಿನಲ್ಲಿ ಸೋತ ಸಮುದಾಯಗಳ ಸಮಸ್ತ ಭೂಮಿಗೆ ಗೆದ್ದವನೆ ಒಡೆಯನಾಗಿ, ಸ್ಥಳೀಯ ಕೃಷಿಕರು ಅವನ ಗೇಣಿದಾರರು ಮಾತ್ರವಾಗಿ ಇರುವ ಈ ತತ್ವವು ಮುಸ್ಲಿಮ್ ಆಕ್ರಮಣಕಾರರಿಂದಲೇ ಹುಟ್ಟಿತು ಎಂದು ಹೇಳಲಾಗುತ್ತದೆ. ಹೇಗೆಯೋ ಆದರೂ 'ಸೋತವರ ಸ್ವತ್ತು ಗೆದ್ದವರ ಹಕ್ಕು' ಎಂಬ ಮುಸ್ಲಿಮ್ ಸಿದ್ಧಾಂತದಿಂದ ಹಕ್ಕಿನ ಪ್ರಶ್ನೆಯು ವಿಶೇಷ ಸ್ಫೂರ್ತಿಯನ್ನು ಪಡೆಯಿತು. ಯಾವ ನಿಯಮಗಳಿಗೆ ಬದ್ಧರಾಗಿ ಜನತೆ ತಮ್ಮ ಆಸ್ತಿಯೆಲ್ಲವನ್ನೂ ಒಪ್ಪಿಸಿ ಶಾಂತಿ ಮತ್ತು ವಿಧೇಯತೆಯಿಂದ ಬದುಕುತ್ತಿದ್ದರೊ, ಆ ನಿಯಮಗಳು ಮುಸ್ಲಿಮ್ ಸಿದ್ಧಾಂತವನ್ನು ಸಾಕಷ್ಟು ಮಾರ್ಪಡಿಸಿದವು. ಆದರೆ ಗೆದ್ದವರು ಆ ತತ್ವವನ್ನು ಬದಿಗೊತ್ತಿ ಅದರ ಮಿತಿಗಳನ್ನು ಮರೆತರು. ಹೀಗೆ ಅವರು ಹೊಸಪ್ರದೇಶವೊಂದನ್ನು ಗೆದ್ದುಕೊಂಡಾಗ ಮೊಘಲ್ ದೊರೆಗಳು ಆ ಪ್ರದೇಶಕ್ಕೆ ತಾವೇ ಒಡೆಯರೆಂದು ಸಾರಿ ಅಲ್ಲಿ ತಮ್ಮ ಉಪ–ಅಧಿಕಾರಿಗಳನ್ನು ಕಂದಾಯ ರೈತರೆಂಬುದಾಗಿ ನೇಮಿಸಿದರು. ಈ ಕಂದಾಯ ರೈತರೆಂಬ ಹೊಸ ಹಂದ್ದೆಗಳನ್ನು ಪರಿಚಯಿಸುವುದರ ಉದ್ದೇಶವು ಭಾರತದ ಗ್ರಾಮೀಣ ರಚನೆಯ ಮೇಲೆ ದೀರ್ಘಾವಧಿಯ ಪರಿಣಾಮವನ್ನುಂಟುಮಾಡುವುದಾಗಿತ್ತು. ಈ ಕಂದಾಯ ರೈತರು ಕಾಲಕ್ರಮೇಣ ತಾವೇ ಭೂಮಿಯ ಒಡೆತನವನ್ನು ಗಿಟ್ಟಿಸಿ ಭೂಕಂದಾಯವನ್ನು ತಾವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸೂಲು ಮಾಡತೊಡಗಿದರು. ಈ ಒಡೆತನವು ಪ್ರಾರಂಭದಲ್ಲಿ ಹಳೆಯ ಬೀಳು ಭೂಮಿಯ ಮೇಲೆ ಒಡೆತನ ಸಾಧಿಸುವುದರಿಂದ ಮೊದಲು ಮಾಡಿತು. ಈ ಕಂದಾಯ ರೈತರು ಎಲ್ಲ ಪಾಲನ್ನು ಪಡೆದರಲ್ಲದೆ, ಕೃಷಿಕರು ರಾಜನಿಗೆ ಸಲ್ಲಿಸಬೇಕಿದ್ದ ದವಸದ ಪಾಲನ್ನೂ ಸಹ ಕೊಡಬೇಕಾಯಿತು. ಇತ್ತ ವ್ಯವಸ್ಥಾಪಕನಾಗಿ ನೇಮಕಗೊಂಡಿದ್ದವನು ಕ್ರಮೇಣವಾಗಿ ಒಡೆತನವನ್ನು ಪಡೆಯುತ್ತಲಿದ್ದರೆ, ಅತ್ತ ಕೇಂದ್ರ ಸರಕಾರದ ಆಡಳಿತ ಶಿಥಿಲಗೊಳ್ಳುತ್ತಿತ್ತು. ತತ್ಫಲವಾಗಿ ಕಂದಾಯ ರೈತರ ಮೇಲಿನ ನಿಯಂತ್ರಣ ಮತ್ತಷ್ಟು ಸಡಿಲಗೊಂಡಿತು. ಈ ಪ್ರಕಾರ ಕ್ರಮೇಣವಾಗಿ ಕಂದಾಯ ರೈತನಾಗಿದ್ದವನು ಇಡೀ ಹಳ್ಳಿಯ ಮುಖ್ಯಸ್ಥನಾದನು. ಅಂತೆಯೇ ಕೃಷಿಕಾರ್ಮಿಕರಾಗಿದ್ದವರೆಲ್ಲ ಗೇಣಿದಾರ ರಾದರು. ರಾಜಧಾನಿಯಲ್ಲಿ ಸಂಭವಿಸುತ್ತಿದ್ದ ಅತ್ಯಲ್ಪ ರಾಜಕೀಯ ಗೊಂದಲವನ್ನೇ ಉಪಯೋಗಿಸಿಕೊಂಡು ಈ ರೈತರು ತಮ್ಮ ಅವಕಾಶಗಳನ್ನು ಹೆಚ್ಚಿಸಿಕೊಂಡು ಭೂಮಾಲೀಕನ ಪ್ರತಿನಿಧಿಯನ್ನೇ ಭೂಮಾಲೀಕನ ಮಟ್ಟಕ್ಕೇರಿಸಿದರು. ಕೆಲವೊಮ್ಮೆ ದೊರೆಗಳ ಬರಿದಾಗಿದ್ದ ಬೊಕ್ಕಸವು ಈ ಕಂದಾಯ ಸಂಗ್ರಹ ಮಾಡುವವರಿಗೆ ವೇತನ ನೀಡಲು ಅಶಕ್ತವಾಗುತ್ತಿತ್ತು. ಆದುದರಿಂದ ಹಣರೂಪದ ವೇತನ ನೀಡುವ ಬದಲು ದೊರೆಗಳು ಅವರಿಗೆ ಭೂ ದೇಣಿಗೆಯನ್ನು ನೀಡಿದರು.

ಮೇಲಾಗಿ ಮೊಘಲ ಸಾಮ್ರಾಜ್ಯದ ಸ್ಥಾಪನೆಯ ನಂತರ ಪದಚ್ಯುತ ಹಿಂದೂ ಅರಸರು ಹಳ್ಳಿಗಳಲ್ಲಿ ವಾಸಿಸಬೇಕಾದ ಪರಿಸ್ಥಿತಿ ಒದಗಿತ್ತು. ಈ ಮಾಜಿ ಅರಸ ಮೊದಲಾದ ಮಹಾರಥರಿಗೆ ಸಹಜವಾಗಿಯೇ ತಾವು ಇತರರಿಗಿಂತ ಮೇಲು ಎಂಬ ಭಾವನೆ ಇದ್ದುದರಿಂದ ಅವರಿಗೆ ಗ್ರಾಮದ ಜಮೀನಿನ ಮೇಲೆ ಒಡೆತನ ಸಾಧಿಸುವು ದಾಗಲಿ ಅಥವಾ ತಾವೇ ಗ್ರಾಮ ಹಾಗೂ ಗ್ರಾಮಸಮುಚ್ಚಯದ ನಿಜವಾದ ಭೂಮಾಲಿಕರೆಂದು ಘೋಷಿಸುವುದಾಗಲಿ ಕಷ್ಟಸಾಧ್ಯವಾಗಲಿಲ್ಲ. ಇಂತಹ ಪದಚ್ಯುತ ಅರಸರು ಮತ್ತು ಮೊಘಲ್ ದೊರೆಗಳಿಗೆ ನಿಷ್ಠರಾದ ಯೋಧರಿಗೆ ರಾಜಮನ್ನಣೆ, ಮರ್ಯಾದೆಗಳು ಲಭಿಸಿದವು. ಸೈನ್ಯ ಮತ್ತು ತೆರಿಗೆ ಸಂಗ್ರಹಣೆಗೆ ಅಗತ್ಯವಾದ ಮಾನವ ಬಲವನ್ನು ಹೆಚ್ಚಿಸುವ ಸಲುವಾಗಿ ಹಾಲಿ ಅರಸರ ಪರವಾಗಿ ಮಾಜಿ ದೊರೆಗಳನ್ನು ರಾಜಧನಯೋಗ್ಯರನ್ನಾಗಿಸಿ ನಿರುಪಯುಕ್ತಗೊಳಿಸಿ ಭೂಕಂದಾಯ ವಸೂಲಿಗೆ ಇವರನ್ನೇ ನೇಮಿಸಲಾಯಿತು. ಇಂತಹ ವ್ಯಕ್ತಿಗಳಿಗೆ ದೊರೆಯ ಸೈನ್ಯದಲ್ಲಿ ಸೇವೆಸಲ್ಲಿಸಲು ತಮ್ಮದೆ ಆದ ಪಡೆಗಳನ್ನು ರಚಿಸುವ ಕಾರ್ಯಭಾರವನ್ನು ವಹಿಸಲಾಯಿತು. ಸೈನಿಕರಿಗಾಗಿ ಅಗತ್ಯವಾದ ಸಂಬಳ, ದವಸದ ಖರ್ಚು ಮೊದಲಾದವುಗಳನ್ನು ಭರಿಸಲು ತೆರಿಗೆಯ ಆದಾಯವನ್ನು ಅವರಿಗೆ ಪ್ರಧಾನ ಮಾಡಲಾಯಿತು. ಇದು ನಂತರದಲ್ಲಿ ಜಹಗೀರು ಪದ್ಧತಿಗೆ ದಾರಿ ಮಾಡಿತು. ಹೀಗೆ ತಮ್ಮ ಹಕ್ಕುಗಳ ರಕ್ಷಣೆಗೆ ಇದ್ದ ಸೈನ್ಯ ಹಾಗೂ ಸರಕಾರ ಪುರಸ್ಕಾರಗಳೊಂದಿಗೆ ಸನ್ನದ್ಧರಾಗಿದ್ದ ಈ ಜಹಗೀರುದಾರರು ಭೂಮಾಲಿಕ ರಾಗಲು ತಕ್ಕವರಾದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂಮಾಲಿಕರು ಮೂಲತಃ ಕೇವಲ ಕಂದಾಯ ಸಂಗ್ರಾಹಕರಾಗಿರಲಿಲ್ಲ ಎಂಬುದನ್ನು ಇಲ್ಲಿ ಮರೆಯಲಾಗದು. ವಂಶಪಾರಂಪರ್ಯವಾಗಿ ಬಂದಿದ್ದ ಹಲವು ಸ್ಥಳೀಯ ಹಳೆಯ ಆಳ್ವಿಕೆಗೆ ಸೇರಿದ ರಾಜರನ್ನು ವಶಪಡಿಸಿಕೊಂಡು, ಉಂಬಳಿದಾರರನ್ನಾಗಿ ಪರಿವರ್ತಿಸಲಾಯಿತು. ಇವರನ್ನು ಚಕ್ರವರ್ತಿಗಳು 'ಜಮೀನುದಾರರು ಅಥವಾ ತಮ್ಮ ಜಮೀನಿನ ಮೇಲ್ವಿಚಾರಕರನ್ನಾಗಿ' ಪರಿವರ್ತಿಸಿದರು.

ಅಕ್ಬರನ ಕಾಲದಲ್ಲಿ ಕಂಡಂತಹ, ಆಗಾಗ ಸಂಭವಿಸುತ್ತಿದ್ದ ರಾಜಕೀಯ ಗೊಂದಲಗಳು ಆಡಳಿತದ ಕಸುವನ್ನು ಮುರಿದವು. ಕೇಂದ್ರದಲ್ಲಿದ್ದ ಸರಕಾರಿ ಸಂಸ್ಥೆಗಳು ವಿಫಲಗೊಂಡು ಅಧೀನ ರಾಜರು ಕ್ರಮೇಣ ತಮ್ಮ ಸೈನ್ಯ ಹಾಗೂ ದ್ರವ್ಯಾಡಳಿತವನ್ನು ತಮ್ಮ ಕೈಗೆ ಮರಳಿ ಪಡೆಯಲು ಸಹಾಯಕವಾದವು. ಕೇವಲ ಮರಾಠರೊಬ್ಬರೆ ಸಾರ್ವಜನಿಕ ಕಂದಾಯಕ್ಕೆ ಸಂಬಂಧಿಸಿದಂತಹ ಸ್ವತಂತ್ರ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತಂದರು; ಅವರ ಆಡಳಿತದ ತಂತ್ರವು ಮೊಘಲರಿಗಿಂತ ಉನ್ನತ ದರ್ಜೆಯದಾಗಿತ್ತು.

ದಕ್ಷಿಣ ಭಾಗದಲ್ಲಿ ಎರಡು ಪ್ರಮುಖ ಕಾರಣಗಳಿಂದಾಗಿ ಈ ಬಗೆಯ ಬೆಳವಣಿಗೆಗಳು ಕಂಡುಬರಲಿಲ್ಲ. ಮರಾಠಾ ದೊರೆಗಳು ದಕ್ಷಿಣದಲ್ಲಿ ಕರವ್ಯವಸಾಯ ಪದ್ಧತಿಯನ್ನು ಅನುಷ್ಠಾನಗೊಳಿಸಿದರೂ ಕೂಡ ಜಮೀನ್ದಾರಿ ಪದ್ಧತಿಯನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಅದು ಪಾಲಕರ 'ನಿರ್ದಾಕ್ಷಿಣ್ಯ ಚತುರತೆ'ಯಿಂದ[11] ನಿಯಂತ್ರಿಸಲ್ಪಟ್ಟಿತ್ತು. ಮದರಾಸ್‌ನಂತಹ ದಕ್ಷಿಣ ಭಾಗದಲ್ಲಿ ಮೈಸೂರು ಸುಲ್ತಾನರ ಅಲ್ಪಾವಧಿಯ ಆಳ್ವಿಕೆ, ಹೈದರಾಬಾದ್ ಪ್ರಾಂತ್ಯದ ಕರ್ನಾಟಕಾಶ್ರಿತ ನವಾಬರನ್ನು ಹೊರತುಪಡಿಸಿ ದಕ್ಷಿಣ ಭಾರತದಲ್ಲಿ ಮುಸ್ಲಿಂ ಅಧಿಕಾರವು ವಾಸ್ತವವಾಗಿ ಸ್ಥಾಪನೆಯಾಗಿರಲಿಲ್ಲ. ಉತ್ತರ ಭಾಗದಲ್ಲಿದ್ದಂತಹ ಜಮೀನ್ದಾರಿ ಪದ್ಧತಿಯನ್ನು ಸೃಷ್ಟಿಸುವಲ್ಲಿ ಈ ಕ್ಷಣಿಕ ಸರಕಾರಗಳು ಯಶಸ್ವಿಯಾಗಲಿಲ್ಲ.

ಆದ್ದರಿಂದ ಭಾರತೀಯ ಆಡಳಿತ ಇತಿಹಾಸದ ಈ ಹಂತದಲ್ಲಿ ಕರ ವ್ಯವಸಾಯ ಹಾಗೂ ಸೈನ್ಯ ಉಂಬಳಿಗಳಿಂದ ಅಸ್ತಿತ್ವಕ್ಕೆ ಬಂದ ಜಮೀನುದಾರರ ವರ್ಗವನ್ನು ಸೃಷ್ಟಿಸಿತು. ಕರ ವ್ಯವಸಾಯಗಾರರು (ಜಮೀನುದಾರರು) ಹಾಗೂ ಸೈನ್ಯ ಉಂಬಳಿಗಾರರು ತಂತಮ್ಮ ಜಿಲ್ಲೆಗಳ ಆಡಳಿತದ ವೆಚ್ಚವನ್ನು ಭರಿಸುತ್ತ, ಹಣಕಾಸಿನ ಮತ್ತು ಸೈನ್ಯದ ಅವಶ್ಯಕತೆಗಳನ್ನು ಖಚಿತಪಡಿಸಬೇಕಾಗಿತ್ತು. ಈ ಜಮೀನುದಾರರು ಕೇಂದ್ರದ ಮಧ್ಯಪ್ರವೇಶದ ಭಯವನ್ನು ಅತ್ಯಲ್ಪ ಪ್ರಮಾಣದಲ್ಲಿ ಹೊಂದಿದ ಸ್ವತಂತ್ರ ವ್ಯಕ್ತಿಗಳಾಗಿದ್ದರು.[12]

''ಭೂ ಹಿಡುವಳಿಗಳನ್ನು ಆಧರಿಸಿದ ಈ ಸಾಮಾಜಿಕ ಸ್ತರವು, ಪಿತೃಪ್ರಧಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜ್ಯಾಧಿಕಾರದ ಮಹಾರಾಜರು ಅಥವಾ ಭಾರತದಲ್ಲಿನ ಮೊಘಲರ ಅಧಿಕಾರದ ಛಿದ್ರಗೊಳ್ಳುವಿಕೆಯಲ್ಲಿ ಅಭಿವೃದ್ಧಿಗೊಂಡಿತು.[23]

ಒಂದು ಕಾಲದಲ್ಲಿ ಭಾರತದಲ್ಲಿ ನಿಸ್ಸಂದೇಹವಾಗಿಯೂ ಊಳಿಗಮಾನ್ಯ ಪದ್ಧತಿಯನ್ನೇ ಹತ್ತಿರದಿಂದ ಹೋಲುವ ಪ್ರಕ್ರಿಯೆಯೊಂದು ಚಾಲ್ತಿಯಲ್ಲಿತ್ತು. ಇಂಗ್ಲೆಂಡ್ ಹಾಗೂ ಯೂರೋಪಗಳಲ್ಲಿದ್ದ ಸಮಗ್ರ ಒಡೆತನಕ್ಕೆ ಉತ್ತರದಾಯಿತ್ವವಾಗಬಲ್ಲಂಥ ಭಾರತೀಯ ಸಂಗತಿಗಳೂ ಇವೆ. ಆದರೆ ಈ ಭಾರತೀಯ ಸಂಗತಿಗಳು ಒಂದರ ನಂತರ ಮತ್ತೊಂದನ್ನು ಪರ್ಯಾಯಗೊಳಿಸುವ ಬದಲು, ಪ್ರಸ್ತುತದಲ್ಲಿ ಏಕಕಾಲಕ್ಕೆ ಒಟ್ಟಿಗೆ ಅಸ್ತಿತ್ವದಲ್ಲಿವೆ. ಭಾರತದಲ್ಲಿನ ಊಳಿಗಮಾನ್ಯ ಪದ್ಧತಿ, ಹಾಗೆಂದು ಅದನ್ನು ಕರೆಯುವದಾದರೆ ಅದು ಎಂದಿಗೂ ಕೊನೆಗೊಳ್ಳಲಿಲ್ಲ. ಅದರ ಗುಣಲಕ್ಷಣಗಳು ಸದಾ ಸಜೀವ ; ಅಮರ. ಬ್ರಿಟಿಷರು ಭಾರತವನ್ನು ಪ್ರವೇಶಿಸುವುದಕ್ಕಿಂತ ಮುಂಚೆ ಒಮ್ಮೆಯಾದರೂ ಗ್ರಾಮ ಸಮುದಾಯವನ್ನು ಸಂಪೂರ್ಣವಾಗಿ ನಿಯಂತ್ರಿಸುವ ಅಧಿಕಾರವು ಒಬ್ಬನೇ ಪಾರಂಪರಿಕ ಅಧಿಕಾರಿಯ ಕೈಸೇರಿರುವ ಸಾಧ್ಯತೆಗಳ ಬಗ್ಗೆ ಸಂಶಯವಿದೆ. ಇನ್ನೊಂದೆಡೆ ಗ್ರಾಮ ಸಮುದಾಯವು ಬದಲಾಗದೆ ಉಳಿದ ಅಥವಾ ಯಜಮಾನ್ಯ ವಿಧದ ಸಮೂಹದ ಹಂತವನ್ನೂ ಪ್ರವೇಶಿಸದೆ ಉಳಿದಿದೆ ಎಂಬುದನ್ನು ನಿರ್ಣಯಾತ್ಮಕವಾಗಿ ಸಾಕ್ಷ್ಯಪಡಿಸುವಂತಹ ವ್ಯವಸ್ಥೆ ವೈಚಿತ್ರ್ಯಗಳ ನಿದರ್ಶನಗಳಿವೆ. ಒಂದು ವೇಳೆ ಭಾರತವು ಸಂಪೂರ್ಣವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನು ಹೊಂದಿತ್ತು ಎಂದು ನಂಬಿದರೂ ಸಹ, ಒಡೆತನವು ಭಾರತೀಯ ಮಾದರಿಯ ಇಂಗ್ಲೆಂಡಿನ ಸಮಗ್ರ ಒಡೆತನದೊಂದಿಗೆ ಸಮನಾಗಿತ್ತು ಎಂದು ಭಾವಿಸುವುದು ಸತ್ಯಕ್ಕೆ ದೂರವಾದುದು.[24]

ಬ್ರಿಟೀಷ್ ಆಳ್ವಿಕೆಯ ಪರಿಚಯ :

ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಕ್ರೋಢೀಕರಿಸಿದ ತರುವಾಯ ಭೂಮಿಯ ಗೇಣಿ ಪದ್ಧತಿಯನ್ನು ಜಾರಿಗೆ ತಂದರು. ಆ ಸಂದರ್ಭದಲ್ಲಿ ಪರಿಹರಿಸಬೇಕಿದ್ದ ಅತೀ ಮುಖ್ಯ ಪ್ರಶ್ನೆ ಎಂದರೆ : ಅದನ್ನು ಯಾರೊಂದಿಗೆ ಬಗೆಹರಿಸಬೇಕು ? ಭೂಕಂದಾಯಕ್ಕಾಗಿ ಸರ್ಕಾರಕ್ಕೆ ಯಾರು ಹೊಣೆಯಾಗಬೇಕು ? ಬ್ರಿಟಿಷರಿಗೆ ಈ ಸಮಸ್ಯೆಗಳು ಎದುರಾದಾಗ, ಭಾರತೀಯ ಸಮಾಜದ ರಾಜಕೀಯ ಹಾಗೂ ಸಾಮಾಜಿಕ ರಚನೆಯ ಮೇಲೆ ಆಗಬಹುದಾದ ಇದರ ಪರಿಣಾಮಗಳನ್ನು ಅವರು ಚೆನ್ನಾಗಿ ಅರಿತಿದ್ದರು. ಅವರಿಗೆ ಮಾರ್ಗಸೂಚಿಯಾವುದೂ ಇರಲಿಲ್ಲ.

ಮೂರು ಮುಖ್ಯ ಪರ್ಯಾಯ ಉಪಾಯಗಳು ಬ್ರಿಟಿಷ್ ಆಡಳಿತಗಾರರ ಮುಂದಿದ್ದವು:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲನೆಯದಾಗಿ ವಾಸ್ತವವಾಗಿ ಭೂಮಿಯನ್ನು ಉಳುತ್ತಿದ್ದವರನ್ನು ಒಡೆಯರನ್ನಾಗಿಮಾಡಿ ಸರಕಾರಕ್ಕೆ ಸಲ್ಲಿಸಬೇಕಾದ ಭೂಕಂದಾಯಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡುವುದು: ಅಂದರೆ, ಕೃಷಿಕರನ್ನು ಒಕ್ಕಲೆಬ್ಬಿಸಿ, ಆಕ್ರಮಣದ ಮೂಲಕ ತಾವೇ ಭೂ–ಮಾಲೀಕರಾದ ಜಮೀನ್ದಾರರೆಂಬ ಬಲಾಢ್ಯರನ್ನು ಕಡೆಗಣಿಸುವುದು. ಮದ್ರಾಸಿನಂತಹ ಕೆಲವು ದಕ್ಷಿಣ ರಾಜ್ಯಗಳಲ್ಲಿ ಈ ಪ್ರಯತ್ನವನ್ನು ಬ್ರಿಟಿಷರು ಮಾಡಿದರು. ಮದ್ರಾಸು ಪ್ರಾಂತದಲ್ಲಿ ಈ ಪ್ರಯತ್ನ ಯಶಸ್ವಿಯಾಯಿತಾದರೂ ಅದಕ್ಕೆ ವಿರೋಧವಿಲ್ಲದಿರಲಿಲ್ಲ. ಈ ಹೊಸ ಭೂ–ಹಿಡುವಳಿ ಪದ್ಧತಿಯನ್ನು ವಿರೋಧಿಸಿ ಹಲವು ಅತೃಪ್ತ ಶಕ್ತಿಗಳು ಅನೇಕ ಖಟ್ಲೆ ಹೂಡಿರುವುದು ಇಲ್ಲಿ ಹೆಚ್ಚು ಆಸಕ್ತಿ ಕೆರಳಿಸುವಂತಹದು.[25] ಗ್ರಾಮವ್ಯವಸ್ಥೆಯು ಅವಲಂಭಿಸಿರುವ ಸಮುದಾಯದ ಹಿತಾಸಕ್ತಿಯನ್ನು ರೈತವಾರಿ ಪದ್ಧತಿಯು ಛಿದ್ರಗೊಳಿಸುತ್ತದೆ ಎಂದು ಭಾವಿಸಿದ ಮದ್ರಾಸಿನ ಕಂದಾಯ ಮಂಡಳಿಯು ರೈತವಾರಿ ಪದ್ಧತಿಯ ವಿರುದ್ಧ ತನ್ನ ಅಂತಿಮ ಪ್ರತಿಭಟನೆಯನ್ನು ಸೂಚಿಸುತ್ತ ಹೀಗೆ ತಿಳಿಸಿತು "ತನ್ನ ಪಾಲನ್ನು ಹೊಂದಿರುವ ಬದಲು ಗ್ರಾಮದ ಒಟ್ಟು ಜಮೀನಿನ ನಿರ್ದಿಷ್ಟ ಭಾಗವನ್ನು ಪ್ರತಿಯೊಬ್ಬರು ಪಡೆಯಬೇಕೆಂದು ಬಯಸುವ ಮೂಲಕ ಹಿತಾಸಕ್ತಿಯ ಐಕ್ಯತೆ ಹಾಗೂ ಗ್ರಾಮಶಕ್ತಿಯ ಸಂಜೀವಿನಿಯನ್ನು ನಾಶಗೊಳಿಸುವುದೆಂದರೆ ಕೂಡುಬಂಡವಾಳ (ಜಾಯಿಂಟ್ ಸ್ಟಾಕ್) ಕಂಪನಿಗಳನ್ನು ವಿಸರ್ಜಿಸಿ, ಪ್ರತಿಯೊಬ್ಬ ಶೇರುದಾರನನ್ನು ಪ್ರತ್ಯೇಕವಾಗಿ ಕರವಿಧಿಸಲು ಅನುಕೂಲವಾಗುವಂತೆ ತನ್ನ ಪಾಲಿನ ಮೇಲಷ್ಟೇ ವ್ಯಾಪಾರಕ್ಕೆ ತೊಡಗುವಂತೆ ಮಾಡುವುದಕ್ಕಿಂತ ಹೆಚ್ಚು ವ್ಯತ್ಯಾಸವಾದುದಲ್ಲ.'' ಔಧ ಮೊದಲಾದ ಉತ್ತರ ಭಾಗದ ಪ್ರಾಂತಗಳಲ್ಲಿ ಬ್ರಿಟಿಷರು ಈ ಪದ್ಧತಿಯನ್ನು ಜಾರಿಗೊಳಿಸಲು ಪ್ರಯತ್ನಿಸಿದಾಗ ಭೂಮಾಲಿಕ ವರ್ಗದಲ್ಲಿ ಖಾರವಾದ ಹಾಗೂ ಅತೃಪ್ತಯುತ ಸನ್ನಿವೇಶಗಳನ್ನು ಉಂಟುಮಾಡಿ ಕೊನೆಗೆ 1857ರಲ್ಲಿ ಜ್ವಾಲಾಮುಖಿ ಸ್ವರೂಪದ ಕ್ಷೋಭೆಗೆ ದಾರಿಮಾಡಿತು. ಬೇಡನ್ ಪೊವೆಲ್‌ರ ಪ್ರಕಾರ ಮದರಾಸು, ಮುಂಬಯಿಯಂತಹ ದಕ್ಷಿಣ ಪ್ರಾಂತಗಳಲ್ಲಿ ಈ ಪದ್ಧತಿ ಏಕೆ ಯಶಸ್ವಿಯಾಯಿತು ಎಂಬುದಕ್ಕೆ ಕಾರಣಗಳಲ್ಲೊಂದು–ಭಾರತದಲ್ಲಿ ಭೂಮಾಲೀಕತನದ ಬೆಳವಣಿಗೆಗೆ ಕಾರಣರಾದ ಆರ್ಯರ ಹಾಗೂ ಮುಸ್ಲಿಮರ 'ಆಳ್ವಿಕೆಯನ್ನು ದಕ್ಷಿಣದಲ್ಲಿ ಅಲ್ಪವೆಂದು ಕಡೆಗಣಿಸಲಾಗಿತ್ತು. ಹೀಗೆ ಯಥಾವತ್ತಾಗಿ ಉಳಿದು ಬಂದ ರೈತವಾರಿ ಪದ್ಧತಿಯು ಕಲಕಿದುದು ಅತ್ಯಲ್ಪ. ಸರ್ಕಾರವು ರೈತವಾರಿ ಗೇಣಿ ಪದ್ಧತಿಯನ್ನು ಅಧಿಕೃತಗೊಳಿಸಿದುದು ಹೊಸದಾಗಿರದೆ, ಹಳೆಯದನ್ನೇ ಕಾನೂನುಬದ್ಧವಾಗಿ ಅಧಿಕೃತಗೊಳಿಸುವುದಾಗಿತ್ತು.

ಎರಡನೆಯ ಪರ್ಯಾಯ ಕ್ರಮವೆಂದರೆ ಸದರಿ ನೀತಿಯನ್ನು ತಿರುವು ಮುರುವಾಗಿಸಿ 'ಬಲಾಢ್ಯ' ಜಮೀನ್ದಾರರನ್ನು ಭೂಮಿಯ ಪಕ್ಕಾ ಒಡೆಯರನ್ನಾಗಿ ಅಧಿಕೃತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನ್ನಣೆಯನ್ನು ನೀಡುವುದು. ಸಂಪತ್ತು ಮತ್ತು ಅಧಿಕಾರಗಳಲ್ಲಿ ಜಗತ್ತಿನ ಯಾವ ಭಾಗದಲ್ಲೂ ಕಾಣದಂತಹ 'ಭೂ ದೊರೆತನವು' (Landed Aristocracy) ಮೇಯ್ನ್‌ರವರ ಪ್ರಕಾರ ಆದುವರೆಗೂ ಭಾರತದಲ್ಲಿ ಇಲ್ಲದಿದ್ದುದು ಈಗ ಉಂಟಾಯಿತು.

ಮೂರನೆಯ ಪರ್ಯಾಯವೆಂದರೆ, ಗ್ರಾಮಸಮುದಾಯಗಳನ್ನು ಗ್ರಾಮ ಉದ್ಧಾರಮಂಡಲಿ ಅಥವಾ ಪಂಚಾಯಂತಗಳನ್ನು ಗುರುತಿಸಿ ಕಂದಾಯವನ್ನು ಸಂಗ್ರಹಿಸಿ, ಸಲ್ಲಿಸಲು ಹೊಣೆಗಾರರನ್ನಾಗಿ ಮಾಡುವುದು. ಇದು ಬ್ರಿಟಿಷರಿಗೆ ಕಾರ್ಯಯೋಗ್ಯವಾಗಿ ಕಂಡುಬರಲಿಲ್ಲ. ಏಕೆಂದರೆ, ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಕ್ರೋಢಿಕರಿಸುವ ವೇಳೆಗಾಗಲೇ ಪಂಚಾಯಂತಗಳು ಈ ಎಲ್ಲವನ್ನು ಹೊಂದಿದ್ದರೂ ತಮ್ಮ ಸಶಕ್ತತೆಯನ್ನು ಕಳೆದುಕೊಂಡಿದ್ದವು.

ಈ ಪ್ರಕಾರ ಆಂಗ್ಲ ಆಡಳಿತಗಾರರಲ್ಲಿ ಅಸಮರ್ಪಕತೆ ಹಾಗೂ ಅರಾಜಕತೆ ಯಥೇಚ್ಚವಾಗಿ ಕಂಡುಬಂದಿತು. ತಮಗೆ ಮಾರ್ಗದರ್ಶಿಸಬಲ್ಲ ಏನೊಂದೂ ಅವರಲ್ಲಿರಲಿಲ್ಲ. ಮುಸ್ಲಿಮ್ ದೊರೆಗಳಂತೆಯೇ ಇವರೂ ಸಹ 'ದೊರೆಯೇ ಭೂಮಿಯ ಒಡೆಯ' ಅವನು ತನಗಿಷ್ಟಬಂದ ಯಾರನ್ನಾದರೂ ಭೂಕಂದಾಯವನ್ನು ಸರ್ಕಾರದ ಪರವಾಗಿ ಸಂಗ್ರಹಿಸಲು ನೇಮಿಸಬಹುದೆಂದು ಭಾವಿಸತೊಡಗಿದರು. ಆದರೆ ಕೇಂದ್ರದಲ್ಲಿರುವ ಸಶಕ್ತ ಬ್ರಿಟಿಷ್ ದೊರೆತನವು, ಒಂದುಸಲ ಭೂಕಂದಾಯ ವಸೂಲುದಾರನನ್ನು ನೇಮಿಸಿದಲ್ಲಿ ಅವನು ಸಡಿಲ ಬಂಧವುಳ್ಳ ಗ್ರಾಮಸಮಾಜದ ಮೇಲೆ ಅನಿಷ್ಟ ಪರಿಣಾಮಗಳನ್ನು ಬೀರುವುದಲ್ಲದೆ, ತನ್ನದೊಂದೇ ಹಕ್ಕನ್ನುಳಿದು ಮಿಕ್ಕೆಲ್ಲವನ್ನು ಸದೆಬಡಿಯಬಲ್ಲನು ಎಂಬುದನ್ನು ಬಹು ಶೀಘ್ರದಲ್ಲಿ ಅರ್ಥಮಾಡಿಕೊಂಡಿತು. ಹೀಗಾಗಿ ಅವರು ತಮ್ಮ ಆಧಾರಿತ ನೀತಿಯನ್ನು ಮರುಪರಿಶೀಲಿಸಿ ಮಾರ್ಪಾಡುಗೊಳಿಸಿದರು. ಇದಕ್ಕಾಗಿ ಪರಂಪರಾನುಗತವಾದ ಹಕ್ಕುಗಳನ್ನು ಭೂಮಿಯ ಮೇಲೆ ಹೊಂದಿರುವವರೇ ಭೂಕಂದಾಯ ವಸೂಲುದಾರರಾಗುವುದು ಮೇಲೆಂದು ಬಗೆದರು. ತದನಂತರ ಬ್ರಿಟಿಷರು ಈ ವರ್ಗಕ್ಕೂ ಸಹ ಭೂಮಿಯ ಮೇಲಿನ ಒಡೆತನದ ನಿರ್ದಿಷ್ಟ ಹಕ್ಕುಗಳಿಂದ ಆಗಬಹುದಾದ ಪರಿಣಾಮಗಳನ್ನು ಸ್ಪಷ್ಟಪಡಿಸುವ ಹಾಗೂ ಕಂದಾಯ ಸಂಗ್ರಾಹಕರರನ್ನು ಹೊಂದುವ ಪ್ರತಿಷ್ಠಿತ ಕುಟುಂಬಗಳು ಯಾವ ಅಧಿಕಾರಗಳನ್ನು ಹೊಂದಿವೆ ಎಂಬುದನ್ನು ಖಚಿತಪಡಿಸುವ ಅಗತ್ಯವಿದೆ ಎಂದು ಮನವರಿಕೆಯಾಯಿತು. ಏಕೆಂದರೆ ಸರ್ಕಾರದ ನಿಯಂತ್ರಣ ತಪ್ಪಿದ ಈ ಕುಟುಂಬಗಳು ಭೂಮಿಯ ಸಾಗುವಳಿ ಹಾಗೂ ಒಡೆತನ ಹಕ್ಕುಗಳನ್ನು ತಮ್ಮಲ್ಲಿಯೇ ಕ್ರೋಢಿಕರಿಸಿಕೊಂಡು ಇನ್ನಿತರ ಕೃಷಿಕರನ್ನು ಕೇವಲ ಕೂಲಿಕಾರರಾಗಿ ಅಥವಾ ಭೂ ಕೃಷಿಗಾಗಿ ಸಂಭಾವನೆ ಪಡೆವ ಸ್ವಯಿಚ್ಛೆಗೇಣಿದಾರರ ಮಟ್ಟಕ್ಕೆ ಇಳಿಸಿಬಿಡುವ ಪ್ರವೃತ್ತಿಯನ್ನು ಹೊಂದಿದ್ದವು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಎಂಬುದನ್ನು ಬ್ರಿಟಿಷರು ಅರ್ಥಮಾಡಿಕೊಂಡಿದ್ದರು. ಆದರೆ ಈ ಬಗೆಯ ಧೋರಣೆಗಳು ಭಾರತೀಯ ಸಂಪ್ರದಾಯಕ್ಕೆ ಗೊತ್ತೇ ಇಲ್ಲದ ಅನ್ಯಾಯಯುತವಾದವುಗಳೆಂಬುದು ಅತಿ ನಿಚ್ಚಳವಾಗಿತ್ತು. ಈ ಪ್ರವೃತ್ತಿಯನ್ನು ಸಂಭಾಳಿಸಲೆಂದೆ ಬ್ರಿಟಿಷರು ಭೂಮಾಲೀಕ ಹಾಗೂ ಸ್ವಯಿಚ್ಛೆ ಗೇಣಿದಾರರ ನಡುವೆ ಮಧ್ಯವರ್ತಿಗಳಾಗಿ ಒಂದು ರಕ್ಷಿತ ಗೇಣಿದಾರರ ವರ್ಗವನ್ನು ಸೃಷ್ಟಿಸಿದರು.

ಸ್ವಾತಂತ್ರ್ಯ ಹಾಗೂ ತದನಂತರ :

ಸ್ವಾತಂತ್ರ್ಯ ಪೂರ್ವಾರ್ಧದಲ್ಲಿ ರಾಷ್ಟ್ರದ ನಾಯಕರು ಭಾರತೀಯ ಭೂ ಗೇಣಿ ಪದ್ಧತಿಯಲ್ಲಿ ನೆಲೆಸಿದ್ದ ಅಂಜಿಕೆ ಹಾಗೂ ದಮನಕಾರಿ ಪರಿಸ್ಥಿತಿಗಳನ್ನು ತೊಡೆಯಲು ಪ್ರಯತ್ನಿಸಿದರು. 1936ರ ಚುನಾವಣೆಯ ನಂತರ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ಅನೇಕ ಪ್ರಾಂತಗಳಲ್ಲಿ ತಮ್ಮನ್ನು ಜಮೀನ್ದಾರರ ಕ್ರೂರಹಿಡಿತದಿಂದ ಮುಕ್ತರನ್ನಾಗಿಸಲು ರೈತಾಪಿ ವರ್ಗವು ಇಟ್ಟ ಬೇಡಿಕೆಗಳಿಗೆ ಪ್ರತಿಕ್ರಿಯಿಸಿದವು. ಒಕ್ಕಲೆಬ್ಬಿಸುವ ಹಾಗೂ ಶೋಷಣೆಯ ವಿರುದ್ಧ ಗೇಣಿದಾರರನ್ನು ರಕ್ಷಿಸುವ ಉದ್ದೇಶದಿಂದ ಅನೇಕ ಕಾಯ್ದೆಗಳನ್ನು ಮಾಡಲಾಯಿತು. ಮುಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಿಂದ 1948ರಲ್ಲಿ ನೇಮಿಸಲ್ಪಟ್ಟ ಕೃಷಿಕ ಸುಧಾರಣಾ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದಾಗ ಒಂದು ಹೊಸ ತಿರುವು ಬಂದಿತು. ದೇಶದ ಗೇಣಿಪದ್ಧತಿಯು ಶಾಶ್ವತವಾಗಿ ಕ್ರಮಬದ್ಧಗೊಳ್ಳದ ಹೊರತು ಕೃಷಿ ಉತ್ಪಾದನೆಯಲ್ಲಿ ಶಾಶ್ವತವಾದಾಗ ಸುಧಾರಣೆಯು ಸಾಧ್ಯವಿಲ್ಲವೆಂದು ಸಮಿತಿಯು ಶಿಫಾರಸು ಮಾಡಿತು. ಈ ಸಮಿತಿಯು ಜಮೀನ್ದಾರಿ ಪದ್ಧತಿಯ ರದ್ದತಿಯನ್ನಷ್ಟೆ ಅಲ್ಲದೆ ಮಧ್ಯವರ್ತಿಗಳನ್ನು ತೊಡೆದು ಹಾಕಲು ಸಹ ಸೂಚಿಸಿತು. ಇವುಗಳಲ್ಲದೆ ಇನ್ನೂ ಅನೇಕ ಪ್ರಗತಿದಾಯಕ ಸಲಹೆಗಳನ್ನು ಅದು ನೀಡಿತು. ಭೂಹಿಡುವಳಿಗಳ ಮೇಲೆ ಮಿತಿಯನ್ನು ಹೇರಬೇಕಲ್ಲದೆ ಅನಾರ್ಥಿಕ ಘಟಕಗಳನ್ನು ಸಹಕಾರಿ ಬೇಸಾಯ ಪದ್ಧತಿಯಡಿಯಲ್ಲಿ ಪೃಥಕ್ಕರಿಸಬೇಕೆಂದು ಸಮಿತಿಯು ಶಿಫಾರಸು ಮಾಡಿತು.

1952ರಲ್ಲಿ ಯೋಜನಾ ಆಯೋಗವು ಈ ಸಮಿತಿಯ ಸಲಹೆಗಳನ್ನು ಅನುಮೋದಿಸಿತು. ಅಲ್ಲಿಂದೀಚೆಗೆ ವಿವಿಧ ಕಾನೂನುಗಳ ಮೂಲಕ ಅನೇಕ ರಾಜ್ಯಗಳು ಸಲಹೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನಮಾಡಿವೆ.

ಭೂಸುಧಾರಣೆಗಳು ರಾಜ್ಯಸರ್ಕಾರಗಳ ವ್ಯಾಪ್ತಿಗೆ ಬರುವುದರಿಂದ, ಅವು ವಿಶಾಲಾರ್ಥದಲ್ಲಿ ಸಾಮಾನ್ಯ ತತ್ವಕ್ಕೆ ಬದ್ಧವಾದರೂ ವಿವರಗಳಲ್ಲಿ ವ್ಯತ್ಯಾಸ ಹೊಂದಿವೆ. ಆದಕಾರಣವಾಗಿ ಭೂಸುಧಾರಣಾ ಕ್ರಮಗಳ ಮುಖ್ಯಾಂಶಗಳನ್ನು ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲ ಹಂತದಲ್ಲಿ, ಜಮೀನ್ದಾರ, ಮುಕ್ತೆದಾರ, ಮೊಕಾಸ್ದರ, ಜಹಗೀರುದಾರ, ಇರ್ಷಾದಾರ ಹಾಗೂ ಪಾಲಂಪತ್‌ದಾರ ಇವೇ ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುತ್ತಿದ್ದು ಹಾಗೂ ಕೃಷಿಕವರ್ಗವನ್ನು ಶೋಷಣೆ ಮಾಡುತ್ತಿದ್ದ ಮಧ್ಯವರ್ತಿಗಳನ್ನು ನಿರ್ಮೂಲ ಮಾಡುವ ಗುರಿಯನ್ನು ಅನೇಕ ಶಾಸನಗಳು ಹೊಂದಿದ್ದವು. ಮಧ್ಯವರ್ತಿ ಪರಿಹಾರಧನ ನೀಡುವ ಮೂಲಕ ಅವರ ಎಲ್ಲ ಹಕ್ಕುಗಳನ್ನು ವಶಮಾಡಿಕೊಳ್ಳಲು ರಾಜ್ಯಸರ್ಕಾರಗಳನ್ನು ಈ ಕಾನೂನುಗಳು ಶಕ್ತರನ್ನಾಗಿಸಿದವು. ತತ್ಫಲವಾಗಿ 1963ರಲ್ಲಿ 513.6 ಕೋಟಿ ರೂ.ಗಳಷ್ಟು ಪರಿಹಾರ ನೀಡಿ ಒಟ್ಟು 173 ಮಿಲಿಯನ್ ಎಕರೆ ಭೂಮಿಯನ್ನು ವಶಮಾಡಿಕೊಳ್ಳಲು ಸಾಧ್ಯವಾಯಿತು.[36] ಹೀಗೆ ಮಧ್ಯವರ್ತಿಗಳನ್ನು ನಿರ್ಮೂಲನ ಮಾಡುವುದರಿಂದಾಗಿ ಕಾನೂನುಬದ್ಧ ಗೇಣಿದಾರರನ್ನು ರಾಜ್ಯಸರ್ಕಾರದ ನೇರ ಸಂಬಂಧಕ್ಕೆ ತರಲು ಸಾಧ್ಯವಾಯಿತು ಇಷ್ಟಾದರೂ ಕೂಡ ಜಮೀನ್ದಾರರು ಭೂಮಿಯ ಮೇಲಿನತಮ್ಮ ಪರಂಪರಾಗತ ಹಕ್ಕುಗಳನ್ನು ಸುಲಭವಾಗಿ ಬಿಟ್ಟುಕೊಡಲಿಲ್ಲ. ಕಾನೂನಿನ ಸಮರವನ್ನೆ ಅವರು ನಡೆಸಿದರು. ಪರಿಣಾಮವಾಗಿ, ಒಂದಾದಮೇಲೊಂದರಂತೆ ಕಾನೂನುಗಳು ಅವು ಸಂವಿಧಾನೋಕ್ತವಾದ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿವೆ ಎಂಬ ಕಾರಣಕ್ಕಾಗಿ ಸಂವಿಧಾನ ಬಾಹಿರವೆಂದು ಘೋಷಿಸಲ್ಪಟ್ಟವು. ಇದೊಂದು ದೊಡ್ಡ ಹಿನ್ನಡೆಗೆ ದಾರಿಮಾಡಿದ್ದಲ್ಲದೆ, ಪ್ರಗತಿಪರವಾಗಿದ್ದ ಭೂಸುಧಾರಣಾ ಕ್ರಮಗಳಿಗೆ ಕೊಡಲಿ ಪೆಟ್ಟಾಯಿತು. ಇದರ ಪರಿಣಾಮವಾಗಿ 1951ರಲ್ಲಿ ಲೋಕಸಭೆಯು ಸಂವಿಧಾನಕ್ಕೆ ತಿದ್ದುಪಡಿ ತಂದು, ಕಾನೂನುದೋಷವನ್ನು ನಿವಾರಿಸಲೆಂದು ಹೊಸ ವಿಧಿಯೊಂದನ್ನು (ವಿಧಿ 31–ಎ) ಅಳವಡಿಸಿತು. ಇನ್ನೊಂದು ಇಂತಹದೇ ವಿಧಿ (31–ಬಿ)ಯನ್ನು ಜಮೀನ್ದಾರರ ವಿರುದ್ಧವಾಗಿ ರಾಜ್ಯವನ್ನು ಬಲಪಡಿಸಲು ಸೇರಿಸಲಾಯಿತು.

ಇದೇ ಬಗೆಯಲ್ಲಿ ಎಲ್ಲ ರಾಜ್ಯಗಳಲ್ಲೂ ಕೂಡ ಗೇಣಿದಾರರನ್ನು ಜಮೀನ್ದಾರರು ಒಕ್ಕಲೆಬ್ಬಿಸುವುದರ ವಿರುದ್ಧ ಅವರಿಗೆ ರಕ್ಷಣೆ ನೀಡುವ ಹಾಗೂ ಭೂ ಬಾಡಿಗೆಯನ್ನು ನಿಯಂತ್ರಿಸುವ ಸಲುವಾಗಿ ಶಾಸನಗಳನ್ನು ಹೊರಡಿಸಲಾಗಿದೆ. ಸರ್ಕಾರದಿಂದ ಕೈಗೊಳ್ಳಲಾದ ಮತ್ತೊಂದು ಪ್ರಗತಿಪರ ಹಜ್ಜೆ ಎಂದರೆ ಭೂಹಿಡುವಳಿಗಳ ಮೇಲೆ ಮಿತಿ ಹೇರುವುದು. ಭೂಮಿಯ ಮೇಲೆ ಕೆಲವರು ಮಾತ್ರ ಹೊಂದಿದ್ದ ಏಕಸ್ವಾಮ್ಯವನ್ನು ಕಾನೂನು ಕ್ರಮವು ಅಲ್ಲಗಳೆದಿದೆ. ಹೀಗೆ ಸರ್ಕಾರ ಆಕ್ರಮಿಸಿದ ಹೆಚ್ಚುವರಿ ಭೂಮಿಯನ್ನು ಕಾನೂನಿನಲ್ಲಿ ಸೂಚಿಸಿದ ಆದ್ಯತೆಯ ಪಟ್ಟಿಯ ಆಧಾರದ ಮೇಲೆ ಮರು ಹಂಚಿಕೆಯಾಗಬೇಕು. ಭೂಮಿಯನ್ನ ಪಡೆಯುವವರ ಸ್ವಾಧೀನ ಬೆಲೆಯನ್ನು ತೆತ್ತು ವಶಕ್ಕೆ ತೆಗೆದುಕೊಳ್ಳಬೇಕು.

ಸಹಕಾರಿ ಬೇಸಾಯದ ಕುರಿತೂ ಹೊಸದೃಷ್ಟಿಹರಿಸಲಾಗಿದೆ ಮತ್ತು ತೋಟಗಾರಿಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೈತರು ಸ್ವಯಂ ಸೇವಾ ಸಹಕಾರಿ ಕೃಷಿ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹ ಹಾಗೂ ಸಹಾಯಂಗಳನ್ನು ನೀಡಬೇಕೆಂದು ಶಿಫಾರಸು ಮಾಡಲಾಗಿದೆ ಇದರಿಂದ ರೈತರಲ್ಲಿ ಸಹಕಾರ ಬೆಳೆಯುವುದಲ್ಲದೆ ಅನಾರ್ಥಿಕ ಹಿಡುವಳಿಗಳನ್ನು ತಡೆಯಬಹುದು. ಇದರಿಂದ ಅಂತಿಮವಾಗಿ ಬಡವ-ಬಲ್ಲಿದರ ನಡುವಣ ಅಂತರವು ಇಲ್ಲವಾಗಬಹುದಾದ ಸಾಧ್ಯತೆಗಳಿರುತ್ತವೆ.

ಭೂಸಂಧಾರಣೆಗಳ ಒಟ್ಟು ಫಲಿತಾಂಶವೆಂದರೆ, ದೇಶದ ಶೇ. 40ಕ್ಕಿಂತಲೂ ಹೆಚ್ಚು ಪ್ರದೇಶವನ್ನು ಆಕ್ರಮಿಸಿದ್ದ ಮಧ್ಯವರ್ತಿ ಗೇಣಿಗಳಾದ ಜಮೀನ್ದಾರ, ಜಹಗೀರು ಇನಾಮು ಮುಂತಾದವುಗಳನ್ನು ರದ್ದುಪಡಿಸಿದುದು. ದಲ್ಲಾಳಿಗಳ ರದ್ದತಿಯಿಂದಾಗಿ ಜಮೀನ್ದಾರರ ಸರಪಳಿಯಿಂದ ಕಳಚಿಕೊಂಡು ದೊಡ್ಡ ಪ್ರಮಾಣದಲ್ಲಿ (20ಮಿಲಿಯನ್) ಗೇಣಿದಾರರು ರಾಜ್ಯದೊಂದಿಗೆ ನೇರಸಂಬಂಧ ಪಡೆದಿದ್ದಾರೆ. ತತ್ಫಲವಾಗಿ ಒಂದು ಹೊಸ ಕೃಷಿಲೋಕವು ಜನ್ಮತಾಳಿದ್ದು, ಬಹುಪ್ರಮಾಣದ ಗೇಣಿದಾರರು ಸಂಧಾರಣೆಗೊಳ್ಳುತ್ತಿದ್ದಾರೆ. ಕಾನೂನುಗಳ ಎಲ್ಲ ಆಕಾಂಕ್ಷೆಗಳನ್ನು ಈಡೇರಿಸಿವೆ ಎಂದು ಹೇಳಲಾಗದಿದ್ದರೂ, ಈ ಐತಿಹಾಸಿಕ ಕಾನೂನುಗಳು ಜಾರಿಗೆ ಬರುವ ಪೂರ್ವದಲ್ಲಿದ್ದ ಸ್ಥಿತಿಯನ್ನು ಸುಧಾರಿಸುವಲ್ಲಿ ಒಂದು ದಿಟ್ಟ ಹೆಜ್ಜೆಯೆಂಬುದಂತೂ ಸತ್ಯ.

ಟಿಪ್ಪಣಿ ಮತ್ತು ಪರಾಮರ್ಶನಗಳು

1. ಎಫ್. ಟೋನಿಸ್, **ಕಮ್ಯುನಿಟಿ ಆ್ಯಂಡ್ ಅಸೋಷಿಯನ್** (ಲಂಡನ್ : 1952) ಪುಟ. 58

2. ಹೆನ್ರಿ ಮೇಯ್ನ್, **ದ ಅರ್ಲಿ ಹಿಸ್ಟರಿ ಆಫ್ ಇನ್‌ಸ್ಟಿಟ್ಯೂಶನ್**(ಲಂಡನ್ : 1880) ಪುಟ. 71-72.

3. ಅದೇ ಪು. 77

4. ದ್ರಾವಿಡರ ಸಾಮಾಜಿಕ ಜೀವನದ ಬಗ್ಗೆ ಕೂತೂಹಲಕಾರಿಯಾದ ವಿಷಯಗಳನ್ನು ಬರೆಯಲಾಗಿದೆ. ಉದಾಹರಣೆಗಾಗಿ ಮುಕರ್ಜಿಯವರು **ಡೆಮಾಕ್ರಸೀಸ್ ಆಫ್ ದ ಈಸ್ಟ್** ಎಂಬ ಗ್ರಂಥದಲ್ಲಿ ದ್ರಾವಿಡ ಜನಾಂಗವು ಕುಟುಂಬ ಜೀವನದ ಬಗ್ಗೆ ಏನೂ ತಿಳಿದಿರಲಿಲ್ಲವೆಂದೂ ಅವರು ಲೈಂಗಿಕತೆಯ ಮೇಲೆ ಯಾವುದೇ ನಿರ್ಬಂಧವಿಲ್ಲದ ಸ್ವೇಚ್ಛಾಚಾರಿಯಾಗಿದ್ದರು. ಅವಿಭಕ್ತ ಕುಟುಂಬದ ಪರಿಚಯವು ಅವರಿಗೆ ಆರ್ಯರು ಸಂಪರ್ಕಿಸಿದ ಮೇಲೆ ಲಭಿಸಿತು ಎಂದು ಬರೆದಿದ್ದಾರೆ. ಈ.ಬಿ. ಹವೆಲ್‌ರವರು ದ್ರಾವಿಡರು ಸ್ವೇಚ್ಛಾ ಸಂಬಂಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳ ಬಗ್ಗೆ **ಹಿಸ್ಟರಿ ಆಫ್ ಆರ್ಯನ್ ರೂಲ್ ಇನ್ ಇಂಡಿಯಾ** ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ. "ದ್ರಾವಿಡ ಜನಾಂಗದ ವಿವಾಹ ಮತ್ತು ಇತರ ಸಾಮಾಜಿಕ ಸಂಪ್ರದಾಯಗಳು ಸಾಮುದಾಯಿಕವಾಗಿದ್ದು ಮಕ್ಕಳೆಲ್ಲರೂ ವಿವಿಧ ಬುಡಕಟ್ಟುಗಳ ತರುಣ-ತರುಣಿಯರ ಋತು ಉತ್ಸವದಲ್ಲಿ ಸಂಧಿಸಿ ನರ್ತನಮಾಡಿ ದಟ್ಟ ಅರಣ್ಯಗಳ ಮರೆಯಲ್ಲಿ ಕೂಡಿದ್ದ ಫಲವಾಗಿ ಹುಟ್ಟಿದವರು."

5. ಡಾ. ಆರ್. ಶಾಮಶಾಸ್ತ್ರಿಯವರು ಕೌಟಿಲ್ಯನ ಅರ್ಥಶಾಸ್ತ್ರದ (ಮೈಸೂರು : 1929) ಮುನ್ನುಡಿಯಲ್ಲಿ (ಮೂರನೆಯ ಮುದ್ರಣ) ಹೀಗೆ ಬರೆಯುತ್ತಾರೆ' "ಭಾರತೀಯ ಇತಿಹಾಸಕಾರರು ಇತಿಹಾಸಕ್ಕೆ ಮಹತ್ವಕೊಡದೆ ಕೇವಲ ತರ್ಕಕ್ಕೆ ಮಹತ್ವಕೊಟ್ಟಿರುವುದು ಕಹಿಸತ್ಯ" ಬ್ರಾಹ್ಮಣ ಶಾಸ್ತ್ರೀಯ ಲೇಖಕರು ಆರ್ಯ ಪೂರ್ವಜರ ಬಗೆಗೆ ಚಿತ್ರಿಸಿದ ವಿಷಯವನ್ನು ಬಾಡೆನ್ ಪಾವೆಲ್‌ರವರು ತಮ್ಮ ಗ್ರಂಥ : 'ಇಂಡಿಯನ್ ವ್ವಿಲೇಜ್ ಕಮ್ಯುನಿಟಿ' (ಪುಟ : 92)ಯಲ್ಲಿ ಈ ರೀತಿಯಾಗಿ ಬರೆಯುತ್ತಾರೆ—

"ವೇದಗಳ ರಚನೆ ಮಾಡಿದ ಬ್ರಾಹ್ಮಣ ಲೇಖಕರು ದ್ರಾವಿಡ ಜನಾಂಗದ ಬಗೆಗೆ ಚಿತ್ರಿಸುವಾಗ ತುಂಬಾ ಸರಳವಾಗಿ ಅವರನ್ನು 'ಕಾಡು ಜನ' ಅಥವಾ 'ಅನಾಗರಿಕರು' ಎಂಬ ಶಬ್ದಗಳನ್ನು ಉಪಯೋಗಿಸಿದ್ದಾರೆ. ಅವರು ಉಪಯೋಗಿಸಿದ ಶಬ್ದಗಳು ಮತ್ತು ಭಾಷೆ ಕೇವಲ ಸಾಂಧರ್ಬಿಕವಾದುದೇ ಹೊರತಾಗಿ ದ್ರಾವಿಡರು 'ಅನಾಗರಿಕರು' ಕಾಡುಜನರು ಹೇಗೆಂಬುದಕ್ಕೆ ಯಾವುದೇ ಸ್ಪಷ್ಟೀಕರಣ ನಮಗೆ ಸಿಗುವುದಿಲ್ಲ. ಆದುದರಿಂದ ನಾವು ಈ ವಿಷಯವನ್ನು ಬ್ರಾಹ್ಮಣರ ದೃಷ್ಟಿಯಿಂದ ನೋಡಬಾರದು, ಆರ್ಯರ ಬೌದ್ಧಿಕ ಮಟ್ಟ, ಇಡೀ ಸಾಹಿತ್ಯದ ಮೇಲಿನ ಅವರ ಹಿಡಿತ ಅವರಿಗೆ ಇಂತಹ ಭಾಷೆಯನ್ನು ಉಪಯೋಗಿಸಿ ಬರೆಯಲು ಸಾಧ್ಯವಾಯಿತು. ಹೀಗಾಗಿ ಅವರು ಬರೆದುದೆಲ್ಲವೂ ಆರ್ಯರ ದೃಷ್ಟಿಕೋನದ ಅನ್ವಯವೇ ಆಗಿತ್ತು. ನಿಜವಾದ ಇತಿಹಾಸವನ್ನು ಬ್ರಾಹ್ಮಣೇಯ ಲೇಖಕರಿಂದ ಎಂದೂ ಬರೆಯಲಾಗಲಿಲ್ಲ, ಆರ್ಯರು ಅಥವಾ ದ್ರಾವಿಡರು ಪ್ರಾಚೀನ ಘಟನೆಗಳ ಬಗ್ಗೆ, ಕುಟುಂಬಗಳ ಮೂಲದ ಬಗ್ಗೆ ಅವರು ನಿರ್ಲಕ್ಷಿಸಿದರು. ದ್ರಾವಿಡರ ಬಗ್ಗೆ ಬರೆದರೂ ಕೂಡ ದ್ವಿಜರಾದ ತಾವು ಕಾಡು ಜನಾಂಗ ಅಥವಾ ರಾಕ್ಷಸರಿಗೆ ಹೋಲಿಸಲಾದ ದ್ರಾವಿಡರನ್ನು ಸೋಲಿಸಿದ ವಿಷಯವನ್ನು ವೈಭವಿಕರಿಸುವ ಪ್ರಯತ್ನ ಕಾಣಬಹುದು."

6. ಕೆ. ಎಂ. ಪಣೀಕರ್, **ಸರ್ವೆ ಆಫ್ ಇಂಡಿಯನ್ ಹಿಸ್ಟರಿ** (ಬಾಂಬೆ : 1954).

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

7. ರೈಸ್ ಡೇವಿಸ್ **ಬುದ್ಧಿಸ್ಟ ಇಂಡಿಯಾ** (ಕಲ್ಕತ್ತಾ ; 1959) ಪು. 33-34

8. ಆರ್.ಕೆ. ಮುಕರ್ಜಿ **'ಡೆಮಾಕ್ರೇಸಿಜ್ ಆಫ್ ದ ಈಸ್ಟ್'** (ಲಂಡನ್:1923) ಆದಿ ಕಾಲದ ದ್ರಾವಿಡ ಸಮಾಜದ ಬಗ್ಗೆ ಮುಕರ್ಜಿಯವರು ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ—"ಪ್ರಾಚೀನ ದ್ರಾವಿಡರ ಬುಡಕಟ್ಟುಗಳು ಉಪ ಶಾಖೆಗಳು ತಮ್ಮದೇ ಆದ ಮುಖ್ಯಸ್ಥನೊಂದಿಗೆ ಒಂದೊಂದು ಗ್ರಾಮಗಳನ್ನು ರಚಿಸಿಕೊಂಡು ವಾಸಿಸುತ್ತಿದ್ದರು. ಅವರ ಮುಖ್ಯಸ್ಥನು ಒಳಜಗಳಗಳಿಗೆ ಪರಿಹಾರ ಸೂಚಿಸುವ ಮತ್ತು ಪ್ರತಿಯೊಬ್ಬನಿಗೂ ಜಮೀನಿನ ಹಂಚಿಕೆ ಮಾಡುವ ಜವಾಬ್ದಾರಿ ಹೊಂದಿದ್ದನು. ಈ ಸಂದರ್ಭದಲ್ಲಿ ಗ್ರಾಮ ಸಮುದಾಯಗಳ ಮೇಲ್ವಿಚಾರಕರ ಒಂದು ಶ್ರೇಣಿಯ ವ್ಯವಸ್ಥೆಯೇ ಉಂಟಾಯಿತು—ಹೆಚ್ಚಿನ ಪ್ರಮಾಣದ ಜಮೀನು ಹೊಂದಿದ್ದ ಮುಖ್ಯಸ್ಥ, ಪುರೋಹಿತ, ಲೆಕ್ಕಪತ್ರವನ್ನಿಡುವವ, ಇತರ ಕಸುಬುಗಳನ್ನು ಮಾಡುವವರು ಹಾಗೂ ಕೆಲಸಗಾರರೂ ಈ ಶ್ರೇಣಿಯಲ್ಲಿದ್ದರು" ಪುಟ : 200.

9. ಡಬ್ಲ್ಯೂ, ಡಬ್ಲ್ಯೂ, ಹಂಟರ್, ಬಾಡೆನ್ ಪಾವೆಲರು ಬರೆದ **ಇಂಡಿಯನ್ ವಿಲೇಜ್ ಕಮ್ಯುನಿಟ** (ನ್ಯೂ ಹೆವೆನ್ : 1957) ಈ ಪುಸ್ತಕದಿಂದ ಉಲ್ಲೇಖ—ಪುಟ : 192.

10. ಬಾಡೆನ್ ಪಾವೆಲ್ **ಇಂಡಿಯನ್ ವಿಲೇಜ್ ಕಮ್ಯುನಿಟ** ಮೇಲೆ ಉಲ್ಲೇಖಿಸಿದಂತೆ, ಪುಟ : 192,

11. ದ್ರಾವಿಡರಲ್ಲಿದ್ದ ಗ್ರಾಮ ಆರ್ಥಿಕ ಸಂಘಟನೆಯು ಆರ್ಯರ ಆರ್ಥಿಕ ಸಂಘಟನೆಯೊಂದಿಗೆ ಸಮ್ಮಿಳನವಾದ ಬಗೆಯನ್ನು ರಾಧಾಕಮಲ್ ಮುಕರ್ಜಿಯವರು ತಾವು ಬರೆದ **ಡೆಮಾಕ್ರಸೀಜ್ ಆಫ್ ದಿ ಈಸ್ಟ್** ಎಂಬ ಪುಸ್ತಕದಲ್ಲಿ ಈ ರೀತಿಯಾಗಿ ವಿವರಿಸಿದ್ದಾರೆ.

"ದಕ್ಷಿಣದಲ್ಲಿ ಭತ್ತ ಬೆಳೆಯುವ ಬುಡಕಟ್ಟುಗಳಲ್ಲಿ ಸಮುದಾಯಕ್ಕೆ ಕೃಷಿ ಮತ್ತು ಪಂಚಾಯಿತಿ ವ್ಯವಸ್ಥೆಯು ಉತ್ತರ ಭಾರತಕ್ಕೂ ಕ್ರಮೇಣ ಹರಡಿರಬಹುದು. ಗೋಧಿ ಮತ್ತು ಬಾರ್ಲಿ ವ್ಯವಸಾಯವು ಭತ್ತದ ವ್ಯವಸಾಯದಂತೆ ಸಾಮುದಾಯಿಕವಲ್ಲ. ಅದು ಕೇವಲ ವೈಯಕ್ತಿಕ ವ್ಯವಸಾಯ ವ್ಯವಸ್ಥೆ. ಗೋಧಿ ಬೆಳೆಯು ಮೊಟ್ಟ ಮೊದಲು ಆರ್ಯರಿಂದ ಬಂದಿರುಹುದು. ಅದನ್ನು ಅವರು ಮೊದಲು ಉತ್ತರಭಾರತದಲ್ಲಿ ಅಳವಡಿಸಿಕೊಂಡರು. ಪ್ರತಿಯೊಂದು ಕುಟುಂಬವು ತನ್ನ ಪಾಲಿನ ಜಮೀನನ್ನು ಹೊಂದಿರುತ್ತಿತ್ತು. ಅವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ರಾವಿಡರಂತೆ ಸಮುದಾಯ ವ್ಯವಸಾಯವನ್ನಾಗಲೀ ಸಾಮುದಾಯಿಕ ನೆಲಸುವಿಕೆಯಾಗಲಿ ಹೊಂದಿರಲಿಲ್ಲ. ಕಾಲಕ್ರಮೇಣ ಹಿಂದುತ್ವ ಪ್ರಕ್ರಿಯೆಯಿಂದ ದ್ರಾವಿಡ ಸ್ವೇಚ್ಛಾ ವ್ಯವಸ್ಥೆಯನ್ನು ಹಿಮ್ಮೆಟ್ಟಿಸಿ ಅವಿಭಕ್ತ ಕುಟುಂಬದ ಸ್ಥಾಪನೆಯಾಯಿತು. ವೈಯುಕ್ತಿಕ ಕುಟುಂಬಗಳ ಅಧಿಕಾರವು ಸಾಮುದಾಯಿಕ ಆಚರಣೆಗಳನ್ನು ಕುಗ್ಗಿಸಿದವು.

12. ಬಾಡೆನ್ ಪಾವೆಲ್ ಅವರು **ಇಂಡಿಯನ್ ವಿಲೇಜ್ ಕಮ್ಯುನಿಟಿ** ಪುಸ್ತಕದಲ್ಲಿ ಈ ರೀತಿ ವಿವರಿಸುತ್ತಾರೆ., ''ಪ್ರಾರಂಭದಲ್ಲಿ ರಾಜರು ಭೂ ಒಡೆತನ ತಮ್ಮದೆಂದು ಹೇಳಿಕೊಳ್ಳಲಿಲ್ಲ. ಮನುವಿನ ಧರ್ಮಶಾಸ್ತ್ರ ಅಥವಾ ಇನ್ನಾವುದೇ ಪ್ರಾಚೀನ ಗ್ರಂಥಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಉಲ್ಲೇಖಗಳು ಇಲ್ಲ'' ಪು. 198.

13. ಮೇಲೆ ಉಲ್ಲೇಖಿಸಿದ ಗ್ರಂಥದಲ್ಲಿ ಪಾವೆಲ್‌ರವರು ಎಂ. ಸಿ. ಬೆನೆಟ್‌ರವರ ಮಾತನ್ನು ಉದ್ಧಾರಿಸುತ್ತಾ ಭೂಮಿಯ ಸ್ವಾಮಿತ್ವ ಬೆಳೆಗಳ ಹಂಚಿಕೆಗೆ ಸಂಬಂಧಿಸಿದ ವಿಚಾರವನ್ನು ಹೀಗೆ ತಿಳಿಸುತ್ತಾರೆ. ''ಬೆಳೆಯು ಇಡೀ ಸಮುದಾಯದ್ದು. ಅದು ರಾಜನಿಂದ ಗುಲಾಮನವರೆಗೂ ಹಂಚಲ್ಪಡುತ್ತಿತ್ತು. ಪ್ರತಿಯೊಬ್ಬರು ಅದರ ಪಾಲುದಾರರು. ಇಂತಹ ವ್ಯವಸ್ಥೆಯು ಇತ್ತೀಚಿನವರೆಗೂ ಔಧ ಜಿಲ್ಲೆಯ ಬಸ್ತಿ ಎಂಬ ಪ್ರದೇಶದಲ್ಲಿ ಪ್ರಚಲಿತವಿತ್ತು. ಧಾನ್ಯದ ರಾಸಿಯನ್ನು 'ಪಂಚಮಾಲ್' ಎಂದು ಕರೆಯಲಾಗುತ್ತಿತ್ತು. ಪಂಚಮಾಲ್ ಎಂದರೆ ಐವರ ಸಂಪತ್ತು ಎಂದು ಅರ್ಥ'' ಪು. 212

14. ಡಬ್ಲ್ಯು. ಹೆಚ್. ವೈಜರ್ ಬರೆದ ಗ್ರಂಥ **ದಿ ಹಿಂದೂ ಜಾಜಮನಿ ಸಿಸ್ಟಂ** ನಲ್ಲಿ ಹೀಗೆ ವಿವರಿಸುತ್ತಾರೆ. ''ಸಂತಾಳರು ವರ್ಷದ ಕೊನೆಗೆ ತಮ್ಮೆಲ್ಲ ಭೂಮಿಯನ್ನು ಹಿಂದಿರುಗಿಸುತ್ತಾರೆ. ಪಂಚಾಯತಿ ಒಪ್ಪಿಗೆ ಕೊಟ್ಟಮೇಲೆ ಮಾತ್ರ ಅದನ್ನು ತಿರುಗಿ ಪಡೆಯುತ್ತಾರೆ. ಇಂದಿಗೂ ಕೂಡ ಛೋಟಾನಾಗಪೂರ್ ಮತ್ತು ಕೊಡಗುಗಳಲ್ಲಿನ ಕೆಲವು ಬುಡಕಟ್ಟುಗಳಲ್ಲಿ ವರ್ಷಕೊಮ್ಮೆ ಭೂ ಹಂಚಿಕೆ, ಸಮುದಾಯದ ಜಮೀನು, ಗ್ರಾಮದ ಮೇಲ್ವಿಚಾರಕರಿಗಾಗಿ ಮೀಸಲಿಟ್ಟ ಜಮೀನು, ಇತ್ಯಾದಿಗಳನ್ನು ಕಾಣಬಹುದು. ಈ ವ್ಯವಸ್ಥೆಯು ಮುಂದೆ ಮದ್ರಾಸ್, ಮುಂಬೈ ಮತ್ತು ಮಧ್ಯ ಪ್ರಾಂತಗಳಲ್ಲಿ ಭೂ ಹಂಚಿಕೆ ಮಾಡುವಾಗ ತುಂಬ ತೊಡಕ್ಕನ್ನುಂಟುಮಾಡಿತು''. ಪು. 210.

15. ಕೌಟಿಲ್ಯನ ಅರ್ಥಶಾಸ್ತ್ರದ ಎರಡನೆಯ ಅಧ್ಯಾಯದಲ್ಲಿನ ಉಲ್ಲೇಖ ಈ ರೀತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದೆ. "ರಾಜನೇ ಗ್ರಾಮಗಳನ್ನು ಸ್ಥಾಪಿಸಲುಬಹುದು. ಆ ಉದ್ದೇಶಕ್ಕಾಗಿ ಆತ ಪರದೇಶದ ಜನರನ್ನು ಆಕರ್ಷಿಸಿಯೋ ಅಥವಾ ಈಗಾಗಲೇ ಜನನಿಬಿಡ ಹೊಂದಿದ ಪ್ರದೇಶಗಳಿಂದ ಜನರನ್ನು ಕರೆಯಿಸಿಯೋ ಇಂತಹ ಗ್ರಾಮಗಳನ್ನು ಸ್ಥಾಪಿಸಬಹುದು. ಇಂತಹ ನವಗ್ರಾಮಗಳು ಹೊಸ ಭೂ ಪ್ರದೇಶದಲ್ಲಿಯೋ ಅಥವಾ ಪಾಳುಬಿದ್ದ ಹಳೆಯ ಗ್ರಾಮಗಳ ಸ್ಥಳದಲ್ಲಿಯೋ ಸ್ಥಾಪಿಸಬಹುದು". ಜಾನ್ ಮಥಾಯ್ ತಮ್ಮ ಗ್ರಂಥ **ವಿಲೇಜ್ ಗೌರ್ನಮೆಂಟ್ ಇನ್ ಇಂಡಿಯಾ**ದಲ್ಲಿ 13 ನೇ ಶತಮಾನಕ್ಕೆ ಸಂಬಂಧಿಸಿದ ಶಿಲಾಶಾಸನವನ್ನು ಉಲ್ಲೇಖಿಸಿ, ರಾಜನು 108 ಬ್ರಾಹ್ಮಣ ಕುಟುಂಬಗಳನ್ನು ನೆಲೆಸಲು ಒಂದು ಗ್ರಾಮವನ್ನು ಸ್ಥಾಪಿಸಿದನು ಎಂದು ಬರೆಯುತ್ತಾರೆ.

16. ಬಾಡೆನ್ ಪಾವೆಲ್‌ರವರ **ಇಂಡಿಯನ್ ವಿಲೇಜ್ ಕಮ್ಯುನಿಟಿ** ಗ್ರಂಥದಲ್ಲಿ "ಭೂ ಹಂಚಿಕೆಯ ಬಗ್ಗೆ ವೇದಗಳಲ್ಲಿ ಯಾವುದೇ ಉಲ್ಲೇಖ ಸಿಗುವುದಿಲ್ಲ— ಭೂಮಿಯ ಮೇಲೆ ರಾಜನ ಅಧಿಕಾರ ಖಚಿತವಾಗಿ ಯಾವಾಗ ಸ್ಥಾಪಿತವಾಯಿ ತೆಂದು ಹೇಳಲು ಸಾಧ್ಯವಿಲ್ಲ. ವೇದಗಳ ಕಾಲದ ರಾಜರು ಆಮೇಲೆ ಬಂದ ರಾಜರಂತೆ ನಿರಂಕುಶ ಅಧಿಕಾರವನ್ನು ಹೊಂದಿರಲಿಲ್ಲ. ಆತನನ್ನು ಜನ್ಮದ ಆಧಾರದ ಜೊತೆಗೆ ಚುನಾವಣೆಯ ಮೂಲಕ ಆಯ್ಕೆ ಮಾಡುವ ವ್ಯವಸ್ಥೆಯೂ ಇತ್ತು. ಭೂ ಕಂದಾಯ ವ್ಯವಸ್ಥೆ ಆಗಿನ್ನು ಜಾರಿಯಲ್ಲಿರಲಿಲ್ಲ. ಆದರೆ ಕಾಣಿಕೆಗಳನ್ನು ಆತ ಇತರರಿಂದ ಸ್ವೀಕರಿಸುತ್ತಿದ್ದ. ಸೋತ ವೈರಿಗಳು ಆತನಿಗೆ ದಂಡ ಕೊಡ ಬೇಕಾಗುತ್ತಿತ್ತು". ಪು. 194

17. ರಾಜನಿಗೆ ಭೂಮಿಯ ಮೇಲೆ ಯಾವುದೇ ಸ್ವಾಮಿತ್ವ ಇಲ್ಲದ್ದರಿಂದ ಆತನಿಗೆ ಭೂ ಕಂದಾಯ ನೀಡುವ ಪ್ರಮೇಯವೇ ಇರಲಿಲ್ಲ. ಆದರೆ ಆತನಿಗೆ ಸಲ್ಲಿಸಲಾಗುತ್ತಿದ್ದ ಕಾಣಿಕೆಯು ಆತನಿಂದ ಗ್ರಾಮಸ್ಥರು ಪಡೆದ ಮತ್ತು ಪಡೆಯಬಹುದಾದ ಬಾಹ್ಯ ಆಕ್ರಮಣಕಾರರಿಂದ ರಕ್ಷಣೆಗಾಗಿ ಸ್ವಯಿಚ್ಛೆಯಿಂದ ಸಲ್ಲಿಸಲಾಗುತ್ತಿತ್ತು. ಈ ವಿಷಯವು **ರಿಪೋರ್ಟ್ ಆಫ್ ದಿ ಗೋವಾಲ್ಯಾಂಡ್ ರಿಫಾರ್ಮ್ ಕಮಿಷನ್** 1964ದಲ್ಲಿ ಸಾಬೀತು ಪಡಿಸಲಾಗಿದೆ. ಈ ವರದಿಯ ಪ್ರಕಾರ ಗಾವಕರಿಗಳು ರಾಜನಿಗೆ ಅಥವಾ ಆಳುವ ವರ್ಗಕ್ಕೆ ಕ್ರಿ. ಶ. 1064ರ ವರೆಗೂ ಯಾವುದೇ ಕಂದಾಯ ಕೊಡುತ್ತಿರಲಿಲ್ಲ. ಆದರೆ ಗೋವಾದಲ್ಲಿನ ಗಾವಕರಿಗಳು ಸಮುದ್ರ ಮಾರ್ಗದಿಂದ ಆಕ್ರಮಿಸುತ್ತಿದ್ದ ಮುಸ್ಲಿಂರನ್ನು ತಡೆಯುವ ಸಲುವಾಗಿ ಕದಂಬ ರಾಜನ ಸಹಾಯ ಕೋರಿದರು. ರಕ್ಷಣೆಗೆ ಪ್ರತಿಯಾಗಿ ಕದಂಬರಿಗೆ ತಮ್ಮ ಸ್ವಇಚ್ಛೆಯಿಂದ ಕಾಣಿಕೆ ಕೊಡತೊಡಗಿದರು. ಇದಕ್ಕೆ ಕಾಕ್ಸಿವೊರೊಡೊ ಎಂದು ಹೆಸರು. ಹೀಗೆ ಸ್ವಇಚ್ಛೆಯ ಕಾಕ್ಸಿವೊರೊಡೊ ಪೋರ್ಚುಗೀಸರು ಬಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲೆ ಕಡ್ಡಾಯದ ಕಂದಾಯವನ್ನಾಗಿ ಮಾಡಿ ವಸೂಲು ಮಾಡತೊಡಗಿದರು.

18. ಬಾಡೆನ್ ಪಾವೆಲ್‌ರವರು ಮೆಗಸ್ಥನೀಸ್‌ನ ಬರವಣಿಗೆಯನ್ನು ಉಲ್ಲೇಖಿಸುತ್ತ ಪ್ರಾಚೀನ ಕಾಲದಲ್ಲಿ ರೈತರು ಅನುಭವಿಸಿದ ಸ್ವಾತಂತ್ರ್ಯ ಮತ್ತು ರಕ್ಷಣೆಯ ಬಗ್ಗೆ ವಿವರಿಸುತ್ತಾರೆ. ರೈತರು ಸೈನ್ಯದಲ್ಲಿ ಕಡ್ಡಾಯ ಸೇವೆ ಸಲ್ಲಿಸುವುದರಿಂದ ವಿನಾಯಿತಿ ಪಡೆದಿದ್ದರು. ತಮ್ಮ ಎಲ್ಲ ಸಮಯವನ್ನು ವ್ಯವಸಾಯದಲ್ಲಿ ತೊಡಗಿಸಲು ಅವಕಾಶ ಹೊಂದಿದ್ದರು. ಯುದ್ಧದ ಸಮಯದಲ್ಲಿ ಸೈನಿಕರು ರೈತರಿಗೆ ಯಾವುದೇ ತೊಂದರೆ ಕೊಡುತ್ತಿರಲಿಲ್ಲ. ರೈತರು ತಮ್ಮ ನೆರೆಹೊರೆಯ ಪ್ರದೇಶದಲ್ಲಿಯೇ ಯುದ್ಧ ನಡೆಯುತ್ತಿದ್ದರೂ ಕೂಡ ಅವರು ಏಕಚಿತ್ತದಿಂದ ವ್ಯವಸಾಯದಲ್ಲಿ ತೊಡಗಿರುತ್ತಿದ್ದರು.

19. ಮೊಘಲರು ಜಾರಿಗೆ ತಂದ ಗೇಣಿ ಶಾಸನದಲ್ಲಿ ಉಪಯೋಗಿಸುತ್ತಿದ್ದ ಹೆಸರು ಮತ್ತು ನಿಯಮಗಳ ಬಗ್ಗೆ ಡಬ್ಲ್ಯು. ಡಬ್ಲ್ಯು. ಹಂಟರ್‌ರವರ ವಿವರಣೆ ಈ ರೀತಿ ಇದೆ: ''ಅನೇಕ ಬದಲಾವಣೆಗಳನ್ನು ತಂದರೂ ಕೂಡ ಗ್ರಾಮಗಳ ಆಂತರಿಕ ಜೀವನವು ಯಥಾರೀತಿಯಲ್ಲಿ ಮುಂದುವರೆಯಿತು. ಹೊಸ ಶಾಸನಗಳು ಬಂದರೂ ಕೂಡ ಜನ ಸಾಮಾನ್ಯರು ತಮ್ಮ ಸ್ಥಳೀಯ ಹೆಸರುಗಳ ಉಪಯೋಗವನ್ನೇ ಮುಂದುವರೆಸಿದರು. ತಮ್ಮ ಗ್ರಾಮಮಟ್ಟದಲ್ಲಿ ಈ ಮೊದಲು ಚಲಾವಣೆಯಲ್ಲಿದ್ದ ಸ್ಥಳೀಯ ಹೆಸರುಗಳ ಉಪಯೋಗವೇ ಹೆಚ್ಚಾಗಿದ್ದು ಮೇಲಿನ ಹಂತದಲ್ಲಿ ಜಿಲ್ಲೆ ಮತ್ತು ಸಭಾ (ಪ್ರಾಂತ) ಎಂಬ ಪರ್ಶಿಯನ್ ಶಬ್ದಗಳನ್ನು ಉಪಯೋಗಿಸಲಾಗುತ್ತಿತ್ತು. ಅವುಗಳ ಜೊತೆಗೆ ಸರ್ಕಾರ ಕೂಡ ಉಪಯೋಗಿಸಿದರು.''
ಉಲ್ಲೇಖ : ಜೆ. ಮಥಾಯ್ ಅವರು ಬರೆದ **ವಿಲೇಜ್ ಗವರ್ನಮೆಂಟ್ ಇನ್ ಬ್ರಿಟಿಷ್ ಇಂಡಿಯಾ.** ಪು. 32.

20. ಗೋವೆಯ ಭೂ ಸುಧಾರಣಾ ಕಮೀಷನ್ (1964) ವರದಿಯನ್ನು ಗೋವೆಯಲ್ಲಿ ಭೂಮಿಯು ರಾಜರ ಅಥವಾ ಆಳುವವರ ಸ್ವತ್ತಾದ ಬಗೆಯನ್ನು ವಿವರಿಸುತ್ತದೆ. ''........ಯುದ್ಧದ ಪರಿಣಾಮದಿಂದ ಗೋವೆಯು ಮುಸ್ಲಿಂ ದೊರೆಯಾದ ಮಲೀಕ್ ಹುಸೇನ್‌ನ ಅಧೀನಕ್ಕೊಳಪಟ್ಟಿತ್ತು. ಆತ ರಾಜ್ಯಭಾರವನ್ನು ಕುರಾನದ ನಿಯಮಗಳ ಪ್ರಕಾರ ನಡೆಸಿದನು. ಆ ನಿಯಮಗಳ ಪ್ರಕಾರ ರಾಜನೇ ಎಲ್ಲ ಭೂಮಿಯ ಒಡೆಯ, ಇತರ ಸಾಮಾಜಿಕ ಅಂಶಗಳು ಇಲ್ಲಿ ಅಗೌಣ್ಯ. ಆಮೇಲೆ ಆಡಳಿತ ನಡೆಸಿದ ಪೋರ್ಚುಗೀಜರು ಕೂಡ ಭೂ ಒಡೆತನವನ್ನು ತಮ್ಮ ಕೈಗೆ ತೆಗೆದುಕೊಂಡರು. 1526 ಸೆಪ್ಟಂಬರ್‌ನಲ್ಲಿ ಜಾರಿಗೆ ತಂದ ಶಾಸನದನ್ವಯ ಪೋರ್ಚುಗಲ್‌ದ ರಾಜನು ಎಲ್ಲ ಭೂಮಿಯ ಒಡೆಯನೆಂದೂ ಗಾವಕರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು ಕೇವಲ ಗೇಣಿದಾರರೆಂದು ಸಾರಲಾಯಿತು."

21. ಬಾಡೆನ್-ಪಾವೆಲ್. **ಇಂಡಿಯನ್ ವಿಲೇಜ್ ಕಮ್ಯುನಿಟಿ** ಪು. 222
22. ಮ್ಯಾಕ್ಸವೆಬರ್. **ದಿ ರಿಲಿಜಿಯನ್ ಆಫ್ ಇಂಡಿಯಾ** (ಗ್ಲೆನ್‌ಕ್ಯೂ : 1958) ಪು, 68-69
23. ಮೇಲಿನ ಉಲ್ಲೇಖ.
24. ಹೆನ್ರಿ ಮೇಯ್ನ್, **ವಿಲೇಜ್ ಕಮ್ಯುನಿಟೀಜ್ ಇನ್ ದಿ ಈಸ್ಟ ಅಂಡ್ ವೆಸ್ಟ** (ಲಂಡನ್ : 1876) ಪು. 377
25. ಡಬ್ಲ್ಯೂ.ಡಬ್ಲ್ಯೂ. **ವೈಜರ್ ಹಿಂದೂ ಜಾಜಮನಿ ಸಿಸ್ಟಂ.** ಪು. 110. **ಪ್ರೊಗ್ರೆಸ್ ಆಫ್ ಲ್ಯಾಂಡ್ ರಿಫಾರ್ಮ್ಸ್,** ಪ್ಲಾನಿಂಗ್ ಕಮೀಷನ್. ಗೌರ್ನಮೆಂಟ್‌ಆಫ್ ಇಂಡಿಯಾ (1963) ಪು, 4.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ—3

ಗ್ರಾಮಗಳ ಭೌತಿಕ ಸ್ವರೂಪ

ಗ್ರಾಮವೆಂಬುದು ಭಾರತೀಯರಿಗೆ ಚಿರಪರಿಚಿತವಾದ ನೆಲೆ. ಭಾರತವು ಗ್ರಾಮಗಳ ನಾಡೆಂದೇ ಹೆಸರಾಗಿದೆ. ಭಾರತದ ಜನಸಂಖ್ಯೆಯು ಅಧಿಕ ಪಾಲು ಗ್ರಾಮಗಳಲ್ಲಿ ಕಂಡುಬಂದಿದೆ. ಸುಮಾರು 5 ಲಕ್ಷಕ್ಕಿಂತಲೂ ಅಧಿಕ ಗ್ರಾಮಗಳನ್ನು ಹೊಂದಿರುವಂತಹ ಭಾರತದಲ್ಲಿ ಕೆಲವು ಗ್ರಾಮಗಳು ತುಂಬಾ ಚಿಕ್ಕವು ಆಗಿದ್ದರೆ ಮತ್ತೆ ಕೆಲವು ತುಂಬಾ ವಿಶಾಲವಾಗಿಯೂ ಇವೆ. ಕೆಲವು ಗ್ರಾಮಗಳು 10 ಸಾವಿರ ಜನಸಂಖ್ಯೆ ಹೊಂದಿರುವುದನ್ನು ಸಹ ಕಾಣಬಹುದು.

ಗ್ರಾಮೀಣವಾಸಿಗಳು ರೈತರು, ವ್ಯಾಪಾರಿಗಳು ಕರಕುಶಲಗಾರರೂ, ವಿದ್ವಾಂಸರು ಅಥವಾ ಪೂಜಾರಿಗಳೂ ಸಹ ಆಗಿರಬಹುದು. ಹೀಗೆ ಅನೇಕ ರೀತಿಯ ಜನರನ್ನು ಹೊಂದಿರುವಂತಹ ಗ್ರಾಮಗಳ ಭೌತಿಕರಚನೆಯೂ ಚಿಕ್ಕಗ್ರಾಮ ಅಥವಾ ನಗರವೊಂದರ ಭೌತಿಕ ರಚನೆಗಿಂತಲೂ ಭಿನ್ನವಾಗಿದೆ. ಈ ಭಿನ್ನತೆಯನ್ನು ಗುರುತಿಸುವುದು ಕೆಲವು ವೇಳೆ ಪ್ರಯಾಸವಾಗಬಹುದು. ಮಲೆನಾಡಿನ ಹಳ್ಳಿಗಳ ಸ್ವರೂಪವೂ ಬಯಲು ಸೀಮೆಯ ಹಳ್ಳಿಗಳ ಸ್ವರೂಪಕ್ಕಿಂತಲೂ ಭಿನ್ನವಾಗಿರುತ್ತದೆ. ಅಂತೆಯೇ ಹಿಮಾಲಯದ ತಪ್ಪಲಿನ ಹಳ್ಳಿಗಳು ಪ್ರದೇಶದ ಹಳ್ಳಿಗಳಿಗಿಂತ ಭಿನ್ನವಾಗಿವೆ. ಉದಾ : ಉತ್ತರ ಪ್ರದೇಶದ ಹಳ್ಳಿಗಳು ದಕ್ಷಿಣದ ರಾಜ್ಯಗಳ ಹಳ್ಳಿಗಳಿಗಿಂತ ಭೌತಿಕವಾಗಿಯೂ ಸಾಮಾಜಿಕವಾಗಿಯೂ ಭಿನ್ನವಾಗಿದೆ. ಹಿಮಾಚಲ ಪರ್ವತ ಪ್ರದೇಶದಲ್ಲಿರುವ ಕೆಲವು ಹಳ್ಳಿಗಳು ಏಳೆಂಟು ಕುಟುಂಬಗಳನ್ನು ಹೊಂದಿದ್ದರೆ ಕೇರಳದ ಕೆಲವು ಹಳ್ಳಿಗಳು ಹತ್ತು ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವುದನ್ನು ಕಾಣಬಹುದು. ಹಾಗೂ ಹಳ್ಳಿಗಳು ಯಾವ ರೀತಿಯ ಭೌತಿಕ ರಚನೆ ಅಥವಾ ನೆಲೆಸುವಿಕೆಯ ಮಾದರಿಯನ್ನು ಹೊಂದಿವೆ ಎಂಬುದು ಬಹು ಮುಖ್ಯವಾದ ಅಂಶವಾಗಿದೆ. ಗ್ರಾಮಗಳ ಜನವಸತಿ ಅಥವಾ ನಿವೇಶನದ ರೀತಿ ಹೇಗಿದೆ ? ಮನೆಗಳು ಹೇಗೆ ಚದುರಿಕೊಂಡಿವೆ ? ಜನಸಂಖ್ಯೆಯ ಗಾತ್ರವೇನು ? ನೈಸರ್ಗಿಕ ಸಂಪತ್ತು ಏನು ? ಪ್ರಕೃತಿಯ ಲಕ್ಷಣಗಳಾವುವು ? ಮುಖ್ಯ ಕಸುಬುಗಳೇನು ? ಹೀಗೆ ಅನೇಕ ರೀತಿಯ ವಿಶ್ಲೇಷಣೆಯನ್ನು ನೀಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಗ್ರಾಮವನ್ನು ಅದರ ಬಹುಸಂಖ್ಯಾತಜನರು ಹೊಂದಿರುವಂತಹ ಕಸುಬಿನ ಆಧಾರದ ಮೇಲೆ ವಿಂಗಡಿಸಬಹುದು. ಒಂದು ಗ್ರಾಮವು ಕೇವಲ ಒಂದು ಬುಡ ಕಟ್ಟನ್ನು ಹೊಂದಿರಬಹುದು ಅಥವಾ ವಿಭಿನ್ನ ಜಾತಿಗಳು ಮತ್ತು ಮತ ಪಂಥಗಳನ್ನು ಸಹ ಹೊಂದಿರಬಹುದು. ಆದರೆ ಗ್ರಾಮಗಳ ಭೌತಿಕ ರಚನೆ ಅಥವಾ ನೆಲೆಸುವಿಕೆಯು ಆಧಾರದ ಮೇಲೆ ವರ್ಗೀಕರಿಸುವುದು ಹೆಚ್ಚು. ಮಹತ್ವವನ್ನು ಹೊಂದಿದೆ. ಗ್ರಾಮ ಗಳ ಸ್ವರೂಪದ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ಆನುಷಂಗಿಕವಾದ ವರ್ಣನೆಯನ್ನು ಕಾಣಬಹುದು. ಕೃಷಿಯು ಅವಲಂಬನೆ, ಗುರುತಿಸಿದ ಮೇರೆಗಳು ಅಲ್ಲಿ ಪ್ರಸ್ತಾಪಿಸಲ್ಪ ಟ್ಟಿವೆ. ವೇದಗಳು, ಸ್ಮೃತಿಗಳು ಮತ್ತು ಕೌಟಲ್ಯನ ಅರ್ಥಶಾಸ್ತ್ರ ಮುಂತಾದವುಗಳಲ್ಲಿ ಗ್ರಾಮಗಳ ನೆಲೆಸುವಿಕೆಯು ರೀತಿಯು ಬಗ್ಗೆ ವರ್ಣನೆಯನ್ನು ಕಾಣಬಹುದು. ಉದಾ : ಕೌಟಿಲ್ಯನ ಅಭಿಪ್ರಾಯದಲ್ಲಿ ಒಂದು ಗ್ರಾಮಕ್ಕೆ ಪ್ರಾಕಾರ ಹಾಗೂ ಕಂದಕಗಳು ಇರಬಾರದು. ಅವು ಬಹು ಜನವಸತಿಗಳಿರಬೇಕು. ಆದರೆ ಜನಸಂಖ್ಯೆಯು ಐದುನೂರನ್ನೂ ಮೀರಬಾರದು. ಹಾಗೂ ನಿವೇಶನದ ಸ್ವರೂಪವನ್ನು ಗಮನದಲ್ಲಿಟ್ಟು ಕೊಂಡು ಪ್ರಾಚೀನ ಶಾಸ್ತ್ರ ಗ್ರಂಥಗಳು ಸರ್ವತೋಭದ್ರ. ಪರ್ದಕ, ಸ್ವಸ್ತಿಕ ಮುಂತಾದ ಪ್ರಕಾರಗಳನ್ನು ವರ್ಣಿಸಿವೆ. ಗಾತ್ರ ಹಾಗೂ ಆಡಳಿತವನ್ನು ಗಮನದಲ್ಲಿಟ್ಟುಕೊಂಡು ಕೌಟಿಲ್ಯನು ಗ್ರಾಮಗಳನ್ನು ಸಂಗ್ರಹಣ. ಕಾರ್ಕ್ಯಟಿಕ, ದ್ರೋಣ ಮುಖ, ಸ್ಥಾನೀಯಗಳೆಂದು ವರ್ಗೀಕರಿಸಿದ್ದಾನೆ. ಏನೇ ಇದ್ದರೂ ಇವುಗಳು ಆ ಕಾಲದ ಗ್ರಾಮಗಳ ಭೌತಿಕ ಸ್ವರೂಪವನ್ನು ಸ್ಪಷ್ಟವಾಗಿ ಕೊಡುವುದಿಲ್ಲ.

ಆಧುನಿಕ ಭಾರತವು ಬೆಳವಣಿಗೆ ಹೊಂದುತ್ತಿರುವ ರಾಷ್ಟ್ರವಾಗಿ ಅಧಿಕ ಜನಸಂಖ್ಯೆ ಯನ್ನು ಹೊಂದಿದೆ. ಜನಸಾಂದ್ರತೆಯು ಬಯಲು ಸೀಮೆಯಲ್ಲಿ ಅಧಿಕವಾಗಿಯೂ ಮತ್ತು ಮಲೆನಾಡು ಪ್ರಾಂತ್ಯದಲ್ಲಿ ಕಡಿಮೆ ಇರುವುದನ್ನು ಕಾಣಬಹುದು. ಭಾರತದ ಗ್ರಾಮಗಳ ನೆಲೆಸುವಿಕೆಯ ಮಾದರಿಯನ್ನು ನಿವೇಶನದ ಸ್ವರೂಪದ ದೃಷ್ಟಿಯಿಂದ ವರ್ಗಿಕರಿಸಬಹುದಾದರೂ ಈ ವರ್ಗೀಕರಣವೂ ಬಹಳ ಕಟ್ಟುನಿಟ್ಟಾಗಿ ಹಾಗು ನಿರ್ದಿಷ್ಟ ವಾಗಿರುವುದು ಸಾಧ್ಯವಿಲ್ಲ. ಏಕತೆಯಲ್ಲಿ ವಿವಿಧತೆ ಇರುವ ವಿಶಾಲವಾದ ಭಾರತವು ಹೊಂದಿರುವಂತಹ ಐದೂವರೆ ಲಕ್ಷ ಹಳ್ಳಿಗಳನ್ನೂ ಮೂರು ನಾಲ್ಕು ವಿಧಗಳಾಗಿ ಸಂಕ್ಷೇಪಿಸುವುದು ಸುಲಭವಲ್ಲ.

ಭಾರತದ ಗ್ರಾಮಗಳನ್ನು ನೆಲೆಸುವಿಕೆಯ ಆಧಾರದ ಮೇಲೆ ಅನೇಕ ರೀತಿಯಲ್ಲಿ ವಿಂಗಡಿಸಬಹುದು. ಒಂದೊಂದು ವಿಧವು ತನ್ನದೆ ಆದ ವೈಶಿಷ್ಟತೆಯನ್ನು ಹೊಂದಿದೆ. ಭಾರತದ ಗ್ರಾಮಗಳ ಪ್ರಮುಖ ಪ್ರಕಾರಗಳು ಈ ಕೆಳಕಂಡ ರೀತಿಯಲ್ಲಿವೆ :

1. ಆಕಾರರಹಿತ ಕೇಂದ್ರೀಕೃತ ಗುಂಪು (ಸಮುದಾಯ) ಅಥವಾ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪೂರ್ಣವಾದ ಮಾದರಿಯನ್ನು ಹೊಂದಿರದ ಗುಂಪು. ಅದು ವಿಶಾಲವಾಗಿರ ಬಹುದು ಇಲ್ಲವೇ ಚದುರಿಹೋಗಿರಬಹುದು. ಇವು ತುಲನಾತ್ಮಕವಾಗಿ ಸಣ್ಣ ಗಾತ್ರದಲ್ಲಿದ್ದು ಭಿನ್ನವಾದ ಗುಂಪುಗಳ ಜನ ಸಮೂಹವನ್ನು ಹೊಂದಿರುತ್ತದೆ. ಈ ಕ್ರಮಕ್ಕೆ ಸೇರಿರುವ ಹಳ್ಳಿಗಳಲ್ಲಿ ಡೊಂಕಾದ ಅಥವಾ ಕ್ರಮವಲ್ಲದ ರಸ್ತೆಗಳು ಕಂಡು ಬರುತ್ತವೆ. ಇವು ಸ್ಥಳೀಯ ಅವಶ್ಯಕತೆಯ ಮೇಲೆ ಬೆಳೆಯುತ್ತವೆ ವಿನಹ ಮೂಲ ಆಕೃತಿಯ ಭಾಗವಾಗಿ ಬೆಳೆಯುವುದಿಲ್ಲ.

2. ಏಕಪರಿಮಾಣಾತ್ಮಕ ಕೇಂದ್ರೀಕೃತ ಗುಂಪು ಅಥವಾ ಕ್ರಮವಾದ ತೆರೆದ ಪ್ರದೇಶವನ್ನು ಹೊಂದಿದ್ದು ಗ್ರಾಮಗಳು ಅಥವಾ ಸಮಾಂತರವಾದ ಮನೆಗಳ ಸಾಲುಗಳ ಮಧ್ಯೆ ನೇರವಾದ ರಸ್ತೆಗಳನ್ನು ಹೊಂದಿರುವಂತಹ ಹಳ್ಳಿಗಳು.

3. ಚೌಕಾಕಾರ ಅಥವಾ ಆಯಾತಾಕಾರವನ್ನು ಹೊಂದಿರುವಂತಹ ಅಥವಾ ಸಮಾಂತರವಾದ ರಸ್ತೆಗಳನ್ನು ಹೊಂದಿರುವಂತಹ ಹಳ್ಳಿಗಳು.

4. ಪ್ರತ್ಯೇಕಿಸಲ್ಪಟ್ಟ ಹೊಲ–ಮನೆಗಳಿಂದ ಕೂಡಿದ ಗ್ರಾಮಗಳು.

ಡಾ॥ ಇರಾವತಿ ಕರ್ವೆ ಅವರು ಮಹಾರಾಷ್ಟ್ರದ ಹಳ್ಳಿಗಳನ್ನು ಗಮನಲ್ಲಿಟ್ಟು ಕೊಂಡು ಮೂರು ವಿಧದ ಗ್ರಾಮಗಳನ್ನು ಗುರುತಿಸಿದ್ದಾರೆ. ಮೊದಲನೆಯದಾಗಿ ಕೇಂದ್ರೀಕೃತ ನಿವೇಶನಗಳು ಅಥವಾ ಗ್ರಾಮಗಳು ಇಂತಹ ಗ್ರಾಮದ ಪ್ರಮುಖ ಲಕ್ಷಣ ವೆಂದರೆ ಅಲ್ಲಿಯ ಮನೆಗಳು ಒಂದಕ್ಕೊಂದು ಹತ್ತಿರದಲ್ಲಿರುತ್ತವೆ. ಮನೆಗಳ ಸುತ್ತಲೂ ಹೊಲಗದ್ದೆಗಳಿದ್ದು ಊರ ಗಡಿಗಳು ಸುತ್ತುವರೆದಿರುತ್ತವೆ. ದಕ್ಷಿಣದ ಮೈದಾನದ ಗ್ರಾಮಗಳು ಇದಕ್ಕೆ ಉದಾಹರಣೆಯಾಗಿವೆ. ಇವರ ಎರಡನೇ ಪ್ರಕಾರದ ಹಳ್ಳಿಗಳು ಕೊಂಕಣ ಪ್ರದೇಶದಲ್ಲಿ ಕಂಡುಬರುತ್ತನೆ. ಇಲ್ಲಿಯ ಗ್ರಾಮಗಳು ರಸ್ತೆಯ ಇಕ್ಕೆಲದಲ್ಲಿ ಕಂಡುಬರುತ್ತವೆ, ಇಲ್ಲಿಯ ಗ್ರಾಮಗಳಲ್ಲಿ ರಸ್ತೆಯ ಇಕ್ಕೆಲದಲ್ಲಿ ಮನೆಗಳಿದ್ದು ಅವುಗಳಿಗೆ ಹೊಂದಿದಂತೆ ಹಿಂಬದಿಯಲ್ಲಿ ತೆಂಗು, ಅಡಕೆ ಇತ್ಯಾದಿ ತೋಟಗಳಿರುತ್ತವೆ. ಹಾಗೂ ಮೂರನೇ ವಿಧದ ಗ್ರಾಮಗಳು ಬೆಟ್ಟ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇಲ್ಲಿ ವಸತಿಗಳು ಚದುರಿದಂತೆ ಇದ್ದು, ಅಲ್ಲಲ್ಲಿ ಕೆಲವು ಗುಂಪು ಮನೆಗಳು ಕಂಡುಬರುತ್ತವೆ. ಪ್ರತಿಯೊಂದು ಗುಂಪಿನ ಮನೆಗಳ ಸುತ್ತಲೂ ಹೊಲಗದ್ದೆಗಳು ಆವರಿಸಿರುತ್ತವೆ. ಅನೇಕ ಗುಂಪುಗಳು ಒಟ್ಟಿಗೆ ಸೇರಿ ಒಂದು ಗ್ರಾಮವೆನಿಸುತ್ತದೆ.

ಪ್ರಸ್ತುತ ಭಾರತದ ಗ್ರಾಮಗಳನ್ನು ನೆಲೆಸುವಿಕೆಯ ಆಧಾರದ ಮೇಲಿನ ವಿಂಗಡನೆಯನ್ನು ವಿಸ್ತರಿಸಿ ಗ್ರಾಮಗಳ ವರ್ಗೀಕರಣವನ್ನು ಈ ಕೆಳಕಂಡಂತೆ ಸಂಕ್ಷಿಪ್ತ ವಾಗಿ ಕೊಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಕಾರರಹಿತ ಕೇಂದ್ರೀಕೃತ ಗ್ರಾಮಗಳು :

ಇಂತಹ ಗ್ರಾಮಗಳು ರಕ್ಷಣೆಯ ದೃಷ್ಟಿಯಿಂದ ರಕ್ಷಣೆಯ ಕೋಟೆ ಅಥವಾ ಬೇಲಿಯಿಂದ ಸುತ್ತುವರಿಯಲ್ಪಟ್ಟಿರುತ್ತವೆ. ಇವು ಬೆಟ್ಟಗುಡ್ಡಗಳ ಪ್ರದೇಶದಲ್ಲಿ, ಕಿರಿದಾದ ಪರ್ವತ ಶ್ರೇಣಿಯ ಮೇಲೂ ಹರಡಿದ್ದು ದೀರ್ಘವಾದ ಮಾದರಿಯನ್ನು ಹೊಂದಿರುತ್ತವೆ.

ಏಕಪರಿಮಾಣಾತ್ಮಕ ಕೇಂದ್ರೀಕೃತ ಗುಂಪಿನ ಹಳ್ಳಿಗಳು :

ಏಕ ಪರಿಮಾಣಾತ್ಮಕ ಕೇಂದ್ರೀಕೃತ ಗುಂಪುಗಳು ಜನಸಂಖ್ಯೆಯು ಅಧಿಕವಾದಂತೆ ಗಾತ್ರದಲ್ಲಿ ದೊಡ್ಡದಾಗಿ ಬೆಳೆಯುತ್ತವೆ. ಇದರಿಂದಾಗಿ ಸಮಾಂತರವಾಗಿ ರಸ್ತೆಗಳನ್ನು ಸೇರಿಸಲಾಗುವುದು ಅಥವಾ ಹಳೆಯ ರಸ್ತೆಗಳನ್ನು ವಿಸ್ತರಿಸಲಾಗುವುದು. ಇದರಿಂದಾಗಿ ಕೊನೆಗೆ ಚೌಕಾಕಾರ ರಚನೆ ಉಂಟಾಗಿ ಒಂದು ಹಂತದಲ್ಲಿ ಆಕಾರರಹಿತ ಕೇಂದ್ರೀಕೃತ ಗುಂಪಾಗಿ ಕಾಣಬಹುದು. ಆದರ ಜನಸಂಖ್ಯೆಯು ವಿಂತವಾಗಿದ್ದಾಗ ಇಂತಹ ನೆಲೆಸುವಿಕೆಯು ತುಂಬಾ ಉತ್ತಮವಾದುದ್ದಾಗಿದೆ.

ಚೌಕಾಕಾರದ ಮತ್ತು ಆಯತಾಕಾರದ ಗ್ರಾಮಗಳು :

ಇಂತಹ ನೆಲೆಸುವಿಕೆಯಲ್ಲಿ ಸಾಲು ಮನೆಗಳು ಕಂಡು ಬರುತ್ತವೆ. ಇವುಗಳಗೆ ಮತ್ತೆರಡು ಹೆಚ್ಚಿನ ಲಕ್ಷಣಗಳಿವೆ. ಅವುಗಳೆಂದರೆ ಮನೆಗಳ ಎರಡು, ಮೂರು. ನಾಲ್ಕು ಸಾಲುಗಳು ಒಂದಕ್ಕೊಂದು ಸಮಾನಂತರವಾಗಿ ಸಾಗುತ್ತವೆ ಅಥವಾ ಒಂದಕ್ಕೊಂದು ಲಂಭಕೋನವಾಗಿ ಚೌಕಾಕೃತಿ ಅಥವಾ ಆಯತಾಕಾರವನ್ನು ನಿರ್ಮಿಸುತ್ತವೆ. ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಹಲವೆಡೆ ಇಂತಹ ಗ್ರಾಮಗಳು ಕಂಡುಬರುತ್ತವೆ,

ಪ್ರತ್ಯೇಕಿತ ಹೊಲ-ಮನೆಗಳ ಗ್ರಾಮಗಳು :

ಈ ರೀತಿಯ ಗ್ರಾಮಗಳಲ್ಲಿ ಒಂದು ರೈತ ಕುಟುಂಬವು ಬೇರೆ ರೈತ ಕುಟುಂಬಗಳಿಂದ ಪ್ರತ್ಯೇಕಿತವಾಗಿ ನೆಲೆಸಿರುತ್ತದೆ. ವಾಸಿಸುವ ಮನೆಗೆ ಹೊಂದಿಕೊಂಡು ದನದ ಕೊಟ್ಟಿಗೆ ಹುಲ್ಲು, ಕಟ್ಟಿಗೆ ಮತ್ತು ವ್ಯವಸಾಯದ ಉಪಕರಣಗಳನ್ನು ಕೂಡಿಡುವ ಕೊಠಡಿ ಮುಂತಾದವುಗಳಿರುತ್ತವೆ. ಮನೆಯ ಸುತ್ತಲೂ ಹೊಲ ಗದ್ದೆಗಳು ಹರಡಿಕೊಂಡಿರುತ್ತವೆ. ಈ ಹೊಲಗದ್ದೆಗಳ ಮೇರೆಯನ್ನು ದಾಟಿದ ನಂತರ ಮತ್ತೊಂದು ರೈತ ಕುಟುಂಬದ ನಿವಾಸವಿರುತ್ತದೆ. ಆ ನಿವಾಸವು ಸಹ ಕೊಟ್ಟಿಗೆ, ಕಣ, ಅಂಗಳ ಮುಂತಾದವುಗಳನ್ನು ಹೊಂದಿದ್ದು ಹೊಲಗದ್ದೆಗಳಿಂದ ಸುತ್ತುವರೆದಿರುತ್ತದೆ. ಇಂತಹ

CC-0. In Public Domain. Gurukul Kangri Collection, Haridwar

ಹೊಲ ಮನೆಗಳಿಂದ ಪ್ರತ್ಯೇಕವಾಗಿ ನೆಲೆಸುವಿಕೆಯ ರೀತಿಯಲ್ಲಿ ಕೆಲವು ಗ್ರಾಮಗಳು ಚಿಕ್ಕದ್ದಾಗಿದ್ದರೆ ಮತ್ತೆ ಕೆಲವು ಗ್ರಾಮಗಳು ವಿಶಾಲವಾಗಿರುತ್ತವೆ.

ಚದುರಿದ ಗುಂಪು ಗ್ರಾಮಗಳು :

ದಟ್ಟ ಮಲೆನಾಡು ಪ್ರದೇಶದಲ್ಲಿ ಹಾಗೂ ನದಿಗಳ ಕವಲುಗಳು ಇರುವಂತಹ ಪ್ರದೇಶದಲ್ಲಿ ಮನೆಗಳು ಒಟ್ಟೊಟ್ಟಿಗೆ ಇರುವುದಿಲ್ಲ. ಒಂದೆರಡು ಮನೆಗಳು ಒಂದು ದಿನ್ನೆಯ ಮೇಲಿದ್ದರೆ, ಇನ್ನೊಂದೆರಡು ಮನೆಗಳು ಮತ್ತೊಂದು ದಿನ್ನೆಯ ಮೇಲಿರುರುತ್ತವೆ. ಇಂತಹ ಅನೇಕ ಗುಂಪುಗಳು ಸೇರಿ ಒಂದು ಗ್ರಾಮವೆನಿಸುತ್ತದೆ. ನದಿ ಮುಖಜ ಭೂಮಿ ಪ್ರದೇಶದಲ್ಲಿಯೂ ಸಹ ಇಂತಹ ಗ್ರಾಮಗಳು ಕಂಡು ಬರುತ್ತವೆ. ಇಂತಹ ಪ್ರದೇಶದಲ್ಲಿ ಜನಸಾಂದ್ರತೆಯೂ ಸಹ ಕಡಿಮೆ ಇರುತ್ತದೆ. ಕರ್ನಾಟಕದ ಶಿವಮೊಗ್ಗ, ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಲ್ಲಿನ ಕೆಲವು ಪ್ರದೇಶಗಳಲ್ಲಿ ಇಂತಹ ಗ್ರಾಮಗಳನ್ನು ಕಾಣಬಹುದು.

ಸಾಲು ಮನೆಗಳ ಗ್ರಾಮಗಳು :

ಇದು ರಸ್ತೆಯ ಎರಡೂ ಬದಿಗೂ ಸಾಲು ಮನೆಗಳು ಕಂಡುಬರುವಂತಹ ನೆಲೆಸುವಿಕೆಯಾಗಿರುತ್ತದೆ. ಎರಡು ಮನೆಗಳ ನಡುವೆ ಒಂದು ಗೋಡೆ ನಿರ್ಮಿತವಾಗಿರುತ್ತದೆ, ಅನೇಕ ಮನೆಗಳು ಒಂದಕ್ಕೊಂದು ಅಂಟಿಕೊಂಡಂತೆ ಕಂಡುಬರುತ್ತವೆ. ಆಂಧ್ರಪ್ರದೇಶ ಮತ್ತು ಒರಿಸ್ಸಾದ ಕರಾವಳಿ ಪ್ರದೇಶಗಳಲ್ಲಿ ಹಾಗೂ ಹಳೆಯ ಹೈದರಾಬಾದ್ ಸಂಸ್ಥಾನದಲ್ಲಿದ್ದ ತೆಲಂಗಾಣ ಜಿಲ್ಲೆಗಳಲ್ಲೂ ಹಾಗೂ ಗುಜರಾತ್ ಕಛ್ ಮತ್ತು ಸೌರಾಷ್ಟ್ರ ಪ್ರದೇಶಗಳಲ್ಲಿಯೂ ಇಂತಹ ಸಾಲುಮನೆಗಳನ್ನು ಹೊಂದಿರುವಂತಹ ಗ್ರಾಮಗಳು ಕಂಡುಬರುತ್ತವೆ.

ಚಕ್ರಾಕಾರದ ಗ್ರಾಮಗಳು :

ಇಂತಹ ಗ್ರಾಮಗಳು ಭಾರತದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲವಾದರೂ ಪಶ್ಚಿಮ ಬಂಗಾಳದ ಕೆಲವೆಡೆ ಕಂಡುಬರುತ್ತವೆ. ಇಂತಹ ಗ್ರಾಮಗಳ ನೆಲೆಸುವಿಕೆಯ ಲಕ್ಷಣವೆಂದರೆ ಕೆರೆ, ದೇವಸ್ಥಾನ, ಚರ್ಚು, ಮಸೀದಿ ಹೀಗೆ ಯಾವುದಾದರೊಂದರ ಸುತ್ತಲೂ ಮನೆಗಳು ಮತ್ತು ಅಂಗಳಗಳು ಚಕ್ರಾಕಾರದಲ್ಲಿ ಸುತ್ತುವರೆದಿರುತ್ತವೆ. ಮನೆಯ ಹಿಂಬದಿಗೆ ಹೊಂದಿಕೊಂಡಂತೆ ಕೃಷಿಯ ಭೂಮಿ ಇರುತ್ತದೆ.

ಕೂಡುದಾರಿಯ ಗ್ರಾಮಗಳು ಮತ್ತು ಮಾರುಕಟ್ಟೆ ಹೊಂದಿರುವಂತಹ ಗ್ರಾಮಗಳು :

ಗ್ರಾಮೀಣ ಭಾರತದ ಪ್ರಮುಖ ಕಸುಬು ಕೃಷಿಯಾಗಿದೆ. ಆದರೂ ಕೆಲವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೃಷಿಯೇತರ ಚಟುವಟಿಕೆಗಳು ಕೂಡ ಅನೇಕ ಗ್ರಾಮಗಳಲ್ಲಿ ಕಂಡುಬರುತ್ತವೆ. ಅನೇಕ ರಸ್ತೆಗಳು ಸೇರುವಂತಹ ಒಂದು ಕೇಂದ್ರ ಪ್ರದೇಶದಲ್ಲಿ ಕಂಡುಬರುವ ನೆಲೆಸುವಿಕೆಯು ಇಂತಹ ಗ್ರಾಮಗಳಿಗೆ ಉದಾಹರಣೆಯಾಗಿದೆ. ಇಂತಹ ಪ್ರದೇಶಗಳಲ್ಲಿ ಅನೇಕ ರೀತಿಯ ಕೃಷಿಯೇತರ ಚಟುವಟಿಕೆಗಳು ನಡೆಯುತ್ತಿರುತ್ತವೆ. ವಾಸಿಸುವ ಮನೆಗಳಲ್ಲದೆ ಊಟ ಪಾನೀಯಗಳನ್ನು ಒದಗಿಸುವಂತಹ ವಿಶ್ರಾಂತಿ ಗೃಹಗಳೂ, ಉಪಾಹಾರ ಮಂದಿರಗಳೂ ಅಂಗಡಿಗಳೂ, ಹಳ್ಳಿಯಲ್ಲಿ ಬೆಳೆದ ಕಾಯಿಪಲ್ಲೆ, ಹಣ್ಣು ಹಂಪಲುಗಳನ್ನು ಮಾರುವ ಅಂಗಡಿಗಳು, ಸಾಲಸೌಲಭ್ಯಗಳನ್ನು ಒದಗಿಸುವಂತಹ ಗ್ರಾಮೀಣ ಬ್ಯಾಂಕುಗಳು ಮುಂತಾದವುಗಳು ಸಾಮಾನ್ಯವಾಗಿ ಸ್ಥಾಪಿಸಲ್ಪಟ್ಟಿರುತ್ತವೆ. ಹೀಗೆ ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳನ್ನು ಇಂತಹ ಗ್ರಾಮಗಳಲ್ಲಿ ಕಾಣಬಹುದು. ಭಾರತದಲ್ಲಿ ಇಂದು ಇಂತಹ ನೆಲೆಸುವಿಕೆಯನ್ನು ಅಧಿಕ ಪ್ರಮಾಣದಲ್ಲಿ ಕಾಣಬಹುದು. ಇಂತಹ ಪ್ರದೇಶದ ಜನರು ನಗರ ಪ್ರದೇಶಗಳೊಂದಿಗೆ ಹೆಚ್ಚಿನ ಸಂಪರ್ಕವನ್ನು ಇಟ್ಟುಕೊಂಡಿರುತ್ತಾರೆ. ಇಂತಹ ಗ್ರಾಮಗಳಲ್ಲಿ ಜನಸಂಖ್ಯೆಯು ಸಹ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

ಈ ಮೇಲಿನ ವಿಶ್ಲೇಷಣೆಯು ಗ್ರಾಮೀಣ ನೆಲೆಸುವಿಕೆಯ ರೀತಿಯನ್ನು ಸ್ಥೂಲ ವಾಗಿ ವಿವರಿಸುತ್ತದೆ. ಭೌತಿಕ ವರ್ಗೀಕರಣದ ಮೇಲೆ ಗ್ರಾಮೀಣ ನೆಲೆಸುವಿಕೆಯ ಮತ್ತೊಂದು ರೀತಿಯ ವಿಶ್ಲೇಷಣೆಯನ್ನು ಇತಿಹಾಸಕಾರರೂ ಮತ್ತು ಸಮಾಜವಿಜ್ಞಾನಿ ಗಳು ನೀಡಿದ್ದಾರೆ. ಅವುಗಳನ್ನು ಮೂರು ವಿಧಗಳಾಗಿ ವರ್ಗೀಕರಿಸಬಹುದು.

1) ತಾತ್ಕಾಲಿಕ ಮತ್ತು ಅಲೆಮಾರಿ ಸಮುದಾಯಗಳು :

ಭಾರತದಲ್ಲಿ ಅನೇಕ ಬುಡಕಟ್ಟು ಜನಾಂಗಗಳಿವೆ. ಈ ಬುಡಕಟ್ಟು ಜನಾಂಗಗಳಲ್ಲಿ ಕೆಲವು ಅಲೆಮಾರಿ ಜನಾಂಗಗಳಾಗಿವೆ. ಇಂತಹ ಕೆಲವು ಆದಿವಾಸಿ ಹಾಗೂ ಅಲೆಮಾರಿ ಜನಾಂಗಗಳು ತಾತ್ಕಾಲಿಕವಾಗಿ ಮಾತ್ರ ಒಂದೆಡೆ ನೆಲೆಸುತ್ತವೆ. ಈ ತಾತ್ಕಾಲಿಕವಾದ ನೆಲೆಯೂ ಕೂಡ ಗ್ರಾಮದ ಸ್ವರೂಪವನ್ನು ಪಡೆಯುತ್ತದೆ. ಈ ರೀತಿಯ ಅಸ್ತಿತ್ವ ವನ್ನು ಪಡೆಯುವಂತಹ ನೆಲೆಸುವಿಕೆಯ ರೀತಿಯನ್ನು ಗ್ರಾಮಗಳೆನ್ನುವುದಕ್ಕಿಂತಲೂ ಪಾಳೆಯಗಳೆನ್ನುವುದು ಹೆಚ್ಚು ಸಮಂಜಸವಾದುದು. ಇಂತಹ ನೆಲೆಸುವಿಕೆಯಲ್ಲಿ ಸಾಮಾನ್ಯವಾಗಿ ಒಂದೇ ಒಂದು ಬುಡಕಟ್ಟು ಅಥವಾ ಮತಪಂಥದ ಜನರನ್ನು ಕಾಣ ಬಹುದು. ಭಾರತದ ಅನೇಕ ಭಾಗಗಳಲ್ಲಿ ಇಂತಹ ಏಕಬುಡಕಟ್ಟು ಗ್ರಾಮಗಳನ್ನು ಕಾಣ ಬಹುದು.

2) ಅರೆಶಾಶ್ವತ ಗ್ರಾಮಗಳು :

ಇಂತಹ ನೆಲೆಸುವಿಕೆಯಲ್ಲಿ ಸಾಮಾನ್ಯವಾಗಿ ಐದು, ಹತ್ತು ವರ್ಷಗಳ ಕಾಲ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಒಂದು ಗುಂಪಿನ ಜನರು ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿ ಕೃಷಿಮಾಡಿ ಅನಂತರ ಆ ಸ್ಥಳವನ್ನು ಬಿಟ್ಟು ಬೇರೆ ಸ್ಥಳಗಳಿಗೆ ಹೋಗಿ ತಮ್ಮ ವೃತ್ತಿಯನ್ನು ಮುಂದುವರಿಸಿ ಕೊಂಡು ಹೋಗುತ್ತಾರೆ. ಇಂತಹ ನೆಲೆಸುವಿಕೆಯು ಸಹ ಭಾರತದ ಆದಿವಾಸಿಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಪ್ರಾಕೃತಿಕ ಅಂಶಗಳು ಕಾರಣವಾಗಿರಬಹುದು. ಒಂದು ಪ್ರದೇಶವು ಕೃಷಿಗೆ ಯೋಗ್ಯವಾಗಿದ್ದು ನೀರು ಹಾಗೂ ಇತರೆ ಪ್ರಾಕೃತಿಕ ಸಂಪತ್ತು ಇದ್ದು ಜೀವನೋಪಾಯಕ್ಕೆ ಸಹಕಾರಿಯಾಗಿರುವಷ್ಟು ಕಾಲ ಆ ಪ್ರದೇಶದಲ್ಲಿ ವಾಸಿಸು ತ್ತಾರೆ. ಆ ಪ್ರದೇಶದಲ್ಲಿ ಪ್ರಾಕೃತಿಕ ವಿಕೋಪಗಳು ಉಂಟಾಗಿ ಬರಗಾಲ ಸಂಭವಿಸಿದಾಗ ಜೀವನೋಪಾಯಕ್ಕೆ ಬೇರೆ ಸೂಕ್ತವಾದ ಪ್ರದೇಶವನ್ನು ಅರಸಿಕೊಂಡು ಹೋಗುತ್ತಾರೆ ಅಥವಾ ಬೇರೆ ರೀತಿಯ ಆರ್ಥಿಕ ಹಾಗೂ ಸಾಮಾಜಿಕ ಕಾರಣಗಳಿಂದಲೂ ಇಂತಹ ನೆಲೆಸುವಿಕೆಯು ಬದಲಾವಣೆ ಹೊಂದಬಹುದು.

3) ಶಾಶ್ವತ ಕೃಷಿ ಸಮುದಾಯಗಳು :

ಕೃಷಿ ಪ್ರಧಾನವಾದ ಭಾರತದಲ್ಲಿ ಇಂತಹ ನೆಲೆಸುವಿಕೆಯು ಹೆಚ್ಚಾಗಿ ಕಂಡು ಬರುತ್ತದೆ. ಇದು ಒಂದು ಗುಂಪಿನ ಶಾಶ್ವತವಾದಂತಹ ನೆಲೆಸುವಿಕೆಯಾಗಿರುತ್ತದೆ ಇಂತಹ ನೆಲೆಸುವಿಕೆಯಲ್ಲಿನ ಜನರು ಒಂದು ಜಾತಿಗೆ ಸೇರಿರಬಹುದು ಅಥವಾ ಬೇರೆ ಬೇರೆ ಜಾತಿಗಳಿಗೆ ಸೇರಿರಬಹುದು ಹಾಗೆಯೇ ಒಂದೇ ಧರ್ಮಕ್ಕೆ ಸೇರಿರಬಹುದು ಅಥವಾ ವಿಭಿನ್ನ ಧರ್ಮಗಳ ಜನರಿರಬಹುದು. ಒಟ್ಟಿನಲ್ಲಿ ಅದು ಶಾಶ್ವತವಾದ ನೆಲೆ ಸುವ ಸಮುದಾಯವನ್ನು ಹೊಂದಿರುತ್ತದೆ. ಇಂತಹ ನೆಲೆಸುವಿಕೆಯನ್ನು ನಿಜವಾದ ಗ್ರಾಮಗಳೆಂದು ಕರೆಯಬಹುದು. ಇಂತಹ ಗ್ರಾಮಗಳಲ್ಲಿ ಕೃಷಿಯು ಪ್ರಧಾನವಾದ ವೃತ್ತಿಯಾಗಿರುತ್ತದೆ. ಭಾರತದಲ್ಲಿ ಬೆಸ್ತರ ಗ್ರಾಮಗಳು, ನೇಕಾರರ, ಬಡಿಗರ ಮುಂತಾದ ಕಸುಬು ಆಧಾರಿತ ಗ್ರಾಮಗಳನ್ನು ಸಹ ಕಾಣಬಹುದು.

ಮಾನವನ ಪ್ರಾರಂಭದ ಹಂತದಲ್ಲಿ ನೆಲೆಸುವಿಕೆಯು ಶಾಶ್ವತವಾಗಿರಲಿಲ್ಲ. ಮಾನವ ಅಲೆಮಾರಿಯಾಗಿದ್ದು ಅವನಿಗೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮನೆಯನ್ನು ಕಟ್ಟಿ ಕೊಂಡು ವಾಸಿಸುವುದು ಅಗತ್ಯವಿರಲಿಲ್ಲ. ಆದರೆ ನಾಗರೀಕತೆಯು ಬೆಳೆದಂತೆ ಮಾನವ ಕೃಷಿಯನ್ನು ಕಂಡುಹಿಡಿದನು. ಕೃಷಿಯು ಬೆಳವಣಿಗೆಯಾದಂತೆ ಅವನು ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿಲ್ಲಬೇಕಾಯಿತು. ಅದೇ ರೀತಿಯಾಗಿ ಭೂಮಿಯನ್ನು ಕಾಲ ಕಾಲಕ್ಕೆ ಪುನರ್ವಿತರಣೆ ಮಾಡುತ್ತಿದ್ದ ಹಂತದಲ್ಲಿ ಜನರು ವ್ಯವಸ್ಥಿತವಾದ ಮನೆಗಳನ್ನು ಕಟ್ಟಲು ಹೆದರುತ್ತಿದ್ದರು. ಈ ಕಾರಣಗಳಿಂದಾಗಿ ಪ್ರಾರಂಭದ ಗ್ರಾಮೀಣ ನೆಲೆಸುವಿ ಕೆಯು ತಾತ್ಕಾಲಿಕವಾಗಿರುತ್ತಿತ್ತು. ಕ್ರಮೇಣ ಮುಂದೆ ಭೂ ಮಾಲೀಕತ್ವ ಶಾಶ್ವತವಾಗಿ ರೈತನು ವೈಯಕ್ತಿಕ ಭೂಮಿಯನ್ನು ಹೊಂದಲು ಪ್ರಾರಂಭಿಸಿದ ಮೇಲೆ ಶಾಶ್ವತವಾದ ನೆಲೆಸುವಿಕೆಯು ಪ್ರಾರಂಭವಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ-4

ಕುಟುಂಬ

ಕುಟುಂಬವು ಸಮಾಜದ ಮೂಲಭೂತ ಸ್ಥಿತಿಯಾಗಿದ್ದು, ಅದು ಚಿಕ್ಕ ಹಾಗೂ ವಿಶಾಲ ಸಮಾಜದ ಶಕ್ತಿಶಾಲಿ ಘಟಕವಾಗಿದೆ. ಭಾರತೀಯ ಕುಟುಂಬವನ್ನು ಅಧ್ಯಯನ ಮಾಡಿದಂತಹ ಸಮಾಜ ವಿಜ್ಞಾನಿಗಳು, ಇದು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆ ಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಇದನ್ನು ಸಮಾಜ ಕೇಂದ್ರವೆಂಬ ಚಕ್ರದ ಬಿಂದುವಾಗಿದೆ ಎಂದು ಹೋಲಿಸಿದ್ದಾರೆ. ನಾವು ಕುಟುಂಬದ ಅಸ್ಥಿತ್ವವಿಲ್ಲದ ಯಾವುದೇ ಸಮಾಜವನ್ನು ಊಹಿಸುವುದು ಕಷ್ಟ. ಕುಟುಂಬವು ಪ್ರಾಥಮಿಕ ಗುಂಪಿನ ಲಕ್ಷಣಗಳನ್ನು ಹೊಂದಿರುವಂತಹ ಇತರೆ ಕೆಲವು ಸಂಸ್ಥೆಗಳಿ ಗಿಂತಲೂ ಹೆಚ್ಚು ಪ್ರಾಮುಖವಾದುದು. ಹಾಗೂ ಅದು ವ್ಯಕ್ತಿಯು ಸಂಪರ್ಕ ಪಡೆಯುವ ಮೊದಲನೆಯ ಸಮೂಹ ಮತ್ತು ಅವನ ಭವಿಷ್ಯದ ಬದುಕಿಗೆ ತಳಪಾಯವನ್ನು ಹಾಕಿ ಕೊಡುತ್ತದೆ. ಆದ್ದರಿಂದ ನಾವು ಯಾವುದೇ ಸಮಾಜದ ಸಾಮಾಜಿಕ ಜೀವನದ ಯಾವುದೇ ವಿಶ್ಲೇಷಣೆಯಲ್ಲಿ ಕುಟುಂಬವನ್ನು ಅಧ್ಯಯನದ ಮೊದಲ ಘಟಕವಾಗಿ ತೆಗೆದುಕೊಳ್ಳಬೇಕು.

ಕುಟುಂಬವು ಸದಾ ಬದಲಾಗುತ್ತಿರುವ ಚಲನಾತ್ಮಕ ಸಂಸ್ಥೆಯಾಗಿದೆ. ಆದ್ದರಿಂದ. ಮೆಕೈವರ್ ಮತ್ತು ಪೇಜ್‌ರವರು ನೇರವಾಗಿ ಕುಟುಂಬವನ್ನು ಒಂದು ಪ್ರಕ್ರಿಯೆ ಯಾಗಿ ವಿವರಿಸಿದ್ದಾರೆ. ಕುಟುಂಬವು ಅನೇಕ ಲಕ್ಷಣಗಳನ್ನು ಹೊಂದಿದೆ. ಆದ್ದರಿಂದಲೇ ಇದನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದು. ಉದಾಹರಣೆಗೆ ಕುಟುಂಬವನ್ನು ಒಂದು ಸಂಸ್ಥೆಯಾಗಿ, ಒಂದು ಸಂಘವಾಗಿ, ಒಂದು ಕಾರ್ಯನಿರ್ವಹಿ ಸುವ ಘಟಕವಾಗಿ ಮತ್ತು ಏಕಾಸನೀಯ ಪ್ರಕ್ರಿಯೆಯಾಗಿ ಅಧ್ಯಯನ ಮಾಡಲು ಸಾಧ್ಯವಿದೆ.

ಕುಟುಂಬ ಎಂದರೇನು ಎಂಬುದಕ್ಕೆ ಅನೇಕ ವಿದ್ವಾಂಸರು ವಿವಿಧ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಈ ವ್ಯಾಖ್ಯೆಗಳಲ್ಲಿ ಪ್ರತಿಯೊಂದು ಕೂಡ ತನ್ನದೇ ಆದಂತಹ ವಿಶಿಷ್ಟತೆ ಯನ್ನು ಹೊಂದಿದ್ದು ಕುಟುಂಬದ ವಿವಿಧ ಅಂಶಗಳನ್ನು ಒತ್ತಿಹೇಳುತ್ತದೆ. ಆದರೂ ಮೆಕೈವರ್ ಮತ್ತು ಪೇಜ್‌ರವರಿಂದ ಕೊಡಲ್ಪಟ್ಟಿರುವ ವ್ಯಾಖ್ಯೆಯು ಬಹಳ ಯಥೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿತವಾದುದು. "ಕುಟುಂಬವು ಲೈಂಗಿಕ ಸಂಬಂಧದಿಂದ ಸ್ಪಷ್ಟಪಡಿಸಲ್ಪಟ್ಟು, ಸಾಕಷ್ಟು ಖಚಿತವಾದ, ಮಕ್ಕಳನ್ನು ಪಡೆಯಲು ಮತ್ತು ಪೋಷಿಸಲು ಅವಕಾಶ ಮಾಡಿಕೊಡು ವಂತಹ ಒಂದು ಸಾಮಾಜಿಕ ವ್ಯವಸ್ಥೆ" ಅವರು ಕುಟುಂಬದ ಮುಖ್ಯ ಲಕ್ಷಣಗಳನ್ನು ಸಹ ಕೊಟ್ಟಿದ್ದಾರೆ :

1) ಲೈಂಗಿಕ ಸಂಬಂಧ 2) ವಿವಾಹದ ಒಂದು ಮಾದರಿ ಅಥವಾ ದಾಂಪತ್ಯ ಸಂಬಂಧ ಹೇಗೆ ಸ್ಥಾಪಿಸಲ್ಪಡಬೇಕು ಮತ್ತು ನಿರ್ವಹಿಸಲ್ಪಡಬೇಕು ಎಂಬುದರ ಸಾಂಸ್ಥಿಕ ವ್ಯವಸ್ಥೆಯಾಗಿದೆ. 3) ಮನೆತನದ ಹೆಸರನ್ನು ಕೊಡುವಂತಹ ವ್ಯವಸ್ಥೆ ಹಾಗೂ ಸಂತತಿಯನ್ನು ನಿರ್ದಿಷ್ಟಪಡಿಸುವಂತಹ ಪದ್ಧತಿ 4) ಸಮೂಹದ ಸದಸ್ಯ ರಿಂದ ಆರ್ಥಿಕ ಅವಕಾಶಗಳು ಹಂಚಲ್ಪಡುತ್ತವೆ. ಆದರೆ ಮಕ್ಕಳನ್ನು ಪಡೆಯುವುದು ಮತ್ತು ಕಾಪಾಡುವುದಕ್ಕೆ ಸಂಬಂಧಿಸಿದಂತಹ ಆರ್ಥಿಕ ವಿಷಯಗಳಿಗೆ ವಿಶೇಷ ನಿಯಮ ವಿರುತ್ತದೆ. 5) ಸಾಮಾನ್ಯವಾಗಿ ಒಂದು ಸಾಮಾನ್ಯ ವಾಸಸ್ಥಳ ಅಥವಾ ಮನೆ ಅಥವಾ ಸಂಸಾರ ಕೌಟುಂಬಿಕ ಸಮೂಹಕ್ಕೆ ಪ್ರತ್ಯೇಕವಾಗಿರುವುದಿಲ್ಲ.

ಉಗಮ ಮತ್ತು ಬೆಳವಣಿಗೆ

ಕುಟುಂಬದ ಉಗಮ ಮತ್ತು ಬೆಳವಣಿಗೆಯ ಬಗ್ಗೆ ಅನೇಕ ಸಿದ್ಧಾಂತಗಳು ಪ್ರತಿ ಪಾದಿಸಲ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದುದೊಂದನ್ನು ಇಲ್ಲಿ ವಿವರಿಸಲಾಗಿದೆ. ಮಾರ್ಗನ್ ಎಂಬ ಶ್ರೇಷ್ಠ ಸಮಾಜವಿಜ್ಞಾನಿ ಸಾಮಾಜಿಕ ಸಂಸ್ಥೆಗಳ ಉಗಮ ಮತ್ತು ಬೆಳವಣಿಗೆಯನ್ನು ಕುರಿತು ಅಧ್ಯಯನ ಮಾಡಿದ್ದಾನೆ. ಇವನು ಡಾರ್ವಿನ್‌ನಿಂದ ಸ್ಫೂರ್ತಿ ಪಡೆದು, ಸಾಮಾಜಿಕ ಸಂಸ್ಥೆಗಳ ಉಗಮ ಮತ್ತು ಬೆಳವಣಿಗೆಯನ್ನು ವಿಕಾಸ ಸಿದ್ಧಾಂತ ವನ್ನು ಅನ್ವಯಿಸಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾನೆ. ಆದ್ದರಿಂದ ಇವನ ಸಿದ್ಧಾಂತವನ್ನು ವನ್ನು ಸಾಮಾಜಿಕ ಡಾರ್ವಿನ್ ಸಿದ್ಧಾಂತ ಎಂದು ವರ್ಣಿಸಲಾಗಿದೆ. ಡಾರ್ವಿನಂತೆ ಮಾರ್ಗನ್ ಕೂಡ ಕ್ರಿಶ್ಚಿಯನ್ ಸೃಷ್ಟಿವಾದದ ಪ್ರಕಾರ ವಿಶ್ವವು ಮಾನವನನ್ನು ಸೃಷ್ಟಿ ಮಾಡಿದ ದೇವರಿಂದ ಸೃಷ್ಟಿಸಲ್ಪಟ್ಟಿದೆ ಎಂಬುದನ್ನು ಅನಿವಾರ್ಯವಾಗಿ ವಿರೋಧಿಸಿದನು. ಅದೇ ರೀತಿಯಲ್ಲಿ ಸಾಮಾಜಿಕ ಸಂಸ್ಥೆಗಳು ದೈವಿಕ ಸೃಷ್ಟಿ, ಆದ್ದರಿಂದಲೇ ಅವು ಪವಿತ್ರವಾದವು ಗಳು ಎಂಬುದನ್ನು ಸಹ ಒಪ್ಪಿಕೊಳ್ಳಲಿಲ್ಲ. ಈತನು ಸಾಮಾಜಿಕ ಸಂಸ್ಥೆಗಳು ದೈವೀ ಸೃಷ್ಟಿಯಲ್ಲಿ ಮಾನವನಂತೆ ಕ್ರಮಾನುಗತವಾಗಿ ವಿಕಸಿತವಾದವುಗಳು ಎಂಬುದಾಗಿ ನಂಬಿ ದ್ದನು.

ಮಾರ್ಗನ್,[3] ಕೆಲವು ಬುಡಕಟ್ಟು ಸಮಾಜಗಳಾದ ಮಧ್ಯೆ ಆಸ್ಟ್ರೇಲಿಯಾದ ಅಬಾರಿಜಿನೆಸ್ ಮತ್ತು ಟೊಬ್ರಿಯಾಂಡ್ ದ್ವೀಪಗಳ ಜನರಲ್ಲಿ ಇನ್ನೂ ಸಹ ಕೆಲವು ವಿಚಿತ್ರ ರೂಢಿ ಮತ್ತು ಆಚರಣೆಗಳಾದಂತಹ ಹಬ್ಬದ ದಿನಗಳಲ್ಲಿ ಲೈಂಗಿಕ ಸ್ವೇಚ್ಛಾಚಾರ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪತ್ನಿಯರ ವಿನಿಮಯ, ಆಥಿತ್ಯಕ್ಕೆ ಪತ್ನಿಯರನ್ನು ಒಪ್ಪಿಸುವುದು ಮೊದಲಾದುವುಗಳು ಉಳಿದಿರುವುದನ್ನು ಗುರುತಿಸಿದ್ದಾರೆ. ಹೀಗಿದ್ದರೂ ಈ ಸಮಾಜಗಳಲ್ಲಿಯೂ ಕೂಡ ತಾರತಮ್ಯವಿಲ್ಲದೆ ನಿರ್ದಿಷ್ಟ ವಯೋಗುಂಪಿನ ಸದಸ್ಯರನ್ನು ತಂದೆ, ತಾಯಿ, ಅಣ್ಣ ತಮ್ಮಂದಿರು ಮತ್ತು ಅಕ್ಕತಂಗಿಯರು ಎಂದು ಕರೆಯುತ್ತಾರೆ. ಈ ಆಧಾರದ ಮೇಲೆ ಇವರು ಸಾಮಾಜಿಕ ಸಂಸ್ಥೆಗಳು ಒಂದು ಕಾಲದಲ್ಲಿ ಅಸ್ತಿತ್ವದಲ್ಲಿರದಿದ್ದಂತಹುಗಳು ಕ್ರಮೇಣ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ನಿಧಾನವಾಗಿ ವಿಕಾಸ ಹೊಂದುತ್ತವೆ ಎಂಬ ಊಹೆಗೆ ಬರುತ್ತಾರೆ.

ಮಾರ್ಗನ್‌ನ ಕುಟುಂಬದ ವಿಕಾಸ ಸಿದ್ಧಾಂತದ ಸಾರಾಂಶವು ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ.

ಲೈಂಗಿಕ ಸ್ವೇಚ್ಛಾಚಾರ :

ಪುರಾತನ ಸರಳ ಸಮಾಜಗಳಲ್ಲಿ ಸಾಮಾಜಿಕ ಸಂಸ್ಥೆಗಳು ಇರಲೇ ಇಲ್ಲ. ಮಾನವನ ನಾಗರೀಕತೆಯ ಪ್ರಾರಂಭದ ಈ ಹಂತಗಳಲ್ಲಿ ವಾಸಿಸುತ್ತಿದ್ದಂತಹವರು, ಅತೀಮೂಲ ಭೂತ ಸಂಸ್ಥೆಯಾದ ಕುಟುಂಬವನ್ನು ಸಹ ಅಭಿವೃದ್ಧಿಪಡಿಸಲಿಲ್ಲ. ಅಲೆಮಾರಿ ಗುಂಪುಗಳಲ್ಲಿ ವಾಸವಾಗಿದ್ದಂತಹ ಅಂದಿನ ಮಾನವ ಲೈಂಗಿಕ ಸ್ವೇಚ್ಛಾಪರ ಸಂಬಂಧಗಳನ್ನು ಹೊಂದಿದ್ದನು. ಪ್ರಾಚೀನ ಕುಟುಂಬಗಳಲ್ಲಿ ಅನೂನ್ಯ ಲೈಂಗಿಕ ಸಂಪರ್ಕವಿದ್ದಿತು. ಅಂದರೆ ಸ್ತ್ರೀಪುರುಷರ ಲೈಂಗಿಕ ಚಟುವಟಿಕೆಗಳ ಮೇಲೆ ಸಂಪೂರ್ಣವಾಗಿ ಯಾವುದೇ ರೀತಿಯ ನಿರ್ಬಂಧವಿರಲಿಲ್ಲ.

ಕಾನ್‌ಸ್ಯಾನ್‌ಗೂನ್ ಕುಟುಂಬ ಅಥವಾ ರಕ್ತಸಂಬಂಧದಿಂದ ಉಂಟಾದ ಕುಟುಂಬ :

ಇದು ಕುಟುಂಬದ ವಿಕಾಸದಲ್ಲಿ ಮೊದಲನೆಯ ಹಂತವಾಗಿದೆ. ಈ ಹಂತದಲ್ಲಿ ಜನರ ಲೈಂಗಿಕ ಚಟುವಟಿಕೆಗಳ ಮೇಲೆ ಕೆಲವು ನಿರ್ಬಂಧಗಳನ್ನು ಹಾಕಲಾಯಿತು. ಹಿಂದೆ ಇದ್ದಂತಹ ತಂದೆತಾಯಿಯವರು ಮತ್ತು ಮಕ್ಕಳ ನಡುವಿನಲೈಂಗಿಕ ಸಂಬಂಧವನ್ನು ನಿಷೇಧಿಸಲಾಯಿತು. ಹೀಗಿದ್ದಾಗೂ ಸೋದರ-ಸೋದರಿಯರ ನಡುವಿನ ಲೈಂಗಿಕ ಸಂಬಂಧ ಮುಂದುವರಿಯಿತು. ಸೋದರ-ಸೋದರಿಯರನಡುವಿನ ಲೈಂಗಿಕ ಸಂಬಂಧದ ಆಧಾರದ ಮೇಲಿನ ಕುಟುಂಬದ ಮಾದರಿಯನ್ನು ಕಾನ್‌ಸನ್‌ಗ್ಯೂನ್ ಕುಟುಂಬ ಎಂದು ಕರೆಯಲಾಯಿತು. ಅಂದರೆ ಒಂದೇ ರಕ್ತಸಂಬಂಧದ ಕುಟುಂಬ.

ಪುನಲ್ಯೂಯನ್ ಕುಟುಂಬ :

ಮಾನವನ ನಾಗರೀಕತೆಯು ಅಭಿವೃದ್ಧಿ ಹೊಂದಿದಂತೆ ಅವನ ಲೈಂಗಿಕ ಚಟು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಚಟುವಟಿಕೆಗಳ ಮೇಲೆ ಹೆಚ್ಚು ಹೆಚ್ಚು ನಿರ್ಬಂಧಗಳನ್ನು ವಿಧಿಸಲಾಯಿತು. ಈ ಎರಡನೆಯ ಹಂತದ ಅವಧಿಯಲ್ಲಿ ಲೈಂಗಿಕ ಚಟುವಟಿಕೆಗಳ ಮೇಲೆ ಹೆಚ್ಚು ನಿರ್ಬಂಧಗಳನ್ನು ಹಾಕಲಾಯಿತು ಮತ್ತು ಸೋದರ ಸೋದರಿಯರ ನಡುವಿನ ಲೈಂಗಿಕ ಸಂಬಂಧವನ್ನು ನಿಷೇಧಿಸಲಾಯಿತು. ಹೀಗಿದ್ದರೂ ಒಂದು ಕುಟುಂಬದ ಸೋದರರು ಒಟ್ಟಿಗೆ ಬೇರೊಂದು ಕುಟುಂಬದ ಸೋದರಿಯರ ಗುಂಪನ್ನು ಯಾವುದೇ ನಿರ್ಬಂಧವಿಲ್ಲದೆ ಮದುವೆಯಾಗುವಂತಹ ಪದ್ಧತಿ ಆಚರಣೆಗೆ ಬಂತು. ಈ ರೀತಿ ವಿವಾಹ ಸಂಬಂಧದ ಆಧಾರದ ಮೇಲೆ ರೂಪಿತವಾದ ಕುಟುಂಬವನ್ನು ಪುನಲ್ಯೂಯನ್ ಕುಟುಂಬ ಎಂದು ಕರೆಯಲಾಯಿತು.

ಸಿಂಡ್ಯಾಸ್ಮಿಯನ್ ಕುಟುಂಬ :

ವಿಕಾಸದ ಈ ಹಂತದಲ್ಲಿ ಏಕಪತಿ ಮತ್ತು ಏಕಪತ್ನಿ ದಾಂಪತ್ಯದ ವಿವಾಹದ ಮಾದರಿಯು ಆಚರಣೆಗೆ ಬಂತು. ಹೀಗಿದ್ದಾಗ್ಯೂ ಈ ಹಂತದಲ್ಲಿಯೂ ಕೂಡ ದಾಂಪತ್ಯ ಸಂಬಂಧದ ಮೇಲೆ ಸರಿಯಾದ ನಿರ್ಬಂಧವಿರಲಿಲ್ಲ ವಿವಾಹಪೂರ್ವ ಮತ್ತು ದಾಂಪತ್ಯದ ಹೊರಗಿನ ಲೈಂಗಿಕ ಚಟುವಟಿಕೆಗಳು ಅಸ್ತಿತ್ವದಲ್ಲಿದ್ದವು. ಮುಂದೆ ಇದು ಏಕಸಂಗಾತಿ ಕುಟುಂಬದ ಅಸ್ತಿತ್ವಕ್ಕೆ ಎಡೆಮಾಡಿಕೊಟ್ಟಿತು.

ಏಕ ಸಂಗಾತಿ ಕುಟುಂಬಗಳು :

ಏಕಪತ್ನಿ ಮತ್ತು ಏಕಪತಿ ದಾಂಪತ್ಯದ, ನಿಯಮ ನಿಬಂಧನೆಗಳಿಗೊಳಪಟ್ಟು ಸೇರುವಿಕೆಯ ಈ ಹಂತವು ವಿಕಾಸನೀಯ ಗತಿಯ ಕೊನೆಯ ಹಂತವಾಗಿದೆ. ಏಕಸಂಗಾತಿ ದಾಂಪತ್ಯ ಪದ್ಧತಿಯಲ್ಲಿ ದಾಂಪತ್ಯದ ಹೊರಗಿನ ಲೈಂಗಿಕ ಸಂಬಂಧಗಳಿಗೆ ಅವಕಾಶವಿಲ್ಲ.

ಮಾರ್ಗನ್‌ರವರ ಈ ವಿಕಾಸವಾದದ ಸಿದ್ಧಾಂತವು ಅನೇಕರಿಂದ ಕಟುವಾಗಿ ಟೀಕಿಸಲ್ಪಟ್ಟಿದೆ. ಡಾರ್ವಿನ್ ಸಿದ್ಧಾಂತವನ್ನು ವಿರೋಧಿಸಿ, ತಮ್ಮದೇ ಆದ ಸಿದ್ಧಾಂತವನ್ನು ರೂಪಿಸಿ ಪ್ರಚಾರ ಮಾಡಲು ಅಸಮರ್ಥರಾಗಿದ್ದಂತಹ ಕ್ರೈಸ್ತಮತ ಧರ್ಮಶಾಸ್ತ್ರಜ್ಞರು ಮಾರ್ಗನ್‌ನನ್ನು 'ಒಬ್ಬ ನಾಸ್ತಿಕ, ಲೈಂಗಿಕ ಸ್ವೇಚ್ಛಾಪರತೆಯಲ್ಲಿ ಮಾನವ ಬದುಕುತ್ತಿದ್ದ ಎಂದು ಹೇಳಿ ವಿವಾಹದ ಪಾವಿತ್ರ್ಯತೆಯನ್ನೇ ಸುಳ್ಳೆಂದು. ತನ್ನ ಸಿದ್ಧಾತವನ್ನು ಮಂಡಿಸಿದ ಕೆಟ್ಟ ಅಂತರ್ಯವುಳ್ಳವನು.' ಎಂದು ಧಾರ್ಮಿಕ ನಾಯಕರುಗಳ ಜೊತೆಗೆ ಕೆಲವು ಸಮಾಜ ವಿಜ್ಞಾನಿಗಳೂ ಕೂಡ ಟೀಕಿಸಿದ್ದಾರೆ. ಅವರು ಮಾನವ ಒಂದು ಕಾಲದಲ್ಲಿ ಲೈಂಗಿಕ ಸ್ವೇಚ್ಛಾಪರತೆಯಲ್ಲಿ ಬದುಕಿದ್ದ ಎಂಬ ದೃಷ್ಟಿಕೋನವನ್ನು ವಿರೋಧಿಸಿದರು. ಅವರು ಪವಿತ್ರತೆ ಮನುಷ್ಯನ ಸ್ವಭಾವ, ಇದರಿಂದಾಗಿಯೇ ಮಾರ್ಗನ್ ಮಾನವನನ್ನು ತುಚ್ಛೀಕರಿಸುವಂತಹ ಸಿದ್ಧಾಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವವನ್ನು ಮಂಡಿಸಿದ್ದಾನೆ ಎಂದು ಟೀಕಿಸಿದರು. ಸಸ್ತನಿಗಳಾದ ಮಂಗ ಮತ್ತು ಚಿಂಪಾಂಜಿಗಳಲ್ಲಿಯೂ ಸಹ ಕೌಟುಂಬಿಕ ಜೀವನವನ್ನು ಕಾಣಬಹುದಾಗಿದೆ. ಮನುಷ್ಯ ಸೃಷ್ಟಿಯ ಇತರೆ ಜೀವಿಗಳಿಗಿಂತಲೂ ಶ್ರೇಷ್ಠನಾದವನು. ಸಾಮಾಜಿಕ ಪರಿಣಾಮ ವಾದ ಕುಟುಂಬವು ಒಂದಲ್ಲ ಒಂದು ರೀತಿಯಲ್ಲಿ ಮಾನವ ಸಮಾಜದಲ್ಲಿ ಯಾವಾಗಲೂ ಕಂಡುಬಂದಿದೆ ಎಂದು ಪ್ರತಿಪಾದಿಸಿ, ಮಾರ್ಗನ್ ಸಿದ್ಧಾಂತವನ್ನು ಉಗ್ರವಾಗಿ ಟೀಕಿಸಿ ಯಾವುದೇ ವಿವೇಕಪೂರ್ಣ ವಿಚಾರವನ್ನುಹೊಂದಿಲ್ಲದ ಒಂದು ಕಾಲ್ಪನಿಕ ಹೇಳಿಕೆ ಎಂದು ನಿರಾಕರಿಸಿದರು. ಮೇಲಾಗಿ ಮಾರ್ಗನ್ ಒಬ್ಬ "ಆರಾಮ ಕುರ್ಚಿಚಿಂತಕ ಅವನು ಇಂತಹ ಸಿದ್ಧಾಂತವನ್ನು ರೂಪಿಸಿ ಸಮರ್ಥಿಸುವಲ್ಲಿ ವಿಫಲನಾದ ಮತ್ತು ಅವನು ನಾಸ್ತಿಕನಾಗಿದ್ದುದರಿಂದ ಈ ರೀತಿ ಬರೆದಿದ್ದಾನೆ" ಎಂದು ಅವನ ಸಿದ್ಧಾಂತ ವನ್ನು ಅಲ್ಲಗಳೆದರು.

ಸರಳ ಸಮಾಜಗಳಲ್ಲಿಯೂ ಕೂಡ ಕುಟುಂಬವು ಒಂದಲ್ಲ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿದ್ದಿತೆಂದು ಸಾಬೀತಾಗಿದೆ. ಬಂಧುತ್ವದ ವರ್ಗೀಕರಣವು ಹೊರಬಾಂದವ್ಯ ವನ್ನು ನಿಯಂತ್ರಿಸಲು ಸಾಂಪ್ರದಾಯಿಕವಾದಂತಹ ಸಲಹೆಯಾಯಿತೇ ಹೊರತು ಶಾರೀರಿಕ ಪಿತೃತ್ವದ ಅರಿವಿಲ್ಲದಿರುವಿಕೆಯನ್ನು ತೋರಿಸಲೋಸುಗ ಬಂದದ್ದಲ್ಲ, ಕೆಲವು ಸಮಾಜಗಳಲ್ಲಿ ಲೈಂಗಿಕ ಸಂಬಂಧಗಳ ನಿಯಮಗಳಲ್ಲಿ ಸಡಿಲಿಕೆ ಮತ್ತು ವಿವಾಹ ಪೂರ್ವ ಲೈಂಗಿಕ ಸಂಬಂಧಗಳು ಅಸ್ತಿತ್ವದಲ್ಲಿರುವುದು ಕಂಡುಬಂದರೂ ಸಹ ಅವರಲ್ಲಿ ಲೈಂಗಿಕ ಸ್ವೇಚ್ಛಾಪರತೆ ಇತ್ತು ಎಂದು ಹೇಳಲಾಗುವುದಿಲ್ಲ. ಪ್ರಾಚೀನ ಜನತೆಯು ಆಗಾಗ್ಗೆ ವಿವಾಹ ಪದ್ಧತಿಯ ಕೆಲವು ಕಟ್ಟುನಿಟ್ಟಾದ ನಿಯಮಾವಳಿಗಳಿಂದ ಹೆಚ್ಚಾಗಿ ನಿರ್ದೇಶಿಸ ಲ್ಪಡುತ್ತಿದ್ದರು.

ಮಾರ್ಗನ್ ಸಿದ್ಧಾಂತದಲ್ಲಿ ಏನೇ ನ್ಯೂನತೆಗಳಿದ್ದರೂ ಕೂಡ ಅವನನ್ನು ಆರಾಮ ಕುರ್ಚಿ ಚಿಂತಕ ಎಂದು ಹೇಳಲಾಗುವುದಿಲ್ಲ. ಅವನ ಕಾಲದಲ್ಲಿ ಕ್ಷೇತ್ರ ಅಧ್ಯಯನವು ತುಂಬಾ ಕಷ್ಟದಾಯವಾಗಿದ್ದಿತು. ಮಾರ್ಗನ್ ತನ್ನ ಚಿಂತನೆಯ ಹೆಚ್ಚು ಕಾಲವನ್ನು ಆದಿಮ ಸಮೂಹಗಳ ಬಗ್ಗೆ ಆ ಸಮಾಜಗಳಲ್ಲಿ ಪ್ರಚಲಿತಲ್ಲಿದ್ದಂತಹ ಸಾಮಾಜಿಕ ಸಂಸ್ಥೆ ಗಳ ಹೊಸ ಮಾಹಿತಿಗಳನ್ನು ಸಂಗ್ರಹಿಸಿದನು.

ಎಡ್‌ವರ್ಡ್ ವೆಸ್ಟರ್ ಮಾರ್ಕ್ ಎಂಬುವರು "History of Human Marriage" ಎಂಬ ತಮ್ಮ ಪುಸ್ತಕದಲ್ಲಿ ಕುಟುಂಬದ ವಿಕಾಸಕ್ಕೆ ಸಂಬಂಧಿಸಿದ ಮಾರ್ಗನ್‌ರವರ ಸಿದ್ಧಾಂತವನ್ನು ಬೆಂಬಲಿಸಿದ್ದಾರೆ, ಅವರು ಕುಟುಂಬವು ಹೊಂದು ವಿಕೆ ಮತ್ತು ಅಸೂಯೆ ಈ ಎರಡು ಅಂಶಗಳ ಕಾರಣದಿಂದಾಗಿ ರೂಪಗೊಂಡಿತು ಎಂದು ಬರೆಯುತ್ತಾರೆ. "ಪ್ರಭಲನಾದ ಗಂಡಸು ತನ್ನ ಸಂಗಾತಿಯನ್ನು ಪ್ರತ್ಯೇಕ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವಾಗಿ ಹೊಂದಿ ಅವಳ ಮೇಲೆ ತನ್ನ ಏಕಸ್ವಾಮ್ಯತೆಯನ್ನು ಹೇರಿದನು. ಕಾಲಾಂತರದಲ್ಲಿ ಇದು ಏಕಸಂಗಾತಿ ಕುಟುಂಬದೊಡನೆ ಸೇರಿಕೊಂಡು ಒಂದು ಸಂಪ್ರದಾಯ (ಪದ್ಧತಿ)ವಾಗಿ ಪರಿಣಮಿಸಿತು. ಅಸೂಯೆ ಮತ್ತು ಹೊಂದುವಿಕೆ ಇವುಗಳು ಏಕಸಂಗಾತಿ ಕುಟುಂಬದ ವಿಕಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರಲ್ಲಿ ಸಂದೇಹವಿಲ್ಲ'' ಎಂದು ಅಭಿಪ್ರಾಯಪಡುತ್ತಾರೆ.

ರಾಬರ್ಟ್ ಬ್ರಿಫಾಲ್ಟ್‌ರವರು 'The Mothers'ಪುಸ್ತಕದಲ್ಲಿ ವೆಸ್ಟ್‌ರ್‌ಮಾರ್ಕ್‌ರವರ ವಾದವನ್ನು ತಳ್ಳಿ ಹಾಕಿದ್ದಾರೆ. ಅವರು ಪ್ರಾರಂಭದಲ್ಲಿ ಕುಟುಂಬವು ತಾಯಿ ಮತ್ತು ಅವಳ ಮಕ್ಕಳ ಮೂಲಭೂತ ಆವಶ್ಯಕತೆಗಳಾದ ಆರ್ಥಿಕ, ಸಾಮಾಜಿಕ ರಕ್ಷಣೆಯಿಂದಾಗಿ ಹುಟ್ಟಿತು ಎಂದು ವಾದಿಸುತ್ತಾರೆ, ಇವುಗಳನ್ನು ಅವಳಷ್ಟಕ್ಕೆ ಅವಳು ಪಡೆಯಲು ದೈಹಿಕವಾಗಿ ಅಸಮರ್ಥಳಾದ ಕಾರಣದಿಂದಾಗಿ ಗಂಡಸನ್ನು ಆಶ್ರಯಿಸಿ ಕುಟುಂಬ ಜೀವನದ ಬಲೆಯಲ್ಲಿ ಆತನೊಡನೆ ಬಂದಿಸಲ್ಪಟ್ಟಳು. ಆದ್ದರಿಂದ ಪ್ರಾಚೀನ ಕುಟುಂಬಗಳಲ್ಲಿ ಹೆಚ್ಚು ಸ್ಥಾನಮಾನ ಮತ್ತು ಅಧಿಕಾರವನ್ನು ಹೊಂದಿ ಅನುಭವಿಸುತ್ತಿದ್ದವಳು ತಾಯಿಯೇ ಹೊರತು ತಂದೆಯಲ್ಲ. ಗಂಡಸರಲ್ಲಿ ಪಿತೃತ್ವದ ಬಗ್ಗೆ ಅರಿವಿಲ್ಲದಿದ್ದುದರಿಂದ ಈ ಸ್ಥಾನವನ್ನು ಆಕೆ ಹೊಂದಿದ್ದಳು. ಇದರ ಪರಿಣಾಮವಾಗಿ ಮಾತೃಪ್ರಧಾನ ಕುಟುಂಬವು ಮೊದಲು ಉಗಮವಾಯಿತು. ನಂತರ ಕೃಷಿಯ ಬೆಳವಣಿಗೆಯಿಂದಾಗಿ ಮತ್ತು ಗಂಡಸಿನ ಆರ್ಥಿಕ ಪ್ರಾಧಾನ್ಯತೆಯ ಪರಿಣಾಮ, ಹಾಗೂ ಪಿತೃತ್ವದ ಅರಿವಿನಿಂದಾಗಿ ಪಿತೃಪ್ರಧಾನ ಕುಟುಂಬವು ಉದಯವಾಯಿತು.

ಬ್ರಿಫಾಲ್ಟ್‌ರವರ ಸಿದ್ಧಾಂತವು ಕೂಡ ಟೀಕೆಗೆ ಒಳಗಾಯಿತು. ಇವರು ಕುಟುಂಬದ ಉಗಮವನ್ನು ಸಹಜ ಪ್ರವೃತ್ತಿಯ ಆಧಾರದ ಮೇಲೆ ವಿವರಿಸಿ ಸಂಕೀರ್ಣ ಪ್ರವೃತ್ತಿಯನ್ನು ಹೆಚ್ಚು ಸಂಕ್ಷಿಪ್ತಗೊಳಿಸಿದ್ದಾರೆ. ಅಥವಾ ಮಾತೃಪ್ರಧಾನ ಕುಟುಂಬದಿಂದ, ಪಿತೃಪ್ರಧಾನ ಕುಟುಂಬವಾಗಿ ಬೆಳವಣಿಗೆಯಾಯಿತು ಎಂದು ವಿವರಿಸಿದ್ದಾರೆ. ಇತ್ತೀಚಿನ ಅಧ್ಯಯನಗಳು, ಮಧ್ಯ ಆಸ್ಟ್ರೇಲಿಯಾದ ಅಬಾರಿಜಿನೆಸ್ ಸರಳ ಸಮೂಹಗಳನ್ನು ಅವಲೋಕಿಸಿದಂತಹ ಒಂದೇ ದಿಕ್ಕಿನ ಸಿದ್ಧಾಂತವು ಕುಟುಂಬದ ಬೆಳವಣಿಗೆಯನ್ನು ವಿವರಿಸಲಾರದು ಎಂಬುದನ್ನು ತೋರಿಸಿವೆ. ಮೊದಲೇ ತಿಳಿಸಿದಂತೆ ಫಿಲಿಪೈನ್‌ನ ನೆಗ್ರಿಟೋಸ್ ಎಂಬ ಬುಡಕಟ್ಟಿನ ಜನರೂ ಪಿತೃಪ್ರಧಾನ ಪದ್ಧತಿಯನ್ನು ಹೊಂದಿದ್ದರು. ಹಾಗೆಯೆ ಹೆಚ್ಚು ಅಭಿವೃದ್ಧಿ ಹೊಂದಿದಂತಹ ಕೇರಳದ ಕೊಯಾಸ್ (Koyas) ರಂತಹವರು ಮಾತೃ ಪ್ರಧಾನ ಕುಟುಂಬಗಳನ್ನು ಹೊಂದಿದ್ದಾರೆ, ಆದ್ದರಿಂದ ಇಂತಹ ವಿರಳ ಸಾಕ್ಷಿಗಳಿಂದ ಬ್ರಿಫಾಲ್ಟ್‌ರ ಸಿದ್ಧಾಂತವು ಸಂಪೂರ್ಣವಾಗಿ ಕುಟುಂಬದ ಉಗಮವನ್ನು ವಿವರಿಸುತ್ತದೆ ಎಂದು ಹೇಳಲಾಗುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗಿದ್ದರೂ ಆಧುನಿಕ ಚಿಂತಕರು ಕುಟುಂಬದ ಉಗಮ ಮತ್ತು ಬೆಳವಣಿಗೆ ಯನ್ನು ವಿವರಿಸುವ ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿಲ್ಲ. ಯಾವುದೇ ಒಂದು ನಿರ್ಧಿಷ್ಟವಾದ ಸಂಸ್ಥೆಯ ಉಗಮವನ್ನು ಕುರಿತು ವಿವರಿಸುವುದು ಕಷ್ಟಕರವಾದುದು. ಏಕೆಂದರೆ ಅನೇಕ ಸಾಮಾಜಿಕ ಶಕ್ತಿಗಳು ಆ ಒಂದು ನಿರ್ಧಿಷ್ಟ ಸಂಸ್ಥೆಯ ಒಳಗೆ ಸೇರಿ ಕೊಂಡು ಕೆಲಸಮಾಡಿ ಕತ್ತಲೆಯಿಂದ ಬೆಳಕಿನ ಕಡೆಗೆ, ಸಂಪೂರ್ಣ ಸಂಸ್ಥೆಗಳ ಆಕಾರ ವನ್ನು ಪಡೆಯುವ ಮಾದರಿಯವರೆಗೂ ಕಾರ್ಯನಿರ್ವಹಿಸುತ್ತವೆ. ಮಾನವಕುಲದ ಇತಿ ಹಾಸದ ಬಹುದೂರದವರೆಗೂ ಪರಿಶೀಲಿಸಿದಾಗ ಕುಟುಂಬವು ಒಂದಲ್ಲ ಒಂದು ರೀತಿ ಯಲ್ಲಿ ಅಸ್ತಿತ್ವದಲ್ಲಿದ್ದದ್ದು ಕಂಡುಬರುತ್ತದೆ. ಇದು ವಾಸ್ತವ. ಹೀಗೆ ಕುಟುಂಬವು ಹೆಚ್ಚು ಕಡಿಮೆ ಮಾನವ ಸಮಾಜದಷ್ಟೇ ಪುರಾತನವಾದುದು. ಯಾವಾಗ ಮಾನವ ಸಮಾಜ ಹುಟ್ಟಿತೋ ಆವಾಗಲೇ ಕುಟುಂಬವು ಸಹ ಜನ್ಮತಾಳಿತು. ಕುಟುಂಬ ವನ್ನು ಒಂದೇ ಒಂದು ಮಾನವ ಲಕ್ಷಣದ ಆಧಾರದ ಮೇಲೆ ವಿವರಿಸುವುದು ಕಷ್ಟ ವಾದುದು. ಕುಟುಂಬವು ಹೆಚ್ಚು ಶಕ್ತಿಶಾಲಿ ಮತ್ತು ಮೂಲಭೂತವಾದುದು. ಇದು ಮಾನವನ ವಿವಿಧ ಬೇಡಿಕೆ ಮತ್ತು ಅವಶ್ಯಕತೆಗಳನ್ನು ಒದಗಿಸುವ ಸಾಧನ ವಾಗಿದೆ, ಅವನ ದೈಹಿಕ. ಮಾನಸಿಕ ಮತ್ತು ಆಧ್ಯಾತ್ಮಿಕ ಅವಶ್ಯಕತೆಗಳನ್ನು ಕೂಡ ಪೂರೈಸುತ್ತದೆ.

ಕುಟುಂಬದ ವಿಧಗಳು

ನಾವು ಕುಟುಂಬಗಳನ್ನು ನಿಯಮಗಳ ಆಧಾರದ ಮೇಲೆ ವಿವಿಧ ಮಾದರಿ ಗಳಾಗಿ ವಿಂಗಡಿಸಬಹುದು. ಏಕಪತಿ ಮತ್ತು ಏಕಸತಿಯನ್ನು ಒಳಗೊಂಡಂತಹ ಏಕ ಸಂಗಾತಿ ಕುಟುಂಬ (ಮಾನೋಗಮಸ್ ಕುಟುಂಬ), ಒಬ್ಬ ಗಂಡಸು ಅನೇಕ ಪತ್ನಿಯ ರನ್ನು ಹೊಂದಿರುವಂತಹ ಬಹು ಪತ್ನಿತ್ವ ಕುಟುಂಬ (Polygynous) ಅಥವಾ ಒಬ್ಬ ಹೆಂಗಸರು ಅನೇಕ ಪತಿಯರನ್ನು ಹೊಂದಿರುವಂತಹ ಬಹುಪತಿತ್ವ ಕುಟುಂಬ (Polyandrous)ಹಾಗೂ ಒಂದು ಗುಂಪಿನ ಪುರುಷರು ಒಟ್ಟಿಗೆ ಇನ್ನೊಂದು ಗುಂಪಿನ ಸ್ತ್ರೀಯರನ್ನು ಮದುವೆಯಾಗುವಂತಹ ಸಮೂಹ ವಿವಾಹದ ಆಧಾರದ ಮೇಲಿನ ಕುಟುಂಬ, ಹೀಗೆ ಅನೇಕ ವಿಧಗಳಾಗಿ ವಿಂಗಡಿಸಬದುದು. ಈ ಎಲ್ಲಾ ಮಾದರಿಯ ಕುಟುಂಬಗಳು ವಿಶ್ವದ ಒಂದಲ್ಲ ಒಂದು ಭಾಗದಲ್ಲಿ ಕಂಡುಬರುತ್ತದೆ. ಅದೇ ರೀತಿ ಸಂಗಾತಿಯ ಆಯ್ಕೆಯ ಆಧಾರದ ಮೇಲೆ ವಿವಿಧ ಮಾದರಿಯ ವಿವಾಹಗಳಿವೆ ಹಾಗೂ ವಿವಿಧ ಮಾದರಿಯ ಕುಟುಂಬಗಳಿವೆ. ಕೆಲವು ಸಮಾಜಗಳಲ್ಲಿ ಒಬ್ಬ ವ್ಯಕ್ತಿ ತನ್ನ ಸ್ವಂತ ಸಮೂಹದೊಳಗೆಯೇ ತನ್ನ ಸಂಗಾತಿಯನ್ನು ಹುಡುಕುವುದು ಕಡ್ಡಾಯವಾಗಿರುತ್ತದೆ. ಅಂತಹ ವಿವಾಹಗಳನ್ನು ಒಳ ಬಾಂದವ್ಯವಿವಾಹ (ಎಂಡೋಗಮಸ್) ಎಂದು ಕರೆಯುತ್ತಾರೆ. ಇನ್ನೂ ಕೆಲವು ಸಮಾಜ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿ ತನ್ನ ಸ್ವಂತ ಸಮೂಹದಲ್ಲಿ ಸಂಗಾತಿಯನ್ನು ಹುಡುಕುವುದು ನಿಷಿದ್ಧ. ಆತ ತನ್ನ ಹೊರಗಿನ ಸಮೂಹದಲ್ಲಿ ವಿವಾಹವಾಗಬೇಕು. ಇಂತಹ ವಿವಾಹಗಳನ್ನು ಹೊರಭಾಂದವ್ಯ ವಿವಾಹಗಳು ಎಂದು ಕರೆಯುತ್ತಾರೆ. ಕುಲವನ್ನು ನಿರೀಕ್ಷಿಸುವ ಆಧಾರದ ಮೇಲೆ ಇನ್ನೂ ಅನೇಕ ಕುಟುಂಬದ ವಿಧಗಳಿವೆ. ಪುರುಷನ ಕುಲದ ಸಾಲನ್ನು ನೋಡುವುದರ ಆಧಾರದ ಮೇಲೆ ಪಿತೃವಂಶೀಯ ; ತಾಯಿಯ ಸಾಲಿನ ಕುಲದ ಆಧಾರದ ಮೇಲೆ ಮಾತೃವಂಶೀಯ (Matrilineal family) ಕುಟುಂಬವೆಂತಲೂ ಕರೆಯುತ್ತಾರೆ. ಒಂದು ವೇಳೆ ಕುಲವು ತಂದೆ ಮತ್ತು ತಾಯಿ ಇಬ್ಬರ ಸಾಲುಗಳ ಮೇಲೂ ನಿರ್ದಿಷ್ಟ ಪಟ್ಟರೆ ಅಂತಹ ಕುಟುಂಬವನ್ನು ಪಿತೃಮಾತೃವಂಶೀಯ ಕುಟುಂಬ (Bilineal family) ಎಂದು ಕರೆಯುತ್ತಾರೆ. ಅದೇ ರೀತಿ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವುದರ ಆಧಾರದ ಮೇಲೆ ಕುಟುಂಬವನ್ನು ವಿವಿಧ ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಜವಾಬ್ದಾರಿಯು (ಅಧಿಕಾರ) ತಂದೆ ಅಥವಾ ಇತರೆ ಪುರುಷರಿಂದ ನಿರ್ವಹಿಸಲ್ಪಟ್ಟರೆ ಅದನ್ನು ಪಿತೃಪ್ರಧಾನ ಕುಟುಂಬ ಎಂದು ಹೆಸರು. ಒಂದು ವೇಳೆ ಅಧಿಕಾರವು ತಂದೆ, ತಾಯಿ ಮತ್ತು ಮಕ್ಕಳಲ್ಲಿ ಹಂಚಲ್ಪಟ್ಟಿದ್ದರೆ ಆ ಕುಟುಂಬವು ಸರ್ವಪ್ರಧಾನ ಎಂದಾಗಿದೆ. ಕುಟುಂಬಗಳನ್ನು ವಾಸಸ್ಥಳದ ಆಧಾರದ ಮೇಲೆಯೂ ವರ್ಗೀಕರಿಸಬಹುದು. ಮದುವೆಯಾಗಿ ದಂಪತಿಗಳು, ಪತಿಯ ತಂದೆತಾಯಿಯರ ಮನೆಯಲ್ಲಿ ವಾಸಿಸಿದರೆ ಅಂತಹ ಕುಟುಂಬವನ್ನು ಪಿತೃಸ್ಥಳೀಯ ಎಂತಲೂ ಒಂದು ವೇಳೆ ಅವರು, ಪತ್ನಿಯ ತಂದೆತಾಯಿಯರ ಮನೆಯಲ್ಲಿ ವಾಸಿಸಿದರೆ ಮಾತೃಸ್ಥಳೀಯ (Matrilocal family) ಎಂತಲೂ ಹಾಗೂ ಒಂದು ವೇಳೆ ದಂಪತಿಗಳು ಸೋದರಮಾವನ ಮನೆಯಲ್ಲಿ ವಾಸಿಸಿದರೆ ಸೋದರಮಾವನ ಮನೆಯಲ್ಲಿ ಸ್ಥಾಪಿತವಾಗುವ ಕುಟುಂಬ (Avunculocal family) ಎಂದು ಮತ್ತು ದಂಪತಿಗಳು ತಮ್ಮದೇ ಆದಂತಹ ಪ್ರತ್ಯೇಕವಾದ ಹೊಸ ಮನೆಯಲ್ಲಿ ವಾಸಿಸಿದರೆ ನವೀನಸ್ಥಳೀಯ ಕುಟುಂಬ (Neolocal family) ಎಂದು ಕರೆಯುತ್ತಾರೆ. ಅದೇ ರೀತಿ ಕುಟುಂಬದ ಸದಸ್ಯರ ತಲೆಮಾರಿನ ಆಧಾರದ ಮೇಲೆ ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. . ವಿಭಕ್ತ ಕುಟುಂಬದಲ್ಲಿ ತಂದೆತಾಯಿಯವರು ಮತ್ತು ಮಕ್ಕಳು ಎರಡು ಸಂತತಿಯವರು ವಾಸಿಸುತ್ತಾರೆ. ಆದರೆ ಅವಿಭಕ್ತ ಕುಟುಂಬದಲ್ಲಿ ಮೂರು ಅಥವಾ ಐದು ತಲೆಮಾರಿನವರಿದ್ದು ಅಂದರೆ ಮುತ್ತಾತ ಮತ್ತು ಮಕ್ಕಳು, ಮೊಮ್ಮಕ್ಕಳು ಒಟ್ಟಿಗೆ ಒಂದೇ ಕುಟುಂಬದಲ್ಲಿ ವಾಸಿಸುತ್ತಾರೆ.

ಕುಟುಂಬವು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳಲ್ಲಿ ಮೂಲಭೂತ ಕಾರ್ಯಗಳೆಂದರೆ: 1) ಮಕ್ಕಳನ್ನು ಪಡೆಯುವುದು 2) ಮಕ್ಕಳ ಪಾಲನೆ ಮತ್ತು ಪೋಷಣೆ 3) ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ವಿಶಾಲ ಸಮಾಜಕ್ಕೆ ಅವರನ್ನು ಪರಿಚಯಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವುದು. 4) ಕುಟುಂಬದ ಸದಸ್ಯರಿಗೆ ಸ್ಥಾನಮಾನವನ್ನು ವರ್ಗಾವಣೆ ಮಾಡುವುದು 5) ಕುಟುಂಬದ ಸದಸ್ಯರಿಗೆ ಮನರಂಜನೆಯನ್ನು ಒದಗಿಸುವುದು 6) ಕುಟುಂಬದ ವೃದ್ಧ ಮತ್ತು ಆಶಕ್ತ ರಕ್ತಸಂಬಂಧಿಗಳನ್ನು ನೋಡಿಕೊಳ್ಳುವುದು.

ಅವಿಭಕ್ತ ಕುಟುಂಬ

ಅವಿಭಕ್ತ ಕುಟುಂಬವು ಭಾರತದ ಒಂದು ಪ್ರಾಚೀನವಾದ ಮತ್ತು ಸಾರ್ವತ್ರಿಕ ವಾದ ಸಂಸ್ಥೆ. ಜಾತಿಪದ್ಧತಿಯಷ್ಟೇ ಪುರಾತನವಾದುದು.ಧರ್ಮಗ್ರಂಥಗಳಿಂದ ಗೌರವ ಪಡೆದು ಪ್ರಾಪಂಚಿಕ ಕಾನೂನಿನಲ್ಲಿ ಅಂಗೀಕಾರ ಪಡೆದಿದೆ. ಇದು ಭಾರತದ ಇತಿಹಾಸ ದೊಂದಿಗೆ ಹಾಸುಹೊಕ್ಕಾಗಿ ಬಂದಿದೆ. ಅವಿಭಕ್ತ ಕುಟುಂಬವನ್ನು ವಿವಿಧ ರೀತಿಯಲ್ಲಿ ವರ್ಣಿಸಲಾಗಿದೆ. ಮ್ಯಾಂಡಲ್‌ಬಾಮ್‌ರವರು ಈ ಕೆಳಕಂಡಂತೆ ವಿವರಿಸಿದ್ದಾರೆ. ಇದು ರಕ್ತ ಸಂಬಂಧ ಜನರ ಗುಂಪನ್ನು ಒಳಗೊಂಡಿರುತ್ತದೆ. ತಂದೆ, ತಾಯಿ, ಸೋದರರು ಮತ್ತು ಅವರ ಹೆಂಡತಿಮಕ್ಕಳನ್ನು ಒಳಗೊಂಡಿರುತ್ತದೆ. ಅವಿಭಕ್ತ ಕುಟುಂಬವು ಅನುಭೋಗದ ಮತ್ತು ಉತ್ಪಾದನೆಯ ಒಂದು ಘಟಕವಾಗಿರುತ್ತದೆ. ಅವಿಭಕ್ತ ಕುಟುಂಬ ಸಾಮಾನ್ಯವಾಗಿ ಕುಟುಂಬದ ಹಿರಿಯ ಪುರುಷ ಸದಸ್ಯನ ಪಾರುಪತ್ಯದಲ್ಲಿರುತ್ತದೆ. ಸಾಮಾನ್ಯವಾಗಿ ಕುಟುಂಬದ ಸದಸ್ಯರೆಲ್ಲ ಒಂದೇ ಅಡುಗೆ ಮನೆಯನ್ನು ಹೊಂದಿದ್ದು ಹಣಕಾಸಿನ ವಿಷಯದಲ್ಲಿ ಒಂದೇ ತೀರ್ಮಾನವನ್ನು ಹೊಂದಿರುತ್ತಾರೆ.

ಪ್ರಭುರವರು[7] ಈ ರೀತಿ ವ್ಯಾಖ್ಯಾನಿಸುತ್ತಾರೆ. "ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು ಒಟ್ಟಿಗೆ ಒಂದೇ ನಿವಾಸದಲ್ಲಿ ವಾಸಿಸುತ್ತಾರೆ. ಇದರ ಗಾತ್ರಕ್ಕೆ ಮಿತಿಯಿರುವುದಿಲ್ಲ. ಆಗಾಗ್ಗೆ ಇದು ನಾಲ್ಕು ತಲೆಮಾರಿನವರನ್ನು ಒಳಗೊಳ್ಳ ಲೂಬಹುದು" ಅವಿಭಕ್ತ ಕುಟುಂಬದಲ್ಲಿ ಒಂದೇ ಛಾವಣಿಯ ಕೆಳಗೆ ವಾಸಿಸುತ್ತಾರೆ, ಮತ್ತು ಒಟ್ಟಾಗಿ ಆಸ್ತಿಯನ್ನು ಹೊಂದಿರುತ್ತಾರೆ ಹಾಗೂ ಒಂದೇ ಅಡುಗೆಮನೆ ಯಲ್ಲಿ ಮಾಡಿದ ಆಹಾರವನ್ನು ಸೇವಿಸುತ್ತಾರ.

ಮೇಯ್ನ್[8]ರವರು ಅವಿಭಕ್ತ ಕುಟುಂಬವನ್ನು ಈ ರೀತಿ ವಿವರಿಸುತ್ತಾರೆ. "ಜೊತೆ ಗೂಡಿ ಊಟ ಮಾಡುತ್ತಾರೆ. ಒಟ್ಟಿಗೆ ಪೂಜಿಸುತ್ತಾರೆ ಮತ್ತು ಒಟ್ಟಿಗೆ ಆಸ್ತಿಯನ್ನು ಹೊಂದಿರುತ್ತಾರೆ" ಕಾಪಾಡಿಯಾವರು[9] ಅವಿಭಕ್ತ ಕುಟುಂಬವು "ಒಂದೇ ಸೂರು, ಒಂದೇ ಅಡುಗೆಮನೆ, ಒಂದೇ ಆಸ್ತಿ ಮತ್ತು ಒಂದೇ ದೇವರ ಪೂಜೆಯನ್ನು ಹೊಂದಿರು ತ್ತದೆ" ಎನ್ನುತ್ತಾರೆ.

ಪವಿತ್ರ ಗ್ರಂಥಗಳಲ್ಲಿನ ಹಿಂದೂ ಕುಟುಂಬದ ಆದರ್ಶ ಚಿತ್ರಣವನ್ನು ಪ್ರಭು[10] ರವರು ಕೊಟ್ಟಿದ್ದಾರೆ. ಹಿಂದೂ ಸಿದ್ಧಾಂತದ ಪ್ರಕಾರ ಕುಟುಂಬ ಬದುಕಿರುವವರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರವೇ ವಾಸಪಾಸ್ಥಳವಾಗಿರದೇ ದಿವಂಗತರಾಗಿರುವಂತಹ ಪೂರ್ವಜರಿಗೂ ಮತ್ತು ಇನ್ನು ಹುಟ್ಟಿಲ್ಲದೇ ಇರುವಂತಹ ಮಕ್ಕಳು ಮತ್ತೆ ಮೊಮ್ಮಕ್ಕಳಿಗೂ ಕೂಡ ವಾಸಸ್ಥಾನವಾಗಿರುತ್ತದೆ. ಹೀಗೆ ಆದರ್ಶವಾಗಿ ಮನೆಯು, ಮನೆಯ ಮುಖ್ಯ ದೇವತೆಯಾದ ಪವಿತ್ರ ಬೆಂಕಿಯನ್ನು ಪ್ರತಿನಿಧಿಸುವ ಅಗ್ನಿಗೆ ಸಂಬಂಧಿಸಿರುತ್ತದೆ. ಆಧ್ಯಾತ್ಮಿಕ ಮನೋಭಾವನೆಯು ಹಿಂದೂ ಅವಿಭಕ್ತ ಕುಟುಂಬದ ತಳಹದಿಗೆ ಕಾರಣವಾಗಿದೆ. ಒಬ್ಬ ಹಿಂದುವಿಗೆ ಈ ಜಗತ್ತಿನಲ್ಲಿ ಜೀವನವು ನಿರಂತರವಾದುದು. ವ್ಯಕ್ತಿಯು ಮನೆಗೆ ಸೇರಿರುವುದಿಲ್ಲ. ಇಲ್ಲವೇ ಮನೆಯೂ ಆತನಿಗೆ ಸೇರಿರುವುದಿಲ್ಲ. ಅವನು ಎಲ್ಲಿಂದಲೋ ಬಂದಂತಹವನು, ಎಲ್ಲಿಗೋ ಸೇರಿದಂತವನು ಮತ್ತು ಅವನು ನಿಧನನಾದ ಮೇಲೆ ಎಲ್ಲಿಗೋ ಹೋಗುತ್ತಾನೆ. ಧರ್ಮ ಅರ್ಥ ಮತ್ತು ಕಾಮ ಶಾಸ್ತ್ರಗಳು ಪವಿತ್ರ ಅಗ್ನಿಯ ಮಾರ್ಗದರ್ಶನದಲ್ಲಿ ನೆರವೇರಿಸಲ್ಪಡುವಂತಹ ಸ್ಥಳವೇ ಮನೆ.

ನಾವು ಇಲ್ಲಿ ಅವಿಭಕ್ತ ಕುಟುಂಬದ ರಚನಾತ್ಮಕ ಮತ್ತು ಕಾರ್ಯಾತ್ಮಕ ಅಂಶಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದಂತಹ ಕೆಲವು ಸಮಾಜಶಾಸ್ತ್ರಜ್ಞರ ದೃಷ್ಟಿಕೋನಗಳನ್ನು ಪರಿಶೀಲಿಸಬಹುದು. ಕಪಾಡಿಯ[11]ರವರು ಸಾಂಪ್ರದಾಯಿಕ ಹಿಂದೂ ಕುಟುಂಬವನ್ನು ಪಿತೃಪ್ರಧಾನ ಕುಟುಂಬವೆಂದು ತೀರ್ಮಾನಿಸಬಹುದೇ ಅಥವಾ ಇಲ್ಲವೆ ಎಂಬ ವಿವಾದದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖಿತವಾಗಿರುವ ಕೆಲವು ಉದಾಹರಣೆಗಳಾದ ಕುಂಡ ಮುನಿಯು ಹಸುವನ್ನು ಕೊಲ್ಲುವುದು, ಪರಶುರಾಮನಿಂದ ಮಾತೃಹತ್ಯೆ, ಭೀಷ್ಮನಿಂದ ಜೀವನಪರ್ಯಂತ ಬ್ರಹ್ಮಚರ್ಯ ಸ್ವೀಕಾರ ಇವುಗಳು ವೈದಿಕ ಕಾಲದಲ್ಲಿನ ಕುಟುಂಬದ ರಚನೆ ಮತ್ತು ಕಾರ್ಯದಲ್ಲಿ ಪಿತೃಪ್ರಧಾನವಾಗಿತ್ತೆಂಬುದನ್ನು ಪ್ರತಿಪಾದಿಸುತ್ತವೆ. ಹೀಗಿದ್ದಾಗ್ಯೂ ಈ ದೃಷ್ಟಿ ಕೋನವು ವಿವಾದಕ್ಕೊಳಗಾಗಿದೆ. ಹಿಂದೂ ಕುಟುಂಬದ ಯಜಮಾನನನ್ನು ಕುಟುಂಬದ ಸದಸ್ಯರಲ್ಲಿಯೇ ಹೆಚ್ಚು ಅಧಿಕಾರವನ್ನು ಹೊಂದಿರುವಂತಹ ರೋಮನ್ ಕುಟುಂಬದ ಮುಖ್ಯಸ್ಥನೊಡನೆ ಹೋಲಿಸಿರುವುದು ತಪ್ಪಾಗುತ್ತದೆ. ಹಿಂದು ಅವಿಭಕ್ತ ಕುಟುಂಬದ ಮುಖಂಡ ಮತ್ತು ಇತರೆ ಸದಸ್ಯರ ನಡುವಿನ ಸಂಬಂಧ ಹೆದರಿಕೆಗಿಂತ ಹೆಚ್ಚಾಗಿ ಧರ್ಮಕ್ಕೆ ಸಂಬಂಧಿಸಿದ ಪ್ರೀತಿಯಿಂದ ಕೂಡಿರುತ್ತಿತ್ತು. ಆದರೂ ವೈದಿಕ ಕಾಲದ ತಂದೆಯು ಹೆಚ್ಚು ಶಿಸ್ತಿನವನೂ ಹಾಗೂ ದಯೆಯುಳ್ಳವನಾಗಿ ತನ್ನ ಮಕ್ಕಳ ಬಗ್ಗೆ ಹೆಚ್ಚು ಕಕ್ಕುಲತೆ ಹೊಂದಿರುವವನಾಗಿದ್ದನು. ಆದ್ದರಿಂದ ಹಿಂದೂ ಕುಟುಂಬದ ಮೇಲೆ ತಂದೆಯು ಅಸೀಮಿತ ಅಧಿಕಾರವಿತ್ತು ಎಂದು ನಂಬಲಾಗದು. ತಂದೆಯು ಪ್ರತ್ಯೇಕವಾಗಿ ಕುಟುಂಬದ ಆಸ್ತಿಯ ಒಡೆಯನಾಗಿದ್ದ ಎಂದು ನಿರ್ಧರಿಸುವಲ್ಲಿ ಈ ಆಧಾರಗಳು ಸಾಕಾಗುವುದಿಲ್ಲ. ಮ್ಯಾಕ್‌ಡೋನೆಲ್[12] ಮತ್ತು ಕೈಯಿತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಂತಹ ಕೆಲವು ಪ್ರಾಚೀನ ಇತಿಹಾಸತಜ್ಞರು ತಂದೆಯು ಕುಟುಂಬದ ಎಲ್ಲಾ ಆಸ್ತಿಗೂ ಒಡೆಯನಾಗಿರುತ್ತಿದ್ದನು, ಕುಟುಂಬದ ಇತರೆ ಸದಸ್ಯರು ಕೇವಲ ಅದರ ಮೇಲೆ ನೈತಿಕ ಹಕ್ಕನ್ನು ಹೊಂದಿರುತ್ತಿದ್ದರು ಎಂದು ಸಮರ್ಥಿಸಿದ್ದಾರೆ. ಆದರೆ ಈ ದೃಷ್ಟಿಕೋನವು ವಿವಾದಕ್ಕೊಳಪಟ್ಟಿದೆ. ವಿಶ್ವಾಮಿತ್ರನು ದತ್ತುಪುತ್ರನಿಗೆ ತನ್ನ ಎಲ್ಲಾ ಆಸ್ತಿಯನ್ನು ಧಾರೆ ಎರೆದನು. ಈ ಉದಾಹರಣೆಯಿಂದ ತಂದೆಯೂ ಮಗನ ಹಕ್ಕನ್ನು ಸುಲಭವಾಗಿ ಮುರಿಯುವುದಿಲ್ಲ ಎಂಬುದು ಗೊತ್ತಾಗುತ್ತದೆ. ಮನುಸ್ವತ : ತನ್ನ ಕುಟುಂಬದ ಆಸ್ತಿಯನ್ನು ಹಂಚುವಾಗ ತನ್ನ ಕಿರಿಯ ಮಗನನ್ನು ಹೊರಹಾಕಿದ್ದರೂ ದನಕರುಗಳು ಮತ್ತು ಇತರೆ ಅಪಾರವಾದಂತಹ ಸಂಪತ್ತನ್ನು ತರುತ್ತಿದ್ದಂತಹ ತನ್ನ ದೈವಿಕ ಜ್ಞಾನವನ್ನು ಆತನಿಗೆ ಪರಿಹಾರವಾಗಿ ಕೊಡಬೇಕಾಯಿತು. ಹೀಗೆ ನಾವು ವೈದಿಕ ಕಾಲದ ತಂದೆಯು ಸಂಪೂರ್ಣವಾದ ಅಧಿಕಾರದೊಂದಿಗೆ ನಿರಂಕುಶನಾಗಿರಲಿಲ್ಲ ಮತ್ತು ಅವನು ತನ್ನ ಪೀಳಿಗೆಯ ಹಕ್ಕನ್ನು ನಿರ್ಲಕ್ಷಿಸುತ್ತಿರಲಿಲ್ಲ ಎಂದು ಹೇಳಬಹುದು.

ನಾವು ಈಗ ಸಂಕ್ಷಿಪ್ತವಾಗಿ ಕುಟುಂಬದ ವಿವಿಧ ಸದಸ್ಯರ ಸ್ಥಾನಮಾನವನ್ನು ಕುರಿತು ವಿಚಾರಮಾಡೋಣ. ಕುಟುಂಬದಲ್ಲಿ ತಂದೆಯ ನಂತರ ಮಗನು ಹೆಚ್ಚು ಪ್ರಮುಖವಾದ ಸ್ಥಾನವನ್ನು ಹೊಂದಿರುತ್ತಾನ. ವಾಸ್ತವವಾಗಿ ಒಂದು ಕುಟುಂಬದಲ್ಲಿ ಮಗನನ್ನು ಪಡೆಯುವುದೇ ವಿವಾಹದ ಗುರಿಯಾಗಿರುತ್ತದೆ. ಮಗನನ್ನು ಪುತ್ರ* ಎಂದು ಕರೆಯುತ್ತಾರೆ. ಏಕೆಂದರೆ ಅವನು ತನ್ನ ಪೂರ್ವಜರನ್ನು ಪುತ್ ಎಂದು ಕರೆಯುವ ನರಕದಿಂದ ರಕ್ಷಿಸುತ್ತಾನೆ. ಗಂಡು ಮಕ್ಕಳು ಮುಖ್ಯವಾಗಿದ್ದರೂ ಅವರಲ್ಲಿ ಹಿರಿಯ ಮಗನು ಕುಟುಂಬದ ಹೆಚ್ಚು ಸ್ಥಾನಮಾನವನ್ನು ಅನುಭವಿಸುತ್ತಾನೆ. ಅವನ ವಿಶೇಷಾಧಿಕಾರದ ಸ್ಥಾನವನ್ನು ಪುರಾಣಕತೆಗಳಲ್ಲಿಯೂ ಕೂಡ ಕಾಣಬಹುದಾಗಿದೆ,

ಸಾಂಪ್ರದಾಯಿಕ ಧರ್ಮದ ಪ್ರಕಾರ ಒಬ್ಬ ಮನುಷ್ಯನು ತನ್ನ ಹೊಸ ಗೃಹವನ್ನು ತನ್ನ ಹಿರಿಯ ಮಗನೊಂದಿಗೆ ಪ್ರವೇಶಿಸಬೇಕಿತ್ತು. ಮನು[13] ಹೀಗೆ ಬರೆಯುತ್ತಾನೆ. ಹಿರಿಯ ಮಗನೊಬ್ಬನೆ ಕುಟುಂಬದ ಸಂಪೂರ್ಣ ಆಸ್ತಿಯೆಲ್ಲವನ್ನು ಪಡೆಯಬಹುದು. ಕಿರಿಯ ಸೋದರರು ತಮ್ಮ ತಂದೆಯ ನಾಯಕತ್ವದಲ್ಲಿ ಬದುಕುತ್ತಿದ್ದಂತ ರೀತಿಯಲ್ಲಿಯೇ ಹಿರಿಯ ಸೋದರನ ಕೆಳಗೆ ಮುಂದುವರಿಯಬೇಕಿತ್ತು. ಹಿರಿಯ ಮಗನೊಬ್ಬನೇ ಇಂತಹ ಗೌರವವನ್ನು ಪಡೆಯಲು ಕಾರಣ, ಅವನ ಜನನವು ತಂದೆಯನ್ನು ಆತನ ಪೂರ್ವಜರ ಋಣದಿಂದ ಮುಕ್ತನನ್ನಾಗಿ ಮಾಡುತ್ತದೆಂಬ ನಂಬಿಕೆ.

---

* (ಪುತ್ ಎಂಬುದು ನರಕದ ಹೆಸರು ಮತ್ತು ತ್ರೈ ಎಂದರೆ ಸಂಸ್ಕೃತದಲ್ಲಿ ರಕ್ಷಿಸುವವನು ಎಂದರ್ಥ)

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಮಗನೊಬ್ಬನೆ ತನ್ನ ಪೂರ್ವಜರನ್ನು ಪುತ್‌ನಿಂದ ಮುಕ್ತರನ್ನಾಗಿ ಅಮರತ್ವವನ್ನು ಪಡೆಯುವಂತೆ ಮಾಡಬಲ್ಲ ಎಂಬ ನಂಬಿಕೆಯಿಂದಾಗಿ ಅಷ್ಟೊಂದು ವಿಶೇಷ ಸ್ಥಾನಮಾನವನ್ನು ಪಡೆಯುತ್ತಿದ್ದನು. ಆದ್ದರಿಂದಲೇ ಮೊದಲನೆಯ ಮಗನನ್ನು ಧರ್ಮಪುತ್ರ ಎಂದು ಕರೆಯುತ್ತಿದ್ದರು (ಧರ್ಮದ ಪವಿತ್ರ ಕಾರ್ಯವನ್ನು ನೇರವೇರಿಸಿದುದರ ಫಲವಾಗಿ ಜನಿಸಿದವನು. ಉಳಿದವರನ್ನು ಕಾಮಪುತ್ರರೆಂದು ಕರೆಯುತ್ತಿದ್ದರು. (ಕಾಮದ ಫಲದಿಂದಾಗಿ ಜನಿಸಿದವನು). ಆದ್ದರಿಂದ ಹಿರಿಯ ಸೋದರನು ತಂದೆಯಂತೆ ಗೌರವಿಸಲ್ಪಡುತ್ತಿದ್ದನು. ಕಿರಿಯ ಸೋದರನು ತನ್ನ ಹಿರಿಯ ಸೋದರನ ಎದುರು ವಾಸಸ್ಥಳವನ್ನು ನಿರ್ಮಿಸಿಕೊಳ್ಳುವಂತಿರಲಿಲ್ಲ ಎಂಬುದಾಗಿ ಪವಿತ್ರ ಗ್ರಂಥಗಳಲ್ಲಿ ಕಾಣಬಹುದಾಗಿದೆ. ಎಲ್ಲಾ ಸೂತ್ರವನ್ನು ಬರೆದಂತಹವರು ಹಿರಿಯಪುತ್ರನಿಗೆ ಒಂದು ಹೆಚ್ಚಿನ ಪಾಲನ್ನು ಶಿಫಾರಸು ಮಾಡಿದ್ದಾರೆ. ಉದಾಹರಣೆಗೆ ಮನು ಜ್ಯೇಷ್ಠ ಪುತ್ರನ ಹಕ್ಕು ಕೇವಲ ಧರ್ಮ ಸಮ್ಮತವಲ್ಲ ಜೊತೆಗೆ ಪವಿತ್ರ ಕರ್ತವ್ಯ ಎಂದು ಬರೆದಿದ್ದಾನೆ. ಹೀಗೆ ನಾವು ಸಾಂಪ್ರದಾಯಿಕ ಹಿಂದೂ ಕುಟುಂಬದಲ್ಲಿ ಹಿರಿಯ ಮಗನು ಹೆಚ್ಚಿನ ಸ್ಥಾನಮಾನವನ್ನು ಹೊಂದಿ ಅದನ್ನು ಮುಂದುವರೆಸಿಕೊಂಡು ಅನುಭವಿಸುತ್ತಿದ್ದನು ಎಂಬುದಾಗಿ ಹೇಳಬಹುದು.

ಸಂಪ್ರದಾಯಬದ್ಧ ಹಿಂದೂಧರ್ಮದ ಪ್ರಕಾರ, ಏಕಸಂಗಾತಿ ಪದ್ಧತಿಯು ನಿಯಮವಾಗಿತ್ತು. ಆದರೆ ಒಬ್ಬನಿಗೆ ಮಕ್ಕಳಿಲ್ಲದ ಪಕ್ಷದಲ್ಲಿ ಮತ್ತೊಬ್ಬ ಸ್ತ್ರೀಯನ್ನು ಮದುವೆ ಮಾಡಿಕೊಳ್ಳಬಹುದಾಗಿದ್ದಿತು. ವಿಶೇಷವಾಗಿ ಮೊದಲನೆಯ ಪತ್ನಿಗೆ ಗಂಡು ಮಕ್ಕಳಾಗದಿದ್ದಂತಹ ಸಂದರ್ಭದಲ್ಲಿ ಎರಡನೆಯ ಮದುವೆಗೆ ಪುರಸ್ಕಾರವಿತ್ತು. ಪವಿತ್ರ ಧರ್ಮಗ್ರಂಥಗಳ ಪ್ರಕಾರ ಮದುವೆ ಜೀವನ ಪರ್ಯಂತದವರೆಗೂ ಉಳಿಯಬೇಕು. ವಿವಾಹ ವಿಚ್ಛೇದನಕ್ಕೆ ಅವಕಾಶವಿರಲಿಲ್ಲ. ಹೆಂಡತಿಯು ತನ್ನ ಪತಿಯನ್ನು ದೇವರು, ಧಣಿ ಎಂದು ಕಂಡು ಸೇವೆಯನ್ನು ಮಾಡಿ ಪೂಜಿಸಬೇಕಿತ್ತು. ಪತಿಯು ಪ್ರತಿಯಾಗಿ ತನ್ನ ಸತಿಯನ್ನು ಪ್ರೀತಿಸಿ ಧರ್ಮ, ಅರ್ಥ, ಕಾಮದ ಮೂಲಕವಾಗಿ ಅವಳನ್ನು ರಕ್ಷಿಸಬೇಕಿತ್ತು.

ರಾಮಾಯಣದಲ್ಲಿ[14] ಸತಿಯನ್ನು ಒಬ್ಬ ಸ್ನೇಹಿತೆ, ಹೆಂಡತಿ, ಸೋದರಿ ಮತ್ತು ತಾಯಿಯಾಗಿ ವರ್ಣಿಸಲಾಗಿದೆ. ಮಹಾಭಾರತವು[15] ಸತಿಯು ಗೃಹದ ಸರ್ವಸ್ವ, ಅವಳಿಲ್ಲದ ಮನೆ ಮರುಭೂಮಿಯ ರೀತಿ ಎಂದು ಹೇಳುತ್ತದೆ. ಇದು ಸತಿಯನ್ನು ಜಯದ ಸಂಕೇತವಾಗಿಯೂ ವರ್ಣಿಸುತ್ತದೆ. ಅಂದರೆ ಒಬ್ಬ ವ್ಯಕ್ತಿ ಆತನ ಸತಿಯ ಮೂಲಕವೇ ಎರಡನೆಯ ಜನ್ಮವನ್ನು ಪಡೆಯುತ್ತಾನೆ.

ಪವಿತ್ರ ಗ್ರಂಥಗಳಲ್ಲಿ ಮಗಳನ್ನು ಬಹಳ ಜಾಗರೂಕತೆಯಿಂದ ಮತ್ತು ಕೋಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲತೆಯಿಂದ ನೋಡಿಕೊಳ್ಳಬೇಕೆಂದು ಆಜ್ಞಾಪಿಸಿದೆ. ಒಳ್ಳೆಯ ಸಮಯದಲ್ಲಿ ಮಗಳನ್ನು ಮದುವೆ ಮಾಡಿಕೊಡುವುದು ತಂದೆಯಾದವನ ಅತಿಮುಖ್ಯವಾದ ಕರ್ತವ್ಯ. ಆದರೆ ಹೆಣ್ಣು ಮಕ್ಕಳು ತಮ್ಮ ಗಂಡಂದಿರನ್ನು ಹುಡುಕುವುದರಲ್ಲಿ ಭಾಗಿಯಾಗುವ ಹಾಗಿಲ್ಲ. ತಂದೆಯು ಹೆಣ್ಣುಮಕ್ಕಳಿಗೆ ಗಂಡನ್ನು ಹುಡುಕಲು ಅಸಮರ್ಥನಾದಲ್ಲಿ ಮತ್ತು ಆತನು ನಿಧನನಾದಂತಹ ಸನ್ನಿವೇಶದಲ್ಲಿ ಅವರಿಗೆ ತಮ್ಮ ಬಾಳಸಂಗಾತಿಯರನ್ನು ಆಯ್ಕೆ ಮಾಡಿಕೊಳ್ಳಲು ಹಕ್ಕಿದೆ. ಒಬ್ಬ ತಂದೆಯು ಗಂಡುಮಕ್ಕಳನ್ನು ಹೊಂದಿರದಂತಹ ಸಂದರ್ಭದಲ್ಲಿ ತನ್ನ ಹೆಣ್ಣು ಮಗಳನ್ನು ತನ್ನ ಶವಸಂಸ್ಕಾರದ ಕ್ರಿಯಾವಿಧಿಗಳನ್ನು ಮತ್ತು ಶ್ರಾದ್ಧವನ್ನು ಆಚರಿಸುವಂತೆ ಮೊದಲೇ ತಿಳಿಸಿರಬಹುದು. ಈ ರೀತಿ ನೇಮಕವಾಗಿರುವಂತಹ ಮಗಳ ಮಗನು ತಾತನ ಆಸ್ತಿಗೆ ಉತ್ತರಾಧಿಕಾರಿಯಾಗಿ ಅವನ ಅಧಿಕಾರವೆಲ್ಲವನ್ನು ಹೊಂದಬಹುದು.

ಮೇಲೆ ವಿವರಿಸಿದಂತಹ ಆದರ್ಶ ಅವಿಭಕ್ತ ಕುಟುಂಬದ ಚಿತ್ರಣವು ಸಾಂಪ್ರದಾಯಿಕ ಹಿಂದೂ ಧರ್ಮದಿಂದ ಪ್ರತಿಪಾದಿಸಲ್ಪಟ್ಟಿದ್ದು. ಆದರೆ ನಿಯಮ ಮತ್ತು ಆಚರಣೆಗಳು ವ್ಯತ್ಯಾಸ ಹೊಂದಿದವು. ಹಳ್ಳಿಗಳಲ್ಲಿ ಉನ್ನತ ಜಾತಿಗಳು ಈ ಆದರ್ಶಗಳಲ್ಲಿ ನಂಬಿಕೆ ಇಡುವುದರ ಜೊತೆಗೆ ಕಟ್ಟುನಿಟ್ಟಾಗಿ ಅನುಸರಿಸಲು ಪ್ರಯತ್ನಿಸಿದರು. ಮಧ್ಯಮ ವರ್ಗದ ಜನರು ಈ ತತ್ವಗಳಿಗೆ ಹೆಚ್ಚು ಅಂಟಿಕೊಳ್ಳಲಿಲ್ಲ. ಪರಿಣಾಮವಾಗಿ ಜಾತಿ ಏಣಿ ಶ್ರೇಣಿಯ ಮಧ್ಯದ ಪ್ರದೇಶವು ಹೆಚ್ಚಾಗಿ ಈ ಆದರ್ಶಗಳನ್ನು ತಳ್ಳಿಹಾಕಿದವು ಹಾಗೂ ಕೆಳವರ್ಗದಲ್ಲಿ ಅವು ಇನ್ನೂ ಹೆಚ್ಚಾಗಿ ಮರೆಯಾದವು.

ಸಾಮಾನ್ಯವಾಗಿ ಕೆಲವು ಪ್ರದೇಶಗಳ ಹೊರತಾಗಿ ಭಾರತದ ಎಲ್ಲಾ ಭಾಗದಲ್ಲಿಯೂ ಪಿತೃವಂಶಿಯ (Patrilineal) ಮತ್ತು ಪಿತೃಸ್ಥಳೀಯ ವಿಭಕ್ತ (Patri local elementary) ಅಥವಾ ಅವಿಭಕ್ತಕುಟುಂಬ ಪದ್ಧತಿಯು ಕಂಡುಬರುತ್ತದೆ. ದೊಡ್ಡ ಅವಿಭಕ್ತ ಕುಟುಂಬವು ಆದರ್ಶವಾದುದು ಎಂದು ನಿರ್ಧರಿಸಿದ್ದಾಗ್ಯೂ, ಅನೇಕ ತಲೆ ಮಾರಿನವರು ಒಂದೇ ಸೂರಿನಲ್ಲಿ ವಾಸಿಸುವ, ಒಂದೇ ಅಡುಗೆ ಮನೆಯಲ್ಲಿ ಊಟ ಮಾಡುವಂತಹ ಕುಟುಂಬಗಳನ್ನು ಗೊತ್ತು ಮಾಡುವುದು ಕಷ್ಟದಾಯಕವಾದುದು. ವಾಸ್ತವವಾಗಿ ಹಳ್ಳಿಗಳಲ್ಲಿ ಅವಿಭಕ್ತಕುಟುಂಬಗಳು ಅಲ್ಲಲ್ಲಿ ಕಂಡು ಬಂದರೂ ಅವು ಚಿಕ್ಕ ಘಟಕಗಳಾಗಿ ತಂದೆತಾಯಿಯರಿಂದಿರು ಅವರ ಮದುವೆಯಾದ ಗಂಡು ಮಕ್ಕಳು ಮತ್ತು ಹೆಂಡತಿ ಮಕ್ಕಳನ್ನು, ಅಥವಾ ಸೋದರರು ಮತ್ತು ಅವರ ಪತ್ನಿಯರು ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ಅವಿಭಕ್ತಕುಟುಂಬಗಳು ವಿಭಕ್ತ ಕುಟುಂಬದಿಂದ ಬೆಳವಣಿಗೆ ಹೊಂದಿವೆ. ವಿಭಕ್ತ ಕುಟುಂಬಗಳು ಮೊದಲು ಪತಿಪತ್ನಿಯರನ್ನು ಒಳ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಗೊಂಡಿದ್ದವು. ಮಕ್ಕಳು ಜನಿಸಿದಂತೆ ಈ ವಿಭಕ್ತ ಕುಟುಂಬಗಳು ವಿಶಾಲವಾದವು. ಗಂಡುಮಕ್ಕಳು ಬೆಳೆದು ದೊಡ್ಡವರಾಗಿ ವಿವಾಹವಾಗಿ ಪತ್ನಿಯರೊಂದಿಗೆ ವಾಸಿಸಲು ಪ್ರಾರಂಭಿಸಿದ ಮೇಲೆ ಕ್ರಮೇಣ ವಿಭಕ್ತ ಕುಟುಂಬವು ಅವಿಭಕ್ತ ಕುಟುಂಬವಾಗಿ ರೂಪುಗೊಂಡಿತು.

ಕುಟುಂಬದೊಳಗೆ ತಂದೆಯು ಯಜಮಾನ. ನಂತರ ತಾಯಿಯು ಎರಡನೆಯ ಸ್ಥಾನವನ್ನು ಪಡೆಯುತ್ತಾಳೆ. ಅನೇಕ ವಿಷಯಗಳಲ್ಲಿ ಭೂಮಿಯ ಸಾಗುವಳಿ ಮತ್ತು ಇತರೆ ಹೊರಗಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹಿರಿಯ ಮಗನು, ತಂದೆಯ ನಂತರ ಹೆಚ್ಚು ಅಧಿಕಾರವನ್ನು ಹೊಂದಿರುತ್ತಾನೆ. ಭೂಮಿಯ ಸಾಗುವಳಿ ಮಾಡುವಲ್ಲಿ ಮತ್ತು ಕುಟುಂಬದ ಇತರೆ ಕೆಲಸಗಳಲ್ಲಿ ಇವನ ಪಾತ್ರವು ಮುಖ್ಯವಾಗಿರುತ್ತದೆ. ಎಲ್ಲಿಯವರೆಗೂ ತಂದೆ ತಾಯಿಯರು ದೈಹಿಕವಾಗಿ ಸಮರ್ಥರಾಗಿರುತ್ತಾರೋ ಹಾಗೂ ಮಾನಸಿಕವಾಗಿ ಜಾಗರೂಕರಾಗಿರುತ್ತಾರೋ ಅಲ್ಲಿಯವರೆಗೂ ಕುಟುಂಬದ ವ್ಯವಹಾರಗಳನ್ನು ಅವರೇ ನಿರ್ವಹಿಸುತ್ತಾರೆ. ತಂದೆಯು ಬಾಹ್ಯ ಕೆಲಸಗಳನ್ನು ನೋಡಿಕೊಂಡರೆ ತಾಯಿಯು ಮನೆಯ ಒಳಗಿನ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಾಳೆ. ಗಂಡು ಮಕ್ಕಳು ತಮ್ಮ ತಂದೆತಾಯಿಯರಿಗೆ ವಿಧೇಯರಾಗಿರಬೇಕು. ಸೊಸೆಯಂದಿರು ಅತ್ತೆಯರಿಂದ ನಿಯಂತ್ರಿಸಲ್ಪಡುತ್ತಾರೆ. ಮತ್ತು ಅವರು ಯಾವಾಗಲೂ ಅತ್ತೆಯರಿಗೆ ವಿಧೇಯರಾಗಿ ಗೌರವಿಸಬೇಕು. ಹೆಚ್ಚು ಸಂಘಟಿತಗೊಂಡಿರುವಂತಹ ಅವಿಭಕ್ತ ಕುಟುಂಬದಲ್ಲಿ ವಿವಿಧ ಸದಸ್ಯರಲ್ಲಿ ಯಾವಾಗಲೂ ಒಗ್ಗಟ್ಟು ಮತ್ತು ಐಕ್ಯತೆ ಇರುತ್ತದೆ. ಅವರೆಲ್ಲ ಒಂದು ಆಟಗಾರರ ತಂಡದಂತೆ ಕಾರ್ಯನಿರ್ವಸುತ್ತಾರೆ. ಹಿರಿಯರಿಗೆ ವಿಧೇಯರಾಗಿರುತ್ತಾರೆ ಮತ್ತು ಕಿರಿಯರನ್ನು ವಿಶ್ವಾಸದಿಂದ ನೋಡಿಕೊಂಡು ಪರಸ್ಪರ ಅರ್ಥಮಾಡಿಕೊಂಡಿರುತ್ತಾರೆ. ಘರ್ಷಣೆ ಮತ್ತು ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡದೆ ಅದುಮಿಟ್ಟಿರುತ್ತಾರೆ. ಘನತೆ ಮತ್ತು ಶಿಷ್ಟಾಚಾರವನ್ನು ಎತ್ತಿಹಿಡಿಯುತ್ತಾರೆ. ಒಂದು ವೇಳೆ ಘರ್ಷಣೆ ಮತ್ತು ಭಿನ್ನಾಭಿಪ್ರಾಗಳು ಕಂಡು ಬಂದಲ್ಲಿ ಹಿರಿಯರು ಮಧ್ಯಸ್ಥಿಕೆವಹಿಸಿ ರಾಜಿಮಾಡುತ್ತಾರೆ. ಕುಟುಂಬದ ಸದಸ್ಯರಿಗೆ ಯಾವಾಗಲೂ ಅವರ ವಯಸ್ಸು ಮತ್ತು ಸ್ಥಾನಮಾನಕ್ಕನುಸಾರವಾಗಿ ಇತರೆ ಸದಸ್ಯರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬ ಒಳ್ಳೆಯ ನಡತೆಗಳ ಬಗ್ಗೆ ಬೋಧಿಸಲಾಗುವುದು.

ಮೇಲೆ ವಿವರಿಸಿದಂತಹ ಅವಿಭಕ್ತ ಕುಟುಂಬಗಳು ಆದರ್ಶವಾದಂತಹವುಗಳು ಮತ್ತು ಹಳ್ಳಿಯ ಜನರಿಂದ ಹೆಚ್ಚು ಅಪೇಕ್ಷಣೀಯವಾದಂತಹವುಗಳು ಎಂದು ತೀರ್ಮಾನಿಸಿದ್ದಾಗ್ಯೂ ಅದರ ಸದಸ್ಯರು ಹೆಚ್ಚುಕಾಲ ಒಟ್ಟಿಗೆ ಮುಂದುವರಿಯುವುದು ಕಠಿಣ. ಸಾಮಾನ್ಯವಾಗಿ ಗಂಡುಮಕ್ಕಳು ಮದುವೆಯಾದ ಕೆಲವು ವರ್ಷಗಳಲ್ಲಿ ತಂದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾಯಿಯರಿಂದ ಬೇರೆಯಾಗಿ ವಾಸಿಸುತ್ತಾರೆ. ದುಬೆ[6] ಯವರ ಪ್ರಕಾರ ಅವರು ಅಧ್ಯಯನ ಮಾಡಿದಂತಹ ಸನ್ನಿವೇಶಗಳಲ್ಲಿ ಶೇಖಡ 34ರಷ್ಟು ಗಂಡುಮಕ್ಕಳು ಮದುವೆಯಾದ ಎರಡರಿಂದ ಮೂರು ವರ್ಷಗಳಲ್ಲಿ ತಂದೆತಾಯಿಯರಿಂದ ಬೇರೆಯಾಗಿ ವಾಸಿಸುತ್ತಿದ್ದರು. ಶೇ.28 ರಷ್ಟು ಮೂರು ವರ್ಷಗಳ ನಂತರ ಆದರೆ ಐದು ವರ್ಷಗಳ ಕಾಲ ಮದುವೆಯಾದ ನಂತರ ತಮ್ಮ ತಂದೆತಾಯಿಯರೊಡನೆ ವಾಸಿಸುತ್ತಿದ್ದರು. ಗಂಡನು ತನ್ನ ಹೆಂಡತಿಯೊಂದಿಗೆ ತನ್ನ ತಂದೆತಾಯಿಯವರ ಮನೆಯಲ್ಲಿ ವಾಸಮಾಡುವಂತಹ ಅವಧಿಯಲ್ಲಿ ಅವನು ತಂದೆ ಮತ್ತು ಹಿರಿಯ ಅಣ್ಣನ ಮಾರ್ಗದರ್ಶನದಲ್ಲಿ ಕೆಲಸ ಮಾಡಿಕೊಂಡು ಮುಂದು ಮುಂದುವರಿಯಬೇಕಾಗುತ್ತದೆ ಮತ್ತು ಆತನ ಹೆಂಡತಿಯು ತನ್ನ ಅತ್ತೆಯ ಸೂಚನೆಯ ಮೇರೆಗೆ ಮನೆಯ ಕೆಲಸವನ್ನು ನಿರ್ವಹಿಸಿಕೊಂಡು ಹೋಗಬೇಕಾಗುತ್ತದೆ. ಈ ಸೊಸೆಯು ತನ್ನ ಆತ್ತೆಗೆ ಸಂಪೂರ್ಣವಾಗಿ ಅಧೀನಳಾಗಿರಬೇಕಾಗುತ್ತದೆ. ಅವಳು ತನ್ನ ಅತ್ತೆಯ ಉದ್ಧಟತನದ ಬಗ್ಗೆ ಪತಿಗೆ ದೂರು ಸಲ್ಲಿಸುವುದನ್ನು ಸಹ ನಿರೀಕ್ಷಿಸುವ ಹಾಗಿಲ್ಲ. ಕೆಲವು ತಿಂಗಳುಗಳ ಅಥವಾ ವರ್ಷಗಳ ನಂತರ ಅತ್ತೆಸೊಸೆಯರ ವೈಮನಸ್ಸು ಹೆಚ್ಚಾಗುತ್ತದೆ. ಘರ್ಷಣೆಗಳು ಅಧಿಕವಾಗಿ ಆಗಿಂದ್ದಾಗೆ ಜಗಳಗಳು ಸಂಭವಿಸಬಹುದು. ಗಂಡನಾದವನಿಗೆ ಯಾರ ಪರ ವಹಿಸಬೇಕು, ತಾಯಿಯ ಪರವೇ ಅಥವಾ ಹೆಂಡತಿಯ ಪರವೇ ಎಂಬ ದ್ವಂದಕ್ಕೆ ಒಳಗಾಗುತ್ತಾನೆ. ಪ್ರಾರಂಭದಲ್ಲಿ ಅವನು ಇಂತಹ ದೂರುಗಳನ್ನು ನಿರ್ಲಕ್ಷಿಸಿದರೂ ಹೆಚ್ಚು ಕಾಲದವರೆಗೂ ಸಂಭವಿಸುತ್ತಲೇ ಇದ್ದರೆ ಅವನಿಗೆ ಬಗೆಹರಿಸುವುದು ತುಂಬಾ ಕಷ್ಟಕರವಾಗುತ್ತದೆ.

ಘರ್ಷಣೆ ಹೆಚ್ಚಾದಂತೆ ಹೆಂಡತಿಯು ಬೇರೆಯ ಮನೆಯನ್ನು ಮಾಡಲು ಒತ್ತಾಯಿಸುತ್ತಾಳೆ. ಅಂತಹ ಸಂದರ್ಭದಲ್ಲಿ ಗಂಡನು ತನ್ನ ಹೆಂಡತಿಯನ್ನು ಹತೋಟಿಯಲ್ಲಿಟ್ಟು ತನ್ನ ತಂದೆತಾಯಿಯರೊಟ್ಟಿಗೆ ವಾಸಮಾಡುವುದನ್ನು ಮುಂದುವರಿಸಬೇಕೇ ಅಥವಾ ಬೇರೆಯ ಮನೆಯನ್ನು ಸ್ಥಾಪಿಸಬೇಕೆ ಎಂಬ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹೆಚ್ಚು ಘಟನೆಗಳಲ್ಲಿ ಗಂಡಹೆಂಡತಿಯರು ಬೇರೆಯಾಗಿ ತಮ್ಮದೇ ಆದಂತಹ ಸ್ವತಂತ್ರ ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಇದು ಸಾಮಾನ್ಯ ಅವಿಭಕ್ತ ಕುಟುಂಬವು ಶಿಥಿಲವಾಗುವುದಕ್ಕೆ ದಾರಿಯಾಗಿದೆ.

ದಂಪತಿಗಳು ಪ್ರತ್ಯೇಕ ಸಂಸಾರವನ್ನು ಹೂಡಿದ ಮೇಲೆ ಅವರ ಜೀವನದ ಹೊಸ ಮುಖ ಪ್ರಾರಂಭವಾಗುತ್ತದೆ. ಈಗ ಯಾರ ಅಜ್ಞೆಯೂ ಇಲ್ಲದೆ ತಮ್ಮ ಬದುಕನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಗಂಡನು ತನ್ನ ತಂದೆ ಅಥವಾ ಹಿರಿಯ ಅಣ್ಣನಿಗೆ ಅಧೀನವಾಗಿರುವ ಅವಶ್ಯಕತೆಯಿಲ್ಲ. ಹಾಗೆಯೇ ಹೆಂಡತಿ ತನ್ನ ಅತ್ತೆಗೆ ಅಡಿಯಾಳಾಗುವ ಅವಶ್ಯಕತೆಯಿಲ್ಲ. ಕೇವಲ ಗಂಡನೊಬ್ಬನೇ ಜೀವನೋಪಾಯಕ್ಕೆ ಸಂಪಾದಿಸುವವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಆದರಲ್ಲೂ ಕೆಲಸಗಾರರ ವರ್ಗದಲ್ಲಿ ಹೆಂಡತಿಯು ಕೂಡ ಕುಟುಂಬದ ಸಂಪಾದನೆಗೆ ಕೊಡುಗೆಯನ್ನು ನೀಡುತ್ತಾಳೆ. ಆದರೂ ಹೆಂಡತಿಯ ಮುಖ್ಯ ಕೆಲಸ ಮನೆಯ ಒಳಗಿನ ಕೆಲಸಗಳನ್ನು ನಿರ್ವಹಿಸುವುದಾಗಿರುತ್ತದೆ.

ಪಿತೃಸಂಬಂಧದ ಕುಟುಂಬದಿಂದ ಒಡೆದು ಪ್ರತ್ಯೇಕ ಕುಟುಂಬವೊಂದು ಉಂಟಾಗಲು ಜಗಳಗಳು ಮತ್ತು ಭಿನ್ನಾಭಿಪ್ರಾಯಗಳು ಕಾರಣವಾಗಿವೆ. ಪ್ರತ್ಯೇಕವಾದ ಎರಡೂ ಕುಟುಂಬಗಳ ಸಂಬಂಧವು ಸ್ವಲ್ಪಕಾಲದವರೆಗೆ ಗೊಂದಲಮಯವಾಗಿ ಮುಂದುವರಿಯುತ್ತದೆ. ಆದರೆ ಕಾಲಾಂತರದಲ್ಲಿ ಜಗಳಗಳು ನಿಂತುಹೋಗಿ ಕಟುತ್ವ ಹೋಗುತ್ತದೆ. ಸಂಬಂಧವು ಎಂದಿನಂತಾಗಿ ಸೌಹಾರ್ದತೆ ಬೆಳೆಯುತ್ತವೆ. ತಾತಂದಿರಿಗೆ ತಮ್ಮ ಮೊಮ್ಮಕ್ಕಳ ಬಗ್ಗೆ ಹೊಂದಿರುವ ಅಪಾರ ಪ್ರೇಮ ಈ ಎರಡು ಕುಟುಂಬಗಳನ್ನು ರಾಜಿ ಮಾಡುವಲ್ಲಿ ಕಾರಣವಾಗುತ್ತದೆ. ಹೀಗಾದ ಮೇಲೆ ಎರಡೂ ಕುಟುಂಬಗಳು ಅನ್ಯೋನ್ಯವಾಗಿ ಪರಸ್ಪರ ವ್ಯವಹಾರಗಳಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸುತ್ತವೆ. ಹಬ್ಬಗಳಲ್ಲಿ ಮತ್ತು ಕ್ರಿಯಾವಿಧಿಗಳನ್ನು ಆಚರಿಸುವಂತಹ ಸಂದರ್ಭದಲ್ಲಿ ಎರಡು ಕುಟುಂಬದವರು ಸೇರುತ್ತಾರೆ. ಮನೆಯ ದೇವರು ಮತ್ತು ಪೂರ್ವಜರಿಗೆ ಸಂಬಂಧಿಸಿದಂತಹ ಕ್ರಿಯಾವಿಧಿಗಳು ಪ್ರಾಮುಖ್ಯತೆ ಹೊಂದಿರುತ್ತವೆ. ಇವುಗಳಿಗೆ ಎಲ್ಲಾ ಕುಟುಂಬದವರೂ ಹಾಜರಾಗುವ ಅವಶ್ಯಕತೆ ಇದೆ. ಒಂದು ವೇಳೆ ಯಾರಾದರೂ ಇಂತಹ ಮುಖ್ಯವಾದಂತಹ ಕಾರ್ಯಕ್ರಮಗಳಿಗೆ ಹಾಜರಾಗುವುದನ್ನು ತಪ್ಪಿಸಿದರೆ ಇಡೀಕುಟುಂಬಕ್ಕೆ ಅವಮಾನ ಮಾಡಿದಂತೆ ಮತ್ತು ಇದು ಸಂಬಂಧಗಳು ಒಡೆದು ಹೋಗುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ಸಾಮಾನ್ಯವಾಗಿ ಯಾರು ಕೂಡ ಇಂತಹ ಸಂದರ್ಭಗಳಲ್ಲಿ ತಪ್ಪಿಸಿಕೊಳ್ಳುವ ಹಾಗಿಲ್ಲ. ಹೀಗೆ ಸಮಯ ಕಳೆದ ನಂತರ ಸ್ನೇಹ ಸಂಬಂಧಗಳು ಸಾಮಾನ್ಯವಾಗಿ ಜನ್ಮದಾತೃ ಕುಟುಂಬ ಮತ್ತು ಇತರೆ ಪ್ರತ್ಯೇಕವಾಗಿದ್ದಂತಹ ಕುಟುಂಬಗಳ ನಡುವೆ ಸ್ಥಾಪನೆಯಾಗುತ್ತದೆ.

ಪ್ರತಿಯೊಂದು ವಿಭಕ್ತ ಕುಟುಂಬವೂ ಹೀಗೆ ಪಿತೃ ಕುಟುಂಬದ ಶಾಖೆಯಾಗಿರುತ್ತದೆ. ಹಾಗೂ ನಿತ್ಯದ ಜೀವನದಲ್ಲಿ ಘಟಕವಾಗಿ ಇದು ಕಾರ್ಯ ನಿರ್ವಹಿಸುತ್ತದೆ. ಇತರೆ ಸಂದರ್ಭದಲ್ಲಿ ಮುಖ್ಯ ಕುಟುಂಬ ಮತ್ತು ಇತರೆ ಶಾಖಾ ಕುಟುಂಬಗಳ ನಡುವೆ ಮೈತ್ರಿ ಏರ್ಪಡುತ್ತದೆ. ವಿಶೇಷ ಕಾರ್ಯಕ್ರಮ ಮತ್ತು ಕ್ರಿಯಾವಿಧಿಗಳನ್ನು ಆಚರಿಸುವಂತಹ ಸಂದರ್ಭಗಳಲ್ಲಿ ಈ ಎರಡು ಘಟಕಗಳು ಒಟ್ಟಿಗೆ ಕಾರ್ಯನಿರ್ವಹಿಸುತ್ತವೆ. ಆಸ್ತಿಯ ಮಾರಾಟ ಅಥವಾ ಕೊಂಡುಕೊಳ್ಳುವುದು, ಸಾಲವನ್ನು ಪಡೆಯುವುದು, ಭೂಮಿಯ ಭೋಗ್ಯಮಾಡುವುದು, ಮದುವೆ ಏರ್ಪಾಡುಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಮುಖ್ಯ ತೀರ್ಮಾನಗಳನ್ನು ಇತರರನ್ನು ಭೇಟಿಯಾಗಿ ಅದರಲ್ಲೂ ವಿಶೇಷವಾಗಿ ಹಿರಿಯರು ಮತ್ತು ಕುಟುಂಬದ ಇತರೆ ಅನುಭವಿ ಸದಸ್ಯರೊಂದಿಗೆ ಚರ್ಚಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೀರ್ಮಾನಿಸಲಾಗುವುದು. ಯಾವುದೇ ಸಂದರ್ಭದಲ್ಲಿಯೂ ಸಹ ಕುಟುಂಬದ ಹಿರಿಯನನ್ನು ನಿರ್ಲಕ್ಷಿಸುವ ಹಾಗಿಲ್ಲ. ಕುಟುಂಬದ ಹಿರಿಯನಿಗೆ ಯಾವುದೇ ರೀತಿಯ ಉದಾಸೀನತೆ ಅಥವಾ ಅಗೌರವವನ್ನು ತೋರಿಸಿದರೆ ಇಡೀ ಬಂಧುಬಳಗದವರೆಲ್ಲರೂ ಸಹ ಅಸಮಾಧಾನಗೊಂಡಂತೆ ಮತ್ತು ಈ ವರ್ತನೆಯು ಅನೇಕ ರೀತಿಯಲ್ಲಿ ಕುಟುಂಬದ ಶಿಷ್ಟಾಚಾರವನ್ನು ಉಲ್ಲಂಘಿಸಿದಂತಾಗುವುದು. ಕೌಟುಂಬಿಕ ಮನೋಭಾವನೆ ಮತ್ತು ಘನತೆ ಇವುಗಳು ತುಂಬಾ ಆಳವಾಗಿ ಬೇರೂರಿದ್ದು ಬೇರೆಯಾದ ಮೇಲೂ, ಒಂದು ಘಟಕವು ಲೋಕಪವಾದಕ್ಕೆ ಗುರಿಯಾಗುವುದು ಅಥವಾ ಅನುಚಿತವಾಗಿ ನಡೆದುಕೊಳ್ಳುವುದು ಎಲ್ಲಾ ಕುಟುಂಬಗಳ ಒಳ್ಳೆಯ ಹೆಸರಿಗೆ ಕಳಂಕ ಹಚ್ಚಿದಂತೆ. ಆದ್ದರಿಂದ ಯಾವುದೇ ಘಟಕದಲ್ಲಿಯೂ ಸಹ ದುರ್ನಡತೆಗೆ ಅವಕಾಶಕೊಡದಂತೆ ನೋಡಿಕೊಳ್ಳುವುದು ಕುಟುಂಬದ ಹಿರಿಯನ ಕರ್ತವ್ಯವಾಗಿರುತ್ತದೆ. ಹಾಗೇನಾದರೂ ಸಂಭವಿಸಿದರೆ ಹಿರಿಯರು ಮುಂದೆ ಬಂದು ಸರಿಪಡಿಸುವುದು ಪದ್ಧತಿ. ಹೀಗೆ ಹಿರಿಯರು ಸಲಹೆ ನೀಡಲು ಮತ್ತು ಅದನ್ನು ಅನುಸರಿಸುವಂತೆ ಆಜ್ಞೆ ಮಾಡುವ ಹೆಚ್ಚು ಅಧಿಕಾರವನ್ನು ಹೊಂದಿರುತ್ತಾರೆ.

ಕಾರ್ಯನಿರ್ವಹಿಸುತ್ತಿರುವ ಇತರೆ ಸಂಸ್ಥೆಗಳಂತೆಯೇ ಅವಿಭಕ್ತ ಕುಟುಂಬವು ಸಹ ಬದಲಾಗುತ್ತಿದೆ. ಕಪಾಡಿಯರವರು ಗೋಚರವಾಗುವಂತಹ ಬದಲಾವಣೆಗಳು ಅವಿಭಕ್ತ ಕುಟುಂಬದಲ್ಲಿ ಮನು ಮತ್ತು ಇತರೆ ಸ್ಮೃತಿಕಾರರ ಕಾಲದಲ್ಲಿಯೂ ಸಂಭವಿಸಿದ್ದವು ಎಂದು ಬರೆಯುತ್ತಾರೆ. ಆದರೆ ಕೆಲವು ಕಾರಣಗಳಿಂದಾಗಿ ಮನು ಅಗಲಿ ಅಥವಾ ಇತರ ಸ್ಮೃತಿಕಾರರಾಗಲಿ ಅವಿಭಕ್ತ ಕುಟುಂಬದ ಬದಲಾವಣೆಗಳ ಕಡೆಗೆ ಒಲವು ತೋರಲಿಲ್ಲ.

ಇಂದಿನವರೆಗೂ ಅವಿಭಕ್ತ ಕುಟುಂಬದಲ್ಲಿನ ಬದಲಾವಣೆಗಳ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಕೆಲವು ಸಮಾಜಶಾಸ್ತ್ರಜ್ಞರು ಅವಿಭಕ್ತ ಕುಟುಂಬದಲ್ಲಿ ಕೆಲವು ಅನಿವಾರ್ಯ ಬದಲಾವಣೆಗಳು ಕಂಡುಬಂದಿವೆ. ಜಾತಿಪದ್ಧತಿಯಂತೆ ಅವಿಭಕ್ತಕುಟುಂಬವು ಸಹ ಹಿಂದೂ ಸಮಾಜದ ವಿಶಿಷ್ಟ ಲಕ್ಷಣವಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಇದು ಯಾವುದೇ ಪರಿಸ್ಥಿತಿಯಲ್ಲಿಯೂ ಸಹ ಧಕ್ಕೆಯನ್ನು ಅನುಭವಿಸದೇ ಸಂರಕ್ಷಿತವಾಗಿರುತ್ತದೆ ಎಂದು ಭಾವಿಸಿದ್ದಾರೆ. ಒಂದು ವೇಳೆ ಅವಿಭಕ್ತಕುಟುಂಬವು ನಶಿಸಿಹೋದರೆ ಇಡೀ ಭಾರತದ ಸಂಸ್ಕೃತಿ ಮತ್ತು ಸಮಾಜಕ್ಕೆ ಗಂಡಾಂತರ ಉಂಟಾದಂತೆ ಎಂದು ಹೆದರಿಕೆಯನ್ನು ವ್ಯಕ್ತಪಡಿಸಿದ್ದಾರೆ.

ಆದರೆ ಅದೇ ಸಮಯದಲ್ಲಿ, ಇತರೆ ಕೆಲವರು ಜಾತಿಪದ್ಧತಿಯಂತೆ ಅವಿಭಕ್ತ ಕುಟುಂಬವು ಹೆಚ್ಚುಕಾಲ ಬದುಕಿದ್ದು ಅದು ಈಗ ಹೆಚ್ಚು ಪ್ರಚಲಿತದಲ್ಲಿಲ್ಲ ಎಂದು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಅಭಿಪ್ರಾಯಪಟ್ಟಿದ್ದಾರೆ. ಇದು ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವುದರ ಬದಲಿಗೆ ಅದನ್ನು ತಡೆಗಟ್ಟುತ್ತದೆ. ಏಕೆಂದರೆ ಅವಿಭಕ್ತ ಕುಟುಂಬದ ಸದಸ್ಯರ ಸಾಮಾಜೀಕರಣವು ಅವರನ್ನು ಸಾಮಾಜಿಕ ವ್ಯವಸ್ಥೆಯ ಚಲನೆಯಲ್ಲಿ ಮೇಲೇರದಂತೆ ಮಾಡುತ್ತದೆ. ಅವಿಭಕ್ತ ಕುಟುಂಬದಲ್ಲಿ ಹುಟ್ಟಿ ಬೆಳೆದಂತಹ ವ್ಯಕ್ತಿಗಳು ಹೆಚ್ಚು ಉತ್ಸಾಹಿಗಳಾಗಿರುವುದಿಲ್ಲ, ಮತ್ತು ಮೂಲ ವ್ಯವಸ್ಥೆಗೆ ಹೊಂದಿಕೊಂಡಿರುತ್ತಾರೆ. ಅವರು ಹೆಚ್ಚು ಕಾಲದವರೆಗೆ ಅವರ ಹಿರಿಯರನ್ನು ಅನುಸರಿಸುತ್ತಾರೆ. ಆದ್ದರಿಂದ ಅವಿಭಕ್ತ ಕುಟುಂಬವು ನಶಿಸಿಹೋಗುವುದಕ್ಕೆ ವಿಷಾದಪಡುವ ಅವಶ್ಯಕತೆಯಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಅವರ ವಾದವನ್ನು ಬೆಂಬಲಿಸಲು ಚೀನಿಯರ ಸಮಾಜದ ದೃಷ್ಟಾಂತವನ್ನು ಕೊಡುತ್ತಾರೆ. ಭಾರತದಂತೆ ಚೈನಾವೂ ಕೂಡ ಒಂದು ಕಾಲದಲ್ಲಿ ತನ್ನದೇ ಆದಂತಹ ಪ್ರಾಚೀನ ಸಂಪ್ರದಾಯಗಳು ಮತ್ತು ಪದ್ಧತಿಗಳಲ್ಲಿ ಮುಳುಗಿತ್ತು. ಮಾವೋರವರು ಚೈನಾದ ನಾಯಕತ್ವವನ್ನು ವಹಿಸಿಕೊಂಡ ಮೇಲೆ ಮೌಢ್ಯಆಚರಣೆಗಳು ಮತ್ತು ಸಂಪ್ರದಾಯಗಳು ಸಂಸ್ಥೆಗಳಿಂದ ದೇಶವನ್ನು ಮುಕ್ತವನ್ನಾಗಿ ಮಾಡಿದರು. ಮಾವೋರವರ ಈ ಪ್ರಯತ್ನದಿಂದಾಗಿ ಚೀನವು ತ್ವರಿತವಾಗಿ ಆಧುನೀಕರಣದ ಕಡೆಗೆ ಸಾಗಿತು. ಹಾಗೂ ಇಂದು ವಿಶ್ವದಲ್ಲಿ ಪ್ರಬಲವಾದ ರಾಷ್ಟ್ರಗಳಲ್ಲಿ ಒಂದಾಗಿದೆ. ಇದೇ ರೀತಿಯ ಸಾಂಸ್ಕೃತಿಕ ಕ್ರಾಂತಿಯು, ಭಾರತದ ಅನೇಕ ಪುರಾತನವಾದ ಸಂಸ್ಥೆಗಳಾದ ಜಾತಿ ಮತ್ತು ಅವಿಭಕ್ತ ಕುಟುಂಬಗಳನ್ನು ಶುದ್ಧಿಗೊಳಿಸಲು ಅವಶ್ಯಕವಾಗಿವೆ ಎಂದು ಅಭಿಪ್ರಾಯ ಪಡುತ್ತಾರೆ.

ಅವಿಭಕ್ತ ಕುಟುಂಬವು ಇತ್ತೀಚೆಗೆ ತ್ವರಿತವಾಗಿ ಬದಲಾವಣೆಗಳಿಗೆ ಒಡ್ಡಿಕೊಂಡಿದೆ. ವಿವಿಧ ಅಂಶಗಳು ಇದಕ್ಕೆ ಕಾರಣವಾಗಿವೆ. ಅವಿಭಕ್ತ ಕುಟುಂಬದ ಬದಲಾವಣೆಯ ಗತಿಯು, ಭಾರತವು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅನುಸರಿಸಿದ ಮೇಲೆ ಹೆಚ್ಚು ವೇಗವಾಗಿ ಪರಿಣಮಿಸಿತು, ಸ್ವಾತಂತ್ರ್ಯವಾದ, ಪ್ರಜಾಪ್ರಭುತ್ವ, ವ್ಯಕ್ತಿವಾದ, ಇವೆಲ್ಲವೂ ಕೂಡ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯಿಂದಾಗಿ ಹರಿಡಿದವು. ಈ ಆದರ್ಶಗಳನ್ನು ಮೈಗೂಡಿಸಿಕೊಂಡ ವಿದ್ಯಾವಂತ ಯುವಕರು ಅವಿಭಕ್ತ ಕುಟುಂಬವು ಈ ಸಿದ್ಧಾಂತಗಳಿಗೆ ಸರಿಹೊಂದುವುದಿಲ್ಲ ಎಂಬುದನ್ನು ಕಂಡುಕೊಂಡರು. ಆದ್ದರಿಂದ ಅವರು ಈ ಪದ್ಧತಿಯ ವಿರುದ್ಧಪ್ರತಿಭಟಿಸಲು ಪ್ರಾರಂಭಿಸಿದರು, ಅನೇಕರು ಅವಿಭಕ್ತ ಕುಟುಂಬದಿಂದ ಹೊರಹೋಗಿ ಸ್ವಾತಂತ್ರ ಜೀವನ ನಡೆಸಲು ಪ್ರಾರಂಭಿಸಿದರು.

ಮೇಲೆ ತಿಳಿಸಿದ ಅಂಶಗಳ ಜೊತೆಗೆ ಔದ್ಯೋಗಿಕರಣ, ನಗರೀಕರಣ ಮತ್ತು ಸ್ವಲ್ಪಮಟ್ಟಿಗೆ ವಲಸೆಯ ಚಲನೆ ಮುಂತಾದವುಗಳು ಭಾರತದಲ್ಲಿ ಅವಿಭಕ್ತ ಕುಟುಂಬವು ದುರ್ಬಲವಾಗಲು ಕಾರಣವಾದವು. ಆರ್ಥಿಕ ವ್ಯವಸ್ಥೆಯ ಮೇಲೆ ಔದ್ಯೋಗೀಕರಣದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಮುಖ್ಯವಾದ ಪ್ರಭಾವವೆಂದರೆ, ಕುಟುಂಬವೆಂಬ ಉತ್ಪಾದನಾ ಘಟಕವನ್ನು ವಿಭಜನೆಗೊಳಿಸಿತು. ಒಂದು ಕೃಷಿ ಆರ್ಥಿಕತೆಯಲ್ಲಿ ಕುಟುಂಬ ಉತ್ಪಾದನೆಯ ಘಟಕ ಮತ್ತು ಅನುಭೋಗದ ಘಟಕವೂ ಕೂಡ ಆಗಿರುತ್ತದೆ. ಇದು ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಹೊಲದಲ್ಲಿ ಕೆಲಸಮಾಡಿ ನಂತರ ಭೂಮಿಯ ಉತ್ಪಾದನೆಯನ್ನು ಸಾಮೂಹಿಕವಾಗಿ ಅನುಭವಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಆದರೆ ಇದು ಔದ್ಯೋಗಿಕ ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಉತ್ಪಾದನೆಯ ಘಟಕವು ಕುಟುಂಬವಾಗಿರುವುದಿಲ್ಲ. ವ್ಯಕ್ತಿ ಆರ್ಥಿಕತೆಯಲ್ಲಿಯಾಗಿರುತ್ತಾನೆ, ಕೆಲವು ಕೌಶಲ್ಯಗಳನ್ನು ಹೊಂದಿರುವಂತಹ ವ್ಯಕ್ತಿಯು ಒಂದು ನಿರ್ದಿಷ್ಟವಾದ ಉದ್ದಿಮೆ ಅಥವಾ ಕಾರ್ಖಾನೆಯಲ್ಲಿ ಉದ್ಯೋಗ ಪಡೆದುಕೊಳ್ಳಬಲ್ಲ. ಇಂತಹ ಸಂದರ್ಭಗಳಲ್ಲಿ ಕುಟುಂಬವು ಕೇವಲ ಅನುಭೋಗದ ಘಟಕವಾಗಿರುವುದಿಲ್ಲ. ಈ ಆರ್ಥಿಕ ಅಂಶವು ಪುನಃ ಕುಟುಂಬದ ಸಂಬಂಧವು ಸಡಿಲವಾಗುವಂತೆ ಮಾಡುತ್ತದೆ, ಔದ್ಯೋಗಿಕ ನಗರದಲ್ಲಿ ತೀವ್ರತರವಾದ ಸ್ಥಳಾವಕಾಶ ಮತ್ತು ಮನೆಗಳ ಅಭಾವವಿರುವುದರಿಂದ ಒಂದು ಅವಿಭಕ್ತ ಕುಟುಂಬವು ಸಣ್ಣ ಘಟಕಗಳಾಗಿ ವಿಭಾಗವಾಗುತ್ತದೆ. ನಗರಗಳಲ್ಲಿ ವಸತಿಯು ಕೊರತೆಯಿರುವುದರಿಂದ ಹಳ್ಳಿಯಿಂದ ವಲಸೆ ಬರುವಂತಹವರು ತಮ್ಮ ಕುಟುಂಬದ ಇತರರನ್ನು ಮನೆಯಲ್ಲಿಯೇಬಿಟ್ಟು ಏಕಾಂಗಿಯಾಗಿ ನಗರಗಳಿಗೆ ಬರುತ್ತಾರೆ. ಎಷ್ಟೋ ಸಂದರ್ಭದಲ್ಲಿ ತಮ್ಮ ಹೆಂಡತಿ ಮತ್ತು ಮಕ್ಕಳೊಂದಿಗೆ ವಾಸಿಸಲು ಸಹ ಸಾಧ್ಯವಾಗುವುದಿಲ್ಲ.

ಈ ಆರ್ಥಿಕ ಅಂಶಗಳ ಜೊತೆಗೆ ಇತರೆ ಕೆಲವು ಕಾರಣಗಳು ಭಾರತದಲ್ಲಿ ಅವಿಭಕ್ತ ಕುಟುಂಬವು ಶಿಥಿಲವಾಗುತ್ತಿರುವುದಕ್ಕೆ ಕಾರಣವಾಗಿದೆ. ಉದಾಹರಣೆಗೆ ಸ್ತ್ರೀ ಚಳುವಳಿಗಳು ಸಾಮಾಜಿಕ ರಚನೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿವೆ. ಭಾರತದಲ್ಲಿ ಸ್ತ್ರೀ ಚಳುವಳಿಯು ಲಾರ್ಡ್ ವಿಲಿಯಂ ಬೆಂಟಿಂಕ್ ಮತ್ತು ಶ್ರೇಷ್ಠ ಸಮಾಜ ಸುಧಾರಕರಾದ ರಾಜಾರಾಮ್ ಮೋಹನ್‌ರಾಯ್‌ರವರ ಕಾಲದಲ್ಲಿ ಪ್ರಾರಂಭವಾಯಿತು. ಜೊತೆಗೆ ಅವರು ಅನಿಷ್ಟ ಪದ್ಧತಿಗಳಾದ ಶಿಶುಹತ್ಯೆ, ಸತಿ, ದೇವದಾಸಿ ಪದ್ಧತಿ ಮುಂತಾದವುಗಳನ್ನು ನಿರ್ಬಂಧಿಸಿದರು. ಇವು ಭಾರತೀಯ ಸ್ತ್ರೀಯರನ್ನು ಕೀಳುದೃಷ್ಟಿಯಿಂದ ಮತ್ತು ಅವಮಾನವೀಯವಾಗಿ ಕಾಣುವುದಕ್ಕೆ ಕಾರಣವಾಗಿದ್ದವು. ಗಾಂಧೀಯವರ ನಾಯಕತ್ವದಲ್ಲಿ ಈ ಚಳುವಳಿಯು ಚಾಲನೆಯನ್ನು ಪಡೆಯಿತು. ಗಾಂಧೀಯವರು ತಮ್ಮ ಸಾರ್ವಜನಿಕ ಸೇವೆಯಲ್ಲಿ ಸ್ತ್ರೀಯರನ್ನು, ಮನೆಯ ಒಳಗಿನ ದುಡಿಮೆ ಮತ್ತು ದಾಸ್ಯದಿಂದ ವಿಮೋಚನೆ ಮಾಡಲು ಹೋರಾಟ ನಡೆಸಿದರು. ಸಾರ್ವಜನಿಕ ಜೀವನಕ್ಕೆ ಮತ್ತು ರಾಷ್ಟ್ರ ನಿರ್ಮಾಣ ಚಟುವಟಿಕೆಗಳಲ್ಲಿ ಕ್ರಿಯಾತ್ಮಕ ಪಾತ್ರವನ್ನು ವಹಿಸುವಂತೆ ಅವರನ್ನು ಪ್ರೋತ್ಸಾಹಿಸಿದರು. ಎಲ್ಲಾ ಕಾರ್ಯಗಳಿಗೂ ಸ್ತ್ರೀಯರನ್ನು ಅಧೀನಳಾಗಿರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತೆ ಮಾಡಿ ದ್ವಿತೀಯ ಸ್ಥಾನಮಾನಗಳನ್ನು ಕೊಟ್ಟಿದ್ದಂತಹ ಅವಿಭಕ್ತ ಕುಟುಂಬವು ಈ ಹೊಸದಾಗಿ ಕಂಡಂತಹ ಚಳುವಳಿಗಳಿಂದ ಪುನಃ ಶಿಥಿಲಗೊಳ್ಳಲು ಪ್ರಾರಂಭ ವಾಯಿತು.

ಅವಿಭಕ್ತ ಕುಟುಂಬದ ಭವಿಷ್ಯದ ಬಗ್ಗೆ ವಿವಿಧ ವಿದ್ವಾಂಸರ ದೃಷ್ಟಿಕೋನಗಳನ್ನು ಗಮನಿಸುವುದು ತುಂಬಾ ಮಹತ್ವವಾದುದು.

ಅವಿಭಕ್ತ ಕುಟುಂಬವು ಕ್ಷೀಣಿಸುತ್ತಿರುವ ಒಲವುಗಳನ್ನು ಜನಗಣತಿ ಮಾಹಿತಿಯು ತೋರಿಸಿದೆ. ಕಪಾಡಿಯ[18] ರವರು ಕುತೂಹಲಭರಿತವಾದ ಅವಲೋಕನ ಮಾಡುತ್ತಾರೆ. ಇವರು ಇಂತಹ ಅಂಕಿಅಂಶಗಳು ಅವಿಭಕ್ತ ಕುಟುಂಬವು ನಶಿಸಿಹೋಗುತ್ತಿದೆ ಎಂದು ನಂಬುವಂತೆ ಮಾಡುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಬದಲಾಗಿ ಇವರು ಭಾರತೀಯರ ಸಾಮಾನ್ಯ ಮನೋಭಾವನೆ ಮತ್ತು ವರ್ತನೆಗಳು ಅವಿಭಕ್ತ ಕುಟುಂಬದ ಕಡೆಗೆ ಒಲವು ಹರಿಸಿವೆ. ಬಹಳ ಸಂಧಿಗ್ದ ಪರಿಸ್ಥಿತಿಯಲ್ಲಿ ಸ್ವತಂತ್ರ ಆಯ್ಕೆಗಿಂತ ಒತ್ತಾಯ ದಿಂದಾಗಿ, ವಿಭಕ್ತ ಅಥವಾ ಆಧುನಿಕ ಕುಟುಂಬಗಳು ಸ್ಥಾಪನೆಯಾಗಿವೆ ಎಂದು ಹೇಳು ತ್ತಾರೆ. ಮರ್ಚೆಂಟ್ ರವರಿಂದ ನಡೆಸಲ್ಪಟ್ಟಿರುವ ಸಮೀಕ್ಷೆಯು ಕಪಾಡಿಯವರ ಈ ದೃಷ್ಟಿಕೋನವನ್ನು ಬೆಂಬಲಿಸುವಂತೆ ತೋರುತ್ತದೆ. ಬೊಂಬಾಯಿಯ ಕಾಲೇಜೊಂದರ ವಿದ್ಯಾರ್ಥಿಗಳನ್ನು ಸಂದರ್ಶಿಸಿದಾಗ ಅವರಲ್ಲಿ ಶೇ. 56ರಷ್ಟು ವಿದ್ಯಾರ್ಥಿಗಳು ಅವಿಭಕ್ತ ಕುಟುಂಬದ ಕಡೆಗೆ ಒಲವು ಹೊಂದಿದ್ದರು. ಕೇವಲ ಶೇ. 32ರಷ್ಟು ವಿದ್ಯಾರ್ಥಿ ಗಳು ಇದನ್ನು ವಿರೋಧಿಸಿದರು. ಉಳಿದವರು ತಟಸ್ಥವಾಗಿದ್ದರು. ಕಪಾಡಿಯವರೇ ನಡೆಸಿದ ಮತ್ತೊಂದು ಸಮೀಕ್ಷೆಯಲ್ಲಿ ಶೇ. 86ರಷ್ಟು ವಿದ್ಯಾರ್ಥಿಗಳು ಅವಿಭಕ್ತ ಕುಟುಂಬದ ಪರವಾಗಿದ್ದರು. ಸುಮಾರು ಶೇ. 12ರಷ್ಟು ವಿದ್ಯಾರ್ಥಿಗಳು ಮಾತ್ರ ಅದನ್ನು ವಿರೋಧಿಸಿದರು. ಆದ್ದರಿಂದ ಕಪಾಡಿಯವರು, ಎಲ್ಲಿಯವರೆಗೂ ಭಾರತದಲ್ಲಿ ಗ್ರಾಮೀಣ ಪ್ರದೇಶಗಳು ಔದ್ಯೋಗಿಕರಣ ಮತ್ತು ನಗರೀಕರಣದಿಂದ ಹೆಚ್ಚು ಪ್ರಭಾವಿತವಾಗುವು ದಿಲ್ಲವೋ ಮತ್ತು ಎಲ್ಲಿಯವರೆಗೂ ಸಂಪ್ರದಾಯಗಳು ಬಲವಾಗಿ ಉಳಿದು ಆಧುನಿಕ ಶಾಸನಗಳಿಂದ ಅವುಗಳನ್ನು ಸಡಿಲಗೊಳಿಸಲು ಸಾಧ್ಯವಿರುವುದಿಲ್ಲವೋ ಅಲ್ಲಿಯವರೆಗೂ ಅವಿಭಕ್ತ ಕುಟುಂಬವು ಮುಂದುವರಿಯುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಆದಾಗ್ಯೂ ಕಪಾಡಿಯವರು ಅವಿಭಕ್ತ ಕುಟುಂಬದ ಶಿಥಿಲತೆಗೆ ಹೆಚ್ಚು ಹೊಡೆತವು ಕೇವಲ ಔದ್ಯೋಗಿಕರಣ ಮತ್ತು ನಗರೀಕರಣದಿಂದ ಬರುವುದಿಲ್ಲ ಅದು ಹೊಸ ಆದರ್ಶಗಳಿಂದ ಬರುತ್ತದೆ ಎಂದು ಭಾವಿಸುತ್ತಾರೆ. ಯುವಜನಾಂಗ ಮತ್ತು ಹಳೆಯ ಜನರ ನಡುವೆ ಸೈದ್ಧಾಂತಿಕ ಅಂತರ ಕ್ರಮೇಣ ಹೆಚ್ಚಾಗುತ್ತಿದೆ. ಸಮಾನತೆ, ವ್ಯಕ್ತಿವಾದ ಮತ್ತು ಪ್ರಜಾಪ್ರಭುತ್ವ ಮುಂತಾದವುಗಳ ಅರ್ಥವನ್ನು ಗ್ರಹಿಸಿಕೊಂಡಂತಹ ಯುವ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಜನತೆ, ಅವಿಭಕ್ತ ಕುಟುಂಬದಲ್ಲಿ ಹಿರಿಯರು ಹೆಚ್ಚು ಅಧಿಕಾರವನ್ನು ಹೊಂದಿದ್ದು ಅವರಿಗೆ ಅಧೀನರಾಗಿರುವುದು ತುಂಬಾ ಕಷ್ಟವೆಂಬುದನ್ನು ಕಂಡುಕೊಂಡಿದ್ದಾರೆ. ಹೆಚ್ಚಾಗಿ ಸ್ತ್ರೀಯರಿಗೆ ಇದು ಮನವರಿಕೆಯಾಗಿದೆ. ವಿದ್ಯಾವಂತ ಸ್ತ್ರೀಯರು ತಮ್ಮ ಅತ್ತೆಯರಿಗೆ ಅಧೀನರಾಗಿ ಬದುಕುವುದನ್ನು ಸಹಿಸಲಾರರು. ಆದ್ದರಿಂದ ಅವರು ತಮ್ಮ ಅತ್ತೆಯರ ನಿಯಂತ್ರಣದಿಂದ ವಿಮುಕ್ತರಾಗಿತಮ್ಮದೇ ಆದಂತಹ ಮನೆಯನ್ನು ಹೊಂದಿ ಸ್ವತಂತ್ರರಾಗಿ ಬದುಕಲು ಕಾತರರಾಗುತ್ತಿದ್ದಾರೆ. ಆದ್ದರಿಂದಲೇ ಮರ್ಚೆಂಟ್‌ರವರು ಸುಮಾರು 75ರಷ್ಟು ಕಾಲೇಜು ಹುಡುಗಿಯರು ವಿಭಕ್ತಕುಟುಂಬದ ಪರವಾಗಿದ್ದಾರೆ ಎಂಬುದನ್ನು ಕಂಡುಕೊಂಡಿರುವುದರಲ್ಲಿ ಆಶ್ಚರ್ಯವಿಲ್ಲ.

ಅವಿಭಕ್ತ ಕುಟುಂಬದಲ್ಲಿ ಬದಲಾವಣೆಯನ್ನು ತರಲು ಕಾಲದಿಂದ ಕಾಲಕ್ಕೆ ಅನೇಕ ಶಾಸನಗಳನ್ನು ಜಾರಿಗೆ ತರಲಾಗಿದೆ. 1930 The Gains of learning Act, ಒಬ್ಬ ವ್ಯಕ್ತಿ ಕುಟುಂಬದ ಸಾಮಾನ್ಯ ಆಸ್ತಿಯಲ್ಲಿ ತನ್ನ ಗಳಿಕೆಯನ್ನು ಹಾಕದೆ ಪ್ರತ್ಯೇಕವಾಗಿ ಇಟ್ಟುಕೊಳ್ಳಬಹುದು ಎಂದು ಹೇಳುತ್ತದೆ. ಇದೇನು ಹೊಸ ಬದಲಾವಣೆಯಲ್ಲ ಎಂದು ಹೇಳಬಹುದು. ಮನು ಸಂಹಿತೆಯು ಕೂಡ ಒಬ್ಬ ವ್ಯಕ್ತಿಯು ತನ್ನ ಗಳಿಕೆಯನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಬಹುದು ಎಂದು ಹೇಳುತ್ತದೆ. ಆದರೆ ಮನುವಿನ ಕಾನೂನುಗಳು ಅನೌಪಚಾರಿಕ ಅಂಗೀಕಾರದೊಂದಿಗೆ ಹೆಚ್ಚು ರೂಢಿಯಲ್ಲಿದ್ದವು. ಬ್ರಿಟೀಷ್ ಸರ್ಕಾರ ಇದನ್ನು ಕಾನೂನು ಮಾಡಿದಾಗ ಈ ಸಂಪ್ರದಾಯಿಕ ಆಚರಣೆಯು ಹೆಚ್ಚು ಕಟ್ಟುನಿಟ್ಟಾದ ಅಂಗೀಕಾರವನ್ನು ಪಡೆಯುವುದರೊಂದಿಗೆ ಬಲವಾಯಿತು. ಪ್ರಿವಿಕೌನ್ಸಿಲ್ (Privy Council) ಕೂಡ ಅವಿಭಕ್ತ ಕುಟುಂಬದಲ್ಲಿ ಒಬ್ಬ ವಿಧವೆಯು ತನಗೆ ಇಷ್ಟ ಬಂದವನನ್ನು ಸ್ವೀಕರಿಸಿದ ಕುಟುಂಬದ ಇತರೆ ಸದಸ್ಯರ ಒಪ್ಪಿಗೆಯು ಸಹ ಇಲ್ಲದೆ ಆಸ್ತಿಯಲ್ಲಿ ಅವನನ್ನು ಪಾಲುದಾರರನ್ನಾಗಿ ಮಾಡಿಕೊಳ್ಳಬಹುದು. ವಿಧವೆಯರು ಸಾಮಾನ್ಯವಾಗಿ ಅವರ ತಂದೆತಾಯಿಯರ ಕಡೆಯ ಸಂಬಂಧಿಕರನ್ನು ಸ್ವೀಕರಿಸುತ್ತಿದ್ದರು. ಅದೇ ರೀತಿಯಲ್ಲಿ ಇತರೆ ಶಾಸನಗಳಾದ 1929ರ ಹಿಂದೂ ಉತ್ತರಾಧಿಕಾರಿ ಶಾಸನ (The Hindu law of Inheritance of 1929) ಮತ್ತು 1937ರ ಹಿಂದೂ ಸ್ತ್ರೀಯ ಆಸ್ತಿಯ ಹಕ್ಕು (The Hindu woman's Right of proper–Act of 1937, ಮತ್ತು 1946ರ ಬೊಂಬಾಯಿ ಹಿಂದು ವಿವಾಹಿತ ಮಹಿಳೆಯ ಪ್ರತ್ಯೇಕ ನಿವಾಸ ಮತ್ತು ಸಂರಕ್ಷಣೆ ಹಕ್ಕಿನ ಕಾಯಿದೆ, (Bombay Hiodu married woman's Right of Seperate Residence and Maintenance Act of 1946) ಈ ಕಾನೂನು ಮದುವೆಯ ನಿಯಮಗಳಾದ ವಯಸ್ಸು, ಸಂಬಂಧದ ರೀತಿ, ಒಪ್ಪಿಗೆ ಮುಂತಾದವುಗಳನ್ನು ಕ್ರಮಪಡಿಸುತ್ತದೆ. ಈ ಎಲ್ಲಾ ಶಾಸನಗಳು ಅವಿಭಕ್ತ ಕುಟುಂಬವು ಒಡೆದು ಹೋಗಲು ಕಾರಣವಾದವು. ಹಿಂದೂ ಉತ್ತರಾಧಿಕಾರದ ಕಾಯಿದೆಯ ಪ್ರಕಾರ (The Hidnu Succession Act) ಒಬ್ಬ ಸ್ತ್ರೀಯು ಹೊಂದಿರುವ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಆಸ್ತಿಗಳಿದ್ದಿರಬಹುದು. ಇಲ್ಲವೇ ಉತ್ತರಾಧಿಕಾರದಿಂದ ಬಾದಿರಬಹುದು, ಅಂತಹ ಆಸ್ತಿಯ ಸಂಪೂರ್ಣ ಒಡೆತನವನ್ನು ಮತ್ತು ನಿಯಂತ್ರಣವನ್ನು ಹೊಂದಿರುತ್ತಾಳೆ. ಇಂತಹ ಕಾಯಿದೆಗಳು ವಿವಾಹ ವಿಚ್ಛೇದನ ಮತ್ತು ಉತ್ತರಾಧಿಕಾರತ್ವ ಮುಂತಾದವುಗಳಿಗೆ ಸಂಬಂಧಿಸಿದಂತೆ ಹೆಚ್ಚು ಸ್ವಾತಂತ್ರ್ಯ ಮತ್ತು ರಕ್ಷಣೆಯನ್ನು ನೀಡಿದವು, ಇವು ಸ್ತ್ರೀಯರ ಸ್ಥಾನಮಾನವನ್ನು ಪುರುಷನಂತೆಯೇ ಭದ್ರಪಡಿಸಿದವು. ಅದೇ ಸಮಯದಲ್ಲಿ ಇವುಗಳು ಸದಸ್ಯರ ಮೇಲೆ ಅವಿಭಕ್ತ ಕುಟುಂಬದ ಹಿಡಿತವು ಸಡಿಲವಾಗುವಂತೆ ಮಾಡಿದವು.

ಮೆಂಡಲ್‌ಬಾಮ್‌ರವರು ಕುಟುಂಬದಲ್ಲಿನ ಬದಲಾವಣೆಗಳ ಬಗ್ಗೆ ವಿವಿಧ ದೃಷ್ಟಿಕೋನಗಳನ್ನು ಹೊಂದಿದ್ದರು. ಅವರು ಬಾಹ್ಯ ಅಂಶಗಳಾದ ಔದ್ಯೋಗೀಕರಣ, ನಗರೀಕರಣ, ಬದಲಾಗುತ್ತಿರುವ ರಾಜಕೀಯ ಸಿದ್ಧಾಂತ, ಶಾಸನಗಳು ಎಲ್ಲವೂ ಅವಿಭಕ್ತ ಕುಟುಂಬದಲ್ಲಿನ ಬದಲಾವಣೆಗಳಿಗೆ ಕಾರಣವಾದವು ಎಂಬುದನ್ನು ಒಪ್ಪುತ್ತಾರೆ. ಉದಾಹರಣೆಗೆ ಇವರು ಇತ್ತೀಚಿನ ಭೂಶಾಸನೆಗಳು ಭೂಒಡೆತನದ ಮೇಲೆ ಮಿತಿಯನ್ನು ಹೇರಿರುವುದು ಹೇಗೆ ಅವಿಭಕ್ತ ಕುಟುಂಬದಲ್ಲಿ ಬದಲಾವಣೆಯನ್ನು ತಂದಿದೆ. ಎಂಬುದನ್ನು ತೋರಿಸಿದ್ದಾರೆ. ಇವರು ಈ ಬಾಹ್ಯ ಅಂಶಗಳು ಪ್ರಾಮುಖ್ಯವಾಗಿದ್ದಾಗ್ಯೂ ಇವುಗಳು ಸಂಪೂರ್ಣವಾಗಿ ಅವಿಭಕ್ತ ಕುಟುಂಬದಲ್ಲಿನ ಬದಲಾವಣೆಗಳನ್ನು ತೋರಿಸುವುದಿಲ್ಲ ಎಂದು ಭಾವಿಸುತ್ತಾರೆ. ಬಾಹ್ಯ ಅಂಶಗಳಿಗಿಂತ ಹೆಚ್ಚಾಗಿ ಸ್ವಭಾವಿಕವಾದ ಅಂಶಗಳಲ್ಲಿನ ಬದಲಾವಣೆಗಳು ಅವಿಭಕ್ತ ಕುಟುಂಬದಲ್ಲಿ ಬದಲಾವಣೆಗಳಿಗೆ ಹೆಚ್ಚು ಕಾರಣವಾದವು. ಬದಲಾವಣೆಯ ಕಾರಣಗಳು ಅವಿಭಕ್ತ ಕುಟುಂಬ ಪದ್ಧತಿಯಲ್ಲಿಯೇ ಸ್ವಾಭವಿಕವಾಗಿದ್ದವು. ಮತ್ತು ಅವಿಭಕ್ತ ಕುಟುಂಬವನ್ನು ಒಂದು ಸಿದ್ಧ ವಸ್ತುವಿಗಿಂತ ಹೆಚ್ಚಾಗಿ ಒಂದು ಪ್ರಕ್ರಿಯೆಯಾಗಿ ಸಮಂಜಸವಾಗಿ ವಿವರಿಸಬೇಕಾಗಿದೆ. ಪ್ರತಿಯೊಂದು ಅವಿಭಕ್ತ ಕುಟುಂಬವು ರಚನೆ, ಒಡಕು, ಮತ್ತು ಸಂಧಾರಣೆ ಮುಂತಾದವುಗಳ ಮೂಲಕ ಹಾದುಹೋಗುತ್ತದೆ.

ಎಲ್ಲಾ ಅವಿಭಕ್ತ ಕುಟುಂಬಗಳು ಏಕವ್ಯಕ್ತಿ ಕುಟುಂಬಗಳಾಗಿ ಪ್ರಾರಂಭವಾಗುತ್ತವೆ ಮತ್ತು ಆ ಸ್ಥಿತಿಯು ಮಕ್ಕಳು ವಯಸ್ಕರಾಗಿ ಮದುವೆಯಾಗುವವರೆಗೂ ಮುಂದುವರಿಯುತ್ತದೆ. ಯಾವಾಗ ಅವರ ಮಕ್ಕಳು ಮದುವೆಯಾಗಿ ತಮ್ಮ ಹೆಂಡತಿ ಮತ್ತು ಮಕ್ಕಳೊಂದಿಗೆ ವಾಸಿಸುತ್ತಾರೋ ಆವಾಗ ಅವಿಭಕ್ತ ಕುಟುಂಬವು ಉಗಮವಾಗುತ್ತದೆ. ಹೆಚ್ಚು ಸದಸ್ಯರನ್ನು ಸೇರಿಕೊಳ್ಳುವುದರಿಂದ ಅವಿಭಕ್ತ ಕುಟುಂಬವು ಗಾತ್ರದಲ್ಲಿ ದೊಡ್ಡದಾಗಿ ಬೆಳೆಯುತ್ತದೆ ಹಾಗೂ ಸೊಸೆಯಂದಿರ ನಡವೆ ಭಿನ್ನಾಭಿಪ್ರಾಯಗಳು ತಲೆದೊರುತ್ತವೆ. ಮತ್ತು ಅತ್ತೆಸೊಸೆಯರ ನಡುವೆಯು ವೈಷಮ್ಯ ಬೆಳೆಯುತ್ತದೆ. ಹೀಗೆ ಕುಟುಂಬದ ಯಜಮಾನನು ಹೆಚ್ಚು ಸಮರ್ಥನಾಗಿದ್ದಲ್ಲಿ ಕುಟುಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ರಕ್ಷಿಸಿ ಸಾಮರಸ್ಯವನ್ನು ಸ್ಥಾಪಿಸುತ್ತಾನೆ. 'ಒಂದು ಬಂಡೆಯನ್ನು ಬೇರೆ ಕಡೆಗೆ ಉರುಳಿಸಿದಾಗ ಅದರಿಂದ ಅನೇಕ ಕ್ರಿಮಿಗಳು ಹೊರಬರುತ್ತವೆ,' ಎಂದು ಹೇಳುವ ಗಾದೆಯಂತ ಅವಿಭಕ್ತ ಕುಟುಂಬಕ್ಕೂ ಈ ಮಾತು ನಿಜವಾಗುತ್ತವೆ. ಕುಟುಂಬದ ಯಜಮಾನ ನಿಧನವಾದಾಗ ಅಥವಾ ತುಂಬಾ ವೃದ್ಧನಾದಾಗ ಭಿನ್ನಾಭಿಪ್ರಾಯಗಳು ತಲೆದೂರಿ ನಿಯಂತ್ರಿಸುವವರಿಲ್ಲದೆ ಕುಟುಂಬವು ಅನೇಕ ಸ್ವತಂತ್ರ ವಿಭಕ್ತ ಕುಟುಂಬ ಗಳಾಗಿ ಒಡೆದು ಹೋಗುತ್ತದೆ. ಪ್ರತಿಯೊಂದು ವಿಭಕ್ತ ಕುಟುಂಬವು ಕಾಲಾಂತರದಲ್ಲಿ ಅವಿಭಕ್ತ ಕುಟುಂಬವಾಗಿ ಬೆಳೆಯುತ್ತದೆ. ಮತ್ತೆ ಈ ವೃತ್ತವು ಸುತ್ತುತ್ತಲೆ ಇರುತ್ತದೆ, ಮೆಂಡಲ್‌ಬಾಮ್‌ರವರು ಇದು ಮೂರು ಅಥವಾ ನಾಲ್ಕು ಪೀಳಿಗೆಯನ್ನು ಒಳ ಗೊಳ್ಳುತ್ತದೆ ಎಂದು ಹೇಳಿದ್ದಾರೆ.

ಶ್ರೀಮಂತಿ ಎಪ್ಸಟೀನ್‌ರವರು ತಮ್ಮ ಪುಸ್ತಕವಾದ 'ಸೌತ್ ಇಂಡಿಯಾ' ಎಂಬುದ ರಲ್ಲಿ ಬೈಲಿ, ಕಾಲದಾತೆ, ಲಾನಾಯ್, ಮತ್ತು ಇತರರು ಭಾರತದ ಹಳ್ಳಿಗಳಲ್ಲಿ ಅವಿ ಭಕ್ತ ಕುಟುಂಬವು ನಶಿಸುತ್ತಿರುವುದಕ್ಕೆ ಕಂಡುಕೊಂಡಿರುವ ಕಾರಣಗಳ ದೃಷ್ಟಿಕೋನ ಗಳನ್ನು ಬೆಂಬಲಿಸಿದ್ದಾರೆ. ಅವರು ಅಧ್ಯಯನ ಮಾಡಿದ ಮಂಗಲಾ ಮತ್ತು ಡಲೇನಾ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬಗಳು ಕ್ರಮಾನುಗತವಾಗಿ ಪ್ರತಿಶತ 8 ಮತ್ತು 10 ರಷ್ಟಿದ್ದವು. ಅವರು ಆರ್ಥಿಕ ಬದಲಾವಣೆಗಳು, ಅವಿಭಕ್ತ ಕುಟುಂಬವು ಸಣ್ಣ ಕುಟುಂಬ ಗಳಾಗಿ ಒಡೆಯುವುದಕ್ಕೆ ಹೆಚ್ಚು ಕಾರಣವಾದವು ಎಂಬುವುದಕ್ಕೆ ಹಲವಾರು ಉದಾ ಹರಣೆಗಳನ್ನು ಕೊಟ್ಟಿದ್ದಾರೆ. ಹೀಗಿದ್ದರೂ ಗ್ರಾಮೀಣ ಸಮುದಾಯದ ಜೀವನಾ ಧಾರದ ಆರ್ಥಿಕತೆಯು ಸಂಯುಕ್ತ ಆಸ್ತಿ ಅಥವಾ ಸಾಮಾನ್ಯ ಆಸ್ತಿಯು ಅವಿಭಕ್ತ ಕುಟುಂಬದ ಅಸ್ತಿತ್ವಕ್ಕೆ ಅವಶ್ಯಕವಾದ ಅಂಶ ಎಂಬುದು ತೋರುತ್ತದೆ. ಮಂಗಲಾ ಮತ್ತು ಡಲೇನಾ ಹಳ್ಳಿಗಳೆರಡರಲ್ಲಿಯೂ ಶ್ರೀಮಂತ ರೈತರು ಅವಿಭಕ್ತ ಕುಟುಂಬಗಳಲ್ಲಿ ವಾಸವಾಗಿದ್ದರು. ಸಾಮಾನ್ಯ ಆಸ್ತಿ ಮತ್ತು ಅವಿಭಕ್ತ ಕುಟುಂಬ ಎರಡೂ ಪರಸ್ಪರಾ ವಲಂಬಿಗಳು, ಕುಟುಂಬದ ಆಸ್ತಿಗೆ ಧಕ್ಕೆಯಾಗದಂತೆ ಕಾಪಾಡಬೇಕಾದರೆ ಅವಿಭಕ್ತ ಕುಟುಂಬದ ಅವಶ್ಯಕತೆ ಇತ್ತು. ಅವಿಭಕ್ತ ಕುಟುಂಬಕ್ಕೆ ಧಕ್ಕೆ ಬರದಂತೆ ನೋಡಿ ಕೊಳ್ಳಬೇಕಾದರೆ ಆಸ್ತಿಯನ್ನು ಸಾಮೂಹಿಕವಾಗಿ ಹೊಂದಿರಬೇಕಾಗಿದ್ದಿತು.

ಟೈಲರ್ ಮತ್ತು ಎನ್ಸ್‌ಮಿಂಗ್‌ರವರು ಅವಿಭಕ್ತ ಕುಟುಂಬದಲ್ಲಿ ಕೇವಲ ಸಾಂಪ್ರದಾಯಿಕವಾದಂತಹ ಕಾರ್ಯಗಳು ಬದಲಾಗಿವೆ, ಕೌಟುಂಬಿಕ ಮನೋ ಭಾವನೆಯು ಭಾರತದಲ್ಲಿ ಆಳವಾಗಿ ಬೇರೂರಿದ್ದು, ಸಹೋದರರು ಬೇರೆಯಾದರೂ ಕೂಡ ಅವರು ಆರ್ಥಿಕ, ಸಾಮಾಜಿಕ, ಧಾರ್ಮಿಕಗಳಂತಹ ಕೆಲವು ಸಂದರ್ಭಗಳಲ್ಲಿ ಒಟ್ಟಿಗೆ ಕಾರ್ಯ ನಿರ್ವಹಿಸುತ್ತಾರೆ, ಹೀಗೆ ಅವಿಭಕ್ತ ಕುಟುಂಬವು ಭಾರತದ ಅತೀ ಪ್ರಾಚೀನವಾದಂತಹ ಮತ್ತು ಹೆಚ್ಚು ಮನ್ನಣೆಯನ್ನು ಪಡೆದಂತಹ ಸಂಸ್ಥೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾತಿಪದ್ಧತಿಯಂತೆಯೇ ಇದನ್ನು ಕೂಡ ವಿರೋಧಿಸಬೇಕಾಗಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಆದರೆ ಭಾರತ ಅಥವಾ ಇತರೆ ಯಾವುದೇ ಸಮಾಜಗಳಲ್ಲೂ ಕಾರ್ಯದಿಯನ್ನು ಜಾರಿಗೆ ತಂದು ಒಂದು ಸಿದ್ಧಾಂತದ ರೀತಿಯಲ್ಲಿ ಮುಂದುವರಿಯುತ್ತಿರುವ ಈ ವ್ಯವಸ್ಥೆಯನ್ನು ನಿರ್ಮೂಲನಗೊಳಿಸುವುದನ್ನು ಊಹೆ ಮಾಡುವುದು ಕೂಡಾ ಕಷ್ಟದಾಯಕವಾದುದು.

ಪರಾಮರ್ಶನಗಳು

1. ಆರ್.ಎಂ.ಮೆಕ್ಯಾವರ್ ಮತ್ತು ಸಿ.ಹೆಚ್. ಪೇಜ್ **ಸೊಸಾಯಿಟಿ** (ಲಂಡನ್ : 1959) ಪು. 238,

2. ಮೇಲಿನದೇ ಪು. 238.

3. ಮಾರ್ಗನ್‌ರವರ ಲೇಖನಗಳ ಸಂಕ್ಷಿಪ್ತವಾದರೂ ತುಂಬ ಉಪಯುಕ್ತವಾದ ವಿಮರ್ಶೆಯನ್ನು ಹೆಚ್. ಈ ಬರ್ನ್ಸ್‌ರವರು ಸಂಪಾದಿಸಿದ **ಆ್ಯನ್ ಇಂಟ್ರೊಡಕ್ಷನ್ ಟು ದಿ ಹಿಸ್ಟರಿ ಆಫ್ ಸೋಶಿಯಾಲಜಿ** ಪುಸ್ತಕದ (ಚಿಕಾಗೊ : 1958) ಪುಟ 138ರಲ್ಲಿ ಕಾಣಬಹುದು.

4. ಮೇಲಿನದೇ ಪು. 654–665,

5. ಮೇಲಿನದೇ ಪು. 668–676.

6. ಡೇವಿಡ್ ಜಿ ಮೆಂಡಲ್‌ಬಾವ್ **'ಸೋಶಿಯಲ್ ಆರ್ಗಾನೈಜೇಶನ್ ಆ್ಯಂಡ್ ಪ್ಲ್ಯಾನ್ಡ್ ಕಲ್ಚರ್ ಚೇಂಜ್ ಇನ್ ಇಂಡಿಯಾ'**

7. ಪಿ.ಹೆಚ್. ಪ್ರಭು **ಹಿಂದೂ ಸೋಶಿಯಲ್ ಆರ್ಗಾನೈಜೇಶನ್** (ಬಾಂಬೆ : 1963) ಪು. 217-18.

8. ಹೆನ್ರಿ ಮೇಯ್ನ. **ಅರ್ಲಿ ಹಿಸ್ಟರಿ ಆಫ್ ಇನ್ಸಟಿಟ್ಯೂಷನ್ಸ್** (ಲಂಡನ್ : 1880), ಪು. 79.

9. ಕೆ. ಎಂ, ಕಪಾಡಿಯಾ, **ಮ್ಯಾರೇಜ್ ಆ್ಯಂಡ್ ಫ್ಯಾಮಿಲಿ ಇನ್ ಇಂಡಿಯಾ** (ಬಾಂಬೆ : 1959), ಪು. 249.

10. ಪಿ.ಹೆಚ್. ಪ್ರಭು ಮೇಲಿನ ಉಲ್ಲೇಖದಂತೆ ಪು. 215-256.

11. ಜೆ. ಎಂ. ಕಪಾಡಿಯಾ ಮೇಲಿನ ಉಲ್ಲೇಖದಂತೆ ಪು. 204-216.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

12. ಮ್ಯಾಕ್ಡೊನೆಲ್ ಮತ್ತು ಕೇತ್ – ಕೆ.ಎಂ. ಕಪಾಡಿಯುವರು ಈಗಾಗಲೆ ಮೇಲಿನ ಉಲ್ಲೇಖದಂತೆ ಪು. 205–206ರಲ್ಲಿ ಪ್ರಸ್ತಾಪಿಸಿದ್ದು.

13. ಮೇಲಿನದೇ

14. ಪಿ.ಹೆಚ್. ಪ್ರಭು ಮೇಲಿನ ಉಲ್ಲೇಖದಂತೆ

15. ಮೇಲಿನದೇ.

16. ಎಸ್. ಸಿ. ದುಬೆ **ಇಂಡಿಯನ್ ವಿಲೇಜ್** (ಲಂಡನ್ : 1959) ಪು. 133.

17. ಕೆ. ಎಂ. ಕಪಾಡಿಯಾ ಮೇಲಿನ ಉಲ್ಲೇಖದಂತೆ ಪು. 216–217.

18. ಮೇಲಿನದೇ

19. ಮೇಲಿನದೇ

20. ಡೇವಿಡ್, ಜಿ. ಮೆಂಡೆಲ್ ಬಾಮ್ ಮೇಲಿನ ಉಲ್ಲೆಖದಂತೆ.

21. ಟಿ. ಎಸ್. ಎಪ್ಸಟೀನ್, **ಎಕನೊಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಚೇಂಜ್ ಇನ್ ಸೌತ್ ಇಂಡಿಯಾ** (ಆಕ್ಸಫರ್ಡ : 1962), ಪು. 176–180.

22. ಟೈಲರ್, ಎನ್ಸವಿಂಗರ್ ಮತ್ತು ಇತರರು, **ಇಂಡಿಯಾಜ್ ರೂಟ್ಸ ಆಫ್ ಡೆಮಾಕ್ರಸಿ** (ಬಾಂಬೆ : 1965) ಪು. 68–86.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ—5

ಬಂಧುತ್ವ

ಕುಟುಂಬದ ಹಾಗೆಯೇ ಬಂಧುತ್ವವು ಸಹ ಸಾಮಾಜಿಕ ರಚನೆಯ ಮೂಲಭೂತ ಮತ್ತು ಪ್ರಾಚೀನ ತಳಹದಿಗಳೊಲ್ಲೊಂದಾಗಿದೆ. ಮಾನವ ಸಮಾಜದ ಇತಿಹಾಸವನ್ನು ಅಧ್ಯಯನಮಾಡಿದ ಸಂಶೋಧಕರು ಸಮುದಾಯದಲ್ಲಿ ವ್ಯಕ್ತಿಗಳನ್ನು ಒಗ್ಗೂಡಿಸಿದ ಪ್ರಾಥಮಿಕ ಬಂಧನ ಬಂಧುತ್ವವೇ ಆಗಿತ್ತು ಎಂಬುದನ್ನು ಕಂಡುಕೊಂಡಿದ್ದಾರೆ. ಕುಟುಂಬವು ಸಾಮಾಜಿಕ ಸಂಘಟನೆಯ ಮೂಲಭೂತ ಘಟಕವಾಗಿದ್ದರೆ ಬಂಧುತ್ವವು ಅಸಂಘಟನೆಯ ಸೂತ್ರವಾಗಿದೆ. ಅದು ವ್ಯಕ್ತಿಗಳ ಹಕ್ಕು ಮತ್ತು ಕರ್ತವ್ಯಗಳ ವ್ಯವಸ್ಥೆಯಾಗಿದ್ದು, ಕೇವಲ ವಿವಿಧ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಮಾತ್ರವಲ್ಲದೆ ಜೊತೆಗೆ ವಿವಿಧ ಕೌಟುಂಬಿಕ ಘಟಕಗಳ ನಡುವಿನ ಸಂಬಂಧಗಳನ್ನೂ ಸಹ ವ್ಯಾಖ್ಯಾನಿಸುತ್ತದೆ. ಇದು ವ್ಯಕ್ತಿ ಮತ್ತು ಕುಟುಂಬಗಳು ಒಟ್ಟಿಗೆ ಬಾಳುವೆ ನಡೆಸಲು ಅನುಕೂಲವಾಗುವಂತಹ ಒಂದು ವ್ಯವಸ್ಥೆಯನ್ನು ಕಲ್ಪಿಸುತ್ತದೆ,

ಮಾನವನ ಮುಖ್ಯ ಅಭಿಲಾಷೆಗಳಾದ ಕುಟುಂಬದ ಸ್ಥಾಪನೆಗೆ ಮತ್ತು ವಂಶಾವಳಿಯನ್ನು ಮುಂದುವರೆಸಿಕೊಂಡು ಹೋಗಲು ಬಂಧುತ್ವ ಸಹಕಾರಿ, ಆದರೆ ಅದು ವ್ಯಕ್ತಿಯ ಹುಟ್ಟಿಗೆ ಕಾರಣವಾದ ಜೈವಿಕ ಅಂಶಗಳಿಗಿಂತ ಹೆಚ್ಚಾಗಿ ಸಾಮಾಜಿಕ ಗುರುತಿಕೆಗೆ ಹೆಚ್ಚು ಬದ್ಧವಾಗಿರುತ್ತದೆ. ಉದಾಹರಣೆಗೆ, ನೀಲಗಿರಿಯ ತೋಡರಲ್ಲಿ ಒಬ್ಬ ಹೆಂಗಸು ಅನೇಕ ಗಂಡಂದಿರನ್ನು ಹೊಂದಿರುತ್ತಿದ್ದ 'ಬಹುಪತಿತ್ವ' ಪದ್ಧತಿಯನ್ನು ಆಚರಿಸುತ್ತಿದ್ದು. ಅನೇಕ ಗಂಡಸರೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದ ಆಕೆಗೆ ತಂದೆ ಮತ್ತು ಮಗುವಿನ ಸಂಬಂಧವನ್ನು ಸ್ಥಾಪಿಸುವುದು ಕಷ್ಟವಾಗುತ್ತಿತ್ತು. ಏಕೆಂದರೆ ಅನೇಕ ಗಂಡಂದಿರಲ್ಲಿ ಯಾರು ನಿರ್ದಿಷ್ಟ ಮಗುವಿನ ಜನನಕ್ಕೆ ಕಾರಣರು ? ಎಂಬ ಪ್ರಶ್ನೆಗೆ ಉತ್ತರ ಕಂಡುಹಿಡಿಯುವುದು ಕಠಿಣ. ಆದ್ದರಿಂದ ತೋಡರು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಒಂದು ಸಾಮಾಜಿಕ ಆಚರಣೆಯನ್ನು ರೂಢಿಸಿಕೊಂಡಿದ್ದರು. ಈ ಆಚರಣೆಯೇ ಬಿಲ್ಲು ಮತ್ತು ಬಾಣದ ಕ್ರಿಯಾವಿಧಿ. ಈ ಕ್ರಿಯಾವಿಧಿಯ ಮೂಲಕ ತಂದೆ ಮತ್ತು ಮಗುವಿನ ಸಂಬಂಧವನ್ನು ಖಚಿತಪಡಿಸಿಕೊಳ್ಳುತ್ತಾರೆ. ಹಾಗೆಯೇ ಮೈದುನ ವಿವಾಹ ಮತ್ತು ಜಾಯ ಭಗಿನಿ ವಿವಾಹ ಪದ್ಧತಿಗಳೂ ಇದೇ ಅಂಶವನ್ನು ಒತ್ತಿಹೇಳುತ್ತವೆ. ಮೈದುನ ವಿವಾಹ ಪದ್ಧತಿಯ ಪ್ರಕಾರ ಒಬ್ಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುರುಷನು, ತನ್ನ ಸಹೋದರನ ಹೆಂಡತಿಯನ್ನು ಆಕೆ ವಿಧವೆಯಾದಲ್ಲಿ ಮದುವೆಯಾಗುವ ಅವಕಾಶ ಉಂಟು. ಇಂತಹ ಸಂಬಂಧದಿಂದ ಹುಟ್ಟಿದ ಮಕ್ಕಳು ನಿಧನಗೊಂಡ ಸಹೋದರನ ವಂಶಕ್ಕೆ ಸೇರಿದವರೆಂದು ನಿರ್ಧರಿಸಲಾಗುತ್ತಿತ್ತು. ಜಾಯ ಭಗಿನಿ ವಿವಾಹದ ಪ್ರಕಾರ ಒಬ್ಬ ಪುರುಷನು ನಿಧನಳಾದ ತನ್ನ ಪತ್ನಿಯ ಸಹೋದರಿಯನ್ನು ಮದುವೆಮಾಡಿಕೊಳ್ಳಲು ಅವಕಾಶವಿದ್ದು, ಹೀಗೆ ಮದುವೆಯಾದ ಸ್ತ್ರೀಯು ನಿಧನಳಾದ ತನ್ನ ಸಹೋದರಿಯ ಸ್ಥಾನವನ್ನು ಪಡೆಯುತ್ತಿದ್ದಳು. ಇಂದಿಗೂ ಸಾರ್ವತ್ರಿಕವಾಗಿ ಪ್ರಚಲತವಿರುವ 'ದತ್ತು' ತೆಗೆದುಕೊಳ್ಳುವಿಕೆಯು ಬಂಧುತ್ವವನ್ನು ನಿರ್ಧಿಷ್ಟಪಡಿಸುವಲ್ಲಿ ಜೈವಿಕ ಅಂಶಗಳಿಗಿಂತ ಸಾಮಾಜಿಕ ಗುರುತಿಸುವಿಕೆಯು ಮುಖ್ಯವಾದುದು ಎಂಬುದನ್ನು ಸಾಬೀತು ಪಡಿಸುತ್ತದೆ.

ಗಾತ್ರ ಮತ್ತು ಕಾರ್ಯಕ್ಷೇತ್ರ ಗಮನಿಸಿದಾಗ ಬಂಧುತ್ವವು ಕುಟುಂಬಗಿಂತಲೂ ಮಿಗಿಲಾದುದು. ಕುಟುಂಬವು ಕೇವಲ ಒಂದು ಘಟಕವಾಗಿದೆ. ಆದರೆ ಬಂಧುತ್ವವು ಸುಲಭವಾಗಿ ಬಿಡಿಸಿಕೊಳ್ಳಲಾಗದ ಸಂಬಂಧಗಳ ಸಾಕಷ್ಟು ವಿಸ್ತಾರವಾದ ಬಲೆಯಾಗಿದೆ. ಕುಟುಂಬದಲ್ಲಿನ ಸಂಬಂಧವು ಖಚಿತವಾಗಿದ್ದು, ಗೋಚರಿಸುವಂತಹದು. ಆದರೆ ಇಡೀ ಸಾಮಾಜಿಕ ರಚನೆಯನ್ನು ಹೆಣೆದಿರುವಂತಹ ಬಂಧುತ್ವದ ಸಂಬಂಧಗಳ ಎಳೆಗಳು ಆಗಿಂದಾಗ್ಗೆ ಕಣ್ಣು ಮುಚ್ಚಾಲೆಯಾಡುತ್ತವೆ. ದೈನಂದಿನ ಚಟುವಟಿಕೆಗಳಲ್ಲಿ ಮತ್ತು ಜೀವನದ ಸಾಮಾನ್ಯ ವ್ಯವಹಾರಗಳಲ್ಲಿ ರಕ್ತಸಂಬಂಧಿಗಳಿಗೆ ಇತರರಿಗಿಂತ ಹೆಚ್ಚಿನ ಗಮನ ಕೊಡಲಾಗುವುದಿಲ್ಲ. ಆದರೆ ಸೂಕ್ಷ್ಮವಾಗಿರುವ ಬಂಧುತ್ವದ ಎಳೆಗಳು, ಕಟ್ಟುಪಾಡುಗಳು ವಿಷಮ ಸ್ಥಿತಿಗಳಲ್ಲಿ ಮೇಲೆ ಬಂದು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ತುರ್ತು ಪರಿಸ್ಥಿತಿಯಲ್ಲಿ ಬಂಧುತ್ವದ ಕಟ್ಟುಪಾಡುಗಳು ವಿಕಸಿಸಲ್ಪಟ್ಟು ವಿಷಮಸ್ಥಿತಿಯನ್ನು ಎದುರಿಸುವ ಆಧಾರದ ಮೇಲೆ ಗುಂಪುಗಳಾದವು. ವಿಷಮ ಸ್ಥಿತಿಯನ್ನು ಎದುರಿಸಿ ಮುಗಿದ ಮೇಲೆ ಮತ್ತೇ ಬಂಧುತ್ವದ ಎಳೆಗಳು ಮಾಯುವಾದಿ ಸೂಕ್ಷ್ಮಗೊಳ್ಳುವವು.

ಇತರೆ ಸಾಮಾಜಿಕ ಸಂಬಂಧಗಳಂತೆ ಬಂಧುತ್ವವು ಕೂಡಾ ಸಮುದಾಯದಲ್ಲಿಯೇ ಏರ್ಪಡುತ್ತವೆ. ಹೀಗೆ ಬಂಧುತ್ವದ ಸಂಬಂಧಗಳು ಮತ್ತು ಸಾಮಾನ್ಯ ಚಟುವಟಿಕೆಗಳು ಪರಸ್ಪರ ಸಂಬಂಧ ಹೊಂದಿರುತ್ತವೆ. ಬಂಧುತ್ವದ ಸಂಬಂಧವು ಹೆಚ್ಚು ಶಕ್ತಿಶಾಲಿಯಾಗಿದ್ದಷ್ಟು ಸಾಮಾಜಿಕ ಸಂಬಂಧಗಳು ಹೆಚ್ಚಿರುತ್ತವೆ. ಹಾಗೆಯೇ ಸಾಮಾನ್ಯ ಚಟುವಟಿಕೆಗಳು ಹೆಚ್ಚಾಗಿದ್ದರೆ ಬಂಧುತ್ವದ ಸಂಬಂಧವು ಪ್ರಬಲವಾಗಿರುತ್ತದೆ. ಹೀಗೆ, ಬಂಧುತ್ವದ ಸಾಮಾನ್ಯ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಟ್ಟಿತು ಮತ್ತು ಪ್ರತಿಯಾಗಿ ಸಾಮಾನ್ಯ ಚಟುವಟಿಕೆಗಳು ಬಂಧುತ್ವದ ಮನೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾವನೆಗಳನ್ನು ಬಲಪಡಿಸಿದವು, ಬಂಧುತ್ವದ ಸಂಬಂಧಗಳು ಕೂಡ ಮನೋಭಾವನೆಗಳ ಹಾಗೆ ಎರಡು ಅಂಶಗಳನ್ನು ಅವಲಂಬಿಸಿರುತ್ತದೆ. ಆಮೇಲೆ ವಂಶಾವಳಿಯು ಆಳ (ತಲೆಮಾರಿನ ಅಂತರ) ಮತ್ತು ಭೌಗೋಳಿಕ ಅುತರ ಬಂಧುತ್ವದ ಬಲೆಗೆಲಸವು ಗಾತ್ರದಲ್ಲಿ ಮಿತಿಮೀರಿ ಬೆಳೆದರೆ ನಿಯಂತ್ರಿಸಲು ಕಷ್ಟವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅಂತಿಮವಾಗಿ ಇದು ಒಡೆದುಹೋಗುತ್ತದೆ ಇಲ್ಲವೆ ಕ್ಷೀಣಿಸುತ್ತದೆ. ಆದರೆ ಒಂದು ವೇಳೆ ರಕ್ತಸಂಬಂಧಿಗಳು ಒಬ್ಬರಿಗೊಬ್ಬರು ಅನ್ಯೋನ್ಯವಾದಂತಹ ಸಾಮೀಪ್ಯ ಹೊಂದಿದ್ದರೆ ತಲೆಮಾರಿನ ಅಂತರವು ಗಣನೆಗೆ ಬರುವುದಿಲ್ಲ. ಇನ್ನೊಂದು ಕಡೆ, ಅತೀ ನಿಕಟ ಸಂಬಂಧಿಗಳು ಕೂಡ ಒಬ್ಬರಿಗೊಬ್ಬರು ಬಹು ದೂರದಲ್ಲಿದ್ದಲ್ಲಿ ಹೆಚ್ಚು ತಲೆಮಾರಿನ ಅಂತರವು ಇರದಿದ್ದರೂ ಸಾಮಾಜಿಕವಾಗಿ ಬಹುದೂರದವರಂತೆ ಕಂಡುಬರುತ್ತಾರೆ. ಆದ್ದರಿಂದ ವಿಲ್ಮಟ್ ಮತ್ತು ಯಂಗ್‌ರವರು ಸ್ಪಷ್ಟವಾಗಿ ಗಮನಿಸಿದಂತೆ ಬಂಧುತ್ವವನ್ನು ಗೊತ್ತುಪಡಿಸುವಲ್ಲಿ ಭೌಗೋಳಿಕತೆಯು ವಂಶಾವಳಿಯಷ್ಟೆ ಮುಖ್ಯವಾದುದು.

ವಿವಿಧ ವಿಧದ ಬಂಧುತ್ವದ ಸಮೂಹಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಏಕಪಕ್ಷೀಯ ಬಂಧುತ್ವ (Unilateral kin), ಉಭಯ ಏಕ ಬಂಧುತ್ವ (bilateral kin), ಸಮಾನ ಬಂಧುತ್ವ (colateral), ಮೊದಲಾದವುಗಳು. ತಂದೆ ಅಥವಾ ತಾಯಿಯ ಮುಖಾಂತರ ವಂಶವನ್ನು ನಿರ್ಧರಿಸಿದರೆ ಅಂತಹ ಬಂಧುತ್ವವು ಏಕಪಕ್ಷೀಯ (unilateral) ಆಗಿರುತ್ತದೆ. ಒಂದು ವೇಳೆ ವಂಶವನ್ನು ತಂದೆ ಮತ್ತು ತಾಯಿಯರಿಬ್ಬರ ಮೂಲಕ ನಿರ್ಧರಿಸಿದರೆ ಅದನ್ನು ಉಭಯಪಕ್ಷೀಯ (bilateral kin)ಎಂದು ಕರೆಯಲಾಗಿದೆ ಮತ್ತು ಒಂದೇ ತಾಯಿತಂದೆಗಳಿಂದ ಪ್ರತ್ಯೇಕ ವಂಶದ ಮೂಲಕ ಒಬ್ಬರಿಗೊಬ್ಬರೂ ಸಂಬಂಧ ಹೊಂದಿರುವ ಬಂಧುತ್ವವನ್ನು ನೇರ ಸಂತತಿ (lineal kin) ಬಂಧುತ್ವವೆಂತಲೂ ಅದೇ ರೀತಿ ಚಿಕ್ಕಪ್ಪ ಮತ್ತು ಸೋದರ ಸೋದರಿಯರ ಮಕ್ಕಳು ಹೀಗೆ ಸಮಾಂತರವಾಗಿ ಶಾಖೆಗಳಾಗಿ ಒಬ್ಬರಿಗೊಬ್ಬರು ಸಂಬಂಧಹೊಂದಿದ್ದರೆ ಅಂತಹ ಬಂಧುತ್ವವು ಸಮಾನ ಬಂಧುತ್ವ (colateral kin) ವಾಗುತ್ತದೆ. ಇದಕ್ಕೆ ಈ ಸಂಬಂಧಿಸಿದಂತೆ. ಸಗೋತ್ರ ವಂಶ (agnatic) ಮತ್ತು ಏಕ ಮೂಲ ವಂಶ ಎರಡು ರೀತಿಯ ಬಂಧುತ್ವದ ಗುಂಪುಗಳನ್ನು ತಿಳಿಸಿರುವ ಹೆನ್ರಿಮೇಯ್ನ್‌ಯವರ ದೃಷ್ಟಿಕೋನಗಳನ್ನು ಗಮನಿಸುವುದು ಮುಖ್ಯವಾದುದು. ಏಕಮೂಲ (cognatic) ಸಂಬಂಧವು ಒಂದೇ ಸಾಮಾನ್ಯ ವಂಶದ ಮೂಲಕ ವಿವಾಹಿತ ವ್ಯಕ್ತಿಗಳ ಒಂದು ಜೋಡಿಯಿಂದ ಬರುತ್ತದೆ, ವಂಶವನ್ನು ಪುರುಷರ ಮೂಲಕ ಅಥವಾ ಸ್ತ್ರೀಯರ ಮೂಲಕವೂ ಸಹ ಗುರುತಿಸಬಹುದು. ಸಗೋತ್ರ ಸಂಬಂಧವು ಸ್ವಲ್ಪ ಭಿನ್ನವಾಗಿದೆ. ಇದು ಸಾಮಾನ್ಯವಾಗಿ ರಕ್ತಸಂಬಂಧಿಗಳು ನಿರ್ಧರಿಸಬಹುದಾದಂತ ಅನೇಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿಗಳನ್ನು ಬಿಟ್ಟಿರುತ್ತದೆ ಮತ್ತು ಸಾಮಾನ್ಯವಾಗಿ ರಕ್ತಸಂಬಂಧಿಗಳಾಗಿರದ ಅನೇಕ ವ್ಯಕ್ತಿಗಳನ್ನು ಸೇರಿಸಿಕೊಂಡಿರುತ್ತದೆ. ಏಕಮೂಲದವರು ತಮ್ಮ ರಕ್ತಸಂಬಂಧವನ್ನು ಒಬ್ಬ ಪೂರ್ವಜನಿಂದ ಅಥವಾ ಪೂರ್ವಜರುಗಳಿಂದ ಗುರುತಿಸುತ್ತಾರೆ. ಹೆಂಗಸು ಅಥವಾ ಗಂಡಸು ಎಲ್ಲಾ ವ್ಯಕ್ತಿಗಳು ಸಹಕುಟುಂಬದ ಕ್ಷೇತ್ರದ ಕೃತಕ ವಿಸ್ತರಣೆಯಿಂದ ಕುಟುಂಬದೊಳಗೆ ಸೇರಲ್ಪಟ್ಟ ಒಂದೇ ವಂಶದವರಾಗಿರುತ್ತಾರೆ. ಆದರೂ ಸ್ತ್ರೀ ಕಡೆಯ ಸಂತತಿಯುವರು ಸಗೋತ್ರ ಬಂಧುತ್ವ ಸಮೂಹದೊಡನೆ ಸೇರುವುದಿಲ್ಲ. ಈಗ ಸೇರಿಸಿಕೊಳ್ಳುವಿಕೆ ಮತ್ತು ಬಿಡುವಿಕೆಯು ಅನಿಯಂತ್ರಿತ ಸ್ವಭಾವದ ಬಗ್ಗೆ ಪ್ರಶ್ನೆಯು ಉದ್ಭವವಾಗುತ್ತದೆ. ಮೇಯ್ನರವರು ಕುಟುಂಬದೊಳಕ್ಕೆ ಹೊರಗಿನವರನ್ನು ಸೇರಿಸಿ ಕೊಳ್ಳುವಷ್ಟು ಬಂಧುತ್ವವು ಏಕೆ ವಿಸ್ತರಣೆಯಾಗಿದೆ ಎಂಬ ಕಲ್ಪನೆಯನ್ನು ವಿವರಿಸಿ ದ್ದಾರೆ. ಆದರೆ ಸಂಕುಚಿತವಾದ ಸ್ತ್ರೀ ಸದಸ್ಯರ ಸಂತತಿಯವರನ್ನು ಹೊರಹಾಕಿರುತ್ತದೆ. ಈ ಪ್ರಶ್ನೆಗಳಿಗೆ ಉತ್ತರಿಸಲು ಪಿತೃ ಪ್ರಶ್ನಾತೀತಾ ಅಧಿಕಾರ (patria-protesta) ಸಂಸ್ಥೆಯನ್ನು ಪರಾಮರ್ಶಿಸಬೇಕು. ಸಗೋತ್ರರ ವಂಶ (agnation) ತಳಹದಿಯು ತಂದೆತಾಯಿಯರ ವಿವಾಹವಾಗಿರದೆ. ತಂದೆಯು ಜವಾಬ್ದಾರಿಯಾಗಿರುತ್ತದೆ.[4] ಎಲ್ಲಾ ವ್ಯಕ್ತಿಗಳು ಒಂದೇ ಪಿತೃತ್ವ ಅಧಿಕಾರದ ಕೆಳಗೆ ವಂಶಾನುಗತವಾಗಿ ಒಬ್ಬರಿಗೊಬ್ಬರು ಸಂಬಂಧ ಹೊಂದಿರುತ್ತಾರೆ, ಅಥವಾ ಇದರ ಕೆಳಗೆ ಇದ್ದವರುಅಥವಾ ಇದರ ಒಳಗೆ ಇರಬಹುದಾಗಿದ್ದಂತ ಅವರು ಒಂದು ವೇಳೆ ಅವರ ಸಂತತಿಯ ಪೂರ್ವಜರು, ಆತನ ಜವಾಬ್ದಾರಿಯು ಚಲಾವಣೆಯು ಹೆಚ್ಚು ಕಾಲ ಇದ್ದಲ್ಲಿ ಮಾತ್ರ ಆ ಅಧಿಕಾರದ ಕೆಳಗೆ ಬರುತ್ತಿದ್ದರು. ವಾಸ್ತವವಾಗಿ, ಪುರಾತನ ಸಮಾಜಗಳಲ್ಲಿ ಸಂಬಂಧವು ಎಲ್ಲಿ ಪ್ರಶ್ನಾತೀತತೆ ಪ್ರಾರಂಭವಾಗುತ್ತದೋ ಅಲ್ಲಿ ಬಂಧುತ್ವವು ಪ್ರಾರಂಭವಾಗುತ್ತದೆ. ಎಲ್ಲಿ ಪ್ರಶ್ನಾತೀತ ತೆಯು ಕೊನೆಗೊಳ್ಳುತ್ತದೆಯೋ ಅಲ್ಲಿ ಬಂಧುತ್ವವು ಕೊನೆಗೊಳ್ಳುತ್ತದೆ. ಇದರಿಂದ ತಂದೆಯ ನಿರ್ಬಂಧದಿಂದ ಹೊರಬಂದ ವ್ಯಕ್ತಿಯು ತನ್ನ ಎಲ್ಲಾವಂಶೀಯ ಹಕ್ಕುಗಳನ್ನು ಕಳೆದುಕೊಳ್ಳುತ್ತಾನೆ.

ಬಂಧುತ್ವ ಸಂಬಂಧದಲ್ಲಿ ಅನೇಕ ಮೆಟ್ಟಿಲುಗಳಿವೆ. ಪ್ರಾಥಮಿಕ ರಕ್ತಸಂಬಂಧ ವುಳ್ಳ ಬಳಗವು ತಂದ ಮತ್ತು ಮಗ, ಹಾಗೂ ಪ್ರಾಥಮಿಕ ವಿವಾಹ ಸಂಬಂಧದ ಬಳಗ ಹಾಗೂ ಪತಿಪತ್ನಿಯರಾಗಿರುತ್ತಾರೆ. ದ್ವಿತೀಯ ಬಂಧುಗಳ ಮಧ್ಯೆ ಸಾಮಾಜಿಕ ಅಂತರವು ಹೆಚ್ಚಿರುತ್ತದೆ. ಅಂದರೆ ಅವು ಎರಡು ಸಲ ತೆಗೆದು ಹಾಕಲ್ಪಟ್ಟಿರುತ್ತವೆ.[5] ಪ್ರಾಥಮಿಕ ಬಂಧುತ್ವವನ್ನು ದ್ವಿತೀಯ ಬಂಧುತ್ವ ಎಂದು ಕರೆಯಲಾಗಿದೆ. ಉದಾಹರಣೆಗೆ 'ದ್ವಿತೀಯ ಒಂದೇ ರಕ್ತಸಂಬಂಧವುಳ್ಳ' ಬಂಧುತ್ವವೆಂದರೆ ತಾನು ಮತ್ತು ತಂದೆಯ ಸೋದರ (ಚಿಕ್ಕಪ್ಪ) ಮತ್ತು ದ್ವಿತೀಯ ವಿವಾಹ ಸುಬಂಧದ ಬಳಗವು ತಾನು ಮತ್ತು ಹೆಂಡತಿಯ ಸೋದರ ಮುಂತಾದವರು. ಅದೇ ರೀತಿಯಲ್ಲಿ ಪ್ರಾಥಮಿಕ ಬಳಗದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವಿತೀಯ ಬಳಗವು ಅಥವಾ ದ್ವಿತೀಯ ಬಳಗದ ಪ್ರಾಥಮಿಕ ಬಳಗವು ತೃತೀಯ ಬಳಗವನ್ನು ಒಳಗೊಂಡಿರುತ್ತದೆ. ಈ ರೀತಿಯಾಗಿ ಬಂಧುತ್ವ ಸಂಬಂಧದ ಮಟ್ಟದ ನಿರೂಪಣೆಯು ಅನಂತತೆಯನ್ನು ಹೊಂದಿದೆ.

ಹಾಗೆಯೇ ಬಂಧುತ್ವ ಸಂಬಂಧದ ಕ್ಷೇತ್ರವನ್ನು ಗುರುತಿಸಬಹುದು. ಏಕಪಕ್ಷೀಯ ಸಾಮಾಜಿಕ ಸಮೂಹವು ತನ್ನ ವಂಶ (ಕುಲ)ವನ್ನು ಒಬ್ಬ ಪೂರ್ವಜ ಅಥವಾ ಪೂರ್ವಜಳಿಂದ ಗುರುತಿಸಲ್ಪಡುತ್ತದೆ. ಪ್ರಾಚೀನ ಕಾಲದಲ್ಲಿ ರಕ್ತಸಂಬಂಧವುಳ್ಳ ಸದಸ್ಯರು ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಆದರೆ ಸ್ಥಳೀಯವಲ್ಲದ ರಕ್ತಸಂಬಂಧದ ಸದಸ್ಯರು ಚದುರಿರುತ್ತಾರೆ ಮತ್ತು ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸವಾಗಿರುವುದಿಲ್ಲ. ಒಂದು ಬಂಧುತ್ವದ ಸಮೂಹವು ಅದು ಹೊಂದಿರುವ ವ್ಯಕ್ತಿಗಳ ಸಂಖ್ಯೆಯು ಆಧಾರದ ಮೇಲೆ ವಿಶಾಲ ಇಲ್ಲವೆ ಸಂಕುಚಿತ ಪ್ರದೇಶವನ್ನು ಹೊಂದಿರ ಮಂತಹ ಒಂದು ಸಮೂಹವನ್ನು ವಿಶಾಲ ವ್ಯಾಪ್ತಿಯೆಂದು ಹಾಗೆಯೇ ಕೇವಲ ಕೆಲವೇ ವ್ಯಕ್ತಿಗಳನ್ನು ಹೊಂದಿದ್ದರೆ ಅದನ್ನು ಸಂಕುಚಿತ ವ್ಯಾಪ್ತಿಯ ಒಂದು ಸಮೂಹ ಎಂದು ಕರೆಯಬಹುದಾಗಿದೆ.

ಬಂಧುತ್ವ ಮತ್ತು ವರ್ತನೆಯ ಮಾದರಿ

ಪ್ರಾರಂಭದಲ್ಲಿ ತಿಳಿಸಿದಂತೆ ಬಂಧುತ್ವ ವ್ಯವಸ್ಥೆಯು ಸಾಮಾಜಿಕ ರಚನೆಯ ಮುಖ್ಯ ತಳಹದಿಯಾಗಿದೆ. ರಕ್ತಸಂಬಂಧಿಗಳ ಮಧ್ಯೆ ಉದ್ಭವಿಸುತ್ತಿದ್ದಂತಹ ಘರ್ಷಣೆಗಳನ್ನು ತಪ್ಪಿಸುವ, ಮಿಂತಿಗೊಳಿಸುವ, ನಿಯಂತ್ರಿಸುವ ಅಥವಾ ಇತ್ಯರ್ಥ ಮಾಡುವ ಸಾಧನವನ್ನೊದಗಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ರೂಢಿಗಳ ಒಂದು ವಿಶ್ಲೇಷಣೆಯಾದ (Avoidance taboos) ನಿರ್ಬಂಧಿಸುವ ರೂಢಿಗಳು ಮತ್ತು ವಿನೋದ ಸಂಬಂಧಗಳು (joking Relation) ಮುಖ್ಯವಾದವುಗಳು. ಏಕೆಂದರೆ ಬಂಧುತ್ವದ, ಒಟ್ಟಿಗೆ ಕಂಡುಬರುವ ರೂಢಿಗಳು (usages) ಎರಡು ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತವೆ. ನಿರ್ಬಂಧಿಸುವ ರೂಢಿಗಳು ಭಿನ್ನಾಭಿಪ್ರಾಯ ಮತ್ತು ಹಿತಾಸಕ್ತಿಗಳ ಭಿನ್ನತೆಯಿಂದ ಉಂಟಾಗುವ ಘರ್ಷಣೆಗಳನ್ನು ನಿಯಂತ್ರಿಸಿ ಮಿಂತಿಗೊಳಿಸಿದರೆ, ವಿನೋದ ಸಂಬಂಧ (joking relations) ರಕ್ತಸಂಬಂಧಿಗಳಿಗೆ ಹಿತಾಸಕ್ತಿಗಳ ಮತ್ತು ಒಂದೆಡೆ ಸೇರಿಸುವ ಮೂಲಕ ಬಂಧುತ್ವದ ಕಟ್ಟು ಪಾಡುಗಳನ್ನು ಬಲಪಡಿಸುತ್ತವೆ.

ವಿವಿಧ ವಿಧದ ನಿರ್ಬಂಧಿಸುವ ರೂಢಿಗಳು ಅನೇಕ ಸಮುದಾಯಗಳಲ್ಲಿ ಕಂಡು ಬರುತ್ತದೆ. ಹೊಸ ಹೆಬ್ರಿಡ್ಸ್‌ನ ಲೇಪರ್ಸ್ ದ್ವೀಪದಲ್ಲಿ ಒಬ್ಬ ಹುಡುಗ ವಯಸ್ಸಿಗೆ ಬಂದ ಮೇಲೆ ಎಲ್ಲಾ ರೀತಿಯಿಂದಲೂ ತನ್ನ ಸಹೋದರಿಯನ್ನು ಪ್ರತ್ಯೇಕಿಸುತ್ತಾನೆ. ಅವನು ಆಕೆಯನ್ನು ನೋಡುವುದಿಲ್ಲ, ಆಕೆಯೊಂದಿಗೆ ಮಾತನಾಡುವುದಿಲ್ಲ, ಹಾಗೂ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಅವಳ ಹತ್ತಿರ ಕೂರುವ ಹಾಗಿಲ್ಲ, ಒಂದು ವೇಳೆ ಆಕಸ್ಮಿಕವಾಗಿ ಅವರಿಬ್ಬರೂ ಒಟ್ಟಿಗೆ ಸಂಧಿಸಿದಾಗ ಆಕೆಯು ಅವಿತುಕೊಳ್ಳುತ್ತಾಳೆ. ಇಲ್ಲವೇ ಓಡುತ್ತಾಳೆ. ಒಂದು ವೇಳೆ ಹುಡುಗನು ತನ್ನ ಸೋದರಿಯ ಪಾದದ ಗುರುತುಗಳನ್ನು ಕಂಡಲ್ಲಿ, ಅವನು ಆಕೆಯು ಹೋದ ದಿಕ್ಕಿನಲ್ಲಿ ಹೋಗುವುದನ್ನು ನಿಲ್ಲಿಸುತ್ತಾನೆ. ಈ ರೀತಿಯ ಸೋದರ ಸೋದರಿ ಪ್ರತ್ಯೇಕತೆಯು ಹೊಸ ಕ್ಯಾಲೆಂಡೋನಿಯದಲ್ಲಿಯೂ ಸಹ ಕಂಡು ಬಂದಿದೆ. ಒಂದು ವೇಳೆ ಸೋದರ ಮತ್ತು ಸೋದರಿ ಒಬ್ಬರಿಗೊಬ್ಬರು ಒಂದೇ ಹಾದಿಯಲ್ಲಿ ಭೇಟಿಯಾದಲ್ಲಿ ಆಕೆಯು ಪೊದೆಗಳ ಕಡೆಗೆ ಓಡುತ್ತಾಳೆ, ಸೋದರನು ಆ ಕಡೆ ತಿರುಗಿ ನೋಡದೆ ಹಾದು ಹೋಗುತ್ತಾನೆ. ಬಟ್ಟ್ರಲ್ಲಿ ಸೋದರನು ಸೋದರಿಯನ್ನು ಪ್ರತ್ಯೇಕಿಸುತ್ತಾರೆ. ತಾಯಿಯು ಮಗನನ್ನು ಮತ್ತು ತಂದೆಯು ಮಗಳಿಂದ ಪ್ರತ್ಯೇಕಿಸುತ್ತಾರೆ. ಟ್ರೊಬ್ರಿಯಂಡ್ ದ್ವೀಪವಾಸಿಗಳಲ್ಲಿ ಸೋದರ ಸೋದರಿಯರ ನಡುವಿನ ಸಾಮೀಪ್ಯ ವನ್ನು ಪ್ರತ್ಯೇಕಿಸಲು ಕಠಿಣ ನಿಯಮಗಳನ್ನು ಮಾಡಿದ್ದಾರೆ. ಅವರಿಬ್ಬರು ಪರಸ್ಪರ ನೋಡುವುದಾಗಲಿ ಅಥವಾ ಮಾತನಾಡುವುದಾಗಲಿ ನಿಷಿದ್ಧ. ಒಂದು ವೇಳೆ ಸೋದರಿಯು ಮತ್ತೊಬ್ಬ ಪುರುಷನನ್ನು ಮೋಹಿಸಿದರೆ ಅಥವಾ ಅವನೊಡನೆ ಸಂಪರ್ಕ ಹೊಂದಿದ್ದರೆ ಮೂರು ಜನರು ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಅನೇಕ ಸಮುದಾಯಗಳಲ್ಲಿ ಇದೇ ರೀತಿಯ, ಅತ್ತೆ ಮತ್ತು ಅಳಿಯನ ಮಧ್ಯೆ ಪ್ರತ್ಯೇಕತೆ ರೂಢಿಗಳನ್ನು ಕಾಣಬಹುದು. ಗುಲ್ಲರಲ್ಲಿ ಒಬ್ಬನು ತನ್ನ ಅತ್ತೆಯನ್ನು ಪ್ರತ್ಯೇಕಿಸಬೇಕು ಮತ್ತು ಅವನು ಆಕೆಯ ಹೆಸರನ್ನು ಸಹ ಹೇಳುವ ಹಾಗಿಲ್ಲ. ತನ್ನ ಅತ್ತೆಯು ಉಪಯೋಗಿಸಿದಂತಹ ಲೋಟದಲ್ಲಿ ಅವನು ಹಾಲನ್ನು ಕುಡಿಯುವುದಿಲ್ಲ. (ಆದರೆ ಅವನು ಅದೇ ಲೋಟದಲ್ಲಿ ಮಾದಕ ಪಾನೀಯವಾದ ದಡಿಯನ್ನು ಕುಡಿಯ ಬಹುದು!) ಸಾಲೊಮನ್ ದ್ವೀಪವಾಸಿಗಳಲ್ಲಿ ಒಬ್ಬ ಮನುಷ್ಯನು ತನ್ನ ಅತ್ತೆಯನ್ನು ನೋಡುವುದಾಗಲಿ ಅಥವಾ ಆಕೆಯ ಜೊತೆ ಮಾತನಾಡುವುದಾಗಲಿ ನಿಷಿದ್ಧ ಒಂದು ವೇಳೆ ಆತನು ಆಕೆಯನ್ನು ಆಕಸ್ಮಿಕವಾಗಿ ದಾರಿಯಲ್ಲಿ ಸಂಧಿಸಿದಾಗ ಅವಳು ಓಡಿ ಹೋಗಿ ಅವಿತುಕೊಳ್ಳುತ್ತಾಳೆ. ನೈಲ್ ನದಿಯ ದಡದಲ್ಲಿ ವಾಸವಾಗಿರುವಂತಹ ಬಸೊಗರಲ್ಲಿ ಅಳಿಯನು ಕಟ್ಟು ನಿಟ್ಟಾಗಿ ತನ್ನ ಅತ್ತೆಯನ್ನು ಪ್ರತ್ಯೇಕಿಸಬೇಕು; ಅತ್ತೆ ಅಳಿಯನ ನಡುವೆ ದೈಹಿಕ ಸಂಬಂಧದ ಹೆದರಿಕೆಯು ಬಹಳ ಹೆಚ್ಚಾಗಿರುತ್ತದೆ. ಅವರ ಇಂತಹ ಸಂಬಂಧವು ಸಾಕುಪ್ರಾಣಿಗಳಲ್ಲಿ ಕಂಡು ಬಂದರೂ ಸಹ ಶಿಕ್ಷಿಸುತ್ತಾರೆ. ಆಸ್ಟ್ರೇಲಿಯಾದ ಅಬಾರಿಜಿನಲ್ ಜನರಲ್ಲಿ ಒಬ್ಬನು ತನ್ನ ಅತ್ತೆಯೊಡನೆ ಅಥವಾ ಆಸ್ಥಾನದಲ್ಲಿ ನಿಲ್ಲುವ ಇತರೆ ಯಾವ ಸ್ತ್ರೀಯನ್ನಾದರೂ ಮಾತನಾಡಿದರೆ ಅವನ ತಲೆಯ ಕೂದಲು ಬಿಳುಪಾಗುತ್ತದೆ ಎಂಬ ನಂಬಿಕೆ ಇದೆ.

ಈ ಆಚರಣೆಗಳ ಪ್ರಾಮುಖ್ಯತೆಯನ್ನು ವಿವರಿಸಲು ಮತ್ತು ಸಾಮಾಜಿಕ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸಂಬಂಧಗಳ ಸಂಘಟನೆಯಲ್ಲಿ ಅವುಗಳ ಪಾತ್ರವನ್ನು ತೋರಿಸಲು ವಿದ್ವಾಂಸರಿಂದ ಅನೇಕ ಪ್ರಯತ್ನಗಳು ನಡೆದಿವೆ.

ಇಂತಹ ರೂಢಿಗಳನ್ನು ಹೊಂದಿರುವಂತಹ ಜನರು ಸರಿಯಾದ ನಡವಳಿಕೆಗಳನ್ನು ಕಾಪಾಡುವ ಶಿಷ್ಟಮಾರ್ಗಗಳು ಬೇರೆಯಾವುದು ಇಲ್ಲ ಎಂದು ತೀರ್ಮಾನಿಸಿದ್ದಾರೆ. ಉದಾಹರಣೆಗೆ ಒಬ್ಬ ಜುಲು (julu) ಹೆಂಗಸನ್ನು ಅತ್ತೆ ಮತ್ತು ಅಳಿಯನ ನಡುವಿನ ಪ್ರತ್ಯೇಕತೆಯ ಕಾರಣದ ಬಗ್ಗೆ ಕೇಳಿದಾಗ ಆಕೆಯು ಹೀಗೆ ಉತ್ತರಿಸಿದಳು. "ತನ್ನ ಹೆಂಡತಿಗೆ ಹಾಲುಣಿಸಿದಂತಹ ಸ್ತನಗಳನ್ನು ಆತನು ನೋಡುವುದು ಸರಿಯಲ್ಲ...." ಆದರೂ ಸಮಾಜ ವಿಜ್ಞಾನಿಗಳು ಅನೇಕ ವೈಜ್ಞಾನಿಕ ಕಾರಣಗಳನ್ನು ಕೊಟ್ಟಿದ್ದಾರೆ.

ಅನೇಕರು ದೈಹಿಕ ಸಂಬಂಧದ (ಹತ್ತಿರ ರಕ್ತಸಂಬಂಧಿಗಳ ನಡುವಿನ) ಹೆದರಿಕೆಯು ಸೋದರ ಮತ್ತು ಸೋದರಿಯರ ನಡುವಿನ ಪ್ರತ್ಯೇಕತೆಯ ರೂಢಿಗೆ (avoidance taboo) ತಳಹದಿಯಾಗಿದೆ ಎಂದು ಭಾವಿಸಿದ್ದಾರೆ. ಟೇಲರ್[13] ಅತ್ತೆ ಮತ್ತು ಅಳಿಯನ ನಡುವಿನ ಪ್ರತ್ಯೇಕತೆಗೆ ಸಂಬಂಧಿಸಿದಂತೆ ತಮ್ಮದೇ ಆದಂತಹ ದೃಷ್ಟಿಕೋನಗಳನ್ನು ಮಂಡಿಸಿದ್ದಾರೆ. ಅವರು ಈ ಆಚರಣೆಯು ಪ್ರಾಚೀನ ಸಮಾಜಗಳಲ್ಲಿ ಇದ್ದಂತಹ ಮಾತೃಪ್ರಧಾನ ಪದ್ಧತಿಯ ಚಿಹ್ನೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮಾತೃಯಜಮಾನ್ಯ ಸಮಾಜದಲ್ಲಿ ಅಳಿಯನು ಕೇವಲ ಮಗಳ ಗಂಡನಾಗಿರುವುದಿಲ್ಲ ಜೊತೆಗೆ ಅವಳಿಗೆ ಅಧೀನನಾಗಿರಬೇಕು. ಹೀಗೆ ಅವನು ಅಧೀನನಾಗಿ ಕಾಣಲ್ಪಡುವುದರಿಂದ ಮತ್ತು ಶ್ರೇಷ್ಟತೆ ಮತ್ತು ಆಧೀನತೆಯ ನಡುವಿನ ಸಂಬಂಧವು ಪ್ರತಿಬಂಧ ಮತ್ತು ಮೀಸಲಾಗಿರುವಿಕೆಯಿಂದ ಗುರುತಿಸಲ್ಪಟ್ಟಿತ್ತು. ಇಂದು ಈ ಪ್ರಾಚೀನ ಆಚರಣೆಯು ಪ್ರತ್ಯೇಕತೆಯ ರೂಢಿಯಿಂದ (Avoidance usage) ಮಾದರಿಯಾಗಿ ಉಳಿದಿದೆ. ಫ್ರಾಯ್ಡ್[13] ಪ್ರತ್ಯೇಕತೆಯ ಪದ್ಧತಿಯನ್ನು ಈಡಿಪಸ್ ಕಾಂಪ್ಲೆಕ್ಸ್ ಸಿದ್ಧಾಂತದ ತಳಹದಿಯ ಮೇಲೆ ವಿವರಿಸಿದ್ದಾರೆ. ಅವರು ಅತ್ತೆ ಮತ್ತು ಅಳಿಯರ ನಿಷೇದವು ಒಬ್ಬನೇ ವ್ಯಕ್ತಿಯ ಪ್ರೇಮಕ್ಕೆ ತಾಯಿ ಮತ್ತು ಮಗಳ ಪೈಪೋಟಿಯ ಹೋರಾಟವನ್ನು ತಪ್ಪಿಸುವುದಕ್ಕೋಸ್ಕರ ರೂಢಿಯಲ್ಲಿದ್ದಿತು. ಹೀಗೆ ಈ ಇಬ್ಬರ ಮಧ್ಯೆ ಸಾಧ್ಯತೆಯಿರುವ ಘರ್ಷಣೆಗಳನ್ನು ನಿವಾರಿಸಲು ಪ್ರತ್ಯೇಕತೆಯ ನಿಷೇಧಗಳು ಆಚರಣೆಯಲ್ಲಿದ್ದವು. ಮತ್ತೊಂದು ಕಡೆ ಲೋವಿಯವರು ಪ್ರತ್ಯೇಕತೆಯ ನಿಷೇಧಗಳನ್ನು ಈ ಕೆಳಕಂಡಂತೆ ವಿವರಿಸಿದ್ದಾರೆ. 'ಅಳಿಯ ಅಥವಾ ಸೊಸೆ ತಮ್ಮ ಸಂಗಾತಿಯರ (ಪತಿಪತ್ನಿಯರ) ಮನೆಗೆ ಹೊರಗಿನವರಾಗಿ ಬರುತ್ತಿದ್ದರು. ಆದ್ದರಿಂದ ಗಂಡನ ಮನೆಯಲ್ಲಿ ಸೊಸೆಯ ಪ್ರಭಾವವನ್ನು ಕಡಿಮೆ ಮಾಡಲು ಪ್ರತ್ಯೇಕತೆಯ ನಿಷೇಧಗಳು ಬಳಕೆಯಲ್ಲಿದ್ದವು.' ರ್‍ಯಾಡ್‌ಕ್ಲಿಫ್ ಬ್ರೌನ್‌ರವರ ಪ್ರಕಾರ ಪ್ರತ್ಯೇಕತೆಯ ನಿಷೇಧಗಳ ಹಿಂದಿನ ಪ್ರಾಥಮಿಕ ಗುರಿಯು ಕುಟುಂಬ ಮತ್ತು ರಕ್ತಸಂಬಂಧ ಸಮೂಹಗಳಲ್ಲಿ ಶಾಂತಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಮತ್ತು ವ್ಯವಸ್ಥೆಯನ್ನು ಕಾಪಾಡುವುದಾಗಿದ್ದಿತು. ಆದ್ದರಿಂದ ಒಂದುವೇಳೆ ಮದುವೆಯ ಮೂಲಕ ಆಗಿರುವ ಸಂಬಂಧಿಗಳನ್ನು (Inlaws) ಅನ್ಯೋನ್ಯ ಸಂಬಂಧ ಹೊಂದಲು ಬಿಟ್ಟರೆ ಇದು ಗೊಂದಲ ಮತ್ತು ಘರ್ಷಣೆಗೆ ಕಾರಣವಾಗುತ್ತಿತ್ತು. ಇಂತಹ ಅಹಿತಕರ ಪರಿಸ್ಥಿತಿಯನ್ನು ಎದುರಿಸಲು ಪ್ರತ್ಯೇಕತೆಯ ನಿಷೇಧಗಳನ್ನು (Avoidence taboos) ಆಚರಿಸುತ್ತಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ದೃಷ್ಟಿಕೋನವನ್ನು ಬೆಂಬಲಿಸಲು ಇವರು ಒಮ್ಮೆ ಕೇಳಿದಂತಹ ಆಸ್ಟ್ರೇಲಿಯಾದ ಆಬೊರಿಜಿನರ ಘಟನೆ ಯನ್ನು ಸ್ಪಷ್ಟಪಡಿಸುತ್ತಾರೆ. ಅವನು ಏಕೆ ತನ್ನ 'ಅತ್ತೆಯನ್ನು ಪ್ರತ್ಯೇಕಿಸುತ್ತಾನೆ ಎಂದು ಕೇಳಿದುದಕ್ಕೆ, 'ಅತ್ತೆಯು ನನಗೆ ಪ್ರಪಂಚದಲ್ಲಿಯೇ ಉತ್ತಮಳಾದ ಸ್ನೇಹಿತೆ, ಅವಳು ನನಗೆ ಹೆಂಡತಿಯನ್ನು ಕೊಟ್ಟಿದ್ದಾಳೆ' ಎಂದು ಉತ್ತರಿಸಿದನು.

ಮೊದಲೇ ತಿಳಿಸಿದಂತೆ ಪ್ರತ್ಯೇಕತೆಯ ನಿಷೇಧಗಳು ರಕ್ತಸಂಬಂಧಿಗಳ ನಿಯಂತ್ರಿಸುವ ಮತ್ತು ನಿಷೇಧಿಸುವ ಗುರಿಯನ್ನು ಹೊಂದಿದ್ದವು. ರ್‍ಯಾಡ್‌ಕ್ಲಿಫ್‌ಬ್ರೌನ್[16] ರವರು ವಿನೋದ ಸಂಬಂಧಗಳು ಇಬ್ಬರು ವ್ಯಕ್ತಿಗಳ ಸಂಬಂಧವಾಗಿದ್ದು ಸಂಪ್ರದಾಯದ ಪ್ರಕಾರ ಯಾರೂ ಮತ್ತೊಬ್ಬರನ್ನು ಟೀಕಿಸಬಹುದು ಅಥವಾ ಹಾಸ್ಯಮಾಡಬಹುದು ಹಾಗೂ ಪ್ರತಿಯಾಗಿ ಯಾರು ಅಪಚಾರ ಮಾಡಬಾರದು ಎಂಬುದನ್ನು ಒಳಗೊಂಡಿರುತ್ತದೆ ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಪ್ರಮುಖವಾದ ಎರಡು ಬಗೆಯ ವಿನೋದ ಸಂಬಂಧಗಳಿವೆ. ಸಮರೂಪಕತೆ ಮತ್ತು ಅಸಮರೂಪಕತೆ. ಸಮರೂಪತೆಯ ವಿನೋದ ಸಂಬಂಧದಲ್ಲಿ ಇಬ್ಬರೂ ವ್ಯಕ್ತಿಗಳೂ ಸಹ ಒಬ್ಬರನ್ನೊಬ್ಬರು ಟೀಕಿಸುತ್ತಾರೆ. ಅಥವಾ ತಮಾಷೆಯನ್ನು ಮಾಡುತ್ತಾರೆ. ಆದರೆ ಅಸಮರೂಪ ವಿನೋದ ಸಂಬಂಧದಲ್ಲಿ ಇಬ್ಬರೂ ಸಹ ಇತರರನ್ನು ಅಣಕಿಸಬಹುದು ಅಥವಾ ಹಾಸ್ಯಮಾಡಬಹುದು A ಯು B ಗೆ ಹೆಚ್ಚು ಹಾಸ್ಯಮಾಡಬಹುದು ಮತ್ತು Bಯು ಅದನ್ನು ತಿರಸ್ಕಾರವಿಲ್ಲದೆ ಒಪ್ಪಿಕೊಳ್ಳುತ್ತಾನೆ. ಮತ್ತು Bಯು ಪ್ರತಿಯಾಗಿ Aಗೆ ಹೆಚ್ಚು ಹಾಸ್ಯಮಾಡದೆ ತುಸು ಮಾತ್ರ ಮಾಡಬಹುದು. ಈಸಂಬಂಧಕ್ಕೆ ಅನುಮತಿಯಿರುವ ರಕ್ತಸಂಬಂಧಿಗಳು ಸ್ನೇಹದ ನಿಂದನೆ, ಗೇಲಿ, ಅಶ್ಲೀಲ ಅಥವಾ ಅಸಹ್ಯಕರ ಮಾತುಗಳಿಂದ ಪರಸ್ಪರ ಹಾಸ್ಯಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಅವರು ಹುಸಿ ಜಗಳದಲ್ಲಿಯೂ ಸಹ ತೊಡಗುತ್ತಾರೆ.

ವಿನೋದ ಸಂಬಂಧಗಳು ಅಜ್ಜಂದಿರು ಮತ್ತು ಮೊಮ್ಮಕ್ಕಳು, ಒಬ್ಬ ವ್ಯಕ್ತಿ ಮತ್ತು ಅವನ ಹೆಂಡತಿಯ ಸೋದರಿಯರ ನಡುವೆ, ಸೋದರಿಯ ಮಕ್ಕಳ ನಡುವೆ ಮುಂತಾದ ಅನೇಕ ಸಂಬಂಧಿಗಳಲ್ಲಿ ಕಂಡು ಬರುತ್ತವೆ. ಉದಾ :- ಉತ್ತರ ಅಮೇರಿಕದ ಓಜಿಬ್ವ ಇಂಡಿಯನ್‌ರಲ್ಲಿ, ಉಗಾಂಡದ ಚಿಗ, ಫಿಜಿ ಮತ್ತು ಹೊಸ ಕಾಲೆಂಡೋನಿಯದಲ್ಲಿ ಸೋದರಮಾವನೊಂದಿಗೆ ವಿವಾಹವು ಪ್ರಚಲಿತದಲ್ಲಿದ್ದು ಸೋದರ ಮಾವಂದಿರೊಂದಿಗೆ ಹಾಸ್ಯ ಸಂಬಂಧವು ಇರುತ್ತದೆ.[17] ಸೋದರಮಾವಂದಿರು ಭೇಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾದಾಗ ಅವರು ತಮ್ಮ ಅಕ್ಕತಂಗಿಯರ ಮಕ್ಕಳನ್ನು ಅಪ್ಪಿಕೊಳ್ಳುತ್ತಾರೆ. ಒಬ್ಬರಿಗೊಬ್ಬರು ತಮಾಷೆ ಮಾಡುತ್ತಾ ಹೆಚ್ಚು ಅಸಹ್ಯಕರ ಮತ್ತು ಅಶ್ಲೀಲ ಮಾತುಗಳನ್ನು ಆಡುತ್ತಾರೆ. ಆದರೆ ಯಾರು ಸಹ ಅಪಚಾರವೆಸಗುವ ಹಾಗಿಲ್ಲ. ವಾಸ್ತವವಾಗಿ ಈ ರೀತಿಯಾಗಿ ಹಾಸ್ಯ ಮಾಡದಂತಹವರನ್ನು ಅಸಂಸ್ಕೃತ ಮತ್ತು ದಡ್ಡ ಎಂದು ಪರಿಗಣಿಸುತ್ತಾರೆ. ಅದೇ ರೀತಿಯಲ್ಲಿ ಸೂಡನ್ನಿನ 'ನ್ಯೂಯರ್'ಗಳು ಲೆಂಗ್' ಎನ್ನುವ ಪದ್ಧತಿಯನ್ನು ಹೊಂದಿದ್ದಾರೆ. ಅವರಲ್ಲಿ ತಂದೆಯ ಸೋದರಿಯು 'ಒಂದೇ ಜಾತಿಯ ಮಕ್ಕಳು' ಮತ್ತು ಸಂತಾನದ ವಿನಿಮಯ ಪದ್ಧತಿ ಮುಂತಾದ ಆಚರಣೆಗಳು ಜಾರಿಯಲ್ಲಿದ್ದವು. ಯಾರು ಅಸಹ್ಯವಾಗಿ ನಿಂದಿಸಬಹುದು ಮತ್ತು ಅದೇ ಪದವನ್ನು ಬಳಸದೆ ಹೆಚ್ಚು ಮುಂದುವರಿಯಬಹುದು ಎಂಬುದನ್ನು ಕಾಣಲು ಈ ವಿನಿಮಯವು ಆಗಾಗ್ಗೆ ಸ್ಪರ್ಧೆಯಾಗಿ ಪರಿಣಮಿಸುತ್ತಿತ್ತು. ಅದೇ ರೀತಿಯಲ್ಲಿ ಭಾರತದ ಅನೇಕ ಸಮುದಾಯಗಳಲ್ಲಿ ಅಜ್ಜಂದಿರು ಮತ್ತು ಮೊಮ್ಮಕ್ಕಳ ನಡುವೆ, ಒಬ್ಬ ವ್ಯಕ್ತಿ ಮತ್ತು ಹೆಂಡತಿಯ ಕಿರಿಯ ಸೋದರಿಯರ ನಡುವೆ ಮತ್ತು ಸೋದರಮಾವ ಮತ್ತು ಸೋದರಿಯ ಮಗಳು ಮುಂತಾದವರ ನಡುವೆ ಹಾಸ್ಯ ಸಂಬಂಧಗಳು ಕಂಡುಬರುತ್ತವೆ. ಆಫ್ರಿಕದ ಕೆಲವು ಭಾಗಗಳಲ್ಲಿ ಎರಡು ಭಿನ್ನ ಬುಡಕಟ್ಟುಗಳ ಮಧ್ಯೆ ಹಾಸ್ಯ ಸಂಬಂಧಗಳಿವೆ.

ಇವು ಮೂಲಭೂತವಾಗಿ ರಕ್ತಸಂಬಂಧಿಗಳಲ್ಲಿ ಕೋಮಲವಾದ ಸಾಮಾಜಿಕ ಅಂತರ್‌ಕ್ರಿಯೆಗೆ ಸಹಾಯ ಮಾಡಿಕೊಡುತ್ತವೆ ಮತ್ತು ಸಮುದಾಯದಲ್ಲಿ ಸ್ನೇಹಪರ ವಾತಾವರಣವನ್ನು ಪೋಷಿಸುತ್ತದೆ. ಪ್ರತ್ಯೇಕತೆಯ ನಿಷೇಧದ ಪ್ರಾಥಮಿಕ ಉದ್ದೇಶವೆಂದರೆ ರಕ್ತಸಂಬಧಿಗಳ ಶಕ್ಯತೆಯುಳ್ಳ ಸಂಗಾತಿಯರ ಅನ್ಯೋನ್ಯ ಸಂಬಂಧಗಳಿಗೆ ಸಹಾಯ ಮಾಡಿ ಪ್ರೋತ್ಸಾಹಿಸುವುದಾಗಿರುತ್ತದೆ. ಉದಾಹರಣೆಗೆ ಮೊದಲೇ ತಿಳಿಸಿದಂತೆ ಕೆಲವು ಸಮಾಜಗಳಲ್ಲಿ ಸೋದರ ಮಾವಂದಿರು(cross cousins) ಮತ್ತು ಒಬ್ಬ ವ್ಯಕ್ತಿ ಅವನ ಹೆಂಡತಿಯ ಕಿರಿಯ ಸೋದರಿಯರ ನಡುವೆ ವಿನೋದ ಸಂಬಂಧಗಳಿಗೆ ಅವಕಾಶವುಂಟು. ಇದು ಏಕೆಂದರೆ ಈ ಸಮಾಜಗಳಲ್ಲಿ ಸೋದರ ಮಾವಂದಿರು ಮತ್ತು ಹೆಂಡತಿಯ ಕಿರಿಯ ಸೋದರಿಯರನ್ನು ವಿವಾಹ ಸಂಗಾತಿಯರಾಗಿ ಪಡೆಯಬಹುದಾದ ಸಾಧ್ಯತೆ ಇದೆ. ಕೊನೆಯ ಪರಿಸ್ಥಿತಿಯಲ್ಲಿ ಒಂದು ವೇಳೆ ಪತ್ನಿಯು ಅಸುನೀಗಿದರೆ ಅಥವಾ ಅವಳು ಮಕ್ಕಳನ್ನು ಪಡೆಯಲು ವಿಫಲವಾದಲ್ಲಿ ಆ ವ್ಯಕ್ತಿಯು ತನ್ನ ಹೆಂಡತಿಯ ಕಿರಿಯ ಸೋದರಿಯರನ್ನು ವಿವಾಹವಾಗಬಹುದು. ಅಜ್ಜಂದಿರು ಮತ್ತು ಮೊಮ್ಮಕ್ಕಳ ನಡುವಿನ ಹಾಸ್ಯ ಸಂಬಂಧವನ್ನು ವಿವರಿಸುತ್ತಾ ಇದು ಪ್ರಾಚೀನ ಸಂಪ್ರದಾಯಗಳ ಅವಶೇಷ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಹಿರಿಯರು ಕಿರಿಯರಿಗೆ ಲೈಂಗಿಕತೆಯ ಸೇರಿದಂತೆ ಬದುಕುವ ಕಲೆಯನ್ನು ಬೋಧಿಸುತ್ತಾರೆ, ಅಂದರೆ ಹಿರಿಯರು ಕಿರಿಯರಿಗೆ ಮೋಹಿಸುವುದು, ಪ್ರೀತಿಮಾಡುವುದು ಮತ್ತು ದೈಹಿಕ ಸಂಪರ್ಕ ಪಡೆಯುವುದು ಮುಂತಾದವುಗಳನ್ನು ಕಲಿಸುತ್ತಾರೆ. ವಾಸ್ತವವಾಗಿ ಹಾಸ್ಯಸಂಬಂಧಗಳು ನಿಜವಾದ ವಿವಾಹಗಳಲ್ಲಿ ಸೇರಿಕೊಂಡಿವೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬ ಪರಿಸ್ಥಿತಿಯ ಬಗ್ಗೆ ಸಂಶೋಧಕರಿಂದ ವರದಿಗಳಾಗಿವೆ. ಉದಾಹರಣೆಗೆ, ರಾಯ್[19] ರವರು ಪೊರೆನ್ ಜನಾಂಗದಲ್ಲಿ ಒಬ್ಬ ವೃದ್ಧ ವ್ಯಕ್ತಿಯು ತನ್ನ ಸ್ವಂತ ಮೊಮ್ಮಗಳನ್ನು ವಿವಾಹವಾಗುತ್ತಾನೆ ಎಂತಲೂ ಮತ್ತು ವೆರಿಯರ್ ಎಲ್‌ವಿನ್‌ರವರು ಒಂದು ಘಟನೆಯಲ್ಲಿ ಬಗಯ ಬಂಡಕಟ್ಟು ಜನರಲ್ಲಿ ಒಬ್ಬ ವೃದ್ಧ ಹೆಂಗಸು ತನ್ನ ಸ್ವಂತ ಮೊಮ್ಮಗನನ್ನು ವಿವಾಹವಾಗಿದ್ದಳು ಎಂಬುದಾಗಿ ತಿಳಿಸಿದ್ದಾರೆ.

ಬಂಧುತ್ವವನ್ನು ಗುರುತಿಸುವ ಹೆಸರುಗಳು :

ಬಂಧುತ್ವ ನಾಮಕರಣ ಪದ್ಧತಿಯ ಅಥವಾ ಪರಿಭಾಷೆಯ ಅಧ್ಯಯನ ಬಹು ಮುಖ್ಯವಾದುದು. ಏಕೆಂದರೆ ಅವು ಆಜ್ಞೆ ಮಾಡುವ ಸಂಬಂಧವನ್ನು ತೋರಿಸುತ್ತವೆ. ಬಂಧುತ್ವ ನಾಮಕರಣ ಪದ್ಧತಿಯನ್ನು ಕಂಡುಹಿಡಿದ ಕೀರ್ತಿಯು ಲೆವಿಸ್‌ಹೆನ್ರಿ ಮಾರ್ಗನ್‌ಗೆ[21] ಸಲ್ಲುತ್ತದೆ. ಐರೋಕ್ವಿಸ್‌ರವರೊಡನೆ ವಾಸಿಸುವಾಗ ಅವರಲ್ಲಿ ಪ್ರಚಲಿತದಲ್ಲಿದ್ದಂತಹ ಬಂಧುತ್ವ ನಾಮಕರಣದ ಬಗ್ಗೆ ಮನದಟ್ಟು ಮಾಡಿಕೊಂಡನು. ಬಂಧುತ್ವದ ಹೆಸರಿಡುವಿಕೆಯು ವಿಚಿತ್ರ ಆಚರಣೆಯಾಗಿರಲಿಲ್ಲ ; ಆದರೆ ಪ್ರತಿಯೊಂದು ಸಮಾಜದಲ್ಲಿಯೂ ನಿರ್ದಿಷ್ಟ ಪಾತ್ರವನ್ನು ಹೊಂದಿ ನಿರ್ದಿಷ್ಟ ಕಾರ್ಯಗಳನ್ನು ಸಲ್ಲಿಸುತ್ತಿದ್ದವು. ಅವರು, ನಿಕಟ ಕಾರ್ಯಾತ್ಮಕ ಸಂಬಂಧವು ಬಂಧುತ್ವ ನಾಮಕರಣ ವ್ಯವಸ್ಥೆ ಮತ್ತು ಸಾಮಾಜಿಕ ಸಂಘಟನೆಯ ನಡುವೆ ಅಸ್ತಿತ್ವದಲ್ಲಿದ್ದಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಕಾರ್ಯಪ್ರವೃತ್ತರಾಗಿ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಬಂಧುತ್ವದ ಪರಿಭಾಷೆಗಳನ್ನು ಸಂಗ್ರಹಿಸಿದರು. ಅವುಗಳನ್ನು 1871ರಲ್ಲಿ ತಮ್ಮ ಪ್ರಸಿದ್ಧ ಪುಸ್ತಕ 'Systems of Consanguinity and Affinity' ಯಲ್ಲಿ ಪ್ರಕಟಿಸಿದರು. ಇವರು ಬಂಧುತ್ವದ ಪದಗಳನ್ನು (term) ಎರಡು ವಿಶಾಲ ಗುಂಪುಗಳಾಗಿ ವರ್ಗೀಕರಿಸಿದ್ದರು. ಅವೆಂದರೆ ವಿಂಗಡಿಕೆಯ ಬಂಧುತ್ವದ (Classficatory kinship) ಪದಗಳು, ಮತ್ತು ವಿವರಣಾತ್ಮಕವಾದ ಬಂಧುತ್ವದ ಪದ. ವಿಂಗಡಿಕೆಯ ಬಂಧುತ್ವದ ಪದಗಳನ್ನು ರಕ್ತಸಂಬಂಧಿಗಳ ವಿಭಿನ್ನ ಸಮೂಹಗಳನ್ನು ಗೊತ್ತುಪಡಿಸಲು ಬಳಸಲಾಗುವುದು. ಇದು ನೇರಸಂತತಿಯ (lineal), ಸಮಾನ ಬಂಧುತ್ವ (collateral) ಮತ್ತು ವಿವಾಹ ಸಂಬಂಧವುಳ್ಳ ಬಂದು ಬಳಗದವರನ್ನು ಒಳಗೊಂಡಿರಲುಬಹುದಿತ್ತು. ಉದಾಹರಣೆಗೆ ಬಂಧುತ್ವದ ಪದ 'ಚಿಕ್ಕಪ್ಪ' ಎನ್ನುವುದನ್ನು ತಂದೆಯ ಸೋದರ, ತಾಯಿಯ ಸೋದರ, ತಂಗಿಯ ಗಂಡ, ಅಥವಾ ಚಿಕ್ಕಮ್ಮನ ಗಂಡ ಮುಂತಾದವರನ್ನು ಗೊತ್ತುಪಡಿಸಲು ಉಪಯೋಗಿಸಬಹುದು. ಆದರೆ ವಿವರಣಾತ್ಮಕ ಬಂಧುತ್ವದ ಪದಗಳು ಭಿನ್ನವಾಗಿವೆ. ಮೊದಲನೆಯ ಮತ್ತು ಎರಡನೆಯ ಶ್ರೇಣಿಯ ಬಂಧುಗಳಿಗೆ ಕೆಲವು ನಿರ್ಧಿಷ್ಟ ಪದಗಳಿವೆ, ಮತ್ತು ಇತರೆ ಸಂಬಂಧಿಕರನ್ನು ಈ ನಿರ್ಧಿಷ್ಟ ಪದಗಳ ಸಮಾನಪದ (ಮಿಶ್ರಪದ)ಗಳಾಗಿ ಬಳಸಲಾಗುವುದು. ಉದಾಹರಣೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯ ಮತ್ತು ದ್ವಂದ್ವಾರ್ಥ ಕೊಡುವ ಪದಗಳಾದ 'ಚಿಕ್ಕಪ್ಪ' 'ಸೋದರಮಾವ' (cousin), ಎಂದು ಬಳಸುವುದರ ಬದಲಿಗೆ ಸರಿಯಾದ ಸಮಾನ ಪದಗಳನ್ನು ತಂದೆಯ ಸೋದರ, ತಂದೆಯ ಸೋದರಿಯ ಮಗ, ಮುಂತಾಗಿ ಬಳಸಬಹುದು. ಬಂಧುತ್ವದ ಎರಡು ವಿಧದ ಪದಗಳು ಸಹ ಎಲ್ಲಾ ಸಮಾಜಗಳಲ್ಲಿಯೂ ಕಂಡು ಬಂದರೂ ಆಧುನಿಕ ನಾಗರೀಕ ಸಮಾಜಗಳಲ್ಲಿ ವಿಂಗಡಣಾತ್ಮಕ ಬಂಧುತ್ವದ ಪದಗಳು ಹೆಚ್ಚು ಪ್ರಧಾನ ವಾಗಿವೆ, ವಿವರಣಾತ್ಮಾಕ ಪದಗಳು ಸ್ಪಷ್ಟತೆಗಾಗಿ ಹೆಚ್ಚಾಗಿವೆ.

ಗ್ರಾಮೀಣ ಸಮುದಾಯಗಳ ಜೀವನ ಸಂಘಟನೆಯಲ್ಲಿ ಬಂಧುತ್ವವು ಮುಖ್ಯ ಪಾತ್ರವನ್ನು ವಹಿಸುತ್ತದೆ. ಇದು ಪ್ರಸ್ತುತ ಮತ್ತು ಹಿಂದಿನ ಗ್ರಾಮೀಣ ಸಮುದಾಯಗಳ ದೃಷ್ಟಿಯಲ್ಲಿಯೂ ಕೂಡ ವಾಸ್ತವವಾದುದು. ಹಿಂದೆ ಗ್ರಾಮೀಣ ಸಮುದಾಯುಗಳು ಸ್ವಯಂಪ್ರೇರಿತ ಪಾಲುದಾರಿಕೆಯ ಸಂಘಗಳಾಗಿರಲಿಲ್ಲ : ಆದರೆ ರಕ್ತ ಸಂಬಂಧಿಗಳ ಸಮೂಹಗಳಾಗಿದ್ದವು. ಸಮಾಜದ ಪ್ರಾಚೀನ ಇತಿಹಾಸದ ಸಂಶೋಧ ನೆಯು ಸ್ಪಷ್ಟಪಡಿಸುವ ನಿಜಾಂಶದಂತೆ ಸಮುದಾಯಗಳಲ್ಲಿ ಜನರನ್ನು ಒಟ್ಟಿಗೆ ತರುತ್ತಿ ದ್ದಂತಹ ಬಾಂಧವ್ಯವು ರಕ್ತಸಂಬಂಧ ಅಥವಾ ಬಂಧುತ್ವವಾಗಿದ್ದಿತು. ಪ್ರಾಚೀನ ಕಾಲದ ಜನರು ರಕ್ತ ಸಂಬಂಧದ ಹೊರತಾಗಿ ಸೋದರತ್ವವನ್ನು ಗುರುತಿಸಿರಲಿಲ್ಲ. ಒಬ್ಬ ಮನುಷ್ಯನಿಗೆ ತನ್ನ ಸಮೂಹ ಅಥವಾ ಸಮುದಾಯದೊಡನೆ ಸೇರಿಕೊಳ್ಳಲು ಬಂಧುತ್ವವು ನಿಜವಾಗಿಯೂ ಎಷ್ಟು ಮುಖ್ಯವಾಗಿದ್ದಿತು ಎಂಬುದು ಮೇಯ್ನ್‌ರವರಿಂದ ಅರ್ಥವತ್ತಾಗಿ ನಿರೂಪಿಸಲ್ಪಟ್ಟಿದೆ. ಅವರು ಹೀಗೆ ಬರೆಯುತ್ತಾರೆ "ಒಬ್ಬ ಮನುಷ್ಯನು ಮತ್ತೊಬ್ಬನ ಬಂಧುವಲ್ಲದಿದ್ದಲ್ಲಿ ಅವರಿಬ್ಬರ ಮಧ್ಯೆ ಏನು ಇಲ್ಲ. ಆತ ಇನ್ನೊಬ್ಬನ ಘಾತುಕ ವೈರಿಯಾಗಿರಬೇಕಿತ್ತು ಅಥವಾ ಬುಡಕಟ್ಟು ಜನಾಂಗ ಮಾಡಿದಂತಹ ಯುದ್ಧದ ರೀತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಕ್ರೂರ ಮೃಗಗಳ ಹಾಗೆ ದ್ವೇಷಿಸ ಬೇಕಿತ್ತು. ಜನರು ಆಗ ಕ್ರೂರ ಪ್ರಾಣಿಗಳ ರೀತಿಯಲ್ಲಿ ವರ್ತಿಸುತ್ತಿದ್ದರು. ಒಂದು ಬುಡುಕಟ್ಟು ಮತ್ತೊಬ್ಬನನ್ನು ಮತ್ತು ಅವರಿಗೆ ಸಂಬಂಧಿಸಿರದ ಬುಡಕಟ್ಟು ಜನ ರೊಂದಿಗೆ ನಾಯಿಗಳ ರೀತಿಯಲ್ಲಿ ಕಚ್ಚಾಡಬೇಕಿತ್ತು ಎಂದು ಹೇಳಿದರೆ ಉತ್ಪ್ರೇಕ್ಷೆ ಯಲ್ಲ." ಹೀಗೆ ಸೈದ್ಧಾಂತಿಕ ಕಲ್ಪನೆಯು ಎಲ್ಲಾ ಬುಡಕಟ್ಟು ಜನರು ಕೆಲವು ಸಾಮಾನ ಪೂರ್ವಜರಿಂದ ಅನುಗತವಾಗಿ ಬಂದವರಾಗಿರುತ್ತಾರೆ, ಯಾರ ವಂಶದದರು ಉಪಗುಂಪು ಗಳನ್ನು ಹೊಂದಿರುತ್ತಾರೋ, ಅದು ಪುನಃ ಅಸ್ತಿತ್ವದಲ್ಲಿರುವ ಎಲ್ಲಾ ಕುಟುಂಬಗಳ ಸಣ್ಣ ಸಮೂಹದವರೆಗೆ ಇತರೆ ಚಿಕ್ಕದಾದ ಸಮೂಹಗಳಾಗಿ ಶಾಖೆಗಳಾಗುತ್ತವೆ.

ಹೆಚ್ಚುಕಡಿಮೆ ಇದೇ ರೀತಿಯ ದೃಷ್ಟಿಕೋನಗಳು ಸುಡಾನ್‌ನಲ್ಲಿ ವಾಸಿಸುತ್ತಿರುವ ನವಶಿಲಾಯುಗದ ನ್ಯೂಯರ್ ಜನರನ್ನು ಅಧ್ಯಯನ ಮಾಡಿದಂತಹ ಇವಾನ್ಸ್ ಪ್ರಿಚರ್ಡ್‌ರವರಿಂದ ವ್ಯಕ್ತಪಡಿಸಲ್ಪಟ್ಟಿವೆ. "ಬಂಧುತ್ವವು ನ್ಯೂಯರ್ ಸಮಾಜದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೋತ್ಕೃಷ್ಟ ತಳಹದಿಯಾಗಿದೆ. ನ್ಯೂಯರ್ ಸಮಾಜವು ಬಂಧುತ್ವ ಸಂಬಂಧದ ಎಳೆಯ ಬಲೆಯಾಗಿದೆ, ಮತ್ತು ಒಂದು ದೊಡ್ಡ ಕುಟುಂಬವಾಗಿದೆ. ನ್ಯೂಯರ್ ಪ್ರದೇಶದ ಜನರ ಸಂಬಂಧಿಗಳು ಒಬ್ಬರಿಗೊಬ್ಬರು ರಕ್ತ ಸಂಬಂಧಿಗಳಾಗಿರದಿದ್ದಲ್ಲಿ ಒಟ್ಟಿಗೆ ವಾಸಿಸುವುದಿಲ್ಲ. ವಾಸ್ತವವಾಗಿ ನ್ಯೂಯರ್ ಪ್ರದೇಶದಲ್ಲಿ ಯಾರು ನೆಂಟರಾಗಿರುತ್ತಾರೋ ಅವರು ರಕ್ತಸಂಬಂಧಿಗಳು ಸಹ ಆಗಿರುತ್ತಾರೆ. ಆದರೆ ಕೇವಲ ಹಳ್ಳಿಗಳಲ್ಲಿ ವಾಸಿಸುವುದು ವ್ಯಕ್ತಿಗೆ ಪರಿಪೂರ್ಣ ಸದಸ್ಯತ್ವವನ್ನು ಕೊಡುತ್ತಿರಲಿಲ್ಲ. ಇದು ಕೇವಲ ಬಂಧುತ್ವದಿಂದ ದೊರಕುತ್ತಿತ್ತು. ಒಬ್ಬನು ನ್ಯೂಯರ್ ಜೊತೆ ವಾಸಿಸಲು ಬಯಸಿದಲ್ಲಿ ಬಂಧು ಬಳಗದವರು ಅವನಿಗೆ ಅವಕಾಶ ಮಾಡಿಕೊಡಬೇಕು ಮತ್ತು ಪ್ರತಿಯೊಬ್ಬನು ಅವನನ್ನು ರಕ್ತ ಸಂಬಂಧಿಯಂತೆ ಉಪಚರಿಸಬೇಕು. ಎಲ್ಲಾ ಹಕ್ಕುಗಳು, ಸ್ಥಾನಮಾನಗಳು ಮತ್ತು ಕರ್ತವ್ಯಗಳು ಬಂಧುತ್ವದಿಂದ ನಿರ್ಧರಿಸಲ್ಪಡುತ್ತವೆ. ನ್ಯೂಯರ್ ಸಮಾಜದಲ್ಲಿ ಒಬ್ಬನು ನಿಜವಾದ, ಕಲ್ಪನೆಯ ಅಥವಾ ಪುರಾಣ ಸಂಬಂಧಿ ರಕ್ತಸಂಬಂಧಿಯಾಗಿರುತ್ತಾನೆ ಇಲ್ಲವೆ ಅಪನಂಬಿಕೆ ಮತ್ತು ತಿರಸ್ಕಾರದಿಂದ ಕಾಣಲ್ಪಡುವ ಶತ್ರುವಾಗಿರುತ್ತಾನೆ'' ಈ ಅಂಶವನ್ನು ವಿಶ್ಲೇಷಿಸಲು ಇವಾನ್ಸ್ ಪ್ರಿಚರ್ಡ್‌ರವರು ನ್ಯೂಯರ್ ಜನರ ಜೊತೆಯಲ್ಲಿ ವಾಸಿಸುತ್ತಿದ್ದಂತಹ ಅವಧಿಯಲ್ಲಿ ಸಂಭವಿಸಿದ ಘಟನೆಯೊಂದನ್ನು ವಿವರಿಸುತ್ತಾರೆ :

"ಆ ಬೀಡಿನಲ್ಲಿ ವಾಸಿಸುತ್ತಿದ್ದಂತಹ ಕೊನೆಯ ದಿನಗಳಲ್ಲಿ ನಾನು ಕಾಯಿಲೆ ಹಿಡಿದು ದೋಣಿಯನ್ನು ತ್ಯಜಿಸಿ ಆ ಜನರನ್ನು ನನ್ನ ಬಿಡಾರ ಮತ್ತು ನನ್ನ ಕಡೆಯವರನ್ನು ನದಿಯ ಅಂಚಿಗೆ ಸಾಗಿಸಲು ಹೇಳಿಕೊಂಡೆ. ಆಗ ಅವರು ತಿರಸ್ಕರಿಸಿದರು. ನನ್ನ ನ್ಯೂಯರ್ ಯುವಸೇವಕ ಮತ್ತು ನಾನು ಸೇರಿ ಆ ಕೆಲಸವನ್ನು ಮಾಡಿದೆವು. ನಾನು ಸೇವಕನನ್ನು ಏಕೆ ಅವರು ಒರಟಾಗಿ ನಡೆದುಕೊಂಡರು ಎಂದು ಕೇಳಿದಾಗ ಅವನು ಹೀಗೆ ಉತ್ತರಿಸಿದನು. ನೀವು ನಿಮ್ಮ ಕಡೆಯವರನ್ನು ನದಿಯ ಅಂಚಿಗೆ ಸಾಗಿಸಿ ಎಂದು ಅವರನ್ನು ಕೇಳಿಕೊಂಡಿರಿ. ಆದರಿಂದ ಅವರು ತಿರಸ್ಕರಿಸಿದರು. ಒಂದು ವೇಳೆ ಅವರನ್ನು ನನ್ನ ತಾಯಿಯ ಮಕ್ಕಳೇ ನನಗೆ ಸಹಾಯಮಾಡಿ ಎಂದು ಕೇಳಿಕೊಂಡಿದ್ದರೆ ಅವರು ತಿರಸ್ಕರಿಸುತ್ತಿರಲಿಲ್ಲ.''

ಭಾರತದ ಗ್ರಾಮೀಣ ಸಮುದಾಯಗಳ ಜೀವನದ ಸಂಘಟನೆಯಲ್ಲಿ ಬಂಧುತ್ವವು ವಹಿಸುವ ಪಾತ್ರವನ್ನು ದಕ್ಷಿಣ ಭಾರತದ ಕಲ್ಯಾಣಪುರದಲ್ಲಿ ಮಾಡಿದ ಒಂದು ಪರಿಸ್ಥಿತಿ ಅಧ್ಯಯನ್ನು ವಿವರಿಸುವುದರ ಮೂಲಕ ವಿಶ್ಲೇಷಿಸಬಹುದು. ಕಲ್ಯಾಣಪುರವು ಪಿತೃಪ್ರಧಾನ ಸಮಾಜವನ್ನು ಹೊಂದಿದೆ. ಆ ಹಳ್ಳಿಯ ಮುಖ್ಯವಾದ ಜಾತಿಗಳೆಂದರೆ ಲಿಂಗಾಯಿತರು, ಜೈನರು ಮತ್ತು ಕುರುಬ, ಎಲ್ಲರೂ ಸಹ ಬೆಡಗು (Bedagu) ಎಂಬ ಪಿತೃಪ್ರಧಾನ ಬಂಧುತ್ವದ ಕಟ್ಟುಪಾಡುಗಳಲ್ಲಿ ಸಂಘಟಿತರಾಗಿದ್ದಾರೆ. ಬೆಡಗಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದಸ್ಯರು ಕೇವಲ ಅನ್ಯೋನ್ಯವಾಗಿ ಒಟ್ಟಿಗೆ ಸೇರಿಕೊಂಡಿರುವುದಿಲ್ಲ. ಜೊತೆಗೆ ಗ್ರಾಮದ ಭೂಮಿಯ ಸಹ ಮಾಲೀಕರು ಮತ್ತು ಒಟ್ಟಿಗೆ ಸಾಗುವಳಿ ಮಾಡುವವರು ಸಹ ಆಗಿರುತ್ತಾರೆ. ಇದರರ್ಥ ಅಲ್ಲಿ ಭೂಮಿಯ ಸಾಮುದಾಯಿಕ ಒಡೆತನವಿತ್ತು ಎಂದಲ್ಲ. ಶಾಸನಬದ್ಧವಾಗಿ ಭೂಮಿಯ ಖಾಸಗಿ ಮಾಲೀಕತ್ವ ಇದ್ದರೂ ಸಹ ಇದರಲ್ಲಿದ್ದ ಹಾಗೆ ಭೂಮಿಯ ಮಾರುವಿಕೆ, ಭೋಗ್ಯ ಮತ್ತು ಭೂಮಿಯ ಪಾಲಿನ ವಿತರಣೆ ಇವು ಕಲ್ಯಾಣಿಪುರದಲ್ಲಿ ಅಸ್ತಿತ್ವದಲ್ಲಿರಲಿಲ್ಲ. ಕಾನೂನು ವೈಯಕ್ತಿಕ ಒಡೆತನಕ್ಕೆ ಈ ಎಲ್ಲಾ ಹಕ್ಕುಗಳನ್ನು ಒದಗಿಸಿದ್ದಾಗ್ಯೂ ಸ್ಥಳೀಯ ರೂಢಿ ಸಂಪ್ರದಾಯಗಳು ಆತನಿಗೆ ಲಭ್ಯವಿರುವ ಎಲ್ಲಾ ಹಕ್ಕುಗಳನ್ನು ತನ್ನ ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರಲಿಲ್ಲ. ಗ್ರಾಮದ ಭೂಮಿಯ ಅನೇಕ ಎಸ್ಟೇಟುಗಳಾಗಿ ವಿಂಗಡಿಸಲ್ಪಟ್ಟು ಪ್ರತಿಯೊಬ್ಬರು ಪ್ರತ್ಯೇಕವಾದ ಭೂಭಾಗವನ್ನು ಹೊಂದಿದ್ದರು. ಈ ವಿಭಾಗವು ಒಂದು ಸಮೂಹದ ಮಾಲಿಕತ್ವಕ್ಕೆ ಸೇರಿದ ಅನೇಕ ಘಟಕಗಳಾಗಿ ವಿಂಗಡಿಸಲ್ಪಟ್ಟಿತ್ತು. ಈ ಒಂದೊಂದು ಘಟಕವು ಒಂದೊಂದು ಕುಟುಂಬದ ಮಾಲಿಕತ್ವಕ್ಕೆ ಸೇರಿದ ಅದೇ ಬೆಡಗಿನ ಹಲವಾರು ಉಪಘಟಕಗಳಾಗಿ ವಿಂಗಡಿಸಲ್ಪಟ್ಟಿದ್ದವು. ಹೀಗೆ ರಕ್ತಸಂಬಂಧಿಗಳಿಗೆ ಸೇರಿದ ಭೂಮಿಯು ಅವರ ವಾಸಸ್ಥಳದಂತೆ ಹತ್ತಿರದಲ್ಲಿದ್ದಿತು. ಭೂಮಿಯ ಈ ಸಾಮಿಪ್ಯವು ಅನೇಕ ಸಾಮಾನ್ಯ ಚಟುವಟಿಕೆಗಳಿಗೆ ದಾರಿಮಾಡಿಕೊಟ್ಟಿತ್ತು. ಅದರಲ್ಲಿ ಮುಖ್ಯವಾದುದು ಇಡೀ ಒಂದು ಸಮೂಹವೂ ಭೂಮಿಯ ಮೇಲೆ ಸಮ್ಮಿಳಿತವಾದ ಅಧಿಕಾರವನ್ನು ಹೊಂದಿದ್ದಿತು. ಕಾನೂನನ್ನು ವಿರೋಧಿಸದಿದ್ದರೂ ಬದಲಿಗೆ ಒಬ್ಬನ ಪಾಲಿನ ಭೂಮಿಯನ್ನು ವಿಭಜನ, ಮಾರಾಟ, ಭೋಗ್ಯ ಅಥವಾ ವಿನಿಮಯಗಳನ್ನು ಒಂದು ವರ್ಗದ ಸಮೂಹದ ಒಪ್ಪಿಗೆ ಮತ್ತು ಅಂಗೀಕಾರವಿಲ್ಲದೆ ಮಾಡುವ ಹಾಗಿಲ್ಲ. ಆದ್ದರಿಂದ ರಕ್ತಸಂಬಂಧಿಗಳಲ್ಲೊಬ್ಬನು ತನ್ನ ಪಾಲಿನ ಭೂಮಿಯನ್ನು ಮಾರಾಟ ಮಾಡಲು ಬಯಸಿದರೆ ಹೊರಗಿನವರು ಕೊಳ್ಳಲು ಮುಂದೆ ಬರುವುದಕ್ಕೆ ಮುಂಚೆ ರಕ್ತ ಸಂಬಂಧಿಗಳಲ್ಲೇ ಯಾರಾದರೂ ಕೊಂಡುಕೊಳ್ಳಲು ಮುಂದೆ ಬರಬಹುದು. ವಾಸ್ತವವಾಗಿ ಕಲ್ಯಾಣಿಪುರದಲ್ಲಿನ ಕೆಲವು ಬಂಧು ಗುಂಪುಗಳು ತಮ್ಮ ಎಲ್ಲಾ ಭೂಮಿಯನ್ನು ಹಾನಿಯಾಗದಂತೆ ಮತ್ತು ವಿಭಜನೆಯಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ತಮ್ಮ ಹಿರಿಯನ ಹೆಸರಿನಲ್ಲಿ ನೋಂದಣಿ ಮಾಡಿಸುತ್ತಿದ್ದರು.

ಭೂಮಿಯ ಸಾಮಿಪ್ಯತೆಯು ಸಂಬಂಧಿಗಳಲ್ಲಿ ಅನೇಕ ಸಂಯುಕ್ತ ಚಟುವಟಿಕೆಗಳಿಗೆ ಅವಕಾಶಮಾಡಿಕೊಟ್ಟಿತ್ತು. ಉದಾಹರಣೆಗೆ, ಕಲ್ಯಾಣಿಪುರದಲ್ಲಿ ಒಂದು ಸಮೂಹದ ಸದಸ್ಯರು ತಮ್ಮ ನೆರೆಹೊರೆಯ ಹೊಲದಲ್ಲಿ ತಮ್ಮ ಹಿರಿಯರ ಮಾರ್ಗದರ್ಶನದಲ್ಲಿ ಒಬ್ಬರ ಪಕ್ಕದಲ್ಲಿ ಒಬ್ಬರು ಒಟ್ಟಿಗೆ ಕೆಲಸಮಾಡುವಂತಹದ್ದು ಸಾಮಾನ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ದೃಶ್ಯ. ರಕ್ತಸಂಬಂಧಿಗಳಲ್ಲಿನ ಇಂತಹ ಅನ್ಯೋನ್ಯತೆಯು ಬಂಧುತ್ವ ಸಂಬಂಧ ವನ್ನು ಬಲಪಡಿಸಿತ್ತು. ಆಗಿಂದಾಗ್ಗೆ ಕೆಲಸದ ಮಾದರಿಗಳಿಗನುಸಾರವಾಗಿ ರಕ್ತ ಸಂಬಂಧಿ ಗಳು ಉಪಕರಣಗಳು, ಆಯುಧಗಳು ಎತ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿ ದ್ದರು ಮತ್ತು ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದರು. ಜೊತೆಗೆ ಇತರೆ ಕೆಲವು ವಸ್ತುಗಳಾದ ಮಂಚಗಿ (ಬೆಳೆಗಳನ್ನು ರಕ್ಷಿಸಲು ಹೊಲಗಳನ್ನು ನೋಡಿಕೊಳ್ಳಲು ಕಟ್ಟಿ ದಂತಹ ಗುಡಿಸಲು) ಮತ್ತು ಕಣ ಮುಂತಾದವುಗಳನ್ನು ಸಹ ಹಂಚಿಕೊಳ್ಳುತ್ತಿದ್ದರು. ಮಂಚಗಿಯಲ್ಲಿ ರಾತ್ರಿಯ ವೇಳೆಯಲ್ಲಿ ಬೆಳೆಗಳನ್ನು ಕಾಯುತ್ತಿದ್ದರು. ಸುಗ್ಗಿಯ ಕಾಲ ದಲ್ಲಿ ಬೆಳೆಯನ್ನು ಒಕ್ಕುವ ಕಾರ್ಯವು ಸಾಮಾನ್ಯ ಕಣದಲ್ಲಿ ಮಾಡಲ್ಪಡುತ್ತಿತ್ತು. ಇತರೆ ಚಟುವಟಿಕೆಗಳು. ರಕ್ತಸಂಬಂಧಿಗಳು ಸಹಕಾರ ಸಾಗುವಳಿ ಮಾಡುತ್ತಿದ್ದರು ಎಂಬುದನ್ನು ಒತ್ತಿ ಹೇಳುತ್ತಾರೆ.

ರಕ್ತಸಂಬಂಧಿಗಳು ಸಹಮಾಲಿಕರು ಮತ್ತು ಸಹಕಾರಿ ಬೇಸಾಯಗಾರರು ಆಗಿರು ತ್ತಿದ್ದಂತಹ ನಿಯಮಗಳು ಇತರೆ ಕೃಷಿಯೇತರ ಜಾತಿಗಳಲ್ಲೂ ಅವರ ವೃತ್ತಿಗೆ ಸಂಬಂಧಿ ಸಿದಂತೆ ಭಿನ್ನ ರೀತಿಯಲ್ಲಿ ಕಂಡುಬರುತ್ತದೆ. ಬೆಸ್ತರ ಒಂದು ಜಾತಿಯಾದ ಭೋವಿಗಳಲ್ಲಿ ಇದು ನಿಜವಾಗಿದೆ. ಅವರು ಎರಡು ವಿಧದ ಮೀನು ಹಿಡಿಯುವ ಬಲೆಗಳನ್ನು ಉಪ ಯೋಗಿಸುತ್ತಿದ್ದರು. ಅದರಲ್ಲಿ ಚಿಕ್ಕದ್ದನ್ನು 'ಬೀಸು ಬಲೆ' ಎಂದು ಕರೆಯುತ್ತಿದ್ದರು, ಇದನ್ನು ಒಬ್ಬನೇ ವ್ಯಕ್ತಿ ನಿತ್ಯವೂ ಉಪಯೋಗಿಸುತ್ತಿದ್ದನು, ರಂಪಣಿ ಎಂಬುದು ಗಾತ್ರ ದಲ್ಲಿ ದೊಡ್ಡದಾಗಿದ್ದಿತು. ರಂಪಣಿ ಬಲೆಯು ಅತೀ ದೊಡ್ಡದಾಗಿದ್ದು ಒಂದು ಕುಟುಂಬ ಅಥವಾ ಒಬ್ಬ ವ್ಯಕ್ತಿಯಿಂದ ಕಾರ್ಯನಿರ್ವಹಿಸಲ್ಪಡುತ್ತಿತ್ತು. ಆದ್ದರಿಂದ ಕಲ್ಯಾಣಪುರ ದಲ್ಲಿ ಯಾವುದೇ ಭೋವಿ ಕುಟುಂಬವು ರಂಪಣಿಯನ್ನು ಸ್ವತಂತ್ರವಾಗಿ ಹೊಂದಿರಲಿಲ್ಲ. ಪ್ರತಿಯೊಂದು ಕುಟುಂಬವು ಬಲೆಯ ಒಂದು ಭಾಗವನ್ನು ಹೊಂದಿರುವುದರ ಬದಲಿಗೆ ಪ್ರತ್ಯೇಕ ಭಾಗಗಳನ್ನು ಒಟ್ಟಿಗೆ ಸೇರಿಸಿ ದೊಡ್ಡ ಬಲೆಯನ್ನು ಮಾಡುತ್ತಿದ್ದರು. ಈ ಬಲೆಯನ್ನು ಮೀನನ್ನು ಹೇರಳವಾಗಿ ಹಿಡಿಯುವಂತಹ ಸಂದರ್ಭಗಳಲ್ಲಿ ಉಪಯೋಗಿಸು ತ್ತಿದ್ದರು. ರಂಪಣಿಯಲ್ಲಿ ಮೀನು ಹಿಡಿಯುವ ಕಾರ್ಯವನ್ನು ರಕ್ತಸಂಬಂಧಿಗಳ ಹಿರಿ ಯನು ಮತ್ತು ಬಂಧುಸಮೂಹದ ಅನುಭವಿ ಸದಸ್ಯರು ನೋಡಿಕೊಳ್ಳುತ್ತಿದ್ದರು. ಬಂಧು ಸಮೂಹದ ಎಲ್ಲಾ ಪುರುಷ ಸದಸ್ಯರು ಕಲ್ಯಾಣಪುರದಲ್ಲಿನ ಒಂದು ದೊಡ್ಡ ಕೆರೆಯಲ್ಲಿ ಒಟ್ಟಿಗೆ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಮೀನುಗಳನ್ನು ಹಿಡಿಯಲು ಬಲೆಬೀಸುವ ಕೆಲಸವನ್ನು ಮಾಡುತ್ತಿದ್ದರು. ಸ್ತ್ರೀಯರು ಮತ್ತು ಮಕ್ಕಳು ದಡದಲ್ಲಿ ಹಿಡಿದ ಮೀನನ್ನು ಸಂಗ್ರಹಿಸಿ ಪುರುಷರಿಗೆ ಸಹಾಯ ಮಾಡುತ್ತಿದ್ದರು. ರಂಪಣಿಯ ಕಾರ್ಯವು ಎಲ್ಲರನ್ನೂ ಒಂದೆಡೆ ಕೂಡಿಸುವ ಕೆಲಸವಾಗಿದ್ದು ಇದಕ್ಕೆ ಸಂಘಟನೆ ಮತ್ತು ಸಹಕಾರದ ಅವಶ್ಯಕತೆಯಿದ್ದಿತು. ರಂಪಣಿಯಿಂದ ಮೀನು ಹಿಡಿ ಯಲು ಹೋಗುವುದಕ್ಕೆ ತೀರ್ಮಾನ ತೆಗೆದುಕೊಳ್ಳುವುದರಿಂದ ಪ್ರಾರಂಭವಾಗಿ ರಕ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧಿಗಳಲ್ಲಿ ವಿಮಾನನ್ನು ಮಾರಿಬಂದ ಲಾಭಾಂಶವನ್ನು ಹಂಚಿಕೊಳ್ಳುವವರೆಗೂ ಕೆಲಸವನ್ನು ವರ್ಗೀಕರಿಸಿದ್ದರು. ಇಡೀ ತಂಡದ ಕಾರ್ಯಗಳು ರಕ್ತಸಂಬಂಧಿಗಳ ಹಿರಿಯರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದವು. ಈತನು ವಿಮಾನು ಹಿಡಿಯುವ ಕಾರ್ಯದ ದಿನ ಮತ್ತು ಸಮಯವನ್ನು ಗೊತ್ತುಪಡಿಸುತ್ತಿದ್ದನು. ಹಾಗೂ ಬಲೆಗಳನ್ನು ಜೋಡಿಸುವ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದನು. ಹೀಗೆ ಭೋವಿಗಳ ರಕ್ತ ಸಂಬಂಧಿಗಳು ವಿಮಾನು ಹಿಡಿಯುವ ಬಲೆಗಳ ಸಹಮಾಲೀಕರಾಗಿದ್ದರು ಮತ್ತು ಒಂದೇ ಪ್ರದೇಶದಲ್ಲಿ ವಿಮಾನು ಹಿಡಿಯುವ ಕಾರ್ಯದಲ್ಲಿ ಸಹಕರಿಸುತ್ತಿದ್ದರು.

ಇದು ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಕಲ್ಲು ಒಡೆಯುವ ಕೆಲಸವನ್ನು ಕಾಪಾಡಿಕೊಂಡು ಬಂದಿರುವಂತಹ ವಡ್ಡರಲ್ಲಿಯೂ ಸಹ ದಿಟವಾಗಿದೆ. ಕಲ್ಯಾಣಪುರದಲ್ಲಿ ಒಂದು ವಡ್ಡರ ಕುಟುಂಬವು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದಿಲ್ಲ. ಸಾಮಾನ್ಯವಾಗಿ ತಮ್ಮ ಸಂಪನ್ಮೂಲಗಳನ್ನು ಮತ್ತು ಉತ್ಪಾದನೆಯನ್ನು ಸಾರ್ವಜನಿಕ ಹರಾಜಿನ ಸಂದರ್ಭದಲ್ಲಿ ಒಟ್ಟಿಗೆ ಹಾಕುತ್ತಾರೆ. ಹೊಂದಿರುವಂತಹ ಕಲ್ಲುಗಣಿಯನ್ನು ರಕ್ತಸಂಬಂಧಿಗಳ ಹಿರಿಯ ವ್ಯಕ್ತಿಯ ಹೆಸರಿನಲ್ಲಿ ನೋಂದಾಯಿಸಿರುತ್ತಾರೆ. ಈತನು ಸಂಪನ್ಮೂಲಗಳನ್ನು ತೊಡಗಿಸುವ ಕಾಲದಿಂದ ಕಲ್ಲುಗಳನ್ನು ಮಾರಿ ರಕ್ತಸಂಬಂಧಿಗಳಲ್ಲಿ ಲಾಭಾಂಶವನ್ನು ಹಂಚುವವರೆಗಿನ ವಿವಿಧ ಚಟುವಟಿಕೆಗಳನ್ನು ಸಂಘಟಿಸುತ್ತಾನೆ.

ಇದು ಸಂಪ್ರದಾಯಿಕ ಬಿದಿರು ಕೆಲಸಗಾರರಾದ ಮೇದರಲ್ಲಿಯೂ ಸಹ ಕಂಡು ಬರುತ್ತದೆ. ಒಂದೇ ಒಂದು ಮೇದರ ಕುಟುಂಬಕ್ಕೆ ಬಿದಿರುಗಳನ್ನು ಹೆಚ್ಚು ಪ್ರಮಾಣದಲ್ಲಿ ಕೊಂಡುಕೊಳ್ಳುವುದು ತುಂಬಾ ಕಷ್ಟವಾದುದರಿಂದ ಬಂಧು ಸಮೂಹದವರು ಒಟ್ಟಿಗೆ ಹಣವನ್ನು ತೊಡಗಿಸಿ ತಮ್ಮ ಹಿರಿಯನ ಹೆಸರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಂಡುಕೊಳ್ಳುತ್ತಿದ್ದರು. ಈತನು ಬಿದಿರಿನ ಕೆಲಸವನ್ನು ಮಾಡುವಾಗ ವಿವಿಧ ಕಾರ್ಯಗಳನ್ನು ಸಂಘಟಿಸುತ್ತಾನೆ. ಅವರು ಬುಟ್ಟಿಗಳನ್ನು ತಯಾರುಮಾಡಿ ಉತ್ಪಾದನೆಯ ಲಾಭಾಂಶವನ್ನು ತಮ್ಮ ಪಾಲಿಗೆ ಅನುಗುಣವಾಗಿ ಹಂಚಿಕೊಳ್ಳುತ್ತಿದ್ದರು.

ದೆಹಲಿಯ ಬಳಿಯಲ್ಲಿರುವ ರಾಮಪುರವನ್ನು ಅಧ್ಯಯನ ಮಾಡಿದಂತಹ ಆಸ್ಕರ್ ಲೆವಿಸ್‌ರವರು ಗ್ರಾಮೀಣ ಸಮುದಾಯಗಳಲ್ಲಿ ಜೀವನ ಸಂಘಟನೆಯ ಮುಖ್ಯ ಕಾರ್ಯಗಳನ್ನು ಕಂಡುಹಿಡಿದಿದ್ದಾರೆ. ಅವರು ಸಮೂಹ ಚಲನೆಯಲ್ಲಿ ಬಹು ಪ್ರಭಾವಿತವಾಗಿದ್ದದ್ದು ಪಂಗಡ ಹೊರತು ಜಾತಿಯಲ್ಲ ಎಂಬುದನ್ನು ಮನಗಂಡು ಸಾಬೀತುಪಡಿಸಿದ್ದಾರೆ. ಈ ಪಂಗಡ ಅಥವಾ ದಾರ್‌ಸ್‌ಗಳು ಬಂಧುತ್ವ ಸಂಬಂಧಗಳ ಆಧಾರದ ಮೇಲೆ ರಚಿತವಾಗಿದ್ದವು. ನಿಜವಾಗಿಯೂ ಪಂಗಡ ಮತ್ತು ಬಂಧುತ್ವದ ನಡುವಿನ ಸಂಬಂಧವು ತುಂಬಾ ಅನ್ಯೋನ್ಯವಾಗಿದ್ದು ಗ್ರಾಮಸ್ಥರು ತಮ್ಮ ಪಂಗಡವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮ್ಮ ಬಂಧುತ್ವದೊಡನೆ ಸಮಿಶಾಕರಿಸುವ ಬಲವನ್ನು ಹೊಂದಿದ್ದರು. ಬಂಧುತ್ವ ಸಂಬಂಧಗಳನ್ನು ಆಧರಿಸಿದಂತಹ ಈ ಪಂಗಡಗಳು ಗ್ರಾಮೀಣಮಟ್ಟದಲ್ಲಿ ಸಮೂಹ ಚಟುವಟಿಕೆಗಳನ್ನು ಸಂಘಟಿಸಲು ಕೇವಲ ಮುಖ್ಯ ಆಧಾರ ಅಂಶಗಳಾಗಿ ಸೇವೆಸಲ್ಲಿಸ ಲಿಲ್ಲ, ಜೊತೆಗೆ ಹೋರಾಟದ ಸಂದರ್ಭದಲ್ಲಿ ಒಟ್ಟಿಗೆ ಸೇರಿಸುವಂತಹ ಒಂದು ನಿರ್ದಿಷ್ಟ ರೂಪಪಡೆಯುವಂತೆ ಕಾರ್ಯವಾಡಿ ಸೇವೆಸಲ್ಲಿಸುತ್ತಿದ್ದವು.

ಲೆವೀಸ್‌ರವರ ಸಂಶೋಧನಾ ತಂಡದ ಸದಸ್ಯರಲ್ಲೊಬ್ಬರಾಗಿದ್ದ ದಿಲ್ಲಿಯನ್[17] ರವರು ದಕ್ಷಿಣ ಭಾರತದ ಹಳ್ಳಿಯೊಂದರಲ್ಲಿ ಸಮೂಹ ಚಲನೆ ಮತ್ತು ನಾಯಕತ್ವದ ಸ್ಥರಗಳನ್ನು ಅಧ್ಯಯನ ಮಾಡಲು ಅಭಿವೃದ್ಧಿಪಡಿಸಿದ ವಾದರಿಗಳನ್ನು ಅನ್ವ ಯಿಸಿದರು. ಉತ್ತರ ಭಾರತದಂತೆ, ದಕ್ಷಿಣ ಭಾರತದಲ್ಲಿ ಪಂಗಡಗಳು ಅಸ್ತಿತ್ವದಲ್ಲಿ ದ್ದರೂ ಅಂತಹ ಚಲನಾತ್ಮಕ ಪಾತ್ರವನ್ನು ವಹಿಸಲಿಲ್ಲ.

ನಾವು ಬಂಧುತ್ವದ ಮೇಲಿನ ಚರ್ಚೆಯನ್ನು ಭಾರತದ ಗ್ರಾಮ ಸಮುದಾಯ ಗಳ ಜೀವನ ಸಂಘಟನೆಯಲ್ಲಿ ಆದರ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಮ್ಯಾಕ್ಸ್ ವೆಬರ್ ರವರ ದೃಷ್ಟಿಕೋನಗಳನ್ನು ಸಂಕ್ಷಿಪ್ತವಾಗಿ ಪುನರ್ವಿಮರ್ಶಿಸುವುದರ ಮೂಲಕ ಪರಿಸಮಾಪ್ತಿಗೊಳಿಸಬಹುದು. ಮ್ಯಾಕ್ಸ್‌ವೆಬರ್‌ರವರು ಪ್ರಪಂಚದಲ್ಲೆಡೆಗಿಂತಲೂ ಹಿಂದೂ ಸಾಮಾಜಿಕ ವ್ಯವಸ್ಥೆಯು ಕುಲ ಪ್ರಭಾವಶಾಲಿಯನ್ನಾಗಿ ಮಾಡುವ ಗುಣದ ಸೂತ್ರದ ರೂಪದಲ್ಲಿ ಸಂಘಟಿತವಾಗಿವೆ ಎಂದು ಅಭಿಪ್ರಾಯಪಡುತ್ತಾರೆ. ಕುಲ ಪ್ರಭಾವ ಶಾಲಿಯನ್ನಾಗಿ ಮಾಡುವ ಗುಣವೆಂದರೆ ಒಂದು ನಿರ್ದಿಷ್ಟ ಪಂಗಡ ಅಥವಾ ಬಂಧು ಗುಂಪಿಗೆ ಸೇರಿರುವಂತಹ ಸದಸ್ಯರು ಹೊಂದಿರುವ ವಿಶೇಷ ಗುಣ. ಆದ್ದರಿಂದ ಭಾರತದಲ್ಲಿ ಪ್ರಚಲಿತದಲ್ಲಿರುವ ನಂಬಿಕೆಯಾದ ಪ್ರಭಾವಶಾಲಿ ಗುಣದ (Charisma) ನಂಬಿಕೆಯು ಇಡೀ ಒಂದು ಗುಂಪಿಗೆ ಸೇರಿಕೊಂಡಿರುತ್ತದೆ ಮತ್ತು ವೃತ್ತಿಗೆ ಅರ್ಹನಾದ ಉತ್ತರಾಧಿಕಾರಿ ಅಥವಾ ರಕ್ತಸಂಬಂಧದವರು ಇಡೀ ಕಾರ್ಯವನ್ನು ನೋಡಿಕೊಳ್ಳು ತ್ತಾರೆ. ಈ ನಂಬಿಕೆಯು ಮೂಲಭೂತವಾಗಿ ಅನುವಂಶೀಯತೆಯ ಬಗ್ಗೆ ಏನು ಮಾಡ ಲಾರದಂತಹ ಪ್ರಭಾವಶಾಲಿ ಗುಣದ ಉತ್ತರಾಧಿಕಾರತ್ವಕ್ಕೆ ಕಾರಣವಾಯಿತು. ಆದ್ದ ರಿಂದ ವಿರೋಚಿತ ಮಾಂತ್ರಿಕ ಶಕ್ತಿ, ಸಾಮರ್ಥ್ಯಗಳು ಮಾತ್ರವಲ್ಲದೆ ಯಾವುದೇ ರೀತಿಯ ಜವಾಬ್ದಾರಿಯು ಕುಲದ ಪ್ರಭಾವಶಾಲಿ ಗುಣದಿಂದ ನಿರ್ಧರಿತವಾಗುತ್ತದೆ. ಹೀಗೆ ಎಲ್ಲಾ ಪ್ರತಿಭೆಗಳು ವೃತ್ತಿ ; ಪ್ರತಿಭೆಯೂ ಸಹ ಕುಲದ ಪ್ರಭಾವಶಾಲಿ ಗುಣದ ಕ್ಷೇತ್ರ ದಲ್ಲಿ ಬರುತ್ತದೆ. ಆದ್ದರಿಂದ ಭಾರತದಲ್ಲಿ ಕಂಡುಬರುವಂತಹ ಕುಲದ ಪ್ರಭಾವಶಾಲಿ ಗುಣದ ಬೆಳವಣಿಗೆಯು ವಿಶ್ವದ ಬೇರೆಡೆಯಲ್ಲಿಯೂ ಕಂಡುಬರುವುದಿಲ್ಲ.

ಕುಲದ ಪ್ರಭಾವಶಾಲಿ ಗುಣದ ಪ್ರಬಲವಾದ ಅಭಿವ್ಯಕ್ತಿಯು ಜವಾಬ್ದಾರಿಯ ಕ್ಷೇತ್ರದಲ್ಲಿದ್ದಿತು. ಭಾರತದಲ್ಲಿ ಅನುವಂಶೀಯ ಜವಾಬ್ದಾರಿಯ ವರ್ಗಾವಣೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಟುಂಬ ಮತ್ತು ಬಂಧುತ್ವದ ಕಟ್ಟುಪಾಡುಗಳ ಆಧಾರದ ಮೇಲೆ ಸಾಮಾನ್ಯವಾಗಿ ದ್ದಿತು. ಮತ್ತು ಇಂದಿಗೂ ಸಹ ಅನುವಂಶೀಯ ಕತೆ ಗ್ರಾಮೀಣ ನಾಯಕತ್ವದ ಹೆಚ್ಚು ಸಾರ್ವತ್ರಿಕವಾದ ಸಂಸ್ಥೆಯನ್ನು ನಿರೂಪಿಸುತ್ತದೆ. ವ್ಯಾಪಾರಗಾರರು ಮತ್ತು ಬೇಸಾಯ ಗಾರರ ವೃತ್ತಿಸಂಘಗಳು ಅನುವಂಶೀಯ ಹಿರಿಯರನ್ನು ಹೊಂದಿದ್ದವು. ಅಲ್ಲಿ ಸಾಮಾನ್ಯವಾಗಿ ಅಸ್ತಿತ್ವದಲ್ಲಿರದಿದ್ದದ್ದು ಏನು ಇರಲಿಲ್ಲ. ಆದ್ದರಿಂದ ಸಾಮಾನ್ಯ ಪುರೋಹಿತ್ಯವು ರಾಜಯೋಗ್ಯ ಗೌರವದ ಅಧಿಕಾರಸ್ಥಾನದ ನಾಯಕತ್ವವು ಹೆಚ್ಚು ಸಾಮಾನ್ಯವಾಗಿರುತ್ತದೆ. ಅಧಿಕಾರಕ್ಕೆ ಉತ್ತರಾಧಿಕಾರಿಗಳ ಮುಕ್ತ ನೇಮಕವು ಭಾರಿ ಬದಲಾವಣೆ ಮತ್ತು ಅರಾಜಕತೆ, ಗೊಂದಲಗಳ ಸಮಯದಲ್ಲಿ ಮಾತ್ರ ಸಂಭವಿಸಿದವು. ಬಾಡೆನ್ ಪಾವೆಲ್‌ರವರು ಅಭಿಪ್ರಾಯಪಟ್ಟಿರುವಂತೆ ಭಾರತದಲ್ಲಿ ಊಳಿಗಮಾನ್ಯದ ಸ್ಥಾನಮಾನವು ಭೂಮಿಯ ಮಂಜೂರಾತಿಯಿಂದ ಬರಲಿಲ್ಲ ಬದಲಿಗೆ ಕುಲ, ರಕ್ತಸಂಬಂಧದ ಏಕತೆ ಮತ್ತು ಬುಡಕಟ್ಟಿನಿಂದ ಬಂದಿದೆ. ಮ್ಯಾಕ್ಸ್ ವೆಬರ್ ರವರು ಅಭಿಪ್ರಾಯ ಪಟ್ಟಂತೆ ಕುಲದ ಮಾಂತ್ರಿಕ ಪ್ರಭಾವಶಾಲಿ ಗುಣದ ನಂಬಿಕೆಯು ಭಾರತದಲ್ಲಿ ಜಾತಿಪದ್ಧತಿಯು ಸ್ಥಿರವಾಗಿ ಸ್ಥಾಪಿಸುವುದಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಿದೆ.

ಪರಾಮರ್ಶನ ಮತ್ತು ಟಿಪ್ಪಣಿಗಳು

1. ಎಲ್ಮಟ್ ಮತ್ತು ಯಂಗ್
2. ಹೆನ್ರಿ ಮೇಯ್ನ್, **ಆ್ಯನ್ಸಿಯೆಂಟ್ ಲಾ** (ಲಂಡನ್ : 1861) ಪು. 152
3. ಸಿಗ್ಮಂಡ್ ಫ್ರೈಡ್, **ಟೋಟೆಮ್ ಆ್ಯಂಡ್ ಟಾಬೂ** (ಲಂಡನ್ : 1950) ಪು. 10.
4. ಮೇಲಿನದೇ ಪು. 10.
5. ಮೇಲಿನದೇ ಪು. 11.
6. ಫ್ರೇಜರ್, ಉಲ್ಲೇಖಿಸಿರುವವರು : ಮದನ್ ಮತ್ತು ಮಜುಮ್‌ದಾರ್, **ಆ್ಯನ್ ಇಂಟ್ರೊಡಕ್ಷನ್ ಟು ಸೋಶಿಯಲ್ ಅಂತ್ರೊಪಾಲೋಜಿ** (ಏಶಿಯಾ: 1961) ಪು. 102.
7. ಎ.ಆರ್.ರೆಡ್‌ಕ್ಲಿಫ್ : ಬ್ರೌನ್, **ಸ್ಟ್ರಕ್ಚರ್ ಆ್ಯಂಡ್ ಫಂಕ್ಷನ್ ಇನ್ ಎ ಪ್ರಿಮಿಟಿವ್ ಸೊಸಾಯಿಟಿ** (ಲಂಡನ್ : 1960) ಪು. 55.
8. ಸಿಗ್ಮಂಡ್ ಫ್ರೈಡ್ ಮೇಲಿನ ಉಲ್ಲೇಖದಂತೆ ಪು. 102—103.
9. ಮೇಲಿನದೇ ಪುಟ 13.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

10. ಎ. ಆರ್. ರೆಡ್‌ಕ್ಲಿಫ್ ಬ್ರೌನ್, **ಸ್ಟ್ರಕ್ಚರ್ ಆ್ಯಂಡ್ ಫಂಕ್ಷನ್ ಇನ್ ಎ ಪ್ರಿಮಿಟಿವ್ ಸೊಸಾಯಿಟಿ** (ಲಂಡನ್ : 1959) ಪು. 143.

11. ಸಿಗ್ಮಂಡ್ ಫ್ರೈಡ್ ಮೇಲಿನ ಉಲ್ಲೇಖದಂತೆ ಪು. 14.

12. ಟೈಲರ್, ಉಲ್ಲೇಖಿಸಿರುವವರು—ಮಂದನ್ ಮತ್ತು ಮಜುಂದಾರ್, **ಆ್ಯನ್ ಇಂಟ್ರೊಡಕ್ಷನ್ ಟು ಸೋಶಿಯಲ್ ಅಂತ್ರೋಪಾಲೋಜಿ** (ಏಶಿಯಾ: 1961). ಪು. 102.

13. ಸಿಗ್ಮಂಡ್ ಫ್ರೈಡ್ ಮೇಲಿನ ಉಲ್ಲೇಖದಂತೆ ಪು. 102—103.

14. ಲೋವಿ.

15. ಎ. ಆರ್. ರೆಡ್‌ಕ್ಲಿಫ್ ಬ್ರೌನ್ ಮೇಲಿನ ಉಲ್ಲೇಖದಂತೆ ಪು. 104.

16. ಮೇಲಿನದೇ ಪು. 90.

17. ಮೇಲಿನದೇ ಪು. 93.

18. ಈ, ಈ, ಇವಾನ್ಸ್— ಪ್ರಿಚಾರ್ಡ್ **ದಿ ನ್ಯೂಯರ್** (ಆಕ್ಸಫರ್ಡ್ 1940) ಪು. 160.

19. ರಾಯ್,—ಉಲ್ಲೇಖಿಸಿರುವವರು—ಮಂದನ್ ಮತ್ತು ಮಜುಂದಾರರು ಮೇಲಿನ ಉಲ್ಲೇಖದಂತೆ ಪು. 105.

20. ವೆರಿಯರ್ ಎಲ್ವಿನ್.

21. ಎಲ್. ಹೆಚ್ ಮಾರ್ಗನ್—ಉಲ್ಲೇಖಿಸಿರುವವರು—ಲೆಸ್ಲಿ. ಎ. ವ್ಹಾಟ್ **ಆನ್ ಇಂಟ್ರೊಡಕ್ಷನ್ ಟು ದಿ ಹಿಸ್ಟರಿ ಆಫ್ ಸೋಶಿಯೊಲಜಿ** ಹೆಚ್. ಈ. ಬರ್ನ್ಸ್ (ಸಂಪಾದಕರು)

22. ಹೆನ್ರಿ ಮೇಯ್ನ್, **ದಿ ಅರ್ಲಿ ಹಿಸ್ಟರಿ ಆಫ್ ಇನ್ಸಟಿಟ್ಯೂಶನ್** (ಲಂಡನ್ : 1880) ಪು. 65—68.

23. ಈ.ಈ. ಇವಾನ್ಸ್ ಪ್ರಿಚಾರ್ಡ್, **ಕಿನಶಿಪ್ ಆ್ಯಂಡ್ ಮ್ಯಾರೇಜ್ ಅಮಾಂಗ್ ದಿ ನ್ಯೂರ್** (ಆಕ್ಸ್‌ಫರ್ಡ್ : 1951) ಪು. 24.

24. ಈ. ಈ. ಇವಾನ್ಸ ಪ್ರಿಚಾರ್ಡ್, **ದಿ ನ್ಯೂರ್** (ಆಕ್ಸ್‌ಫರ್ಡ್ : 1940), ಪು 182—183.

25. ಆ. ಈ. ಪುನೀತ್ **ಸ್ಟ್ರಕ್ಚರಲ್ ಡಿಟರ್ಮಿನಂಟ್ಸ ಇನ್ ರೂರಲ್ ಲೀಡರ್‌ಶಿಪ್** ಪಿ.ಹೆಚ್.ಡಿ. ಥೀಸಿಸ್ (ಅಪ್ರಕಟಿತ) ಪು. 83—113.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

26. ಆಸ್ಕರ್ ಲೇವಿಸ್, **ವಿಲೇಜ್ ಲೈಫ್ ಇನ್ ನಾರ್ದರ್ನ್ ಇಂಡಿಯಾ** (ಅರ್ಬನಾ : 1958) ಪು. 113—154.

27. ಹೆಚ್. ಎಸ್. ಧಿಲ್ಲಾನ್, **ಲೀಡರ್‌ಶಿಪ್ ಆ್ಯಂಡ್ ಗ್ರುಪ್ ಇನ್ ಸೌತ್ ಇಂಡಿಯನ್ ವಿಲೇಜ್** (ದೆಹಲಿ : 1955) ಪು. 1—7

28. ಸಿಬ್ : ಒಂದು ಸಿಬ್‌ನ ಸದಸ್ಯತ್ವವು ಒಂದೇ ಮೂಲ ಹೊಂದಿರುತ್ತದೆ. (ಸಹೋದರ ಸಂಬಂಧ ತಂದೆ ಅಥವಾ ತಾಯಿಯ ಮೂಲ)

ಕ್ಲಾನ್ : ಇದು ತಾಯಿಯ ಮೂಲದಿಂದ ಉಂಟಾದ ಸಿಬ್.

ಫ್ರಾಟ್ರಿ : ಇದು ಎರಡು ಕ್ಲಾನ್‌ಗಳ ಸಂಯೋಗದಿಂದ ಉಂಟಾಗುತ್ತದೆ.

ಟ್ರೈಬ್ : ವಿಶಿಷ್ಟ ವಾಸಸ್ಥಾನ, ಭಾಷೆ, ಸಾಂಸ್ಕೃತಿಕ ಏಕತೆ ಮತ್ತು ಒಗ್ಗೂಡಿಸುವ ಸಾಮಾಜಿಕ ವ್ಯವಸ್ಥೆ. ಒಂದು ಟ್ರೈಬ್ (ಬುಡಕಟ್ಟು)ಗೆ ಒಬ್ಬನೇ ಮೂಲ ಪುರುಷ, ಮೂಲದೇವತೆ ಮತ್ತು ಒಬ್ಬನೇ ನಾಯಕನಿರುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ—6

ಜಾತಿ ಮತ್ತು ಬದಲಾಗುತ್ತಿರುವ ಸ್ತರವಿನ್ಯಾಸಗಳು

ಭಾರತೀಯ ಸಮಾಜವನ್ನು ನಿರ್ದಿಷ್ಟವಾಗಿ ಅರ್ಥಮಾಡಿಕೊಳ್ಳಲು ಅಲ್ಲಿನ ಜಾತಿ ವ್ಯವಸ್ಥೆ ಮತ್ತು ಅದರ ವಿವಿಧ ಸ್ತರಗಳ ಅಧ್ಯಯನ ಅತ್ಯವಶ್ಯ. ಆಂಗ್ಲ ಭಾಷೆಯಲ್ಲಿ ಜಾತಿಗೆ 'ಕಾಸ್ಟ್' ಎಂಬ ಪದವಿದೆ. ಇದು ಪೋರ್ತುಗೀಜ್ ಪದವಾದ 'ಕಾಸ್ಟಾ' ದಿಂದ ಬಂದಿದೆ. ಸಂಸ್ಕೃತದಲ್ಲಿಯೂ ಇದಕ್ಕೆ ಪರ್ಯಾಯ ಪದವು ಜಾತಿ ಎಂಬುದೇ ಆಗಿದೆ.

ಜಾತಿಯು ಭಾರತೀಯ ಸಮಾಜದ ಮೂಲಭೂತ ಹಾಗೂ ವಿಶಿಷ್ಟ ಸಂಸ್ಥೆಯಾಗಿದೆ. ಭಾರತೀಯ ಜಾತಿವ್ಯವಸ್ಥೆಯನ್ನು ಹೋಲುವ ಕೆಲವು ಪದ್ಧತಿಗಳು ಪ್ರಪಂಚದ ಇತರೆ ಭಾಗಗಳಲ್ಲಿ ಅಂದರೆ ಜಪಾನ, ಇಂಡೋಚೈನಾ, ಇಂಡೋನೇಷ್ಯಾ ಮತ್ತು ಬಲೂಚಿಸ್ಥಾನ ಮುಂತಾದುವುಗಳಲ್ಲಿಯೂ ಅಸ್ಥಿತ್ವದಲ್ಲಿವೆ. ಆದಾಗ್ಯೂ ಕೂಡಾ ಅವು ಸಂಪೂರ್ಣವಾಗಿ ಜಾತಿಯನ್ನು ಹೋಲುವುದಿಲ್ಲ. ಆದುದರಿಂದ ಜಾತಿಯು ಭಾರತೀಯ ಸಮಾಜದ ವಿಶಿಷ್ಟ ಸಂಸ್ಥೆಯೆಂದು ಹೇಳಿದರೆ ತಪ್ಪಾಗಲಾರದು.

ಜಾತಿ ಉಗಮದ ಸಿದ್ಧಾಂತಗಳು

ಜಾತಿಯು ಭಾರತೀಯ ಸಾಮಾಜಿಕ ಸಂಘಟನೆಯ ಎಲ್ಲಾ ಸ್ತರಗಳಲ್ಲಿಯೂ ಆಕ್ರಮಿಸಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯಿಂದ ಪ್ರಭಾವಿತವಾಗಿರದ ಅಂಶಗಳು ವಿರಳ. ಆದುದರಿಂದ ಕಿಂಗ್ಸ್‌ಲೇ ಡೇವಿಸ್ ಅವರು ಹೇಳುವಂತೆ ಜನರೂಢಿಯು ಇತರ ಎಲ್ಲ ಸಮಾಜಗಳಲ್ಲಿ ಹೇಗೆ ಮಹತ್ವದ ಸ್ಥಾನವನ್ನು ಹೊಂದಿದೆಯೊ ಹಾಗೆಯೇ ಭಾರತೀಯ ಸಾಮಾಜಿಕ ವ್ಯವಸ್ಥೆಯ ಆದಿ ಮತ್ತು ಅಂತ್ಯ ಎಲ್ಲವೂ ಕೂಡ ಜಾತಿಯೇ ಆಗಿದೆಯೆಂದರೆ ಉತ್ಪ್ರೇಕ್ಷೆಯೆನಿಸಲಾರದು. ಇದು ಹಿಂದೂ ಹಕ್ಕನ್ನು ನಿರ್ಧರಿಸುತ್ತದೆ. ಒಬ್ಬ ಹಿಂದೂವಿನ ಜನನದಿಂದ ಮರಣದವರೆಗೂ, ಮತ್ತು ಅದರಾಚೆಯೂ ಕೂಡ ಜಾತಿಯ ಮಾರ್ಗದರ್ಶನವಿರುತ್ತದೆ. ಹೀಗಾಗಿ ಜಾತಿಯು ಎಲ್ಲವನ್ನು ನಿರ್ಧರಿಸುತ್ತದೆ. ಉದಾಹರಣೆಗೆ : ಒಬ್ಬ ವ್ಯಕ್ತಿ ಯಾರನ್ನು ಮದುವೆಯಾಗಬೇಕು, ಹೇಗೆ ಮದುವೆಯಾಗಬೇಕು, ಎಲ್ಲಿ ವಾಸಿಸಬೇಕು, ಹೇಗೆ ಬದುಕಬೇಕು, ಏನನ್ನು ತಿನ್ನಬೇಕು, ಹೇಗೆ ತಿನ್ನಬೇಕು, ಎಲ್ಲಿ ಕೆಲಸ ಮಾಡಬೇಕು, ಹೇಗೆ ಕೆಲಸ ಮಾಡಬೇಕು,

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಎಲ್ಲಿ ಹಾಗೂ ಹೇಗೆ ಅವನು ಸಾಯಬಹುದು, ಅವನನ್ನು ಎಲ್ಲಿ ಶವಸಂಸ್ಕಾರ ಮಾಡಬೇಕು, ಹೇಗೆ ಮಾಡಬೇಕು ಹಾಗೂ ಸಾವಿನ ನಂತರ ಅವನಿಗೆ ಏನಾಗುತ್ತದೆ ಎಂಬುದೆಲ್ಲವೂ ಕೂಡ ಜಾತಿಯಿಂದಲೇ ನಿರ್ಣಯಿಸಲ್ಪಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ : ಜಾತಿಯು ಭಾರತೀಯ ಜೀವನದ ಎಲ್ಲ ಅಂಶಗಳನ್ನು ನಿರ್ಧರಿಸುತ್ತದೆ.

ಜಾತಿ ಪದ್ಧತಿಯು ಸುದೀರ್ಘವಾದ ಇತಿಹಾಸವನ್ನು ಹೊಂದಿದೆ. ಇತಿಹಾಸಕಾರರಲ್ಲಿ ಮತ್ತು ಸಮಾಜ ವಿಜ್ಞಾನಿಗಳಲ್ಲಿ ಜಾತಿಯ ಉಗಮ ಮತ್ತು ಬೆಳವಣಿಗೆಯ ಬಗ್ಗೆ ಒಮ್ಮತದ ಅಭಿಪ್ರಾಯವಿಲ್ಲ. ಜಾತಿಯು ಪ್ರಾಥಮಿಕ ಹಂತದಿಂದ ಸಂಕೀರ್ಣ ಹಂತದವರೆಗೆ ವಿಕಾಸಹೊಂದಿದ ಮಾದರಿಯದಾಗಿದ್ದು ಪ್ರಾರಂಭದಿಂದಲೂ ಭಾರತೀಯ ಸಮಾಜದೊಂದಿಗೆ ಹೆಣೆದುಕೊಂಡಿದೆ. ಜಾತಿ ಮತ್ತು ಭಾರತೀಯ ಸಮಾಜದ ನಡುವಿನ ಸಂಬಂಧವು ಸುದೀರ್ಘವೂ ಮತ್ತು ಅನ್ಯೋನ್ಯವೂ ಆಗಿದೆ, ಶ್ರೀನಿವಾಸರಂತಹ ಪಂಡಿತರು ಜಾತಿಯನ್ನು ಹೊರತುಪಡಿಸಿ ಭಾರತೀಯ ಸಮಾಜದ ವಿಶ್ಲೇಷಣೆ ಸಾಧ್ಯವೆ ? ಎಂಬುದಾಗಿ ಸಂಶಯ ವ್ಯಕ್ತಪಡಿಸಿದ್ದಾರೆ.

ಜಾತಿ ಪದ್ಧತಿಯ ವಿಹಂಗಮ ನೋಟವು ಅದರ ವಿಚಿತ್ರ ಲಕ್ಷಣವೊಂದನ್ನು ನಮ್ಮ ಗಮನಕ್ಕೆ ತರುತ್ತದೆ. ಅದೆಂದರೆ ತನ್ನ ಮೂಲ ಸ್ವಭಾವಕ್ಕೆ ಬಲವಾಗಿ ಅಂಟಿಕೊಳ್ಳುವ ಗುಣ ಅಥವಾ ಸ್ಥಿತಿ ಸ್ಥಾಪಕತ್ವ. ಜಾತಿಪದ್ಧತಿಯು ಯುಗ—ಯುಗಗಳ ಪ್ರಭಾವವನ್ನು ಎದುರಿಸಿಯೂ ಬಲವಾಗಿ ನಿಂತಿದೆ ಮತ್ತು ಹಲವಾರು ಆಕ್ರಮಣಗಳನ್ನು ಎದುರಿಸಿಯೂ ಪಾರಾಗಿ ಉಳಿದಿದೆ. ಜಾತಿಪದ್ಧತಿಯನ್ನು ನಿರ್ಮೂಲನ ಮಾಡಲು ಭಾರತದ ಇತಿಹಾಸದಲ್ಲಿ ಪ್ರಾರಂಭದಿಂದಲೂ ಕ್ರಿಯಾತ್ಮಕ ಪ್ರಯತ್ನಗಳು ವಿಫಲವಾದವು.

ಜಾತಿ ಪದ್ಧತಿಯ ನಿರ್ಮೂಲನೆಗಾಗಿ ಹಿಂದೆ ನಡೆದ ಕೆಲವು ಪ್ರಯತ್ನಗಳನ್ನು ಇಲ್ಲಿ ಉದಾಹರಿಸಬಹುದು. ಜಾತಿ ಪದ್ಧತಿಯ ವಿರುದ್ಧ ಯುದ್ಧ ಸಾರಿದವರಲ್ಲಿ ಪ್ರಾಚೀನ ಧಾರ್ಮಿಕ ನಾಯಕರಲ್ಲಿ ಗೌತಮ ಬುದ್ಧನು ಮೊದಲಿಗ. ಈತನ ಧರ್ಮ—ತತ್ವ ಬೋಧನೆಯು ಈತನ ಜೀವಿತ ಕಾಲದಲ್ಲಿ ಹಾಗೂ ನಂತರವೂ ಜನರ ಮೇಲೆ ಬಹುವಾಗಿ ಪ್ರಭಾವ ಬೀರಿತು. ಬುದ್ಧನ ಕಾಲದಲ್ಲಿ ಇನ್ನೇನು ಜಾತಿ ಪದ್ಧತಿಯು ಸಂಪೂರ್ಣವಾಗಿ ಕಣ್ಮರೆಯಾಗುತ್ತದೆಯೇನೋ ಎಂಬುವಷ್ಟು ಭ್ರಮೆಯೂ ಉಂಟಾಗಿತ್ತು. ಆದರೆ ನಂತರದ ಘಟನೆಗಳು ಈ ಅಭಿಪ್ರಾಯವನ್ನು ಖಚಿತಪಡಿಸುವಲ್ಲಿ ಪುನಃ ನಿಷ್ಫಲವಾದವು. ಪ್ರಾರಂಭದ ಸಮಾಜ ಸುಧಾರಕರ ಉತ್ಸಾಹ ಕಳೆಗುಂದಿ, ಜಾತಿ ಪದ್ಧತಿಯು ನಿಧಾನವಾಗಿ ತಾನಾಗಿಯೇ ಪುನಹ ಪ್ರತಿಸ್ಥಾಪಿಸಲ್ಪಟ್ಟಿತು. ಜಾತಿ ಪದ್ಧತಿಯು ತನ್ನ ಕವಲನ್ನು ಹೊಸಧರ್ಮದಲ್ಲಿ ತೂರಿಸಿತಲ್ಲದೆ, ಅದರ ಹಿಂಬಾಲಕರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಗೂ ಹೊಸ ಧರ್ಮದ ಚೌಕಟ್ಟಿನೊಳಗೆ ವಿವಿಧ ಜಾತಿ—ಗುಂಪುಗಳಾಗಿ ವಿಂಗಡಿಸಲ್ಪಟ್ಟಿತು.

ಬುದ್ಧನ ನಂತರ ಭಾರತದ ಇತರ ಭಾಗಗಳಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಜಾತಿಪದ್ಧತಿಯನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿದರು. ಉದಾಹರಣೆಗೆ : ಮಹಾರಾಷ್ಟ್ರದಲ್ಲಿ ಸಂತ ಜ್ಞಾನೇಶ್ವರ ಹಾಗೂ ನಾಮದೇವ, ಗುಜರಾತಿನಲ್ಲಿ ನರ್ಸಿ ಮೆಹ್ತಾ, ಬಂಗಾಳದಲ್ಲಿ ಚೈತನ್ಯ ಮಹಾಪ್ರಭು, ಉತ್ತರ ಪ್ರದೇಶದಲ್ಲಿ ಮಹಾತ್ಮ ಕಬೀರ ಆಂಧ್ರದಲ್ಲಿ ವಲ್ಲಭಚಾರ್ಯ, ಕರ್ನಾಟಕದಲ್ಲಿ ಬಸವೇಶ್ವರ ಮತ್ತು ಅಕ್ಕ ಮಹಾದೇವಿ. ಇವರೆಲ್ಲ ಜಾತಿರಹಿತ ಸಮಾಜವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಆದರೆ ಇವರ ಅಂತಹ ಸಮಾಜ ನಿರ್ಮಾಣದ ಪ್ರಯತ್ನಗಳೆಲ್ಲವೂ ಕೂಡ ವ್ಯರ್ಥವಾದವು. ಪಣಿಕ್ಕರ ರವರು ಈ ಸುಧಾರಣಾ ಚಳುವಳಿಗಳನ್ನು ಟೀಕಿಸುವಲ್ಲಿ ಹೆಚ್ಚು ಲಕ್ಷ್ಯ ಕೊಟ್ಟಿದ್ದಾರೆ. ಈ ಸುಧಾರಣಾ ಚಳುವಳಿಗಳು ಜಾತಿ ನಿರ್ಮೂಲನದ ಗುರಿಯನ್ನು ಹೊಂದಿದ್ದು ಅದನ್ನು ಸಾಧಿಸುವಲ್ಲಿ ವಿಫಲವಾದುದಲ್ಲದೆ ಕೊನೆಗೆ ಭಾರತದ ಜಾತಿಗಳ ಪಟ್ಟಿಗೆ ಇನ್ನೂ ಹೆಚ್ಚಿನ ಜಾತಿಗಳನ್ನು ಸೇರಿಸುತ್ತ ಕೊನೆಗೊಂಡವು.

100826

20ನೇ ಶತಮಾನದ ಪ್ರಾರಂಭದಲ್ಲಿಯೂ ಜಾತಿ-ನಿರ್ಮೂಲನ ಚಳುವಳಿಗಳು ಹಾಗೂ ಪ್ರಯತ್ನಗಳು ನಡೆದವು. ರಾಜಾರಾಮ ಮೋಹನ್ ರಾಯ್ ಅವರ ಅನೇಕ ಹಿಂಬಾಲಕರು ಜಾತಿ-ವಿನಾಶದ ಪ್ರಯತ್ನ ಮಾಡಿದರು, ಆದರೆ ಅವರ ಪ್ರಯತ್ನಗಳು ಜಾತಿಯ ಬೇರುಗಳನ್ನು ಸಡಿಲಗೊಳಿಸುವಲ್ಲಿ ಫಲಕಾರಿಯಾಗಲಿಲ್ಲ. ಏಕೆಂದರೆ ಅವರ ಜಾತಿ ನಿರ್ಮೂಲನದ ಕರೆಯು ಕೇವಲ ನಗರವಾಸಿ ಹಾಗೂ ಅರೆ ಗ್ರಾಮೀಣ ವಾಸಿಗಳಿಗೆ ಮಾತ್ರ ಸೀಮಿತವಾಗಿತ್ತು. ರಾಜಾರಾಮ ಮೋಹನ್ ರಾಯ್‌ರವರು ಸ್ಥಾಪಿಸಿದ ಬ್ರಹ್ಮೋಸಮಾಜದ ಸದಸ್ಯರ ಗುಂಪು ಇಂದು ಹೊಸದೊಂದು ಜಾತಿಯಾಗಿ ಬಿಟ್ಟಿದೆ. ಪಣಿಕ್ಕರ್‌ರವರಂತ ಇತಿಹಾಸಕಾರರು ಕೇವಲ ಪ್ರಜಾಪ್ರಭುತ್ವವೊಂದೇ ಜಾತಿ ವಿರೋಧಿ ಸಿದ್ಧಾಂತವಾಗಿದ್ದು, ಜಾತಿವಿನಾಶದ ಖಚಿತತೆ ಅದರಿಂದ ಮಾತ್ರ ಸಾಧ್ಯವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅವರು ಪ್ರಜಾಪ್ರಭುತ್ವ ಒಂದು ಅಪೂರ್ವ ಮಹಾನ್ ಸಂಘಟನೆಯಾಗಿ ಬೆಳೆದು ಜಾತಿಯ ವಿನಾಶವನ್ನುಂಟು ಮಾಡಬಹುದು ಎಂದ ನಂಬಿಕೆಯನ್ನು ಹೊಂದಿದ್ದರು. ಆದರೆ ಅವರ ಅಂದಿನ ಭವಿಷ್ಯನುಡಿಯು ಸುಳ್ಳಾಗಿದೆ. ಪ್ರಜಾಪ್ರಭುತ್ವಕ್ಕೆ ಇಂದು ಜಾತಿಯು ಅಡ್ಡಗಾಲು ಹಾಕಿ ಅದಕ್ಕೆ ದಿಕ್ಕು ತಪ್ಪಿಸುವಲ್ಲಿ ಯಶಸ್ವಿಯಾಗಿರುವುದನ್ನು ಭಾರತದಲ್ಲಿ ಕಾಣಬಹುದು. ಸ್ವಾಮಿ ವಿವೇಕಾನಂದರು ಸೂರ್ಯನ ಕಿರಣಗಳು ಬಿದ್ದ ಕೂಡಲೆ ಮಂಜು ಮಾಯವಾಗುವ ಹಾಗೆ ಆರ್ಥಿಕ ಸ್ಪರ್ಧೆಯು ಹೆಚ್ಚಳದಿಂದ ಜಾತಿಯು ಕಣ್ಮರೆಯಾಗುತ್ತದೆ ಎಂದು ಭವಿಷ್ಯ ನುಡಿದಿದ್ದರು. ಆದರೆ ದುರದೃಷ್ಟವಶಾತ್ ವಾಸ್ತವದಲ್ಲಿ ಹಾಗಾಗಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾತಿಯು ತುಂಬ ಸಂಕೀರ್ಣ, ವಿವಿಧ ವರ್ಣಮಯ ಮುಖಗಳನ್ನು ಹೊಂದಿರುವ ವಿಲಕ್ಷಣ ಸಂಸ್ಥೆ. ಆದುದರಿಂದ ಜಾತಿಪದ್ಧತಿಯನ್ನು ಗ್ರಹಿಸುವುದು ಕಷ್ಟದಾಯಕ ಹಾಗೂ ಈ ಬಗ್ಗೆ ಸಿದ್ಧಾಂತ ರೂಪಿಸುವುದು ಸಹ ಕಷ್ಟ ಸಾಧ್ಯವಾದುದಾಗಿದೆ.

ಅನೇಕ ಪಂಡಿತರು ಜಾತಿಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಆದರೆ ಅವರ ವ್ಯಾಖ್ಯಾನಗಳು ಜಾತಿಯ ಎಲ್ಲ ಅಂಶಗಳನ್ನು ಒಳಗೊಂಡಿಲ್ಲ. ಆದರೂ ಶ್ರೀನಿವಾಸ್‌ರವರು ತಮ್ಮ ವ್ಯಾಖ್ಯಾನದಲ್ಲಿ ಜಾತಿಯ ಅನೇಕ ಅಂಶಗಳನ್ನು ನೀಡಿದ್ದಾರೆ. ಅವರ ಪ್ರಕಾರ : "ಒಂದು ಆನುವಂಶಿಕ, ಒಳಬಾಂಧವ್ಯ ವಿವಾಹ ಪದ್ಧತಿಯನ್ನು ಹೊಂದಿದ, ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ ಸಮೂಹ, ಮತ್ತು ಪರಂಪರಾಗತಕಸುಬನ್ನು ಅವಲಂಬಿಸಿಕೊಂಡು ಬಂದಿರುವಂತಹ ಹಾಗೂ ಸ್ಥಳೀಯ ಜಾತಿಗಳ ಏಣಿಶ್ರೇಣಿಯಲ್ಲಿ ಒಂದು ನಿರ್ದಿಷ್ಟ ಸ್ಥಾನವನ್ನು ಹೊಂದಿರುವಂತಹ ಸಮೂಹ" ಈ ವ್ಯಾಖ್ಯಾಗನುಸಾರವಾಗಿ ಜಾತಿಪದ್ಧತಿಯ ಕೆಲವು ಮುಖ್ಯ ಗುಣಲಕ್ಷಣಗಳು ಈ ಕೆಳಕಂಡಂತಿವೆ :

ಜಾತಿಯು ಆನುವಂಶಿಕವಾದುದು : ಒಂದು ಜಾತಿಯಲ್ಲಿ ಜನಿಸಿದವನು ಮತ್ತೊಂದು ಜಾತಿಗೆ ಸೇರುವ ಹಾಗಿಲ್ಲ. ಹುಟ್ಟಿನಿಂದಲೇ ಒಬ್ಬನು ಬ್ರಾಹ್ಮಣ, ಒಬ್ಬನು ವೈಶ್ಯ ಅಥವಾ ಒಬ್ಬ ಅಸ್ಪೃಶ್ಯ ಆಗಬಲ್ಲನು. ಜಾತಿ ಬದಲಾವಣೆ ಸಾಧ್ಯವೇ ಇಲ್ಲ. ಹಿಂದೂ ಧರ್ಮವು ವಿಶ್ವದ ಇತರೆ ಧರ್ಮಗಳಾದ ಇಸ್ಲಾಂ, ಕ್ರೈಸ್ತ ಮತ್ತು ಬೌದ್ಧ ಧರ್ಮಗಳ ಹಾಗೆ ಮತಾಂತರದಲ್ಲಿ ನಂಬಿಗೆಯನ್ನು ಹೊಂದಿಲ್ಲ. ಈ ಮೊದಲು ಹಿಂದೂ ಧರ್ಮದಿಂದ ಕ್ರೈಸ್ತ ಅಥವಾ ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿದವರನ್ನು ಹಿಂತಿರುಗಿ ಹಿಂದೂ ಧರ್ಮಕ್ಕೆ ಪುನರ್ ಮತಾಂತರಮಾಡಿಕೊಳ್ಳುವ ಚಳುವಳಿಗಳಾದ ಶುದ್ಧಿ–ಸಂಸ್ಕಾರಗಳು ಕೇವಲ ಇತ್ತೀಚಿನ ವಿದ್ಯಮಾನಗಳು.

ಒಳಬಾಂಧವ್ಯ ವಿವಾಹವು ಜಾತಿ–ವ್ಯವಸ್ಥೆಯ ಮತ್ತೊಂದು ಮುಖ್ಯ ಲಕ್ಷಣವಾಗಿದೆ. ಅಂತರ್‌ಜಾತಿಯ ವಿವಾಹಗಳನ್ನು ಬಹು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ. ಅಂತರ್‌ಜಾತಿಯ ವಿವಾಹವನ್ನು ಮಾಡಿಕೊಂಡವರು ಜಾತಿ ಬಹಿಷ್ಕಾರಗಳಂತಹ ಇತರ ಕಠಿಣ ಶಿಕ್ಷೆಗೆ ಒಳಗಾಗುತ್ತಾರೆ, ಜಾತಿಯ ಕಟ್ಟುನಿಟ್ಟಾದ ನಿಯಮಗಳ ಪ್ರಕಾರ ಅಂತರ್–ಜಾತಿಯ ಭೋಜನ ಮತ್ತು ಅಂತರ್‌ಜಾತಿಯ ವಿವಾಹ ಸಂಬಂಧಗಳು ನಿಷೇಧಿಸಲ್ಪಟ್ಟಿವೆ. ಅಂತರ್‌ಜಾತಿಯ ವಿವಾಹವಂತೂ ಅಕ್ಷಮ್ಯ ಅಪರಾಧವೇ ಸರಿ. ಅದು ಜಾತಿ–ಸಂಕರ ಅಥವಾ ಮಿಶ್ರಣಕ್ಕೆ ಎಡೆಮಾಡುವುದರಿಂದ ಅದನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಯಿತು ಆದರೂ ಸಹ ಕೆಲವು ವಿಶೇಷ ಸಂದರ್ಭಗಳಲ್ಲಿ ಒಬ್ಬ ಮೇಲ್ಜಾತಿಯ ಪುರುಷ ಒಬ್ಬ ಕೆಳಜಾತಿಯ ಸ್ತ್ರೀಯನ್ನು ಮದುವೆಯಾಗುವ ವಿನಾಯತಿ ಉಂಟು.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಇಂತಹ ವಿವಾಹ ಪದ್ಧತಿಯನ್ನು 'ಅನುಲೋಮ' ವಿವಾಹ ಪದ್ಧತಿಯೆಂದು ಕರೆಯಲಾಗಿದೆ. ಇವು ಕೂಡ ಸಂಪೂರ್ಣವಾಗಿ ಒಪ್ಪಿಕೊಂಡಿರುವಂತಹವುಗಳಲ್ಲ. ಆದರೆ ಒಬ್ಬ ಉತ್ತಮ ಜಾತಿಯ ಸ್ತ್ರೀ ಕೆಳಜಾತಿಯ ಪುರುಷನನ್ನು ವಿವಾಹವಾಗುವಂತಹ ಪ್ರತಿಲೋಮ ವಿವಾಹಪದ್ಧತಿಯು ಅಕ್ಷಮ್ಯ ಅಪರಾಧವೆಂದೆನಿಸುತ್ತಿತ್ತು.

ಜಾತಿಯೊಂದು ಕೇವಲ ಸಾಮಾಜಿಕ ಸಮೂಹವಾಗಿರದೆ ಪ್ರತಿಯೊಂದು ಜಾತಿಯು ತನ್ನದೇ ಆದ ಒಂದು ಭೂಪ್ರದೇಶವನ್ನು ಹೊಂದಿರುತ್ತದೆ. ಅಂದರೆ ಒಂದು ಜಾತಿಯ ಸದಸ್ಯರೆಲ್ಲರೂ ಸಾಮಾನ್ಯವಾಗಿ ಒಂದೇ ಪ್ರದೇಶದಲ್ಲಿ ವಾಸಿಸುತ್ತಾರೆ. ಭೌಗೋಳಿಕವಾಗಿ ಒಂದು ಜಾತಿಯ ಜನರೆಲ್ಲರೂ ಒಂದೇ ಪ್ರದೇಶದಲ್ಲಿ ನೆಲೆಸಿರುವುದನ್ನು ಪ್ರತಿಯೊಂದು ಚಿಕ್ಕ ಮತ್ತು ದೊಡ್ಡ ಹಳ್ಳಿಗಳಲ್ಲಿಯೂ ಕಾಣಬಹುದು. ವಿಶಿಷ್ಟ ಜಾತಿಯು ಪ್ರತ್ಯೇಕ ಪ್ರದೇಶದಲ್ಲಿ ನೆಲೆಗೊಂಡಿರುವ ವಿಧ್ಯಮಾನವು ಇಡೀ ಭಾರತದಾದ್ಯಂತ ಕಾಣಬಹುದು. ವಿವಿಧ ಜಾತಿಗಳು ಭಾರತ ಉಪಖಂಡದ ವಿವಿಧ ಪ್ರದೇಶಗಳಲ್ಲಿ ಕೇಂದ್ರಿಕೃತವಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ : ನಂಬೂದರಿ ಮತ್ತು ನಾಯರುಗಳು ಕೇರಳದಲ್ಲಿ ಕೇಂದ್ರೀಕೃತವಾಗಿರುವುದನ್ನೂ, ನಾಡರ್ ಮತ್ತು ಕಲ್ಲಾ ತಮಿಳುನಾಡಿನಲ್ಲಿಯೂ, ಕಮ್ಮಾ ಮತ್ತು ರೆಡ್ಡಿಗಳು ಆಂಧ್ರಪ್ರದೇಶದಲ್ಲಿಯೂ, ಲಿಂಗಾಯತ ಮತ್ತು ಒಕ್ಕಲಿಗರು ಕರ್ನಾಟಕದಲ್ಲಿಯೂ. ಮರಾಠಾ, ಮಹಾರ ಮತ್ತು ರಜಪೂತರು ಮಹಾರಾಷ್ಟ್ರದಲ್ಲಿಯೂ, ಬನಿಯಾ ಮತ್ತು ಕಾಟಿ ಗುಜರಾತನಲ್ಲಿ ಇತ್ಯಾದಿ, ಆದರೆ ಬ್ರಾಹ್ಮಣ ಮತ್ತು ಶೂದ್ರ ಜಾತಿಗಳು ಅಖಿಲ ಭಾರತೀಯ ಜಾತಿಗಳಾಗಿದ್ದು ಭಾರತದ ಎಲ್ಲ ಭಾಗಗಳಲ್ಲಿಯೂ ಈ ಜಾತಿಯ ಸಮುದಾಯಗಳು ಹರಡಿಕೊಂಡಿವೆ.

ಇಂದಿಗೂ ಸಹ ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವಿವಿಧ ಜಾತಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರದೇಶಗಳಿರುವುದನ್ನು ಕಾಣಬಹುದಾಗಿದೆ. ಈ ಅಂಶವು ಬೊಂಬಾಯಿ, ಬೆಂಗಳೂರು ಮುಂತಾದ ಮಹಾನಗರಗಳಲ್ಲಿಯೂ ಕಂಡುಬರುತ್ತದೆ ಎಂದು ಹೆರಾಲ್ಡ ಐಸಾಕ ರವರು ಅಭಿಪ್ರಾಯ ಪಟ್ಟಿದ್ದಾರೆ. ಚಂದ್ರಶೇಖರಯ್ಯನವರು ಕೈಗೊಂಡ ಅಧ್ಯಯನದಲ್ಲಿ ನಗರ ಪ್ರದೇಶಗಳಲ್ಲಿ ಸುಮಾರು 85 ರಷ್ಟು ಅಸ್ಪೃಶ್ಯರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 100ರಷ್ಟು ಅಸ್ಪೃಶ್ಯರು ತಮ್ಮದೇ ಆದಂತಹ ಪ್ರತ್ಯೇಕ ಪ್ರದೇಶದಲ್ಲಿ ನೆಲೆಸಿರುವುದನ್ನು ಕಾಣಬಹುದು ಎಂದು ತಿಳಿಸಿದ್ದಾರೆ.

ಸಾಮಾನ್ಯವಾಗಿ ಪ್ರತಿಯೊಂದು ಜಾತಿಯು ತನ್ನದೇ ಆದ ವಿಶಿಷ್ಟ ಪರಂಪರಾಗತ ಕಸಬನ್ನು ಹೊಂದಿರುತ್ತದೆ. ಒಬ್ಬ ಮರಕೆಲಸ ಮಾಡುವವನ ಮಗ ಮರಕೆಲಸ ಮಾಡುವವನೇ ಆಗಿರುತ್ತಾನೆ. ಹಾಗೂ ಒಬ್ಬ ಕಮ್ಮಾರನ ಮಗ ಕಮ್ಮಾರನೆ. ಜಾತಿ ಪದ್ಧತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಲ್ಲಿ ವೃತ್ತಿಯ ಪರಂಪರಾಗತೆಯನ್ನು ಆಧುನಿಕ ಭಾರತದಲ್ಲಿಯೂ ಸಹ ಕಾಣಬಹುದು. ಭಾರತೀಯ ಸಮಾಜದ ಜಾತಿ ಆಧಾರಿತ ವೃತ್ತಿ ರಚನೆಯ ಮೇಲೆ ಔದ್ಯೋಗೀಕರಣ ಹಾಗೂ ತನ್ಮೂಲಕ ಉಂಟಾದ ಬದಲಾವಣೆಗಳು ಅಷ್ಟೊಂದು ಪರಿಣಾಮ ಬೀರಲಿಲ್ಲ. ಚಂದ್ರಶೇಖರಯ್ಯನವರು ಕೈಗೊಂಡ ಅಧ್ಯಯನದಲ್ಲಿ ಇಂದಿಗೂ ಸಹ ನಗರ ಪ್ರದೇಶದಲ್ಲಿ ಸುಮಾರು 70 ರಷ್ಟು ಪರಿಶಿಷ್ಟ ಜಾತಿಯ ಜನರು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸುಮಾರು 85 ರಷ್ಟು ಪರಿಶಿಷ್ಟ ಜಾತಿಯ ಜನರು ಅವರ ಪರಂಪರಾಗತ ವೃತ್ತಿಯನ್ನೇ ಅನುಸರಿಸಿಕೊಂಡು ಬಂದಿರುವುದು ಕಂಡುಬಂದಿದೆ.

ಜಾತಿಗಳು ಯಾವಾಗಲೂ ಏಣಿಯ ಶ್ರೇಣಿಯೋಪಾದಿಯಲ್ಲಿ ಜೋಡಿಸಿದ ಹಾಗಿರುತ್ತವೆ. ಮಜುಂದಾರ್‌ರವರು ಜಾತಿ ಆಧಾರಿತ ಸಾಮಾಜಿಕ ರಚನೆಯನ್ನು ಪಿರಾಮಿಡ್‌ಗೆ ಹೋಲಿಸಿದ್ದಾರೆ. ಈ ಜಾತಿ ಆಧಾರಿತ ಪಿರಾಮಿಡ್‌ನ ತುತ್ತ-ತುದಿಯನ್ನು ಬ್ರಾಹ್ಮಣರು ಮತ್ತು ಇತರ ದ್ವಿಜರು ಆಕ್ರಮಿಸಿಕೊಂಡಿದ್ದಾರೆ ಹಾಗೂ ಈ ಎರಡು ಕೊನೆಗಳ ಮಧ್ಯದಲ್ಲಿ ಭಾರತೀಯ ವಿವಿಧ ಪ್ರದೇಶದ ವಿವಿಧ ಜಾತಿ ಸಮುದಾಯಗಳು ಆಕ್ರಮಿಸಿಕೊಂಡಿವೆ.

ಪ್ರಾಚ್ಯಶಾಸ್ತ್ರಜ್ಞರು, ಇತಿಹಾಸಕಾರರು ಹಾಗೂ ಸಮಾಜಶಾಸ್ತ್ರಜ್ಞರಿಂದ ಜಾತಿಯ ಉಗಮದ ಬಗ್ಗೆ ಅನೇಕ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆ. ಹಟನ್‌ರವರು ತಮ್ಮ ಸುಪ್ರಸಿದ್ಧ 'ಕಾಸ್ಟ ಇನ್ ಇಂಡಿಯಾ' ಎಂಬಗ್ರಂಥದಲ್ಲಿ ಕಾಲಕಾಲಕ್ಕೆ ಪ್ರತಿಪಾದಿಸಲ್ಪಟ್ಟ ಹಲವಾರು ಸಿದ್ಧಾಂತಗಳನ್ನು ವಿಮರ್ಶಿಸಿದ್ದಾರೆ. ಇವರು ಇದುವರೆಗೂ ಸಹ ಜಾತಿ ಉಗಮದ ಬಗ್ಗೆ ತೃಪ್ತಿಕರವಾದ ಸಿದ್ಧಾಂತವನ್ನು ಪ್ರತಿಪಾದಿಸುವಲ್ಲಿ ಯಾರು ಸಹ ಯಶಸ್ವಿಯಾಗಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಜಾತಿಯ ಚಲನಾತ್ಮಕವಾದ ಸ್ವಭಾವದಿಂದಾಗಿ ಅದರ ಉಗಮದ ಬಗೆಗಿನ ಯಾವುದೇ ಸಿದ್ಧಾಂತವನ್ನು ಪ್ರತಿಪಾದಿಸುವವರ ಗ್ರಹಿಕೆಗೆ ನಿಲುಕದೆ ಅವರ ಪ್ರಯತ್ನವನ್ನು ವಿಫಲಗೊಳಿಸಿದೆ. ಈ ಹಿನ್ನೆಲೆಯೊಂದಿಗೆ ಜಾತಿಯ ಕೆಲವು ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ಚರ್ಚಿಬಸಹುದು.

ಹಿಂದೂ ಪುರಾಣ ಕಥೆಗಳಲ್ಲಿ ಜಾತಿ ಉಗಮವು ಹೀಗೆ ವಿವರಿಸಲ್ಪಟ್ಟಿದೆ ; ಸೃಷ್ಟಿಕರ್ತನಾದ ಬ್ರಹ್ಮದೇವನು ತನ್ನ ದೇಹದ ಅವಯವಗಳಿಂದ ಮಾನವರನ್ನು ಸೃಷ್ಟಿಸಿದ್ದಾನೆ. ತನ್ನ ಬಾಯಿಯಿಂದ ಬ್ರಾಹ್ಮಣನನ್ನು ಸೃಷ್ಟಿಸಿದನು. ಇದರಿಂದಾಗಿ ಬ್ರಾಹ್ಮಣರು ಬುದ್ಧಿಜೀವಿಗಳಾದರೆಂದು ಹಾಗೂ ಅವರು ಸಾಮಾಜಿಕ ವ್ಯವಸ್ಥೆಯಲ್ಲಿ ಉತ್ತಮ ಸ್ಥಾನವನ್ನು ಪಡೆದು, ದೇವರ ಆರಾಧನೆಯೇ ಅವರ ಮುಖ್ಯ ವೃತ್ತಿಯಾಯಿತು. ಕ್ಷತ್ರಿಯರು ಬ್ರಹ್ಮದೇವನ ತೋಳಿನಿಂದ ಸೃಷ್ಟಿಸಲ್ಪಟ್ಟು ಸಮಾಜದಲ್ಲಿ ಎರಡನೇಯ ಸ್ಥಾನವನ್ನು ಹೊಂದಿದರು. ಶಸ್ತ್ರ ಹಿಡಿದು ಯೋಧರಾಗಿ ಹೋರಾಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವುದೇ ಇವರ ವೃತ್ತಿಯಾಯಿತು. ವೈಶ್ಯರು ಹೊಟ್ಟೆಯಿಂದಲೂ, ಕ್ಷತ್ರಿಯರು ತೋಳು ಗಳಿಂದಲೂ, ಶೂದ್ರರು ಕಾಲುಗಳಿಂದಲೂ ಹುಟ್ಟಿ, ವ್ಯಾಪಾರ, ಆಢಳಿತ ಮತ್ತು ಇತರರ ಸೇವೆ ಮಾಡುವವರಾದರು.

ಈ ನಾಲ್ಕು ಗುಂಪುಗಳಲ್ಲಿ ಕುತೂಹಲಕಾರಿಯಾದ ಅಂಶವೊಂದಿದೆ. ಚತುರ್ ವಿಧ ವರ್ಗೀಕರಣ ಮಾನವರನ್ನು ಬ್ರಾಹ್ಮಣ, ಕ್ಷತ್ರಿಯ. ವೈಶ್ಯ ಮತ್ತು ಶೂದ್ರ ರೆಂದು ಮಾಡುವದರೊಂದಿಗೆ ಮಣ್ಣು, ದೇವಾಲಯಗಳು, ದೇವ-ದೇವತೆಗಳು ಹಾಗೂ ನಕ್ಷತ್ರಗಳನ್ನೂ ಸಹ ನಾಲ್ಕು ವರ್ಣಗಳಲ್ಲಿ ವಿಂಗಡಿಸಲಾಗಿದೆ (ಎನ್. ಕೆ. ಬೋಸ್. ಮ್ಯಾನ್ ಇನ್ ಇಂಡಿಯಾ, ಡಿಸೆಂಬರ್ 1965, ಪು. 268). ಇವುಗಳನ್ನು ವರ್ಣಗಳು ಅಥವಾ ವರ್ಣಗುಂಪುಗಳು ಎಂದು ಕರೆಯಲ್ಪಟ್ಟಿವೆ. ಮೊದಲನೇಯ ಮೂರು ಗುಂಪುಗಳನ್ನು ದ್ವಿಜರೆಂದು ಕರೆಯಲಾಗಿದೆ. ಏಕೆಂದರೆ ಈ ಮೂರು ವರ್ಣಗಳ ವ್ಯಕ್ತಿ ಗಳು ಎರಡು ಜನ್ಮ ಪಡೆಯುತ್ತಾರೆಂದು ನಂಬಲಾಗಿದೆ. ಅವು ಯಾವವು ಎಂದರೆ : ಭೌತಿಕ ಅಥವಾ ಶಾರೀರಿಕ ಜನ್ಮ ಮೊದಲನೇಯದು ಆಧ್ಯಾತ್ಮಿಕ ಜನ್ಮ ಎರಡನೇಯದು. ದ್ವಿಜರು ಮಾತ್ರ ಜನಿವಾರ ಧರಿಸಲು ಅರ್ಹರು.

ಈ ನಾಲ್ಕು ಗುಂಪುಗಳ ಜೊತೆಗೆ ಮತ್ತೊಂದು ಸಮುದಾಯವೂ ಸಮಾಜದ ಏಣಿ ಶ್ರೇಣಿಯಲ್ಲಿ ಅತೀ ಕೆಳಮಟ್ಟದ ಸ್ಥಾನವನ್ನು ಪಡೆದುಕೊಂಡಿದೆ. ವರ್ಣಗಳಲ್ಲಿ ಇವರನ್ನು ಸೇರಿಸಿಲ್ಲ. ಈ ಜನರಿಗೆ ವರ್ಣ, ಜಾತಿಯ ಯಾವುದೇ ಸ್ಥಾನಮಾನವಿಲ್ಲ. ಅವರನ್ನು ಅಂತ್ಯಜ, ಪಂಚಮ, ಚಂಡಾಲ, ಪರೆಯಾ, ಇತ್ಯಾದಿಯಾಗಿ ವಿವಿಧ ಹೆಸರು ಗಳಿಂದ ಕರೆಯಲಾಗಿದೆ.

ಜಾತಿಯ ಬಗೆಗಿನ ಕೆಲವು ದೃಷ್ಟಿಕೋನಗಳು

ಪ್ರಾಚೀನ ಯುರೋಪಿನ ಇತಿಹಾಸ ತಜ್ಞರಾದ ಅಬೆ ದುಬಾಯಿಸ್ ಮತ್ತು ಇತರರು ಜಾತಿಯು ಕೃತಕವಾದ ಸೃಷ್ಟಿಯಾಗಿದ್ದು ಚತುರ ಅರ್ಚಕ ವೃತ್ತಿಯ ಬ್ರಾಹ್ಮಣರು ತಮ್ಮ ಸ್ಥಾನವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಹಾಗೂ ಇತರರ ಹಿಡಿತವನ್ನು ಇಟ್ಟುಕೊಳ್ಳಲು ಜಾತಿಯ ಹೆಸರಿನಲ್ಲಿ ಜನಸಮೂಹವನ್ನು ಶಾಶ್ವತವಾದ ಮೇಲೆ ತಮ್ಮ ವಿಭಾಗಗಳಾಗಿ ವಿಂಗಡಿಸಿದರು. ಅಬೆ ದುಬಾಯಿಸ್‌ರವರು ಹೇಳುವಂತೆ, ಜಾತಿಪದ್ಧತಿಯು ಬ್ರಾಹ್ಮಣರಿಂದ ಬ್ರಾಹ್ಮಣರಿಗಾಗಿ ಸೃಷ್ಟಿಸಲ್ಪಟ್ಟಿತು. ಆದರೆ ಈ ಸಿದ್ಧಾಂತವು ಹಟನ್ ಮತ್ತು ಇತರ ಪಂಡಿತರಿಂದ ಟೀಕಿಸಲ್ಪಟ್ಟು ಇಂತಹದೃಷ್ಟಿಕೋನ ಅಂಗೀಕರಿಸುವದು ಅಸಾಧ್ಯವಾದುದೆಂದು ಹೇಳಲಾಗಿದೆ ; ಭಾರತೀಯ ಸಮಾಜದ ಆಳದಲ್ಲಿ ಬೇರೂರಿರುವ ಮತ್ತು ಎಲ್ಲೆಡೆಯು ಪಸರಿಸಿರುವಂತಹ ಸಂಸ್ಥೆಯಾದ ಜಾತಿ ಪದ್ಧತಿಯು ಕೇವಲ ಒಂದು ಗುಂಪಿನಿಂದ (ಅದು ಎಷ್ಟೇ ಚಾಣಾಕ್ಷ ಹಾಗೂ ಪ್ರಬಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಂಪಾಗಿರಬಹುದು)ಹೇರಲ್ಪಟ್ಟಿತು ಎಂಬುದು ನಂಬಲು ಅಸಾಧ್ಯವಾದುದ್ದು. ಹಟನ್‌ನ ಅಭಿಪ್ರಾಯದಲ್ಲಿ ಜಾತಿಯು ಹಂತ-ಹಂತವಾಗಿ ವಿಕಾಸ ಹೊಂದಿರುವ ಪದ್ಧತಿಯಾಗಿದ್ದು, ದಿಢೀರ ಸೃಷ್ಟಿಯಾದುದಲ್ಲ.

ಡ್ಯಲಮನ್ ಮತ್ತು ನೆಸ್ಫೀಲ್ಡರವರು ಅಭಿಪ್ರಾಯ ಪಡುವಂತೆ ಭಾರತೀಯ ಸಮಾಜವು ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಸಂಘಟನೆ ಎಂಬ ಮೂರು ಮುಖ್ಯ ಕಾರ್ಯಗಳ ಆಧಾರಗಳಿಂದ ರಚನೆಯಾಗಿರುವ ಮೂರು ಸ್ವಾಭಾವಿಕ ಗುಂಪುಗಳಿಂದ ಸಂಘಟನೆಯಾಗಿದೆ. ಈ ರೀತಿಯಾದ ಮೂರು ವಿಧದ ಸಮಾಜದ ವಿಂಗಡನೆಯು ಪ್ರಪಂಚದ ಇತರೆಡೆಗಳಲ್ಲಿಯೂ ಸಹ ಕಾಣಬಹುದು. ಆದರೆ ಭಾರತದ ನಂತರದ ಇತಿಹಾಸವು ಈ ಮೂರು ವರ್ಗಗಳು ಅನೇಕ ಸಮೂಹಗಳಾಗಿ ಸಂಘಟಿತವಾಗಿದ್ದನ್ನು ಪ್ರತಿಬಿಂಬಿಸುತ್ತದೆ. ಆಮೇಲೆ ಈ ಸಮೂಹಗಳು. ನಂತರ ಈ ಸಮೂಹಗಳು ವರ್ತಕರು, ಕೈಗೆಲಸಗಾರರು ಎಂಬ ವೃತ್ತಿಪರ ಸಮೂಹಗಳಾಗಿ (ಗಿಲ್ಡ್‌ಗಳು) ವಿಂಗಡಿಸಲ್ಪಟ್ಟವು. ಹೀಗೆ ಈ ವೃತ್ತಿಪರ ಸಮೂಹಗಳು ಸಾಮುದಾಯಿಕ ಹಿತಾಸಕ್ತಿಯೆಂಬ ಸಾಮುದಾಯಿಕ ಭಾವನೆಗೆ ಎಡೆಮಾಡಿಕೊಟ್ಟ ಪರಿಣಾಮವಾಗಿ ಜಾತಿಗಳಾಗಿ ಮಾರ್ಪಾಡು ಹೊಂದಿದವು.

ಈ ಮೇಲಿನ ದೃಷ್ಟಿಕೋನವು ಟೀಕಿಸಲ್ಪಟ್ಟಿದೆ. ಅನೇಕರಿಂದ ವೃತ್ತಿಸಮುದಾಯಗಳು ಕೇವಲ ಭಾರತದಲ್ಲಿಯೇ ಸೀಮಿತವಾಗಿರಲಿಲ್ಲ. ವಿವಿಧ ವೃತ್ತಿ ಸಮುದಾಯಗಳು ಜರ್ಮನಿಯಂತಹ ರಾಷ್ಟ್ರಗಳಲ್ಲಿಯೂ ನೆಲೆಗೊಂಡಿದ್ದವು. ಆದರೆ ಜರ್ಮನಿಯ ವಿವಿಧ ವೃತ್ತಿ ಸಮುದಾಯಗಳ ಸದಸ್ಯರಲ್ಲಿ ಅಂತರ್ ಭೋಜನ ಮತ್ತು ಅಂತರ್ ಸಮುದಾಯ ವಿವಾಹಗಳ ಮೇಲೆ ಎಂದೂ ಬಹಿಷ್ಕಾರ ಹಾಕಿರಲಿಲ್ಲ. ಆದುದರಿಂದ ಕೇವಲ ಅಂತರ್ ಭೋಜನ, ಅಂತರ್ ಸಮುದಾಯ ವಿವಾಹಗಳ ಮೇಲಿನ ನಿಷೇಧದಿಂದಲೇ ಭಾರತದಲ್ಲಿ ಮಾತ್ರ ಜಾತಿ ವ್ಯವಸ್ಥೆಯ ಉದ್ಭವವಾಯಿತು ಎಂಬ ಮಾತು ನಂಬಲರ್ಹವಾದುದಲ್ಲ.

ಸರ್ ಹರ್ಬರ್ಟ್‌ರೈಸ್ಲಿರವರ ಸಿದ್ಧಾಂತವು ಜನಾಂಗ ಮತ್ತು ಒಳಬಾಂಧವ್ಯ ವಿವಾಹಗಳೆಂಬ ಪರಿಕಲ್ಪನೆಯ ಆಧಾರದ ಮೇಲೆ ಮಂಡಿಸಲ್ಪಟ್ಟಿದೆ. ಅವರು ಜಾತಿಯು ವರ್ಣಪ್ರಜ್ಞೆಯಿಂದ ಮತ್ತು ಒಳಬಾಂಧವ್ಯ ವಿವಾಹ ಪದ್ಧತಿಯನ್ನು ಅನುಸರಿಸಿದ್ದರಿಂದ ಉಗಮವಾಯಿತು ಎಂದು ವಿವರಿಸುತ್ತಾರೆ. ಪ್ರಾರಂಭದಲ್ಲಿ ಆಗಮಿಸಿದ ಆರ್ಯ ತರುಣ ಯೋಧರು ದ್ರಾವಿಡರನ್ನು ಸೋಲಿಸಿದ ನಂತರ ದ್ರಾವಿಡ ಕಪ್ಪು ಕನ್ಯೆಯರನ್ನು ವಿವಾಹವಾದರು. ಸಾಕಷ್ಟು ಮಹಿಳೆಯರನ್ನು ತಮ್ಮ ಶ್ರೇಣಿಯಲ್ಲಿ ಸೇರಿಸಿಕೊಂಡ ಮೇಲೆ ಅವರು ತಮ್ಮ ಶ್ರೇಣಿಯಲ್ಲಿ ಹೊಸಬರ ಪ್ರವೇಶವಾಗದಂತೆ ಎಲ್ಲ ಅವಕಾಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳನ್ನು ಕೊನೆಗಾಣಿಸಿದರು. ಈ ಉದ್ದೇಶಕ್ಕಾಗಿ ಅವರು ಅಂತರ್-ವರ್ಣ ವಿವಾಹ ವನ್ನು ನಿಷೇಧಿಸಿದರು. ಈ ರೀತಿಯಾಗಿ ಜಾತಿಗಳ ಉಗಮವಾಯಿತು. ರೈಸ್ಲಿರವರಿಂದ ಪ್ರತಿಪಾದಿಸಲ್ಪಟ್ಟ 'ಜನಾಂಗೀಯ ಪ್ರಜ್ಞೆ' ಮತ್ತು 'ವರ್ಣಪ್ರಜ್ಞೆ' ಸಿದ್ಧಾಂತವು ಅನೇಕ ಪ್ರಾಚ್ಯಶಾಸ್ತ್ರಜ್ಞರಿಂದಲೂ ಬೆಂಬಲ ಪಡೆಯಿತು. ಅವರಲ್ಲಿ ದತ್ತ ಕೊಡ ಒಬ್ಬರು. ಅವರು ಈ ಮೇಲೆ ತಿಳಿಸಿದ ಅಂಶಗಳೊಂದಿಗೆ ಮನು ಸಂಹಿತೆಯೂ ಕೂಡ ಜಾತಿ ಜಾತಿಪದ್ಧತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ದಿಶೆಯಲ್ಲಿ ಬ್ಲಂಟ್‌ರವರು ಡ್ಯಾಲಮನ್ ಮತ್ತು ರೈಸ್ಲಿಯವರ ಅಭಿಪ್ರಾಯ ವನ್ನು ಅನುಮೋದಿಸುತ್ತಾರೆ. ಇವರು ಜಾತಿಪದ್ಧತಿಯು ಸಂಕೀರ್ಣ ಸಮಾಜದ ವಿಚಿತ್ರ ಪರಿಸ್ಥಿತಿಯಲ್ಲಿ ಉಗಮವಾಯಿತು ಎಂದಿದ್ದಾರೆ. ಇಲ್ಲಿ ಸಂಕೀರ್ಣ ಸಮಾಜ ವೆಂದರೆ. ಸಮೂಹ ವಿಭಾಗಗಳೊಳಗೆ ಉಪವರ್ಗಗಳನ್ನು ಹೊಂದಿರುವ ಸಮಾಜ ವರ್ಗ ಗಳು ಸಾಮಾನ್ಯವಾಗೆ ವರ್ಣಗಳಿಂದ ಪ್ರೇರಿತಗೊಂಡ ಪರಿಣಾಮವಾಗಿ ಸಮಾಜವು ವರ್ಣ ಆಧಾರಿತ ವರ್ಗಗಳಲ್ಲಿ ವಿಭಾಗಸಲ್ಪಟ್ಟಿತು. ಹೀಗೆ ಒಂದೇ ಸಮೂಹದ ಒಳಗೆ ಹಲವಾರು ಖಚಿತ ವರ್ಗಪ್ರಜ್ಞೆ ಮತ್ತು ಇತರ ವರ್ಗಗಳ ಬಗ್ಗೆ ಪೂರ್ವಾಗ್ರಹ ಹೊಂದಿದ ಗುಂಪುಗಳಾಗಿ ಬೆಳೆದುಬಂದವು. ಹೀಗೆ ಒಂದೊಂದು ವೃತ್ತಿ ಸಮುದಾಯವು ಒಂದೊಂದು ಒಳಬಾಂಧವ್ಯ ವಿವಾಹ ಪದ್ಧತಿಯನ್ನು ಹೊಂದಿರುವ ಉಪಜಾತಿಗಳೂ ಅಸ್ತಿತ್ವಕ್ಕೆ ಬಂದವು. ಈ ಸಿದ್ಧಾಂತದ ಪ್ರತಿಪಾದನೆಗೆ ಪೂರಕವಾಗಿ ಬ್ಲಂಟ್‌ರವರು ಗೋತ್ರ ಹೊರಬಾಂಧವ್ಯ ವಿವಾಹ ಪದ್ಧತಿಯು ಕೇವಲ ಕಾರ್ಯನಿರತ(ಕಸುಬು) ಜಾತಿ ಗಳಾದ ಬ್ರಾಹ್ಮಣ, ಕಾಯಸ್ಥ, ಸೋನಾರ್, ಲೋಹಾರ್ ಕಂಡು ಬರುತ್ತವೆ ಎಂದೂ, ಕಾರ್ಯ ನಿರತವಲ್ಲದ ಜಾತಿ ಪೂತ್, ಖತ್ರಿ, ಜಾಟ್ ಮತ್ತು ಭಟ್ ಮುಂತಾದವುಗಳಲ್ಲಿ ಕಂಡುಬರುವುದಿಲ್ಲವೆಂದು ತಿಳಿಸಿದ್ದಾರೆ, ಈ ಜಾತಿಗಳು ಒಳಬಾಂಧವ್ಯ ಸಮೂಹಗಳಿಗೆ ಬದಲಾಗಿ ಹೊರಬಾಂಧವ್ಯ ಸಮೂಹಗಳಿಂದ ಉಂಟಾಗಿವೆ.

ಈ ಸಿದ್ಧಾಂತದ ವಿರುದ್ಧವೂ ಟೀಕೆ ಇದೆ. ಅಂದರೆ, ಗೋತ್ರ ಹೊರಬಾಂಧವ್ಯ ಸಂಬಂದವು ಕೇವಲ ಕಾರ್ಯ (ಕಸುಬು)ನಿರತ ಜಾತಿಗಳಲ್ಲಿಯೇ ಕಂಡುಬರುತ್ತದೆ ಎಂಬುದು ತಪ್ಪಾಭಿಪ್ರಾಯ. ಕಾರ್ಯನಿರತ ಜಾತಿಗಳಲ್ಲಿರುವಂತೆಯೇ ಕಾರ್ಯನಿರತವಲ್ಲದ ಜಾತಿಗಳಲ್ಲಿಯೂ ಅದನ್ನು ಕಾಣಬಹುದು.

ರಾವ್ ಮತ್ತು ಘುರ್ರೆ ಇಬ್ಬರೂ ಕೂಡಾ ಜನಾಂಗೀಯ ವ್ಯತ್ಯಾಸದಿಂದಾಗಿ ಜಾತಿಗಳು ಉಗಮವಾದವು ಎಂಬುದಾಗಿ ತೀರ್ಮಾನಿಸಿದ್ದಾರೆ. ನಂತರ ಪ್ರತಿಪಾದನೆಯು ಅರ್ಚಕ ವೃತ್ತಿಯನ್ನು ಹೊಂದಿರುವವರ ಕೌಶಲ್ಯ ಮತ್ತು ಬ್ರಾಹ್ಮಣರು ಶುದ್ಧತೆ ಮತ್ತು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಆರ್ಯ ಜನಾಂಗೀಯ ಗುಣಗಳನ್ನು ಕಾಪಾಡಿಕೊಂಡು ಬರಲು ಮಾಡಿದ ಪ್ರಯತ್ನದ ಮೇಲೆ ಹೆಚ್ಚು ಮಹತ್ವ ನೀಡಿದೆ. ಜಾತಿಪದ್ಧತಿಯು ಇಂಡೊ–ಆರ್ಯನ್ ಸಂಸ್ಕೃತಿಯ ಕೂಸಾಗಿದ್ದು, ಗಂಗಾ–ಜಮುನಾ ಪ್ರದೇಶದ ತೊಟ್ಟಿಲಲ್ಲಿ ಬೆಳೆದು, ನಂತರ ಭಾರತದ ಇತರೆ ಭಾಗಗಳಲ್ಲಿ ತನ್ನ ಚಟುವಟಿಕೆಯನ್ನು ಹರಡಿತು ಎಂಬುದಾಗಿ ಘುರ್ರೆ ಮತ್ತು ರಾವ್ ಅಭಿಪ್ರಾಯಪಡುತ್ತಾರೆ. ಬ್ರಾಹ್ಮಣರಿಗೆ ಇದನ್ನು ಸಾಧಿಸಲು ಹೇಗೆ ಸಾಧ್ಯವಾಯಿತೆಂದರೆ—ಜಾತಿ ಪದ್ಧತಿಗೆ ಸಂಬಂಧಿಸಿದ ಕೆಲವು ಮೂಲಭೂತ ಅಂಶಗಳು ಪ್ರಚಲಿತವಿದ್ದವು. ಅರ್ಚಕವರ್ಗದವರಾದ ಬ್ರಾಹ್ಮಣರು ಅವುಗಳನ್ನು ವ್ಯವಸ್ಥಿತಗೊಳಿಸಿದರು.

ಘುರ್ರೆಯವರ ಅಭಿಪ್ರಾಯದಂತೆಯೇ ಇಬೆಟ್ಸನ್‌ರವರೂ ಕೂಡ ಬ್ರಾಹ್ಮಣರಿಂದ ಜನ ಸಮೂಹದ ಶೋಷಣೆ ನಡೆಯಿತು ಎಂದು ಪ್ರತಿಪಾದಿಸಿದ್ದಾರೆ. ಬ್ರಾಹ್ಮಣರು ಜಾತಿಪದ್ಧತಿಯ ಮುಖೇನ ತಮ್ಮ ಜಾತಿಯು ಹಾಗೂ ತಮ್ಮನ್ನು ಪೋಷಕರಾದ ಆಳುವ ವರ್ಗವನ್ನು ಹೊರತುಪಡಿಸಿ ಇತರೆ ಎಲ್ಲ ಜಾತಿಗಳನ್ನು ಕೀಳೆಂದು ಪರಿಗಣಿಸಿದರು ಎಂಬುದು ಇವರ ಅಭಿಪ್ರಾಯ,

ಸ್ಲೇಟರ್‌ರವರು ಕಸುಬು (ಉದ್ಯೋಗ) ಮತ್ತು ಜನಾಂಗೀಯ ಅಂಶಗಳನ್ನು ಜಾತಿ ಪದ್ಧತಿಯ ಉಗಮವನ್ನು ವಿವರಿಸಲು ಜೊತೆಗೂಡಿಸಿದರು. ಅವರ ಅಭಿಪ್ರಾಯದಲ್ಲಿ ಜಾತಿಯು ವಾಸ್ತವವಾಗಿ ಉತ್ತರ ಭಾರತಕ್ಕಿಂತಲೂ ಹೆಚ್ಚು ದಕ್ಷಿಣ ಭಾರತದಲ್ಲಿ ಸ್ಥಿರೀಕರಣಗೊಂಡಿತ್ತು. ಅದು ಆರ್ಯರ ಆಗಮನಕ್ಕಿಂತ ಮೊದಲೇ ಅಸ್ತಿತ್ವದಲ್ಲಿತ್ತು. ಆರ್ಯರಿಗಿಂತ ಮೊದಲಿನವರಲ್ಲಿ ಕಸುಬು ಕ್ರಮೇಣ ಆನುವಂಶಿಕವಾಯಿತು ಹಾಗೂ ಸಮೂಹದೊಳಗೆ ಕಸುಬಿನ–ರಹಸ್ಯವನ್ನು ಕಾಪಾಡಿಕೊಂಡು ಬರಲು ಅಂತರ್ ಜಾತಿಯ ವಿವಾಹಗಳು ನಿಷೇಧಿಸಲ್ಪಟ್ಟವು. ನಂತರ ಆರ್ಯರ ಪ್ರಭಾವವೂ ಸಹ ಜಾತಿಪದ್ಧತಿಯನ್ನು ಬಲಗೊಳಿಸಿ, ವ್ಯವಸ್ಥಿತಗೊಳಿಸಿತು. ವೃತ್ತಿಗೆ ಸಂಬಂಧಿಸಿದಂತೆ ದುರಭಿಪ್ರಾಯ ಮತ್ತು ವ್ಯಾಪಾರದ ರಹಸ್ಯ ಕಾಪಾಡುವಿಕೆ ಈ ಎರಡು ಅಂಶಗಳು ಆರ್ಯರ ಪೂರ್ವದಲ್ಲಿ ಜಾತಿಪದ್ಧತಿಯ ಬೆಳವಣಿಗೆಗೆ ಮುಖ್ಯ ಕಾರಣವಾದವು ಎಂಬ ಅಭಿಪ್ರಾಯವನ್ನು ರಾವ್ ಮತ್ತು ಘುರ್ರೆಯವರುಗಳು ಬೆಂಬಲಿಸಿದ್ದಾರೆ.

ಶರತ್‌ಚಂದ್ರರಾಯ್‌ರವರು 'ಮಾನಾ' ಮತ್ತು ಆತ್ಮ–ತತ್ವಗಳಲ್ಲಿನ ನಂಬಿಕೆ ಜಾತಿ ಬೆಳವಣಿಗೆ ಹೊಂದಲು ಸಹಾಯಕವಾದವು ಎಂದು ಅಭಿಪ್ರಾಯ ಪಡುತ್ತಾರೆ. ಇವರು ಜಾತಿಪದ್ಧತಿಯು ಇಂಡೋ–ಆರ್ಯನ್ನರ ವರ್ಣ ಪದ್ಧತಿ ಒಂದೆಡೆ, ಇನ್ನೊಂದೆಡೆ ದ್ರಾವಿಡರ ಪೂರ್ವದ ಬುಡಕಟ್ಟು ಪದ್ಧತಿ ಇವೆರಡರ ಅಂತರ್‌ಕ್ರಿಯೆಯಿಂದ ಉದ್ಭವವಾಗಿದೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಈ ಗುಂಪುಗಳು ಜಾತಿಪದ್ಧತಿಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂಡೋ-ಆರ್ಯನ್ನ ಕಲ್ಪನೆಗಳಾದ ಕರ್ಮ, ಮಾನಾ ಮತ್ತು ಆತ್ಮ ಸಿದ್ಧಾಂತಗಳಿಂದಾಗಿ ಅನ್ಯೋನ್ಯವಾಗಿ ಸೇರಿಕೊಂಡವು.

ಮ್ಯಾಕ್ಸವೆಬರ್‌ರವರು ಕೇವಲ ವೃತ್ತಿಪರ ಸ್ತರವಿನ್ಯಾಸವೊಂದೆ ಜಾತಿಯಂತಹ ವರ್ಗೀಕರಣಕ್ಕೆ ಅವಕಾಶ ಮಾಡಿಕೊಡಲಿಲ್ಲವೆಂದೂ, ವೃತ್ತಿ ವೈವಿಧ್ಯವೊಂದೇ ಜಾತಿಯ ಉಗಮಕ್ಕೆ ಕಾರಣವಾಗಲಾರದು ಎಂದಿದ್ದಾರೆ. ಅವರ ಪ್ರಕಾರ ಜನಾಂಗೀಯ ಸ್ಥಾನ ಮಾನ ಮತ್ತು ಆರ್ಥಿಕ ಅಂಶಗಳು ಜಾತಿಪದ್ಧತಿಯ ಬೆಳವಣಿಗೆಯಲ್ಲಿ ಮಹತ್ತರವಾದ ಪಾತ್ರವಹಿಸಿದವು. ಭಾರತದಲ್ಲಿ ಕುಲದ ದೈವದತ್ತವಾದ ಪ್ರತಿಭೆ ಮತ್ತು ಶಕ್ತಿಯ ಬಗೆಗಿನ ನಂಬಿಕೆ ವಿಶ್ವದ ಇತರ ಭಾಗದಲ್ಲಿನಗಿಂತಲೂ ಅತಿಶಯವಾದುದು. ಇಂತಹ ನಂಬಿಕೆಗಳಿಂದ ಒಂದು ಇಡೀ ಕುಲವು ನಾಯಕತ್ವದ ಪಟ್ಟವನ್ನು ಗಳಿಸಿ ಅನುಭವಿಸುತ್ತ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಿ ಭಾರತದಲ್ಲಿ ಜಾತಿಪದ್ಧತಿಯ ಸ್ಥಾಪನೆಯಾಯಿತು ಎಂದು ವೆಬರ್‌ರವರ ಅಭಿಪ್ರಾಯ.

ಹಟನ್‌ರವರು ಈ ಸಿದ್ಧಾಂತಗಳ ಸಿಂಹಾವಲೋಕನವನ್ನು ಪರಿಸಮಾಪ್ತಿಗೊಳಿಸುತ್ತ ಯಾವ ಸಿದ್ಧಾಂತವು ಅತ್ಯುತ್ತಮವಾದುದು ಎಂದು ಹೇಳುವುದು ತುಂಬ ಕಷ್ಟಕರವಾದುದು ಎಂದು ಹೇಳಿದ್ದಾರೆ. ಜಾತಿಯ ಬಗ್ಗೆ ಅನೇಕ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿದ್ದು ಅವುಗಳಲ್ಲಿ ಒಂದಾದರೂ ಕೂಡಾ ಜಾತಿಯ ಪ್ರವೃತ್ತಿಯನ್ನು ಸಂಪೂರ್ಣವಾಗಿ ವಿವರಿಸಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಹಟನ್‌ರವರು ಭಾರತದ ಜಾತಿಪದ್ಧತಿಯು ಅನೇಕ ಭೌಗೋಳಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಅಂಶಗಳ ಅಂತರ್‌ಕ್ರಿಯೆಯ ಸ್ವಾಭಾವಿಕ ಪರಿಣಾಮಗಳಿಂದಾಗಿದೆ ಎಂದು ತರ್ಕಿಸುತ್ತಾನೆ. ಇವುಗಳು ಎಲ್ಲಿಯೂ ಕೂಡ ಸಮವಾಗಿರುವುದು ಕಂಡುಬರುವುದಿಲ್ಲ.

ಜಾತಿಪದ್ಧತಿಯು ಅನೇಕ ತಪ್ಪು ಅಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿದೆ. ಇವುಗಳಲ್ಲಿ ಒಂದೆಂದರೆ ಜಾತಿಯ ಆಧಾರದ ಮೇಲಿನ ಭಾರತೀಯ ಸಮಾಜದ ಸ್ತರವಿನ್ಯಾಸವು ತುಂಬಾ ಕಠಿಣವಾದದ್ದು, ಅಂದರೆ ಏಣಿ ಶ್ರೇಣಿಯಲ್ಲಿ ವಿವಿಧ ಜಾತಿಗಳ ಸ್ಥಾನಮಾನವು ಬದಲಾಗದೆ ಸ್ಥಿರವಾದಂತಹದ್ದು. ಜಾತಿ ಆಧಾರದ ಮೇಲಿನ ಭಾರತೀಯ ಸಮಾಜದ ಸ್ಥಾನಮಾನವು ಇದ್ದ ಹಾಗೆಯೇ ಇರುವುದಿಲ್ಲ. ಜಾತಿಯ ಅವಕಾಶಗಳು ಕಾಲದಿಂದ ಕಾಲಕ್ಕೆ ಮತ್ತು ಸ್ಥಳದಿಂದ ಸ್ಥಳಕ್ಕೆ ಬದಲಾಗಿವೆ. ಈ ಅಂಶದ ದೃಷ್ಟಿಯಲ್ಲಿ ಸಂಕ್ಷಿಪ್ತವಾಗಿ ಭಾರತದ ಇತಿಹಾಸದ ವಿವಿಧ ಹಂತಹಂತದ ಕಾಲಕ್ಕೆ ಸಂಭವಿಸಿರುವ ಬದಲಾವಣೆಗಳನ್ನು ಪರಿಶೀಲಿಸುವುದು ತುಂಬಾ ಅವಶ್ಯಕವಾದುದು.

ಜಾತಿ ರಚನೆಯ ವಿಕಾಸ

ಭಾರತದ ಚಾರಿತ್ರಿಕ ದಾಖಲೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ಹೇಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕಾಗುತ್ತದೆ. ಪ್ರಾಚಿನ ಸಮಾಜದ ಬಗ್ಗೆ ದೊರೆಯುವಂತಹ ಇಂತಹ ದಾಖಲೆಗಳು ಮೂಲಭೂತವಾಗಿ ಧಾರ್ಮಿಕ ಬರವಣಿಗೆಗಳು. ಅವರ ಸಮಾಜ ಮತ್ತು ಸಾಮಾಜಿಕ ರಚನೆಯ ಬಗೆಗಿನ ಆಸಕ್ತಿಯು ಕೇವಲ ಪ್ರಾಸಂಗಿಕವಾಗಿತ್ತು. ಆದ್ದರಿಂದ ನಾವು ಈ ದಾಖಲಾತಿಗಳಿಂದ ಕಂಡುಬರುವ ಮಾಹಿತಿಗಳು ಹೆಚ್ಚು ಅಸ್ಪಷ್ಟವಾದಂತಹವುಗಳು.

ಮನುಸ್ಮೃತಿಯು ಪ್ರಾಚೀನ ಭಾರತದ ಎಲ್ಲಾರಾಜರುಗಳ ಆಡಳಿತದ ಸಲಹೆಯ ಪುಸ್ತಕವಾಗಿದ್ದಿತು. ಮನುಸ್ಮೃತಿಯ (III–23) ಪ್ರಕಾರ ಬಂದು ಅನಾಗರಿಕ ಭೂ ಪ್ರದೇಶದಲ್ಲಿ ರಾಜನು 4 ವರ್ಣಗಳನ್ನು ಸ್ಥಾಪಿಸಿ, ಹಿಂದೂ ಸಾಮಾಜಿಕ ರಚನೆಯ ಸರಹದ್ದಿನಲ್ಲಿ ಹಿಂದಿರುವ ಚಂಡಾಲರ ಸ್ಥಾನಮಾನಕ್ಕೆ ಸ್ಥಳೀಯ (ದೇಶಿಯ) ಅನಾಗರಿಕರನ್ನು ಇಳಿಸಿದಾಗ ಧಾರ್ಮಿಕವಾಗಿ ಶುದ್ಧವಾಗುತ್ತದೆ. ಆದ್ದರಿಂದ ಹಿಂದು ರಾಜರುಗಳು ಹೊಸ ಪ್ರಾಂತ್ಯವನ್ನು ಜಯಿಸಿದಾಗ ಅವರು ಮಾಡುವಂತಹ ಮುಖ್ಯವಾದ ಕೆಲಸವೆಂದರೆ ಚತುರ್ವರ್ಣ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಿ, ಸೋತು ಶರಣಾಗತರಾದವರನ್ನು ಕೆಳದರ್ಜೆಗೆ ತರುವುದಾಗಿತ್ತು.

ದಾಖಲೆ ಹೊಂದಿದ ಭಾರತದ ಇತಿಹಾಸವು ಕ್ರಿಸ್ತಪೂರ್ವ 6ನೇ ಶತಮಾನದಿಂದ ಪ್ರಾರಂಭವಾಗುತ್ತದೆ (ಮಗಧ ರಾಜರು ಶ್ರೇಷ್ಟರಾಗಿದ್ದಂತಹ ಸಂದರ್ಭದಲ್ಲಿ) ಎಲ್ಲಾ ಹಿಂದೂ ರಾಜರುಗಳಂತೆಯೇ ಮಗಧವನ್ನು ಆಳಿದಂತಹವರುಸಹ, ಸೋತು ಶರಣಾಗತರಾದವರನ್ನು ಕೆಳಸ್ಥಾನವನ್ನು ಪಡೆಯುವಂತೆ ಮಾಡಿಚತುರ್ವರ್ಣ ಸಮಾಜವನ್ನು ಸ್ಥಾಪಿಸಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನು ಸ್ಥಾಪಿಸಿದರು. ಈ ಸಾಮಾಜಿಕ ರಚನೆಯನ್ನು ಪ್ರೋತ್ಸಾಹಿಸಿದವರು ಬ್ರಾಹ್ಮಣರು, ಪುರೋಹಿತರು ಮತ್ತು ರಾಜನಿಗೆ ಸಲಹೆ ನೀಡುವವರು ಆಗಿದ್ದರು. ಕ್ಷತ್ರಿಯರು ಆಡಳಿತಗಾರರು ಮತ್ತು ಯೋಧರಾದರು, ಹಾಗೂ ವೈಶ್ಯರು ವ್ಯಾಪಾರಿಗಳಾದಿ ಮತ್ತು ಶೂದ್ರರು ಶ್ರಮಶಕ್ತಿಯನ್ನು ಒದಗಿಸುವವರಾದರು.

ಬ್ರಾಹ್ಮಣ ಮತ್ತು ಕ್ಷತ್ರಿಯ ಜಾತಿಗಳು ಪೂರಕ ಜಾತಿಗಳು, ಇವುಗಳು ಒಂದಿಲ್ಲದೆ ಇನ್ನೊಂದು ಅಪೂರ್ಣವಾದುದು ಎಂಬ ನಂಬಿಕೆ ಇತ್ತು. ಒಬ್ಬ ಕ್ಷತ್ರಿಯ ರಾಜ ನುಬ್ರಾಹ್ಮಣ ಪುರೋಹಿತನಿಲ್ಲದೆ ಪ್ರಯಾಸದಿಂದ ರಾಜನೆನಿಸಿಕೊಳ್ಳುತ್ತಿದ್ದನು ಹಾಗೆಯೇ ಬ್ರಾಹ್ಮಣನೂ ಕೂಡ. ಈ ಎರಡು ವರ್ಣಗಳ ಪೂರಕ ಸ್ವಭಾವದಿಂದಾಗಿ ಈ ಎರಡು ಗುಂಪುಗಳ ಮಧ್ಯ ಏಣಿಶ್ರೇಣಿಯಲ್ಲಿ ಯಾರು ಉನ್ನತವಾದ ಸ್ಥಾನವನ್ನು ಆಕ್ರಮಿಸಬೇಕು ಎಂಬ ಬಗ್ಗೆ ನಿರಂತರವಾದ ಪೈಪೋಟಿ ನಡೆಯುತ್ತಲೇ ಇತ್ತು. ಬ್ರಾಹ್ಮಣರು, ಕ್ಷತ್ರಿಯರು ಸೇರಿದಂತೆ ಎಲ್ಲರಿಗಿಂತಲೂ ನಾವೇ ಶ್ರೇಷ್ಠರು, ನಾವು ಭೂಮಿಯ ಮೇಲೆ ಬಂದಿರುವ ದೇವರ ಪ್ರತಿನಿಧಿಗಳು ಭೂಸುರರು ಆದ್ದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾವು ಭೂಮಿಯ ಮೇಲೆ ಶ್ರೇಷ್ಠರು ಎಂದು ಪ್ರತಿಪಾದಿಸಿ ಆ ಸ್ಥಾನವನ್ನು ಪಡೆದು ಕೊಂಡರು. ಮಹಾಭಾರತದ ಪ್ರಕಾರ, ಬ್ರಾಹ್ಮಣರು ಕೇವಲ ಒಂದು ವರ್ಣ, ಉಳಿದ ವರ್ಣಗಳು ಅದರ ಮಾರ್ಪಾಟುಗಳು. ವಶಿಷ್ಟನು, ಕ್ಷತ್ರಿಯ ರಾಜನು ಒಬ್ಬ ಬ್ರಾಹ್ಮಣನ ಮೂಲಕ ಯಜ್ಞವನ್ನು ಸಲ್ಲಿಸಿದಾಗ ಮಾತ್ರ ಮೋಕ್ಷವನ್ನು ಪಡೆಯುತ್ತಾನೆ. ಒಬ್ಬ ಬ್ರಾಹ್ಮಣನ ಮೂಲಕ ಸಲ್ಲಿಸಿದ ಪೂಜೆಯು (ಒಬ್ಬ ಅಗ್ನಿಹೋತ್ರನಿಂದ) ಹೆಚ್ಚು ಉತ್ತಮ ವಾಗಿರುತ್ತದೆ'' ಎಂದು ಬರೆಯುತ್ತಾನೆ. ಭೂಮಿಯ ಯಜಮಾನ ಬ್ರಾಹ್ಮಣ. ಒಬ್ಬ ವಿಧವೆ ತನ್ನ ಪತಿಯ ಸಾವಿನ ನಂತರ ತನ್ನ ಪತಿಯ ಸೋದರನನ್ನು ಮದುವೆಯಾಗು ವಂತೆ ಬ್ರಾಹ್ಮಣನ ಗೈರು ಹಾಜರಿಯಲ್ಲಿ ಭೂಮಿಯು ಕ್ಷತ್ರಿಯನನ್ನುಆಶ್ರಯಿಸುತ್ತದೆ. ಗೌತಮ ಹೀಗೆ ಬರೆಯುತ್ತಾನೆ: ಒಬ್ಬ ಕ್ಷತ್ರಿಯ ರಾಜ ಮತ್ತು ಒಬ್ಬಬ್ರಾಹ್ಮಣ ಒಂದೇ ರಸ್ತೆಯಲ್ಲಿ ಹೋಗುತ್ತಿದ್ದಾಗ ರಾಜನು ಪಕ್ಕಕ್ಕೆ ಸರಿದು ನಿಂತು ಬ್ರಾಹ್ಮಣನಿಗೆ ದಾರಿಯನ್ನು ಮಾಡಿಕೊಡಬೇಕು. ಏಕೆಂದರೆ ರಸ್ತೆಯು ಬ್ರಾಹ್ಮಣನಿಗೆ ಸೇರಿದ್ದು ರಾಜ ನಿಗಲ್ಲ. ಒಬ್ಬ ನೂರು ವರ್ಷ ವಯಸ್ಸಿನ ಕ್ಷತ್ರಿಯ ಮತ್ತು 10 ವರ್ಷ ವಯಸ್ಸಿನ ಬ್ರಾಹ್ಮಣನ ಮಧ್ಯೆ ಧರ್ಮ ಗ್ರಂಥಗಳು ಹೇಳುವಂತೆ 10 ವರ್ಷ ವಯಸ್ಸಿನ ಬ್ರಾಹ್ಮಣನು ನೂರು ವರ್ಷ ವಯಸ್ಸಿನ ಕ್ಷತ್ರಿಯನಿಗೆ ತಂದೆ ಇದ್ದಂತೆ. ವಿಷ್ಣು ಬ್ರಾಹ್ಮಣರ ಶ್ರೇಷ್ಠತೆಯನ್ನು ಸ್ಪಷ್ಟಪಡಿಸುವಲ್ಲಿ ಇನ್ನೂ ಮುಂದೆ ಹೋಗುತ್ತಾನೆ. ''ಬ್ರಾಹ್ಮಣರು ದೇವರು ಮತ್ತು ಮಾನವನ ನಡುವಿನ ಮಧ್ಯವರ್ತಿಗಳು, ಹೀಗೆ ಒಂದು ರೀತಿಯಲ್ಲಿ ಅವರಿಗೆ ದೇವ ಸಮಾನರು, ನಿಜವಾಗಿಯೂ ಅವರು ದೇವರಿಗೆ ಶಿಕ್ಷಕರು (ಬೋಧಕರು) ಏಕೆಂದರೆ ಬ್ರಾಹ್ಮಣರ ದಯೆಯಿಂದ ದೇವತೆಗಳು ಸ್ವರ್ಗದಲ್ಲಿ ವಾಸವಾಗಿದ್ದಾರೆ'' ಎಂದು ಬರೆಯುತ್ತಾನೆ.

ಕ್ಷತ್ರಿಯರು ಆಡಳಿತಗಾರರು ಮತ್ತು ಅಪರಿಮಿತವಾದ ರಾಜಕೀಯ ಅಧಿಕಾರ ವನ್ನು ಹೊಂದಿದ್ದಾಗ್ಯೂ ಬ್ರಾಹ್ಮಣರು ಪಡೆದ ಶ್ರೇಷ್ಠತೆಯನ್ನು ಪಡೆಯಲಿಲ್ಲ. ಹೀಗೆ ಭಾರತದ ಎಲ್ಲಾ ಕಾಲಮಾನದಲ್ಲಿಯೂ, ಪುರೋಹಿತ್ಯದ ಅಧಿಕಾರ ಮತ್ತು ಐಹಿಕ ಅಧಿಕಾರವನ್ನು ಪ್ರತಿನಿಧಿಸಲು ಬ್ರಾಹ್ಮಣರು ಮತ್ತು ಕ್ಷತ್ರಿಯರು ಅನುಕ್ರಮವಾಗಿ ಪೈಪೋಟಿ ನಡೆಸಿರುವುದನ್ನು ನಾವು ಕಾಣಬಹುದು.

ಹೀಗಿದ್ದಂತಹ ಸಂದರ್ಭದಲ್ಲಿ ಭಾರತದಲ್ಲಿ ಗುಪ್ತರ ಅಧಿಕಾರದ ಅವಧಿ ಜಾತಿಯ ಸ್ಥಿರೀಕರಣದಲ್ಲಿ ಮಹತ್ತರವಾದ ಬದಲಾವಣೆಗಳನ್ನು ಕಂಡಿತು. ಗುಪ್ತರ ಕಾಲ ವನ್ನು ಭಾರತದ ಇತಿಹಾಸದಲ್ಲಿ ಸುವರ್ಣಯುಗ ಎಂದು ಕರೆಯಲಾಗಿದೆ. ಗುಪ್ತರ ಸಾಂಪ್ರದಾಯಿಕವಾದಂತಹ ಸ್ಥಿರೀಕರಣದಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದ್ದ ಶೂದ್ರರು. ಬ್ರಾಹ್ಮಣೀಯ ಬರಹಗಾರರು ಇವರ ಅವಧಿಯನ್ನು ಕಟುವಾಗಿ ಗುಪ್ತರ ಯುಗವನ್ನು ಕಲಿಯುಗ ಅಥವಾ ಕಪ್ಪುಯುಗ ಎಂದು ಕರೆದಿದ್ದಾರೆ. ಶೂದ್ರರ ಅಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರವು ಜಾತಿ ಆಧಾರದ ಮೇಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ತರವಾದ ಪರಿಣಾಮಗಳನ್ನುಂಟು ಮಾಡಿತು. ಗುಪ್ತರ ಆಳ್ವಿಕೆಯ ಕಾಲದಲ್ಲಿ ಶೂದ್ರರೂ ಕೂಡ ಇತರೆ ಮೇಲಿನ ಸಮೂಹಗಳಿಗೆ ಸಮಾನವಾದಷ್ಟೆ ಸ್ಥಾನಮಾನವನ್ನು ಅನುಭವಿಸಿದರು.

ಬೌದ್ಧರ ಆಡಳಿತದಲ್ಲಿ ಜಾತಿಗಳ ಪರಂಪರಾಗತ ಏಣಿಶ್ರೇಣಿಯಲ್ಲಿ ಬಹು ಮುಖ್ಯವಾದ ಬದಲಾವಣೆ ಕಂಡುಬಂದಿತು, ಬೌದ್ಧರ ರಾಜಕೀಯ ಪ್ರಾಧಾನ್ಯತೆಯು ಜಾತಿಪದ್ಧತಿಯ ಮೇಲೆ ಹೆಚ್ಚು ಪರಿಣಾಮವನ್ನು ಬೀರಿತು. ಮೊದಲನೆಯದಾಗಿ ಬೌದ್ಧ ಧರ್ಮವು ಬ್ರಾಹ್ಮಣೀಯ ಪ್ರಾಧಾನ್ಯತೆಯನ್ನು ಹಾಗೂ ಚತುರ್ವರ್ಣ ಪದ್ಧತಿಯ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸಿತು. ಹೀಗೆ ಬೌದ್ಧರ ಆಡಳಿತದಲ್ಲಿ ಬ್ರಾಹ್ಮಣರು ಕಡಿಮೆ ದರ್ಜೆ (ಅಂತಸ್ತು) ಹೊಂದಿ ಅವರ ಸ್ಥಾನವನ್ನು ಹೊಸ ಬೌದ್ಧ ಪುರೋಹಿತರು ತೆಗೆದುಕೊಂಡರು, ಜೊತೆಗೆ ಬೌದ್ಧರ ಕಾನೂನು ಶೂದ್ರರ ಸಾಮಾಜಿಕ ಪ್ರತಿಕೂಲದ ಮೇಲೆಯೂ ಪ್ರಭಾವ ಬೀರಿತು. ಪರಂಪರಾನುಗತವಾಗಿ ಶೂದ್ರರು ವ್ಯವಸಾಯಗಾರರು. ಈ ವೃತ್ತಿಯು ಅಷ್ಟೊಂದು ಪ್ರಾಮುಖ್ಯತೆಯನ್ನು ಹೊಂದಿರಲಿಲ್ಲ. ಬೌದ್ಧರ ತತ್ವವಾದ ಅವರು ಅಹಿಂಸೆಯಿಂದ ವಿರೋದಿಸಲ್ಪಟ್ಟರು. ಒಬ್ಬ ಕೃಷಿಕನು ಭೂಮಿಯನ್ನು ಉಳುಮೆ ಮಾಡುವಾಗ ಉದ್ದೇಶರಹಿತವಾಗಿದ್ದರೂ ಕೂಡ ಅಸಂಖ್ಯ ಕ್ರಿಮಿಕೀಟಗಳ ಸಾವಿಗೆ ಕಾರಣನಾಗುತ್ತಾನೆ. ಇದರಿಂದ ಹಿಂಸೆ ಮಾಡಿದಂತಾಗುತ್ತದೆ. ಆದ್ದರಿಂದ ಯಾವ ಶೂದ್ರರ ಕಸಬು ಪ್ರೀತಿ ಅಹಿಂಸಾದಾಯಕವಾಗಿರಲಿಲ್ಲವೋ ಅಂತಹವರು ಹೊಸಧರ್ಮದಲ್ಲಿ ಕೀಳುಸ್ಥಾನವನ್ನು ಹೊಂದಿದರು. 'ಬೌದ್ಧ ಮತ್ತು ಜೈನ ಧರ್ಮಗಳು ಅಹಿಂಸಾ ತತ್ವವನ್ನು ಬೋಧಿಸಿದವು, ಉಳುಮೆ ಮಾಡುವಾಗ ಯಾವ ರೈತ ಕ್ರಿಮಿಕೀಟಗಳನ್ನು ನಾಶ ಮಾಡುತ್ತನೋ ಅವನು ಕೇವಲ ಕೆಳವರ್ಗಕ್ಕೆ ಬರುವುದಲ್ಲದೆ ಕೀಳುಸ್ಥಾನವನ್ನು ಆಕ್ರಮಿಸಿದನು'.

ಬೌದ್ಧರ ಆಡಳಿತ ಕ್ಷೀಣಿಸುತ್ತಿದ್ದಂತೆಯೇ, ಸಾಂಪ್ರದಾಯಿಕ ಜಾತಿಪದ್ಧತಿಯನ್ನು ಆಧರಿಸಿದ ಹಳೆಯ ಸಾಮಾಜಿಕ ವ್ಯವಸ್ಥೆಯು ಪುನರ್‌ಸ್ಥಾಪಿಸಲ್ಪಟ್ಟಿತು. ಬ್ರಾಹ್ಮಣರು ಮತ್ತು ಕ್ಷತ್ರಿಯರು ಮತ್ತೂ ಶ್ರೇಷ್ಟ ಸ್ಥಾನವನ್ನು ಗಳಿಸಿಕೊಂಡರು. ವೈಶ್ಯರು ಹಾಗೂ ಶೂದ್ರರು ಕೆಳಸ್ಥಾನವನ್ನು ಹೊಂದಿದರು.

ಭಾರತದ ಇತಿಹಾಸದಲ್ಲಿ ಜಾತಿ ವ್ಯವಸ್ಥೆಯೊಳಗೆ ಬದಲಾವಣೆ ಕಂಡು ಬಂದ ಮುಂದಿನ ಮುಖ್ಯ ಅವಧಿಯೆಂದರೆ ಮುಸ್ಲಿಮರ ಕಾಲ. ಮುಸ್ಲಿಂ ಆಡಳಿತಗಾರರು ಸಾಮಾನ್ಯವಾಗಿ ಹಿಂದು ವಿರೋಧಿಯಾಗಿದ್ದರು. ಮುಸ್ಲಿಮರು ಜನರ ವ್ಯವಹಾರಗಳಲ್ಲಿ ಅನುಚಿತವಾಗಿ ಪ್ರವೇಶಿಸದಂತೆ ಎಚ್ಚರಿಕೆ ವಹಿಸಿದರು. ಇದು ಆಗ ಅವರು ಒಪ್ಪಿಕೊಂಡತಹ ಪಾಲಿಸಿ. ಈ ದೃಷ್ಟಿಯಿಂದ ಅವರು ಬ್ರಾಹ್ಮಣ ಸಲಹೆಗಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರನ್ನು ನೇಮಿಸಿಕೊಂಡರು. ಕಾರಣ ಪುರೋಹಿತ ವರ್ಗದವರು ಬ್ರಾಹ್ಮಣರಾಗಿದ್ದರು. ಅವರು ಪ್ರಾಚೀನ ರೂಢಿ ಮತ್ತು ಸಂಪ್ರದಾಯಗಳನ್ನು ಬಲ್ಲವರಾಗಿರುತ್ತಾರೆಂಬ ನಂಬಿಕೆ. ಇದರಿಂದಾಗಿ ಅವರು ಜನತೆಯನ್ನು ಸಂಪ್ರದಾಯಗಳಿಗನುಸಾರವಾಗಿ ಆಳಲು ಸಹಾಯವಾಗುತ್ತದೆಂದು ತಿಳಿದಿದ್ದರು. ಬದಲಿಗೆ ಮುಸ್ಲಿಮರಿಗೆ ಪ್ರತಿಸ್ಪರ್ಧಿಯಾಗಿದ್ದಂತಹ ಕ್ಷತ್ರಿಯರು ತಮ್ಮ ಸ್ಥಾನವನ್ನು ಕಳೆದುಕೊಂಡು ರಾಜಧಾನಿಗಳಿಂದ ಗಡಿಪಾರು ಹೊಂದಿದರು.

ಮುಸ್ಲಿಮರ ತಂತ್ರವು ಭಾರತದ ಜಾತಿಪದ್ಧತಿಯ ಮೇಲೆ ಬಹುಮುಖ್ಯವಾದ ಪರಿಣಾಮಗಳನ್ನುಂಟು ಮಾಡಿತು. ಮೇಯ್ನ್, ಪಾವೆಲ್, ವೆಬರ್ ಮತ್ತು ಇತರ ಭಾರತೀಯ ಸಮಾಜದ ತಜ್ಞರು ಅಭಿಪ್ರಾಯಪಡುವಂತೆ ಮುಸ್ಲಿಮರ ಆಡಳಿತದಲ್ಲಿ ಬ್ರಾಹ್ಮಣರು ಸರಿಸಾಟಿಯಿಲ್ಲದಂತಹ ಸಾಮಾಜಿಕ ಪ್ರಾಧಾನ್ಯತೆಯನ್ನು ಅನುಭವಿಸಿದರು. ಪರಂಪರಾಗತ ಪ್ರತಿಸ್ಪರ್ಧಿಗಳ (ಗಡಿಪಾರಾಗಿರುವಂತಹ ಕ್ಷತ್ರಿಯರು) ಗೈರು ಹಾಜರಿಯಿಂದ ಆಡಳಿತಗಾರರ ಸಲಹೆಗಾರರಾಗಿ ಶ್ರೇಷ್ಠ ಸ್ಥಾನಮಾನವನ್ನು ಹೊಂದಿದ ಬ್ರಾಹ್ಮಣರು ಅತ್ಯುನ್ನತ ಸ್ಥಾನವನ್ನು ಹೊಂದಿದರು.

ಮ್ಯಾಕ್ಸ್‌ವೆಬರ್‌ರವರು ಮುಸ್ಲಿಮರ ಕಾಲದಲ್ಲಿ ಬ್ರಾಹ್ಮಣರ ಪ್ರಾಧಾನ್ಯತೆಯ ಬಗ್ಗೆ ಹೇಳಿರುವುದನ್ನು ಟಿಪ್ಪಣಿ ಮಾಡಬಹುದು. ''ಹೊರಗಿನವರ ದಬ್ಬಾಳಿಕೆ ಮತ್ತು ದಾಳಿಯಿಂದಾಗಿ ಬ್ರಾಹ್ಮಣರ ಅಧಿಕಾರದ ಏಕಸ್ವಾಮ್ಯತೆಗೆ ಅನುಕೂಲವಾಯಿತು. ಬ್ರಾಹ್ಮಣರ ಅಧಿಕಾರವು ದಾಳಿಕಾರರ ಕಾಲದಲ್ಲಿ ಅಧಿಕವಾಯಿತು. ಮತಭ್ರಾಂತತೆಯ ಇಸ್ಲಾಂ ಪ್ರಚಾರದ ಅವಧಿಯಲ್ಲಿ ತಮ್ಮಷ್ಟಕ್ಕೆ ತಾವೇ ರಾಜಿನಾಮೆಯನ್ನು ನೀಡಿ ಹಿಂದು ಸಂಸ್ಕೃತಿಯ ಮುಂದುವರೆದ ಅಸ್ತಿತ್ವವನ್ನು ಒಪ್ಪಿಕೊಂಡರು. ನಿಜವಾಗಿಯೂ ಪುರೋಹಿತ್ಯ ಅಧಿಕಾರವು ವಿದೇಶಿ ಮುಂದಾಳತ್ವದ ಅಡಿಯಲ್ಲಿ ಜಯಶಾಲಿಗಳನ್ನು ತಿರಸ್ಕರಿಸಿ ವಿದೇಶಿ ದೊರೆಗಳಿಗೆ ಸ್ವದೇಶೀಕರಣದ ಉಪಕರಣವಾಯಿತು.''

ಇಂತಹ ಸಮಯದಲ್ಲಿ ಜಾತಿಪದ್ಧತಿಯ ಮೇಲೆ ಮುಸ್ಲಿಂ ಆಡಳಿತದ ಪ್ರಭಾವದ ಬಗೆಗೆ ಮೇಯ್ನ್ ಮತ್ತು ಮ್ಯಾಕ್ಸ್ ವೆಬರ್‌ರವರ ದೃಷ್ಟಿಕೋನಗಳು ಬಹು ಆಸಕ್ತಿಕರವಾಗಿವೆ. ಮುಸ್ಲಿಮರ ಆಗಮನವು ಭಾರತೀಯ ಸಾಮಾಜಿಕ ಸಂಘಟನೆಯ ಮೇಲೆ ಹಾಗೂ ಜಾತಿ ಪದ್ಧತಿಯ ಮೇಲೆ ಹೆಚ್ಚು ಪರಿಣಾಮವನ್ನು ಬೀರಲಿಲ್ಲ. ಅವರ ರಾಜಕೀಯವು ಕೇವಲ ಪಟ್ಟಣಗಳ ಎಲ್ಲೆಗೆ ಸಂಬಂಧಿಸಿದ್ದು ಸಮಾಜದ ಉನ್ನತ ಸ್ಥರದ ಮೇಲೆ ಮಾತ್ರ ಹೆಚ್ಚು ಪ್ರಭಾವವನ್ನು ಬೀರಿತು. ಮುಸ್ಲಿಮರ ಆಗಮನ ಮತ್ತು ರಾಜರುಗಳ ಸಲಹೆಗಾರರಾಗಿ ಬ್ರಾಹ್ಮಣರ ನೇಮಕ ಮತ್ತು ಕ್ಷತ್ರಿಯರ ಗಡಿಪಾರು ಇವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳೊಂದಿಗೆ ಜಾತಿಪದ್ಧತಿಯು ಗ್ರಾಮೀಣ ಪ್ರದೇಶಗಳಲ್ಲಿ ಬಹುವಾಗಿ ಪ್ರವೇಶ ಮಾಡಿ ಸಾಮಾಜಿಕ ಸಂಘಟನೆಯ ಮೇಲೆ ಪರಿಣಾಮವನ್ನು ಬೀರಿತು.

'ಮೇಯ್ನ್'ಅವರ ಅಭಿಪ್ರಾಯ ಹೀಗಿದೆ : ಭಾರತೀಯ ಸಮಾಜವು ಅನೇಕ ಸಮಾಂತರ ಸ್ಥರಗಳಾಗಿ ವಿಭಜಿಸಲ್ಪಟ್ಟು ಪ್ರತಿಯೊಂದು ಒಂದು ಜಾತಿಯನ್ನು ಪ್ರತಿನಿಧಿಸಿದ್ದು ಒಂದು ದುರಂತ. ಬ್ರಾಹ್ಮಣೀಯ ಸಿದ್ಧಾಂತವು ಎರಡು ಉತ್ತಮಜಾತಿಗಳನ್ನು ಹೊರತಾಗಿ ಯಾವಾಗ ವಸ್ತುನಿಷ್ಠವಾಗಿರುತ್ತದೆ ಎಂಬುದು ಬಹಳ ಅನುಮಾನಾಸ್ಪದವಾದುದು. ಭಾರತವು ಬ್ರಾಹ್ಮಣರೆಂಬ ಒಂದು ಪುರೋಹಿತ ವರ್ಗವನ್ನು ಒಳಗೊಂಡಿದೆ, ಸಂಕುಚಿತ ಅರ್ಥದಲ್ಲಿ ಇದು ಎಲ್ಲಕ್ಕಿಂತಲೂ ಶ್ರೇಷ್ಟವಾಗಿದೆ. ಕೆಲವು ಅರಸು ಮನೆಗಳನ್ನು ಮತ್ತು ಕೆಲವು ಬುಡಕಟ್ಟು ವರ್ಗದವರು, ಇದರಿಂದ ಹೊರತುಪಡಿಸಿ ಗ್ರಾಮ ಸಮುದಾಯಗಳು ಮತ್ತು ವೃತ್ತಿ ಸಂಘಗಳು ಇವು ನಮ್ಮಲ್ಲಿ ಕೂಡ ಅಭಿವೃದ್ಧಿ ಹೊಂದಿದವು. ಕೆಲವು ಹಕ್ಕು ಬಾಧ್ಯತೆಗಳು ಪಡೆದ ಇವು ಬಹುವಾಗಿ ಬ್ರಾಹ್ಮಣೀಯ ಬರಹಗಾರರು ಗುರುತಿಸಿದ ದ್ವಿತೀಯ ಅಥವಾ ತೃತೀಯ ಜಾತಿಗಳಾಗಿವೆ. ಬೇರೆ ರೀತಿಯಲ್ಲಿ ಜಾತಿಯು ಕೇವಲ ಒಂದು ವ್ಯಾಪಾರ ಅಥವಾ ಕಸುಬಿಗೆ ಕೊಟ್ಟಂತಹ ಹೆಸರು.

ಬ್ರಾಹ್ಮಣೀಯ ಸಿದ್ಧಾಂತದ ನಿಜವಾದ ಪರಿಣಾಮವೆಂದರೆ : ವರ್ಗಗಳ ಸ್ವಾಭಾವಿಕ ವಿಂಗಡನೆ. ಇದು ಅಪಾರ ಸಂಖ್ಯೆಯ ಸ್ವತಂತ್ರ, ಸ್ವಕ್ರಿಯಾತ್ಮಕ ಸಂಘಟಿತ ಸಮೂಹಗಳಾಗಿ ವಿಂಗಡಿಸಿತು. ಉದಾ : ವ್ಯಾಪಾರ, ಉತ್ಪಾದನೆ, ಮತ್ತು ಸಾಗುವಳಿ ಮಾಡುವವರು ಇತ್ಯಾದಿ.

ಮ್ಯಾಕ್ಸ್‌ವೆಬರ್ ಮತ್ತು ಇಬೆಟಸನ್‌ರವರಿಬ್ಬರು ಇದರ ಬಗ್ಗೆ ಒಂದೇ ದೃಷ್ಟಿಕೋನವನ್ನು ಹೊಂದಿದ್ದರು. ಭಾರತೀಯ ಜಾತಿ ಪದ್ಧತಿಯ ಮೇಲೆ ಮುಸ್ಲಿಮರ ಆಡಳಿತ ಬೀರಿದ ಪ್ರಭಾವದ ಬಗ್ಗೆ ಮ್ಯಾಕ್ಸ್ ವೆಬರ್‌ರವರು ಹೀಗೆ ಬರೆಯುತ್ತಾರೆ : ಇಸ್ಲಾಂರ ವಿಜಯವು ಕ್ಷತ್ರಿಯರ ರಾಜಕೀಯ, ಸೈನಿಕ ಶಕ್ತಿಯನ್ನು ಚೂರು ಮಾಡಿತು. ಆದರೆ ಬ್ರಾಹ್ಮಣರನ್ನು ಸಾಮಾಜಿಕ ನಿಯಂತ್ರಣದ ಉಪಕರಣವಾಗಿ ಬಳಸಿಕೊಳ್ಳಲಾಯಿತು. ಸಾಂಪ್ರದಾಯಿಕ ಸಾಹಿತ್ಯ, ಬ್ರಾಹ್ಮಣರ ವಿಶೇಷ ಹಕ್ಕು ಮತ್ತು ಶಾಸನಗಳು ನಂತರ ಬದಲಾದವು.

ಇಬೆಟಸನ್‌ರವರು ಈ ರೀತಿಯಾಗಿ ಅಭಿಪ್ರಾಯಪಡುತ್ತಾರೆ : ಮೊಘಲರ ವಿಜಯವು ಹಿಂದುಗಳ ಸ್ವಾಭಾವಿಕ ನಾಯಕರುಗಳನ್ನು ಮತ್ತು ರಜಪೂತರನ್ನು ಪರಾಭವಗೊಳಿಸಿತು. ಬ್ರಾಹ್ಮಣರ ನಾಯಕತ್ವದಲ್ಲಿ ಜಾತಿ ಸಮಿತಿಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾತಿ ಪದ್ಧತಿಯ ಮೇಲೆ ಉಂಟಾದ ಬದಲಾವಣೆಗಳ ಮುಂದಿನ ಐತಿಹಾಸಿಕ ಅವಧಿಯೆಂಭರ ಬ್ರಿಟೀಷರ ಕಾಲ. ಹಿಂದಿನ ಮುಸ್ಲಿಂ ಅಧಿಕಾರಿಗಳಂತೆ ಬ್ರಿಟೀಷರು ಭಾರತೀಯರನ್ನು ಅವರ ಹಳೆಯ ಕಾಲದ ರೂಢಿ ಮತ್ತು ಸಂಪ್ರದಾಯಗಳಿಗನುಸಾರವಾಗಿ ಆಳಲು ಪ್ರಾರಂಭಿಸಿದರು. ಆದ್ದರಿಂದ ಅವರು ಬ್ರಾಹ್ಮಣರನ್ನು ತಮ್ಮ ಸಲಹೆಗಾರರಾಗಿಯೇ ಉಳಿಸಿಕೊಂಡರು. ಇದು ಅನಿವಾರ್ಯವಾಯಿತು. ಏಕೆಂದರೆ ಬುದ್ಧಿವಂತರಾದ ಬ್ರಾಹ್ಮಣರು ಪಾಶ್ಚಿಮಾತ್ಯ ಶಿಕ್ಷಣವನ್ನು ಶೀಘ್ರವಾಗಿ ಗ್ರಹಿಸುತ್ತಿದ್ದವರಲ್ಲಿ ಮೊದಲಿಗರಾಗಿದ್ದರು. ಅವರು ಬ್ರಿಟಿಷರೊಂದಿಗೆ ಆಡಳಿತದ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದರು. ಹೀಗೆ ಆಡಳಿತದಲ್ಲಿ ಪಾಲುದಾರರಾಗಿ ಬ್ರಿಟೀಷ್ ಆಡಳಿತದ ಪ್ರಾರಂಭದ ದಶಕಗಳಲ್ಲಿ ಬ್ರಾಹ್ಮಣರು ಉನ್ನತ ಸ್ಥಾನಮಾನವನ್ನು ಅನುಭವಿಸಿದರು. ಈ ಲೋಕ ವ್ಯವಹಾರದ ಸ್ಥಾನಮಾನವನ್ನು ಉಪಯೋಗಿಸಿಕೊಂಡು ತಮ್ಮ ಸಾಮಾಜಿಕ ಪ್ರಾಧಾನ್ಯತೆಯನ್ನು ಅಧಿಕಗೊಳಿಸಿಕೊಂಡರು.

19ನೇ ಶತಮಾನದ ಮಧ್ಯಭಾಗದ ಅವಧಿಯಲ್ಲಿ ಬ್ರಾಹ್ಮಣರು ಮತ್ತು ಬ್ರಿಟಿಷರ ನಡುವಿನ ಸಂಬಂಧ ಹದಗೆಟ್ಟು ಅವರಿಬ್ಬರ ನಡುವೆ ಪೈಪೋಟಿ ಪ್ರಾರಂಭವಾಯಿತು. ಇದು ಸಾಂಪ್ರದಾಯಿಕ ಆಡಳಿತಗಾರರು ಮತ್ತು ಪುರೋಹಿತರ ನಡುವಿನ ಪರಂಪರಾಗತ ಪೈಪೋಟಿಯು ಪುನರ್ ಚೇತನ ಪಡೆದಂತೆ ಕಂಡುಬಂದಿತು. ಆದರೆ ಈ ಅವಧಿಯಲ್ಲಿ ಬ್ರಿಟೀಷರು ಮಾತ್ರ ಆಡಳಿತಗಾರರಾಗಿದ್ದರು. ಬ್ರಾಹ್ಮಣ ಬುದ್ಧಿಜೀವಿಗಳು ಕೂಡಲೇ ವ್ಯಕ್ತವಾದ ಪ್ರಜಾಪ್ರಭುತ್ವದ ಪ್ರಜ್ಞೆಯನ್ನು ಪಾಶ್ಚಿಮಾತ್ಯ ಶಿಕ್ಷಣದ ಮೂಲಕ ಗ್ರಹಿಸಿಕೊಂಡರು. ಈ ಹೊಸ ಆದರ್ಶಗಳನ್ನು ಮೈಗೂಡಿಸಿಕೊಂಡ ಬ್ರಾಹ್ಮಣರು ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸುವ ಗುರಿಯನ್ನು ಹೊಂದಿ ಚಳುವಳಿಯನ್ನು ಪ್ರಾರಂಭಿಸಿದರು. ಈ ಚಳುವಳಿಯ ನಂತರ ಬ್ರಿಟೀಷರು ಬ್ರಾಹ್ಮಣರನ್ನು ಅನುಮಾನದಿಂದ ನೋಡಲು ಪ್ರಾರಂಭಿಸಿದರು ಅಲ್ಲಿಂದ ಮುಂದಕ್ಕೆ ಬ್ರಿಟೀಷರು ಬ್ರಾಹ್ಮಣರ ಪ್ರಭಾವವನ್ನು ಕಡಿಮೆಗೊಳಿಸಲು ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ರೂಪಿಸಿದರು.

ಈ ಗುರಿಯನ್ನು ಮುಟ್ಟಲು ಬ್ರಿಟೀಷರು ತಮ್ಮ ಕುಖ್ಯಾತ ಧೋರಣೆ ಒಡೆದು ಆಳುವ ನೀತಿಯನ್ನು ಜಾರಿಗೆ ತಂದರು. ಅವರು ಬ್ರಾಹ್ಮಣರನ್ನು ನೇರವಾಗಿ ಎದುರಿಸಲಿಲ್ಲ. ಬದಲಿಗೆ ಅವರು ಬ್ರಾಹ್ಮಣೇತರರಿಗೆ ಪ್ರೋತ್ಸಾಹವನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಮುಖ್ಯವಾಗಿ ನೀಡಿದರು. ಉನ್ನತ ಶಿಕ್ಷಣ ಕೊಡುವ ದೃಷ್ಟಿಯಿಂದ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ತೆರೆದು ಅಗತ್ಯ ಸೌಲಭ್ಯಗಳನ್ನು ಒದಗಿಸಿದರು. ಸರಕಾರ ಸೇವೆಗಳಲ್ಲಿ ಬ್ರಾಹ್ಮಣೇತರರಿಗೆ ಸ್ಥಳಾವಕಾಶಗಳನ್ನು ಮೀಸಲಿರಿಸಿದರು. ಈ ರೀತಿಯಾಗಿ ಬ್ರಾಹ್ಮಣೇತರರಿಗೆ ಪ್ರೋತ್ಸಾಹ ನೀಡಿ ಬಾಹ್ಮಣರ ವಿರುದ್ಧ ಮಾತನಾಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತೆ ಮಾಡಿದರು. ಬ್ರಿಟೀಷರು ಹಳ್ಳಿಗಳಲ್ಲಿ ರೈತರನ್ನು ವಿವಿಧ ರೀತಿಯಲ್ಲಿ ಪ್ರೋತ್ಸಾಹಿಸಿದರು. ಹೀಗೆ ಅವರು ಗೊಂದಲ ಮತ್ತು ಹೋರಾಟದ ಬೀಜವನ್ನು ಬಿತ್ತಿದರು. ಬ್ರಿಟೀಷ್ ಆಡಳಿತಗಾರರ ಗುರಿಗಳು ಮತ್ತು ಪ್ರಯತ್ನಗಳು ವಿದೇಶಿ ಮಿಷನರಿಗಳಿಂದ ಸಹಾಯ ಪಡೆಯುತ್ತಿದ್ದಂತಹ ಬ್ರಾಹ್ಮಣೀಯ ಪ್ರಾಧಾನ್ಯತೆಯನ್ನು ನಿರ್ಭಂದದಲ್ಲಿಡುವುದೇ ಆಗಿತ್ತು. ಮತಾಂತರ ಚಟುವಟಿಕೆಗಳಲ್ಲಿ ತೊಡಗಿದ್ದ ಕ್ರೈಸ್ತ ಮಿಷನರಿಗಳು ಬ್ರಾಹ್ಮಣರು ಜನ ಸಮೂಹದ ಮೇಲೆ ಹೊಂದಿರುವ ಹಿಡಿತವನ್ನು ತಪ್ಪಿಸದ ಹೊರತು ಮತಾಂತರ ಬಹು ಕಠಿಣ ಎಂಬುದನ್ನು ಮನವರಿಕೆ ಮಾಡಿಕೊಂಡರು. ಇದರಿಂದ ಮಿಷನರಿಗಳು ಬ್ರಾಹ್ಮಣರನ್ನು ಹತೋಟಿಯಲ್ಲಿಡಲು ಚಳುವಳಿಯನ್ನು ಹೂಡಲು ತಯಾರಾದವು.

1857ರಲ್ಲಿ ಮೊದಲನೆಯದಾಗಿ ಭಾರತೀಯ ಸೈನಿಕರು ಬ್ರಿಟೀಷರ ವಿರುದ್ಧ ಸಿಡಿದೆದ್ದರು. ಇದರಿಂದ ಬ್ರಿಟಿಷ್ ಪಾರ್ಲಿಮೆಂಟ್ ತುಂಬಾ ಆಘಾತವನ್ನು ಅನುಭವಿಸಿತು. ಅಧಿಕವಾದ ಹಣ ವ್ಯಯವಾಗಿ ತುಂಬಾ ಮಾನವ ಜೀವಿಗಳು ನಾಶ ಹೊಂದಿದವು. ಕ್ರಾಂತಿಯ ಕಾರಣ—ಪರಿಣಾಮಗಳನ್ನು ಅಧ್ಯಯನ ಮಾಡಲು ಸಮಿತಿಯೊಂದನ್ನು ನೇಮಕ ಮಾಡಲಾಯಿತು, ಅದು ಕಂಡುಕೊಂಡ ಅಂಶಗಳಲ್ಲಿ ಮುಖ್ಯವಾದುದು ದೆಂದರೆ ಬಂಗಾಳದ ಸೈನ್ಯವು ಕ್ರಾಂತಿಯ ಮೊದಲ ಕಿಡಿಯಾಗಿದ್ದು ಅದು ಸುಮಾರು ಶೇಕಡಾ 50ರಷ್ಟು ಬ್ರಾಹ್ಮಣರನ್ನು ಒಳಗೊಂಡಿತ್ತು. ಆದ್ದರಿಂದ ಸಮಿತಿಯು ಭಾರತೀಯ ಸೈನ್ಯವನ್ನು ಜಾತಿ ಅಂಶಗಳ ಆಧಾರದ ಮೇಲೆ ವಿಭಜಿಸಲು ಶಿಫಾರಸು ಮಾಡಿತು. ಅನಿವಾರ್ಯವಾಗಿ ಮುಂದಿನ ನೇಮಕಾತಿಯಲ್ಲಿ ಬ್ರಾಹ್ಮಣೇತರರಿಗೆ ಬ್ರಾಹ್ಮಣರಿಗಿಂತ ಹೆಚ್ಚಿನ ಆಧ್ಯತೆಯನ್ನು ಕೊಡಲಾಯಿತು. ಹೀಗೆ 1947ರ ಸಂದ್ಯಾಕಾಲದಲ್ಲಿ ಬ್ರಿಟೀಷರು ಭಾರತವನ್ನು ಬಿಟ್ಟಾಗ ಜಾತಿ ಪೈಪೋಟಿಯ ಬೀಜವು ಸಸಿಯಾಗಿ ಬ್ರಿಟೀಷರಿಂದ ನೀರೆರೆಯಲ್ಪಟ್ಟಿತು. ಅದರ ಬೇರುಗಳು ಭಾರತೀಯ ಮಣ್ಣಿನಲ್ಲಿ ಆಳವಾಗಿ ಸ್ಥಾಪಿಸಲ್ಪಟ್ಟವು.

ಜಾತಿ ಮತ್ತು ಜಾತಿಯ ಚಲನಾತ್ಮಕತೆ

ಇತ್ತೀಚಿನ ಸಂಶೋಧಕರು ಜಾತಿ ಮತ್ತು ಅದರ ಚಲನಾತ್ಮಕತೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರಿಸಿದ್ದಾರೆ. ಸಂಶೋಧಕರು ಇಂದು ಫಲಪ್ರದವಾದ ಫಲಿತಾಂಶವನ್ನು ಕಂಡುಕೊಂಡಿದ್ದಾರೆ. ಎಲ್ಲರೂ ಸಹ ಭಾರತದಲ್ಲಿ ಜಾತಿಯು ಇಂದಿಗೂ ಬಲವಾಗಿ ಬೇರೂರಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಜಾತಿಯು ಭಾರತೀಯ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಇತರ ಅಂಶಗಳಲ್ಲಿ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದೆ ಎಂಬುದನ್ನು ಸ್ಥೂಲವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾತಿ ಚಲನೆಯ ಕೆಲವು ಮುಖ್ಯಾಂಶಗಳನ್ನು ಪರೀಕ್ಷಿಸಿದ್ದಾರೆ. ಜಾತಿಯ ಬಗ್ಗೆ ಕೆಲವು ಮುಖ್ಯ ಸಂಶೋಧನೆಗಳನ್ನು ವಿವಿಧ ವಿದ್ವಾಂಸರು ಮಾಡಿರುವುದನ್ನು ಈ ಕೆಳಗೆ ನೋಡಬಹುದು.

ಜಾತಿಯನ್ನು ಅಧ್ಯಯನ ಮಾಡುವಲ್ಲಿ ಶ್ರೀನಿವಾಸ್‌ರವರು ಹೆಚ್ಚು ಪ್ರಾಮುಖ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ಅವುಗಳೆಂದರೆ ಪ್ರಧಾನ ಜಾತಿಯ ಕಲ್ಪನೆ, ಸಂಸ್ಕೃತೀಕರಣ, ಪಾಶ್ಚಿಮಾತ್ಯೀಕರಣ ಇತ್ಯಾದಿ, ಇವು ಜಾತಿಚಲನೆಯನ್ನು ಅಧ್ಯಯನ ಮಾಡುವಲ್ಲಿ ಬಹು ಪ್ರಯೋಜನಕಾರಿಯಾಗಿದೆ.

ಪ್ರಧಾನ ಜಾತಿಯ ಕಲ್ಪನೆಯು ಶ್ರೀನಿವಾಸ್‌ರವರಿಂದ ಕೊಡಲ್ಪಟ್ಟಿದ್ದು ಇದನ್ನು ಮೈಸೂರಿನ ಬಳಿಯಿರುವ ರಾಮಪುರ ಗ್ರಾಮವನ್ನು ಅಧ್ಯಯನ ಮಾಡುವಾಗ ಕಂಡು ಕೊಂಡರು. ಶ್ರೀನಿವಾಸ್‌ರವರು ಪ್ರಸಿದ್ಧಿಯಾಗಿರುವ ಅಭಿಪ್ರಾಯದ ಬದಲಿಗೆ ಬ್ರಾಹ್ಮಣರು ಯಾವಾಗಲೂ ಜಾತಿಯ ಸ್ಥಳೀಯ ಏಣಿ ಶ್ರೇಣಿಯಲ್ಲಿ ಉತ್ತಮ ಸ್ಥಾನವನ್ನೇ ಪಡೆಯುವುದಿಲ್ಲ ಎಂಬುದನ್ನು ಖಚಿತಪಡಿಸಿದ್ದಾರೆ. ಈ ಪ್ರಧಾನ ಸ್ಥಾನವು ಆರ್ಥಿಕ ಸಂಪತ್ತು, ರಾಜಕಾರಣ ಶಕ್ತಿ ಅಥವಾ ಸಾಮಾಜಿಕ ಘನತೆ ಮುಂತಾದವುಗಳ ರೂಪದಲ್ಲಿದ್ದು ಇತರೆ ಜಾತಿಗಳಿಂದಲೂ ಅನುಭವಿಸಲ್ಪಡುತ್ತವೆ ಎಂದು ಹೇಳಿದ್ದಾರೆ. ಉದಾಹರಣೆ ; ರಾಮಪುರ ಗ್ರಾಮದಲ್ಲಿ ಉನ್ನತ ಸ್ಥಾನ ಮಾನವನ್ನು ಅನುಭವಿಸುತ್ತಿರುವ ಜಾತಿ ಒಕ್ಕಲಿಗರು ; ಇವರು ಬ್ರಾಹ್ಮಣರಿಗಿಂತಲೂ ಉನ್ನತ ಸ್ಥಾನ ಮಾನವನ್ನು ಹೊಂದಿದ ಜಾತಿಯಾಗಿದೆ. ಇವರು ರೈತರು. ಶ್ರೀನಿವಾಸ್‌ರವರ ಪ್ರಕಾರ ಒಂದು ಪ್ರಧಾನ ಜಾತಿಯು ಮೂರು ಗುಣಲಕ್ಷಣಗಳನ್ನು ಹೊಂದಿರುತ್ತದೆ. ಅವುಗಳೆಂದರೆ ಗ್ರಾಮದ ಒಂದು ನಿರ್ದಿಷ್ಟ ಜಾತಿಯ ಸಂಖ್ಯಾಬಲದ ಪ್ರತಿನಿಧಿತ್ವ, ಸಂಪತ್ತು ಮತ್ತು ರಾಜಕೀಯ ಅಧಿಕಾರ, ನಿರ್ದಿಷ್ಟ ಪ್ರತಿನಿಧಿತ್ವವೆಂದರೆ ಸಾಕಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವುದು, ಸಂಪತ್ತು : ವಿಶೇಷವಾಗಿ ಭೂಮಿಯನ್ನು ಹೊಂದಿರುವಂತಹದ್ದು. ಇದು ಒಂದು ನಿರ್ದಿಷ್ಟ ಜಾತಿಯ ಪ್ರಾಬಲ್ಯಕ್ಕೆ ಕಾರಣವಾಗಿರುತ್ತದೆ. ಇದರ ಜೊತೆಗೆ ಜಾತಿಯ ಏಣಿಶ್ರೇಣಿಯಲ್ಲಿ ಒಂದು ಜಾತಿಯು ಹೊಂದಿರುವ ಸ್ಥಾನಮಾನ ಕೂಡ ಬಹು ಮುಖ್ಯವಾದುದು. ಸಾಮಾನ್ಯವಾಗಿ ಒಂದು ಪ್ರಧಾನ ಜಾತಿಯು ಜಾತಿಯ ಏಣಿಶ್ರೇಣಿಯಲ್ಲಿ ಮೇಲಿನ ಸ್ಥಾನವನ್ನು ಹೊಂದಿರುತ್ತದೆ. ಶ್ರೀನಿವಾಸ್‌ರವರ ಪ್ರಕಾರ ಅಸ್ಪೃಶ್ಯ ಜನಾಂಗವು ಭಾರತದ ಯಾವ ಭಾಗದಲ್ಲಿಯೂ ಪ್ರಧಾನ ಸ್ಥಾನವನ್ನು ಹೊಂದಿಲ್ಲ. ಮೂರನೆಯ ಲಕ್ಷಣಕ್ಕೆ ಸಂಬಂಧಿಸಿದಂತೆ ರಾಜಕೀಯ ಶಕ್ತಿಯು ಸಾಮಾನ್ಯವಾಗಿ ಪ್ರಧಾನ ಜಾತಿಯ ಲಕ್ಷಣವಾಗಿರುತ್ತದೆ. ಯಾವ ಒಂದು ನಿರ್ದಿಷ್ಟ ರಾಜ್ಯ ಅಥವಾ ಪ್ರದೇಶದಲ್ಲಿ ಒಂದು ಜಾತಿಯು ಪ್ರಬಲವಾಗಿರುತ್ತದೆಯೋ ಅಂತಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜ್ಯದ ಹಳ್ಳಿಗಳಲ್ಲಿ ಪ್ರಧಾನ ಜಾತಿಯು ಬಹು ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿರುತ್ತದೆ. ಗ್ರಾಮದ ಇತರೆ ಜಾತಿಗಳು ಪ್ರಧಾನ ಜಾತಿಗೆ ಅಧೀನವಾಗಿರುತ್ತವೆ.

ಶ್ರೀನಿವಾಸ್‌ರವರ ಪರಿಕಲ್ಪನೆಗಳಾದ ಸಂಸ್ಕೃತೀಕರಣ ಮತ್ತು ಪಾಶ್ಚಿಮಾತ್ಯೀಕರಣಗಳು ಕೂಡ ಜಾತಿ ಪದ್ಧತಿಯಲ್ಲಿನ ಚಲನೆಯ ವಿಶ್ಲೇಷಣೆಯಲ್ಲಿ ಬಹು ಉಪಯುಕ್ತವಾದವುಗಳು. ಜಾತಿ ಪದ್ಧತಿಯು ಕಠಿಣ ಅಥವಾ ಜಡ ಪದ್ಧತಿಯಲ್ಲ ಜಾತಿಯಲ್ಲಿ ಚಲನೆಯು ಸಹ ಇರುತ್ತದೆ. ಏನೇ ಆದರೂ ಜಾತಿ ಪದ್ಧತಿಯ ಸಮಾಜದಲ್ಲಿ ಸಾಮಾಜಿಕ ಚಲನೆಯು ಇತರೆ ಸಮಾಜಗಳ ಚಲನೆಗಿಂತಲೂ ಭಿನ್ನವಾಗಿರುತ್ತದೆ.

ಜಾತಿಯಲ್ಲಿ ಸಾಮಾಜಿಕ ಚಲನೆಯ ಘಟಕವು ವ್ಯಕ್ತಿಯೂ ಅಲ್ಲ ಅಥವಾ ಕುಟುಂಬವೂ ಅಲ್ಲ, ಬದಲಿಗೆ ಇಡೀ ಜಾತಿ ಸಮೂಹ. ಜಾತಿಪದ್ಧತಿಯ ಏಣಿಶ್ರೇಣಿಯಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬ ಮೇಲೆ ಏರುವುದಕ್ಕಾಗಲಿ ಅಥವಾ ಕೆಳಗೆ ಇಳಿಯುವುದಕ್ಕಾಗಲಿ ಸಾಧ್ಯವಿಲ್ಲ. ಒಂದು ಜಾತಿ ವ್ಯವಸ್ಥೆಯೊಳಗೆ ಒಬ್ಬ ವ್ಯಕ್ತಿ ತನ್ನ ವೈಯುಕ್ತಿಕ ಶ್ರೇಣಿಯನ್ನು ತಾನೇ ನಿರ್ಧರಿಸುವ ಹಾಗಿಲ್ಲ. ಆದರೆ ಆತನು ಒಂದು ನಿರ್ದಿಷ್ಟ ಸಮೂಹಕ್ಕೆ ಸೇರಿದ ಸದಸ್ಯನಾಗಿ ಅದು ನಿರ್ದಿಷ್ಟಪಡಿಸಿದ ಪರಂಪರಾಗತ ಸ್ಥಾನಮಾನ ಪದ್ಧತಿಯಂತೆ ನಿರ್ದಿಷ್ಟ ಸ್ಥಾನಮಾನವನ್ನು ಹೊಂದುತ್ತಾನೆ. ಜಾತಿಪದ್ಧತಿಯಲ್ಲಿ ಚಲನೆಯು ಸಮೂಹ ಪ್ರವೃತ್ತಿಯಾಗಿರುತ್ತದೆ.

ಸಾರೋಕಿನ್‌ರವರು ಈ ಪ್ರವೃತ್ತಿಯನ್ನು ಚರ್ಚಿಸುತ್ತಾ ತಮ್ಮ ಪುಸ್ತಕ ''ಸಾಮಾಜಿಕ ಮತ್ತು ಸಾಂಸ್ಕೃತಿಕ ಚಲನೆ''Social and Cultural Mobility ಎಂಬುದರಲ್ಲಿ ಹಲವಾರು ಸಿದ್ಧಾಂತಗಳನ್ನು ಚರ್ಚಿಸಿದ್ದಾರೆ. ಇವರು ಚಲನೆಯು ಜನಸಾಂಖಿಕ ನಿರ್ಮಾತದಿಂದ ಮೇಲಿನ ಸ್ಥಾನದಲ್ಲಿ ಮೇಲ್ವರ್ಗಗಳ ಕಡಿಮೆ ಫಲಿತತೆಯಿಂದ ಹೊರ ಬಂದುದಾಗಿದೆ, ಇವರು ಚಲನೆಯು ತಂದೆ ತಾಯಿಗಳು ಮತ್ತು ಮಕ್ಕಳ ನಡುವಿನ ಅಸಮತೋಲನದಿಂದಾಗಿ ಸಂಭವಿಸುತ್ತದೆ. ಹೆಚ್ಚು ಬುದ್ಧಿವಂತರಾದ ತಂದೆತಾಯಿಗಳು ಹೆಚ್ಚು ಸಾಧನೆಯನ್ನು ಮಾಡಿದವರು ಅಸಮರ್ಥ ಮಕ್ಕಳನ್ನು ಪಡೆದು ಆ ಮಕ್ಕಳು ತಮ್ಮ ತಂದೆ ತಾಯಿಗಳು ಪಡೆದ ಸ್ಥಾನಮಾನವನ್ನು ಗಳಿಸುವಲ್ಲಿ ವಿಫಲರಾದಾಗ ಅವರು ಏಣಿಶ್ರೇಣಿಯಲ್ಲಿ ಕೆಳಗೆ ಬರುತ್ತಾರೆ, ಬದಲಿಗೆ ಸಾಮಾನ್ಯ ತಂದೆ ತಾಯಿಗಳು ಸಾಮಾನ್ಯ ಜೀವನವನ್ನು ನಡೆಸಿದಂತವರು ಹೆಚ್ಚು ಪ್ರತಿಭೆಯುಳ್ಳಂತಹ ಮಕ್ಕಳನ್ನು ಪಡೆದಾಗ, ಹೀಗೆ ವಿಶೇಷ ಜ್ಞಾನ್ಮ ಹೊಂದಿದ ಮಕ್ಕಳು ಸಾಮಾಜಿಕ ಏಣಿಶ್ರೇಣಿಯಲ್ಲಿ ಮೇಲೇರುತ್ತಾರೆ. ಸಾಮಾಜಿಕ ಚಲನೆಯಲ್ಲಿನ ಸಾಮಾಜಿಕ ಆಯ್ಕೆಯ, ಸಂಘಟನೆಯ ಪಾತ್ರದ ಇನ್ನೊಂದು ಸಿದ್ಧಾಂತವು ರೂಪಿಸಲ್ಪಟ್ಟಿದೆ. ಎಲ್ಲಾ ಸಮಾಜಗಳಲ್ಲಿಯೂ ಇಂತಹ ಸಂಘಟನೆಯ ಕಾರ್ಯವನ್ನು ನೋಡಬಹುದು, ಸಮಾಜದ ವಿವಿಧ ಸಾಮಾಜಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಾನಮಾನಗಳು ನಿರ್ದಿಷ್ಟವಾದ ಜನರಿಂದ ತುಂಬಲ್ಪಟ್ಟು ನಿರ್ವಹಿಸಲ್ಪಡುತ್ತವೆ. ಈ ಸಂಘಟನೆಯು ಜನರ ಪರಿಶೋಧಿಸುವ ಆಯ್ಕೆ ಮತ್ತು ಸ್ಥಿರೀಕರಣವನ್ನು ಅವರ ಅರ್ಹತೆ ಮತ್ತು ನ್ಯೂನತೆಗಳಿಗನುಸಾರವಾಗಿ ನಿಶ್ಚಿತಗೊಳಿಸುತ್ತದೆ. ಹೀಗೆ ಪ್ರತಿಗಿಯೊಂದು ಸಮಾಜದಲ್ಲಿಯೂ ಈ ಅಂಶಗಳ ಪರಿಣಾಮದಿಂದಾಗಿ ನಾವು ನಿರಂತರವಾದ ಲಂಭ ಹಾಗೂ ಸಮನಾಂತರವಾದ ಚಲನೆಯನ್ನು ಕಾಣಬಹುದು.

ಭಾರತದಲ್ಲಿ ಹೀಗೆ ಜಾತಿಪದ್ಧತಿಯು ಹೋಲಿಕೆಯಿಲ್ಲದಂತಹ ಸ್ವಭಾವವನ್ನು ಹೊಂದಿರುವುದರಿಂದ ಈ ವಿವಿಧ ಅಂಶಗಳ ಫಲದಿಂದಾಗಿಯೇ ಚಲನೆಯು ಸಂಭವಿಸುತ್ತದೆ ಎಂದು ಹೇಳುವಂತಿಲ್ಲ. ಉದಾಹರಣೆ : ಜನಸಂಖ್ಯೆಗೆ ಸಂಬಂಧಿಸಿದ ನಿರ್ವಾತ ಪ್ರದೇಶವು ಸಾಮಾಜಿಕ ಚಲನೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುವುದಿಲ್ಲ. ಏಕೆಂದರೆ ಉನ್ನತ ಜಾತಿಯ ಜನರು (ಉನ್ನತ ಸ್ಥಾನವನ್ನು ಆಕ್ರಮಿಸಿರುವ), ಕೆಳಜಾತಿಯ ಸದಸ್ಯರ ಹಾಗೆಯೇ ಸಂತಾನಾಭಿವೃದ್ಧಿ ಶಕ್ತಿಯನ್ನು ಪಡೆದಿರುತ್ತಾರೆ. ಜನಸಂಖ್ಯೆಯ ನಿರ್ವಾತ ಪ್ರದೇಶವು ಕಡಿಮೆ ಫಲವಂತಿಕೆಯಿಂದಾಗಿ ಜಾತಿ ಪದ್ಧತಿಯ ಮೇಲಿನ ಸ್ಥರದಲ್ಲಿ ಉಳಿಯಲಾಗುವುದಿಲ್ಲ, ಒಂದು ವೇಳೆ ಇಂತಹ ನಿರ್ವಾತವು ಕಂಡುಬಂದರೂ ಆ ಸ್ಥಳವನ್ನು ಕೆಳಜಾತಿಯ ಜನರು ತುಂಬುತ್ತಾರೆಂಬುದು ಅಸಂಭವನೀಯವಾದುದು.

ಭಾರತದಲ್ಲಿ ತಂದೆ ತಾಯಿಗಳು ಮತ್ತು ಮಕ್ಕಳ ನಡುವಿನ ಭಿನ್ನತೆಯ ಸಿದ್ಧಾಂತವನ್ನು ಹೇಗೆ ಸಾಮಾಜಿಕ ಚಲನೆಯನ್ನು ಅಧ್ಯಯನಿಸಲು ಅನ್ವಯಿಸಬೇಕು ಎಂಬುದು ತುಂಬಾ ಕಷ್ಟಕರವಾದುದು. ಪ್ರತಿಭೆ ಮತ್ತು ಸಾಮರ್ಥ್ಯಗಳಲ್ಲಿ ತಂದೆ ತಾಯಿಗಳು ಮತ್ತು ಮಕ್ಕಳ ನಡುವೆ ಭಿನ್ನತೆ ಇದ್ದರೂ ಸಹ ಜಾತಿ ಪದ್ಧತಿಯು ಚಲನೆಯ ಕಾರಣವಾಗದಿರಲೂಬಹುದು. ಅಥವಾ ನಾವು ಭಾರತದಲ್ಲಿ ಸಾಮಾಜಿಕ ಆಯ್ಕೆಯ ಸಂಘಟನೆಯು ಚಲನೆಗೆ ದಕ್ಷತೆಯಿಂದ ಚಾಲನೆಯನ್ನು ಕೊಡುತ್ತದೆಂದು ಹೇಳಲುಕೂಡ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಸ್ಥಾನಮಾನವು ಹುಟ್ಟಿನಿಂದಲೇ ನಿರ್ಧರಿತವಾಗುತ್ತದೆ ; ಸ್ಥಾನಮಾನವು ಕೊಡಲ್ಪಟ್ಟದ್ದು. ಗಳಿಸಿದ್ದಲ್ಲ. ಹೀಗೆ ಸಾಮಾಜಿಕ ಸಂಘಟನೆಯ ಕಾರ್ಯವು ಭಾರತದಲ್ಲಿ ಸೀಮಿತವಾಗಿರುತ್ತದೆ.

ಶ್ರೀನಿವಾಸ್‌ರವರ ಪ್ರಕಾರ ಭಾರತದಲ್ಲಿ ಜಾತಿಪದ್ಧತಿಯಲ್ಲಿನ ಚಲನೆಯು ಮುಖ್ಯವಾಗಿ ಸಂಸ್ಕೃತೀಕರಣದಿಂದುಂಟಾಗುತ್ತದೆ. ಸಂಸ್ಕೃತೀಕರಣವು ಕೆಳಜಾತಿಗಳು ತಮ್ಮ ಸ್ಥಾನಮಾನವನ್ನು ಜಾತಿಯ ಏಣಿ ಶ್ರೇಣಿಯಲ್ಲಿ ಉತ್ತಮಪಡಿಸಿಕೊಳ್ಳಲು ಬ್ರಾಹ್ಮಣ ಮತ್ತು ಇತರೆ ಧಾರ್ಮಿಕವಾಗಿ ಶ್ರೇಷ್ಟವಾಗಿರುವ ಜಾತಿಗಳ ರೀತಿ ನೀತಿಗಳನ್ನು ಅನುಕರಣೆ ಮಾಡುವುದೇ ಆಗಿದೆ. ಈ ಅನುಕರಣೆಯು ವಿವಿಧ ಮಾದರಿಗಳನ್ನು ತೆಗೆದುಕೊಳ್ಳಬಹುದು. ಒಬ್ಬ ಕೆಳಜಾತಿಯ ಮಾಂಸಹಾರಿ ವ್ಯಕ್ತಿಯು ಮಾಂಸಹಾರವನ್ನು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಬಿಟ್ಟು ಶುದ್ಧ ಸಸ್ಯಹಾರಿಯಾಗಬಹುದು ಹಾಗೂ ಮದ್ಯಪಾನವನ್ನು ಸಹ ನಿಷೇಧಿಸಬಹುದು. ಬಾಲ್ಯವಿವಾಹ, ವಿದವಾ ವಿವಾಹ, ದೇವಾಲಯಂಗಳಿಗೆ ಸ್ತ್ರೀಯರ ಸಮರ್ಪಣೆ ಇಂತಹ ಸಾಮಾಜಿಕ ಆಚರಣೆಗಳನ್ನು ನಿಷೇದಿಸುವುದು. ಬ್ರಾಹ್ಮಣರನ್ನು ಅನುಸರಿಸಿ ಬ್ರಾಹ್ಮಣ ಅರ್ಚಕರ ಸಹಾಯವನ್ನು ಪಡೆಯುವುದು, ಪ್ರಾರ್ಥನೆಯಲ್ಲಿ ಸಂಸ್ಕೃತ ಶ್ಲೋಕಗಳನ್ನು, ಮಂತ್ರಗಳನ್ನು ಬಳಸುವುದು ಹೀಗೆ ಈ ಎಲ್ಲಾ ಪ್ರಯತ್ನಗಳಿಂದ ಉನ್ನತ ಜಾತಿಗಳನ್ನು ಅನುಕರಿಸಿ ಜಾತಿ ಏಣಿಶ್ರೇಣಿಯಲ್ಲಿ ಬ್ರಾಹ್ಮಣರಿಗೆ ಸಮಾನವಾದ ಅಂತಸ್ತನ್ನು ಪಡೆಯಲು ಅಥವಾ ಬ್ರಾಹ್ಮಣರಿಗೆ ಸಮೀಪ ವಾಗಲು ಪ್ರಯತ್ನಿಸುತ್ತಾರೆ. ಇಲ್ಲಿ ನಾವು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಾದರ ಘಟನೆಯನ್ನು ಉದಾಹರಿಸಬಹುದು, ಸಾದರರ ಕ್ರಿಯಾವಿಧಿಗಳ ಆಚರಣೆ ಯಲ್ಲಿ ಕೆಲವು ಬದಲಾವಣೆಗಳನ್ನು ಗಮನಿಸಲಾಗಿದೆ. ಇದು ಶ್ರೀನಿವಾಸ್‌ರವರು ವಿಶ್ಲೇಷದ ಸಂಸ್ಕೃತೀಕರಣವನ್ನು ನಿಕಟವಾಗಿ ಹೋಲುತ್ತವೆ. ಸಾದರರು ಮಾಂಸಹಾರಿ ಜಾತಿಗೆ ಸೇರಿದವರು. ಆದರೆ ಈಗ ಅವರು ಬ್ರಾಹ್ಮಣೀಯ ಸಂಸ್ಕೃತಿಯ ಪ್ರಭಾವ ದಿಂದಾಗಿ ಜಾತಿಯ ಏಣಿಶ್ರೇಣಿಯಲ್ಲಿ ತಮ್ಮ ಸ್ಥಾನಮಾನವನ್ನು ಉತ್ತಮಪಡಿಸಿ ಕೊಳ್ಳಲು ನಿಧಾನವಾಗಿ ಮಾಂಸಹಾರವನ್ನು ತ್ಯಜಿಸುತ್ತಿದ್ದಾರೆ. ಉದಾಹರಣೆ : ಹಬ್ಬಗಳಲ್ಲಿ ಮಾಂಸಹಾರವನ್ನು ನಿಷೇದಿಸುತ್ತಾರೆ ಹಾಗೂ ಮಾಂಸದ ಅಡುಗೆಯನ್ನು ತಯಾರಿಸಲು ತೋಟದಲ್ಲಿ ಬೇರೆಯೇ ಒಂದು ಅಡುಗೆ ಮನೆಯನ್ನು ನಿರ್ಮಿಸಿಕೊಳ್ಳು ತ್ತಿದ್ದಾರೆ. ಹಾಗೂ ಮಾಂಸಹಾರವನ್ನು ಬೇಯಿಸಲು ಬೇರೆಯೇ ಪಾತ್ರೆಗಳನ್ನು ಬಳಸು ತ್ತಾರೆ. ಮಾಂಸಹಾರವನ್ನು ಹೊಲಸು ಎಂದು ಪರಿಗಣಿಸುತ್ತಿದ್ದಾರೆ.

ಕೆಳಜಾತಿಗಳು ಅಥವಾ ಇತರೆ ಹಿಂದುವಲ್ಲದ ಬುಡಕಟ್ಟು ಸಮೂಹಗಳು ಉನ್ನತ ಜಾತಿಗಳನ್ನು ಅನುಕರಣೆ ಮಾಡುವ ಪ್ರವೃತ್ತಿಯನ್ನು ಮ್ಯಾಕ್ಸ್‌ವೆಬರ್‌ರವರು ಸಹ ಗುರುತಿಸಿದ್ದಾರೆ. ಇವರು ಉನ್ನತ ಜಾತಿಯವರನ್ನು ಅನುಕರಣೆ ಮಾಡುವುದು ಬಹುಬೇಗನೆ ಹಿಂದೂ ಧರ್ಮವೂ ಹರಡುವಂತಹ ತೆರೆದ ಪದ್ಧತಿಯಾಗುತ್ತಿದೆಯೆಂದು ಅವರು ಈ ಕೆಳಕಂಡಂತೆ ಬರೆಯುತ್ತಾರೆ :

ಸಾಮಾನ್ಯವಾಗಿ ಹಿಂದೂ ಧರ್ಮದ ಪ್ರಸಾರವು ಹೀಗೆ ನಡೆಯುತ್ತಿದೆ : ಒಂದು ಸರ್ವಜೀವತ್ವವಾದದಲ್ಲಿ ನಂಬಿಕೆಯಿರುವ ಬುಡಕಟ್ಟು ಜನಾಂಗವು ಒಂದಿಷ್ಟು ಹಿಂದೂ ರೂಢಿಗಳನ್ನು ಅನುಕರಣೆ ಮಾಡುತ್ತಾರೆ. ಮಾಂಸಹಾರವನ್ನು ತ್ಯಜಿಸು ವುದು ವಿಶೇಷವಾಗಿ ಗೋಮಾಂಸ. ಗೋಹತ್ಯೆಯನ್ನು ತಿರಸ್ಕರಿಸುವುದು, ಮಾದಕ ಪಾನೀಯಗಳಿಂದ ಸಂಪೂರ್ಣವಾಗಿ ದೂರವಿರುವುದು. ಇವುಗಳೊಂದಿಗೆ ಹಿಂದೂ ಜಾತಿಯ ಕೆಲವು ಇತರೆ ಶುದ್ಧೀಕರಣ ಆಚರಣೆಗಳನ್ನು ಅನುಕರಣೆ ಮಾಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತಾರೆ. ಹಿಂದುಗಳಿಂದ ಭಿನ್ನವಾಗಿ ಆಚರಣೆಯಲ್ಲಿದ್ದಂತಹ ವಿವಾಹ ಪದ್ಧತಿಗಳನ್ನು ಸಂಪೂರ್ಣವಾಗಿ ತ್ಯಜಿಸುತ್ತಿದ್ದಾರೆ. ಹೊರಬಾಂದವ್ಯ ವಿವಾಹದಲ್ಲಿ ಸಾಮಾಜಿಕವಾಗಿ ಕೆಳಸ್ಥರದಲ್ಲಿರುವ ಪುರುಷರಿಗೆ ತಮ್ಮ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡು ವುದನ್ನು, ನಿಷೇದಿಸುತ್ತಿದ್ದಾರೆ. ಇತರ ಅನೇಕ ಹಿಂದೂ ರೂಢಿಗಳನ್ನು ಸಹ ಅನುಸರಿಸು ತ್ತಿದ್ದಾರೆ. ವಿಧವೆಯುವರನ್ನು ಬ್ರಹ್ಮಚರ್ಯೆಗೆ ಒತ್ತಾಯಿಸುವುದು. ಹೆಣ್ಣುಮಕ್ಕಳನ್ನು ಪ್ರೈನೆರೆಯುವುದಕ್ಕಿಂತ ಮುಂಚೆಯೇ ವಿವಾಹ ಮಾಡುವುದು, ಸತ್ತವರನ್ನು ಹೊಳು ವುದರ ಬದಲಿಗೆ ಬೆಂಕಿಯಲ್ಲಿ ದಹಿಸುವುದು, ಪೂರ್ವಜರ ಶ್ರಾದ್ಧ ಆಚರಿಸುವುದು. ಹಿಂದೂ ದೇವದೇವತೆಗಳ ಹೆಸರುಗಳನು ಇಡುವುದು ಇತ್ಯಾದಿ ಬ್ರಾಹ್ಮಣ ಜೀವನ ವಿಧಾನವನ್ನು ಅನುಸರಿಸುತ್ತಿದ್ದಾರೆ, ಹಾಗೆಯೇ ವೇದಗಳನ್ನು ಸಹ ಕಲಿತು ಪುರಾತನ ಬ್ರಾಹ್ಮಣ ಶೈಲಿಯನ್ನು ಅನುಸರಿಸುತ್ತಿದ್ದಾರೆ.

ಇದೇ ರೀತಿಯ ಅಭಿಪ್ರಾಯಗಳನ್ನು ಬಾಡೆನ್ ಪಾವೆಲ್‌ರವರು ವ್ಯಕ್ತಪಡಿಸಿ ದ್ದಾರೆ, ಒಂದು ಸಲ ಹಿಂದುವಿನ ರೀತಿಯಲ್ಲಿ ಗೌರವ ಘನತೆಗಳನ್ನು ಗಳಿಸಿದ ಮೇಲೆ ಹೆಚ್ಚು ಕುಟುಂಬಗಳು ನಿರಂತರವಾಗಿ ಬ್ರಾಹ್ಮಣ ಕುಟುಂಬದ ಅರ್ಚಕರನ್ನು ನೇಮಿಸಿ ಕೊಂಡು ಜಾತಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ, ಅವರ ನಾಯಕರು ಗಳು ಹಿಂದೂ ಹೆಸರುಗಳನ್ನು ಹೊಂದಿ ಕಾಲಾಂತರದಲ್ಲಿ ತಮ್ಮ ಮೂಲ ಉಗಮವನ್ನು ಮರೆತು ರಜಪೂತ ಸ್ಥಾನಮಾನವನ್ನು ಪಡೆದು ಕೆಲವು ತಲೆಮಾರಿನ ನಂತರ ಉನ್ನತ ಹಿಂದುಗಳ ಮನೆಯಿಂದಲೇ ಮದುವೆ ಮಾಡಿಕೊಳ್ಳುವುದು ಪ್ರಾರಂಭವಾಗುತ್ತದೆ. ಪುರಾಣ ಸಂಬಂದಿ ನಾಯಕ ಪೂರ್ವಜರು ರಾಜ ದರ್ಬಾರಿನ ಕವಿ ಅಥವಾ ಹಾಡುಗಾರ ರಾಗಿದ್ದರು. ಆಚರಣೆಯು ಪ್ರತಿಯೊಂದು ಕೂಡ ಹಿಂದೂ ದೇವರ ಹೆಸರಿನಲ್ಲಿ ನಡೆಯು ತ್ತಿತ್ತು. ಅಥವಾ ಕೆಲವು ಪವಾಡಗಳು ಸಂಭವಿಸಿರುವುದು ಸಹ ಪುರಾಣದ ಪುಸ್ತಕಗಳಲ್ಲಿವೆ. ಹೀಗೆ ಜಾತಿಯ ಚಲನೆಯು ಹಿಂದೂ ಧರ್ಮದ ಪ್ರಾರಂಭದಲ್ಲಿ ಅನುಕರಣೆಯ ಪ್ರವೃತ್ತಿ ಯಿಂದ ನಡೆಸಿರುವುದನ್ನು ಕಾಣಬಹುದು.

ಸಂಸ್ಕೃತೀಕರಣದೊಂದಿಗೆ ಸಂಬಂಧ ಹೊಂದಿರುವ ಮತ್ತೊಂದು ಚಲನೆಯ ಪ್ರಕ್ರಿಯೆ ಎಂದರೆ ಪಾಶ್ಚಿಮಾತ್ಯೀಕರಣ. ಸಂಸ್ಕೃತೀಕರಣ ಮತ್ತು ಪಾಶ್ಚಿಮಾತ್ಯೀಕರಣ ಎರಡು ಪ್ರಕ್ರಿಯೆಗಳು. ಅವೆರಡೂ ಸಹವರ್ತಿಗಳು, ಸಂಸ್ಕೃತೀಕರಣವು ಜಾತಿಯ ಒಳಗೆ ಅಂದರೆ ಬುಡಕಟ್ಟು ಸಮೂಹಗಳ ಹಿಂದೂ ಸಮೂಹದೊಳಗೆ ಬರುವುದು. ಆದರೆ ಪಾಶ್ಚಿಮಾತ್ಯೀಕರಣ ಜಾತಿ ಚೌಕಟ್ಟಿನ ಹೊರಗಿನಿಂದ ಚಲನೆಯ ಮೇಲೆ ಪ್ರಭಾವ ಬೀರುತ್ತದೆ.

ಪಾಶ್ಚಿಮಾತೀಕರಣ ಪ್ರಕ್ರಿಯೆಯು 19ನೇ ಶತಮಾನದಲ್ಲಿ ಬ್ರಿಟೀಷರು ಭಾರತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಲ್ಲಿ ತಮ್ಮ ಆಡಳಿತವನ್ನು ಭದ್ರವಾಗಿ ಸ್ಥಾಪಿಸಿದಾಗ ಮತ್ತು ಬೆಂಟಿಂಕ್‌ರವರಂತಹವರು ಸಮಾಜದ ಅನೇಕ ಕೆಟ್ಟ ಆಚರಣೆಗಳನ್ನು ಕೊನೆಗೊಳಿಸಲು ಪ್ರಯತ್ನಿಸಿದಾಗ ಪ್ರಾರಂಭವಾಯಿತು. ಪಾಶ್ಚಿಮಾತ್ಯೀಕರಣವು ಸರಳ ಅರ್ಥದಲ್ಲಿ ಬ್ರಾಹ್ಮಣರು ಪಾಶ್ಚಿಮಾತ್ಯರ (ಬ್ರಿಟೀಷರು) ರೂಢಿಗಳು ಮತ್ತು ಜೀವನ ವಿಧಾನದ ರೀತಿಯನ್ನು ಅನುಕರಣೆ ಮಾಡಿದುದಾಗಿದೆ. ಪಾಶ್ಚಿಮಾತ್ಯ ಜೀವನ ವಿಧಾನದ ಅನುಕರಣೆಯು ವಿದ್ಯಾವಂತ ಮತ್ತು ಜಾತ್ಯಾತೀತ ಬ್ರಾಹ್ಮಣರಿಂದ ಪ್ರಾರಂಭವಾಯಿತು. ಈ ವಿದ್ಯಾವಂತ ಬ್ರಾಹ್ಮಣರ ಪಾಶ್ಚಿಮಾತ್ಯೀಕರಣವು ಅನೇಕ ರೀತಿಯಲ್ಲಿ ಪ್ರಾರಂಭವಾಯಿತು. ಅವರ ಉಡುಗೆ ಮತ್ತು ಕಾಣುವ ಶೈಲಿಯಲ್ಲಿ ಬದಲಾವಣೆಯಾಯಿತು. ಸಾಂಪ್ರದಾಯಿಕ ಉಡುಗೆಯನ್ನು ಬದಲಿಸಿ ಪಾಶ್ಚಿಮಾತ್ಯ ಉಡುಗೆ ಮತ್ತು ಪಾದರಕ್ಷೆಗಳನ್ನು ಧರಿಸಿದರು. ಸಾಂಪ್ರದಾಯಿಕ ಆಚರಣೆಗಳಾದ ಪವಿತ್ರವಾದ ಜನಿವಾರ ಧರಿಸುವುದು, ವಿಧವೆಯರ ಕೇಶವನ್ನು ತೆಗೆಯುವಂತಹ ಪದ್ಧತಿ, ವಿಧವೆಯರು ಬಿಳಿ ಸೀರೆಯನ್ನು ಧರಿಸುವುದು, ಸ್ತ್ರೀಯರ ಮುಟ್ಟು ಮತ್ತು ಅವರ ಮಗುವಿಗೆ ಜನನ ಕೊಟ್ಟಾಗ ಅವರನ್ನು ಮೈಲಿಗೆ ಎಂದು ದೂರವಿಡುವ ಪದ್ಧತಿ ಇತ್ಯಾದಿ ಆಚರಣೆಗಳಲ್ಲಿ ಬದಲಾವಣೆಗಳಾದವು. ಆಹಾರ ಪದಾರ್ಥಗಳಲ್ಲಿಯೂ ಸಹ ಕೆಲವು ಮುಖ್ಯವಾದ ಬದಲಾವಣೆಗಳಾದವು. ಕಟ್ಟುನಿಟ್ಟಾಗಿ ನಿಷೇದಿಸಿದ ಈರುಳ್ಳಿ, ಆಲೂಗೆಡ್ಡೆ, ಬೀಟ್‌ರೂಟ್, ಮೂಲಂಗಿ ಮುಂತಾದ ತರಕಾರಿಗಳನ್ನು ಪುನಃ ಉಪಯೋಗಿಸಲು ಪ್ರಾರಂಭಿಸಿದರು. ಅನೇಕರು ಆರೋಗ್ಯದ ದೃಷ್ಟಿಯಿಂದ ಮೊಟ್ಟೆಗಳನ್ನು ಸೇವಿಸಲು ಪ್ರಾರಂಬಿಸಿದರು. ಅನೇಕ ಮಾಂಸಹಾರಿ ಪದಾರ್ಥಗಳಾದ ಮೀನು,ಕೋಳಿ ಮುಂತಾದವುಗಳನ್ನು ಬಳಸಲು ಪ್ರಾರಂಬಿಸಿದರು. ಅದೇ ರೀತಿಯಲ್ಲಿ ಪಾಶ್ಚಿಮಾತ್ಯೀಕರಣದ ಪ್ರಭಾವದಿಂದಾಗಿ ಕಾರ್ಖಾನೆ ಮತ್ತು ಉದ್ದಿಮೆಗಳಲ್ಲಿ ಕೈ ಕೆಲಸ ಮಾಡಲಿಕ್ಕೂ ಹಿಂಜರಿಯಲಿಲ್ಲ. ಹೀಗೆ ಬ್ರಾಹ್ಮಣ ಜೀವನ ವಿಧಾನದಲ್ಲಿ ನಿಧಾನವಾಗಿ ಕೆಲವು ಮಹತ್ತರವಾದ ಬದಲಾವಣೆಗಳಾಗುತ್ತಾ ಬಂದವು.

ಆದಾಗ್ಯೂ ಪಾಶ್ಚಿಮಾತ್ಯೀಕರಣ ಪ್ರಕ್ರಿಯೆಯು ಯಾವ ರೀತಿಯಲ್ಲೂ ಬ್ರಾಹ್ಮಣ ಸ್ಥಾನಮಾನವನ್ನು ಅಗೌರವಗೊಳಿಸಲಿಲ್ಲ. ಹಾಗೆಯೇ ಈ ಪ್ರಕ್ರಿಯೆಯು ಕೆಲವು ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿರಲಿಲ್ಲ,ಕ್ರಮೇಣ ಎಲ್ಲಾ ಜಾತಿಗಳಿಗೂ ಹರಡಿದ ಪ್ರವೃತ್ತಿಯಾಯಿತು. ಆದರೆ ಬ್ರಾಹ್ಮಣರು ಬ್ರಿಟೀಷರಿಗೆ ಅತೀ ಸಾಮಿಪ್ಯ ಹೊಂದಿದ್ದರಿಂದ ಇತರೆ ಜಾತಿಗಳಿಗಿಂತ ಪಾಶ್ಚಿಮಾತ್ಯ ಜೀವನ ವಿಧಾನವನ್ನು ತ್ವರಿತವಾಗ ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಬ್ರಿಟೀಷರಿಗೆ ಬ್ರಾಹ್ಮಣರು ಎಷ್ಟು ಸಮೀಪವಾಗಿದ್ದರೆಂದರೆ ಪಾಶ್ಚಿಮಾತ್ಯೀಕರಣ ಪ್ರಕ್ರಿಯೆಯಲ್ಲಿ ಅವರು ನಾಯಕರುಗಳು ಸಹ ಆದರು.

ಹೀಗೆ ಜಾತಿ ಪದ್ಧತಿಯಲ್ಲಿ ಎರಡು ರೀತಿಯ ಪ್ರಕ್ರಿಯೆಗಳನ್ನು 19 ಶತಮಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಲ್ಲಿ ಗುರುತಿಸಬಹುದು. ಜಾತಿಯ ಏಣಿಶ್ರೇಣಿಯಲ್ಲಿ ಕೆಳಜಾತಿಯವರು ಬ್ರಾಹ್ಮಣರನ್ನು ಅನುಕರಣೆ ಮಾಡಿ ತಮ್ಮ ಸ್ಥಾನಮಾನವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಿದರು. ಹೀಗೆ ಅವರು ತಮ್ಮ ಆಚರಣೆಗಳನ್ನು ಇನ್ನೂ ಕಠಿಣ ಮಾಡಿಕೊಂಡರು. ಅದೇ ಸಮಯದಲ್ಲಿ ಬ್ರಾಹ್ಮಣರು ಮತ್ತು ಇತರೆ ಉನ್ನತ ಜಾತಿಯವರು ತಮ್ಮ ಜಾತಿಯ ಆಚರಣೆಗಳಲ್ಲಿ ಸಡಿಲಿಕೆಯನ್ನು ಮಾಡಿಕೊಂಡು ಪಾಶ್ಚಿಮಾತ್ಯ ಜೀವನ ವಿಧಾನವನ್ನು ಅಳವಡಿಸಿಕೊಂಡರು.

ಶ್ರೀನಿವಾಸ್‌ರವರು ಜಾತಿಯ ಚಲನೆಯನ್ನು ವಿವರಿಸಲು ಪ್ರತಿಪಾದಿಸಿದ ಸಂಸ್ಕೃತೀಕರಣ ಮತ್ತು ಪಾಶ್ಚಿಮಾತ್ಯೀಕರಣ ಸಿದ್ಧಾಂತಗಳು ಕೆಲವರಿಂದ ದ್ವೇಷಿಸಲ್ಪಟ್ಟವು. ಮುಜುಂದಾರ್‌ರವರು ಭಾರತೀಯ ಸಂಕೀರ್ಣತೆಯಿಂದ ಹೆಚ್ಚು ಸೀಮಿತಗೊಂಡಿದೆ ಹಾಗೆಯೇ ಸಡಿಲತೆಯಾಗಿದೆ ಎಂದು ಟೀಕಿಸುತ್ತಾರೆ.

ಮುಜುಂದಾರ್‌ರವರ ಮುಖ್ಯ ಟೀಕೆಯೆಂದರೆ ಜಾತಿಪದ್ಧತಿಯಲ್ಲಿ ಲಂಬಚಲನೆ ಸಾಧ್ಯವಿಲ್ಲ. ಒಂದು ಸಾಮಾಜಿಕ ರೇಖೆಯ ಮೇಲೆ ಕೇವಲ ಸಮನಾಂತರವಾದದು ಚಲನೆ ಮಾತ್ರ ಸಾಧ್ಯವಾಗಬಹುದು. ಸಂಸ್ಕೃತೀಕರಣ ಪ್ರಕ್ರಿಯೆಯಲ್ಲಿ ಒಂದು ತಲೆಮಾರು ಅಥವಾ ಎರಡು ತಲೆಮಾರಿನಲ್ಲಿ ಕೆಳಜಾತಿಯವರು ಏಣಿಶ್ರೇಣಿಯಲ್ಲಿ ಉನ್ನತ ಸ್ಥಾನಮಾನವನ್ನು ಪಡೆಯುತ್ತಾರೆಂಬುದು ಕೇವಲ ಸಿದ್ಧಾಂತಿಕ ಸಾಧ್ಯತೆ. ಆದರೆ ಇದು ವಾಸ್ತವವಾಗಿ ಸಾಧ್ಯವಿಲ್ಲ. ಕೆಳಜಾತಿಯವರು ಬ್ರಾಹ್ಮಣರ ರೂಢಿವಿಧಾನಗಳನ್ನು ಅನುಸರಿಸುವುದರಿಂದ ಚಲನೆ ಸಾಧ್ಯವಾಗಬಹುದು. ಒಂದೇ ಸಮತಲದಲ್ಲಿರುವ ಜಾತಿಗಳು ವಾಸ್ತವವಾಗಿ ಕೆಳಜಾತಿಯವರ ಲಂಬ ಚಲನೆಯನ್ನು ಸಹಿಸುವುದಿಲ್ಲ, ಹಾಗೂ ಸದಾ ಅಂತಹ ಪ್ರಯತ್ನಗಳನ್ನು ಅದುಮಿಡಲು ಪ್ರಯತ್ನಿಸುತ್ತಾರೆ. ಹಾಗೆಯೇ ಈ ಅಪಮಾನತೆಯಿಂದ ಜಾತಿಯ ಸಮಾಂತರ ಚಲನೆಯನ್ನು ನೋಡಲ್ಪಡುವುದು ಕೇವಲ ಕೆಳಜಾತಿಯ ಲಕ್ಷಣವಾಗಿರದೆ ಉನ್ನತ ಜಾತಿಯವರನ್ನು ಸಹ ಕಾಣುವ ಲಕ್ಷಣವಾಗಿದೆ. ಉನ್ನತ ಜಾತಿಯಲ್ಲಿನ ಸಮಾಂತರ ಚಲನೆಯು ಬ್ರಾಹ್ಮಣೀಕರಣ ಎಂದು ಕರೆಯಬಹುದಾದ ಕ್ರಿಯಾವಿಧಿಗಳ ಮತ್ತು ಸಂಪ್ರದಾಯ ಅಥವಾ ರೂಢಿಗಳ ಬೀಳುವಿಕೆ ಮುಂತಾದ ಆಚರಣೆಗಳಿಂದ ಗಳಿಸಿದ್ದಾಗಿದೆ. ಕೆಳಜಾತಿಯವರ ಸಮಾಂತರ ಚಲನೆಯು ಸಂಸ್ಕೃತೀಕರಿಸಿದ ಮೂಲಕ ಬಂದು ಅವರು ಹೆಚ್ಚು, ಹೆಚ್ಚು ಬ್ರಾಹ್ಮಣೀಯ ಜೀವನ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ನಡೆಯುತ್ತದೆ.

ಕಲ್ಯಾಣಿಪುರದಲ್ಲಿನ ವಡ್ಡರಜಾತಿ ರಚನೆಯಲ್ಲಿ ಸಂಭವಿಸಿರುವ ಬದಲಾವಣೆಗಳು ಈ ದೃಷ್ಟಿಕೋನವನ್ನು ಬೆಂಬಲಿಸಲು ಉದಾಹರಿಸಬಹುದು. 50 ವರ್ಷಗಳ ಹಿಂದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಸಮುದಾಯವು 3 ವಿವಿಧ ಉಪಜಾತಿಗಳಾಗಿ ವಿಂಗಡಿಸಲ್ಪಟ್ಟಿದ್ದಿತು. ಅವುಗಳೆಂದರೆ ಕಲ್ಲುವಡ್ಡರು (ಕಲ್ಲು ಕೆತ್ತುವವರು). ಮಣ್ಣು ವಡ್ಡರು (ಮಣ್ಣು ಅಗೆಯುವವರು), ಮತ್ತು ಬಂಡಿವಡ್ಡರು (ಗಾಡಿಕೆಲಸಗಾರರು) ಕೆಲವು ವಿಶಿಷ್ಟ ಕ್ರಿಯಾವಿಧಿಗಳು ಈ ಉಪ ಜಾತಿಗಳನ್ನು ಬೇರ್ಪಡಿಸಿದ್ದವು. ಅಂತರ್ ಭೋಜನ ಮತ್ತು ಅಂತರ್‌ಜಾತಿಯ ವಿವಾಹಗಳು ಇವರ ಮಧ್ಯೆ ನಿಷೇಧಿಸಲ್ಪಟ್ಟಿದ್ದವು. ಆದರೆ ಈಗ ಈ ಕ್ರಿಯಾವಿಧಿಗಳ ವ್ಯತ್ಯಾಸಗಳನ್ನು ಬಿಟ್ಟಿದ್ದಾರೆ, ಪರಿಣಾಮವಾಗಿ ಉಪಜಾತಿಗಳ ಮೇಲಿನ ನಿರ್ಬಂಧಗಳು ತ್ವರಿತವಾಗಿ ಮರೆಯಾಗುತ್ತಿವೆ, ಈ ಮೂರು ಉಪಜಾತಿಗಳು ಒಟ್ಟಿಗೆ ಸೇರಿಕೊಂಡು ವಡ್ಡರ ಒಂದೇ ಒಂದು ಜಾತಿಯಾಗಿದೆ.

ಮುಜುಂದಾರ್‌ರವರು[31] ಪಾಶ್ಚಿಮಾತ್ಯೀಕರಣದ ಬಗ್ಗೆ ಮಾತನಾಡುತ್ತಾ ಇದು ಉನ್ನತ ಮತ್ತು ಕೆಳಜಾತಿಗಳೆರಡರಲ್ಲೂ ಆದರ್ಶಾತ್ಮಕ ಮತ್ತು ತಾಂತ್ರಿಕ ಬದಲಾವಣೆ ಗಳೆಡರನ್ನೂ ತಂದಿದೆ ಇದು ಉನ್ನತ ಮತ್ತು ಕೆಳಜಾತಿಗಳೆರಡರ ಮೇಲೂ ಪರಿಣಾಮ ಬೀರಿದೆ. ಆದ್ದರಿಂದ ಒಂದೇ ದಿಕ್ಕಿನ ಪ್ರಗತಿಯಾದ ಬುಡಕಟ್ಟು ಅಭ್ಯಾಸ ವನ್ನು ಉಳಿಸುವಿಕೆಯಿಂದ ಸಂಸ್ಕೃತೀಕರಣಕ್ಕೆ ನಂತರ ಪಾಶ್ಚಿಮಾತ್ಯೀಕರಣದ ಅವಶ್ಯಕತೆ ಯಿಲ್ಲ. ಈ ಹಂತಗಳು ಉತ್ಕಾರತಿಕಾರಕ ಅಥವಾ ಅನುಕ್ರಮಾತ್ಮಕವಾಗುವ ಅವಶ್ಯ ಕತೆಯಿಲ್ಲ.

ಹೀಗೆ ಇವರು ಸಾಂಸ್ಕೃತಿಕ ಬದಲಾವಣೆಯ ಗತಿಯನ್ನು ವಿವರಿಸಲು ಬಳಸಿದ ಸಾಂಸ್ಕೃತೀಕರಣ ಕಲ್ಪನೆಯನ್ನು ಪರಿಸಮಾಪ್ತಿಗೊಳಿಸಲು ಸಂತೋಷವಾಗುವುದಿಲ್ಲ ಎಂದು ಬರೆಯುತ್ತಾರೆ.

ಶ್ರೀನಿವಾಸ್‌ರವರ ಸಂಸ್ಕೃತೀಕರಣ ಮತ್ತು ಪಾಶ್ಚಿಮಾತ್ಯೀಕರಣ ಪ್ರಕ್ರಿಯೆಗಳು ಇತರೆ ವಿಶ್ಲೇಷಣೆಯ ಉಪಕರಣಗಳ ಗೈರು ಹಾಜರಿಯಲ್ಲಿ ಜಾತಿಪದ್ಧತಿಯಲ್ಲಿನ ಬದಲಾ ವಣೆಗಳನ್ನು ಅರ್ಥಮಾಡಿಕೊಳ್ಳಲು ಬಹುಸಹಾಯಕವಾದವುಗಳು ; ಅವುಗಳ ಅನಿಶ್ಚಿತತೆ ಯಿಂದಾಗಿ ಶ್ರೀನಿವಾಸ್‌ರವರೇ ಈ ಕಲ್ಪನೆಗಳು ನಿಜವಲ್ಲದವುಗಳಾಗಬಹುದು ಎಂದಿ ದ್ದಾರೆ.

"ಸಂಸ್ಕೃತೀಕರಣವು ಒಂದು ಸಂಕೀರ್ಣ ಕಲ್ಪನೆ. ಎಂಬುದನ್ನು ಒತ್ತಿಹೇಳುವ ಅವಶ್ಯಕತೆ ಇದೆ. ಇದನ್ನು ಒಂದೇ ಒಂದು ಕಲ್ಪನೆಗಿಂತ ಕಲ್ಪನೆಗಳ ಗೊಂಚಲು ಎಂದು ತೀರ್ಮಾನಿಸಿದರೆ ಹೆಚ್ಚು ಉಪಯುಕ್ತವಾಗುವ ಸಾಧ್ಯತೆ ಇದೆ. ನೆನಪಿನಲ್ಲಿಟ್ಟು ಕೊಳ್ಳಬೇಕಾದ ಮುಖ್ಯ ವಿಷಯವೆಂದರೆ ವಿಶಾಲವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಯಲ್ಲಿ ಒಂದು ಹೆಸರನ್ನು ಕೊಡಲಾಗಿದೆ. ನಾವು ಮಾಡಬೇಕಾಗಿರುವ ಮುಖ್ಯ ಕೆಲಸ ಈ ಪ್ರವೃತ್ತಿಯ ಸ್ವಭಾವವನ್ನು ಅರ್ಥಮಾಡಿಕೊಳ್ಳುವದಾಗಿದೆ. ಈ ಪದವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶ್ಲೇಷಣೆಯಲ್ಲಿ ಸಹಾಯಕವಾಗುವುದಕ್ಕಿಂತ ವಿಘ್ನವೇ ಹೆಚ್ಚು ಆದುದರಿಂದ ವಿಷಾದ ಪಡದೆ, ಬಹುಬೇಗನೆ ಇದನ್ನು ತಿರಸ್ಕರಿಲೂಬೇಕಾಗಿದೆ''.

ಬೆಟೆಲಿಯವರು ಸ್ಥಿರ ವಿನ್ಯಾಸದ ಅಧ್ಯಯನಕ್ಕೆ ನೀಡಿರುವ ಕೊಡುಗೆಯು ಜಾತಿ ಪದ್ಧತಿಯನ್ನು ಅರ್ಥೈಸಿರುವುದು ಬಹು ಪ್ರಾಮುಖ್ಯತೆಯನ್ನು ಹೊಂದಿದೆ. ಬೆಟೆಲ್ಲಿಯವರು ತಮಿಳುನಾಡಿನ ಹಳ್ಳಿಯೊಂದರಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿ ಜಾತಿಯನ್ನು ಆಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಬಹು ಮುಖ್ಯವಾದ ಬದಲಾವಣೆ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದಾರೆ.

ಜಾತಿಯನ್ನು ಆಧರಿಸಿದ ಸಾಂಪ್ರದಾಯಿಕ ರಚನೆಯು ಹೆಚ್ಚು ಚಲನೆಯಿಲ್ಲದ ಒಂದು ಮುಚ್ಚಿದ ಸಮಾಜ. ಆದರೆ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ ಆಧುನೀಕರಣದ ಪ್ರಕ್ರಿಯೆಯು ಭಾರತೀಯ ಸಮಾಜದ ಮೇಲೆ ಪ್ರಭಾವ ಬೀರಿದೆ ಹಾಗೂ ಭಾರತೀಯ ಸಮಾಜದ ಸಾಂಪ್ರದಾಯಿಕ ರಚನೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿದೆ. ಅವರ ಪುಸ್ತಕದಲ್ಲಿ ಭಾರತೀಯ ಸಮಾಜದ ಸಾಂಪ್ರದಾಯಿಕ ರಚನೆಯಲ್ಲಿ ಜಾತಿ, ವರ್ಗ ಮತ್ತು ಅಧಿಕಾರದಲ್ಲಿ ಸಹ ಸಂಬಂಧವಿದ್ದು ಸಾಮಾನ್ಯವಾಗಿ ಈ ಮೂರು ಅಂದರೆ ಸಂಪತ್ತು, ಅಧಿಕಾರ ಮತ್ತು ಸಾಮಾಜಿಕ ಘನತೆ ಒಂದೇ ಒಂದು ಗುಂಪಿನಲ್ಲಿ ಅಂದರೆ ಬ್ರಾಹ್ಮಣರಲ್ಲಿ ಕೇಂದ್ರಿಕೃತವಾಗಿ ರುವುದನ್ನು ಸ್ಪಷ್ಟಪಡಿಸಿದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯ ಏಣಿಯಲ್ಲಿ (ಸಾಮಾಜಿಕ ಶಕ್ತಿ) ಬ್ರಾಹ್ಮಣರು ತಂತ್ತ ತುದಿಯಲ್ಲಿದ್ದಾರೆ. ಹಾಗೂ ಅವರು ಭೂ ಒಡೆಯರಾಗಿದ್ದಾರ (ಆರ್ಥಿಕ ಶಕ್ತಿ) ಮತ್ತು ಹಳ್ಳಿಗಳಲ್ಲಿ ಮುಖ್ಯವಾದಂತಹ ಅಧಿಕಾರಿಗಳನ್ನು ಹೊಂದಿದ್ದಾರೆ (ರಾಜಕೀಯ ಶಕ್ತಿ). ಆದರೆ ಇಂದು ಆ ಪರಿಸ್ಥಿತಿಯಿಲ್ಲ. ಆಧುನೀಕರಣದ ವಿವಿಧ ಅಂಶಗಳಿಂದಾಗಿ ಸಾಮಾಜಿಕ ವ್ಯವಸ್ಥೆಯು ಹೆಚ್ಚು ಹೆಚ್ಚು ಸಂಕೀರ್ಣ ಮತ್ತು ಚಲನಾತ್ಮಕ ಲಕ್ಷಣಗಳನ್ನು ಗಳಿಸಿದೆ. ಪರಿಣಾಮವಾಗಿ ಒಂದು ಇನ್ನೊಂದನ್ನು ದಾಟುವ ಪ್ರವೃತ್ತಿಯುಂಟಾಗಿದೆ.

ಸಾಂಪ್ರದಾಯಿಕ ವ್ಯವಸ್ಥೆಯಲ್ಲಿನ ವರ್ಗ ಪದ್ಧತಿ ಮತ್ತು ಅಧಿಕಾರ ಹಂಚಿಕೆಯು ಹೆಚ್ಚಾಗಿ ಜಾತಿಯ ಅಡಿಯಲ್ಲಿ ಸೇರುತ್ತಿದ್ದವು. ಆದರೆ ಇಂದು ವರ್ಗ ಮತ್ತು ಅಧಿಕಾರದ ಸ್ಥಾನಮಾನಗಳು ಜಾತಿಗೆ ಸಂಬಂಧಿಸಿದಂತೆ ಹೆಚ್ಚು ಸ್ವಾಯತ್ತತೆಯನ್ನು ಪಡೆದು ಕೊಂಡಿದೆ. ಹಣದ ಪಾವತಿಯ ಪರಿಚಯ ಮತ್ತು ಮಾರುಕಟ್ಟೆಗಳ ಬೆಳವಣಿಗೆಯಿಂದಾಗಿ ವರ್ಗ ವ್ಯವಸ್ಥೆಯಲ್ಲಿ ಅಂತರವನ್ನುಂಟು ಮಾಡಿದೆ. ಪಂಚಾಯತಿ ವ್ಯವಸ್ಥೆ ಮತ್ತು ವಯಸ್ಕರ ಮತದಾನ ಪದ್ಧತಿಯನ್ನು ಜಾರಿಗೆ ತಂದಿರುವುದು ರಾಜಕೀಯ ಅಧಿಕಾರದ ಬದಲಾವಣೆಯ ಉಪಕರಣವಾಗಿದೆ. ಹಿಂದೆ ಗ್ರಾಮೀಣ ಭೂಮಿಯ ಹೆಚ್ಚು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗವನ್ನು ಬ್ರಾಹ್ಮಣರು ಹೊಂದಿದ್ದರು. ಆದರೆ ಇಂದು ಬ್ರಾಹ್ಮಣೇತರರು ಅದನ್ನು ಆಕ್ರಮಿಸಿಕೊಂಡಿದ್ದಾರೆ.

ಅದೇ ರೀತಿಯಲ್ಲಿ ಅಧಿಕಾರದ ಹಳೆಯ ಆಧಾರಗಳು ಜನನ ಮತ್ತು ಕ್ರಿಯಾವಿಧಿಗಳ ಸ್ಥಾನಮಾನ ಇವುಗಳ ಜನಸಂಖ್ಯೆಯ ಬೆಂಬಲ, ಸದಸ್ಯತ್ವ ಅಧಿಕಾರಿಗಳೊಡನೆ ಬದಲಾಗಿ ಸಂಬಂಧ ಹೊಂದಿರುವುದು ಮುಂತಾದವುಗಳು ಹೊಸ ಜನರಿಂದ ಯುಕ್ತಿಯಿಂದ ಗಳಿಸ ಲ್ಪಟ್ಟಿವೆ. ಪುನಃ ಇಲ್ಲಿಯೂ ಕೂಡ ಮುಖ್ಯವಾಗಿ ಬ್ರಾಹ್ಮಣರು ಕಳೆದುಕೊಳ್ಳುವರಾಗು ತ್ತಾರೆ. ಇಂದು ಅಧಿಕಾರವು ಸಾಂಪ್ರದಾಯಿಕ ಗಣ್ಯವ್ಯಕ್ತಿಗಳಿಂದ (ಬ್ರಾಹ್ಮಣರು) ಹೊಸ ಹೆಸರಾಂತ ಬ್ರಾಹ್ಮಣೇತರ ನಾಯಕರುಗಳಿಗೆ ನಿರ್ಣಾಯಕವಾಗಿ ವರ್ಗಾಯಿಸಲ್ಪ ಟ್ಟಿದೆ. ಹೀಗೆ ಬಿಟೆಲ್‌ರವರು ಸಾಂಪ್ರದಾಯಕ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ವರ್ಗ ಮತ್ತು ಅಧಿಕಾರಕ್ಕೆ ಸಂಬಂಧಿಸಿದಂತೆ ಹೇಗೆ ಬದಲಾವಣೆಗಳಾಗಿವೆ ಎಂಬುದನ್ನು ಖಚಿತಪಡಿಸಿದ್ದಾರೆ.

ಜಾತಿ ಪದ್ಧತಿಯ ಭವಿಷ್ಯ :

ಜಾತಿ ಪದ್ಧತಿಯ ಬಗ್ಗೆ ಅನೇಕ ಪೂರ್ವಕಲ್ಪನೆಗಳಿದ್ದು ಭವಿಷ್ಯದಲ್ಲಿ ದೂರದೃಷ್ಟಿ ಯಿಲ್ಲದ ಬದಲಾವಣೆಗಳಿಂದ ಅವೆಲ್ಲವೂ ಸುಳ್ಳಾಗುತ್ತವೆಯೆಂದು ಜಾತಿಪದ್ಧತಿ ಮತ್ತು ಅದರ ಭವಿಷ್ಯದ ಬಗ್ಗೆ ಅನೇಕರು ತಟಸ್ಥವಾಗಿ ಉಳಿಯಲು ಬಯಸುತ್ತಾರೆ. ಇತರರಂತೆ ಶ್ರೀನಿವಾಸ್‌ರವರೂ ಸಹ ಜಾತಿಯು ಹಿಂದೂ ಸಾಮಾಜಿಕ ರಚನೆಯ ಒಂದು ಅವಿಭಾಜ್ಯ ಅಂಗ ಎಂದು ಹೇಳಿದ್ದಾರೆ. ಅದರಂತೆ ಜಾತಿರಹಿತವಾದ ಹಿಂದೂ ಸಮಾಜವನ್ನು ಊಹಿಸುವುದು ತುಂಬಾ ಕಷ್ಟಕರವಾದುದು. ಇನ್ನೂ ಕೆಲವರು ಜಾತಿ ಪದ್ಧತಿಯು ಬಹು ಕಾಲ ಬದುಕಿದ್ದು ಇದರ ಉಪಯುಕ್ತತೆಯು ಭಾರತೀಯ ಸಮಾಜದ ಹಿತದೃಷ್ಟಿಯಿಂದ ಎಷ್ಟು ಬೇಗ ನಿರ್ಮೂಲನವಾಗಿ ಹೋಗುತ್ತದೆಯೋ ಅಷ್ಟೇ ಬೇಗ ಸಮಾಜ ಅಭಿವೃದ್ಧಿಯಾಗುತ್ತದೆ. ಜಿ. ಎಸ್. ಘುರ್ರೆಯವರು ಇಂತಹ ಚಿಂತಕರ ಸಾಲಿಗೆ ಸೇರಿದವರಾಗಿದ್ದು ಹೀಗೆ ಬರೆಯುತ್ತಾರೆ : "ಪ್ರತಿಯೊಬ್ಬ ವಿದ್ಯಾವಂತ ಮತ್ತು ಪ್ರಗತಿಪರ ಹಿಂದೂ ನಾಯಕ ಜಾತಿಯನ್ನು ತ್ಯಜಿಸಲೇಬೇಕು. ಅವನು ಕೇವಲ ಬಾಯಿ ಮಾತಿನಿಂದ ಹೇಳಿದರೆ ಸಾಲದು ಅದನ್ನು ತಾನು ಹಾಗೆಯೇ ಬದುಕುವ ರೀತಿಯನ್ನು ಕಲಿತು ಪ್ರಾಮಾಣಿಕವಾಗಿ ನಡೆದುಕೊಳ್ಳಬೇಕಾಗುತ್ತದೆ." ಎಲ್ಲಿಯವರೆಗೂ ಜಾತಿ ಯನ್ನು ಅನುಸರಿಸಿಕೊಂಡು ಬರುವಂತಹ ಜನರಿರುತ್ತಾರೆಯೋ ಅಲ್ಲಿಯವರೆಗೂ ಜಾತಿ ಯನ್ನು ನಿರ್ಮೂಲನ ಮಾಡಲು ಸಾಧ್ಯವಿಲ್ಲ. ಇವರು ಭಾರತೀಯರ ಸಾಮರ್ಥ್ಯದಲ್ಲಿ ಅಸಾಧ್ಯವಾದುದೆಂದು ತೋರುವುದನ್ನು ಸಹ ಸಾಧಿಸುತ್ತಾರೆಂಬ ನಂಬಿಕೆಯನ್ನು ಹೊಂದಿದ್ದರು. ಕೆಲವು ಭಾರತೀಯರು ಹಿಂದೊಮ್ಮೆ ಮಾಂಸಹಾರ ಹಾಗು ಮಾದಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾನೀಯಂಗಳನ್ನು ಸೇವಿಸುವವರೂ ಆಗಿದ್ದರು. ಕ್ರಮೇಣ ಉಪವಾಸ ಮತ್ತು ಇತರ ಆಚರಣೆಗಳನ್ನು ಮೈಗೂಡಿಸಿಕೊಂಡರು. ಇದನ್ನು ಇವರು ಮಾನವನ ಇತಿಹಾಸ ದಲ್ಲಿಯೇ ಒಂದು ಸರಿಸಾಟಿಯಿಲ್ಲದಂತಹ ನೈತಿಕ ಜಯವಾಗಿದೆ ಎಂದಿದ್ದಾರೆ. "ಅದೇ ಜನ ಜಾತಿಯನ್ನು ನಿರ್ಮೂಲನ ಮಾಡಿ ಜಯಗಳಿಸಬೇಕಾಗಿದೆ" ಘುರ್ರೆಯವರು ಜಾತಿ ಯನ್ನು ನಿರ್ಮೂಲನ ಮಾಡಲು ಅಂತರ್‌ಜಾತಿಯ ವಿವಾಹ ಸಾರ್ವತ್ರಿಕ ಪುರೋಹಿತ್ಯ, ಕೇಂದ್ರೀಯ ಸಂಘಟನೆಯನ್ನು ಸ್ಥಾಪಿಸಿ ಪುರೋಹಿತ್ಯದ ತರಬೇತಿಯನ್ನು ಕೊಡುವುದು ಮುಂತಾದ ಕೆಲವು ಸಲಹೆಗಳನ್ನು ನೀಡಿದ್ದಾರೆ.

ಇದೇ ಸಮಯದಲ್ಲಿ ಕೆಲವರು ಜಾತಿಯನ್ನು ಗಂಟೆ, ಪುಸ್ತಕ ಮತ್ತು ಜ್ಯೋತಿ ಯಿಂದ ಸಮರ್ಥಿಸಿಕೊಳ್ಳುತ್ತಿದ್ದಾರೆ. ಅವರು ಜನತೆಯ ಸ್ಥಾನಮಾನವನ್ನು ಮೇಲು ಕೀಳು ಎಂದು ಉದಾಹರಣೆಗೆ ಪುರಿಯ ಜಗದ್ಗುರು ಜಾತಿಯತೆಯನ್ನು ಪ್ರತಿಪಾದಿಸುವ ಹಿಂದೂ ಧರ್ಮದ ತತ್ವಗಳನ್ನು ಪ್ರಬಲವಾಗಿ ಸಮರ್ಥಿಸಿಕೊಂಡು ಜಾತಿಪದ್ಧತಿಯಲ್ಲಿ ಏನು ತಪ್ಪಿಲ್ಲ, ಒಬ್ಬ ಹಿಂದು ಕ್ಷಮೆ ಕೇಳುವಂತಹದ್ದಾಗಲಿ ಅಥವಾ ನಾಚಿಕೆಪಡುವಂತಹ ದ್ದಾಗಲಿ ಏನು ಇಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ವಿವೇಕಾನಂದ, ಗಾಂಧಿ ಮುಂತಾ ದವರು ಸಮಾನತೆಯನ್ನು ಪ್ರತಿಪಾದಿಸುವುದರ ಮೂಲಕ ಜಾತಿಯ ಚೌಕಟ್ಟಿನೊಳಗೆಯೇ ಅದನ್ನು ಸಾಧಿಸಲು ಪ್ರಯತ್ನಿಸಿದರು. ಸ್ವಾಮಿ ವಿವೇಕಾನಂದರ ಸಮಾನತ್ವವು ಎಲ್ಲರನ್ನು ಬ್ರಾಹ್ಮಣರನ್ನಾಗಿಸುವುದಾದರೆ ಗಾಂಧಿಯವರು ಎಲ್ಲರೂ ತಮ್ಮ ಮನೆಯ ಕೆಲಸವನ್ನು ತಾವೇ ಮಾಡಿಕೊಂಡಾಗ ಇದು ಸಾಧ್ಯವಾಗುತ್ತದೆ ಎಂದು ಯೋಚಿಸಿದರು.

ಪರಾಮರ್ಶನಗಳು

1. ಕಿಂಗ್ಸಲಿ ಡೇವಿಸ್, **ಹುಮನ್ ಸೊಸಾಯಿಟಿ** (ನ್ಯೂಯಾರ್ಕ್ : 1959) ಪು. 58.

2. ಎಂ. ಎನ್. ಶ್ರೀನಿವಾಸ್, **ಕಾಸ್ಟ ಇನ್ ಮಾಡರ್ನ ಇಂಡಿಯಾ** ; (ಬಾಂಬೆ ; 1962) ಪು. 3.

3. ಕೆ. ಎಂ. ಪನ್ನಿಕರ್ **ಸೊಸಾಯಿಟಿ ಎಟ್‌ಕ್ರಾಸ್‌ರೋಡ್ಸ** (ಬಾಂಬೆ : 1955).

4. ಹೆರಾಲ್ಡ ಐಜಾಕ್, **ಇಂಡಿಯಾಸ್ ಎಕ್ಸ-ಅನ್‌ಟಚಬಲ್ಸ.**

5. ಕೆ. ಚಂದ್ರಶೇಖರಯ್ಯ, **ಎಜುಕೇಶನಲ್ ಪ್ರಾಬ್ಲಮ್ಸ ಆಫ್**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೆಡ್ಯೂಲ್ಡ್ ಕಾಸ್ಟಸ್ ಎನ್. ಸಿ. ಈ. ಆರ್. ಟಿ. ರಿಪೋರ್ಟ್ (ಅಪ್ರಕಟಿತ) ಪು. 160–164

6. ಮೇಲಿನದೇ ಪು, 164-170

7. ಡಿ.ಎನ್. ಮಜುಂಮದಾರ **ಕಾಸ್ಟ ಆ್ಯಂಡ್ ಕಮ್ಯುನಿಕೇಶನ್ ಇನ್ ಆ್ಯನ್ ಇಂಡಿಯನ್ ವಿಲೇಜ್** ಬಾಂಬೆ ಪು 1961) ಪು 335

8. ಜೆ. ಹೆಚ್. ಹಟನ್ **ಕಾಸ್ಟ ಇನ್ ಇಂಡಿಯಾ** ಲಂಡನ್ : 1961) ಪು. 149-191.

9. ಜಿ. ಎಸ್. ಘುರೆ, ಕಾಸ್ಟ **ಕಾಸ್ಟ ಆ್ಯಂಡ್ ಕ್ಲಾಸ್ ಇನ್ ಇಂಡಿಯಾ** (ಬಾಂಬೆ : 1957 ಪು. 56–58.

10. ಮ್ಯಾಕ್ಸವೆಬರ್, **ದಿ ರಿಲಿಜನ ಆಫ್ ಇಂಡಿಯಾ** (ಗ್ಲೆನ್‌ಕ್ಯೊ 1958 ಪು. 84.

11. ಮೇಲಿನದೇ

12. ಹೆನ್ರಿಮೇಯ್ನ್, **ವಿಲೇಜ್ ಕಮ್ಯೂನಿಟೀಜ್ ಇನ್ ದಿ ಈಸ್ಟ ಆ್ಯಂಡ್ ವೆಸ್ಟ** (ಲಂಡನ್ : 1876) 11 ಲೆಕ್ಚರ್.

13. ಮಾಕ್ಸವೆಬರ್, ಮೇಲಿನ ಉಲ್ಲೇಖದಂತೆ

14. ಎಮ್. ಎನ್. ಶ್ರೀನಿವಾಸ್ ಮೇಲಿನ ಉಲ್ಲೇಖದಂತೆ

15. ಪಿತಿರಿವ್ ಸಾರೋಕಿನ್, **ಸೋಶಿಯಲ್ ಆ್ಯಂಡ್ ಕಲ್ಚರಲ್ ಮೊಬಿಲಿಟಿ** (ಗ್ಲೆನ್‌ಕ್ಯೊ : 1959) ಪು, 364–368

16. **ರೂರಲ್ ಲೈಫ್ ಆ್ಯಂಡ್ ಇನ್ಸಟಿಟ್ಯೂಷನ್ಸ ಇನ್ ನಾರ್ತ್ ಕೆನರಾ** ಫೀಲ್ಡ್ ರಿಪೋರ್ಟ್ಸ (ಅಪ್ರಕಟಿತ) ಡಿಪಾರ್ಟ್‌ಮೆಂಟ್ ಆಫ್ ಸೋಶಿಯಾಲಜಿ, ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

17. ಮ್ಯಾಕ್ಸವೆಬರ್, ಮೇಲಿನ ಉಜಾಖದಂತೆ ಪು. 9–12

18. ಬಾಡೆನ್ ಪಾವೆಲ್, **ದಿ ಇಂಡಿಯನ್ ವಿಲೇಜ್ ಕಮ್ಯುನಿಟಿ** (ನ್ಯೂಹವೆನ್ : 1957) ಪು. 80

19. ಡಿ, ಎಸ್. ಮಜುಂಮ್‌ದಾರ್, ಮೇಲಿನ ಉಲ್ಲೆಖದಂತೆ, ಪು. 331-339.

20, ಅ. ಈ. ಪುನೀತ್, **ಸ್ಟ್ರಕ್ಚರಲ್ ಡಿಟರ್ಮಿನೆಂಟ್ಸ ಇನ್ ರೂರಲ್**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೀಡರ್‌ಶಿಪ್, ಪಿ.ಹೆಚ್.ಡಿ. ಪ್ರಬಂಧ (ಅಪ್ರಕಟಿತ) ಪು. 114.

21. ಡಿ. ಎನ್. ಮಜುಂದಾರ್, ಮೇಲಿನ ಉಲ್ಲೇಖದಂತೆ ಪು. 331–39.

22. ಎಂ.ಎನ್. ಶ್ರೀನಿವಾಸ್, ಮೇಲಿನ ಉಲ್ಲೇಖದಂತೆ.

23. ಆ್ಯಂಡ್ರೆ ಬಿಟಲ್ **ಕಾಸ್ಟ್, ಕ್ಲಾಸ್ ಆ್ಯಂಡ್ ಪವರ್** (ಬಾಂಬೆ : 1966)

Presented free of cost with compliments from
the Central Institute of Indian Languages
(Govt. of India), Mysore-570 006

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ 7

ಜನಸಂಖ್ಯೆ

ಕ್ರೈಸ್ತಯುಗ ಪೂರ್ವದಲ್ಲಿ ಭಾರತವು ಗಣನೀಯ ಪ್ರಮಾಣದಲ್ಲಿ ಜನಸಂಖ್ಯೆಯನ್ನು ಹೊಂದಿತ್ತು ಎಂದು ನಂಬಲಾಗಿದೆ. ಪ್ರಾಣನಾಥ ರಂತಹ ಜನಸಂಖ್ಯಾ ಶಾಸ್ತ್ರಜ್ಞರು ಕ್ರಿ. ಪೂ. 300ರಲ್ಲಿ ಭಾರತದ ಜನಸಂಖ್ಯೆ 100 ರಿಂದ 140 ಮಿಲಿಯನ್ ಇದ್ದಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಆಗ ಜನಸಂಖ್ಯೆಯು ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ ಅಧಿಕವಾಗಿದ್ದು ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿತ್ತು. ಕ್ರಿ. ಪೂ. 300 ಮತ್ತು 200ರ ಮಧ್ಯಕಾಲದಲ್ಲಿ ಭಾರತದ ಜನಸಂಖ್ಯೆಯು ಹೆಚ್ಚುಕಡಿಮೆ ಸ್ಥಿರವಾಗಿಯೇ ಉಳಿಯಿತೆಂದು ಹೇಳಬಹುದು ಶಾಂತಿ, ಸಮೃದ್ಧಿಯ ವರ್ಷಗಳಲ್ಲಿ ನಿಧಾನವಾಗಿ ಹೆಚ್ಚಳವಾಗಿ, ಯುದ್ಧ, ಕ್ಷಾಮ ಮತ್ತು ಸಾಂಕ್ರಾಮಿಕ ರೋಗಗಳು ಹರಡಿದ ಅವಧಿಯಲ್ಲಿ ಕಡಿಮೆಯಾಯಿತು. ಹೀಗೆ ಸಾಮಾನ್ಯ ಪರಿಸ್ಥಿತಿ ಮತ್ತು ಗೊಂದಲದ ಕಾಲಗಳಲ್ಲಿ ಜನಸಂಖ್ಯೆಯು ಗಾತ್ರದಲ್ಲಿ ಏರಿಳಿತವಿತ್ತು. ಆದರೂ ಈ ಅವಧಿಯಲ್ಲಿನ ಜನಸಂಖ್ಯಾ ಬೆಳವಣಿಗೆಯ ಸಮಗ್ರ ಚಿತ್ರಣವು ಜನಸಂಖ್ಯೆಯು ಸ್ಥಿರವಾಗಿದ್ದಿತು ಎಂಬುದನ್ನು ತೋರಿಸುತ್ತದೆ. ಪ್ರಾಣನಾಥರವರ ಅಭಿಪ್ರಾಯದಂತೆ "ದೇಶದ ಜನಸಂಖ್ಯಾಗಾತ್ರವು ಪ್ರಾಚೀನ ಹಿಂದೂ ಅವಧಿ ಮತ್ತು ಮಹಮ್ಮದಿಯರ ಆಳ್ವಿಕೆಯ ಪ್ರಾರಂಭದ ಕಾಲದ ನಡುವೆ ಹೆಚ್ಚು ವ್ಯತ್ಯಾಸ ಹೊಂದಿರಲಿಲ್ಲ, ಹೆಚ್ಚು ಕಡಿಮೆ 100 ರಿಂದ 140 ಮಿಲಿಯನ್ ನಡುವಿನ ಮಿತಿಯಲ್ಲಿ ಸ್ಥಿರವಾಗಿದ್ದಿತು...."

ಮೋರಲ್ಯಾಂಡ್‌ರವರು ಪ್ರಾರಂಭದ ಯುರೋಪಿಯನ್ ವೀಕ್ಷಕರ ಬರವಣಿಗೆಗಳನ್ನು ವಿಶ್ಲೇಷಿಸಿ ಪ್ರಾಚೀನ ಭಾರತದ ಜನಸಂಖ್ಯೆಯ ಗಾತ್ರವನ್ನು ಅಂದಾಜು ಮಾಡಿದ್ದಾರೆ. ಆಗ ಭಾರತದಲ್ಲಿ ಕೆಲವು ನಗರಗಳು ಕಾಲು ಮಿಲಿಯನ್‌ನಿಂದ ಅರ್ಧ ಮಿಲಿಯನ್‌ನಷ್ಟು ಜನಸಂಖ್ಯೆಯನ್ನು ಹೊಂದಿರುವುದನ್ನು ಗಮನಿಸಿ ಈ ದೇಶವು ಆಗ ಅಧಿಕ ಜನಸಂಖ್ಯೆಯನ್ನು ಹೊಂದಿತ್ತು ಎಂದು ಅವರು ತೀರ್ಮಾನಿಸಿದ್ದಾರೆ. ಅದೇ ರೀತಿ ದಕ್ಷಿಣ ಭಾರತದ ಸೈನಿಕಶಕ್ತಿಯ ಆಧಾರದ ಮೇಲೆ (30 ಜನರಲ್ಲಿ ಒಬ್ಬನು ಸೈನಿಕನಾಗಿದ್ದನು ಎಂದು ಭಾವಿಸಲಾಗಿತ್ತು) ಮೋರಲ್ಯಾಂಡ್‌ರವರು ಕ್ರಿ.ಶ.1600ರಲ್ಲಿ ದಕ್ಷಿಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾರತದಲ್ಲಿ 30 ಮಿಲಿಯನ್ ಜನಸಂಖ್ಯೆಗಿಂತಲೂ ಕಡಿಮೆ ಇರಲಿಲ್ಲ ಎಂದು ಅಂದಾಜು ಮಾಡಿದ್ದಾರೆ. ಉತ್ತರದಲ್ಲಿ ಗಂಗಾನದಿಯ ಬಯಲು ಪ್ರದೇಶಗಳು ಮತ್ತು ಪಂಜಾಬ್‌ನಲ್ಲಿ ಜನಸಾಂದ್ರತೆಯು ಅಧಿಕವಾಗಿದ್ದು ಒಟ್ಟು 40 ಮಿಲಿಯನಷ್ಟಿದ್ದಿತು. ಇತರೆ ಹೆಚ್ಚು ಜನಸಾಂದ್ರತೆಯುಳ್ಳ ಪ್ರದೇಶಗಳಾದ ಗುಜರಾತ್ ಮತ್ತು ಬಂಗಾಳಗಳು 30 ಮಿಲಿಯನ್ ಜನಸಂಖ್ಯೆಯನ್ನು ಹೊಂದಿದ್ದವು. ಹೀಗೆ ಈ ಅವಧಿಯ ಭಾರತದ ಒಟ್ಟು ಜನಸಂಖ್ಯೆಯು 100 ಮಿಲಿಯನ್ ಇದ್ದಿತು. ಆದಾಗ್ಯೂ ಈ ಅಂಕಿಅಂಶಗಳು ಮತ್ತು ಇತರೆ ದಸ್ತವೇಜುಗಳನ್ನು ಪರಿಶೀಲಿಸಿದ ಡೇವಿಸ್‌ರವರು ಕ್ರಿ. ಶ. 1600ರಲ್ಲಿ ಭಾರತದ ಜನಸಂಖ್ಯೆಯು 125 ಮಿಲಿಯನ್ ಇದ್ದಿತು ಎಂದು ತೀರ್ಮಾನಿಸಿದ್ದಾರೆ.

ಯುರೋಪಿನ ಜನಸಂಖ್ಯೆಯ ಜೊತೆಗೆ ಭಾರತದ ಜನಸಂಖ್ಯೆಯನ್ನು ಹೋಲಿಸಿದಾಗ ಈ ಅವಧಿಯ ಜನಸಾಂಖ್ಯಿಕ ಸಂದರ್ಭದ ಮೇಲೆ ಮಹತ್ತರವಾದ ಬೆಳಕನ್ನು ಬೀರುತ್ತದೆ. 1650ರಲ್ಲಿ ರಷ್ಯಾವು ಸೇರಿದಂತೆ ಇಡೀ ಯುರೋಪ್ 100 ಮಿಲಿಯನ್ ಜನಸಂಖ್ಯೆಯನ್ನು ಹೊಂದಿದ್ದಿತು. ಅರ್ಥಾತ್ ಈ ಅವಧಿಯಲ್ಲಿಯೂ ಸಹ ಭಾರತವು ಯುರೋಪಿಗಿಂತಲೂ ಹೆಚ್ಚಿನ ಜನ ಸಾಂದ್ರತೆಯನ್ನು ಹೊಂದಿದ್ದಿತು. ಅನೇಕ ಶತಮಾನಗಳವರೆಗೂ ಇದು ಮುಂದುವರೆಯಿತು.

ಭಾರತವು 17 ಮತ್ತು 19ನೇ ಶತಮಾನದ ಅವಧಿಯಲ್ಲಿ ಯುದ್ಧ ಮತ್ತು ಗೊಂದಲಗಳಿಂದಾಗಿ ಜನಸಂಖ್ಯೆಯಲ್ಲಿ ಹಿಂಜರಿತ ಅನುಭವಿಸಿತು ಎಂಬುದನ್ನು ಡೇವಿಸ್ ಒಪ್ಪಿಕೊಳ್ಳುತ್ತಾರೆ. ಆದರೂ ತೀಕ್ಷ್ಣವಾದಂತಹ ಅವ್ಯವಸ್ಥೆಯು 1707ರಲ್ಲಿ ಔರಂಗಜೇಬನ ಮರಣದ ನಂತರ ಪ್ರಾರಂಭವಾಯಿತು. ಈ ಗೊಂದಲವು ಇಡೀ ಭಾರತದಲ್ಲಿ ಹೆಚ್ಚು ಹೋರಾಟಗಳನ್ನು ಮಾಡುತ್ತಿದ್ದಂತಹ ಮರಾಠರ ಗೆರಿಲ್ಲಾ ಯುದ್ಧಗಳಿಂದಾಗಿ ಹೆಚ್ಚಾಗಿತ್ತು. 18ನೇ ಶತಮಾನದ ಮಧ್ಯಭಾಗದಲ್ಲಿ ಜನರು ಚಿಕ್ಕಗ್ರಾಮಗಳನ್ನು ಬಿಟ್ಟರು, ಜನಸಂಖ್ಯೆ ಒಂದೇ ಪ್ರದೇಶದಲ್ಲಿ ಕೇಂದ್ರೀಕೃತವಾಗಿ ಹೊರಗಿನ ಆಕ್ರಮಣಕಾರರನ್ನು ಎದುರಿಸುವಂತಹ ಸಮರ್ಥ ಸೈನಿಕ ಶಕ್ತಿಯಾಯಿತು. ವಿಶಾಲವಾದಂತಹ ಹಳ್ಳಿಗಳಲ್ಲಿ ರೈತರು ತಮ್ಮ ಕೈಯಲ್ಲಿ ಖಡ್ಗಗಳನ್ನು ಹಿಡಿದು ದುಡಿಮೆ ಮಾಡುತ್ತಿದ್ದರು. ಎಷ್ಟು ಭೂಮಿಯನ್ನು ರಕ್ಷಿಸಿಕೊಳ್ಳಲು ಸಾಧ್ಯವೋ ಅಷ್ಟು ಭೂಮಿಯನ್ನು ಸಾಗುವಳಿಮಾಡುತ್ತಿದ್ದರು. ವ್ಯವಸ್ಥೆಯನ್ನು ಮೊದಲ ಸ್ಥಿತಿಗೆ ತಂದಾಗ ಜನಸಂಖ್ಯಾ ಬೆಳವಣಿಗೆಯು ಪುನರಚಿತಗೊಂಡಿತು.

ಯುರೋಪಿಯನ್ ಆಡಳಿತದ ಆಗಮನದ ಜನಸಾಂಖ್ಯಿಕ ಪರಿಣಾಮವೆಂದರೆ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಯುದ್ಧ, ಅರಾಜಕತೆ, ಕ್ಷಾಮ ಮತ್ತು ರೋಗಗಳನ್ನು ತಡೆಯುವುದರ ಮೂಲಕ ಮರಣದರವು ಕಡಿಮೆಯಾಯಿತು. ಈ ರಾಜಕೀಯ ಬದಲಾವಣೆಯಿಲ್ಲದೆ ಭಾರತದ ಜನಸಾಂಖ್ಯಿಕ ಪರಿಸ್ಥಿತಿಯು ಸದಾ ಬದಲಾವಣೆಯಾಗಿತ್ತೆ ? ಎಂದು ಯಾರಾದರೂ ಸಂದೇಹ ಪಡುತ್ತಾರೆ. ಭಾರತದಲ್ಲಿ ಕಠಿಣವಾದಂತಹ ಸಾಮಾಜಿಕ ವ್ಯವಸ್ಥೆಯಿಂದಾಗಿ ಮತ್ತು ಸ್ವತಂತ್ರವಾಗಿ ಔದ್ಯೋಗಿಕ ಕ್ರಾಂತಿಯನ್ನು ಪ್ರಾರಂಭಿಸಲು ಅಸಮರ್ಥವಾಗಿದ್ದರಿಂದ ಬದಲಾವಣೆಯು ಮಂದಗತಿಯಲ್ಲಿದಿತು. ಹೊಸ ರಾಜಕೀಯ ವ್ಯವಸ್ಥೆ ಮತ್ತು ಆಧುನಿಕ ಉದ್ದಿಮೆಗಳನ್ನು ಪರಿಚಯಿಸಿದ ಯೂರೋಪಿಯನ್ನರು ಮಹತ್ತರವಾದಂತಹ ಜನಸಾಂಖ್ಯಿಕ ಬದಲಾವಣೆಗಳ ಕಡೆಗೆ ಗಮನಹರಿಸಿದರು. ಇದಾದ ನಂತರವು ಕೂಡ ಜನಸಂಖ್ಯಾ ಬೆಳವಣಿಗೆಯ ದರವು ಸಂಪೂರ್ಣವಾಗಿ ಕ್ಷೀಣಿಸಿತು. ಈ ಅವಧಿಯಲ್ಲಿನ ಜನಸಂಖ್ಯೆಯ ಅಂಕಿಅಂಶವು ಬಹು ಅನಿಶ್ಚಿತ ಮತ್ತು ನಂಬಲರ್ಹವಾಗಿಲ್ಲದ ಕಾರಣದಿಂದಾಗಿ ಈ ಅವಧಿಯಲ್ಲಿನ ಭಾರತದಲ್ಲಿನ ಜನ ಸಾಂಖ್ಯಿಕ ಬದಲಾವಣೆಗಳನ್ನು ಗ್ರಹಿಸುವುದು ತುಂಬ ಕಷ್ಟಕರವಾದುದಾಗಿದೆ. ಬ್ರಿಟೀಷ್ ಆಡಳಿತದ ಮೊದಲ ಶತಮಾನದ ಪ್ರಾರಂಭದಲ್ಲಿಯೂ ಕೂಡ 1867 ರಿಂದ 1871ರವರೆಗೆ ಜನಸಂಖ್ಯಾ ಮಾಹಿತಿಗಳನ್ನು ಸಂಗ್ರಹಿಸಲು ವ್ಯವಸ್ಥಿತವಾದ ಪ್ರಯತ್ನಗಳನ್ನು ಮಾಡಲಿಲ್ಲ. ಆಗ ದೊರೆಯುತ್ತಿದ್ದ ಮಾಹಿತಿಯು ಕೇವಲ ಅಂದಾಜಿನದಾಗಿದ್ದಿತು. ಕೆಳಗಿನ ಕೋಷ್ಟಕ ವಿವಿಧ ಜನಸಂಖ್ಯಾಶಾಸ್ತ್ರಜ್ಞರಿಂದ ಸಂಗ್ರಹಿಸಲಾಗಿದ್ದು, ಕ್ರಿ. ಪೂ. 300ರಿಂದ ಕ್ರಿ. ಶ. 1871ರವರೆಗಿನ ಭಾರತದ ಜನಸಂಖ್ಯೆಯ ಅಂದಾಜುಗಳನ್ನು ತೋರಿಸುತ್ತದೆ.

ಕ್ರಿ. ಪೂ. 300 ರಿಂದ ಕ್ರಿ. ಶ. 1871ರವರೆಗಿನ ಭಾರತದ ಜನಸಂಖ್ಯೆ

	ಕಾಲ	ಮಿಲಿಯನ್‌ಗಳಲ್ಲಿ	ಸರಾಸರಿ ವಾರ್ಷಿಕ ಬೆಳವಣಿಗೆ
ಕಿ. ಪೂ.	300	100-140	—
ಕ್ರಿ. ಶ.	1600	100	—
	1800	120	0.09
	1834	130	9.24
	1845	130	—
	1855	175	2.97
	1867	255	0.84

Source : Kingsley Davis, population of India and Pakistan (Princeton : 1951), P.25

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲಿನ ಕೋಷ್ಟಕದಿಂದ ಎರಡು ಪ್ರಮುಖ ಲಕ್ಷಣಗಳನ್ನು ಗಮನಿಸಬಹುದು. ಭಾರತದ ಜನಸಂಖ್ಯೆಯು 1600ರಿಂದ 1845ರವರೆಗೆ ಹೆಚ್ಚಾಗಿ ಸ್ಥಾಯಿಯಾಗಿದ್ದಿತು. ಮತ್ತು ಎರಡನೆಯದಾಗಿ 1845ರಿಂದ 1871ರವರೆಗೆ ಜನಸಂಖ್ಯೆಯು ಬಹು ತ್ವರಿತವಾಗಿ ಅಧಿಕವಾಯಿತು. ಇದು 100%ಗೆ ಸಮವಾಗಿದ್ದಿತು. ಆದರೆ ಡೇವಿಸ್ ರವರು ಈ ಅಂಕಿಅಂಶಗಳು ನಂಬಲರ್ಹವಾದವುಗಳಲ್ಲವೆಂಬ ಅಭಿಪ್ರಾಯವನ್ನು ಹೊಂದಿದ್ದರು. ಇವರು ಈ ಅಂಕಿಅಂಶಗಳು ಕೊಡುವಂತಹ ಅವಾಸ್ತವಿಕ ಕಲ್ಪನೆಗಳಿಂದ ದೂರವಿರಬೇಕೆಂದು ನಮಗೆ ಸೂಚಿಸುತ್ತಾರೆ. ಅವರು ಭಾರತದಲ್ಲಿ ಹೆಚ್ಚು ಜನರು ಇವುಗಳನ್ನು ನಂಬುವುದಕ್ಕಿಂತ ಜನಗಣತಿಯ ಅಂಕಿ-ಅಂಶಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರು ಭಾರತದಲ್ಲಿ 1600ರಲ್ಲಿ 100 ಮಿಲಿಯನ್ ಜನಸಂಖ್ಯೆಯ ಬದಲಿಗೆ ಸುಮಾರು 125 ಮಿಲಿಯನ್ ಜನಸಂಖ್ಯೆ ಇದ್ದಿತು ಎಂದು ಅಭಿಪ್ರಾಯಪಡುತ್ತಾರೆ.

1870ರ ನಂತರ ಜನಗಣತಿಯ ಮಾಹಿತಿಗಳನ್ನು ಸಂಗ್ರಹಿಸಲು ವ್ಯವಸ್ಥಿತವಾದ ಪ್ರಯತ್ನಗಳನ್ನು ಮಾಡಲಾಯಿತು. ಆದ್ದರಿಂದ ಆ ಅವಧಿಯ ನಂತರ ನಾವು ಭಾರತದ ಜನಸಂಖ್ಯಾ ಬೆಳವಣಿಗೆಯ ಒಲವುಗಳ ಉತ್ತಮವಾದ ಚಿತ್ರಣವನ್ನು ಪಡೆಯಬಹುದು. ಈ ಮುಂದೆ ವಿವಿಧ ದಶಕಗಳ ಅವಧಿಯಲ್ಲಿನ ಜನಸಂಖ್ಯೆಯಲ್ಲಿನ ಬದಲಾವಣೆಗಳನ್ನು ನಾವು ಚರ್ಚಿಸಬಹುದು.

1867ರಿಂದ 1872 : ಈ ಅವಧಿಯಲ್ಲಿ ಭಾರತದಲ್ಲಿ ಜನಸಂಖ್ಯೆಯು 214 ಮಿಲಿಯನ್ ಇದ್ದಿತು ಎಂದು ಅಂದಾಜು ಮಾಡಲಾಗಿದೆ. ಈ ಅವಧಿಯಲ್ಲಿ ಮೊದಲನೆಯ ಜನಗಣತಿಯನ್ನು ನಡೆಸಲಾಯಿತು. ಆದರೂ ಈ ಕ್ರಮಾನುಗತವಾದಂತಹ ಜನಗಣತಿಯು ಇತರೆ ಪ್ರದೇಶಗಳನ್ನು ಬಿಟ್ಟು ಕೇವಲ ಬ್ರಿಟೀಷ್ ಆಳ್ವಿಕೆಯ ಭೂಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದಿತು. ಒಟ್ಟು ಸಂಖ್ಯೆಯು, ಜನಸಂಖ್ಯೆಯು ಮರಣದರದ ಇಳಿಯುವಿಕೆಯಿಂದಾಗಿ ಅಧಿಕವಾಗಿರುವುದನ್ನು ತೋರಿಸುತ್ತದೆ. ಯುದ್ಧ, ಕಲಹ, ಮುಂತಾದವುಗಳನ್ನು ಕಡಿಮೆಗೊಳಿಸುವಿಕೆ, ಉದ್ದಿಮೆಗಳ ಸ್ಥಾಪನೆ, ಸಾರಿಗೆ ಮತ್ತು ಸಂಪರ್ಕದ ಅಭಿವೃದ್ಧಿ ಮುಂತಾದವುಗಳು ಬರಗಾಲ ಮತ್ತು ಸಾಂಕ್ರಾಮಿಕ ರೋಗಗಳನ್ನು ಕಡಿಮೆಗೊಳಿಸಲು ಸಹಾಯಕವಾದವು.

1872ರಿಂದ 1881 : 1881ರ ಜನಗಣತಿಯು ಭಾರತದ ರಾಷ್ಟ್ರೀಯ ಮಟ್ಟದ ಮೊದಲನೆಯ ಜನಗಣತಿಯಾಗಿದೆ, ಇದು ಭಾರತದಲ್ಲಿ 212 ಮಿಲಿಯನ್ ಜನಸಂಖ್ಯೆ ಇದ್ದಿತು ಎಂಬುದನ್ನು ತೋರಿಸುತ್ತವೆ. ಈ ದಶಕದ ಅವಧಿಯಲ್ಲಿ ಏಳು ಬರಗಾಲಗಳು ಮತ್ತು ಐದು ಪ್ರಕೃತಿ ವಿಕೋಪಗಳು ಮಾನವನ ಜೀವನದ ಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೊಡ್ಡ ಹೊಡೆತವನ್ನುಂಟುಮಾಡಿದ್ದವು. ಕ್ಷಾಮ ಅಧ್ಯಯನದ ಆಯೋಗವು ಕ್ಷಾಮದ ವಿವಿಧ ಕಾರಣ ಮತ್ತು ಪರಿಣಾಮಗಳನ್ನು ಅಧ್ಯಯನಿಸಲು ನೇಮಕಗೊಂಡು ಕೆಲವು ಮುಖ್ಯವಾದಂತಹ ಅವಲೋಕನೆಗಳನ್ನು ಮಾಡಿತು. ಆಯೋಗವು ಹಸಿವು ಮತ್ತು ದಾರಿದ್ರ್ಯಗಳು ಬರಗಾಲದಿಂದುಂಟಾಗಿ ಜನತೆಯ ಫಲವಂತಿಕೆಯು ಮೇಲೆವ್ಯತಿರಿಕ್ತ ಪರಿಣಾಮ ಬೀರಿ, ಜನನದರವು ಕ್ಷೀಣಿಸಿ ಈ ಅವಧಿಯಲ್ಲಿ ಜನ ಸಂಖ್ಯೆಯನ್ನು ಎರಡು ಮಿಲಿಯನ್‌ನಷ್ಟು ಕಡಿಮೆಯಾಗಿದೆ ಎಂದು ಅಭಿಪ್ರಾಯ ಪಟ್ಟಿತು.

1881ರಿಂದ 1891 : ಈ ದಶಕದ ಅವಧಿಯಲ್ಲಿ ಜನನ ದರವು 48.9 ಮತ್ತು ಮರಣ ದರವು 39.3 ಹಾಗೂ ಜನಸಂಖ್ಯೆಯ ಬೆಳವಣಿಗೆಯ ದರವು 9.6 ಮತ್ತು ಒಟ್ಟು ಜನಸಂಖ್ಯೆಯು 236.7 ಮಿಲಿಯನ್ ಇದ್ದಿತು. ಇದು ಕಡಿಮೆ ಕ್ಷಾಮಗಳನ್ನು ಕಂಡಂತಹ ಸಂತಸಭರಿತವಾದ ದಶಕವಾಗಿದೆ. ಬೆಳೆಯ ವಿಫಲತೆಯ ಪರಿಸ್ಥಿತಿಯು ಕೂಡ ಕಡಿಮೆಯಾಯಿತು. ಆದ್ದರಿಂದ ಈ ಅವಧಿಯಲ್ಲಿ ಜನಸಂಖ್ಯೆಯು 1000ಕ್ಕೆ 9.6 ದಷ್ಟು ಹೆಚ್ಚಾಗುತ್ತಾ ಹೋಯಿತು.

1891ರಿಂದ 1901 : ಈ ದಶಕದ ಅವಧಿಯಲ್ಲಿ ಜನನ ದರವು 45.8 ಮರಣದರ 44.6 ಮತ್ತು ಜನಸಂಖ್ಯೆಯ ಬೆಳವಣಿಗೆಯ ದರವು 1.4 ರಷ್ಟಿದ್ದು ಒಟ್ಟು ಜನಸಂಖ್ಯೆಯು 236 3 ಮಿಲಿಯನಷ್ಟಿದ್ದಿತು. ಇದು ಪುನಃ ಒಂದು ಕೆಟ್ಟ ದಶಕ ವಾಗಿತ್ತು. ಈ ದಶಕದ ಅವಧಿಯಲ್ಲಿ ಕ್ಷಾಮಗಳು ಭಾರತದಲ್ಲೆಡೆಯೂ ಸಂಭವಿಸಿದವು. ಆಗಾಗ್ಗೆ ಬರುವ ಸಾಂಕ್ರಾಮಿಕ ರೋಗಗಳು ಕೂಡ ಹೆಚ್ಚಾದವು. ಆದುದರಿಂದ ಜನಸಂಖ್ಯೆಯು ಕೇವಲ ಸಾವಿರಕ್ಕೆ 1.4ರಷ್ಟು ಹೆಚ್ಚಾಯಿತು.

1901ರಿಂದ 1911 : ಈ ದಶಕದ ಅವಧಿಯಲ್ಲಿ ಜನನ ದರವು 52.4 ಮರಣದರ 46.8 ಮತ್ತು ಜನಸಂಖ್ಯೆಯ ಬೆಳವಣಿಗೆಯ ದರವು 5.6 ಇದ್ದು ಒಟ್ಟು ಜನಸಂಖ್ಯೆಯು 250.1 ಮಿಲಿಯನ್ ಆಗಿದ್ದಿತು. ಒಟ್ಟಾರೆಯಾಗಿ ಇದು ಒಂದು ಒಳ್ಳೆಯ ದಶಕವಾಗಿತ್ತು. ಇದು ಕ್ಷಾಮ, ನೈಸರ್ಗಿಕ ದುರಂತ ಮತ್ತು ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದ್ದಿತು.

1911ರಿಂದ 1921 : ಈ ದಶಕದ ಅವಧಿಯಲ್ಲಿ ಜನನ ದರವು 48.1 ಮರಣ ದರವು 47,2 ಮತ್ತು ಜನಸಂಖ್ಯೆಯ ಬೆಳವಣಿಗೆಯ ದರವು 0.9 ರಷ್ಟಿದ್ದು ಒಟ್ಟು ಜನಸಂಖ್ಯೆಯು 251.4 ಮಿಲಿಯನ್ ಆಗಿದ್ದಿತು. ಇದು ಕೆಟ್ಟ ದಶಕ ವಾಗಿದ್ದಿತು. ಇದು 1872–1881 ಮತ್ತು 1891–1901 ಈ ದಶಕಗಳಷ್ಟೆ ಕೆಟ್ಟ ಪರಿಸ್ಥಿತಿಯಿಂದ ಕೂಡಿದ ದಶಕವಾಗಿತ್ತು. ಈ ಅವಧಿಯಲ್ಲಿ 9 ಪ್ರಮುಖವಾದ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕ್ಷಾಮಗಳು ಸಂಭವಿಸಿದುದರ ಬಗ್ಗೆ ವರದಿಯಾಗಿವೆ. 1918–1919ರಲ್ಲಿ ಭೀಕರವಾದ ಶೀತಜ್ವರ ಕಾಣಿಸಿಕೊಂಡಿತು. ಇದು ಹೆಚ್ಚು ಜನಸಂಖ್ಯೆಯನ್ನು ಆಹುತಿ ತೆಗೆದು ಕೊಂಡಿತು. ಸರ್ಕಾರಿ ವರದಿಯೊಂದರ ಪ್ರಕಾರ 13 ಮಿಲಿಯನ್, ವಾರನ್ ಥಾಮ್ಸನ್‌ರ ಪ್ರಕಾರ 15 ಮಿಲಿಯನ್ ಮತ್ತು ಕಿಂಗ್ಸ್‌ಲೀ ಡೇವಿಸ್‌ರವರ ಪ್ರಕಾರ 18.5 ಮಿಲಿಯನ್ ಜನಸಂಖ್ಯೆಯು ಈ ರೋಗದಿಂದ ನಾಶಹೊಂದಿತು.

1921ರಿಂದ 1931 : ಈ ದಶಕದ ಅವಧಿಯಲ್ಲಿ ಜನನ ದರವು 46.4 ಮರಣ ದರವು 36.3 ಮತ್ತು ಜನಸಂಖ್ಯಾ ಬೆಳವಣಿಗೆಯ ದರವು 10.1 ಇದ್ದು ಮತ್ತು ಒಟ್ಟು ಜನಸಂಖ್ಯೆಯು 179.0 ಮಿಲಿಯನ್ ಆಗಿದ್ದಿತು. ಇದು ಭಾರತದ ಜನಸಾಂಖ್ಯಿಕ ಇತಿಹಾಸದಲ್ಲಿಯೇ ಬಹು ಪ್ರಾಮುಖ್ಯವಾದಂತಹ ದಶಕವಾಗಿದೆ ಮತ್ತು ಇದು ಭಾರತದ ಜನಸಾಂಖಿಕ ದೈವ (destiny) ಎಂದು ಹೆಸರಾಗಿದೆ. 1951ರ ಜನಗಣತಿಯ ಆಯುಕ್ತರಾದ ಗೋಪಾಲಸ್ವಾಮಿಯವರು ಇದನ್ನು "ಮಹಾವಿಭಜನೆಯ ದಶಕ" (The decade of great divide) ಎಂದು ಕರೆದಿದ್ದಾರೆ. ಈ ದಶಕದ ಪ್ರಾಮುಖ್ಯತೆಗೆ ವಿವಿಧ ಕಾರಣಗಳನ್ನು ಕೊಡಬಹುದು.

(ಅ) ಕಾಲರ, ಪ್ಲೇಗು, ವಿಷಮಶೀತಜ್ವರ ಮತ್ತು ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳನ್ನು ತಡೆಯಲಾಯಿತು. ಪರಿಣಾಮವಾಗಿ ಭಾರತದ ಇತಿಹಾಸದಲ್ಲಿ ಹಿಂದೆಂದೂ ಕಂಡಿರದಂತಹ ಜನಸಂಖ್ಯಾ ಬೆಳವಣಿಗೆ ಪ್ರವೃತ್ತಿಯು ಕಂಡು ಬಂದಿತು.

(ಬ) ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣವನ್ನು ತುಲನಾತ್ಮಕವಾಗಿ ಅಂದಾಜು ಮಾಡುವುದರ ಮೂಲಕ ನೋಡಬಹುದು. ನಾವು 1921ನೇ ಇಸವಿಯನ್ನು ಮೂಲ ವರ್ಷವಾಗಿ ತೆಗೆದುಕೊಂಡು 30 ವರ್ಷಗಳ ಹಿಂದೆ ಮತ್ತು 30 ವರ್ಷಗಳ ನಂತರ ಜನಸಂಖ್ಯಾ ಬೆಳವಣಿಗೆಯನ್ನು ಪರಿಶೀಲಿಸಿದರೆ ಮಹತ್ವಪೂರ್ಣ ಅಂಶಗಳು ಬೆಳಕಿಗೆ ಬರುತ್ತವೆ. 30 ವರ್ಷಗಳ ಅವಧಿಯಲ್ಲಿ ಮುಖ್ಯವಾಗಿ 1921 ಅಂದರೆ 1891 ರಿಂದ 1921ರ ಅವಧಿಯಲ್ಲಿ ಜನಸಂಖ್ಯೆಯು ಅಂದಾಜು 14.7 ಮಿಲಿಯನ್‌ನಷ್ಟು ಹೆಚ್ಚಾದರೆ ಹಾಗೆಯೇ 1921ರ ನಂತರದ 30 ವರ್ಷಗಳಲ್ಲಿ ಅಂದರೆ 1921-51ರ ಅವಧಿಯಲ್ಲಿ ಜನಸಂಖ್ಯೆಯು 109.7 ಮಿಲಿಯನ್ನಷ್ಟು ಹೆಚ್ಚಾಯಿತು. ಇದರರ್ಥ ಜನಸಂಖ್ಯೆಯು 1921ರ ನಂತರದ 30 ವರ್ಷಗಳಲ್ಲಿ ಸುಮಾರು 8 ಪಟ್ಟು ಹೆಚ್ಚಾಯಿತು.

(ಕ) ವಾರನ್ ಥಾಮ್ಸನ್‌ರವರು ಈ ದಶಕದ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆಯ ಸಾಮಾನ್ಯ ಮಾದರಿಯು ಭಾರತದಲ್ಲಿ ಬದಲಾವಣೆ ಹೊಂದಿತು ಎಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರೆಯುತ್ತಾರೆ. ಪ್ರಾರಂಭದಿಂದ 1921ರವರೆಗೂ ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಯು ಸಾಮಾನ್ಯ ಬೆಳವಣಿಗೆಯನ್ನು ಸರಳರೇಖೆ ಮತ್ತು ಏರಿಳಿತಗಳಿಂದ ಕೂಡಿದಂತಹ ರೇಖೆಯು ಮೂಲಕ ತೋರಿಸಬಹುದು. ಅಂಕುಡೊಂಕಾದ ರೇಖೆಯು ಮರಣ ದರವನ್ನು ಪ್ರತಿನಿಧಿಸಿದರೆ ಸರಳ ರೇಖೆಯು ಜನನ ದರವನ್ನು ತೋರಿಸುತ್ತದೆ. ಆದರೆ ಈ ವಿಶೇಷ ಮಾದರಿಯು ಬದಲಾಯಿತು.

(ಡ) ಈ ದಶಕದ ಪ್ರಾಮುಖ್ಯತೆಯ ಮೇಲೆ ಟೀಕಿಸುತ್ತಾ ಕೆ. ಡೇವಿಸ್‌ರವರು 1921ರವರೆಗೂ ಭಾರತದ ಜನಸಂಖ್ಯಾ ಬೆಳವಣಿಗೆಯು ವ್ಯತ್ಯಾಸ ಹೊಂದುತ್ತಿದ್ದು ಅನಿಶ್ಚಿತವಾಗಿದ್ದಿತು, ಆದರೆ 1921ರ ನಂತರ ಸ್ಥಿರವಾಯಿತು ಎಂದು ಅಭಿಪ್ರಾಯಪಡುತ್ತಾರೆ.

1931 ರಿಂದ 1941ರವರೆಗೆ : ಈ ದಶಕದ ಅವಧಿಯಲ್ಲಿ ಜನನ ದರವು 45.2, ಮರಣ ದರವು 31.2 ಮತ್ತು ಜನಸಂಖ್ಯಾ ಬೆಳವಣಿಗೆಯ ದರವು 14.0 ಇದ್ದು ಒಟ್ಟು ಜನಸಂಖ್ಯೆಯು 316.7 ಮಿಲಿಯನ್ ಆಗಿದ್ದಿತು. ಈ ದಶಕದಲ್ಲಿ ಜನಸಂಖ್ಯೆಯ ಬೆಳವಣಿಗೆಯು ಕಡಿಮೆಯಾಗಲಿಲ್ಲ. ಹಿಂದಿನ ದಶಕಗಳ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆಯು 1000ಕ್ಕೆ 11 ಇದ್ದರೂ ಈ ದಶಕದ ಅವಧಿಯಲ್ಲಿ 1000ಕ್ಕೆ 14 ಆಯಿತು. ಆದಾಗ್ಯೂ ಕೆಲವು ಜನಸಂಖ್ಯಾ ಶಾಸ್ತ್ರಜ್ಞರು ಈ ಅವಧಿಯಲ್ಲಿನ ಜನಸಂಖ್ಯೆಯ ಬಗ್ಗೆ ಹೆಚ್ಚು ಗಮನಕೊಟ್ಟಿದ್ದಾರೆ. ಏಕೆಂದರೆ 1941ರ ಜನಗಣತಿಯ ಸಮಯದಲ್ಲಿ ಭಾರತವನ್ನು ಭಾರತ ಮತ್ತು ಪಾಕಿಸ್ತಾನವಾಗಿ ವಿಂಗಡಿಸುವ ಯೋಜನೆಯುತ್ತು. ಆದ್ದರಿಂದ ಪಂಜಾಬ್ ಮತ್ತು ಬಂಗಾಳದ ಗಡಿಗಳಲ್ಲಿ ವಾಸಿಸುತ್ತಿದ್ದಂತಹವರು ಸುಳ್ಳು ಮಾಹಿತಿಯನ್ನು ಕೊಟ್ಟರು. ಗಡಿಯಲ್ಲಿದ್ದಂತಹ ಮುಸ್ಲಿಮರು ಆ ಪ್ರದೇಶವು ಪಾಕಿಸ್ತಾನದೊಂದಿಗೆ ಸೇರಬೇಕು ಎಂತಲೂ ಆದರೆ ಹಿಂದುಗಳು ಇದು ಭಾರತಕ್ಕೆ ಸೇರಬೇಕೆಂದು ಬಯಸಿದರು. ಆದ್ದರಿಂದ ಎರಡೂ ಸಮುದಾಯಗಳು ತಮ್ಮ ಸಂಖ್ಯೆಯನ್ನು ಹೆಚ್ಚು ಮಾಡಿದವು ಗಣತಿದಾರರಿಗೆ ಮಾಹಿತಿ ನೀಡಿದರು.

1941ರಿಂದ 1951 : ಈ ಅವಧಿಯ ಅಂಕಿಅಂಶಗಳು ಪಾಕಿಸ್ತಾನವನ್ನು ಹೊರತಾಗಿ ಕೇವಲ ಭಾರತ ಒಕ್ಕೂಟದ ಜನಸಂಖ್ಯೆಯ ಬಗ್ಗೆ ತಿಳಿಸುತ್ತವೆ. ಈ ಅವಧಿಯಲ್ಲಿ ಜನನ ದರವು 43.0, ಮರಣದರ 30.0, ಜನಸಂಖ್ಯಾ ಬೆಳವಣಿಗೆಯ ದರವು 13 ಮತ್ತು ಒಟ್ಟು ಜನಸಂಖ್ಯೆಯು 361.1 ಮಿಲಿಯನ್ ಆಗಿದ್ದಿತು. ಭಾರತದ ವಿಭಜನೆ ಮತ್ತು 1943ರಲ್ಲಿ ಬಂಗಾಳದಲ್ಲಿ ತಲೆದೋರಿದಂತಹ ಕ್ಷಾಮವು ಸುಮಾರು 1 5 ಮಿಲಿಯನ್ ಜನರನ್ನು ಆಹುತಿ ತೆಗೆದುಕೊಂಡಿದ್ದಾಗ್ಯೂ ಭಾರತ ಒಕ್ಕೂಟದ ಜನಸಂಖ್ಯೆಯು 1000ಕ್ಕೆ 13ರಷ್ಟು ಹೆಚ್ಚಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

1951 ರಿಂದ 1961 : ಈ ಅವಧಿಯಲ್ಲಿ ಜನನ ದರ 40.0, ಮರಣದರ 18.0, ಜನಸಂಖ್ಯಾ ಬೆಳವಣಿಗೆಯ ದರವು 22ಇದ್ದು ಒಟ್ಟು ಜನಸಂಖ್ಯೆಯು 439.3 ಮಿಲಿಯನ್ ಆಗಿದ್ದಿತು. 1961ರ ಜನಗಣತಿಯ ಆಯುಕ್ತರಾದ ರಾಯ್‌ಬರ್‌ಮನ್ ರವರು ಈ ದಶಕವನ್ನು "decade of Great leap forward" ಎಂದು ಕರೆದರು. ಜನಸಂಖ್ಯೆಯು ನಿರೀಕ್ಷೆಗಿಂತಲೂ ಹೆಚ್ಚು ಮಿತಿಮೀರಿತು. ಎಂದೂ ನಿರೀಕ್ಷಿಸಿರದಂತಹ ಮಟ್ಟವನ್ನು ತಲುಪಿ 8 ಮಿಲಿಯನ್‌ಗೂ ಅಧಿಕವಾಯಿತು. ಉದಾಹರಣೆಗೆ : ಕೆ. ಡೇವಿಸ್‌ರವರು 1961ರ ಭಾರತದ ಜನಸಂಖ್ಯೆಯು 402 ಮಿಲಿಯನ್‌ಗೆ ಎಂದು ಅಂದಾಜು ಮಾಡಿದ್ದಾರೆ. 1951ರ ಜಣಗಣತಿಯ ರಿಜಿಸ್ಟ್ರಾರ್ ಜನರಲ್‌ರವರು1961 ರಲ್ಲಿ ಭಾರತದ ಜನಸಂಖ್ಯೆಯು 407 ಮಿಲಿಯನ್ ಮುಟ್ಟುತ್ತದೆ ಎಂದು ಅಂದಾಜು ಮಾಡಿದ್ದರೆ, ಕೂಲೆ ಹೂವರ್ ಮತ್ತು ಚೆಲ್ಲಾಸ್ವಾಮಿ ಇವರು 425 ಮಿಲಿಯನ್‌ಗೆ ಏರುತ್ತದೆಂದು ಭವಿಷ್ಯ ಕಲ್ಪನೆ ಹೊಂದಿದ್ದರು, ಮತ್ತು 431 ಮಿಲಿಯನ್‌ಗೆ ಏರುತ್ತದೆಂದೂ ಯೋಜನಾ ಆಯೋಗವು ಭವಿಷ್ಯ ಕಲ್ಪನೆಯನ್ನು ಹೊಂದಿದ್ದಿತು. ಆದರೆ ಭಾರತದ ಜನಸಂಖ್ಯೆಯು ಈ ಎಲ್ಲಾ ನಿರೀಕ್ಷೆಗಳನ್ನು ದಾಟಿ 1961ರಲ್ಲಿ 439.2 ಮಿಲಿಯನ್ ತಲುಪಿತು.

ಭಾರತದ ಜನಸಂಖ್ಯಾ ಬೆಳವಣಿಗೆಯ ಒಲವುಗಳ ಬಗ್ಗೆ ತಜ್ಞರುಗಳು ಕುತೂಹಲ ಭರಿತವಾದಂತಹ ಅವಲೋಕನಗಳನ್ನು ನಡೆಸಿದ್ದಾರೆ. ಅವರಲ್ಲಿ ಎಲ್ಲರೂ ಮರಣವು ಜನಸಂಖ್ಯಾ ಬೆಳವಣಿಗೆಯ ಮುಖ್ಯ ನಿರ್ಣಾಯಕ ಅಂಶವಾಗಿದ್ದಿತು ಎಂಬುದನ್ನು ಒಪ್ಪಿಕೊಂಡಿದ್ದರು. ಇತರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಂತೆಯೇ ಭಾರತದಲ್ಲಿಯೂ ಸಹ ಮಾಲ್ಥಸ್‌ನ ಭವಿಷ್ಯ ಕಲ್ಪನೆಗಳಾದ ಜನ ಸಂಖ್ಯೆಯ ಬೆಳವಣಿಗೆಯು ನಿರ್ದಿಷ್ಟ ಮಿತಿಯನ್ನು ದಾಟಿದರೆ ಧನಾತ್ಮಕ ತಡೆಗಳು ಕಾರ್ಯಾಚರಣೆಗೆ ಬರುತ್ತದೆ. ಆದರಿಂದ ಜನಸಂಖ್ಯೆಗೆ ವಿಪತ್ತು ಉಂಟಾಗುತ್ತದೆ. ಇದು ಭಾರತಕ್ಕೆ ಸಂಬಂಧಿಸಿದಂತೆ ವಾಸ್ತವವಾಗಿದೆ. ಜನಸಂಖ್ಯಾಶಾಸ್ತ್ರಜ್ಞರು ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿಗೆ ಕಾರಣಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಾರೆ. ಅವರೆಲ್ಲರೂ ಮುಖ್ಯ ಕಾರಣವು ಸಾಂಸ್ಕೃತಿಕ ಹಿಂಬೀಳುವಿಕೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. 1920 ರಲ್ಲಿ ಬ್ರಿಟೀಷ್ ಆಡಳಿತದ ಏಕೀಕರಣದಿಂದ ಭಾರತ ಭೌತಿಕ ಸಂಸ್ಕೃತಿಯಲ್ಲಿ ಒಂದು ಗುರುತರವಾದ ಬದಲಾವಣೆಯಾಯಿತು. ಆಧುನಿಕ ಮಾಧ್ಯಮಗಳಾದ ಸಾರಿಗೆ ಮತ್ತು ಸಂಪರ್ಕದ ಪರಿಚಯವಾಯಿತು. ಔದ್ಯೋಗಿಕರಣ ಯುಗದಲ್ಲಿ ಕೆಲವು ಉದ್ದಿಮೆಗಳನ್ನು ಪ್ರಾರಂಭಿಸಲಾಯಿತು. ಈ ಸುಧಾರಣೆಗಳು ಜನಸಂಖ್ಯೆಯ ಮೇಲೆ ಮಹತ್ತರವಾದ ಪರಿಣಾಮ ಬೀರಿದವು. ಅಂದರೆ ಮರಣದರವನ್ನು ಹೆಚ್ಚು ಕಡಿಮೆ ಮಾಡಿತು. ಒಂದು ವೇಳೆ ದೇಶದ ಯಾವದೆ ಭಾಗದಲ್ಲಿ ಬರಗಾಲಗಳು ಕಂಡು ಬಂದರೆ ಕೂಡಲೇ ಅಲ್ಲಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಹಾರ ಪದಾರ್ಥಗಳನ್ನು ಸಾಗಿಸಲಾಗುತ್ತಿತ್ತು. ಆದರಿಂದ ಬರಗಾಲದ ಪರಿಣಾಮವನ್ನು ನಿವಾರಿಸಲಾಗುತ್ತಿತ್ತು. ಅದೇ ರೀತಿ ಒಂದು ವೇಳೆ ಸಾಂಕ್ರಮಿಕ ರೋಗಗಳು ಕಾಣಿಸಿಕೊಂಡರೆ ತಕ್ಷಣದಲ್ಲಿಯೇ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಹೀಗೆ ಆದರ ಪರಿಣಾಮವನ್ನು ತಡೆಗಟ್ಟಲಾಗುತ್ತಿತ್ತು. ಆದರೆ ಯಾವಾಗಲೂ ಭೌತಿಕ ಸಂಸ್ಕೃತಿಯಲ್ಲಿನ ಬದಲಾವಣೆಯು ಅಭೌತಿಕ ಸಂಸ್ಕೃತಿಯಲ್ಲಿ ಯೋಗ್ಯ ಬದಲಾವಣೆಯೊಂದಿಗೆ ಸೇರಿ ಕೊಂಡತ್ತಿರಲಿಲ್ಲ. ಸಾಂಪ್ರದಾಯಿಕ ಮೌಲ್ಯಗಳು, ರೂಢಿ, ರಿವಾಜುಗಳು ಮತ್ತು ಆಚರಣೆಗಳು ಅಷ್ಟೊಂದು ಬದಲಾವಣೆ ಹೊಂದಲಿಲ್ಲ. ಸಾಂಪ್ರದಾಯಿಕ ಸ್ತ್ರೀ ಪುರುಷರ ಸಂಬಂಧದ ರೂಢಿಗಳು. ಕುಟುಂಬ ಮತ್ತು ಮಕ್ಕಳ ಬಗೆಗಿನ ಕಲ್ಪನೆಗಳು ಹಾಗೆಯೇ ಮುಂದುವರೆದವು. ಭೌತಿಕ ಸಂಸ್ಕೃತಿಯಲ್ಲಿನ ಸುಧಾರಣೆಗಳು ಅಧಿಕ ಮರಣ ದರದ ವಿರುದ್ಧ ರಕ್ಷಿಸಿಕೊಳ್ಳಲು ಹೆಚ್ಚು ಮಕ್ಕಳನ್ನು ಪಡೆಯಬೇಕೆಂಬುದು ಅನವಶ್ಯಕ ಎಂಬುದನ್ನು ಜನರು ಮನಗಾಣುವಂತೆ ಮಾಡಿದವು. ಜನರು ಇನ್ನೂ ಕೂಡ ಹೆಚ್ಚು ಮಕ್ಕಳೊಂದಿಗೆ ದೊಡ್ಡ ಕುಟುಂಬಗಳನ್ನು ಹೊಂದುವಂತಹ ಸಾಂಪ್ರದಾಯಿಕ ಕಲ್ಪನೆಗಳನ್ನು ಪಾಲಿಸಿಕೊಂಡು ಮುಂದುವರಿದರು. ಹೀಗೆ ಜನನ ದರವು ಸಾಂಪ್ರದಾಯಿಕವಾದ ಹೆಚ್ಚಿನ ಮಟ್ಟದ ರೀತಿಯಲ್ಲಿಯೆ ಉಳಿಯಿತು. ಆದರೆ ಮರಣದರವು ಗಣನೀಯವಾಗಿ ಕಡಿಮೆಯಾಯಿತು. ಇದು ಜನಸಂಖ್ಯೆಯು ಅಧಿಕವಾಗುವಂತೆ ಮಾಡಿತು.

ಈ ಅವಧಿಯಲ್ಲಿ ಕೆಲವು ಸಾಮಾಜಿಕ ಶಾಸನಗಳು ಜಾರಿಗೆ ಬಂದದ್ದು ಬಹಳ ಮಹತ್ವಪೂರ್ಣವಾದದ್ದು ಮತ್ತು ಅವು ಪ್ರಾಮುಖ್ಯವಾದಂತಹ ಜನಸಂಖ್ಯಿಕ ಬದಲಾವಣೆಯನ್ನು ತರುವ ಸಾಧ್ಯತೆಯಿರುವ ಪರಿಣಾಮವುಳ್ಳಂತಹವುಗಳಾಗಿದ್ದವು. ಉದಾರಣೆಗೆ 1929ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯಿದೆ XIV ಜಾರಿಗೆ ಬಂದಿತು. ಈ ಕಾಯಿದೆ ಪ್ರಕಾರ ಬಾಲ್ಯವಿವಾಹಗಳನ್ನು ನಿಷೇಧಿಸಲಾಯಿತು. 15 ವರ್ಷ ಒಳಗಿರುವ ಹೆಣ್ಣು ಮಕ್ಕಳು ಮತ್ತು 18 ವರ್ಷದೊಳಗಿನ ಹುಡುಗರ ಮದುವೆಗೆ ಅವಕಾಶವಿರಲಿಲ್ಲ. ಇದು ಒಂದು ಪ್ರಾಮುಖ್ಯವಾದಂತ ಶಾಸನವಾಗಿ ಜನನ ದರವು ಗಣನೀಯವಾಗಿ ಕ್ಷೀಣಿಸಲು ಕಾರಣವಾಯಿತು. ಆದರೆ ಅನೇಕ ಕಾರಣಗಳಿಂದಾಗಿ ಅದು ನಿರೀಕ್ಷಿತ ಫಲಿತಾಂಶವನ್ನು ತರುವಲ್ಲಿ ವಿಫಲವಾಯಿತು. ಮೊದಲನೆಯದಾಗಿ ಕಾನೂನನ್ನು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳಿಸಲಿಲ್ಲ. ಬಾಲ್ಯವಿವಾಹವನ್ನು ಎತ್ತಿ ಹಿಡಿಯುತ್ತಿದ್ದಂತಹ ಸಂಪ್ರದಾಯ ಮತ್ತು ರೂಢಿಗಳು ಅವುಗಳನ್ನು ನಿಷೇಧಿಸುತ್ತಿದ್ದಂತಹ ಕಾನೂನಿಗಿಂತಲೂ ಹೆಚ್ಚು ಶಕ್ತಿ ಶಾಲಿಯಾಗಿದ್ದವು. ಆದ್ದರಿಂದ, ಕಾನೂನು ಇದ್ದಾಗ್ಯೂ ಬಾಲ್ಯವಿವಾಹಗಳು ಕಡಿಮೆಯಾಗದ ರೀತಿಯಲ್ಲಿ ಆಚರಣೆಯಲ್ಲಿ ಮುಂದುವರಿದವು. ಈ ಕಾನೂನು ಹೆಣ್ಣು ಮಕ್ಕಳ ಮರಣ ದರವನ್ನು ಕಡಿಮೆ ಗೊಳಿಸುವಲ್ಲಿ ನಿರೀಕ್ಷಿಸಲಾರದಷ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಣಾಮವನ್ನು ಬೀರಿತು. ತ್ವರಿತ ಪ್ರೌಢಾವಸ್ಥೆಯು ಲೈಂಗಿಕತೆ ಮತ್ತು ಗರ್ಭ ಧಾರಣೆಯಿಂದ ಸಾಯುತ್ತಿದ್ದಂತಹ ವಿವಾಹಿತರಾದ 15 ವರ್ಷ ವಯಸ್ಸಿನ ಒಳಗಿನ ಹುಡುಗಿಯರು ಬಹುಬೇಗ ಅಸುನೀಗುತ್ತಿದ್ದರು, ಈ ಪರಿಸ್ಥಿತಿಯು ತಪ್ಪಿಹೋಯಿತು. ಹೀಗೆ ಈ ನಿರ್ದಿಷ್ಟ ವಯೋಗುಂಪಿನವರಲ್ಲಿ ಮರಣ ದರವು ಕಡಿಮೆಯಾಯಿತು. ಇದು ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಯಿತು. ಮತ್ತು 15 ವರ್ಷ ವಯಸ್ಸು ದಾಟಿ ಮದುವೆಯಾದ ಸ್ತ್ರೀಯರಲ್ಲಿ ಮಕ್ಕಳ ಸಂಖ್ಯೆಯು ವಿಪರೀತವಾಯಿತು. ಹೆಚ್ಚಿನ ದಾಗಿ 15 ವರ್ಷ ವಯಸ್ಸು ದಾಟಿದ ಹುಡುಗಿಯರು ದೈಹಿಕವಾಗಿ ಉತ್ತಮವಾಗಿದ್ದ ಒಳ್ಳೆಯ ತಾಯಿಯರಾಗುತ್ತಿದ್ದು ಹೆಚ್ಚು ಮಕ್ಕಳನ್ನು ಪಡೆಯುವಂತಹ ಸ್ಥಿತಿಯಲ್ಲಿ ರುತ್ತಿದ್ದರು. ಆದರೂ ಮತ್ತೊಂದು ಶಾಸನವು ಅಂದರೆ 1856 ವಿಧವಾ ವಿವಾಹ ಕಾಯಿದೆ XV ಜಾರಿಗೆ ಬಂದಿತು. ಬಾಲ್ಯವಿವಾಹವನ್ನು ನಿಷೇಧಿಸುತ್ತಿದ್ದಂತಹ ಕಾಯಿದೆಗಳು ನಿಷ್ಪ್ರಯೋಜಕವಾಗಿ ಕಂಡುಬಂದವು. ಈ ಶಾಸನದ ಪ್ರಕಾರ ವಿಧವೆ ಯರು ಪುನಃ ಮದುವೆಯಾಗಿ ತಮ್ಮ ಕುಟುಂಬಗಳನ್ನು ಸ್ಥಾಪಿಸುವ ಅವಕಾಶವನ್ನು ಪಡೆದರು. ಹೀಗೆ ಅನೇಕ ವಿಧವೆಯರು ಪುನಃ ಮದುವೆಯಾಗಿ ಮಕ್ಕಳನ್ನು ಪಡೆಯಲು ಪ್ರಾರಂಭಿಸಿದರು. ಇದರಿಂದಲೂ ಸಹ ಜನಸಂಖ್ಯೆಯು ಅಧಿಕ ವಾಯಿತು.

ಭಾರತ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಜನಸಂಖ್ಯೆ ಬೆಳವಣಿಗೆಯ ಮಾದರಿ ಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದು ತುಂಬಾ ಕುತೂಹಲಕಾರಿ ಯಾದುದು.

ಔದ್ಯೋಗೀಕರಣ ಮತ್ತು ನಗರೀಕರಣಗೊಂಡ ನಾಗರೀಕತೆಯು ಆಗಮನದವರೆಗೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆಯ ರೀತಿಯು ಭಾರತದಲ್ಲಿ ಇರುವ ಹಾಗೆಯೇ ಇದ್ದಿತು. ಔದ್ಯೋಗೀಕರಣಕ್ಕೆ ಮೊದಲಿನ ಪಾಶ್ಚಾತ್ಯ ರಾಷ್ಟ್ರಗಳ ಜನ ಸಂಖ್ಯೆ ಬೆಳವಣಿಗೆಯ ಮಾದರಿಯನ್ನು ಒಂದು ಸರಳರೇಖೆ ಮತ್ತು ಏರಿಳಿತಗಳಿಂದ (Zigzag) ಕೂಡಿದ ರೇಖೆಯ ಮೂಲಕ ತೋರಿಸಬಹುದು. ಸರಳರೇಖೆಯು ಜನನ ದರವನ್ನು ತೋರಿಸಿದರೆ ಡೊಂಕು ರೇಖೆಯು ಮರಣ ದರವನ್ನು ತೋರಿಸುತ್ತದೆ.

1921ಕ್ಕೆ ಮೊದಲು ಭಾರತದ ಜನಸಂಖ್ಯಾ ಬೆಳವಣಿಗೆಯು ಇದೇ ನಮೂನೆಯ ಲ್ಲಿದ್ದಿತು. ಪಾಶ್ಚಿಮಾತ್ಯರಲ್ಲಿ ತಕ್ಷಣ ಔದ್ಯೋಗಿಕರಣ ನಗರೀಕರಣದ ನಾಗರೀಕತೆಯ ಪ್ರಭಾವವು ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿಗೆ ಕಾರಣವಾಯಿತು. ಔದ್ಯೋಗೀಕರಣ ಗೊಂಡ ನಗರ ನಾಗರೀಕತೆಯು ಸಾರಿಗೆ ಮತ್ತು ಸಂಪರ್ಕ, ವೈದ್ಯಕೀಯ ಸೌಲಭ್ಯಗಳು, ಮತ್ತು ಉತ್ತಮ ಆಹಾರದ ಪೂರೈಕೆ ಮುಂತಾದವುಗಳ ಸುಧಾರಣೆಗೆ ಕಾರಣವಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಿಂದಾಗಿ ಮರಣ ದರವು ಗಣನೀಯವಾಗಿ ಕಡಿಮೆಯಾಯಿತು. ಆದರೆ ಅಭೌತಿಕ ಸಂಸ್ಕೃತಿಯ ಪ್ರಕ್ರಿಯೆಯು ಮಂದಗತಿಯಲ್ಲಿದ್ದಿತು. ಕುಟುಂಬ ಮತ್ತು ವಿವಾಹದ ಹಳೆಯ ಮೌಲ್ಯಗಳು ಮುಂದುವರಿದವು. ಹೀಗೆ ಇದು ಹೆಚ್ಚಿನ ಜನನ ದರಕ್ಕೆ ಕಾರಣವಾಯಿತು. ಇದು ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಯಾದವಿ ಕಲಹ (ಸಿವಿಲ್ ವಾರ್)ದವರೆಗೂ ಜನನ ದರವು ಸಾಂಪ್ರದಾಯಿಕ ಮಟ್ಟದಲ್ಲಿ ಇದ್ದ ಹಾಗೆಯೇ ಹೆಚ್ಚಿನ ಮಟ್ಟದಲ್ಲಿತ್ತು. ಇದು ಆ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿಗೆ ಕಾರಣವಾಯಿತು. ಇದು ಭಾರತದಲ್ಲಿಯೂ ಕೂಡ ನಿಜವಾಯಿತು. ಭಾರತದಲ್ಲಿ ಬ್ರಿಟೀಷ್ ಆಡಳಿತದ ಏಕೀಕರಣದೊಂದಿಗೆ ಔದ್ಯೋಗೀಕರಣ, ನಗರ ಸಂಸ್ಕೃತಿಯು ಪರಿಚಯವಾಯಿತು. ವಿವಿಧ ನಾಗರೀಕ ಜೀವನದ ಸೌಕರ್ಯಗಳನ್ನು ಸುಧಾರಿಸುವುದರ ಮೂಲಕ ಜನನ ಪ್ರಮಾಣವನ್ನು ಕಡಿಮೆಮಾಡಿದವು. ಆದರೆ ವಿವಾಹ ಮತ್ತು ಕುಟುಂಬದ ಬಗೆಗಿನ ಸಾಂಪ್ರದಾಯಿಕ ಮೌಲ್ಯಗಳು ಮುಂದುವರಿದವು. ಹೀಗೆ ಇದು ಜನಸಂಖ್ಯೆಯ ಬೆಳವಣಿಗೆಯ ಪ್ರವೃತ್ತಿಗೆ ಕಾರಣವಾಯಿತು.

ನಾವು ಇಲ್ಲಿಯವರೆಗೂ ಭಾರತ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆಗೆ ಸಂಬಂಧಿಸಿದಂತೆ ಸಾಮ್ಯತೆಯನ್ನು ಗಮನಿಸಿದೆವು. ಆದರೂ ಕೆಲವು ಪ್ರಮುಖವಾದಂತಹ ಭಿನ್ನತೆಗಳು ಸಹ ಇವೆ. ಪಾಶ್ಚಿಮಾತ್ಯರಲ್ಲಿ ಜನಸಂಖ್ಯೆಯ ಹೆಚ್ಚಳದ ಗಾತ್ರಕ್ಕೆ ಕಾರಣವಾದಂತಹ ಭೌತಿಕ ಮತ್ತು ಅಭೌತಿಕ ಸಂಸ್ಕೃತಿಯ ನಡುವಿನ ಹಿಂಬೀಳುವಿಕೆಯು ಕಡಿಮೆಯಾಗಿದ್ದಿತು. ಅಂತರವು ಅಭೌತಿಕ ಸಂಸ್ಕೃತಿಯಲ್ಲಿನ ಅನುಗುಣವಾದ ಬದಲಾವಣೆಯಿಂದ ತುಂಬಲ್ಪಟ್ಟಿತ್ತು. ಆದರೆ ಭಾರತದಲ್ಲಿ ಭೌತಿಕ ಮತ್ತು ಅಭೌತಿಕ ಸಂಸ್ಕೃತಿಗಳ ನಡುವಿನ ಹಿಂಬೀಳುವಿಕೆಯು ಕೇವಲ ಹೆಚ್ಚಾಗಿರೆಲಿಲ್ಲ. ಜೊತೆಗೆ ಹೆಚ್ಚು ಕಾಲದವರೆಗೆ ವ್ಯಾಪಿಸಿದ್ದಿತು. ಉದಾಹರಣೆಗೆ 1921ರ ನಂತರ ಮರಣದರವು ಭೌತಿಕ ಸಂಸ್ಕೃತಿಯ ಸುಧಾರಣೆಯ ಪರಿಣಾಮವಾಗಿ ತ್ವರಿತವಾಗಿ ಕ್ಷೀಣಿಸಿದರೂ ಕೂಡಲೆ ಚೇತರಿಸಿಕೊಂಡು ವಿವಾಹ ಮತ್ತು ಕುಟುಂಬಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಮೌಲ್ಯಗಳಿಂದಾಗಿ ಜನನ ದರವು ಹೆಚ್ಚಿನ ಮಟ್ಟದಲ್ಲಿಯೇ ಮುಂದುವರಿಯಿತು. ಹೆಚ್ಚಿನದಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮರಣದರವನ್ನು ಕಡಿಮೆ ಮಾಡಲು ಇದು ಹೆಚ್ಚು ವರುಷಗಳನ್ನು ತೆಗೆದುಕೊಂಡಿತ್ತು. ಅವರು ರೋಗಗಳನ್ನು ನಿಗ್ರಹಿಸಲು ಹೊಸ ಔಷಧಿಗಳನ್ನು ಕಂಡುಹಿಡಿದು ಸಂಶೋಧಿಸಬೇಕಿದ್ದಿತು. ಆದರೆ ಭಾರತದಲ್ಲಿ ಜನನದರವು ಬಹುತ್ವರಿತವಾಗಿ ಹೆಚ್ಚಾಗಿ ಕಡಿಮೆಯಾಯಿತು. ಏಕೆಂದರೆ ಭಾರತವು ಹೊಸ ಔಷಧಿಗಳನ್ನು ಕಂಡುಹಿಡಿಯಲಿಲ್ಲ. ನಾವು ಹೊಂದಿದ್ದ ಔಷಧಿಗಳಲ್ಲೆವೂ ಪಾಶ್ಚಿಮಾತ್ಯರಿಂದ ಪಡೆದುಕೊಂಡು ಅವುಗಳನ್ನು ನಮ್ಮ ದೇಶದಲ್ಲಿ ರೋಗಗಳನ್ನು ನಿಗ್ರಹಿಸಲ ಉಪಯೋಗಿಸಲಾಯಿತು. ಹೆಚ್ಚಿನದಾಗಿ ಮರಣ ದರವು ಕ್ಷೀಣಿಸಿದುದರ ರೀತಿಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾರತ ಮತ್ತು ಪಾಶ್ಚಿಮಾತ್ಯ ದೇಶಗಳ ನಡುವೆ ಮಹತ್ವ ಪೂರ್ಣವಾದಂತಹ ವ್ಯತ್ಯಾಸವೊಂದಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಉತ್ತಮ ಆಹಾರ, ಉತ್ತಮ ಪೋಷಣೆ ಮತ್ತು ವೈದ್ಯಕೀಯ ಸೌಲಭ್ಯಗಳ ಮೂಲಕ ಜನರ ಆರೋಗ್ಯವನ್ನು ಸುಧಾರಣೆ ಮಾಡಿದುದರ ಪರಿಣಾಮವಾಗಿ ಮರಣದರವು ಕಡಿಮೆಯಾಯಿತು. ಆದರೆ ಭಾರತದಲ್ಲಿ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯದ ಪರಿಣಾಮವಾಗಿ ಮರಣದರವು ಕಡಿಮೆಯಾಗಲಿಲ್ಲ. ಬದಲಿಗೆ ಹೆಚ್ಚು ಜನರನ್ನು ಆಹುತಿ ತೆಗೆದುಕೊಳ್ಳುತ್ತಿದ್ದಂತ ಭೀಕರ ಸಾಂಕ್ರಾಮಿಕ ರೋಗಗಳು ಮತ್ತು ಬರಗಾಲಗಳನ್ನು ನಿಯಂತ್ರಿಸಿದುದರಿಂದ ಮರಣದರವು ಕಡಿಮೆಯಾಯಿತು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜನರು ಜಾಗರೂಕರಾಗಿ ಮಕ್ಕಳ ಸಂಖ್ಯೆಯನ್ನು ನಿರ್ಬಂಧಿಸುವುದರ ಮೂಲಕ ತಮ್ಮ ಕುಟುಂಬಗಳನ್ನು ಯೋಜಿಸಲು ಪ್ರಾರಂಭಿಸಿದರು, ಏಕೆಂದರೆ ಅವರು ಉತ್ತಮವಾದ ಜೀವನಮಟ್ಟವನ್ನು ನಿರ್ವಹಿಸಲು ಬಯಸಿದರು. ಆದರೆ ಭಾರತದಲ್ಲಿ ಜನರು ಜೀವನಮಟ್ಟ ಮತ್ತು ಕುಟುಂಬದ ಗಾತ್ರದ ಬಗ್ಗೆ ಜಾಗರೂಕರಾದರು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಜನನ ದರದಲ್ಲಿ ವ್ಯತ್ಯಾಸದ ಕುರುಹು ಕಂಡು ಬಂದರೆ ಜಾಗರೂಕತೆ ಮತ್ತು ಪ್ರಜ್ಞಾವಂತಿಕೆಯ ಪ್ರಯತ್ನಗಳಿಂದಾಗಿರದೆ ಇತರೆ ಅಂಶಗಳಿಂದಾಗಿದ್ದಿತು. ಉದಾಹರಣೆಗೆ ಉನ್ನತ ಜಾತಿಯ ಜನರಲ್ಲಿ ಸಣ್ಣಗಾತ್ರದ ಕುಟುಂಬಗಳಿರುವುದು ಅವರ ಪ್ರಜ್ಞ-ಪೂರ್ವಕ ಪ್ರಯತ್ನಗಳಿಂದಲ್ಲ ಬದಲಿಗೆ ವಿಧವಾ ವಿವಾಹಗಳ ನಿಷೇಧ ಮತ್ತು ಬಹುಪತ್ನಿತ್ವ ಮುಂತಾದ ಪದ್ಧತಿಗಳು ಅವರಲ್ಲಿ ಚಾಲ್ತಿಯಲ್ಲಿದ್ದುದರಿಂದ ಎಂಬುದನ್ನು ಕಂಡು ಕೊಂಡಿದ್ದೇವೆ.

ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಸ್ತುತದ ಜನಸಂಖ್ಯಾ ಬೆಳವಣಿಗೆಯನ್ನು ಒಂದು ಸರಳರೇಖೆ ಮತ್ತು ಒಂದು ಡೊಂಕುಡೊಂಕಾದ (zigzag) ರೇಖೆಯ ಮೂಲಕ ತೋರಿಸಬಹುದು. ಸರಳರೇಖೆಯು ಮರಣ ದರವನ್ನು ತೋರಿಸಿದರೆ ಡೊಂಕುಡೊಂಕಾದ ರೇಖೆಯು ಜನನ ಪರವನ್ನು ತೋರಿಸುತ್ತದೆ. ಹೀಗೆ ಪಾಶ್ಚಿಮಾತ್ಯದಲ್ಲಿ ಜನನ ದರವು ನಿರ್ಣಾಯಕ ಅಂಶವಾಗಿದೆ. ಭಾರತದಲ್ಲಿಯೂ ಕೂಡ ಜನಸಂಖ್ಯಾ ಬೆಳವಣಿಗೆಯನ್ನು ಒಂದು ಸರಳರೇಖೆ ಮತ್ತು ಒಂದು ಡೊಂಕುಡೊಂಕಾದ ರೇಖೆಯ ಮೂಲಕ ತೋರಿಸಬಹುದು. ಇಲ್ಲಿ ಸರಳರೇಖೆಯು ಜನನದರವನ್ನು ನಿರೂಪಿಸಿದರೆ ಅಂಕುಡೊಂಕಾದ ರೇಖೆಯು ಮರಣದರವನ್ನು ನಿರೂಪಿಸುತ್ತದೆ. ಅಂದರೆ ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಯ ನಿರ್ಣಾಯಕ ಅಂಶವು ಹೆಚ್ಚಾಗಿ ಜನನ ದರವಾಗಿರದೆ ಮರಣದರವಾಗಿದೆ ಮತ್ತು ಇದು ಬದಲಾಗಲು ಅನೇಕ ವರ್ಷಗಳು ಬೇಕಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಗತ್ತಿನಲ್ಲಿ ಇಂದು ಭಾರತವು ಜನಸಂಖ್ಯೆಯು ಗಾತ್ರದಲ್ಲಿ ಎರಡನೆಯ ದೊಡ್ಡ ರಾಷ್ಟ್ರವಾಗಿದೆ (ಕಮ್ಯೂನಿಷ್ಟ್ ಚೀನಾವು ಮೊದಲ ರಾಷ್ಟ್ರ) ಮತ್ತು ಭೂವಿಸ್ತಾರದಲ್ಲಿ ಏಳನೆಯ ರಾಷ್ಟ್ರವಾಗಿದೆ. ಭಾರತದ ಜನಸಂಖ್ಯೆಯು ವಿಶ್ವದ ಜನಸಂಖ್ಯೆಯ 15ರಷ್ಟು ಇದೆ ಮತ್ತು ಇದರ ಭೂಪ್ರದೇಶವು ಜಗತ್ತಿನ ಭೂಪ್ರದೇಶದ ಶೇ. 2.4 ರಷ್ಟಿದೆ. ಭಾರತವು ಅಮೇರಿಕ ಸಂಯುಕ್ತ ಸಂಸ್ಥಾನದ ವಿಸ್ತಾರದ 25/5 ಭಾಗದಷ್ಟಿದ್ದಾಗ್ಯೂ ಅದರ ಜನ ಸಂಖ್ಯೆಯು ಅಮೇರಿಕ ಸಂಯುಕ್ತ ಸಂಸ್ಥಾನಗಳ ಜನಸಂಖ್ಯೆಯು 212 ಪಟ್ಟು ಹೆಚ್ಚಾಗಿದೆ.

ಭಾರತವು ಹಳ್ಳಿಗಳ ನಾಡು ಮತ್ತು ಭಾರತೀಯರು ಬಹುತೇಕ ಕೃಷಿಕರಾಗಿದ್ದಾರೆ ಭಾರತವು ನಗರೀಕರಣವನ್ನು ಪ್ರಾರಂಭಿಸಿದಂತಹ ಪ್ರಾಚೀನ ಏಷ್ಯಾದ ರಾಷ್ಟ್ರಗಳ ಲ್ಲೊಂದಾಗಿದ್ದರೂ ಇದು ಹೆಚ್ಚು ಮುನ್ನಡೆಯನ್ನು ಸಾಧಿಸಲಿಲ್ಲ. ಭಾರತದಲ್ಲಿ ನಗರೀ ಕರಣ ಪ್ರಕ್ರಿಯೆಯು 1881ರಲ್ಲಿ ಪ್ರಾರಂಭವಾಯಿತು. ಆ ವರ್ಷದಲ್ಲಿ ಶೇ 9.3 ರಷ್ಟು ಭಾರತೀಯರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಮತ್ತು 1941ರಲ್ಲಿ ಶೇಕಡ 12.8 ಮತ್ತು 1961ರಲ್ಲಿ ಶೇಕಡ 18ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿ ದ್ದರು. ಹೀಗೆ ಭಾರತವು ಇಂದಿಗೂ ಕೂಡ ಹಳ್ಳಿಗಳ ನಾಡಾಗಿ ಮುಂದುವರಿಯುತ್ತಿದೆ. ಸುಮಾರು ಶೇಕಡ 82 ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಭಾರತೀ ಯರು ಹೆಚ್ಚಾಗಿ ಗ್ರಾಮಗಳಲ್ಲಿ ವಾಸಿಸಲು ಏಕೆ ಬಯಸುತ್ತಾರೆ ? ಈ ಪ್ರವೃತ್ತಿ ಯನ್ನು ವಿವರಿಸಲು ಕೆಲವು ಕಾರಣಗಳನ್ನು ಕೊಡಬಹುದು. ಭಾರತವು ಅತೀ ಹೆಚ್ಚು ಫಲವತ್ತಾದ ಭೂಮಿಯನ್ನು ಹೊಂದಿದ ಮತ್ತು ವ್ಯವಸಾಯಕ್ಕೆ ಯೋಗ್ಯವಾದಂತಹ ಒಳ್ಳೆಯ ಹವಾಮಾನ ಹೊಂದಿದ ಪುಣ್ಯಭೂಮಿ. ಆದ್ದರಿಂದ ಪ್ರಾರಂಭದಿಂದಲೂ ಸಹ ಭಾರತದ ಸಂಸ್ಕೃತಿಯು ಪ್ರಧಾನವಾಗಿ ಕೃಷಿ ಸಂಬಂಧವಾಗಿದ್ದಿತು. ಆದ್ದರಿಂದ ಭಾರತೀಯರಿಗೆ ಕೃಷಿಯು ಕೇವಲ ಕಸುಬಾಗಲಿಲ್ಲ. ಇದು ಜೀವನದ ರೀತಿಯಾಯಿತು. ಕೃಷಿಯು ಹೆಚ್ಚು ಆದರ್ಶವಾದ ಕಸುಬಾಗಿದ್ದು ಭಾರತದ ಪವಿತ್ರ ಗ್ರಂಥಗಳಲ್ಲಿ ಇದಕ್ಕೆ ಶ್ರೇಷ್ಟವಾದ ಸ್ಥಾನವನ್ನು ಕೊಡಲಾಗಿದೆ. ಹೆಚ್ಚಿನದಾಗಿ ಭಾರತದಲ್ಲಿ ಕೃಷಿಯು ಮಾತ್ರ ಜಾತಿ ಮುಕ್ತವಾದಂತಹ ವೃತ್ತಿಯಾಗಿ ಕಂಡುಬರುತ್ತದೆ. ಆದರೆ ಇತರೆ ಕಸುಬು ಗಳೆಲ್ಲವೂ ಒಂದು ಅಥವಾ ಎರಡು ಜಾತಿಗಳೊಡನೆ ಸಂಬಂಧವನ್ನು ಹೊಂದಿರುತ್ತವೆ ಪ್ರಾಯಶಃ ಬ್ರಾಹ್ಮಣರಿಗೆ ಸ್ವಲ್ಪ ವಿನಾಯಿತಿ ಇದ್ದರೂ ಕೃಷಿಯನ್ನು ಯಾವುದೇ ಜಾತಿಯೂ ಸಹ ನಿಷೇಧಿಸಿಲ್ಲ. ಪರಿಣಾಮವಾಗಿ ಇತರೆ ವೃತ್ತಿಗಳಂತಿರದೆ ಎಲ್ಲಾ ಜಾತಿ ಗಳು ಕೃಷಿಯನ್ನು ಒಪ್ಪಿಕೊಂಡಿವೆ. ಆದ್ದರಿಂದ ತಮ್ಮ ಸಾಂಪ್ರದಾಯಿಕ ವೃತ್ತಿ ಗಳಾದ ನೇಯ್ಗೆ, ಮಡಕೆ ಮಾಡುವುದು, ಮಣ್ಣಿನ ಕೆಲಸ, ಕಮ್ಮಾರಿಕೆ ಮುಂತಾದವು ಗಳನ್ನು ಬಿಟ್ಟಂತವರು ಕೃಷಿಯನ್ನು ಅವಲಂಬಿಸಿದರು. ಜಾತಿಯ ಬಹಿಷ್ಕಾರ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಟ್ಟಳೆಗಳಿಂದಾಗಿ ಅವರಿಗೆ ಬೇರೆ ವೃತ್ತಿಗಳನ್ನು ಅವಲಂಬಿಸಲು ಸಾಧ್ಯವಾಗಲಿಲ್ಲ. ಕಾರ್ಖಾನೆಗಳು ಮತ್ತು ಇತರೆ ಉದ್ದಿಮೆಗಳ ಸ್ಥಾಪನೆಯಿಂದಾಗಿ ಗ್ರಾಮೀಣ ಕುಶಲ ಕರ್ಮಿಗಳು ತಮ್ಮ ಕಸುಬನ್ನು ಬಿಟ್ಟಾಗ ಇದು ಸಂಭವಿಸಿತು. 1931ರ ಜನಗಣತಿಯ ಪ್ರಕಾರ ಸುಮಾರು ಶೇಖಡ 64ರಷ್ಟು ಜನರು ತಮ್ಮ ಸಾಂಪ್ರದಾಯಿಕ ಕಸುಬುಗಳನ್ನು ತ್ಯಜಿಸಿ ಕೃಷಿಯನ್ನು ಅವಲಂಬಿಸಿದ್ದರು. ಹೀಗೆ ಭೂಮಿಯ ಮೇಲಿನ ಅವಲಂಬನೆಯು ದಶಕದಿಂದ ದಶಕಕ್ಕೆ ಹೆಚ್ಚುತ್ತಾ ಹೋಯಿತು. ಈಗ್ಗೆ ಭಾರತದ ಜನಸಂಖ್ಯೆಯ ರಚನೆಯನ್ನು ಗಮನಿಸೋಣ,

ವಯೋರಚನೆ

ಜನಸಂಖ್ಯೆಯ ವಯೋರಚನೆಯು ಅತೀ ಮುಖ್ಯವಾದುದು. ಏಕೆಂದರೆ ಅದು ಕೆಲಸ ಮಾಡುವ ಮತ್ತು ಅವಲಂಬಿತರ ಪ್ರಮಾಣದ ಬಗೆಗಿನ ಮಾಹಿತಿ ನೀಡುತ್ತದೆ. ಅದು ಜನನದ ಪ್ರಮಾಣದ ಬಗ್ಗೆಯೂ ಲೆಕ್ಕಾಚಾರ ಮಾಡಲು ಸಹಾಯವಾಡು ವದರಿಂದ ಜನಸಂಖ್ಯೆಯ ವಯೋರನ್ನು ನಿಖರವಾಗಿ ಊಹಿಸಲು ಸಾಧ್ಯವಾಗುವದು. ಜನಸಂಖ್ಯೆಯ ವಯೋಗಚನೆಯು ಮರಣ, ಜನನ ಮತ್ತು ವಿವಾಹಗಳ ಪ್ರಮಾಣದ ಮೇಲೆಯೂ ಪರಿಣಾಮ ಬೀರುತ್ತದೆ. ಹಳ್ಳಿಗಾಡಿನ ಜನರು ಸಾಮಾನ್ಯವಾಗಿ ತಮ್ಮ ಜನನದ ದಿನಾಂಕವನ್ನು ನೆನಪಿಡುವುದಿಲ್ಲ. ಆದುದರಿಂದ ಇಂತಹ ಜನಸಂಖ್ಯೆಯ ವಯೋರಚನೆಯ ಬಗೆಗಿನ ಯೋಗ್ಯ ಮಾಹಿತಿ ಪಡೆಯುವುದು ತುಂಬ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಜನಸಂಖ್ಯೆಯ ವಯೋರಚನೆಯುನ್ನು ಪಿರಾಮಿಡ್ನ ಆಕೃತಿಯನ್ನು ಹೋಲುತ್ತದೆ. 0-15 ವರ್ಷದ ವಯೋಗುಂಪು ಪಿರಾಮಿಡ್ಡಿನ ಅಡಿಯಲ್ಲಿದ್ದರೆ ವಯೋಗುಂಪುಗಳ ಹೆಚ್ಚಳ ಆದರ ಮೇಲೆ ಮುಂದುವರೆಯುತ್ತಾ ಹೋದಂತೆ ಅದರ ಆಕಾರವು ಚೂಪಾಗುತ್ತ ಹೋಗುತ್ತದೆ. ಪಿರಾಮಿಡ್‌ನ ತುತ್ತತುದಿಯಲ್ಲಿ 65 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಗುಂಪಿರುತ್ತದೆ.ಆದರೆ ಇಂತಹ ಸಾಮಾನ್ಯ ಪಿರಾಮಿಡ್‌ನೊಂದಿಗೆ ಭಾರತದ ಜನಸಂಖ್ಯೆಯ ಪಿರಾಮಿಡ್ಡು ಸಂಪೂರ್ಣವಾಗಿ ಹೋಲುವುದಿಲ್ಲ. ಭಾರತೀಯ ಜನಸಂಖ್ಯೆಯ ಪಿರಾಮಿಡ್‌ಗೆ ಬಹಳ ಅಗಲವಾದ ತಳಹದಿ ಉಂಟು. ಅತೀ ಹೆಚ್ಚಿನ ಜನನದ ಪ್ರಮಾಣ ಭಾರತದಲ್ಲಿದ್ದುದರಿಂದ ಇಲ್ಲಿನ ಜನಸಂಖ್ಯೆಯಲ್ಲಿ 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆಯುತುಂಬ ಹೆಚ್ಚು. ಮುಂದುವರೆದ ಪಾಶ್ಚಿಮಾತ್ಯ ರಾಷ್ಟ್ರಗಳ ವಯೋಪಿರಾಮಿಡ್‌ಗೆ ವ್ಯತಿರಿಕ್ತವಾಗಿ ಭಾರತೀಯ ವಯೋಪಿರಾಮಿಡ್ ಕೂಡಲೇ ಚೂಪಾದ ಆಕಾರ ಪಡೆಯುತ್ತದೆ. ಏಕೆಂದರೆ 65 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಇಲ್ಲದಿರುವುದು ಭಾರತದಲ್ಲಿ 50 ವರ್ಷಕ್ಕಿಂತ ಹೆಚ್ಚಿನ ವಯಸ್ಸಾದವರು ಬದುಕುಳಿಯುವುದು ತುಂಬಕಡಿಮೆ.

ಸುಂಡಬರ್ಗ ಜನಸಂಖ್ಯೆಯನ್ನು ವಯೋಗುಂಪುಗಳ ಆಧಾರದ ಮೇಲೆ ಮೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಗಗಳಾಗಿ ವಿಂಗಡಿಸಿದ್ದಾನೆ. ಈ ಮೂರು ವರ್ಗಗಳು 0-14, 15-49 ಮತ್ತು 50ಕ್ಕಿಂತ ಹೆಚ್ಚು. ಈ ವರ್ಗಗಳ ಆಧಾರದ ಮೇಲೆ ಅವುಗಳನ್ನು ಪುರೋವೃದ್ಧಿ, ಸ್ಥಾಯಿ ಮತ್ತು ಹಿಂಚಲಿತ ವಿಧಗಳೆಂದು ಕರೆಯುತ್ತಾನೆ.

ಜನಸಂಖ್ಯೆಯ ವಿಧಗಳು

ವಯೋಗುಂಪು	0-14	15-41	50	ವಿಧಗಳು
ಪ್ರತಿಶತ	40	50	10	ಪುರೋವೃದ್ಧಿ
ಪ್ರತಿತತ	27	50	23	ಸ್ಥಾಯಿ
ಪ್ರತಿಶತ	20	50	30	ಹಿಂಚಲಿತ
ಭಾರತ (1951)	37.4	50.5	12.2	ಪುರೋವೃದ್ಧಿ
ಭಾರತ (1961)	40.2	47.1	11.1	ಪುರೋವೃದ್ಧಿ

ಆಧಾರ : ಸಿ. ಬಿ. ಮೆಮೋರಿಯಾ, ಇಂಡಿಯಾಸ್ ಪಾಪುಲೇಶನ್ ಪ್ರಾಬ್ಲಂ (ಬಾಂಬೆ ; 1961)

ಈ ಮೇಲಿನ ಪಟ್ಟಿಯು ಭಾರತದ ಜನಸಂಖ್ಯೆಯು ಪುರೋವೃದ್ಧಿಯಾಗಿಯೇ ಇದ್ದು ಮುಂಬರುವ ದಶಕಗಳಲ್ಲಿಯೂ ಬೆಳೆಯುತ್ತಲೇ ಹೋಗುವುದು.

ಭಾರತದ ಜನಸಂಖ್ಯೆ ರಚನೆಯು ಇಲ್ಲಿರುವ ಅವಲಂಬನೆ ಪ್ರಮಾಣ ತುಂಬ ಹೆಚ್ಚಾಗಿರುವುದನ್ನೂ ತೋರಿಸುತ್ತದೆ. 14 ವರ್ಷಗಳಿಗಿಂತ ಕಡಿಮೆ ಮತ್ತು ವರ್ಷ ಗಳಿಗಿಂತ ಹೆಚ್ಚಿಗೆ ವಯಸ್ಸಾಗಿರುವವರೆಲ್ಲ ಆರ್ಥಿಕ ದೃಷ್ಟಿಯಲ್ಲಿ ಬೇರೆಯವರ ಮೇಲೆ ಅವಲಂಬಿಸಿರುವವರೆಂದು ಪರಿಗಣಿಸಲಾಗಿದೆ. 15-65 ವರ್ಷಗಳ ಅವಧಿಯ ವಯಸ್ಸಿನವರನ್ನು ಸ್ವಾವಲಂಬನೆಯ ಜನಸಂಖ್ಯೆಯೆಂದು ಪರಿಗಣಿಸಲಾಗಿದೆ. 1951ರ ಜನಗಣತಿಯ ಪ್ರಕಾರ ಆರ್ಥಿಕ ಸ್ವಾವಲಂಭನೆ ಹೊಂದಿದ ಜನಸಂಖ್ಯೆಯ ಪ್ರಮಾಣ ಒಟ್ಟು ಜನಸಂಖ್ಯೆಯಲ್ಲಿ 59·ಮತ್ತು ಇವರ ಮೇಲೆ ಅವಲಂಬಿತರ ಸಂಖ್ಯೆಯ ಪ್ರಮಾಣವು 41 ಇದ್ದುದು ಕಂಡುಬಂದಿದೆ. ಆದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಸ್ಥಿತಿಯೇ ಬೇರೆ. ಇಂತಹ ರಾಷ್ಟ್ರಗಳಲ್ಲಿ 65 ವರ್ಷಕ್ಕಂತ ಹೆಚ್ಚಿನ ವಯಸ್ಸಿನ ಅವಲಂಬಿತರ ಸಂಖ್ಯೆಯ ಪ್ರಮಾಣ ಹೆಚ್ಚಿಗಿದ್ದು, 14ವರ್ಷಗಳೊಳಗಿನ ಅವಲಂಬಿತರ ಸಂಖ್ಯೆ ಕಡಿಮೆ ಇರುವುದು. ಈ ಕೆಳಗಿನ ಪಟ್ಟಿಯು ಭಾರತದಲ್ಲಿನ ಮತ್ತು ಇತರ ರಾಷ್ಟ್ರಗಳಲ್ಲಿನ ಅವಲಂಬಿತರ ಪ್ರತಿಶತ : ಪ್ರಮಾಣವನ್ನು ತೋರಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಲಂಬಿತ ಜನಸಂಖ್ಯೆ (1951)

ರಾಷ್ಟ್ರ	14 ವರ್ಷಕ್ಕಿಂತ ಕಡಿಮೆ	65 ವರ್ಷ ಮತ್ತು ಅದಕ್ಕಿಂತ ಹೆಚ್ಚು
ಭಾರತ	12	1
ಅಮೇರಿಕಾ	76	24
ಬ್ರಿಟನ್	67	33

ಆಧಾರ : ಟೈಲರ್ ಎನ್‌ಸ್ಮಿಂಗರ್ ಮತ್ತು ಇತರರು, **ಇಂಡಿಯೂಸ್ ರೂಟ್ಸ್ ಆಫ್ ಡೆಮಾಕ್ರಸಿ.**

ಕೆಳಗಿನ ಪಟ್ಟಿಯು ಸ್ವಾವಲಂಬಿಗಳಿಗೂ ಮತ್ತು ಅವಲಂಬಿತರಿಗೂ ಇರುವ ಪ್ರಮಾಣವನ್ನು ತೋರಿಸುತ್ತದೆ,

ಸ್ವಾವಲಂಬಿ ಮತ್ತು ಅವಲಂಬಿತ ಜನಸಂಖ್ಯೆ (1951)

ರಾಷ್ಟ್ರ	ಪ್ರತಿ 1000 ಉದ್ಯೋಗದಲ್ಲಿರುವವರ ಮೇಲೆ ಅವಲಂಬಿತರ ಸಂಖ್ಯೆ	ಪ್ರಮಾಣ
ಭಾರತ	1317	1:2
ಅಮೇರಿಕಾ	702	ಒಂದಕ್ಕಿಂತ ಕಡಿಮೆ
ಬ್ರಿಟನ್	412	ಅರ್ಧಕ್ಕಿಂತ ಕಡಿಮೆ

ಆಧಾರ : ಟೈಲರ್, ಎನ್ಸಮಿಂಗರ್ ಮತ್ತಿತರರು, **ಇಂಡಿಯನ್ ರೂಟ್ಸ್ ಆಫ್ ಡೆಮಾಕ್ರಸಿ**

1951ರ ಜನಗಣತಿಯ ಪ್ರಕಾರ ವ್ಯವಸಾಯು ರಂಗದ 11 ಪ್ರತಿಶತದಷ್ಟು ಮತ್ತು ವ್ಯವಸಾಯೇತರ ರಂಗದ 1 ಪ್ರಶಿಶತದಷ್ಟು ಮಾತ್ರ ಜನರು ಸ್ವಾವಲಂಬಿಗಳಾಗಿರುತ್ತಾರೆ.

ಜನ ಸಂಖ್ಯೆಯಲ್ಲಿ ಹೆಣ್ಣು-ಗಂಡುಗಳ ಪ್ರಮಾಣ ;

ಜನಸಂಖ್ಯೆಯಲ್ಲಿ ಹೆಣ್ಣು-ಗಂಡುಗಳ ಪ್ರಮಾಣ ಕಾರ್ಮಿಕರ ಸಂಖ್ಯೆ. ಮದುವೆಗಳ ಪ್ರಮಾಣ, ಜನನಪ್ರಮಾಣ ಮತ್ತು ಸಾಮಾಜಿಕ ಸಮಸ್ಯೆಗಳಾದ ವೇಶ್ಯಾವೃತ್ತಿ, ಬಹು ಪತ್ನಿತ್ವ ಮುಂತಾದವುಗಳ ಮೇಲೆ ಬೀರುವುದರಿಂದ ಅದು ಬ್ರಹ್ಮ ಮಹತ್ವದ್ದು ಎಂದು ಪರಿಗಣಿಸಲಾಗಿದೆ. ಒಂದು ವೇಳೆಸಂಖ್ಯೆಯಲ್ಲಿ ಹೆಣ್ಣುಗಳ ಸಂಖ್ಯೆ ಕಡಿಮೆ ಇದ್ದರೆ ವಿವಾಹದಲ್ಲಿ ಗಂಡುಗಳಿಗೆ ಹೆಣ್ಣುಗಳು ಸಿಗದೆ ಬಹುಪತಿತ್ವ ಮತ್ತು ಇತರ ಸಾಮಾಜಿಕ ಅನಿಷ್ಟಗಳಾದ ಸ್ವೇಚ್ಛಾಚಾರ ಮತ್ತು ವೇಶ್ಯಾವೃತ್ತಿಗಳು ಸಮಾಜದಲ್ಲಿ ಹೆಚ್ಚಾಗಬಹುದು.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

1951ರ ಜನಗಣತಿಯ ಪ್ರಕಾರ ವ್ಯವಸಾಯ ರಂಗದ 19 ಪ್ರತಿಶತದಷ್ಟು ಮತ್ತು ವ್ಯವಸಾಯೇತರ ರಂಗದ 9 ಪ್ರತಿಶತದಷ್ಟು ಮಾತ್ರ ಜನರು ಸ್ವಾವಲಂಬಿಗಳಾಗಿರುತ್ತಾರೆ.

ಜನಸಂಖ್ಯೆಯಲ್ಲಿ ಹೆಣ್ಣು ಗಂಡುಗಳ ಪ್ರಮಾಣ :

ಜನಸಂಖ್ಯೆಯಲ್ಲಿ ಹೆಣ್ಣು—ಗಂಡಂಗಳ ಪ್ರಮಾಣ ಕಾರ್ಮಿಕರ ಸಂಖ್ಯೆ, ಮದುವೆಗಳ ಪ್ರಮಾಣ, ಜನನ ಪ್ರಮಾಣ ಮತ್ತು ಸಾಮಾಜಿಕ ಸಮಸ್ಯೆಗಳಾದ ವೇಶ್ಯಾವೃತ್ತಿ ಬಹುಪತ್ನಿತ್ವ ಮುಂತಾದವುಗಳ ಮೇಲೆ ಪರಿಣಾಮ ಬೀರುವುದರಿಂದ ಅದು ಬಹು ಮಹತ್ವದ್ದು ಎಂದು ಪರಿಗಣಿಸಲಾಗಿವೆ. ಒಂದು ವೇಳೆ ಜನಸಂಖ್ಯೆಯಲ್ಲಿ ಹೆಣ್ಣುಗಳ ಸಂಖ್ಯೆ ಕಡಿಮೆ ಇದ್ದರೆ, ವಿವಾಹದಲ್ಲಿ ಗಂಡುಗಳಿಗೆ ಹೆಣ್ಣುಗಳು ಸಿಗದೆ ಬಹುಪತಿತ್ವ ಮತ್ತು ಸಾಮಾಜಿಕ ಅನಿಷ್ಟಗಳಾದ ಸ್ವೇಚ್ಛಾಚಾರ ಮತ್ತು ವೇಶ್ಯಾವೃತ್ತಿಗಳು ಸಮಾಜದಲ್ಲಿ ಹೆಚ್ಚಾಗಬಹುದು.

ಹೆಣ್ಣು-ಗಂಡುಗಳ ಪ್ರಮಾಣವನ್ನು ಗಮನಿಸಿದಾಗ ಭಾರತದಲ್ಲಿ ಗಂಡುಗಳ ಸಂಖ್ಯೆ ಹೆಚ್ಚಾಗಿರುವುದನ್ನು ಕಾಣಬಹುದು. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಹೆಚ್ಚಿರುವುದನ್ನು ಕಾಣುತ್ತೇವೆ. ಜನಸಂಖ್ಯಾ ಶಾಸ್ತ್ರಜ್ಞರ ಪ್ರಕಾರ ಭಾರತದಲ್ಲಿ ಮಹಿಳೆಯರ ಪ್ರಮಾಣವು 1901 ರಿಂದ ಕಡಿಮೆಯಾಗುತ್ತಲೇ ಸಾಗಿದೆ. ಈ ಕೆಳಗಿನ ಪಟ್ಟಿಯು ಅದನ್ನು ಪ್ರಮಾಣೀಕರಿಸುತ್ತದೆ.

ಭಾರತದಲ್ಲಿ ಹೆಣ್ಣು-ಗಂಡುಗಳ ಪ್ರಮಾಣ

ವರ್ಷ	ಹೆಣ್ಣುಗಳ ಪ್ರಮಾಣ ಪ್ರತಿ 1000 ಗಂಡುಗಳಿಗೆ
1901	963
1911	954
1921	945
1931	941
1941	936
1951	947
1961	941

ಆಧಾರ : ಸಿ. ಬಿ. ಮೆಮೋರಿಯಾ **ಇಂಡಿಯನ್ ಪಾಪ್ಯುಲೇಶನ್ ಪ್ರಾಬ್ಲಂ**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾರತೀಯ ಪರಿಸ್ಥಿತಿಗೆ ವಿರುದ್ಧವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣವು ಪುರುಷರಿಗಿಂತ ಹೆಚ್ಚಿರುವುದನ್ನು ಈ ಕೆಳಗಿನ ಪಟ್ಟಿಯಿಂದ ಕಾಣಬಹುದು.

ಜಪಾನ್ ಮತ್ತು ಇತರ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಜನಸಂಖ್ಯೆಯಲ್ಲಿ ಸ್ತ್ರೀ-ಪುರುಷರ ಪ್ರಮಾಣ.

ರಾಷ್ಟ್ರ	ಸ್ತ್ರೀಯರ ಸಂಖ್ಯೆ ಪ್ರತಿ 1000 ಪುರುಷರುಗಳ
ಅಮೇರಿಕಾ	1010
ಜಪಾನ್	1038
ಬ್ರಿಟನ್	1063
ಜರ್ಮನಿ	1465
ಫ್ರಾನ್ಸ್	1144
ಇಟಲಿ	1042
ಸ್ವೀಡನ್	1052

ಆಧಾರ : ಸಿ.ಬಿ. ಮೆಮೊರಿಯಾ, **ಇಂಡಿಯನ್ ಪಾಪ್ಯುಲೇಶನ್ ಪ್ರಾಬ್ಲಂ**

ಭಾರತದಲ್ಲಿ ಸ್ತ್ರೀ-ಪುರುಷ ಜನಸಂಖ್ಯಾ ಪ್ರಮಾಣದಲ್ಲಿನ ವ್ಯತ್ಯಾಸಕ್ಕೆ ಅನೇಕ ಕಾರಣಗಳಿವೆ. ಬಾಲಕಿಯರ ಜನನ ಪ್ರಮಾಣವು ಭಾರತದಲ್ಲಿ ಯುರೋಪ್ ದೇಶಗಳಿಗಿಂತ ಕಡಿಮೆ ಇದೆ. ಭಾರತದಲ್ಲಿ 108 : 100 ಬಾಲಕಿಯರ ಜನನ ಪ್ರಮಾಣ ವಿದ್ದರೆ ಯುರೋಪ್ ಖಂಡದಲ್ಲಿ ಅದು 106 ; 100 ಬಾಲಕಿಯರ ಜನನ ಪ್ರಮಾಣ ವಿದೆ. ಅಂದರೆ ಸಾಮಾನ್ಯವಾಗಿ ಬಾಲಕರ ಜನನ ಪ್ರಮಾಣ ಹೆಚ್ಚಾಗಿಯೇ ಇರುತ್ತದೆ. ಭಾರತದಲ್ಲಿ ಬಾಲಕ—ಬಾಲಕಿಯರ ಸಂಖ್ಯೆ ಪ್ರಮಾಣದಲ್ಲಿ ವ್ಯತ್ಯಾಸವನ್ನುಂಟು ಮಾಡುವ ಅತೀ ಮುಖ್ಯ ಕಾರಣಗಳೆಂದರೆ ಬಾಲಕಿಯರಲ್ಲಿನ ಅತೀ ಹೆಚ್ಚಿನ ಪ್ರಮಾಣದ ಮರಣಗಳು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬಾಲಕ—ಬಾಲಕಿಯರಲ್ಲಿ ಭೇದವಿಲ್ಲದೆ ಸಲಹುವುದರಿಂದ ಅಲ್ಲಿ ನಮ್ಮ ದೇಶದಲ್ಲಿನ ಹಾಗೆ ಬಾಲಕಿಯರಲ್ಲಿ ಶೈಶವಾವಸ್ಥೆಯ ಮರಣ ಪ್ರಮಾಣ ಕಂಡುಬರುವುದಿಲ್ಲ. ಭಾರತದಲ್ಲಿ ಸಾಂಪ್ರದಾಯಿಕ ರೂಢಿಯಾದ ವರದಕ್ಷಿಣೆಯಿಂದ ಬಾಲಕಿಯರ ಜನನ ತಂದೆ-ತಾಯಂದರಿಗೆ ಸಂತೋಷವನ್ನುಂಟು ಮಾಡಲಾರದು. ಸಾಮಾನ್ಯವಾಗಿ ತಂದೆ ತಾಯಂದಿರು ಹೆಣ್ಣು ಮಕ್ಕಳನ್ನು ಸಲಹುವ ವಿಷಯದಲ್ಲಿ ಅಸಡ್ಡೆಯಿಂದಿರುತ್ತಾರೆ. ಆದ್ದರಿಂದ ಹೆಣ್ಣುಮಕ್ಕಳು ಬಾಲ್ಯದಲ್ಲಿ ಮರಣವನ್ನಪ್ಪುವ ಪ್ರಮಾಣ ಹೆಚ್ಚಾಗುವುದು. ಇದರೊಂದಿಗೆ ಗರ್ಭಿಣಿ ಸ್ತ್ರೀ ಮಕ್ಕಳನ್ನು ಹೆರುವಾಗ ಮರಣಹೊಂದುವ ಸಾಧ್ಯತೆಯನ್ನು ಹೆಚ್ಚಿಸುತ್ತವೆ, ಸ್ತ್ರೀ-ಪುರುಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಮಾಣದಲ್ಲಿನ ವ್ಯತ್ಯಾಸವು ನಮ್ಮ ದೇಶದೆಡೆಯಲ್ಲಿಯೂ ಒಂದೇ ಇಲ್ಲ. ಈ ಕೆಳಗಿನ ಪಟ್ಟಿಯಿಂದ ವಿವಿಧ ಪ್ರದೇಶಗಳಲ್ಲಿನ ಸ್ತ್ರೀ-ಪುರುಷರ ಪ್ರಮಾಣದಲ್ಲಿನ ವ್ಯತ್ಯಾಸ ವನ್ನು ಕಾಣಬಹುದು.

ಪ್ರದೇಶ	ಸ್ತ್ರೀಯರು ಪ್ರತಿ 1000 ಪುರುಷರಿಗೆ
ಪೂರ್ವಭಾರತ	945
ಪಶ್ಚಿಮ ಭಾರತ	938
ಮಧ್ಯ ಭಾರತ	973
ಉತ್ತರ ಭಾರತ	910
ದಕ್ಷಿಣ ಭಾರತ	999

ಅಕ್ಷರಸ್ಥರ ಪ್ರಮಾಣ :

ಭಾರತದಲ್ಲಿ ಪತ್ರ ಬರೆಯುವುದನ್ನು ಬಲ್ಲವನಿಗೆ ಅಕ್ಷರಸ್ಥನೆಂದು ಪರಿಗಣಿಸಲಾಗುವುದು. 1961ರ ಜನಗಣತಿಯ ಪ್ರಕಾರ 5 ವರ್ಷಗಳಿಗೆ ಮಿಕ್ಕಿದವರಲ್ಲಿ ಒಟ್ಟು ಜನಸಂಖ್ಯೆಯ 28.3 ಪ್ರತಿ ಶತದಷ್ಟು ವ್ಯಕ್ತಿಗಳು ಮಾತ್ರ ಅಕ್ಷರಸ್ಥರಾಗಿದ್ದರು. ಅಕ್ಷರಸ್ಥರ ಪ್ರಮಾಣವು ಗ್ರಾಮೀಣ ಪ್ರದೇಶದಲ್ಲಿಗಿಂತ ನಗರ ಪ್ರದೇಶದಲ್ಲಿ ಹೆಚ್ಚಿಗಿರುವುದನ್ನು ಭಾರತದಲ್ಲಿ ಕಾಣುತ್ತೇವೆ. 1961ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 23.5 ಪ್ರತಿಶತ ಪುರುಷರೂ ಮತ್ತು 7.5 ಪ್ರತಿಶತ ಸ್ತ್ರೀಯರೂ (ಸ್ತ್ರೀ–ಪುರುಷರ ಒಟ್ಟು ಪ್ರತಿಶತ : 15.7) ಅಕ್ಷರಸ್ಥರಾಗಿದ್ದರು. ಎಲ್ಲ ನಗರ ಪ್ರದೇಶ ಗಳಲ್ಲಿನ ಪುರುಷರು ಪ್ರತಿಶತ 31.5 ಮತ್ತು ಸ್ತ್ರೀಯರು 22.5ದಷ್ಟು (ಒಟ್ಟು 27.3) ಅಕ್ಷರಸ್ಥರಿದ್ದರು.

ಉದ್ಯೋಗ ಪ್ರಮಾಣ :

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದರಿಂದ ಸಾಮಾನ್ಯವಾಗಿ ಇಲ್ಲಿಯ ಬಹುಪಾಲು ಜನರು ಕೃಷಿಯನ್ನೇ ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಭಾರತದ ಜನಸಂಖ್ಯೆಯ ಉದ್ಯೋಗದ ರಚನೆಯನ್ನು ಗಮನಿಸಿದರೆ ಉದ್ಯೋಗ ಯೋಗ್ಯ ವಯೋಗುಂಪಿನ ಅಂದರೆ 15–59 ವರ್ಷಗಳ ವಯಸ್ಸುಳ್ಳ ಜನರಲ್ಲಿ 70%ದಷ್ಟು ಜನಸಂಖ್ಯೆಯು ವ್ಯವಸಾಯವನ್ನೇ ಅವಲಂಬಿಸಿರುತ್ತದೆ. ಈ ಕೆಳಗಿನ ಪಟ್ಟಿಯು ಭಾರತೀಯ ಜನಸಂಖ್ಯೆ ಕೈಗೊಂಡಿರುವ ವೃತ್ತಿಗಳನ್ನು (1961ರ ಜನಗಣತಿಯ ಪ್ರಕಾರ) ತೋರಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದ್ಯೋಗ ರಚನೆ

ಉದ್ಯೋಗ	ವ್ಯಕ್ತಿಗಳು
ವ್ಯವಸಾಯ	69.53
ಉದ್ದಿಮೆ	10.65
ವ್ಯಾಪಾರ ಮತ್ತು ವಾಣಿಜ್ಯ	4.03
ಸಾರಿಗೆ ಮತ್ತು ಸಂಪರ್ಕ	1.59
ಇತರ	14 20
	100.00

ಆಧಾರ ; ಎಸ್. ಚಂದ್ರಶೇಖರ **ಏಸಿಯಾಸ್ ಪಾಪ್ಯುಲೇಶನ್ ಪ್ರಾಬ್ಲಂ.**

ಭಾರತದ ಒಟ್ಟು ಜನಸಂಖ್ಯೆಯು ಸುಮಾರು 70ರಷ್ಟು ಜನ ವ್ಯವಸಾಯುವನ್ನು ನೆಚ್ಚಿಕೊಂಡಿದ್ದು ಉಳಿದ 30 ರಷ್ಟು ಜನರು ವ್ಯವಸಾಯೇತರ ವೃತ್ತಿಗಳನ್ನು ಕೈಗೊಂಡಿದ್ದಾರೆ. ಅಂದರೆ ವ್ಯಕ್ತಿಗಳು ಕೂಡಿ ಒಬ್ಬ ವ್ಯಕ್ತಿಗೆ ಆಹಾರವನ್ನು ಪೂರೈಸಬೇಕಾದ ಪರಿಸ್ಥಿತಿ ನಮ್ಮಲ್ಲಿ ಅನೇಕ ಕೋಟಿ-ಕೋಟಿ ಹಸಿದ ಜನರ ಆಹಾರಕ್ಕಾಗಿ ಬೇರೆಯವರತ್ತ ಕೈಯೊಡ್ಡುವ ಪರಿಸ್ಥಿತಿ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ 5 ರಿಂದ 15 ಪ್ರತಿಶತದಷ್ಟು ವ್ಯಕ್ತಿಗಳು ಮಾತ್ರ ವ್ಯವಸಾಯುವನ್ನು ಕೈಗೊಂಡು, 85 ಪ್ರತಿಶತದಷ್ಟು ಜನ ವ್ಯವಸಾಯೇತರ ವೃತ್ತಿಯನ್ನು ಅವಲಂಬಿಸಿರುತ್ತಾರೆ. ಅಂದರೆ ಅಲ್ಲಿ ಒಬ್ಬ ರೈತನು ತಲಾ 5 ವ್ಯಕ್ತಿಗಳಿಗೆ ಆಹಾರವನ್ನು ಪೂರೈಸುತ್ತಾನೆ. ದಂತವಾಲಾ ಅವರ ಅಭಿಪ್ರಾಯದ ಪ್ರಕಾರ ಭಾರತದ ಜನಸಂಖ್ಯೆಯು ವೃತ್ತಿರಚನೆಯಲ್ಲಿ ಎಷ್ಟೊಂದು ವರ್ಷಗಳ ನಂತರವೂ ಯಾವ ಬದಲಾವಣೆಯೂ ಉಂಟಾಗಿಲ್ಲ. ವ್ಯವಸಾಯದ ವಿವಿಧ ಸ್ಥರಗಳ ಆಧಾರದ ಮೇಲೆ ವರ್ಗೀಕರಣವನ್ನು ಈ ಪ್ರಕಾರ ಮಾಡಬಹುದು.

ವ್ಯವಸಾಯ ಸ್ಥರ (1931)

ವಿಧಗಳು	ಪ್ರತಿಶತ
ಕೃಷಿ ಕಾರ್ಮಿಕರು	37.7
ಕೃಷಿಕ ಗೇಣಿದಾರರು	35.4
ಕೃಷಿಮಾಡುತ್ತಿರುವ ಜಮೀನಿನ ಒಡೆಯರು	27.7
ಕೃಷಿ ಮಾಡದ ಜಮೀನಿನ ಒಡೆಯರು	4.0
ಒಟ್ಟು	100.00

ಆಧಾರ : ಟೈಲರ್ ಎನ್ಸ್ಮಿಂಗರ್ ಮತ್ತು ಇತರರು, **ಇಂಡಿಯಾಸ್ ರೂಟ್ಸ್ ಆಫ್ ಡೆಮಾಕ್ರಸಿ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲಿನ ಚಿತ್ರಣವು 20 ವರ್ಷಗಳ ನಂತರವೂ ಅಷ್ಟೊಂದು ಬದಲಾವಣೆಯಾಗ ಲಿಲ್ಲ, ಇದು ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಏಪ್ರಿಲ್–ಜೂನ್ 1951ರ ಪ್ರಕಾರ ಭಾರತದ ವ್ಯವಸಾಯ ಸ್ಥಿರವನ್ನು ಧೃಢೀಕರಿಸುತ್ತದೆ.

ಭಾರತದ ವ್ಯವಸಾಯ ಸ್ಥಿರ

ವಿಧಗಳು	ಜನಸಂಖ್ಯೆಯ ಪ್ರಮಾಣ	ವ್ಯವಸಾಯ ಮಾಡಿದ ಜಮೀನಿನ ಪ್ರಮಾಣ
ಭೂರಹಿತ ಕೃಷಿ ಕಾರ್ಮಿಕರು	5.9	
ಗೇಣಿದಾರ ರೈತರು (5 ಎಕರೆಗಳಿಗಿಂತ ಕಡಿಮೆ ಭೂಮಿಯುಳ್ಳವರು	63.5	18.7
ಭೂಮಾಲೀಕ–ಕೃಷಿಕರು (5.10 ಎಕರೆ ಭೂಮಿಯುಳ್ಳವರು)	14.3	18.6
ಭೂಮಿಯುಳ್ಳ ಕೃಷಿಕರು (10.25ಎಕರೆ ಭೂಮಿಯುಳ್ಳವರು)	11.0	29.3
ಭೂಮಿಯುಳ್ಳ ಕೃಷಿಕರು (25 ಎಕರೆ ಗಿಂತ ಹೆಚ್ಚು ಭೂಮಿಯುಳ್ಳವರು)	5.9	33.4

ಜಾತಿವಾರು ಜನಸಂಖ್ಯೆ :

1881 ರಿಂದ 1931ರವರೆಗೆ ಭಾರತದಲ್ಲಿ ನಡೆದ ಜನಗಣತಿಯಲ್ಲಿ ಜಾತಿಗಳಿಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಲಾಯಿತು. ಮುಂದೆ 1941ರಲ್ಲೂ ಕೂಡ ಜಾತಿಗಳಿಗೆ ಸಂಬಂಧಿಸಿದ ವಿವರಗಳನ್ನು ಕೂಡಿಹಾಕಲಾಯಿತಾದರೂ ಅವುಗಳನ್ನು ಪಟ್ಟಿ ಮಾಡಲಿಲ್ಲ. ನಮ್ಮ ರಾಷ್ಟ್ರ ನಾಯಕರು ಜಾತಿವಾರು ಜನಗಣತಿ ರಾಷ್ಟ್ರೀಯ ಭಾವನೆಗೆ ಧಕ್ಕೆಯನ್ನುಂಟುಮಾಡಿ ಜಾತೀಯತೆ. ಮತ್ತು ವೈಷಮ್ಯಗಳನ್ನು ಹೆಚ್ಚಿಸ ಬಹುದೆಂದು ವಿರೋಧಿಸಿದರು. ಜಾತಿಯ ಬಗ್ಗೆ ವಿವರಗಳನ್ನು ಪಡೆಯುವಾಗಿ ಜನ ಗಣತಿಯ ಅಧಿಕಾರಿಗಳು ಕೂಡ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ತಪ್ಪು ಮಾಹಿತಿ ನೀಡುವುದು, ಸಂಬಂಧವಿಲ್ಲದ ಸಾಕ್ಷಿಗಳ ಮೂಲಕ ತಮ್ಮ ಜಾತಿ ಉತ್ತಮ ಜಾತಿಯೆಂದು ಸಿದ್ಧಮಾಡಿ ತೋರಿಸುವ ಪ್ರಯತ್ನಗಳು ಕೆಲವೊಮ್ಮೆ ಅವರನ್ನು ದಾರಿ ತಪ್ಪಿಸಿಬಿಡುತ್ತಿದ್ದವು. ಹೆಸರುಗಳಲ್ಲಿನ ಬದಲಾವಣೆ, ಒಂದೇ ಜಾತಿಯಲ್ಲಿ ಅನೇಕ ಉಪಜಾತಿಗಳು ಅವುಗಳಲ್ಲಿ ಮತ್ತೇ ಮೇಲು–ಕೀಳು ಎಂಬ ಪೈಪೋಟಿ ಇವುಗಳೆಲ್ಲ ಜನ ಗಣತಿ ಮಾಡುವವರಿಗೆ ತಲೆನೋವಾಗಿದ್ದವು. ಒಂದು ಪ್ರದೇಶದಲ್ಲಿ ಒಂದು ವಿಶಿಷ್ಟ ಜಾತಿಯ ಅತೀ ಉನ್ನತ ಸ್ಥಾನವನ್ನು ಪಡೆದಿದ್ದರೆ ಇನ್ನೊಂದು ಪ್ರದೇಶದಲ್ಲಿ ಅದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೌಣವಾಗಿರಬಹುದು. ಒಂದು ಪ್ರದೇಶದಲ್ಲಿ ಒಂದು ಜಾತಿಯು ಅಸ್ಪೃಶ್ಯವಾಗ ಬಹುದು ಇನ್ನೊಂದರಲ್ಲಿ ಅದು ಸ್ಪೃಶ್ಯಜಾತಿಯಾಗಿರಬಹುದು.

ಭಾರತದಲ್ಲಿನ ಒಟ್ಟು ಜಾತಿಗಳ ಸಂಖ್ಯೆಯನ್ನು ನಿಖರವಾಗಿ ಹೇಳುವುದು ತುಂಬ ಕಷ್ಟವಾದುದು. 1901ರ ಜನಗಣತಿಯು ಪ್ರಕಾರ ಭಾರತದಲ್ಲಿ ಒಟ್ಟು 2,378 ಮುಖ್ಯ ಜಾತಿ ಮತ್ತು ಪಂಗಡಗಳಿದ್ದವು. ಇವುಗಳ ಸದಸ್ಯರ ಸಂಖ್ಯೆಯು ಸಹಸ್ರ ಸಂಖ್ಯೆಯಿಂದ ಹಿಡಿದು ಕೆಲವೇ ನೂರರವರೆಗೂ ಇತ್ತು. ಪ್ರತಿ ಜಾತಿಗೆ ಸರಾಸರಿ ಸದಸ್ಯತ್ವ 2,10,000 ರಷ್ಟಿತ್ತು.

2,378 ಸಂಖ್ಯೆಗೆ ಉಪಜಾತಿಗಳ ಸಂಖ್ಯೆಗಳು ಕೂಡಿಲ್ಲ, 1291ರ ಜನಗಣತಿ ಯಲ್ಲಿ ಎರಡು ಜಾತಿಗಳಾದ ಜೌಟ್ ಮತ್ತು ಅಹಿರ್‌ಗಳೇ ಸುಮಾರು 1700 ತಲಾ ಉಪಜಾತಿಗಳನ್ನು ಹೊಂದಿದ್ದವೆಂದೂ ಕುರ್ಮಿ ಜಾತಿಗೆ 1,500 ಉಪಜಾತಿಗಳಿದ್ದ ವೆಂದು ತಿಳಿದುಬರುತ್ತದೆ. ಉತ್ತರ ಪ್ರದೇಶದ ತೆಹರಿ_ಗರವಾಲ್ ಎಂಬ ಚಿಕ್ಕ ಪರ್ವತ ಜಿಲ್ಲೆಯಲ್ಲಿ 1931ರ ಜನಗಣತಿಯನ್ನು ಕೈಗೊಂಡಾಗ 3,50,000 ಒಟ್ಟು ಜನಸಂಖ್ಯೆ ಯಲ್ಲಿನ ಬ್ರಾಹ್ಮಣರಲ್ಲಿ 387 ಉಪಜಾತಿಗಳನ್ನೂ ರಾಜಪುತರಲ್ಲಿ 1,025 ಉಪಜಾತಿ ಗಳು ಇರುವುದನ್ನು ಗಮನಿಸಲಾಗಿದೆ.

1931ರ ಜನಗಣತಿಯು ಪ್ರಕಾರ ನಮ್ಮ ದೇಶದಲ್ಲಿ ಒಟ್ಟು 15 ಮಿಲಿಯನ್ ಬ್ರಾಹ್ಮಣರಿದ್ದರು. ಬ್ರಾಹ್ಮಣರು ನಮ್ಮ ದೇಶದಲ್ಲೆಲ್ಲ ಹರಡಿದ್ದರೂ ಕೂಡ ಅವರ ಜನ ಸಂಖ್ಯೆಯು ಪ್ರಮಾಣ ಎಲ್ಲ ರಾಜ್ಯಗಳಲ್ಲಿಯೂ ಸಮನಾಗಿ ಇಲ್ಲ. ಅವರ ಜನಸಂಖ್ಯೆಯ ಪ್ರಮಾಣ ಉತ್ತರ ಪ್ರದೇಶ ಮತ್ತು ಪಂಜಾಬಗಳಲ್ಲಿ ಅತೀ ಹೆಚ್ಚಾಗಿದ್ದು ದಕ್ಷಿಣ ಭಾರತ ದಲ್ಲಿ ಅವರ ಪ್ರಮಾಣ ತುಂಬ ಕಡಿಮೆ ಇರುವುದು.

ಕಿಂಗ್ಸಲೆ ಡೇವಿಸ್‌ರವರು ಬ್ರಾಹ್ಮಣರು ಉನ್ನತ ಸ್ಥಾನಲ್ಲಿದ್ದ ಮತ್ತು ಅತೀ ಕಡಿಮೆ ಜನನ ಪ್ರಮಾಣ ಹೊಂದಿರುವ ಜಾತಿಯಾಗಿದ್ದರಿಂದ ಅವರ ಜನಸಂಖ್ಯೆಯು ಯೋಗ್ಯ ಪ್ರಮಾಣದಲ್ಲಿ ವೃದ್ಧಿಹೊಂದುತ್ತಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಂದುಗಳಲ್ಲಿ ಬ್ರಾಹ್ಮಣರ ಪ್ರಮಾಣ

ವರ್ಷ	ಬ್ರಾಹ್ಮಣರ ಪ್ರಮಾಣ
1891	7.14
1901	7.19
1911	6,71
1921	6.51
1931	6,37

ಆಧಾರ : ಕಿಂಗ್ಸ್ಲೆ ಡೇವಿಸ್, **ದಿ ಪಾಪ್ಯುಲೇಶನ್ ಆಫ್ ಇಂಡಿಯಾ ಆ್ಯಂಡ್ ಪಾಕಿಸ್ತಾನ.**

ಬ್ರಾಹ್ಮಣರ ಸಂಖ್ಯೆಯಲ್ಲಿ ಅಲ್ಪ ಸ್ವಲ್ಪ ಹೆಚ್ಚಳವೇನಾದರೂ ಕಂಡುಬಂದರೆ ಅದು ಕೆಲವು ಉನ್ನತ ಸ್ಥಾನ ಪಡೆದ ಜಾತಿಗಳು ತಾವೂ ಬ್ರಾಹ್ಮಣರೇ ಎಂದು ವಾದಿಸಿ ತಾವೂ ಬ್ರಾಹ್ಮಣತ್ವ ಪಡೆದ ಮೂಲಕವೇ ಹೆಚ್ಚಾಯಿತು ಹೊರತಾಗಿ ಅವರಲ್ಲಿನ ಜನನದ ಪ್ರಮಾಣದಿಂದಲ್ಲ. ಬ್ರಾಹ್ಮಣರ ಸಾಂಪ್ರದಾಯಿಕ ಉದ್ಯೋಗ, ಪೌರೋಹಿತ . ಆದರೂ ಅನೇಕ ಶತಮಾನಗಳಿಂದ ಅವರು ಇತರ ಉದ್ಯೋಗಗಳನ್ನು ಕೈಗೊಳ್ಳುತ್ತಿದ್ದಾರೆ. ಹೀಗಾಗಿ 1911ರ ಜನಗಣತಿಯಲ್ಲಿ ಬ್ರಾಹ್ಮಣರ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 13ರಷ್ಟು ಮಾತ್ರ ಪುರೋಹಿತರಾಗಿದ್ದರು.

1931ರಲ್ಲಿ ಅಸ್ಪೃಶ್ಯರ ಜನಸಂಖ್ಯೆಯು 50,1 ಮಿಲಿಯನ್ ಇದ್ದು ನಮ್ಮ ದೇಶದ ಒಟ್ಟು ಜನಸಂಖ್ಯೆಯು 11ರಷ್ಟು ಇದ್ದರು. 1911ರಲ್ಲಿ ಅವರ ಜನಸಂಖ್ಯೆ ಶೇಕಡಾ 15ರಷ್ಟು ಇದ್ದು 1951ರಲ್ಲಿ ಶೇಕಡಾ 11%ಕ್ಕೆ ಇಳಿಯಿತು, ಅನೇಕ ಅಸ್ಪೃಶ್ಯರು ಕ್ರೈಸ್ತ, ಮುಸ್ಲಿಂ, ಬೌದ್ಧ, ಸಿಖ್ಖ ಧರ್ಮಗಳಿಗೆ ಮತಾಂತರ ಹೊಂದಿದುದರಿಂದ ಜನ ಸಂಖ್ಯೆಯಲ್ಲಿ ಕಡಿಮೆಯಾಗಿರಬಹುದು. ಆದುದರಿಂದ ಜಗತ್ತಿನ ಯಾವುದೇ ಜನಸಂಖ್ಯೆ ಯಲ್ಲಿ ಅತೀ ಕೆಳಗಿನ ಸಾಮಾಜಿಕ ಸ್ತರದಲ್ಲಿ ಕಾಣದಷ್ಟು ಜನ ಭಾರತದಲ್ಲಿ ಕಾಣ ಬಹುದು. ಅಮೇರಿಕೆಯಲ್ಲಿ ಅತೀ ಕೆಳಗಿನ ಸಾಮಾಜಿಕ ಸ್ತರದಲ್ಲಿರುವ ನಿಗ್ರೊಗಳು ಆ ದೇಶದ ಜನಸಂಖ್ಯೆಯು ಕೇವಲ ಶೇಕಡಾ 10ರಷ್ಟು ಮಾತ್ರ ಇದ್ದಾರೆ. ಜಪಾನಿನ ಅತೀ ಕೀಳೆಂದು ಪರಿಗಣಿಸಿದ ಇಟಾ ಎಂಬ ಜನಾಂಗವು ಆ ದೇಶದ ಜನಸಂಖ್ಯೆಯು ಶೇಕಡಾ 15ರಷ್ಟು ಮಾತ್ರ ಇದ್ದಾರೆ.

ಕೆಳಜಾತಿಯಲ್ಲಿಯೂ ಕೂಡ ಅನೇಕ ಉಪಜಾತಿಗಳಿವೆ. ಅವುಗಳಲ್ಲಿಯೂ ಮೇಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೀಳು ಎಂಬ ತಾರತಮ್ಯ ಭಾವನೆಯಿರುವುದನ್ನು ಕಾಣಬಹುದು. ಅವರಲ್ಲಿ ವಿವಿಧ ಸಾಮಾಜಿಕ ಸ್ಥಾನಗಳಿರುವ ಸುಮಾರು 10 ಉಪಜಾತಿಗಳಿವೆ. ಅವರು ಉತ್ತರಭಾರತ ದಲ್ಲಿ ಹೆಚ್ಚು ಪ್ರಮಾಣದಲ್ಲಿಯೂ ದಕ್ಷಿಣ ಭಾರತದಲ್ಲಿ ವಿರಳವಾಗಿಯೂ ಹರಡಿಕೊಂಡಿ ದ್ದಾರೆ. 1931ರ ಜನಗಣತಿಯ ಪ್ರಕಾರ ತ್ರಾವಣಕೋರ್ ಭಾಗದಲ್ಲಿ ಅಲ್ಲಿನ ಒಟ್ಟು ಜನಸಂಖ್ಯೆಯ ಶೇಕಡಾ 56ರಷ್ಟು ಕೆಳಜಾತಿಯವರೇ ಇದ್ದರು. ಈ ಜನರಲ್ಲಿ ಸುಮಾರು ಶೇಕಡಾ 45ರಷ್ಟು ಸಾಂಪ್ರದಾಯಿಕ ಕಸುಬುಗಳನ್ನೇ ಕೈಗೊಂಡಿರುತ್ತಾರೆ.

ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಮುಸ್ಲಿಂ, ಸಿಖ್ಖ, ಕ್ರೈಸ್ತ ಧರ್ಮ ಗಳಲ್ಲಿಯೂ ಜಾತಿ ವ್ಯವಸ್ಥೆಯು ಪ್ರವೇಶ ಮಾಡಿದೆ. ಈ ಧರ್ಮಗಳಲ್ಲಿ ಮತಾಂತರ ಹೊಂದಿದವರು ಭಾರತೀಯರೆ ಆಗಿದ್ದರಿಂದ ಹೀಗಾಯಿತು. ಭಾರತದ ನೂರಕ್ಕೆ ನೂರು ಕ್ರೈಸ್ತ ಮತಾವಲಂಬಿಗಳು ಸ್ಥಳೀಯರೇ ಮತ್ತು ಪಂಜಾಬಿನಲ್ಲಿರುವ 15 ಪ್ರತಿಶತ ಮುಸ್ಲಿಮರೂ ಸ್ಥಳೀಯ ಜನರೇ. ಹೀಗಾಗಿ ಈ ಸ್ಥಳೀಯ ಜನರು ಮತಾಂತರ ಹೊಂದುವದೊಂದಿಗೆ ತಮ್ಮ ಜಾತಿಯನ್ನು ಹೊಸ ಧರ್ಮಗಳಲ್ಲಿ ಪ್ರವೇಶ ಪಡೆದರೂ ತಮ್ಮೊಂದಿಗೆ ಹೊತ್ತುಕೊಂಡೇ ಒಳಗೆ ಹೋದರು.

ಭಾರತದ ಮುಸ್ಲಿಮರಲ್ಲಿ ಸುನ್ನಿ ಮತ್ತು ಸಿಯಾ ಎಂಬ ಎರಡು ಪಂಗಡಗಳಿವೆ, ಇವುಗಳನ್ನು ಮತ್ತೇ ನಾಲ್ಕು ಉಪಪಂಗಡಗಳಲ್ಲಿ ವಿಂಗಡಿಸಬಹುದು. ಅವು ಯಾವು ವೆಂದರೆ ಸಯ್ಯದ್, ಶೇಖ್, ಪಠಾಣ ಮತ್ತು ಮೊಘಲ್, ಮುಸ್ಲಿಮರಲ್ಲಿ ಅನೇಕ ಜಾತಿ ಪಂಗಡಗಳನ್ನು ಕಾಣಬಹುದು. ಉದಾಹರಣೆಗೆ ಚುನಿಹಾರ್, ದರ್ಬಿ, ಧುಸಿಯಾ, ಖಂಜ್ರಾ, ಮನಿಹಾರ್, ಭಾಗಬಾನ್, ಭೇಲಿಯಾ, ಹಲ್ವಾಯಿ, ಜಾಟ್, ನಯೀ, ರಾಜ ಪುತ್, ಸೋನಾರ್, ತೇಲಿ ಇತ್ಯಾದಿ. ಹಿಂದುಗಳಲ್ಲಿರುವಂತೆ ಮುಸ್ಲಿಮರಲ್ಲಿ ಜಾತಿಯ ನಿರ್ಬಂದಗಳು ಅಷ್ಟೊಂದು ಬಿಗಿಯಿಲ್ಲದಿದ್ದರೂ ವಿವಿಧ ಗುಂಪುಗಳಲ್ಲಿನ ಭಿನ್ನತೆಯು ಎದ್ದು ಕಾಣುವಂತಹದು. ಉದಾಹರಣೆಗಾಗಿ ಬೆಂಗಾಲದಲ್ಲಿನ ಎರಡು ಮುಸ್ಲಿಮರ ಗುಂಪುಗಳಾದ ಆಸ್ರಾಫ್ ಮತ್ತು ಅಜ್ಲಾಫ್‌ಗಳಲ್ಲಿ ಮೇಲುಕೀಳು ಎಂಬ ಆಧಾರದ ಮೇಲೆ ವಿಂಗಡಿಸಲ್ಪಟ್ಟಿವೆ. ಮುಸ್ಲಿಮರಲ್ಲಿಯೂ ಅಸ್ಪೃಶ್ಯ ಜಾತಿಗಳಾದ ಹಲಾಲ್ ಖೋರ್, ಲಾಲಬೇಗಿ ಮತ್ತು ಬೇಡಿಯಾ ಮುಂತಾದವುಗಳಿವೆ. ಈ ಜಾತಿಯ ಸದಸ್ಯ ರನ್ನು ಮಸೀದಿಗಳಲ್ಲಿ ಪ್ರವೇಶ ಮತ್ತು ಮುಸ್ಲಿಂ ಸ್ಮಶಾನಗಳ ಬಳಕೆಯನ್ನು ನಿಷೇದಿಸ ಲಾಗಿದೆ.

ಭಾರತದಲ್ಲಿ ಕ್ರೈಸ್ತರು ಮತ್ತು ಸಿಖ್ಖರು ಮತಾಂತರ ಹೊಂದುವುದಕ್ಕಿಂತ ಮೊದಲು ಹಿಂದೂ ಧರ್ಮದ ಕೆಳಜಾತಿಯವರಾಗಿದ್ದು ತಮ್ಮ ಕೆಳ ಜಾತಿಯ ಕಳಂಕ ದಿಂದ ಮುಕ್ತರಾಗಲು ಈ ಧರ್ಮಗಳನ್ನು ಸ್ವೀಕರಿಸಿದರೂ ಕೂಡ ಇಂದು ಚರ್ಚು ಗಳಲ್ಲಿಯೂ ಜಾತಿಯು ಪ್ರವೇಶ ಪಡೆದಿದ್ದು ಒಂದು ವಿಪರ್ಯಾಸ. ಸಿಖ್ಖ ಧರ್ಮವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾರಂಭದಲ್ಲಿ ಜಾತಿ ವಿರೋಧ ಪಂಥವಾಗಿ ಬೆಳೆದರೂ ಕೂಡ ಇಂದು ಈ ಧರ್ಮದಲ್ಲಿಯೂ ಜಾತಿ ನೆಲೆಯೂರಿ ನಿಂತಿದೆ.

ಭಾರತದಲ್ಲಿ ವಲಸೆಯ ಕಾರಣಗಳು

ಜನಸಂಖ್ಯಾಶಾಸ್ತ್ರಜ್ಞರು ಭಾರತೀಯರನ್ನು ವಲಸೆ ಹೋಗದ ಒಂದೆಡೆಯೇ ನೆಲೆಸುವ ಜನರೆಂದು ಭಾವಿಸಿದ್ದಾರೆ. ಭಾರತೀಯರು ಅವರ ಜಮೀನು ಮತ್ತು ಮನೆಗಳು ಬಲಿಸದಂತೆ, ವಲಸೆಹೋಗದಂತೆ ಅವರ ತಡೆಯುತ್ತವೆ ಎಂದು ಅವರು ಪರಿಗಣಿಸಿದ್ದಾರೆ. ಕಿಂಗ್ಸಲಿ ಡೇವಿಸ್‌ರವರು ಈ ವಿಷಯವನ್ನು ಅಂಕಿಅಂಶಗಳ ಮೂಲಕ ಖಚಿತಪಡಿಸುತ್ತಾರೆ. ಅವರ ಪ್ರಕಾರ 1921ರಲ್ಲಿ ಕೇವಲ ಶೇಕಡಾ 1.7ರಷ್ಟು ಮತ್ತು 1931ರಷ್ಟು ಶೇಕಡಾ 9.1ರಷ್ಟು ಜನರು ಮಾತ್ರ ತಮ್ಮ ಜಿಲ್ಲೆಗಳ ಹೊರಗಡೆ ವಾಸವಾಗಿದ್ದರು. 1932ರಲ್ಲಿ ಕೇವಲ 3.6ರಷ್ಟು ಜನರು ಮಾತ್ರ ತಮ್ಮ ರಾಜ್ಯದ ಹೊರಗಡೆ ವಾಸವಾಗಿದ್ದರು. ಅಮೇರಿಕಯಲ್ಲಿ 1940ರ ಅಂಕಿ ಅಂಶಗಳ ಪ್ರಕಾರ ಶೇಕಡಾ 11.5ರಷ್ಟು ಜನರು ಸಾಮಾನ್ಯವಾಗಿ ತಮ್ಮ ರಾಜ್ಯದ ಹೊರಗಡೆ ನೆಲೆಸಿದ್ದರು. ಅಂದರೆ ಭಾರತದ ವಲಸೆಯ ಪ್ರಮಾಣವು ಅಮೇರಿಕೆಯ ವಲಸೆಯ ಪ್ರಮಾಣದ ಅರ್ಧದಷ್ಟೂ ಇಲ್ಲವೆಂದು ಹೇಳಬಹುದು.

ಭಾರತೀಯರು ವಲಸೆಯ ವಿರೋಧಿಗಳೇಕೆ ? ಎಂದು ತಿಳಿಸಲು ಅನೇಕ ವಿವರಣೆಗಳಿವೆ. ಭಾರತವು ಕೃಷಿಪ್ರಧಾನವಾದ ರಾಷ್ಟ್ರ. ಕೃಷಿಯಲ್ಲಿ ರೈತನು ತನ್ನ ಗಮನ ಸದಾಕಾಲ ಜಮೀನಿನ ಮೇಲೆ ಕೇಂದ್ರೀಕೃತವಾಗಿಡಬೇಕಾಗಿರುವುದರಿಂದ ಅವರು ಬೇರೆಡೆಗೆ ಹೋಗಲು ಅವಕಾಶ ನೀಡುವುದಿಲ್ಲ. ಇನ್ನು ಭಾರತದ ಕೃಷಿಯು ಕೇವಲ ಹೊಟ್ಟೆ ಹೊರೆಯಲು ಮಾತ್ರ ಸಹಾಯ ಮಾಡಿ, ಹೆಚ್ಚುವರಿ ಉತ್ಪಾದನೆಯ ಅಸಾಧ್ಯತೆಯಿಂದ ರೈತರು ದೂರದ ಪ್ರದೇಶಗಳಿಗೆ ವಲಸೆ ಹೋಗಲು ಬೇಕಾಗುವ ಹಣದ ಮುಗ್ಗಟ್ಟಿರುವುದರಿಂದಲೂ ವಲಸೆಯ ಪ್ರಮಾಣ ಕಡಿಮೆ ಎಂದು ಹೇಳಬಹುದು. ಇದರೊಂದಿಗೆ ಜಾತಿಯೂ ವಲಸೆಗೆ ಪ್ರತಿಕೂಲ. ಏಕೆಂದರೆ ಕೆಲವು ಪ್ರದೇಶಗಳಲ್ಲಿ ಮಾತ್ರ ಕೆಲವು ಜಾತಿಗಳಿದ್ದು ಯಾವ ಪ್ರದೇಶದಲ್ಲಿ ಒಂದು ಜಾತಿಯ ಜನರು ಅತೀ ಕಡಿಮೆ ಸಂಖ್ಯೆಯಲ್ಲಿ ಅಥವಾ ಇಲ್ಲದೇ ಹೋದರೆ ಆ ಜಾತಿಯ ವ್ಯಕ್ತಿಯು ಅಲ್ಲಿಗೆ ವಲಸೆ ಹೋದರೆ ಆತನ ಸ್ಥಾನಮಾನಗಳ ವಿಷಯಕ್ಕೆ ಗೊಂದಲ ಉಂಟುಮಾಡಬಹುದು. ಕೆಲವು ಸಂಪ್ರದಾಯ, ರೂಢಿಗಳೂ ಕೂಡ ವಲಸೆ ಹೋಗುವುದನ್ನು ತಡೆಯುತ್ತಿವೆ. ಒಬ್ಬ ಸಂಪ್ರದಾಯಿ ವ್ಯಕ್ತಿ ನದಿಯನ್ನು ದಾಟುವುದು, ಜಾತಿಯ ಪರಿಚಯವಿಲ್ಲದ ವ್ಯಕ್ತಿಗಳಿಂದ ಆಹಾರ–ನೀರು ಸ್ವೀಕರಿಸುವುದು ಪಾಪ ಮಾಡಿದ ಹಾಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಲಸೆಯು ಸಾಮಾನ್ಯವಾಗಿ ಯಾವುದೇ ಬಂಧನವಿಲ್ಲದ, ಮಹತ್ವಾಕಾಂಕ್ಷಿ ತರುಣರ ಮೆಚ್ಚಿನ ವಿಷಯ. ಕೇವಲ ಅವರೇ ವಲಸೆ ಹೋಗುವ ಧೈರ್ಯ ಮಾಡುವರು. ಆದರೆ ನಮ್ಮ ದೇಶದ ಹಳ್ಳಿಗಾಡಿನಲ್ಲಿ ತಾರುಣ್ಯ, ಸ್ವಾತಂತ್ರ್ಯಗಳನ್ನು ಅನುಭವಿಸುವ ಅವಧಿ ತುಂಬಾ ಕಡಿಮೆ. ಏಕೆಂದರೆ ನಮ್ಮಲ್ಲಿನ ಯುವಕ-ಯುವತಿಯರಿಗೆ ಅತೀ ಕಡಿಮೆ ವಯಸ್ಸಿನಲ್ಲಿಯೇ ವಿವಾಹ ಮಾಡಿ ಅವರಿಗೆ ವಲಸೆ ಹೋಗದಂತೆ ಭಾರ ಹೊರಿಸಲಾಗುವುದು. ಅನಕ್ಷರತೆ, ತಿಳುವಳಿಕೆ ಇಲ್ಲದಿರುವುದು ನಮ್ಮ ರೈತಾಪಿ ಜನರ ಇನ್ನೊಂದು ಲಕ್ಷಣ. ವಲಸೆ ಹೋಗುವುದಕ್ಕಿಂತ ಮೊದಲು ತಾವು ತಲುಪಬೇಕಾದ ಪ್ರದೇಶದಲ್ಲಿನ ಅನುಕೂಲತೆಗಳ ಬಗ್ಗೆ ಜ್ಞಾನವಿರುವುದು ಅತೀ ಅಗತ್ಯ. ಹೊಸ ಪ್ರದೇಶದ ರೂಢಿ ನಿಯಮಗಳು, ಸಂಸ್ಕೃತಿ, ಭಾಷೆಗಳಲ್ಲಿನ ಭಿನ್ನತೆಗಳು ವಲಸೆ ಹೋಗಬೇಕೆಂಬ ಅಭಿಲಾಷೆಯುಳ್ಳವರು ಹೆದರುವಂತೆ ಮಾಡುತ್ತವೆ. ಬಡತನ ದಾರಿದ್ರ್ಯಗಳು ದೇಶದ ಎಲ್ಲೆಡೆಯೂ ಒಂದೇ ಬಗೆಯಲ್ಲಿ ಹರಡಿರುವುದು ಕೂಡ ವಲಸೆಯನ್ನು ಕುಂಟಿತಗೊಳಿಸುವ ಒಂದು ಅಂಶ. ಭಾರತದಲ್ಲಿನ ನಗರಗಳು ನಗರೀಕರಣದ ಅನಪೇಕ್ಷಣೀಯ ಗುಣಗಳಿಂದ ತುಂಬಿ ಹೋಗಿರುವುದರಿಂದ ಅದು ಗ್ರಾಮೀಣ ಜನರನ್ನು ಆಕರ್ಷಿಸುವುದಿಲ್ಲ.

ವಲಸೆಯನ್ನು ವಿರೋಧಿಸುವ ಈ ಅಂಶಗಳಿರುವುದರಿಂದ ಭಾರತದಲ್ಲಿ ವಲಸೆ ಹೋಗುವುದೇ ಇಲ್ಲವೆಂದು ಹೇಳಲಾಗದು. ಭಾರತದ ವಲಸೆಯ ಪ್ರವೃತ್ತಿಯು ವಿಶೇಷವಾಗಿ ತಳ್ಳುವ ಅಂಶಗಳಿಂದ ನಿರ್ಧಾರವಾಗುತ್ತದೆಯೇ ಹೊರತಾಗಿ ಆಕರ್ಷಣೆ (ಎಳೆಯುವ) ಅಂಶಗಳಿಂದಲ್ಲ.

ಜಾತಿಯು ಜನರನ್ನು ಹೊರತಳ್ಳುವ ಮಹತ್ವದ ಅಂಶ. ಹಳ್ಳಿಗಳಲ್ಲಿನ ಅಸ್ಪೃಶ್ಯ ಜನರಿಗೆ ಅವಮಾನವೀಯ ರೀತಿಯಲ್ಲಿ ನಡೆಸಿಕೊಳ್ಳಲಾಗುವುದು, ಈ ಜನರನ್ನು ಹಳ್ಳಿಯಿಂದ ನಗರಗಳತ್ತ ತಳ್ಳಲು ಅವರ ಅಸಹನೀಯ ಜೀವನ ಮತ್ತು ಸವರ್ಣಿಯರ ಶೋಷಣೆಯಿಂದ ಮುಕ್ತಿಹೊಂದಬೇಕೆಂಬ ಆಶೆಗಳೇ ಕಾರಣವಾಗುತ್ತವೆ. ಹಿಂದಿನ ಕಾಲದಲ್ಲಿ ಅನಾವೃಷ್ಟಿ ಸಾಂಕ್ರಾಮಿಕ ರೋಗಗಳು ದರೋಡೆಗಳು ಹಳ್ಳಿಯಿಂದ ನಗರಗಳತ್ತ ವಲಸೆಯನ್ನು ಪ್ರೋತ್ಸಾಹಿಸುವ ಅಂಶಗಳಾಗಿದ್ದವು. ಇತ್ತೀಚೆಗೆ ಉತ್ತಮಗೊಂಡ ಸಾರಿಗೆ ಸಂಪರ್ಕ ವ್ಯವಸ್ಥೆ ಹಳ್ಳಿಗಳಲ್ಲಿ ಭೂಮಿಯ ಮೇಲೆ ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡ, ಇವುಗಳೆಲ್ಲ ಗ್ರಾಮೀಣ ಪ್ರದೇಶದ ಜನರನ್ನು ವಲಸೆಹೋಗುವಂತೆ ಪ್ರೇರೇಪಿಸುವ ಅಂಶಗಳು. ಹಳ್ಳಿಗರು ನಗರಗಳನ್ನು ಅಷ್ಟೇನು ಇಷ್ಟ ಪಡುವವರಲ್ಲ. ನಗರಗಳಿಗೆ ಅವರ ವಲಸೆಹೋಗುವ ಸಂದರ್ಭ ಹಳ್ಳಿಗಳಲ್ಲಿ ಬದುಕಲು ಸಾಧ್ಯವಾಗದಷ್ಟು ಕಠಿಣ ಪರಿಸ್ಥಿತಿ ಉಂಟಾದಾಗ ಮಾತ್ರ. ತರುಣರಿಗೆ ಹೊರತು ಪಡಿಸಿದರೆ ನಗರದ ಆಕರ್ಷಣೆ ಉಳಿದವರಿಗೆ ಅತೀ ಕಡಿಮೆ ಎಂದು ಹೇಳಬಹುದು. ಹಳ್ಳಿಗಳಿಂದ ನಗರಗಳಿಗೆ ಹೋಗಿ ನೆಲೆಸಿದ ತರುಣರೂ ಕೂಡಾ ಸುಗ್ಗಿಯ ಕಾಲದಲ್ಲಿ ಹಳ್ಳಿಗಳಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧಾವಿಸಿ ಬಂದೇಬರುವಂತಹವರು. ನಗರದ ಜನಸಾಂದ್ರತೆ ಅಲ್ಲಿನ ಕೊಳಚೆ ಪ್ರದೇಶಗಳು ಅವರಲ್ಲಿ ಜಿಗುಪ್ಸೆಯನ್ನುಂಟು ಮಾಡುತ್ತವೆ.

ವಲಸೆಯನ್ನು ಪ್ರಚೋದಿಸುವ ಅಂಶಗಳಲ್ಲಿ ವಿವಾಹವು ಅತೀಮುಖ್ಯವಾದುದು. ಮಹಿಳೆಯರ ವಿವಾಹ ವಲಸೆಯ ಪ್ರಮಾಣವು ನಮ್ಮ ದೇಶದಲ್ಲಿ ಅತೀ ಹೆಚ್ಚಿನದು. ನಮ್ಮಲ್ಲಿ ಹಳ್ಳಿಯ ಹೊರಗಿನ ವಿವಾಹ ಪದ್ಧತಿ, ಒಳಜಾತಿ ವಿವಾಹ ಪದ್ಧತಿ ಮತ್ತು ಪಿತೃಪ್ರಧಾನ ಕುಟುಂಬ ವ್ಯವಸ್ಥೆಗಳು ಭಾರತದಾದ್ಯಂತ ಪ್ರಚಲಿತವಿರುವುದರಿಂದ ಮಹಿಳೆಯರು ಮದುವೆಯಾಗಿ ತಮ್ಮ ಅತ್ತೆ ಮಾವಂದಿರ ಮನೆಗೆ ಹೋಗಬೇಕಾಗುವುದು.

ಉತ್ತರ ಭಾರತದಲ್ಲಿ ವಿಶೇಷವಾಗಿ ಹಳ್ಳಿಯ ಹೊರಗೆ ಮದುವೆಯಾಗಬೇಕೆಂಬ ನಿರ್ಬಂಧವಿರುವುದರಿಂದ ಇಲ್ಲಿ ವಲಸೆಗೆ ಪ್ರೋತ್ಸಾಹವನ್ನು ಕಾಣಬಹುದು. ವಿವಾಹ ವಲಸೆಯನ್ನು ಸಾಮಾನ್ಯವಾಗಿ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ಅತೀ ಹೆಚ್ಚಾಗಿ ಕಾಣಬಹುದು. ಏಕೆಂದರೆ ಈ ಅವಧಿಯು ಹಿಂದುಗಳಿಗೆ ಮದುವೆಯಾಗಲು ತುಂಬ ಪವಿತ್ರವಾದದ್ದು ಎಂಬ ನಂಬಿಕೆಯಿದೆ.

ನಮ್ಮ ದೇಶದ ವಿಭಜನೆಯ ಪೂರ್ವದಲ್ಲಿ ವಲಸೆಯು ಪಶ್ಚಿಮದಿಂದ ಪೂರ್ವಕ್ಕೆ ಮತ್ತು ದಕ್ಷಿಣದಿಂದ ಉತ್ತರಕ್ಕೆ ಹೆಚ್ಚಿನ ಪ್ರಮಾಣದಲ್ಲಿತ್ತು. ನಮ್ಮ ದೇಶದ ಉತ್ತರ ಭಾಗದಲ್ಲಿ ಸುಮಾರು ಒಂದು ಮಿಲಿಯನ್‌ದಷ್ಟು ಜನರು ತಾವು ಪೂರ್ವಭಾಗದಿಂದ ವಲಸೆ ಬಂದವರೆಂದು ಹೇಳಿಕೊಂಡಿದ್ದರು. ಅದರಲ್ಲಿ 1/7ರಷ್ಟು ಜನರು ಪಶ್ಚಿಮ ಭಾಗದಲ್ಲಿ ಜನ್ಮ ಪಡೆದವರೆಂದೂ ಹೇಳಿಕೊಂಡಿದ್ದರು. ಇದಕ್ಕೆ ಮುಖ್ಯ ಕಾರಣಗಳು ಪಶ್ಚಿಮ ಬಂಗಾಳದಲ್ಲಿ ಔದ್ಯೋಗಿಕ ಕೇಂದ್ರಗಳ ಸ್ಥಾಪನೆ ಮತ್ತು ಅಸ್ಸಾಮ್ ಚಹಾ ತೋಟಗಳ ಅಭಿವೃದ್ಧಿ.

ದಕ್ಷಿಣ ಭಾರತೀಯರು ಪಶ್ಚಿಮ ದಿಕ್ಕಿನತ್ತ ವಲಸೆ ಹೋಗುತ್ತಿದ್ದರು. ಇದಕ್ಕೆ ಮುಖ್ಯ ಕಾರಣ ಮುಂಬೈಯಲ್ಲಿನ ಔದ್ಯೋಗಿಕ ಅಭಿವೃದ್ಧಿ ಮತ್ತು ಪಶ್ಚಿಮ ಘಟ್ಟಗಳಲ್ಲಿ ತೋಟಗಳ ಮತ್ತು ಎಸ್ಟೇಟ್‌ಗಳ ಅಭಿವೃದ್ಧಿ.

ಭಾರತದಲ್ಲಿ ಆಂತರಿಕ ವಲಸೆಯ ಪ್ರಮಾಣ ತುಂಬ ಕಡಿಮೆಯೆಂದೇ ಹೇಳಬಹುದು. ಸಾಮಾನ್ಯವಾಗಿ ಮಹಿಳೆಯರಲ್ಲಿ, ವಿವಾಹ ವಲಸೆ ಅಥವಾ ಕುಟುಂಬಗಳೊಂದಿಗೆ ಹೋಗುವ ವಲಸೆಯೇ ಹೇಳಬಹುದು, ಇಲ್ಲಿ ಆರ್ಥಿಕ ಅಂಶದ ಪಾತ್ರವೇನೂ ಕಾಣದು. ವಲಸೆಯ ದೂರ ಹೆಚ್ಚಾದರೂ ವಲಸೆ ಹೋಗುವವರ ಸಂಖ್ಯೆಯಲ್ಲಿ ಪುರುಷರ ಪ್ರಮಾಣವೇ ಹೆಚ್ಚುತ್ತದೆ. ಭಾರತದ ವಲಸೆಯು ಪ್ರಮುಖವಾಗಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಹಳ್ಳಿಯಿಂದ ಹಳ್ಳಿಗೆ ಎಂದು ಹೇಳಬಹುದು.

ಭಾರತದ ವಲಸೆಯ ವಿಧಗಳು

ವಿಧಗಳು	ಪುರುಷರು	ಸ್ತ್ರೀಯರು	ಒಟ್ಟು
ಗ್ರಾಮದಿಂದ ಗ್ರಾಮಕ್ಕೆ	56.7	81.3	73.1
ಗ್ರಾಮದಿಂದ ನಗರಗಳಿಗೆ	25.7	9.7	14.6
ನಗರದಿಂದ ನಗರಕ್ಕೆ	1.1	13.0	5.1
ನಗರದಿಂದ ಗ್ರಾಮಕ್ಕೆ	4.6	3.2	3.6
	100	100	100

ಆಧಾರ ; ಆಶಿಷ್‌ಘೋಸ್, **ಇಂಟರ್ನಲ್ ಮೈಗ್ರೇಶನ್ ಇನ್ ಇಂಡಿಯಾ** (ಪಾಪ್ಯುಲೇಶನ್ ರಿವಿವ್ : 1967)

ಪರಾಮರ್ಶನ ಮತ್ತು ಟಿಪ್ಪಣಿಗಳು

1. ಪ್ರಾಣನಾಥ ಕೊಲಿನ್‌ಕ್ಲರ್ಕರ ಉಲ್ಲೇಖ, **ಪಾಪುಲೇಸನ್ ಗ್ರೋಥ್ ಅಂಡ್ ಲ್ಯಾಂಡ್ ಯುಜ್** (ಲಂಡನ್ : 1967) ಪುಟ. 75

2. ಡಬ್ಲ್ಯು ಹೆಚ್. ಮೋರ್‌ಲ್ಯಾಂಡ್ ಕೊಲಿನ್ ಕ್ಲರ್ಕರ ಉಲ್ಲೇಖ ಮೇಲಿನದೆ ಪು. 76.

3. ಕಿಂಗ್ಸಲೆ ಡೇವಿಸ್ **ದಿ ಪಾಪುಲೇಶನ್ ಆಫ್ ಇಂಡಿಯ ಅಂಡ್ ಪಾಕಿಸ್ತಾನ** (ಪ್ರಿನ್ಸೆಟನ್ : 1951) ಪು. 24.

4. ವಾರೆನ್ ಎಸ್. ಥಾಮ್ಸನ್ **ಪಾಪುಲೇಶನ್ ಅಂಡ್ ಪ್ರೊಗೆಸ್ ಇನ್ ದಿ ಫಾರ್ ಈಸ್ಟ್** (ಚಿಕಾಗೊ : 1961) ಪು. 121—126.

5. ಕಿಂಗ್ಸಲೇ ಡೇವಿಸ್ ಮೇಲೆ ತಿಳಿಸಿದ ಪು, 121—126.

6. ಸುಂದರ್‌ಬರ್ಗ ಸಿ.ಬಿ. ಮೆಂಮೋರಿಯ ಅವರಿಂದ ಉಲ್ಲೇಖಿಸಲಾಗಿದೆ, **ಇಂಡಿಯಾಸ್ ಪಾಪುಲೇಶನ್ ಪ್ರಾಬ್ಲಂ**

7. ಭಾರತದಲ್ಲಿ ಶಿಕ್ಷಕರ ಪ್ರಮಾಣ ಪ್ರಮಾಣದಲ್ಲಿ ಮುಂಬರುವ ವರ್ಷಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಢೀರ್ ಹೆಚ್ಚಳವಾಗುವ ಸಂಭವವಿದೆ. ವಿಶೇಷವಾಗಿ ಕೆಳಜಾತಿಗಳಲ್ಲಿ ಸಂಪ್ರದಾಯದ ತಡೆಗಳನ್ನು ಈಗಾಗಲೇ ಹೋಗಲಾಡಿಸಿರುವುದರಿಂದಲೂ ಮತ್ತು ವಿಶೇಷ ಸೌಲಭ್ಯಗಳನ್ನು ಒದಗಿಸಿರುವುದರಿಂದ ಅವುಗಳನ್ನು ಉಪಯೋಗಿಸಿಕೊಂಡು ಅವರು ಅಕ್ಷರಸ್ಥರಾಗಬಹುದೆಂದು ಊಹಿಸಬಹುದು. 1881 ಮತ್ತು 1941ರ ಅವಧಿಯಲ್ಲಿ ಅಕ್ಷರಸ್ಥರ ಸಂಖ್ಯೆಯಲ್ಲಿ ಮೂರುಪಟ್ಟು ಹೆಚ್ಚಳವಾಯಿತು. ಈ ಪ್ರಮಾಣದ ಹೆಚ್ಚಳವು ಉನ್ನತ ಜಾತಿಗಳಿಗಿಂತ ಕೆಳಜಾತಿಗಳಲ್ಲಿ ಕಂಡುಬಂದಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ – 8

ಗ್ರಾಮ ಪಂಚಾಯತಿಗಳು

ಸ್ವತಂತ್ರ ಗಣಗಳಾದ ಭಾರತೀಯ ಗ್ರಾಮೀಣ ಸಮುದಾಯವು ದೀರ್ಘ ಮತ್ತು ಪ್ರಖ್ಯಾತವಾದ ಇತಿಹಾಸವನ್ನು ಹೊಂದಿದೆ. ಸ್ಥಳೀಯ ಸಂಸ್ಥೆಗಳ ಸ್ವಭಾವ ಮತ್ತು ಕಾರ್ಯಗಳ ಬಗ್ಗೆ ಗಮನ ಹರಿಸಿದ ಪಾಶ್ಚಿಮಾತ್ಯ ಮತ್ತು ಭಾರತೀಯ ಚಿಂತಕರ ಮೆಚ್ಚುಗೆಯನ್ನು ಗಳಿಸಿವೆ. ಭಾರತವು ಐಕ್ಯತೆ, ಸ್ವಾವಲಂಬನೆ ಮತ್ತು ಹಿಂದೂ ಸಂಸ್ಕೃತಿಯನ್ನು ಕಾಪಾಡುವ ಸಲುವಾಗಿ ಈ ವಿಶಾಲ ವ್ಯವಸ್ಥೆಯ ಗೌರವಾರ್ಥ ಸಂಸ್ಥೆಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದೆ. ರಾಧಕುಮುದ್ ಮುಖರ್ಜಿಯವರು ಇವು "ಪ್ರಳಯದಲ್ಲಿ ನೋಟಿ ಎಂಬುವವನನ್ನು ಕೊಚ್ಚಿಹೋಗದಂತ ರಕ್ಷಿಸಿದ ನಾವೆಯಂತೆ (Noah's Ark) ಹಿಂದೂ ನಾಗರೀಕತೆಯನ್ನು ಆಗಾಗ ಗೊಂದಲ, ವಿನಾಶಕಾರಿ ರಾಜಕೀಯ ಚಳುವಳಿಗಳು ಮುಂತಾದವುಗಳಿಂದ ರಕ್ಷಿಸಿದೆ" ಎಂದು ಹೇಳಿದ್ದಾರೆ.

ಐತಿಹಾಸಿಕ ಹಿನ್ನೆಲೆ :

ಭಾರತವು ವಿಶ್ವದ ಇತರೆ ರಾಷ್ಟ್ರಗಳಿಗಿಂತಲೂ ಹೆಚ್ಚು ರಾಜಕೀಯ ಮತ್ತು ಧಾರ್ಮಿಕ ಕ್ರಾಂತಿಗಳನ್ನು ಕಂಡಿರುವುದು ಐತಿಹಾಸಿಕ ಸತ್ಯ. ಇಂತಹ ಭೀಕರ ಮತ್ತು ವಿನಾಶಕಾರಿ ಚಳುವಳಿಗಳು ನಡೆದಿದ್ದರೂ ಸಹ ಭಾರತವು ಸುವ್ಯವಸ್ಥಿತ ಗ್ರಾಮೀಣ ಸಮುದಾಯಗಳಿಂದಾಗಿ ತನ್ನ ಸಂಸ್ಕೃತಿ ಮತ್ತು ವೈಶಿಷ್ಟ್ಯ ಕಾಪಾಡಿಕೊಂಡು ಬಂದಿದೆ. ಅನೇಕ ಮಹಾ ನಾಗರೀಕತೆಗಳಾದ ಗ್ರೀಕ್, ಸಿಥಿಯನ್ ಮತ್ತು ಈಜಿಪ್ಷಿಯನ್ ಮುಂತಾದವುಗಳಂತೆಯೇ ಭಾರತವು ಸಹ ಅನೇಕ ನಾಗರೀಕತೆಗಳನ್ನು ಕಂಡಿದೆ. ಚಾರಿತ್ರಿಕ ಕ್ಷಿತಿಜದಲ್ಲಿ ಆ ನಾಗರೀಕತೆಗಳು (ಇತಿಹಾಸದುದ್ದಕ್ಕೂ) ನಿರ್ದಿಷ್ಟ ಸಮಯದಲ್ಲಿ ಕಾಣಿಸಿಕೊಂಡು ಅಳಿಸಿಹೋದವು. ಭಾರತದಲ್ಲಿಯೂ ಸಹ ಕ್ರಾಂತಿಗಳು ನಡೆದಂತೆ ರಾಜವಂಶಗಳು ಮುರಿದುಬಿದ್ದವು, ಆದರೆ ಇವು ಗ್ರಾಮೀಣ ಸಮುದಾಯದ ಶಾಂತ ಮತ್ತು ನೆಮ್ಮದಿಯ ಜೀವನದ ಮೇಲೆ ಪರಿಣಾಮ ಬೀರಲಿಲ್ಲ. ಲಾರ್ಡ್‌ಮೆಟ್ ಕಾಫ್ ಮತ್ತು ಇತರರು ಈ ಅಂಶವನ್ನು ಗುರುತಿಸಿ ಗ್ರಾಮೀಣ ಸಮುದಾಯದ ಜೀವನವು ಶಾಂತಿ ಮತ್ತು ಸಂತೋಷದಿಂದ ಕೂಡಿದ್ದು ಸುವ್ಯವಸ್ಥಿತವಾಗಿದ್ದವು ಎಂದು ಅಭಿಪ್ರಾಯಪಡುತ್ತಾರೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಪ್ರಾಚೀನ ಭಾರತದ ಗ್ರಾಮೀಣ ರಾಜಕೀಯ ರಚನೆಯ ಮುಖ್ಯ ಗುಣಲಕ್ಷಣವೆಂದರೆ, ಅವುಗಳು ಏಕರೀತಿಯಲ್ಲಿ ರಚನೆಯಾಗಿರಲಿಲ್ಲ ಮತ್ತು ಸಂಯೋಜಿತವಾಗಿರಲಿಲ್ಲ. ಸಂಘಟನೆಯು ಸೂತ್ರವು ಯಾವಾಗಲೂ ಒಂದೇಯಾಗಿರಲಿಲ್ಲ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಭಾರತೀಯ ರಾಜಕೀಯ ವಿಕಾಸವು ವೈವಿಧ್ಯತೆಯನ್ನೊಳಗೊಂಡಿತ್ತು ಹಾಗೂ ದೀರ್ಘವಾದ ವಿಶ್ಲೇಷಣೆಯ ಮೂಲಕ ಎರಡು ರೀತಿ ರಾಜಕೀಯ ಸಂಘಟನೆ ಇರುವುದನ್ನು ಕಂಡುಕೊಳ್ಳಬಹುದು.

1) ಪ್ರಾದೇಶಿಕತೆ :-– ಸಂಘದ ತತ್ವವು ನೆರಹೊರೆಯವರು ಮತ್ತು ಭೌತಿಕ ಸಂಪರ್ಕದ ಸಂಯೋಜನೆಯು ಗ್ರಾಮೀಣ ಜನತೆಯಲ್ಲಿ ಸಾಂಘಿಕ ಜೀವನವನ್ನುಂಟು ಮಾಡಿತು,

2) ಮತೀಯತೆ :–ಗುಂಪು ರಚನೆಯು ಭೌತಿಕತ್ವದಿಂದ ನಿರ್ಧರಿಸಲ್ಪಡುವುದಿಲ್ಲ. ವಿಶಾಲಾರ್ಥದಲ್ಲಿ ಹೇಳಬೇಕೆಂದರೆ ಅದು ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳಿಂದಾಗಿ ರೂಪುಗೊಳ್ಳುತ್ತದೆ. ಒಂದು ಸ್ಥಳಕ್ಕೆ ಇದು ಸಂಬಂಧಿಸಿರುವುದಿಲ್ಲ, ಬದಲಾಗಿ ಹಿತಾಸಕ್ತಿಗಳ ಮತ್ತು ಕಾರ್ಯಗಳು ಗುಂಪು ಅಂತಹ ಭಾವನೆಗೆ ಎಡೆಮಾಡಿಕೊಡುತ್ತವೆ.

ಆಡಳಿತದ ಮೂಲಭೂತ ಘಟಕ ಮತ್ತು ಸಾಮಾನ್ಯ ಆಡಳಿತಾತ್ಮಕ ಪದ್ಧತಿಯು ಹಳ್ಳಿಗಳ ಗುಂಪುಗಳ ತಳಹದಿಯ ಮೇಲೆ ಸಂಘಟಿತವಾಗಿದ್ದವು ಎಂಬುದನ್ನು ತೋರಿಸಲು ಸಾಕಷ್ಟು ಪುರಾವೆಗಳಿವೆ, ಪ್ರತಿಯೊಂದು ಹಳ್ಳಿಯೂ ತನ್ನದೇ ಆದಂತಹ ಆಡಳಿತಾತ್ಮಕ ರಚನೆಯನ್ನು ಹೊಂದಿದ್ದು ಸಾಮಾನ್ಯವಾಗಿ ಅದನ್ನು ಪಂಚಾಯುತ್ ಎಂದು ಕರೆಯುತ್ತಿದ್ದರು, ಸಾಮಾನ್ಯವಾಗಿ ಅದು ಜನರ ಸಂಘಟನೆ. ಆದರೆ ಇದರ ಸ್ವಭಾವ ಮತ್ತು ರಚನೆ ಸ್ಪಷ್ಟವಾಗಿ ತಿಳಿಯುವುದಿಲ್ಲ. ಅನೇಕ ವಿದ್ವಾಂಸರು ಪಂಚಾಯಿತಿ ಸ್ವಭಾವದಲ್ಲಿ ಒಂದು ಸಂಸ್ಥೆಯು ಅದು ಆಧಿಕಾರದೊಂದಿಗೆ ಗ್ರಾಮ ಪ್ರದೇಶದಲ್ಲೆಲ್ಲ ಹರಡಿತ್ತು ಎಂಬುದನ್ನು ಪ್ರಬಲವಾಗಿ ನಿರಾಕರಿಸಿದ್ದಾರೆ. ಅವರು ಜಾತಿ ಮತ್ತು ಉಪಜಾತಿ ಆಧಾರದ ಮೇಲಿನ ಭಾರತದ ಸಮಾಜದ ವಿಚಿತ್ರ ವಿಕಸನವು ಇತರೆ ಯಾವುದೇ ವಿಶಾಲವಾದ ಜಾತಿರಾಜಕೀಯ ಸಂಘಟನೆಯನ್ನು ಹಳ್ಳಿಗಳಲ್ಲಿ ಮಾಡಲು ಅವಕಾಶವಿರಲಿಲ್ಲ ಎಂದಿದ್ದಾರೆ. ಮತ್ತೊಂದು ಕಡೆ ಇತರರು ಅಷ್ಟೆ ಪ್ರಬಲವಾಗಿ ಗ್ರಾಮಪಂಚಾಯತಿಯು ಒಂದು ಪ್ರಾಚೀನ ಸಂಸ್ಥೆಯಾಗಿದ್ದು ಬಹಳ ಕಾಲದಿಂದಲೂ ಭಾರತೀಯರ ಜೀವನದೊಂದಿಗೆ ಹಾಸುಹೊಕ್ಕಾಗಿ ಬಂದಿದೆ ಎಂದು ವಾದಿಸುತ್ತಾರೆ. ಈ ವಿವಾದದ ದೃಷ್ಟಿಯಿಂದಾಗಿ ನಾವು ಈ ಸಂಸ್ಥೆಯ ಉಗಮ ಮತ್ತು ಬೆಳವಣಿಗೆಯನ್ನು ವಿವಿಧ ಐತಿಹಾಸಿಕ ಅವಧಿಗಳ ಮೂಲಕ ಸ್ಪಷ್ಟಪಡಿಸಲು ಪ್ರಯತ್ನ ಪಡಬೇಕಾದ್ದದು ಅವಶ್ಯಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲು ಪ್ರಾಚೀನಕಾಲದ ರಾಜಕೀಯ ರಚನೆ ಮತ್ತು ಸಂಘಟನೆಯ ಸ್ವಭಾವ ವನ್ನು ಸಮಾಜಸವಾಗಿ ಅವಲೋಕಿಸಬೇಕು. ರಾಧಕುಮುದ್ ಮುಖರ್ಜಿಯವರ "ಪ್ರಾಚೀನ ಭಾರತದಲ್ಲಿನ ಸ್ಥಳೀಯ ಸರ್ಕಾರ" ಈ ವಿಷಯದ ಬಗ್ಗೆ ಬರೆಯುತ್ತಾ, ಭಾರತದ ರಾಜ್ಯಾಡಳಿತ ವ್ಯವಸ್ಥೆಯ ಪ್ರಮುಖವಾದ ಲಕ್ಷಣವೆಂದರೆ, ರಾಜ್ಯ ಮತ್ತು ಸಮಾಜಗಳು ಪರಸ್ಪರ ಒಟ್ಟಿಗೆ ಇರುತ್ತಿದ್ದವು. ಎರಡು ಸ್ವತಂತ್ರವಾಗಿ ಒಂದ ಕ್ಕೊಂದು ಭಿನ್ನವಾಗಿ ಪ್ರತ್ಯೇಕ ಘಟಕಗಳಾಗಿರುತ್ತಿದ್ದವು. ಎರಡೂ ಸಹ ಭಿನ್ನತೆ ಮತ್ತು ಸುವ್ಯವಸ್ಥಿತ ರಚನೆಯನ್ನು ಹೊಂದಿ ಸ್ವತಂತ್ರವಾದ ಅಂಗಗಳಾಗಿದ್ದವು. ಮತ್ತು ತಮ್ಮದೇ ಆದಂತಹ ಬೆಳವಣಿಗೆ ಮತ್ತು ವಿಕಾಸದ ನಿಯಮಗಳನ್ನು ಹೊಂದಿದ್ದವು. ರಾಜ್ಯದ ಮಿತಿಯು ಅಂದರೆ ಕೇಂದ್ರ ಸರ್ಕಾರವು ನಿಗಧಿತವಾಗಿದ್ದು ಸಂಸ್ಪಷ್ಟವಾಗಿದ್ದಿತು. ಗ್ರಾಮೀಣ ಸಂಘಟನೆಯ ಚಟುವಟಿಕೆಗಳ ಕ್ಷೇತ್ರದ ಮೇಲೆ ರಾಜ್ಯವು ಆಕ್ರಮಣವಂತೂ ಮಾಡುತ್ತಿರಲಿಲ್ಲ. ಗ್ರಾಮೀಣ ಸರ್ಕಾರದ ದಿನನಿತ್ಯದ ವ್ಯವಹಾರಗಳಲ್ಲಿ ಕೇಂದ್ರವು ಮಧ್ಯಪ್ರವೇಶ ಮಾಡುವ ಯಾವುದೇ ಪ್ರಯತ್ನವನ್ನು ಗ್ರಾಮೀಣ ಜನತೆಯು ಹೆಚ್ಚಾಗಿ ಸಹಿಸುತ್ತಿರಲಿಲ್ಲ. ಹೀಗೆ ಮಧ್ಯ ಪ್ರವೇಶಿಸದಿರುವ ನೀತಿಯು ಪರಸ್ಪರ ಗೌರವಿಸಲ್ಪಟ್ಟು ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು ಇದು ಭಾರತೀಯ ಆಡಳಿತಾತ್ಮಕ ವ್ಯವಸ್ಥೆಯ ವಿಶಿಷ್ಟ ಲಕ್ಷಣವಾಗಿತ್ತು.

ಪಾಶ್ಚಾತ್ಯರಿಗೆ ಇದು ಗೊತ್ತಿರಲಿಲ್ಲ. ಅಲ್ಲಿನ ಪ್ರಧಾನ ಪ್ರವೃತ್ತಿಯೆಂದರೆ, ಅಂತಿಮ ಗುರಿಯಾದ ರಾಷ್ಟ್ರೀಕರಣವನ್ನು ಗಳಿಸುವವರೆಗೂ, ಪ್ರಗತಿಪರವಾಗಿ ಕಾರ್ಯನಿರ್ವಹಿಸಿ ರಾಜ್ಯವು ಸಾಮಾಜಿಕ ಜೀವನ ರಾಷ್ಟ್ರೀಯ ಚಟುವಟಿಕೆಯನ್ನು ನಿಯಂತ್ರಿಸುವುದಾಗಿತ್ತು. ಪರಿಣಾಮವಾಗಿ ರಾಜ್ಯವು ಸಮಾಜದ ನಿಯೋಗವಾಗಲು ಪ್ರಾರಂಭವಾಯಿತು. ಕೊನೆಗೆ ಅಧಿಕಾರವನ್ನು ಹೊಂದಿ ತನ್ನ ಸ್ವಾತಂತ್ರ್ಯ ಕಳೆದುಕೊಂಡು ಸಮಾಜದೊಡನೆ ಸೇರಿಕೊಂಡಿತು. ಪಾಶ್ಚಾತ್ಯರಲ್ಲಿ ಪ್ರಗತಿಪರ ರಾಷ್ಟ್ರೀಕರಣವು ಇಂತಹ ಹಂತವನ್ನು ತಲುಪಿ ಸಮಾಜದ ಮೇಲೆ ರಾಜ್ಯದ ಅತಿಕ್ರಮಣವು ಅಧಿಕವಾಯಿತು. ಪ್ರಭು ಕೇವಲ ರಾಜ್ಯದ ನಾಯಕನಾಗಲಿಲ್ಲ ಜೊತೆಗೆ ಸಮಾಜದ ನಾಯಕನೂ ಕೂಡ ಆದನು. ಆದರೆ ಭಾರತದಲ್ಲಿ ಸುವ್ಯವಸ್ಥಿತ, ಸುಸಂಘಟಿತ ಸ್ಥಳೀಯ ಸ್ವಯಂ ಸರ್ಕಾರಗಳಲ್ಲಿ ಈ ರೀತಿಯಾಗಲಿಲ್ಲ. ರಾಜ್ಯದ ಅಧಿಕಾರವು ಯಾವಾಗಲೂ ಗೊತ್ತುಪಡಿಸಿದ ಪ್ರದೇಶದ ಒಳಗಡೆ ಮಾತ್ರ ಚಲಾಯಿಸಲಾಗುತ್ತಿತ್ತು. ರಾಜ್ಯ ಅಥವಾ ರಾಜ, ಗ್ರಾಮೀಣ ಸಮುದಾಯದ ಪರಮಾಧಿಕಾರದ ಮೇಲೆ ಅತಿಕ್ರಮಣ ಮಾಡುತ್ತಿರಲಿಲ್ಲ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸ್ಥಳೀಯ ಸರ್ಕಾರಗಳು ಇರಲೇ ಇಲ್ಲ ಎಂದು ಹೇಳುವ ಹಾಗಿಲ್ಲ. ಅಲ್ಲಿಯೂ ಸಹ ಮುನಿಸಿಪಾಲಿಟಿಗಳು, ಚರ್ಚುಗಳು (Parishes)

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಮುಂತಾದ ಸ್ಥಳೀಯ ಸಂಘಟನೆಗಳಿದ್ದವು. ಆದರೆ ಈ ಸ್ಥಳೀಯ ಸರ್ಕಾರಗಳು ಸ್ವಾಭಾವಿಕ ಪರಿಸ್ಥಿತಿಯಲ್ಲೂ ವಿಕಾಸ ಹೊಂದಲಿಲ್ಲ. ಅವೆಲ್ಲವು ಕೇಂದ್ರ ಸರ್ಕಾರದಿಂದ ಸೃಷ್ಟಿಸಲ್ಪಟ್ಟಿದ್ದವು. ಆದ್ದರಿಂದ ಅವುಗಳ ಉಗಮಕ್ಕೆ ಸಂಬಂಧಿಸಿದಂತೆ ಅವು ಕೇಂದ್ರಸರ್ಕಾರಕ್ಕೆ ಋಣಿಯಾಗಿದ್ದವೆಯೇ ಹೊರತು, ಸ್ವಾಭಾವಿಕ ಸಾಮಾಜಿಕ ಪರಿಸ್ಥಿತಿಗಲ್ಲ. ಅವು ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆ, ಚಕ್ರವರ್ತಿಯಿಂದ ಅಧಿಕಾರ ವರ್ಗಾವಣೆಯ ಪರಿಣಾಮದಿಂದಾಗಿ ಉಂಟಾಗಿದ್ದವು. ಅವು ಕೇವಲ ಸರ್ಕಾರಿ ಯಂತ್ರದ ಬಹುದೂರ ವ್ಯಾಪಿಸಿದ ಚಕ್ರಗಳಾಗಿದ್ದವು. ಅವು ಸ್ಥಳೀಯ ವ್ಯವಹಾರಗಳನ್ನು ಸಂಪೂರ್ಣ ನಿಯಂತ್ರದಲ್ಲಿ ನೋಡಿಕೊಳ್ಳುವ ಜವಾಬ್ದಾರಿಯನ್ನಾಗಲಿ ಅಥವಾ ಸ್ಥಳೀಯ ಜನತೆಯ ನಿಜವಾದ ಪ್ರತಿನಿಧಿಗಳಾಗಿ ತಮ್ಮ ಕೆಲಸವನ್ನು ನಿರ್ವಹಿಸುತ್ತಿರಲಿಲ್ಲ.

ಭಾರತದಲ್ಲಿ ಪ್ರಾರಂಭದ ಯುಗದಲ್ಲಿ ಅಂದರೆ ಮೌರ್ಯ ಸಾಮ್ರಾಜ್ಯದ ಪ್ರಾರಂಭದ ಕಾಲದಲ್ಲಿ ಸ್ವಾತಂತ್ರ್ಯ ಪರಮಾಧಿಕಾರವನ್ನು ಹೊಂದಿದ್ದಂತಹ ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ಮೌರ್ಯರು ವಿಸ್ತಾರವಾದ ಸಾಮ್ರಾಜ್ಯವನ್ನು ಹೊಂದಿದ್ದರೂ ಸಹ ಯಾವುದೇ ಕೇಂದ್ರೀಕೃತ ಸರ್ಕಾರವನ್ನು ಬೆಳವಣಿಗೆ ಮಾಡಲಿಲ್ಲ. ಭಾರತದ ಶಕ್ತಿಶಾಲಿ ಚಕ್ರವರ್ತಿಗಳು ಕೂಡ ಯಾವುದೇ ಪರಿಣಾಮಕಾರಿ ಕೇಂದ್ರೀಕೃತ ಸರ್ಕಾರಗಳಿಗೆ ಗಮನಕೊಡಲಿಲ್ಲ.

ಇವು ಕೇಂದ್ರೀಕೃತ ಆಡಳಿತಾತ್ಮಕ ಕಾರ್ಯಚರಣೆಯಿಂದಾಗಿ ಬೆಳವಣಿಗೆ ಹೊಂದಿಲ್ಲ. ಆದರೆ ಸ್ಥಳೀಯ ಸರ್ಕಾರಗಳ ಅಸ್ತಿತ್ವದಿಂದಾಗಿ ಬೆಳವಣಿಗೆ ಹೊಂದಿದ್ದವು. ಅವರು ಸಂಯುಕ್ತ ಸರ್ಕಾರದ ವಿಶಾಲವಾದ ಪದ್ಧತಿಯನ್ನು ಹೊಂದಿದ್ದರು ಅಥವಾ ಕೇಂದ್ರ ಸರ್ಕಾರದೊಂದಿಗೆ ಸ್ವಾಭಾವಿಕ ಸ್ಥಳೀಯ ಸಂಸ್ಥೆಗಳು ಸೇರಿಕೊಂಡಿದ್ದವು. ಅವರು ಸ್ಥಳೀಯ ಸಂಸ್ಥೆಗಳ ಸ್ವಯಾಮಾದಿಪತ್ಯವನ್ನು ಗುರುತಿಸಿದ್ದರು ಮತ್ತು ತಮ್ಮ ಸ್ವಂತ ಪದ್ಧತಿಯನ್ನು ಮೊದಲೇ ಅಸ್ತಿತ್ವದಲ್ಲಿದ್ದಂತಹ ಸ್ಥಳೀಯ ಸರ್ಕಾರಗಳೊಂದಿಗೆ ಸಂಯೋಜಿಸಿದರು.

ಡಾ. ರಾಧಕುಮುದ್ ಮುಖರ್ಜಿಯವರು ಮೂಲ ಗ್ರಂಥಗಳಿಂದ ಕೆಲವು ಪದಗಳನ್ನು ಸ್ಥಳೀಯ ಸಮಿತಿಗಳನ್ನು ಗೊತ್ತುಪಡಿಸಲು ಪಟ್ಟಿಮಾಡಿದ್ದಾರೆ ಅವುಗಳೆಂದರೆ : ಕುಲ. ಗಣ, ಜಾತಿ, ಪ್ರಗತಿ, ವೃತ, ಶ್ರೇಣಿ, ಸಂಘ. ಸಮುದಾಯ, ಸಾಮೂಹ ಪರಿಷದ್ ಚರಣ. ಈ ಸ್ಥಳೀಯ ಸಮಿತಿಗಳು ವಾಸ್ತವವಾಗಿ ಗ್ರಾಮಗಳಲ್ಲಿ ಅಸ್ತಿತ್ವದಲ್ಲಿದ್ದು ಕಾರ್ಯನಿರ್ವಹಿಸುತ್ತಿದ್ದವೆ ಎಂಬುದನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ. ಭಾರತದ ಆಡಳಿತ ವ್ಯವಸ್ಥೆಯ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಇಂತಹ ಸ್ಥಳೀಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಿತಿಗಳು ಅಸ್ತಿತ್ವದಲ್ಲಿರಲಿಲ್ಲ. ಅವುಗಳು ಕೇವಲ ಬ್ರಾಹ್ಮಣ ಲೇಖಕರ ಕಲ್ಪನೆ ಎಂದು ಅಭಿಪ್ರಾಯಪಡುತ್ತಾರೆ.

ವಾಲ್ಮೀಕಿ ರಾಮಾಯಣದಲ್ಲಿ ಗೋಷ್ ಮತ್ತು ಗ್ರಾಮ ಎಂಬ ಎರಡು ರೀತಿಯ ಗ್ರಾಮಗಳ ಬಗ್ಗೆ ತಿಳಿಸಲಾಗಿದೆ. ಗೋಷ್‌ವು ಗ್ರಾಮಕ್ಕಿಂತಲೂ ಚಿಕ್ಕದು. ಸ್ಥಳೀಯ ಸಮಿತಿಗಳ ಅಧಿಕಾರಿಗಳನ್ನು ಗೋಷ್-ಮಹತ್ತರ್ ಮತ್ತು ಗ್ರಾಮ ಮಹತ್ತರ್ ಎಂದು. ಅನುಕ್ರಮವಾಗಿ ಕರೆಯುತ್ತಿದ್ದರು. ಹೆಚ್ಚು ಗೌರವಿಸಲ್ಪಡುತ್ತಿದ್ದ ಮತ್ತೊಬ್ಬ ಗ್ರಾಮೀಣ ಅಧಿಕಾರಿಯೆಂದರೆ "ಗ್ರಾಮಿಣಿ" ಮಹಾಭಾರತದಲ್ಲಿಯೂ ಸಹ ಗೋಷ್ ಮತ್ತು ಗ್ರಾಮದ ಬಗ್ಗೆ ಹೇಳಲಾಗಿದೆ. ಗೋಷ್ ನಿವಾಸಿಗಳನ್ನು 'ಗೋಪರು' ಎಂದು ಕರೆಯುತ್ತಿದ್ದರು. ಅವರ ಮುಖ್ಯ ಕಸಬು ಪಶುಪಾಲನೆ ಮತ್ತು ಹಾಲು ಮಾರುವುದಾಗಿದ್ದಿತು.

ಮನುವಿನ ಬರವಣಿಗೆಯು ಸಹ ಇದೇ ರೀತಿಯ ಹಳ್ಳಿಗಳ ಬಗ್ಗೆ ವಿವರಿಸುತ್ತದೆ' ಹೆಚ್ಚು ಗೌರವಿಸಲ್ಪಡುತ್ತಿದ್ದಂತಹ ಗ್ರಾಮೀಣ ಅಧಿಕಾರಿಯನ್ನು ಇವನು 'ಗ್ರಾಮಿಕ ಎಂದು ಕರೆದನು. ಗ್ರಾಮೀಣ ಅಧಿಕಾರದ ಶ್ರೇಣೀಕರಣದಲ್ಲಿ ಗ್ರಾಮಿಕ್ ನಂತರದ ಉನ್ನತ ಅಧಿಕಾರಿಯೆಂದರೆ 10 ಹಳ್ಳಿಗಳಿಗೆ ಯಜಮಾನನಾದ ದಿಶಂತ್. ಅವನಿಗಿಂತಲೂ ಉನ್ನತ ಅಧಿಕಾರಿಯೆಂದರೆ ನೂರು ಹಳ್ಳಿಗಳ ಆಡಳಿತವನ್ನು ನಿರ್ವಹಿಸುತ್ತಿದ್ದಂತಹ ಶತಿ ಅಥವಾ ಶತ್‌ಗ್ರಾಮಾಧಿಪತಿ. ಅವನಿಗಿಂತಲೂ ಮೇಲೆ ಸಾವಿರ ಹಳ್ಳಿಗಳ ಆಡಳಿತವನ್ನು ನಿರ್ವಹಿಸುತ್ತಿದ್ದ ಸಹಸ್ರ ಗ್ರಾಮಾಧಿಪತಿಯು ಉನ್ನತ ಅಧಿಕಾರಿಯಾಗಿದ್ದನು. ಈ ಅಧಿಕಾರಿಗಳನ್ನು ಅಧಿಕಾರದ ಪದವಿಗೆ ನೇಮಿಸುತ್ತಿದ್ದುದರ ಬಗ್ಗೆ ಅಸ್ಪಷ್ಟವಾಗಿ ತಿಳಿದುಬಂದಿದೆ. ಈ ವಿಷಯದ ಬಗ್ಗೆ ತಜ್ಞರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು ಗ್ರಾಮೀಣ ಅಧಿಕಾರಿಗಳು ರಾಜನಿಂದ ನೇಮಿಸಲ್ಪಡುತ್ತಿದ್ದರು ಎಂದು ಹೇಳಿದರೆ ಮತ್ತೆ ಕೆಲವರು ಈ ಅಭಿಪ್ರಾಯವನ್ನು ನಿರಾಕರಿಸಿ, ಗ್ರಾಮೀಣ ಸಮಿತಿಯ ಅಧಿಕಾರಿಗಳು ಗ್ರಾಮದ ಜನತೆಯಿಂದ ಆಯ್ಕೆಗೊಳ್ಳುತ್ತಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನೂ ಕೆಲವರು ಅಧಿಕಾರವು ವಂಶಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಬರುತ್ತಿತ್ತು ಎಂದು ಅಭಿಪ್ರಾಯಪಡುತ್ತಾರೆ. ಮುಂದೆ ನಾವು ಇದನ್ನು ದೀರ್ಘವಾಗಿ ಚರ್ಚಿಸೋಣ.

ಗ್ರಾಮೀಣ ಅಧಿಕಾರಿಗಳು ರಾಜನಿಂದ ನೇಮಿಸಲ್ಪಡುತ್ತಿದ್ದರೆಂದರೆ ಆ ಅಧಿಕಾರಿಗಳು ತುಂಬಾ ಮೇಲಿದ್ದರು ಎಂಬರ್ಥವಲ್ಲ. ಈ ಬಗ್ಗೆ ಅಧ್ಯಯನ ಮಾಡಿದ ಡಾ. ಆಲ್ಟೇಕರ್‌ರವರು ಈ ಅಧಿಕಾರಿಗಳು ಗ್ರಾಮದ ಹಿರಿಯರ ಸಲಹೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇರೆಗೆ ಕಾರ್ಯ ನಿರ್ವಹಿಸಬೇಕಾಗಿದ್ದಿತು, ಈ ಗ್ರಾಮ ಹಿರಿಯರು ಗ್ರಾಮದ ಪ್ರಜಾ ಪ್ರತಿನಿಧಿಸಭೆಯಿಂದ ಚುನಾಯಿಸಲ್ಪಡುತ್ತಿದ್ದರು ಎಂದು ಅಭಿಪ್ರಾಯಪಡುತ್ತಾರೆ.

ಕ್ರಿಸ್ತಪೂರ್ವ 6ನೇ ಶತಮಾನದಲ್ಲಿ ಮಗಧ ಸಾಮ್ರಾಜ್ಯದ ಉದಯದೊಂದಿಗೆ ಭಾರತದ ದಾಖಲೆ ಹೊಂದಿದ ಇತಿಹಾಸವು ಪ್ರಾರಂಭವಾಗಿದೆ ಎಂದು ಹೇಳಬಹುದು. 7ನೇ ಶತಮಾನದ ಕೊನೆಯ ಭಾಗದಲ್ಲಿದ್ದ ಸಮಾಜದ ಚಿತ್ರಣದಿಂದ ಒಂದಾದರೊಂದರಂತೆ ಸಾಮ್ರಾಜ್ಯಗಳು ಬೆಳವಣಿಗೆ ಹೊಂದುತ್ತಿದ್ದು ಬುಡಕಟ್ಟು ಸಂಘಟನೆಗಳು ತಮ್ಮ ಸ್ವಾಯತ್ತತೆಯನ್ನು ಉಳಿಸಿಕೊಂಡವು ಎಂಬುದು ಗೊತ್ತಾಗುತ್ತದೆ. ಆ ಕಾಲದ ಕೆಲವು ಮುಖ್ಯ ಸಾಮ್ರಾಜ್ಯಗಳೆಂದರೆ ಮಗಧ, ಕೌಸಂಬಿ, ಕೋಸಲಿ, ಅವಂತಿ ಮೊದಲಾದವುಗಳು ಹಾಗೂ ಕೆಲವು ಮುಖ್ಯ ಬುಡಕಟ್ಟು ಸಂಘಟನೆಗಳೆಂದರೆ ಲಿಚ್ಛವೀ ಮಲ್ಲಾ ಮತ್ತು ಸಕ್ಯಾಸ್. ಈ ಅವಧಿಯ ಗ್ರಾಮೀಣ ಸರ್ಕಾರಗಳ ಸ್ವರೂಪದ ಬಗ್ಗೆ ಹೆಚ್ಚು ಗೊತ್ತಿರದಿದ್ದರೂ, ಗ್ರಾಮೀಣ ಸಮುದಾಯಗಳು ಸಾಂಪ್ರದಾಯಿಕ ಸ್ವಯಾಮಾಧಿಕಾರ ಮತ್ತು ಪರಮಾಧಿಕಾರಗಳನ್ನು ಹೊಂದಿದ್ದವು ಮತ್ತು ತಮ್ಮ ದಿನನಿತ್ಯದ ಆಂತರಿಕ ವ್ಯವಹಾರಗಳಲ್ಲಿ ಹೆಚ್ಚು ಸ್ವಾಯಮಾಧಿಕಾರವನ್ನು ಹೊಂದಿ ಅನುಭವಿಸುತ್ತಿದ್ದವು ಎಂದು ನಂಬಲಾಗಿದೆ.

ಭಾರತದ ಇತಿಹಾಸದ ಎರಡನೆ ಹಂತವೆಂದರೆ ಕ್ರಿ.ಪೂ. 6ನೇ ಶತಮಾನದಲ್ಲಿ ಪ್ರಾರಂಭವಾದ ಬೌದ್ಧರ ಕಾಲ. ಚಂದ್ರಗುಪ್ತನ ಆಳ್ವಿಕೆಯ ಅವಧಿಯಲ್ಲಿ ಕ್ರಿ.ಪೂ. 324-300 ಮತ್ತು ಅಶೋಕನ ಆಳ್ವಿಕೆಯ ಕಾಲದಲ್ಲಿ ಅಂದರೆ ಕ್ರಿ.ಪೂ 273–236ರ ಅವಧಿಯಲ್ಲಿ ಅಧಿಕಾರದ ತುತ್ತತುದಿಯನ್ನು ಮುಟ್ಟಿತು. ಈ ಅವಧಿಯಲ್ಲಿ ಹಿಂದಿನ ವರ್ಷಗಳಂತೆಯೆ ಗ್ರಾಮೀಣ ಸಮುದಾಯಗಳಲ್ಲಿ ಸಮಾಜವಾದ ಮತ್ತು ಪ್ರಜಾಸಮಸ್ತ ಸ್ವಾಮ್ಯವಾದಗಳು ಪ್ರಚಲಿತದಲ್ಲಿದ್ದವು. ಭೂಮಿಯ ಖಾಸಗಿ ಮಾಲಿಕತ್ವದ ಬಗ್ಗೆ ತಿಳುವಳಿಕೆ ಬೆಳೆದಿದ್ದಾಗ್ಯೂ ಖಾಸಗಿಮನೆ, ಭೂಮಿಯ ಸಾಗುವಳಿ, ಗೊತ್ತುಪಡಿಸದ ಭೂಮಿಯ ಮೇಲಿನ ಪ್ರತಿಫಲವನ್ನು ಅನುಭವಿಸುವುದು ಇವುಗಳು ನಿರ್ದಿಷ್ಟ ಭೂಮಿಯ ಪ್ರತ್ಯೇಕ ಮಾಲಿಕತ್ವದ ರೀತಿಯಲ್ಲಿ ಅಭಿವೃದ್ಧಿ ಹೊಂದಿರಲಿಲ್ಲ, ಶಕ್ತಿಶಾಲಿಯಾಗಿದ್ದವರೂ ಕೂಡ ತಮ್ಮ ಭೂಮಿಯನ್ನು ಮಾರುವುದಾಗಲಿ, ಭೋಗ್ಯಮಾಡುವುದಾಗಲಿ ಅಥವಾ ಸ್ವಯಂಆರ್ಜಿತ ಆಸ್ತಿಯನ್ನು ಒಬ್ಬನಿಗೆ ಕೊಡುವುದಾಗಲಿ ನಿಷಿದ್ಧವಾಗಿದ್ದಿತು. ಗ್ರಾಮದ ಸಲಹಾ ಮಂಡಲಿಯ ಒಪ್ಪಿಗೆಯನ್ನು ಪಡೆದಾಗ ಮಾತ್ರ ಹಾಗೆ ಮಾಡಬಹುದಾಗಿದ್ದಿತು. ಗ್ರಾಮದ ಪಾಳುಭೂಮಿ ಮತ್ತು ಹುಲ್ಲುಗಾವಲುಗಳು ಗ್ರಾಮದ ಸಲಹಾಮಂಡಲಿಯ ನೇರ ನಿಯಂತ್ರಣದಲ್ಲಿರುತ್ತಿದ್ದವು. ಗ್ರಾಮದ ಭೂಮಿಯ ಮೇಲಿನ ಈ ಸಾಮಾನ್ಯ ಆಡಳಿತವು ಬೌದ್ಧರ ಕಾಲದಲ್ಲಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಗ್ರಾಮೀಣ ಜನತೆಯು ಸಲಹಾ ಮಂಡಳಿಯು ಅಪಾರ ಸ್ಥಾನಮಾನವನ್ನು ಹೊಂದಿತು ಎಂಬುದನ್ನು ತೋರಿಸುತ್ತದೆ. ಪ್ರಾರಂಭದ ಕಾಲದಂತೆ ಇಲ್ಲಿಯೂ ಸಹ ಗ್ರಾಮದ ನಾಯಕನು ಎಲ್ಲರಿಗಿಂತಲೂ ಉತ್ತಮ ಸ್ಥಾನಮಾನವನ್ನು ಅನುಭವಿಸುತ್ತಿದ್ದನು. ಆದರ ಆತನ ನೇಮಕದ ಬಗ್ಗೆ ವಿವರ ತಿಳಿದುಬಂದಿಲ್ಲ. ರೈಸ್ ಡೇವಿಸ್‌ರವರು ಗ್ರಾಮದ ನಾಯಕನು ಸಾಮಾನ್ಯವಾಗಿ ಗ್ರಾಮದ ಜನರಿಂದಲೇ ಅವರ ರೂಢಿ ಮತ್ತು ಸಂಪ್ರದಾಯಗಳಿಗನುಸಾರವಾಗಿ ನೇಮಕಗೊಳ್ಳುತ್ತಿದ್ದನು ಎಂದು ಬರೆಯುತ್ತಾರೆ.

ನಂತರದ ಅವಧಿಯಲ್ಲಿ ಗ್ರಾಮೀಣ ಸಮುದಾಯಗಳು ಹೊಂದಿದ್ದ ಸ್ವಯಂ ಅಧಿಕಾರದ ಬಗ್ಗೆ ಹಿಂದೂ ಆಡಳಿತಗಾರರು ಬಹಳ ಕಾಲದಿಂದಲೂ ಆಡಳಿತದ ಮಾರ್ಗದರ್ಶನದ ಪುಸ್ತಕವನ್ನಾಗಿ ಉಪಯೋಗಿಸಿದಂತಹ ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಕಾಣುತ್ತದೆ. ಈ ಅರ್ಥಶಾಸ್ತ್ರದ ಪ್ರಕಾರ ಪ್ರತಿಯೊಂದು ಹಳ್ಳಿಯೂ 100ರಿಂದ 150 ಕುಟುಂಬಗಳನ್ನು ಹೊಂದಿರುತ್ತಿದ್ದವು. ಪ್ರತಿಯೊಂದು ಗ್ರಾಮವು ತನ್ನದೇ ಆದ ಸರಹದ್ದನ್ನು ಹೊಂದಿ ಸುವ್ಯವಸ್ಥಿತವಾಗಿದ್ದು. ನದಿಗಳು, ಬೆಟ್ಟಗಳು, ಕೆರೆಕಟ್ಟೆಗಳು, ಕಾಲುವೆಗಳು, ಮರಗಳು ಮತ್ತು ಅರಣ್ಯಗಳಿಂದ ಎಲ್ಲೆಯನ್ನು ಗೊತ್ತುಪಡಿಸಲ್ಪಟ್ಟಿದ್ದವು. ಪ್ರತಿಯೊಂದು ಗ್ರಾಮವು ಅಧ್ಯಕ್ಷ, ಸಂಕಾಯಕ (ಲೆಕ್ಕಿಗ), ಸ್ಥಾನಿಕ (ಸ್ಥಳೀಯ ಅಧಿಕಾರಿ), ಅನಿಕಾಸ್ತ (ಪಶು ವೈದ್ಯರು) ಓಂಗಕಾರಿಕ ಚಿಕಿತ್ಸಕ (ನೈರ್ಮಲ್ಯ ಅಧಿಕಾರಿ) ಮುಂತಾದವರುಗಳನ್ನು ಒಳಗೊಂಡಂತಹ ಆಡಳಿತಾತ್ಮಕ ಸಮಿತಿಯನ್ನು ಹೊಂದಿದ್ದವು. ಇವರ ಜೊತೆಗೆ ಗೋಪ ಮತ್ತೊಬ್ಬ ಆಡಳಿತಾತ್ಮಕ ವ್ಯವಸ್ಥೆಯ ಮುಖ್ಯಅಧಿಕಾರಿಯು ಇತರೆ ಕಾರ್ಯಗಳ ಜೊತೆಗೆ ಕಂದಾಯದ ವಸೂಲಾತಿಯು ಇವನ ಮುಖ್ಯ ಕಾರ್ಯವಾಗಿತ್ತು.

ಚಂದ್ರಗುಪ್ತನ ಕಾಲದಲ್ಲಿ ಗ್ರಾಮಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿತ್ತು. ದೊಡ್ಡ ಗ್ರಾಮವನ್ನು ಜೇಷ್ಠ ಎಂತಲೂ ಸಾಧಾರಣ ಗ್ರಾಮವನ್ನು ಮಧ್ಯಮವೆಂತಲೂ ಮತ್ತು ಚಿಕ್ಕಗ್ರಾಮವನ್ನು ಕನಿಷ್ಠ ಎಂತಲೂ ಕರಯುತ್ತಿದ್ದರು.

ಶುಕ್ರನೀತಿಸಾರದಲ್ಲಿಯೂ ಜೇಷ್ಠ, ಮಧ್ಯಮ ಮತ್ತು ಕನಿಷ್ಠ ಎಂಬ ವರ್ಗೀಕರಣವನ್ನು ಕಾಣಬಹುದು. ಬೇರೆ ರೀತಿಯ ವರ್ಗೀಕರಣವು ಸಹ ಇದ್ದಿತು. ಭೂಮಿಯ ಒಂದು ಕೋಶವನ್ನು ಹೊಂದಿರುವಂತಹ ಗ್ರಾಮ ಮತ್ತು ಗ್ರಾಮದ ಅರ್ಧ ಭಾಗದಷ್ಟಿರುವ ಹಳ್ಳಿ ಹಾಗೂ ಗ್ರಾಮದ ಕಾಲು ಭಾಗದಷ್ಟಿರುವ ಕುಂಭ.ಇತ್ಯಾದಿಶುಕ್ರನೀತಿಸಾರವು 6 ರೀತಿಯ ಅಧಿಕಾರಗಳ ಬಗ್ಗೆ ತಿಳಿಸುತ್ತದೆ. (1) ಸಹಸ್ರಾಧಿಪತಿ (ಶಾಂತಿ ಮತ್ತು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸುವ್ಯವಸ್ಥೆಯನ್ನು ನೋಡಿಕೊಳ್ಳುವಂತಹವನು) (2) ಗ್ರಾಮನೇತ (ಬಾಕಿಯನ್ನು ವಸೂಲಿಮಾಡುವಂತಹವನು) (3) ಭಾಗರ (ಕಂದಾಯ ವಸೂಲಿ ಮಾಡುವವನು) (4) ಲೇಖಕ (ಲೆಕ್ಕಿಗ) (5) ಶುಲ್ಕಗ್ರಾಹಕ (ವರ್ತಕರಿಂದ ತೆರಿಗೆಯನ್ನು ವಸೂಲಿ ಮಾಡುವವನು) (6) ಪ್ರತಿಹಾರಿ (ಸುದ್ದಿಯನ್ನು ಕೊಂಡೊಯ್ಯುವವನು.)

ಭಾರತದ ಇತಿಹಾಸದ ಮುಂದಿನ ಮುಖ್ಯ ಅವಧಿಯೆಂದರೆ ಕ್ರಿ.ಶ. 6ನೇ ಶತಮಾನದಿಂದ 10ನೇ ಶತಮಾನದವರೆಗೆ ಆಳ್ವಿಕೆ ನಡೆಸಿದಂತಹ ಪ್ರತಿಹಾರ ರಾಜರ ಪ್ರಭುತ್ವದ ಕಾಲ. ಇವರು ನಿರಂಕುಶ ಆಡಳಿತಗಾರರಾಗಿದ್ದರು. ಇವರು ತಮ್ಮ ಅಧಿಕಾರದಲ್ಲಿ ಜನತೆಯ ವೈಯುಕ್ತಿಕ ಭಾಗವಹಿಸುವಿಕೆಯ ಮೇಲೆ ಕಡಿವಾಣ ಹಾಕಿದ್ದರು. ತಮ್ಮ ಕೈಯಲ್ಲಿ ಸಂಪೂರ್ಣ ಅಧಿಕಾರವನ್ನು ಹಿಡಿಯುವ ಸಲುವಾಗಿ ಅವರು ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರೋತ್ಸಾಹಿಸಿದರು. ಇಂತಹ ಪ್ರತಿಕೂಲ ಸಂದರ್ಭಗಳಲ್ಲಿಯೂ ಸಹ ಗ್ರಾಮೀಣ ಸಮುದಾಯಗಳು ತಮ್ಮನ್ನು ತಾವೇ ಆಳಿಕೊಳ್ಳುತ್ತಾ ಮುಂದುವರೆದವು.

ಪ್ರತಿಹಾರ ಆಡಳಿತಗಾರರು ತಮ್ಮ ಆಡಳಿತವನ್ನು ನಡೆಸುವ ಸಲುವಾಗಿ ಅಧಿಕಾರಿಗಳ ವಿನ್ಯಾಸವನ್ನ ಹೊಂದಿದ್ದರು. ಅವರಲ್ಲಿ ಕೆಳಗಿನವರಿದ್ದರು. ಶಾಸ್ತ್ಯಧಿಕೃತ (ರಾಜನ ಉತ್ಪಾದನೆಯ 6ನೇ ಭಾಗಕ್ಕೆ ಹೊಣೆಯಾದವನು), (2) ದಸಗ್ರಾಮಿಕ್ (10 ಗ್ರಾಮಗಳ ಆಡಳಿತಗಾರ), (3) ಕ್ಷೇತ್ರಪ (ಸಾಗುವಳಿದಾರರ ಮೇಲ್ವಿಚಾರಕ), (4) ಮಹಭೋಗಿಕ (ಕಂದಾಯ ಅಧಿಕಾರಿ).

ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಪ್ರತಿಯೊಂದು ಗ್ರಾಮವು ತನ್ನದೇ ಆದಂತಹ ಗ್ರಾಮಸಂಘ ಎನ್ನುವ ಆಡಳಿತಾತ್ಮಕ ಸಂಸ್ಥೆಯನ್ನು ಹೊಂದಿತ್ತು. ಗ್ರಾಮದ ಸದಸ್ಯರನ್ನು ಕೌಟುಂಬಿಕ ಎಂತಲೂ ಮತ್ತು ಗ್ರಾಮದ ನಾಯಕನನ್ನು ಪಟ್ಟಾಕಿಲ್ ಎಂತಲೂ ಕರೆಯುತ್ತಿದ್ದರು. ಈತನು ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿಯನ್ನು ವಸೂಲಿ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಿದ್ದನು. ಇದನ್ನು ಗ್ರಾಮದ ಒಟ್ಟು ಉತ್ಪಾದನೆಯ 1/6 ಭಾಗಕ್ಕೆ ಸಾಂಪ್ರದಾಯಿಕವಾಗಿ ನಿಗದಿಗೊಳಿಸಲಾಗಿದ್ದಿತು. ಆದ್ದರಿಂದಲೇ ರಾಜನನ್ನು ಶದ್‌ಭಾಗಕ್ ಎಂದು ಕರೆಯುತ್ತಿದ್ದರು.

ದಕ್ಷಿಣ ಭಾರತದಲ್ಲಿ ಸ್ವಲ್ಪ ವ್ಯತ್ಯಾಸ ಹೊಂದಿದ ಗ್ರಾಮೀಣ ಆಡಳಿತ ವ್ಯವಸ್ಥೆಯನ್ನು ನಾವು ಗುರುತಿಸಬಹುದು. ಇಲ್ಲಿ ಎರಡು ರೀತಿಯ ರಾಜಕೀಯ ಸಂಸ್ಥೆಗಳಿದ್ದವು. ಒಂದು ನೆರೆಹೊರೆಯವರು ಅಥವಾ ಒಂದೇ ಭೂಮಿ ಮುಂತಾದ ಭೌಗೋಳಿಕ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸಂಬಂಧವನ್ನು ಆದರಿಸಿದ್ದರೆ ಮತ್ತೊಂದು ಜಾತೀಯ ಸಂಬಂಧವನ್ನು ಆಧಾರವಾಗಿ ಹೊಂದಿರುತ್ತಿದ್ದಿತು. ನಂತರದ ಗುಂಪುಗಳು ಭೌಗೋಳಿಕ ಸಂಬಂಧದ ಮೇಲೆ ಆಧಾರಿತ ವಾಗಿರಲಿಲ್ಲ. ಆದರೆ ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಅಣರಿಸಿರುತ್ತಿದ್ದವು. ಈ ಎರಡು ರೀತಿಯ ರಾಜಕೀಯ ಸಂಸ್ಥೆಗಳು ವಿಂದ್ಯಾಪರ್ವತದ ದಕ್ಷಿಣ ಭಾಗದ ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿದ್ದವು.

ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಆಧರಿಸಿದಂತಹ ಮೊದಲನೆಯ ವಿಧದ ರಾಜಕೀಯ ಸಂಸ್ಥೆಯೆಂದರೆ ಸಭಾ. ಇದು ಕೇವಲ ಬ್ರಾಹ್ಮಣರನ್ನು ಒಳಗೊಂಡಂತಹ ಸಭೆಯಾಗಿದ್ದು ಬೇರೆ ಜಾತಿಯವರಿಗೆ ಅವಕಾಶವಿರಲಿಲ್ಲ. ಸಭಾವು ಜಾತೀಯ ಅಂಶದ ಆಧಾರದ ಮೇಲೆ ರಚನೆಯಾಗಿದ್ದಾಗ್ಯೂ ಕೆಲಸಕಾರ್ಯಗಳನ್ನು ಭೌಗೋಳಿಕ ಸೂತ್ರದ ಮೇಲೆಯೇ ನಿರ್ವಹಿಸುತ್ತಿದ್ದಿತು. ಗ್ರಾಮೀಣ ಆಡಳಿತದ ರಚನೆಯಲ್ಲಿ ಸಭಾವು ಸರ್ವೋನ್ನತವಾಗಿದ್ದಿತು. ಹೀಗಿರಲು ಕಾರಣ, ಸ್ಥಾನಮಾನದ ಸ್ಥಿರೀಕರಣದಲ್ಲಿ ಬ್ರಾಹ್ಮಣರು ಶ್ರೇಷ್ಟ ಸ್ಥಾನವನ್ನು ಹೊಂದಿದ್ದರಿಂದ ಹಲವಾರು ಸಭಾಗಳು ಒಟ್ಟಿಗೆ ಸೇರಿ ತಮ್ಮ ಕಾರ್ಯ ಚಟುವಟಿಕೆಗಳ ಕ್ಷೇತ್ರವನ್ನು ವಿಸ್ತರಿಸುವುದರ ಮೂಲಕ ಮಹಾಸಭಾಗಳೆಂದು ಕರೆಯಲ್ಪಡುತ್ತಿದ್ದವು. ಕರ್ನಾಟಕದಲ್ಲಿ ಅವುಗಳನ್ನು ಮಹಾಜನ ಎಂದು ಕರೆಯುತ್ತಿದ್ದರು.

ಭೌಗೋಳಿಕ ತಳಹದಿಯ ಮೇಲೆ ರೂಪಿತವಾದ ಮತ್ತೊಂದು ರಾಜಕೀಯ ಸಂಘಟನೆಯನ್ನು ಉರರ್ ಎಂದು ಕರೆಯಲಾಗುತ್ತಿತ್ತು. ಎಲ್ಲಾ ಜಾತಿಗಳ ಸದಸ್ಯರು ಈ ಸಂಘಟನೆಯಲ್ಲಿ ಪ್ರತಿನಿಧಿಸಲ್ಪಡುತ್ತಿದ್ದರು. ಉರರ್‌ಗಳ ಸಮೂಹವನ್ನು ಜಿಲ್ಲಾ ಮಟ್ಟದಲ್ಲಿ ನತ್ತರ್ ಎಂತಲೂ ಮತ್ತು ವಿಭಾಗೀಯ ಮಟ್ಟದಲ್ಲಿ ನಾಡು ಎಂತಲೂ ಕರೆಯುತ್ತಿದ್ದರು. ಅವರು ತಮ್ಮ ಗ್ರಾಮದ ಸಾಮಾನ್ಯ ವ್ಯವಹಾರಗಳನ್ನು ಒಂದು ದೇವಾಲಯದಲ್ಲಿ ಅಥವಾ ಒಂದು ಆಲದ ಮರದ ಕೆಳಗೆ ಕುಳಿತು ನಿರ್ವಹಿಸುತ್ತಿದ್ದರು. ಡಾ॥ ಅಲ್ತೇಕರ್‌ರವರ ಪ್ರಕಾರ ಪಲ್ಲವರ ಕಾಲದಲ್ಲಿ ಗ್ರಾಮೀಣ ಹಿರಿಯರನ್ನು ಮಹತ್ತರರು ಎಂದು ಕರೆಯುತ್ತಿದ್ದರು.

ಕ್ರಿ.ಶ. 10ನೇ ಶತಮಾನಕ್ಕೆ ಸಂಬಂಧಿಸಿದ ಶಾಸನವೊಂದರ ಸಂಶೋಧನೆಯು ಈ ಅವಧಿಯ ದಕ್ಷಿಣ ಭಾರತದ ಗ್ರಾಮೀಣ ಸಂಘಟನೆಯ ಮೇಲೆ ಬೆಳಕನ್ನು ಬೀರಿದೆ. ಉತ್ತರ್‌ಮಲ್ಲೂರು ಎಂಬುದು 10ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಒಂದು ಹಳ್ಳಿ. ಈಗ ಅದು ತಮಿಳುನಾಡಿನ ಚಂಗಲ್‌ಪೇಟೆ ಜಿಲ್ಲೆಗೆ ಸೇರಿದೆ. ಆ ಸಮಯದಲ್ಲಿ ಚೋಳರ ಒಂದನೆಯ ಪರಂತಕ ಆಳ್ವಿಕೆ ನಡೆಸುತ್ತಿದ್ದನು. ಈ ಶಾಸನದಲ್ಲಿ ದಾಖಲಾಗಿರುವ ಗ್ರಾಮೀಣ ಆಡಳಿತ ವ್ಯವಸ್ಥೆಯ ಮುಖ್ಯ ಲಕ್ಷಣಗಳೆಂದರೆ- 1. ಗ್ರಾಮೀಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಡಳಿತಕ್ಕೆ ಅನೇಕ ಸಮಿತಿಗಳು ಅಸ್ತಿತ್ವದಲ್ಲಿದ್ದವು. 2. ಗ್ರಾಮೀಣ ಸಹಾಯಕವಾಗಿ ಜೀವನವು ಸಾಮುದಾಯಿಕವಾಗಿದ್ದಿತು. ಪ್ರತಿಯೊಂದು ಗ್ರಾಮವು ಒಂದು ನಿರ್ದಿಷ್ಟವಾದ ಸಂಖ್ಯೆಯ ಕೈಮಗ್ಗಗಳನ್ನು ಸಾಮಾನ್ಯವಾಗಿ ಹೊಂದಿರುತ್ತಿದುದು ಸ್ಪಷ್ಟವಾಗಿದೆ.ಇವುಗಳಲ್ಲಿ ಕೆಲಸ ಮಾಡುತ್ತಿದ್ದ ನೇಕಾರರು ಹಳ್ಳಿಯ ಸಾಮಾನ್ಯ ನಿಧಿಯಿಂದ ಪ್ರತಿಫಲವನ್ನು ಪಡೆಯುತ್ತಿದ್ದರು. ಖಾಸಗೀ ಕೈಮಗ್ಗದ ಯಂತ್ರಗಳಿಗೆ ಅವಕಾಶವಿರಲಿಲ್ಲ.

ಈ ಗ್ರಾಮೀಣ ಸಮಿತಿಗಳು ಆಂತರಿಕ ಮತ್ತು ಬಾಹ್ಯವಾದ ಎರಡು ರೀತಿಯ ಕಾರ್ಯಗಳನ್ನು ನಿರ್ವಹಿಸಬೇಕಾದ್ದಿತು. ಈ ಸ್ಥಳೀಯ ಸಮಿತಿಯ ಕಾರ್ಯಗಳಲ್ಲಿ ಮುಖ್ಯವಾದುದೆಂದರೆ ಸಮುದಾಯದ ಒಳಗೆ ಶಾಂತಿ ವ್ಯವಸ್ಥೆಯನ್ನು ಕಾಪಾಡುವುದು ಮತ್ತು ಜನತೆಯನ್ನು ಬಾಹ್ಯ ಆಕ್ರಮಣದಿಂದ ರಕ್ಷಿಸುವುದಾಗಿದ್ದಿತು. ಈ ಮುಖ್ಯ ಕಾರ್ಯವಾದ ಸಮುದಾಯದೊಳಗೆ ಶಾಂತಿ ಮತ್ತು ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ಬಾಹ್ಯ ಆಕ್ರಮಣದಿಂದ ಸಮುದಾಯವನ್ನು ರಕ್ಷಿಸುವುದು ಒಂದು ರೀತಿಯ ಮಿಲಿಟರಿ ಶಕ್ತಿಯ ಅವಶ್ಯಕತೆಗೆ ಕಾರಣವಾಯಿತು. ಗ್ರಾಮೀಣ ಮಟ್ಟದಲ್ಲಿ ಇಂತಹ ಮಿಲಿಟರಿ ಶಕ್ತಿಯು ಇದ್ದಿತು ಎಂಬುದನ್ನು ತೋರಿಸಲು ಸ್ಮಾರಕಗಳು ಮತ್ತು ಇತರೆ ಆಧಾರಗಳು ಇವೆ, ಉದಾಹರಣೆಗೆ ಕೌಟಿಲ್ಯನು ಆಗಿನ ಕಾಲದಲ್ಲಿ ಕೆಲವು ಶ್ರೇಣಿಯರು ಮಿಲಿಟರಿ ಕಾರ್ಯಕ್ಕೆ ಹೆಸರುವಾಸಿಯಾಗಿದ್ದರು ಎಂದು ತಿಳಿಸಿದ್ದಾನೆ. ಅವನು ಶ್ರೇಣಿ ಬಲ ಎಂಬುದಕ್ಕೆ ಯುವಕರನ್ನು ಮಾತ್ರ ಆಯ್ಕೆ ಮಾಡುತ್ತಿದ್ದರು ಎಂದು ಹೇಳುತ್ತಾನೆ. ಪಾಣಿನಿಯೂ ಸಹ 'ಆಯುಧ ಜೀವಿ ಸಂಘಗಳ' ಬಗ್ಗೆ ತಿಳಿಸಿದ್ದಾನೆ. ರಾಜನಿಗೆ ಹಣಕ್ಕಾಗಿ ಯುದ್ಧ ಮಾಡುವಂತಹ ಸೈನ್ಯವನ್ನು ಪೂರೈಸುತ್ತಿದ್ದಂತಹ ಹಳ್ಳಿಗಳು ತೆರಿಗೆ ವಿನಾಯಿತಿ ಪಡೆಯುತ್ತಿದ್ದವು.

ಹಳ್ಳಿಗಳ ಸೈನಿಕ ಶಕ್ತಿಗೆ ಸಂಬಂಧಿಸಿದಂತೆ ಮ್ಯಾಕ್ಸ್‌ವೆಬರ್‌ರವರು ಹೆಚ್ಚು ಗಮನ ವಹಿಸಿದ್ದಾರೆ. ಇವರು ಭಾರತೀಯರು ಯುದ್ಧ ಪ್ರವೃತ್ತಿಯುಳ್ಳವರಾಗಿರದಿದ್ದರೂ ಸಹ ವಿಶ್ವದಲ್ಲಿ ಭಾರತವು ಕಂಡಿರುವಷ್ಟು ನಿರಂತರವಾದ ಯುದ್ಧಗಳ ಉಪದ್ರವವನ್ನು ಯಾವ ರಾಷ್ಟ್ರವೂ ಸಹ ಕಂಡಿಲ್ಲ ಎಂದು ಬರೆಯುತ್ತಾರೆ. ಪಾಶ್ಚಿಮಾತ್ಯ ಟ್ಯೂಟನ್ಸ್‌ರ ಹಾಗೆ ಭಾರತದ ಗ್ರಾಮಸಮುದಾಯವು ಸಂಪೂರ್ಣವಾಗಿ ಸೈನ್ಯಕ್ಕೆ ಸೇರುತ್ತಿರಲಿಲ್ಲ. ಮರಾಠರು ಮಾತ್ರ ಹೆಚ್ಚು ಯುದ್ಧಪ್ರಿಯರಾಗಿದ್ದರು. ಹೆಚ್ಚು ಭಾಗಗಳಲ್ಲಿ ಭಾರತದ ಗ್ರಾಮ ಸಮುದಾಯಗಳು ಯಾವುದೇ ರೀತಿಯ ವಿರೋಧವನ್ನು ವ್ಯಕ್ತಪಡಿಸದೆ ಹಣಕ್ಕಾಗಿ ಕಾರ್ಯನಿರ್ವಹಿಸುವ ಸೈನ್ಯವನ್ನು ಒದಗಿಸಿ ಕೊಡುತ್ತಿದ್ದವು.

ಪ್ರಾರಂಭದ ಇತಿಹಾಸಕಾರರು ಗ್ರಾಮದ ನಾಯಕನ ಆಯ್ಕೆಯ ಬಗ್ಗೆ ವಿವಿಧ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ರೀತಿಯ ಅಭಿಪ್ರಾಯಂಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ನಾಯಕನು ವಂಶಪಾರಂಪರ್ಯವಾಗಿ ಬರುತ್ತಿದ್ದನೆಂದರೆ ಮತ್ತೆ ಕೆಲವರು ಇವನನ್ನು ಚುನಾಯಿಸಲಾಗುತ್ತಿತ್ತು ಎಂದು ಬರೆದಿದ್ದಾರೆ. ಮತ್ತೆ ಕೆಲವರು ರಾಜನಿಂದ ನೇಮಿಸಲ್ಪಡುತ್ತಿದ್ದನು ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮದ ನಾಯಕನ ಆಯ್ಕೆಯ ಬಗ್ಗೆ ಭಿನ್ನಾಭಿಪ್ರಾಯಂಗಳಿರುವುದನ್ನು ಮಾಕ್ಸ್‌ವೆಬರ್‌ರವರು ಸರಿಪಡಿಸಿದ್ದಾರೆ. ಅವರು, ಪ್ರಾಚೀನ ಕಲ್ಪನೆಗಳನ್ನು ಮುಟ್ಟುವ ಸಲುವಾಗಿ, ನಾವು ನಮ್ಮ ಆಧುನಿಕ ಅಭಿಪ್ರಾಯಗಳನ್ನು ಒಂದು ಮುಖ್ಯವಾದ ವಿಸ್ತರಣೆ ಮತ್ತು ರೀತಿಯ ಕಡೆಗೆ ಹರಿಸಬೇಕು ಎಂದು ಬರೆಯುತ್ತಾರೆ. ಏಕೆಂದರೆ ಪ್ರಾಚೀನ ಭಾರತದಲ್ಲಿ ಚುನಾವಣೆ ಎಂದರೆ ವಂಶಾನುಗತವಾಗಿ ಬಂದಂತಹ ಗಣ್ಯ ಕುಟುಂಬದ ವ್ಯಕ್ತಿಯನ್ನು ಆ ಸ್ಥಾನಕ್ಕೆ ಘೋಷಿಸಲ್ಪಡುವುದೇ ಆಗಿದ್ದಿತು. ನಿರ್ಣಯ ಎಂದರೆ ರಾಜನು ಔಪಚಾರಿಕವಾಗಿ ಅನುಮೋದನೆ ನೀಡುವುದಾಗಿದ್ದಿತು. ಗ್ರಾಮ ಸಮುದಾಯಗಳ ವಂಶಪಾರಂಪರ್ಯವಾಗಿ ಬರುವ ನಾಯಕತ್ವದ ಬಗ್ಗೆ ಅನೇಕ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ.

ಪಂಚಾಯಿತಿಯ ಅವನತಿ :

ಭಾರತದಲ್ಲಿ ಮುಸ್ಲಿಮರ ಪ್ರಭಾವವು, ಮಧ್ಯಪೂರ್ವ ರಾಷ್ಟ್ರಗಳ ಮುಸ್ಲಿಮ್ ಆಕ್ರಮಣಕಾರರಿಂದ ಅನೇಕ ಆಕ್ರಮಣಗಳು ನಡೆದ 11 ಮತ್ತು 12ನೇ ಶತಮಾನಗಳ ಅವಧಿಯಲ್ಲಿ ಪ್ರಾರಂಭವಾಯಿತು ಎಂದು ಹೇಳಬಹುದು. ಆದಾಗ್ಯೂ ಉತ್ತರ ಭಾರತದಲ್ಲಿ ಸಂಪೂರ್ಣವಾಗ ಮೊಗಲ್ ಸಾಮ್ರಾಜ್ಯದ ಸ್ಥಾಪನೆಯಾದದ್ದು 1556ರಲ್ಲಿ ಪ್ರಾರಂಭದ ಮುಸ್ಲಿಂ ಆಕ್ರಮಣಕಾರರು ಜಯಿಸುವವರಿಗೆ ಸ್ವಾಭಾವಿಕವಾಗಿರುವಂತಹ ಮೇಲುಗೈ ಪಡೆಯಲು ಎಲ್ಲಾ ಉಪಾಯಂಗಳನ್ನು ಹೊಂದಿದ್ದರು ಹಾಗೂ ತಮ್ಮ ಧರ್ಮವೇ ಶ್ರೇಷ್ಠವೆಂಬ ನಂಬಿಕೆಯನ್ನು ಹೊಂದಿದ್ದವರಾಗಿದ್ದರು. ಇದರಿಂದಾಗಿಯೇ ಕಫೀರರ ಇತರ ಧರ್ಮಾನುಯಾಯಿಗಳ ಆಸ್ತಿಗೆ ಅವರು ಸ್ವಾಭಾವಿಕ ಉತ್ತರಾಧಿಕಾರಿಗಳಾಗುತ್ತಿದ್ದರು. ಹೀಗೆ ಮುಸ್ಲಿಮರ ಚಕ್ರಾಧಿಪತ್ಯದ ಕಾಲದಲ್ಲಿ ಭೂಮಿಯನ್ನು ಹೊಂದುವಲ್ಲಿ ತಾರತಮ್ಯದ ಪ್ರವೃತ್ತಿಯು ಪ್ರಾರಂಭವಾಯಿತು. ಹೀಗಿದ್ದಾಗ್ಯೂ. ಇದು ಒಂದು ಹಂತದವರೆಗೆ ಇದ್ದು ಕ್ರಮೇಣ ಮುಸ್ಲಿಂ ವಿಜಯಶಾಲಿಗಳು ಸ್ಥಿರವಾದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದರು.

ಭಾರತದಲ್ಲಿ ಮುಸ್ಲಿಂ ಆಡಳಿತವನ್ನು ಬಲಪಡಿಸುವ ನಿಜವಾದ ಪ್ರಯತ್ನವು ಅಕ್ಬರನಿಂದ ಪ್ರಾರಂಭವಾಯಿತು. ರಾಜ ತೊಡರಮಲ್ಲನ ಸಹಾಯದೊಂದಿಗೆ ಅಕ್ಬರನು ಭೂಕಂದಾಯ ಪದ್ಧತಿಯನ್ನು ವ್ಯವಸ್ಥಿತಗೊಳಿಸಲು ಪ್ರಯತ್ನಿಸಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದಾಗ್ಯೂ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳಾಗಲಿ, ಅಥವಾ ಹೊಸ ರಾಜ್ಯನೀತಿಯಾಗಲಿ, ಭೂಮಿಯ ಮೇಲಿನ ಹೊಸ ಸಿದ್ಧಾಂತವನ್ನಾಗಲಿ ನಿರೀಕ್ಷಿಸಲಾಗಲಿಲ್ಲ. ಆದಾಗ್ಯೂ ಅಕ್ಬರನ ಭೂಹಿಡುವಳಿ ಪದ್ಧತಿಗೆ ಸಂಬಂಧಿಸಿದಂತೆ ಅಳವಡಿಸಲ್ಪಟ್ಟ ಕೆಲವು ಕ್ರಮಗಳು ಗ್ರಾಮಪಂಚಾಯತಿಗಳು ಸೇರಿದಂತೆ ಇಡೀ ಗ್ರಾಮೀಣ ಸಂಘಟನೆಯಲ್ಲಿ ಹೆಚ್ಚು ತ್ವರಿತವಾದ ಬದಲಾವಣೆಗಳನ್ನು ತಂದವು.

ಮೊಘಲರ ಆಳ್ವಿಕೆ ಮತ್ತು ಅನಂತರ

ಮೊಘಲರ ಆಡಳಿತದ ವಿಸ್ತರಣೆ ಮತ್ತು ಮುಸ್ಲಿಂ ದಿಗ್ವಿಜಯಗಳಲ್ಲಿ ರಾಜ್ಯಾಧಿಕಾರದ ಕೇಂದ್ರೀಕರಣವು ಹಿಂದು ರಾಜರು ಗ್ರಾಮಗಳನ್ನು ಆಶ್ರಯಿಸುವಂತೆ ಮಾಡಿತು. ಹೀಗೆ ಗ್ರಾಮಗಳಿಗೆ ವಲಸೆ ಹೋದ ರಾಜರುಗಳು ಅಲ್ಲಿ ಹೆಚ್ಚು ಭೂಮಿಯನ್ನು ಸ್ವಾಧೀನಪಡಿಸಿಕೊಂಡರು; ಹೊಸ ಗ್ರಾಮಗಳು ಗೋಚರಿಸಿದ ಹಾಗೆ ಪ್ರತಿಯೊಂದು ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಉಳುಮೆ ಮಾಡದೆ ಗ್ರಾಮದ ಒಡೆಯರಾಗಿದ್ದಂತಹವರು ಕ್ರಮೇಣ ಜಮೀನ್ದಾರರಾದರು.

ಮುಸ್ಲಿಂ ಆಡಳಿತಗಾರರಿಂದ ಹಿಂದೂ ರಾಜರ ಗಡಿಪಾರು ಗ್ರಾಮೀಣ ಸಮುದಾಯಗಳ ಸಾಮಾಜಿಕ ಸಂಘಟನೆಯ ಮೇಲೆ ಮತ್ತೊಂದು ತೀವ್ರತರವಾದ ಪ್ರಭಾವವನ್ನು ಬೀರಿತು. ಮ್ಯಾಕ್ಸ್‌ವೆಬರ್ ಭಾರತೀಯ ಸಮಾಜದ ಸಾಮಾಜಿಕ ರಚನೆಯ ಟಿಪ್ಪಣಿಯಲ್ಲಿ ಈ ಪ್ರವೃತ್ತಿಯ ಬಗ್ಗೆ ಗಮನಾರ್ಹವಾದ ಅವಲೋಕನ ಮಾಡಿದ್ದಾರೆ. ಭಾರತದಲ್ಲಿ ಜಾತಿಪದ್ಧತಿಯ ಉಳಿಯುವಿಕೆಯು ಮುಸ್ಲಿಂ ವಿಜಯದ ಕೊಡುಗೆಯಾಗಿದೆ. ಮುಸ್ಲಿಮರು ಜಯಹೊಂದಿದಾಗ ಹಿಂದೂ ಸಾಮಾಜಿಕ ವ್ಯವಸ್ಥೆಯೊಳಗೊಳಗೆಯೇ ಇದ್ದ ಕ್ಷತ್ರಿಯರ ಸೈನಿಕ ಶಕ್ತಿಯನ್ನು ಮತ್ತು ಅಂತಸ್ಥನ್ನು ನಾಶ ಮಾಡಿದರು. ಹೀಗಾಗಿ ಬ್ರಾಹ್ಮಣರ ಮುಖ್ಯ ಪ್ರತಿಸ್ಪರ್ಧಿಗಳು ಮತ್ತು ವಿರೋಧಿಸುವಂತಹವರು ಇಲ್ಲದಂತಾದರು. ಹೀಗೆ ವೆಬರ್‌ರವರು ಇಸ್ಲಾಮಿಯ ಪ್ರಭುತ್ವದಲ್ಲಿ ಬ್ರಾಹ್ಮಣರು ಜಾತಿರಚನೆಯಲ್ಲಿ ಉನ್ನತ ಸ್ಥಾನವನ್ನು ಪಡೆಯುವುದರೊಂದಿಗೆ ಅವರ ಅಧಿಕಾರವು ವಿವಿಧ ಸ್ಥಳಗಳಲ್ಲಿ ಅಭೂತ ಪೂರ್ವವಾಗಿ ಬೆಳೆಯಿತು ಎಂದು ಅಭಿಪ್ರಾಯಪಡುತ್ತಾರೆ.

ಅಕ್ಬರನಿಂದ ಉಂಟಾದ ಮತ್ತೊಂದು ಬದಲಾವಣೆಯೆಂದರೆ ಪರ್ಷಿಯನ್ ಹೆಸರು ಮತ್ತು ಪದಗಳನ್ನು ಸಾಮಾನ್ಯ ಬಳಕೆ. ಆಡಳಿತ ಭಾಷೆ ಪರ್ಷಿಯನ್ ಆಗಿದ್ದುದರಿಂದ ಅಕ್ಬರನು ರೆವಿನ್ಯೂ ಭಾಷೆಯೊಳಗೆ ಈ ಪದಗಳ ಬಳಕೆಯನ್ನು ಪರಿಚಯಿಸುವುದು ಯೋಗ್ಯ ಎಂದು ಯೋಚಿಸಿದನು. ಈ ಪರ್ಷಿಯನ್ ಪದಗಳು ಮತ್ತು ಹೆಸರುಗಳು ಭೂಹಿಡುವಳಿ ಪದ್ಧತಿಯೊಂದಿಗೆ ಸಂಬಂಧಹೊಂದಿದ್ದು, ಯಾವುದೇ ಹೊಸ ಬದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಾವಣೆಗಳನ್ನು ತರಲಿಲ್ಲ. ಆದರೂ ಈ ನಿರುಪದ್ರವಿ ಕ್ರಮ ಮಹತ್ತರವಾದ ಬದಲಾವಣೆಗಳಿಗೆ ಕಾರಣವಾಯಿತು. ಈ ವಿಷಯದ ಮೇಲೆ ಟೀಕಿಸುವ ಬಾಡ್‌ನ್‌ಪಾವೆಲ್ ರವರು ಹೊಸ ಪರ್ಷಿಯನ್ ಪದಗಳು ಗೊತ್ತುಪಡಿಸಿದ ಹಕ್ಕುಗಳ ಸ್ಪಟೀಕರಣದ ದುರಾದೃಷ್ಟಕರ ಪ್ರವೃತ್ತಿಯನ್ನು ಹೊಂದಿತು ಮತ್ತು ಜನರು ಭೂಮಿಯ ಮಾಲಿಕತ್ವ ಮತ್ತು ಭೂಹಿಡುವಳಿಗೆ ಸಂಬಂಧಿಸಿದಂತೆ ಯೋಚಿಸುವಂತೆ ಪ್ರಭಾವ ಬೀರಿತು.

ಇದರ ಪರಿಣಾಮವಾಗಿ ರಾಜ ತೋಡರಮಲ್ಲನ ಮಾರ್ಗದರ್ಶನದಲ್ಲಿ ಭೂಮಾಲಿಕತ್ವ ಮತ್ತು ಸಾಗುವಳಿಗೆ ಸಂಬಂಧಿಸಿದಂತೆ ಎಲ್ಲೆಡೆಯೂ ಪ್ರಚಲಿತದಲ್ಲಿದ್ದಂತಹ ಹಳೆಯ ಆಚರಣೆಗಳು ಮತ್ತು ಪದ್ಧತಿಗಳಿಗೆ ಹೊಸ ಪರ್ಷಿಯನ್ ಪದಗಳನ್ನು ಕೊಡಲಾಯಿತು. ಉದಾಹರಣೆಗೆ ರಾಜರ ಹಕ್ಕುಗಳಾದ ಕಂದಾಯದ ಭಾಗವನ್ನು ಪಡೆಯುವುದು. ಪಾಳುಭೂಮಿ, ಲೆವಿ ಮತ್ತು ತೆರಿಗೆಗಳಿಗೆ ಸಂಬಂಧಿಸಿದವುಗಳಿಗೆ ಇದ್ದಂತಹ ಹಕ್ಕು ಇವೆಲ್ಲವನ್ನು ಸೇರಿಸಿ ಜಮೀನ್ದಾರಿ ಎಂದು ಕರೆಯಲಾಯಿತು. ರಾಜರ ಸ್ಥಿರಾಸ್ತಿಯು ಭೌಗೋಳಿಕ ವಿಭಾಗದ ಹಳೆಯ ಕಾಲದ ತತ್ವಗಳನ್ನು ಆಧರಿಸಿದ್ದ ಆಸ್ತಿಗೆ ಖಾಲ್ಸಾ ಎಂದು ಕರೆಯುತ್ತಿದ್ದರು. ಮತ್ತು ಗ್ರಾಮೀಣ ಗಣ್ಯ ಕುಟುಂಬಗಳ ವಂಶಪಾರಂಪರ್ಯ ಹಕ್ಕನ್ನು ಮಿರಾಸಿ ಎಂದು ಕರೆಯುತ್ತಿದ್ದರು. ಈ ಹೊಸ ಪದಗಳ ಒಂದೇ ಅರ್ಥವನ್ನು ಹೊಂದಿದ್ದಾಗ್ಯೂ ಗ್ರಾಮೀಣ ಸಂಘಟನೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿತು.

ಕಂದಾಯವನ್ನು ವಸ್ತುಗಳ ರೂಪದಲ್ಲಿ ಪಾವತಿಸದೆ ಹಣದ ರೂಪದಲ್ಲಿ ಪಾವತಿಸುವಂತಹ ಪದ್ಧತಿಯು ಅಕ್ಬರನಿಂದ ಪರಿಚಯಿಸಲ್ಪಟ್ಟ ಮತ್ತೊಂದು ಬದಲಾವಣೆ. ಒಂದು ರೀತಿಯಲ್ಲಿ ಈ ಬದಲಾವಣೆಯು ಅನಿವಾರ್ಯವಾಗಿದ್ದಿತು ಇದೂ ಕೂಡ ಗ್ರಾಮೀಣ ಜೀವನದ ಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡಿತು. ಎಲ್ಲಿಯವರೆಗೂ ಕಂದಾಯವನ್ನು ವಸ್ತುಗಳ ರೂಪದಲ್ಲಿ ಪಾವತಿಸುವಂತಹ ಪದ್ಧತಿ ಇದ್ದಿತೋ ಅಲ್ಲಿಯವರೆಗೆ ಭೂಹಿಡುವಳಿಯು ಸುರಕ್ಷಿತವಾಗಿದ್ದಿತು. ಗ್ರಾಮೀಣ ಪ್ರದೇಶದಲ್ಲಿ ಸಾಮೂಹಿಕ ಜೀವನವಿದ್ದು, ಊರಿನ ನಾಯಕ ಮತ್ತು ಹಿಡುವಳಿದಾರರು ಒಟ್ಟಿಗೆ ಕೂಡಿ ವ್ಯಾಪಾರ ನಡೆಸುತ್ತಿದ್ದರು. ಈ ಪದ್ಧತಿಯಲ್ಲಿ ತೆರಿಗೆ ಸಂಗ್ರಹಿಸುವವರು ಸರ್ಕಾರಕ್ಕೆ ಬರಬೇಕಾದ ಪಾಲನ್ನು ಗ್ರಾಮದ ಒಟ್ಟು ಉತ್ಪಾದನೆಗನುಸಾರವಾಗಿ ಲೆಕ್ಕ ಹಾಕುತ್ತಿದ್ದರು. ಬೆಳೆದ ದವಸವನ್ನು ಗ್ರಾಮದ ಕಣಕ್ಕೆ ತಂದು ಅದನ್ನು ಭಾಗಮಾಡಿ ರಾಜನಿಗಿಷ್ಟು, ರೈತರಿಗಿಷ್ಟು ಮತ್ತೆ ಆಳುಗಳಿಗೆ ಹಾಗೂ ಉಳಿದದ್ದನ್ನು ಸಾಗುವಳಿ ಮಾಡುವವರಿಗೆ ಹೀಗೆ ಹಂಚಲ್ಪಡುತ್ತಿತ್ತು. ಆದರೆ ಹಣದ ರೂಪದಲ್ಲಿ ಕಂದಾಯ ಪಾವತಿ ಮಾಡುವ ಪದ್ಧತಿಯು ಹೊಂದಿರುವ ಭೂಮಿಯನ್ನು ಅಳತೆಮಾಡುವುದು ಮತ್ತು ದಾಖಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡುವುದಕ್ಕೆ ದಾರಿಮಾಡಿ ಕೊಟ್ಟಿತಲ್ಲದೆ ಇಡಿ ಹಳ್ಳಿಯ ಒಟ್ಟು ಕಂದಾಯದ ಲೆಕ್ಕಚಾರ ಮಾಡುವಂತೆ ಮಾಡಿ ವೈಯಕ್ತಿಕ ಹಕ್ಕುಗಳಿಗೆ ಹೆಚ್ಚು ಗಮನಕೊಡದಂತೆ ಮಾಡಿತು. ಇದು ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ನಾಶಮಾಡಿತು. ಪರಿಣಾಮವಾಗಿ ಸ್ಥಳೀಯ ಪಾರುಪತ್ಯಗಾರರು ರಾಜನಿಂದ ನೇಮಕಮಾಡಲ್ಪಟ್ಟು ನಿಜವಾದ ಮಾಲೀಕರಂತೆ ಅಧಿಕಾರ ಹೊಂದಿದರು. ಇದು ಕೇವಲ ಕೇಂದ್ರಸರ್ಕಾರದ ನಿಯಂತ್ರಣವನ್ನು ದುರ್ಬಲಗೊಳಿಸಲಿಲ್ಲ. ಜೊತೆಗೆ ಸ್ಥಳೀಯ ಆಡಳಿತ ಪದ್ಧತಿಯನ್ನು ನಾಶಮಾಡಿತು.

ಪ್ರಾಚೀನ ಭಾರತದಲ್ಲಿಯೂ ಸಹ ರಾಜನ ಪರವಾಗಿ ಭೂಕಂದಾಯವನ್ನು ಸಂಗ್ರಹಿಸುವುದು ಗ್ರಾಮದ ನಾಯಕನ ಮುಖ್ಯ ಕರ್ತವ್ಯಗಳಲ್ಲೊಂದಾಗಿತ್ತು. ಈ ಕರ್ತವ್ಯಕ್ಕಾಗಿ ಗ್ರಾಮದಲ್ಲಿ ಇವನಿಗೆ ನಿರ್ದಿಷ್ಟ ಭೂಮಿಯನ್ನು ಕೊಡಲಾಗುತ್ತಿತ್ತು, ಆದರೂ ಆ ನಾಯಕನು ಭೂಮಿ ಪ್ರತಿಫಲವನ್ನು ಅನುಭವಿಸಬಹುದಿತ್ತೇ ವಿನಃ ಭೂಮಿಯ ಮೇಲೆ ಯಾವುದೇ ರೀತಿಯ ಮಾಲಿಕತ್ವದ ಹಕ್ಕನ್ನು ಹೊಂದಿರುತ್ತಿರಲಿಲ್ಲ. ನಾಯಕನಿಗೆ ಕೊಡಲಾಗಿದ್ದ ಈ ನಿರ್ದಿಷ್ಟ ಹಕ್ಕನ್ನು ಪರ್ಷಿಯನ್ ಪದದಲ್ಲಿ ಮೀರೇಸಿ ಎಂದು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಗೊತ್ತಿರದ ಭಾಷೆಯ ಈ ಹೊಸ ಪದವು ಗೊತ್ತುಪಡಿಸಿದ ತತ್ವಕ್ಕೆ ಹೊಸ ರೂಪವನ್ನು ಕೊಟ್ಟಿತು ಮತ್ತು ಮೀರೇಸಿಯ ಹಕ್ಕು ಮುಖಂಡನ ಒಂದು ನಿರ್ದಿಷ್ಟ ಭೂಮಿಯ ಮೇಲಿನ ಮಾಲಿಕತ್ವದ ಹಕ್ಕೆಂದು ಪರಿಣಮಿಸಿತು. ಹೀಗೆ ಭೂಮಿಯ ಖಾಸಗಿ ಮಾಲಿಕತ್ವವು ಗ್ರಾಮದ ಮುಖಂಡನಿಂದ ಪ್ರಾರಂಭವಾಯಿತು.

ತ್ವರಿತವಾಗಿ ಕಂದಾಯ ಸಂಗ್ರಹಿಸಲು ಅನುಕೂಲವಾಗುವಂತೆ ಮಾಡಲು ಕಂದಾಯ ಜಿಲ್ಲೆಗಳನ್ನು ನಿರ್ಮಾಣ ಮಾಡಿ. ಮೊಘಲ್ ಸೈನ್ಯದ ಮಾಜಿ ಸೈನಿಕರನ್ನು ಕಲೆಕ್ಟರ್ ಆಗಿ ನೇಮಿಸಲಾಯಿತು. ಇದನ್ನು ಎರಡು ಉದ್ದೇಶಗಳನ್ನಿಟ್ಟುಕೊಂಡು ಮಾಡಲಾಯಿತು, ಅವೆಂದರೆ ಮೊಘಲ್ ಸೈನ್ಯದಲ್ಲಿ ಮಾನವ ಶಕ್ತಿಯನ್ನು ಹೆಚ್ಚಿಸುವುದು ಮತ್ತು ತೆರಿಗೆಯನ್ನು ಸಂಗ್ರಹಿಸುವುದು. ಹೀಗೆ ರಾಜನಿಗೆ ಸೇವೆ ಸಲ್ಲಿಸಲು ಒಂದು ನಿರ್ದಿಷ್ಟ ಸೈನಿಕ ದಳವನ್ನು ಆಯ್ಕೆ ಮಾಡುವುದು ಕಲೆಕ್ಟರನ ಕರ್ತವ್ಯವಾಯಿತು. ಈ ಉದ್ದೇಶಕ್ಕಾಗಿ ಸೈನಿಕರಿಗೆ ತೆರಿಗೆಯ ಒಂದಂಶವನ್ನು ದಿನಸಿ ಮತ್ತು ಇತರೆ ವಸ್ತು ಸಂಬಳವಾಗಿ ಕೊಡಲಾಯಿತು. ಇದು ಜಹಗೀರ್‌ದಾರರಿಗೆ ಕೊಡುವ ವೇತನ ಪದ್ಧತಿಗೆ ಕಾರಣವಾಯಿತು. ಇದು ನಂತರ ಪ್ರಾಚೀನ ದೇವಾಲಯಗಳಿಗೆ ಮತ್ತು ಬ್ರಾಹ್ಮಣರ ವೇತನ ಭಾಗವು ಕೂಡ ಆಯಿತು. ಯಾವಾಗ ಈ ಕಲೆಕ್ಟರು ಗಳು ಪಾಳುಭೂಮಿಯನ್ನು ತಮ್ಮ ಇಷ್ಟ ಬಂದ ಹಾಗೆ ವಿಲೇವಾರಿಮಾಡುವ ಹಕ್ಕನ್ನು ಪಡೆದರೋ ಆಗ ಜಹಗೀರುದಾರರು ಭೂಮಾಲೀಕರಾಗಿ ಬದಲಾಯಿಸಿದರು.

ಈ ಕ್ರಮದಿಂದಾಗಿ ಜಹಗೀರ್‌ದಾರರು ಭೂಮಾಲೀಕರಾಗುವದ ಪ್ರಕ್ರಿಯೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಾಮೀಣ ರಚನೆಯ ಮೇಲೆ ಹೆಚ್ಚು ಪ್ರಭಾವ ಬೀರಿತು. ಈ ಬದಲಾವಣೆಯು ಕ್ರಮೇಣ ಒಂದು ದುರಾಕ್ರಮವಾಗಿ ಮೊದಲಿಗೆ ಗ್ರಾಮದ ಪಾಳುಭೂಮಿಯ ಮೇಲೆ ಪ್ರಾರಂಭವಾಯಿತು. ಜಹಗೀರ್‌ದಾರನು ಪಾಳುಭೂಮಿಯನ್ನು ತನ್ನ ಸ್ವಂತಭೂಮಿಯಾಗಿ ಸ್ವಾಧೀನಪಡಿಸಿಕೊಂಡನು. ನಂತರ ಅವನು ಎಲ್ಲಾ ಸುಂಕ ಮತ್ತು ಬಾಕಿಯನ್ನು ತೆಗೆದುಕೊಳ್ಳಲು ಪ್ರಾರಂಭಿಸಿದನು ಸಾಗುವಳಿದಾರರು ಬೆಳೆಯ ಸ್ವಲ್ಪ ಭಾಗವನ್ನು ಪ್ರಾರಂಭದಲ್ಲಿ ರಾಜ್ಯದ ಉಗ್ರಾಣಕ್ಕೆ ಕೊಡುತ್ತಿದ್ದಂತಹ ರೀತಿಯಲ್ಲಿ ಜಹಗೀರ್‌ದಾರನಿಗೆ ಕೊಡಬೇಕಾಯಿತು. ಹೀಗೆ ಕ್ರಮೇಣವಾಗಿ ಜಹಗೀರ್‌ದಾರರು ಇಡೀ ಗ್ರಾಮದ ಭೂಒಡೆಯರಾಗಿ ನಿಜವಾದ ರೈತರನ್ನು ಗೇಣಿದಾರರ ಸ್ಥಾನಕ್ಕೆ ಇಳಿಸಿದರು.

ದುರಾಕ್ರಮಣ ಮತ್ತು ಜಹಗೀರ್‌ದಾರರು ಭೂಮಾಲಿಕರಾಗಿ ಮಾರ್ಪಾಟಾದದ್ದು ಯುದ್ಧ ಮತ್ತು ಸರ್ಕಾರವು ಹೆಚ್ಚು ಅಜಾಗರೂಕತೆಯ ಸಂದರ್ಭದಲ್ಲಿ ಅಧಿಕವಾಯಿತು. ಹೀಗೆ ಕೆಟ್ಟ ಸರ್ಕಾರವು ಇಡೀ ಗ್ರಾಮದಲ್ಲಿ ಸಾಕಷ್ಟು ಅಧಿಕಾರದೊಂದಿಗೆ ಭೂಮಾಲಿಕರಾದ ಭೂಒಡೆಯರ ವರ್ಗದ ಉಗಮಕ್ಕೆ ಮುಖ್ಯ ಕಾರಣವಾಯಿತು. ಮೇಲಾಗಿ ರಾಜನ ಬೊಕ್ಕಸದಲ್ಲಿ ಜಹಗೀರ್‌ದಾರರಿಗೆ ಕೊಡಲು ಹಣವಿಲ್ಲದಂತಹ ಸಂದರ್ಭದಲ್ಲಿ ರಾಜನು ಅವರಿಗೆ ಹೆಚ್ಚು ಭೂಮಿಯನ್ನು ಪರಿಹಾರವಾಗಿ ಮಂಜೂರು ಮಾಡುತ್ತಿದ್ದನು.

ಹೀಗೆ ರೆವಿನ್ಯೂ ಕಲೆಕ್ಟರರು ಕ್ರಮೇಣ ಭೂಒಡೆಯರಾದರು. ಇತರ ವಿಶೇಷಾಧಿಕಾರಗಳು ಅವರಿಗೆ ಅನುಕ್ರಮವಾಗಿ ಬಂದಂತೆ ಅವರು ಗ್ರಾಮದ ನಿಜವಾದ ಆಡಳಿತಗಾರರಾದರು. ಹಳೆಯ ಸಾಂಪ್ರದಾಯಿಕ ಸಂಘಟನೆಗಳಾದ ಹಿರಿಯರ ಸಮಿತಿ ಮತ್ತು ಗ್ರಾಮಪಂಚಾಯತಿಗಳು ಕಾರ್ಯನಿರ್ವಹಿಸುತ್ತ ಮುಂದುವರಿದರೂ ಸಹ, ಅವುಗಳ ಪ್ರಾಮುಖ್ಯತೆ ಅವನತಿ ಹೋದಿತು. ಪ್ರಬಲ ಅಧಿಕಾರವನ್ನು ಹೊಂದಿದ್ದಂತಹ ಜಮಿನ್ದಾರರುಮತ್ತು ರೆವಿನ್ಯೂ ಕಲೆಕ್ಟರರು ಇತರೆ ಪ್ರಭಾವದಿಂದಾಗಿ ಸಾಂಪ್ರದಾಯಿಕ ಸಂಸ್ಥೆಗಳು ಕಿತ್ತು ಹಾಕಲ್ಪಟ್ಟು ಜಮಿನ್ದಾರರು ಮತ್ತು ಕಲೆಕ್ಟರ್‌ರ ಅಧಿಕಾರದ ಕರಾಳ ದಿನಗಳಲ್ಲಿಅವು ಅವನತಿ ಹೊಂದಿದವು.

ಬ್ರಿಟಿಷ್ ಅಧಿಪತ್ಯದ ಆಗಮನ

ಬ್ರಿಟೀಷ ಆಡಳಿತ ಕಾಲದಲ್ಲಿ ಪಂಚಾಯತಿಗಳ ಸಂಪೂರ್ಣ ಅವನತಿಯು ಉಂಟಾಯಿತು. ಆದರೂ ಬ್ರಿಟೀಷರು ನ್ಯಾಯಾಲಯಗಳನ್ನು ಸ್ಥಾಪಿಸಿದ್ದು ಪಂಚಾಯುತಿಗಳಿಗೆ ಪುನರ್‌ಚೇತನ ಕೊಟ್ಟಂತಾಯಿತು.

ಭಾರತೀಯ ಗ್ರಾಮೀಣ ಸಮುದಾಯದ ಅಧ್ಯಯನವು ಬ್ರಿಟಿಷ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಡಳಿತಾಧಿಕಾರಿಗಳ ಮಹಾನ್ ಸಾಧನೆಗಳಲ್ಲೊಂದಾಯಿತು. ಗ್ರಾಮೀಣ ಸಮುದಾಯದ ಕೆಲವು ದೇಶೀಯ ಸಾಂಪ್ರದಾಯಿಕ ಸಂಸ್ಥೆಗಳು ಪ್ರಾರಂಭದಲ್ಲಿ ಬೆಳಕಿಗೆ ಬರಲಿಲ್ಲ. ಮನು ಮತ್ತು ಅವನ ವ್ಯಾಖ್ಯಾನಕಾರರ ಬರವಣಿಗೆಗಳಲ್ಲಿ ಈ ಸಂಸ್ಥೆಗಳ ಬಗ್ಗೆ ಹೇಳಿದ್ದರೂ ಸಹ ಬ್ರಿಟೀಷರು ಅವುಗಳ ಕಡೆಗೆ ಹೆಚ್ಚಿನ ಗಮನಕೊಡಲಿಲ್ಲ. ಅವರು ತಮ್ಮ ಪೂರ್ವದ ಮಹಮದೀಯರ ಸಾಮಾನ್ಯ ತತ್ವಗಳನ್ನು ಮೈಗೂಡಿಸಿಕೊಂಡಿದ್ದರು. ಅವರು ಅವುಗಳಲ್ಲಿ ನಂಬಿಕೆಯನ್ನು ಇಟ್ಟು, ತಮ್ಮ ಪೂರ್ವಿಕರಿಂದ ಏನನ್ನು ವಂಶಪಾರಂಪರ್ಯವಾಗಿ ಪಡೆದಿದ್ದರೋ ಅವುಗಳನ್ನು ಅಂದರೆ ಪ್ರಾಚೀನ ಭೂಹಿಡುವಳಿ ಪದ್ಧತಿ ಮುಂತಾದವುಗಳನ್ನು ಹೆಚ್ಚುಕಡಿಮೆ ಹಾಗೆಯೇ ಮುಂದುವರೆಸಿದರು. ಸಾಂಪ್ರದಾಯಿಕ ಪದ್ಧತಿಗಳನ್ನು ಬದಲಿಸಿ ಜನರ ಅಶಾಂತಿಗೆ ಕಾರಣರಾಗುವದರಿಂದ ತಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬ ಹೆದರಿಕೆಯಿಂದ ಇಂತಹ ತೀವ್ರತರವಾದ ಕ್ರಮಗಳನ್ನು ಬ್ರಿಟೀಷರು ತೆಗೆದುಕೊಳ್ಳಲಿಲ್ಲ. ಆದ್ದರಿಂದ ಅವರು ಯಾವಾಗಲೂ ವಿನಾಕಾರಣ ಗ್ರಾಮೀಣ ಪವಿತ್ರ ಸಂಪ್ರದಾಯಗಳಿಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ತಮ್ಮ ಪೂರ್ವಿಕರಂತೆ ಅವರು ಗ್ರಾಮೀಣ ಸಮುದಾಯವನ್ನು ಆಡಳಿತದ ತಳಹದಿ ಎಂಬುದನ್ನು ಗುರುತಿಸಿದರು.

ಹೊಸದಾಗಿ ಸ್ಥಾಪಿತವಾದ ಬ್ರಿಟೀಷ್ ಆಡಳಿತದ ಮೊದಲನೆಯ ನಾಗರೀಕ ಕಾಯಿದೆಯು ಗ್ರಾಮೀಣ ಆಡಳಿತಕ್ಕೆ ಸಂಬಂಧಿಸಿದಂತೆ ಭೂಮಾಲಿಕತ್ವ ಮತ್ತು ಕಂದಾಯ ಸಂಗ್ರಹಕ್ಕೆ ಸಂಬಂಧಿಸಿದ ಹೊಸ ಯೋಜನೆಯನ್ನು ರೂಪಿಸುವುದಾಗಿದ್ದಿತು. ಬ್ರಿಟೀಷರು ಇದು ಅಷ್ಟು ಸುಲಭವಾಗಿ ಮಾಡಬಹುದಾದ ಕೆಲಸವಲ್ಲವೆಂಬುದನ್ನು ಮನಗಂಡರು. ಅವರ ಸುತ್ತಲೂ ಪದ್ಧತಿಗಳು, ಲೋಕರೂಢಿಗಳು ಮತ್ತು ಸಂಪ್ರದಾಯಗಳು ಹರಡಿದ್ದು, ಹಿಂಜರಿಯದೆ ಭೂಹಿಡುವಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಯೋಜನೆಯನ್ನು ಕ್ರಮಗೊಳಿಸುವುದು ಬಹಳ ತೊಡಕು ಹಾಗೂ ಕಷ್ಟದಾಯಕವಾಗಿದ್ದಿತು. ಪ್ರತಿವರ್ಷ ಭೂಹಿಡುವಳಿ ವ್ಯವಸ್ಥೆಯ ಬದಲಾವಣೆಯ ಸಮಸ್ಯೆಗಳ ಬಗ್ಗೆ ಅವರು ಜಾಗೃತರಾಗಿದ್ದರು. ಈ ಪ್ರಶ್ನೆಯನ್ನು ನಿರ್ಧರಿಸಲು ಅವರು ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರತಿಯೊಂದನ್ನು ನಿರ್ಧರಿಸಬೇಕಾಗಿದ್ದಿತು. ಭೂಕಂದಾಯವನ್ನು ವಸೂಲಿಮಾಡಲು ಅವರು ಒಂದು ವರ್ಗವನ್ನು ಆಯ್ಕೆಮಾಡಿಕೊಂಡ ಮೇಲೆ, ಸರ್ಕಾರದ ಜೊತೆ ಗ್ರಾಮದ ಬೇರೆ ಇತರೆ ವರ್ಗಗಳೊಂದಿಗೂ ಅವರ ಸ್ಥಾನಮಾನ ಮತ್ತು ಹಕ್ಕುಗಳನ್ನು ಸ್ಪಷ್ಟ ಪಡಿಸಬೇಕಿದ್ದಿತು.

ಹೀಗೆ ಭೂಹಿಡುವಳಿಯ ಗೊತ್ತುಪಡಿಸುವಿಕೆ ಮತ್ತು ವ್ಯವಸ್ಥೆಗೊಳಿಸುವುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಾಮೀಣ ಸಮುದಾಯದ ಜೀವನದ ಮೇಲೆ ಕೇವಲ ಹೊರಗಿನಿಂದಲೇ ಪ್ರಭಾವ ಬೀರಲಿಲ್ಲ. ಜೊತೆಗೆ ಒಳಗಿನಿಂದಲೂ ಪ್ರಭಾವ ಬೀರಿತು. ಗ್ರಾಮದಲ್ಲಿ ಸಾಗುವಳಿ ಮಾಡುವ ವಿವಿಧ ಗುಂಪುಗಳ ಮಧ್ಯೆ ಸಂಬಂಧವನ್ನು ನಿರ್ಧರಿಸುವುದು, ಭೂಮಾಲಿಕತ್ವ ಮತ್ತು ಭೂಮಿಯ ಮೇಲಿನ ಹಕ್ಕುಗಳು ಈ ಗುಂಪುಗಳ ಶ್ರೇಣೀಕೃತ ಸಂಘಟನೆಗೆ ಕಾರಣವಾಯಿತು. ಗ್ರಾಮದಲ್ಲಿ ಒಂದು ನಿರ್ಧಿಷ್ಟ ವರ್ಗದ ಕೇವಲ ಹಕ್ಕಿನ ವಿವರಣೆಯು, ಪ್ರತಿಯೊಂದು ಕೂಡ ಮೌಖಿಕ ಸಂಪ್ರದಾಯದ ಆಧಾರದ ಮೇಲೆ ನಡೆಯುತ್ತಿದ್ದ ಸರಳವಾದ ಗ್ರಾಮೀಣ ಸಂಘಟನೆಯ ಮೇಲೆ ಗಣನೀಯವಾದ ಪ್ರಭಾವ ಬೀರಿತು.

ಆದ್ದರಿಂದ ಬ್ರಿಟೀಷರು ಗ್ರಾಮೀಣ ವ್ಯವಹಾರಗಳಲ್ಲಿ ಪ್ರವೇಶಮಾಡದೆ ತಟಸ್ಥ ನೀತಿಯನ್ನು ಅನುಸರಿಸಿದರು. ಆದಾಗ್ಯೂ ಈ ನೀತಿಯನ್ನು ಅವರು ಹೆಚ್ಚು ಕಾಲದವರೆಗೂ ಅನುಸರಿಸಲಿಲ್ಲ. ಆಡಳಿತದ ಪ್ರಗತಿಪರ ವಿಕೇಂದ್ರೀಕರಣ ಮತ್ತು ತ್ವರಿತವಾಗಿ ಬೆಳೆಯುತ್ತಿದ್ದ ಅಧಿಪತ್ಯದ ನಿರ್ವಹಣೆಯ ಸಂದಿಗ್ಧತೆಯಲ್ಲಿ ಗ್ರಾಮೀಣ ವ್ಯವಹಾರ ಭಾಗಿಯಾಗುವಂತೆ ಮಾಡಿತು.

ಇಂತಹ ಭಾಗಿಯಾಗುವಿಕೆಯು ಇಡೀ ಗ್ರಾಮೀಣ ಸಾಮಾಜಿಕ ಸಂಘಟನೆಗಳ ಮೇಲೆ ತೀವ್ರತರವಾದಂತಹ ಪರಿಣಾಮಗಳನ್ನುಂಟುಮಾಡಿತು. ಬ್ರಿಟೀಷರು ಪ್ರತಿಯೊಂದು ಜಿಲ್ಲೆಗಳಲ್ಲಿಯೂ ನ್ಯಾಯಾಲಯಗಳನ್ನು ಸ್ಥಾಪಿಸಿದರು. ಈ ನ್ಯಾಯಾಲಯಗಳು ಗ್ರಾಮೀಣ ಜೀವನವನ್ನು ನಿರ್ದೇಶಿಸುತ್ತಿದ್ದ ಹಳೆಯ ರೂಢಿಗಳ ಮಾರ್ಗದರ್ಶನದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದವು. ಈ ನ್ಯಾಯಾಲಯಗಳು ಗ್ರಾಮೀಣ ಹಿರಿಯರ ಹೇಳಿಕೆ, ಲೋಕ ರೂಢಿಗಳು ಮತ್ತು ಸಂಪ್ರದಾಯಗಳನ್ನು ಆಧರಿಸಿದ್ದವು. ಭೂಮಿ ಮತ್ತು ಗೇಣಿಯ ಭಾಗ ಇವುಗಳಿಗೆ ಸಂಬಂಧಿಸಿದಂತೆ, ಅವುಗಳ ಆಧಾರದ ಮೇಲೆ ನ್ಯಾಯ ನಿರ್ಣಯಿಸುತ್ತಿದ್ದಂತಹ ವಿವಿಧಪದ್ಧತಿಗಳು ಮತ್ತು ರಿವಾಜುಗಳನ್ನು ಒಳಗೊಂಡಿರುವ ಹಕ್ಕುಗಳ ದಾಖಲೆಗಳನ್ನು ಸಂಗ್ರಹಿಸಿದರು. ಆದರೆ ಇದು ಗ್ರಾಮೀಣ ಮುಖಂಡರ ಸ್ಥಾನ ಮಾನದ ಮೇಲೆ-ಮತ್ತು ಅವರು ಮಾರ್ಗದರ್ಶಿಸಲ್ಪಡುತ್ತಿದ್ದಂತಹ ಸಾಂಪ್ರದಾಯಿಕ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿತು. ಈ ಹಿರಿಯರು ಸಾಕ್ಷ್ಯ ಕೊಡುವಂತೆ ಕರೆದಾಗ ತಮ್ಮ ಪರಂಪರಾಗತ ಸ್ಥಾನಮಾನವನ್ನು ಕಳೆದು ಕೊಂಡರು. ಪಂಚಾಯತಿಗಳು ಈ ಕಳೆದುಕೊಂಡ ಹಿರಿಯರ ನ್ಯಾಯ ಮತ್ತು ಶಾಸನೀಯ ಸಮಿತಿಯ ಸ್ಥಾನಮಾನವನ್ನು ಸಂಯೋಜಿಸಿದವು. ಹಿರಿಯರು ಮತ್ತು ಪಂಚಾಯತಿಗಳು ಸಂಪ್ರದಾಯ(ರೂಢಿ)ವಾಗಿ ಸ್ಥಿರಪಟ್ಟು ಅಲ್ಲಿಂದ ಮುಂದಕ್ಕೆ ಹೊಸದಾಗಿ ಸ್ಥಾಪಿಸಲ್ಪಟ್ಟ ನ್ಯಾಯಾಲಯಗಳ ತೀರ್ಮಾನ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಗಳಲ್ಲಿಯೂ ಸೇರಲ್ಪಟ್ಟವು. ಅಥವಾ ಸಾಕ್ಷ್ಯವನ್ನು ಪಡೆದು ಹಕ್ಕುಗಳ ದಾಖಲೆ ಅಥವಾ ಇತರ ಸರ್ಕಾರಿ ದಸ್ತೈವಜುಗಳಲ್ಲಿ ದಾಖಲಾಗಿದ್ದ ರಿವಾಜುಗಳು ಕಾನೂನುಗಳಾದವು. ಅನಂತರ ನ್ಯಾಯಾಲಯಗಳಿಂದ ನಿರ್ವಹಿಸಲ್ಪಟ್ಟ ಕಾನೂನುಗಳಿಗೆ ವಿಧೇಯತೆಯನ್ನು ತೋರಿಸಲು ಪ್ರಾರಂಭಿಸಿದರು. ನಂತರ ಆವು ಸಾರ್ವಭೌಮಾಧಿಕಾರದ ಆಜ್ಞೆಗಳಾದವು.

ಈ ನ್ಯಾಯಾಲಯಗಳು ತಮ್ಮ ಕಟ್ಟಳೆಗಳನ್ನು ನಿರ್ವಹಿಸುವ ಮತ್ತು ಮಾರ್ಗದರ್ಶನ ನೀಡುವ ಅಧಿಕಾರವನ್ನು ಹೊಂದಿದ್ದವು. ನ್ಯಾಯಾಲಯಗಳ ತೀರ್ಪಿಗೆ ಅವಿಧೇಯರಾಗಿ ನಡೆದುಕೊಂಡು ಉಲ್ಲಂಘಿಸಿದಂತಹ ಸಂದರ್ಭದಲ್ಲಿ ಅಂತಹವರಿಗೆ ದಂಡವನ್ನು ವಿಧಿಸಲಾಗುತ್ತಿತ್ತು. ಹೀಗೆ ಆಜ್ಞೆಗಳಿಗೆ ಅವಿಧೇಯತೆಗೆ ದಂಡವಿಧಿಸುವ ಶಾಸನ ಬಂದಿತು. ಕಾನೂನು ಮತ್ತು ಅಂಗೀಕಾರದಿಂದಾಗಿ ಶಾಸನಬದ್ಧವಾದ ಹಕ್ಕು ಮತ್ತು ಕರ್ತವ್ಯದ ಕಲ್ಪನೆ ಬಂದಿತು.

ಈ ಮೂಲಭೂತ ಬದಲಾವಣೆಯ ಮೇಲೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ಹೆನ್ರಿಮೈನ್‌ರವರು ಹೀಗೆ ಬರೆದಿದ್ದಾರೆ.

"ಆ ಸಂದರ್ಭದಲ್ಲಿ ಭಾರತೀಯ ಜನರ ಮೇಲೆ ಹೆಚ್ಚು ಬದಲಾವಣೆ ತಂದಿತು ಮತ್ತು ಆ ಬದಲಾವಣೆಯು ಅವರನ್ನು ಆಳುವಲ್ಲಿ ಹೆಚ್ಚು ಕಷ್ಟವನ್ನು ಒಡ್ಡಿತು. ನಾನು ಇದನ್ನು ವೈಯಕ್ತಿಕ ಶಾಸನದ ಹಕ್ಕಿನ ಅಂದಿನ ಬೆಳವಣಿಗೆ ಎಂದು ಹೇಳುತ್ತೇನೆ. ಈ ಹಕ್ಕು ಇಡೀ ಸಮೂಹದಲ್ಲಿ ನೆಲೆಸಿರುವುದಿಲ್ಲ, ಆದರೆ ಅಹವಾಲುವುಳ್ಳ ನಿರ್ದಿಷ್ಟ ವ್ಯಕ್ತಿಯಲ್ಲಿರುತ್ತದೆ. ಆತನು ಜಾಗೃತಿ ಹೊಂದಿ ರಾಜ್ಯದ ವ್ಯವಸ್ಥೆಯೊಳಗೆ ಗೊತ್ತುಪಡಿಸಿದ ನಿಯಮದೊಳಗೆ ವಿಧೇಯತೆ ಯನ್ನು ತೋರಿಸುವಂತೆ ತನ್ನ ನೆರೆಹೊರೆಯವರನ್ನು ಒತ್ತಾಯಿಸಬಹುದು."

ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿ ವಿಶ್ಲೇಷಣಾ ನ್ಯಾಯಶಾಸ್ತ್ರದಲ್ಲಿ ಹಕ್ಕು ಅಥವಾ ಕರ್ತವ್ಯದ ವಿಷಯವಿರಲಿಲ್ಲ, ನ್ಯಾಯದ ಪರಿಸ್ಥಿತಿಯಲ್ಲಿ ತೊಂದರೆಗೊಳಗಾದ ವ್ಯಕ್ತಿಯು, ವೈಯಕ್ತಿಕ ತಪ್ಪು ಅಥವಾ ಆತನಿಗೆ ಆದ ಅನ್ಯಾಯಗಳ ಬಗ್ಗೆ ಅವನು ಪಂಚಾಯತಿಗೆ ದೂರು ಸಲ್ಲಿಸುವ ಹಾಗಿರಲಿಲ್ಲ. ಆದರೆ ಸಮಾಜದಲ್ಲಿ ಸಂಪೂರ್ಣವಾಗಿ ಗೊಂದಲ ಉಂಟಾಗುವಂತಹ ತಪ್ಪುಗಳ ಬಗ್ಗೆ ಅವನು ದೂರು ಸಲ್ಲಿಸಬಹುದಾಗಿದ್ದಿತು. ಆದರ ನ್ಯಾಯಾಲಯಗಳನ್ನು ಸ್ಥಾಪಿಸಿದ ಮೇಲೆ ಎಲ್ಲವೂ ಬದಲಾಯಿತು. ಎಲ್ಲಾ ಕಡೆಯಲ್ಲಿಯೂ ವ್ಯಕ್ತಿವಾದವು ಬೆಳೆಯಿತು. ಲಿಖಿತ ಶಾಸನಬದ್ಧ ಕಾನೂನಿನ ಪರಿಚಯವು ವ್ಯಕ್ತಿವಾದವನ್ನು ಎತ್ತಿ ಹಿಡಿಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮುದಾಯದ ಸೋದರತ್ವದ ಬಂಧನವು ದುರ್ಬಲವಾಯಿತು. ಇದು ಇಂಗ್ಲೀಷ್ ಕಾನೂನನ್ನು ಸಂಪೂರ್ಣವಾಗಿ ಮತ್ತು ತಾರತಮ್ಯ ರೀತಿಯಲ್ಲಿ ಪಡೆದು ಆದರ ಪಡಿಯಚ್ಚಿನ ಅನ್ವಯಕ್ಕೆ ಕಾರಣವಾಯಿತು. ವ್ಯಕ್ತಿಯು ಸಮಾಜದ ಪರಿಣಾಮಕಾರಿ ಘಟಕವಾದನು. ಈ ವ್ಯಕ್ತಿವಾದದ ಚೈತನ್ಯವು ಗ್ರಾಮೀಣ ಐಕ್ಯತೆಯನ್ನು ನಾಶಗೊಳಿಸಿತು. ಹೀಗೆ ಪಂಚಾಯತಿಗಳು ತಮ್ಮ ಪ್ರಾಮುಖ್ಯತೆ ಮತ್ತು ಉತ್ಸಾಹವನ್ನು ಕಳೆದುಕೊಂಡು ಕೂಡಲೇ ತಮ್ಮ ಕೆಲಸವನ್ನು ನಿಲ್ಲಿಸಿ ಗ್ರಾಮೀಣ ದೃಶ್ಯದಿಂದ ಮರೆಯಾದವು.

ಪಂಚಾಯಿತಿಗಳ ಪುನರುಜ್ಜೀವನ

ಬಹಳ ವರ್ಷಗಳ ಕಾಲ ಗ್ರಾಮೀಣ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಈ ಗೌರವಾರ್ಹ ಸಂಸ್ಥೆಯ ಅವನತಿಯು ಇತರೆ ಸಂಸ್ಥೆಗಳು ಅವನತಿಯ ಹಾದಿಯನ್ನು ಅನುಸರಿಸಿತು. ಇದು ಭಾವೋದ್ರೇಕಕ್ಕೆ ಒಳಗಾಗದ ಅನೇಕ ಅವಲೋಕನಕಾರರಿಂದ ಸ್ಪಷ್ಟಪಡಿಸಲ್ಪಟ್ಟಿದೆ ಉದಾಹರಣೆಗೆ ಶ್ರೀ ಜೇಮ್ಸ್ ಕೈರ್ಡ್‌ರವರನ್ನು ಗ್ರಾಮೀಣ ಸಮುದಾಯದ ಮೇಲೆ ವರದಿ ಮಾಡುವಂತೆ ಕೇಳಿಕೊಂಡಾಗ, ಅವರು ಗಮನಿಸಿದಂತೆ ಪಂಚಾಯತಿಯಂತಹ ಸಾಂಪ್ರದಾಯಿಕ ಸಂಸ್ಥೆಗಳ ಅವನತಿಯು ಇಡೀ ಗ್ರಾಮೀಣ ವ್ಯವಸ್ಥೆಯ ಸಾಮಾಜಿಕ ಜೀವನದ ಅವನತಿಗೆ ಮತ್ತೆ ನಿರ್ದಿಷ್ಟವಾಗಿ ಕೃಷಿಯ ಅಪಾಯದ ಸ್ಥಿತಿಗೆ ಮುಖ್ಯ ಕಾರಣವಾಗಿದ್ದಿತು. ಡಾ॥ ಸ್ಯಾಂಡರ್‌ಸನ್‌ರವರು ಸ್ಪಷ್ಟವಾಗಿ ಆ ಪರಿಸ್ಥಿತಿಯನ್ನು ಈ ಕೆಳಕಂಡಂತೆ ಹೇಳಿದ್ದಾರೆ: ಗ್ರಾಮಗಳ ಮೇಲೆ ಡಾ॥ ಸ್ಲೇಟರ್‌ರವರು ಮಾಡಿರುವ ಅಧ್ಯಯನದಿಂದ ವಿದ್ಯಾರ್ಥಿಗಳು, ಕೊನೆಯ ಪಕ್ಷ ದಕ್ಷಿಣಭಾರತದಲ್ಲಿದ್ದಂತ ಗ್ರಾಮಪಂಚಾಯತಿಗಳು ಗ್ರಾಮೀಣ ವ್ಯವಹಾರಗಳು ಗ್ರಾಮೀಣ ನಾಯಕನಿಂದ ಮತ್ತು ಲೆಕ್ಕಿಗರಿಂದ ನಿರ್ವಹಿಸಲ್ಪಡುತ್ತಿದ್ದುದ್ದು ಅವನತಿಯಾದುದರಿಂದಲೇ ಗ್ರಾಮೀಣ ಐಕ್ಯತೆಯು ನಾಶವಾಗಿ ಗ್ರಾಮೀಣ ಸಂಸ್ಕೃತಿಯ ಮಟ್ಟವು ತುಂಬಾ ಕೆಳ ಮಟ್ಟಕ್ಕೆ ಇಳಿಯಿತು ಎಂಬುದನ್ನು ಕಂಡುಕೊಳ್ಳಬಹುದು.

19ನೇ ಶತಮಾನದ ಮಧ್ಯಭಾಗದಲ್ಲಿ ಪಂಚಾಯತಿಗಳು ಅವನತಿ ಹೊಂದಿದವು. ಬ್ರಿಟೀಷರು ಕೂಡಲೇ ಸಮುದಾಯ ಜೀವನದ ಸಂಘಟನೆಯಲ್ಲಿ ಈ ಪಂಚಾಯತಿಗಳ ಪ್ರಾಮುಖ್ಯತೆಯನ್ನು ಮನಗಂಡರು. ಯಾವುದೇ ಸ್ಥಳೀಯ ಸರ್ಕಾರದ ಗೈರುಹಾಜರಿಯಲ್ಲಿ, ಗ್ರಾಮೀಣ ಸಮುದಾಯಗಳ ಶಾಂತಿ ಮತ್ತು ವ್ಯವಸ್ಥೆಯನ್ನು ಕಾಪಾಡುವುದು ತುಂಬಾ ಕಷ್ಟದಾಯಕವಾಯಿತು. ಬ್ರಿಟೀಷರು ಗ್ರಾಮೀಣ ವ್ಯವಹಾರಗಳನ್ನು ನಿರ್ವಹಿಸಲು ಕೆಲವು ಅಧಿಕಾರಿಗಳನ್ನು ನೇಮಿಸಿದ್ದಾಗ್ಯೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಾಮಸ್ಥರು ಇಂತಹ ಕ್ರಮದಿಂದ ಅಸಮಾಧಾನಗೊಂಡರು. ಇದು ಕೃಷಿ ಮತ್ತು ಇತರೆ ಉದ್ದಿಮೆಗಳ ಮೇಲೆ ಬಹಳ ಪ್ರತಿಕೂಲ ಪರಿಣಾಮವನ್ನುಂಟುಮಾಡಿತು. ಹೀಗೆ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಮೇಲೂ ಪರಿಣಾಮ ಬೀರಿತು. ಇದರಿಂದಾಗಿ ಬಹಳ ಬೇಗ ಬ್ರಿಟೀಷರು, ಗ್ರಾಮೀಣಜೀವನದ ತ್ವರಿತ ಕ್ಷೀಣಿಸುವಿಕೆಯನ್ನು ತಡೆಗಟ್ಟಲು ಪ್ರಾಚೀನ ಸ್ಥಳೀಯ ಸ್ವಯಂ ಸರ್ಕಾರ ಸಂಸ್ಥೆಗಳನ್ನು ಪುನರುಜ್ಜೀವನ ಗೊಳಿಸಲು ಏನಾದರೊಂದನ್ನು ಮಾಡಬೇಕೆಂಬುದನ್ನು ಮನಗಂಡರು.

ಪುನರುಜ್ಜೀವನಗೊಳಿಸುವ ಪ್ರಯತ್ನಗಳು

ಸ್ಥಳೀಯ ಸ್ವಯಂ ಸರ್ಕಾರಗಳನ್ನು ಸ್ಥಾಪಿಸುವ ಪ್ರಮುಖ ಪ್ರಯತ್ನವೊಂದು 1687ರಲ್ಲಿ ಮದ್ರಾಸ್ ನಗರದಲ್ಲಿ ನಡೆಯಿತು. ಆ ವರ್ಷದ ಅವಧಿಯಲ್ಲಿ ನಿರ್ದೇಶಕರ ಮಂಡಳಿಯು ಬ್ರಿಟೀಷ ಮತ್ತು ಭಾರತೀಯ ಸದಸ್ಯರುಗಳನ್ನೊಳಗೊಂಡ ಕಾರ್ಪೋರೇಷನ್ ಸ್ಥಾಪಿಸಲು ಆದೇಶ ನೀಡಿತು. ಇದನ್ನು ಸ್ಥಳೀಯ ತೆರಿಗೆಯ ದೃಷ್ಟಿಯಿಂದ ರಚಿಸಲಾಯಿತು. ನಿರ್ದೇಶಕರುಗಳ ನ್ಯಾಯಾಲಯ ಮಹತ್ವದ ಉದ್ದೇಶವು ಸ್ಥಳೀಯ ಸರ್ಕಾರಗಳನ್ನು ಅದರ ಪುನರುಜ್ಜೀವನಗೊಳಿಸುವುದಾಗಿರದೆ ಹೆಚ್ಚು ತೆರಿಗೆಯನ್ನು ಹಾಕಿ ಆದಾಯವನ್ನು ಹೆಚ್ಚಿಸುವುದಾಗಿದ್ದಿತು. ಬ್ರಿಟೀಷ್ ಮತ್ತು ಭಾರತೀಯ ಸದಸ್ಯರನ್ನು ಒಳಗೊಂಡು 1688ರಲ್ಲಿ ರೂಪುಗೊಂಡ ಮದ್ರಾಸ್ ಕಾರ್ಪೋರೇಷನ್ ಇಂಗ್ಲೆಂಡಿನ Country councils ಮಾದರಿಯಲ್ಲಿದ್ದಿತು. ಆದರೆ ಈ ಕಾರ್ಪೋರೇಷನ್‌ನ ಪ್ರಯತ್ನವು ಸ್ವಲ್ಪಕಾಲ ಮಾತ್ರ ಇದ್ದು ಯಶಸ್ಸಿನಿಂದ ಕೂಡಿರಲಿಲ್ಲ. ನೇರ ತೆರಿಗೆಯನ್ನು ಹಾಕಿದುದರ ವಿರುದ್ಧ ಪ್ರಬಲವಾದ ಪ್ರತಿಭಟನೆಯು ಇದರ ವಿಫಲತೆ ಮುಖ್ಯ ಕಾರಣವಾಯಿತು.

1726ರಲ್ಲಿ ಕಾರ್ಪೋರೇಷನ್‌ನಲ್ಲಿ ಮೇಯರ್‌ನ ಅಧಿಕಾರ ಸ್ಥಾಪನೆಯಾಯಿತು. ಈ ಕಚೇರಿಯು ಆಡಳಿತಾತ್ಮಕವಾಗಿ ಕಾರ್ಯ ನಿರ್ವಹಿಸುವುದಕ್ಕಿಂತ ಹೆಚ್ಚಾಗಿ ನ್ಯಾಯಲಯವಾಗಿದ್ದಿತು. 1721ರಲ್ಲಿ ಇದೇ ರೀತಿಯ ಸಂಸ್ಥೆಗಳು ಬೊಂಬಾಯಿ ಮತ್ತು ಕಲ್ಕತ್ತಾದಲ್ಲಿ ಸ್ಥಾಪಿಸಲ್ಪಟ್ಟವು. 1793ರಲ್ಲಿ ಚಾರ್ಟರ್ ಆಕ್ಟ್ ಜಾರಿಗೆ ತರಲಾಯಿತು. ಇದು ಮದ್ರಾಸ್, ಬೊಂಬಾಯಿ ಮತ್ತು ಕಲ್ಕತ್ತಾ ನಗರಗಳಿಗೆ ಶಾಂತಿ ಕಾಪಾಡಲು ನ್ಯಾಯಾಧೀಶರುಗಳನ್ನು ನೇಮಿಸುವಂತಹ ಅಧಿಕಾರವನ್ನು ಗವರ್ನರ್ ಜನರಲ್‌ಗೆ ಕೊಟ್ಟಿತು. ಈ ನ್ಯಾಯಾಧೀಶರುಗಳು ನೈರ್ಮಲ್ಯ, ಪೋಲೀಸ್ ಮತ್ತು ರಸ್ತೆಗಳ ನಿರ್ಮಾಣ ಮುಂತಾದವುಗಳ ವೆಚ್ಚವನ್ನು ಭರಿಸಲು ಮನೆ ಮತ್ತು ಭೂಮಿಯ ಮೇಲೆ ತೆರಿಗೆಯನ್ನು ಹಾಕುವಂತಹ ಅಧಿಕಾರವನ್ನು ಹೊಂದಿದ್ದರು. ಮುಖ್ಯವಲ್ಲದ ಪಟ್ಟಣಗಳಲ್ಲಿ ಮುನಿಸಿಪಾಲಿಟಿಗಳ ಸ್ಥಾಪನೆಯು 1942ರ ಬಂಗಾಳದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಯಿದೆಯೊಂದಿಗೆ ಪ್ರಾರಂಭವಾಯಿತು. ಈ ಕಾಯಿದೆಯು ಮುನಿಸಿಪಾಲಿಟಿಯನ್ನು ಐಚ್ಛಿಕ ಸಿದ್ಧಾಂತ (ಸೂತ್ರ)ವನ್ನು ಆಧರಿಸಿತ್ತು. ಒಂದು ಪಟ್ಟಣದಲ್ಲಿ ಮುನಿಸಿಪಾಲಿಟಿಯನ್ನು ಸ್ಥಾಪಿಸಲು ಆ ಪಟ್ಟಣದ ಮೂರನೆ ಎರಡು ಭಾಗದಷ್ಟು ಕುಟುಂಬಗಳ ಒಪ್ಪಿಗೆ ಅನ್ವಯಿಸಬೇಕಿತ್ತು. ಇಲ್ಲಿಯೂ ಕೂಡ ಪುನಃ ತೆರಿಗೆಯನ್ನು ವಿಧಿಸುವುದು ಮುನಿಸಿಪಾಲಿಟಿಗಳ ಮುಖ್ಯ ಕಾರ್ಯವಾಯಿತು. ಈ ಕಾರಣದಿಂದಾಗಿಯೇ ಕಾನೂನು ಹೆಚ್ಚು ಮಾನ್ಯತೆಯನ್ನು ಪಡೆಯಲಿಲ್ಲ ಕಾಯಿದೆಯು ಕಾರ್ಯಾತ್ಮಕವಾಗಿರಲಿಲ್ಲ ಹೀಗೆ ಇವು ನೇರ ತೆರಿಗೆಯನ್ನು ಹಾಕಿದ್ದರಿಂದಲೇ ನಿರರ್ಥಕವಾದವು.

ಆದ್ದರಿಂದ 1850ರಲ್ಲಿ ಪಟ್ಟಣದ ಸಮಿತಿಗಳಲ್ಲಿ ಸ್ಥಳೀಯ ಕಾರ್ಯಗಳನ್ನು ನಿರ್ವಹಿಸಲು ಒಂದು ಹೊಸ ಕಾಯಿದೆಯನ್ನು ಜಾರಿಗೆ ತರಲಾಯಿತು. ಸ್ಥಳೀಯ ಕಾರ್ಯ ಸಹಾಯಕ ಆರೋಗ್ಯ ರಕ್ಷಣೆ. ರಸ್ತೆರಿಪೇರಿ. ಬೆಳಕಿನ ಸೌಲಭ್ಯ ಒದಗಿಸುವುದು ಮತ್ತು ನೀರು ಪೂರೈಕೆ ಮೊದಲಾದುವುಗಳನ್ನು ಒಳಗೊಂಡಿದ್ದಿತು ಅವು ಸಹ ಪರೋಕ್ಷ ತೆರಿಗೆಯನ್ನು ಹಾಕುವಂತಹ ಅಧಿಕಾರವನ್ನು ಹೊಂದಿದ್ದವು. ಈ ಕಾಯಿದೆಯು ಭಾರತದ ಅನೇಕ ಪಟ್ಟಣ ಮತ್ತು ನಗರಗಳಲ್ಲಿ ಕಾರ್ಯರೂಪಕ್ಕೆ ಬಂದಿತು. ಸ್ಥಳೀಯ ಸ್ವಯಂ ಸರ್ಕಾರಗಳನ್ನು ಸ್ಥಾಪಿಸಲು ನೇರ ಪ್ರಯತ್ನವು 1870ರಲ್ಲಿ ಲಾರ್ಡ್‌ಮೇಯೋ ಅವರಿಂದ ಮಾಡಲ್ಪಟ್ಟಿತು. ಕೇಂದ್ರ ಸರ್ಕಾರವು ವೈದ್ಯಕೀಯ ಸೇವೆ, ರಸ್ತೆಗಳ ನಿರ್ವಹಣೆ ಮುಂತಾದ ಕೆಲವು ಇಲಾಖೆಗಳ ಆಡಳಿತವನ್ನು ಪ್ರಾಂತೀಯ ಸರ್ಕಾರಗಳಿಗೆ ವಹಿಸುವ ಒಂದು ಮುಸೂದೆಯನ್ನು ಜಾರಿಗೊಳಿಸಯಿತು ಈ ಸ್ಥಳೀಯ ಸಂಸ್ಥೆಗಳು ವೆಚ್ಚದ ಒಂದು ಭಾಗವನ್ನು ಭರಿಸಲು ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ಪಡೆದಿದ್ದವು.

ಸ್ಥಳೀಯ ಸ್ವಯಂ ಸರ್ಕಾರಗಳ ಪರವಾಗಿ 1880ರ ಕ್ಷಾಮ ವಿಚಾರಣಾ ಆಯೋಗವು ಒಂದು ಮುಖ್ಯವಾದ ಶಿಫಾರಸ್ಸು ಮಾಡಿತು. ಆಯೋಗವು ಈ ಕೆಳಕಂಡ ಅಂಶಗಳನ್ನು ಗಮನಿಸಿದ್ದಿತು. ''ಭಾರತದ ಹೆಚ್ಚು ಭಾಗಗಳಲ್ಲಿ ಕೆಲವು ಗ್ರಾಮೀಣ ಸಂಘಟನೆಗಳು ಅಸ್ತಿತ್ವದಲ್ಲಿದ್ದು ಅವು ಅಮುಖ್ಯವಾಗಿದ್ದರೂ ಸಹ ಕ್ಷಾಮವನ್ನು ನಿಭಾಯಿಸುವಲ್ಲಿ ದೇಶಿಯವಾದಂತಹ ಪ್ರಯತ್ನಗಳನ್ನು ನಡೆಸಿವೆ. ಈ ಸಾಧನ ಎಲ್ಲಿ ಹಾಜರಿದ್ದವೋ ಅಲ್ಲೆಲ್ಲ ಅವುಗಳನ್ನು ಬಲಪಡಿಸುವುದರ ಬಗ್ಗೆ ವಿಶೇಷವಾದ ಗಮನಕೊಡಬೇಕು. ಇದರಿಂದ ಅವುಗಳು ಗ್ರಾಮೀಣ ಸುಧಾರಣೆಯಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲು ಅನುಕೂಲವಾಗುತ್ತದೆ. ದೇಶದ ಏಳಿಗೆಯ ದೃಷ್ಟಿಯಿಂದ ಸ್ಥಳೀಯ ಸ್ವಯಂ ಸರ್ಕಾರಗಳಿಗೆ ಪ್ರೋತ್ಸಾಹವನ್ನು ಕೊಡಬೇಕು ಹಾಗೂ ಎಲ್ಲ ಕಾರ್ಯಗಳನ್ನು ಸಹ ಗ್ರಾಮೀಣ ಸಂಸ್ಥೆಗಳಿಗೆ ವಹಿಸಬೇಕು, ಆಗ ಗ್ರಾಮೀಣ ಸುಧಾರಣೆಯು ಸಾಧ್ಯವಾಗುವುದು.''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದು ಇಂತಹ ಗ್ರಾಮೀಣ ಸಂಸ್ಥೆಗಳು ಗ್ರಾಮೀಣ ಸುಧಾರಣೆಯಲ್ಲಿ ಪ್ರಯೋಜನ ಕಾರಿಯಾಗಬೇಕು ಎಂದು ಶಿಫಾರಸ್ಸು ನೀಡಿತು. ಈ ಶಿಫಾರಸ್ಸಿಗನುಸಾರವಾಗಿ ಗ್ರಾಮೀಣ ಸಂಸ್ಥೆಗಳು ಕ್ಷಾಮವನ್ನು ನಿಯಂತ್ರಿಸುವ ಕಾರ್ಯಗಳನ್ನು ಕೈಗೊಂಡವು.

ಮುಂದಿನ ಬೆಳವಣಿಗೆಗಳು :

ಸ್ಥಳೀಯ ಸ್ವಯಂ ಸರ್ಕಾರ ಸಂಸ್ಥೆಗಳ ಬೆಳವಣಿಗೆಯ ಪ್ರಕ್ರಿಯೆಯಲ್ಲಿ 1882ನೇ ಇಸವಿಯು ಮುಖ್ಯವಾದ ಹಂತವಾಗಿದೆ. ಲಾರ್ಡ್ ರಿಪ್ಪನ್ ಜನತೆಗೆ ರಾಜಕೀಯ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಸ್ವಯಂ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರವನ್ನು ಪ್ರತಿಪಾದಿಸುವ ಮಸೂದೆಯೊಂದನ್ನು ಜಾರಿಗೆ ತಂದನು. ಲಾರ್ಡ್ ರಿಪ್ಪನ್ ಆಧುನಿಕ ಶಿಕ್ಷಣ ಪಡೆಯುವುದರೊಂದಿಗೆ ಬುದ್ಧಿವಂತ ಮತ್ತು ಸ್ವದೇಶಾಭಿಮಾನವುಳ್ಳ ವರ್ಗವು ಬ್ರಿಟಿಷರೊಂದಿಗೆ ರಾಜ್ಯಾಡಳಿತದ ದುಸ್ಸಾಧ್ಯವಾದ ಮತ್ತು ವಿವಾದಾತ್ಮಕವಾದಂತಹ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದನು. ಸರ್ಕಾರದ ವ್ಯವಹಾರಗಳಲ್ಲಿ ಭಾಗವಹಿಸುವಂತೆ ವಿದ್ಯಾವಂತ ಭಾರತೀಯರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮಸೂದೆಯು ಚುನಾಯಿತ ಸದಸ್ಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಿನ ಮಹತ್ವವನ್ನು ಕೊಟ್ಟಿತು.

ಆದಾಗ್ಯೂ, ಶಿಫಾರಸ್ಸಿನ ಪ್ರಕಾರ ಈ ಸ್ಥಳೀಯ ಸಂಸ್ಥೆಗಳ ಘಟಕ ತಾಲ್ಲೂಕು ಆಗಿದ್ದಿತೆ ವಿನಃ ಗ್ರಾಮವಾಗಿರಲಿಲ್ಲ. ಹೀಗೆ ಮಸೂದೆಯು ಗ್ರಾಮ ಪಂಚಾಯತಿಗಳ ಪುನರುಜ್ಜೀವನವನ್ನು ಅಪೇಕ್ಷಿಸಲಿಲ್ಲ. ಆದ್ದರಿಂದ ಈ ಮಸೂದೆಯ ಸಂಪೂರ್ಣ ಫಲಿತಾಂಶವು ಎರಡು ಹಂತದ ಪದ್ಧತಿಯ ಆಡಳಿತವನ್ನು, ಜಿಲ್ಲಾಮಟ್ಟದಲ್ಲಿ ಜಿಲ್ಲೆಯ ಎಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಎಲ್ಲೆಗಳ ಸೃಷ್ಟಿಗೆ ಕಾರಣವಾಯಿತು. ಈ ಸ್ಥಳೀಯ ಸಂಸ್ಥೆಗಳು ಅನೇಕ ಕರ್ತವ್ಯಗಳನ್ನು ಹೊಂದಿದ್ದ ಸರ್ಕಾರದಿಂದ ಎಲ್ಲಾ ರೀತಿಯ ಬೆಂಬಲವನ್ನು ಪಡೆಯುವಂತಿದ್ದರೂ ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗೂ ನಿಜವಾದ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದದೆ ನಾಮಮಾತ್ರ ಸಂಸ್ಥೆಗಳಾಗಿದ್ದವು. ತಮ್ಮ ನಿಧಿಯನ್ನು ಬಟವಾಡೆ ಮಾಡಲು ಅವುಗಳು ನಿಜವಾದ ಅಧಿಕಾರವನ್ನು ಹೊಂದಿರಲಿಲ್ಲ. ಇದನ್ನು ವಿಸುವುದು ಮತ್ತು ವೆಚ್ಚ ಮಾಡುವುದು ಪ್ರತ್ಯೇಕವಾಗಿ ಸರ್ಕಾರದಿಂದ ನಡೆಸಲ್ಪಡುತ್ತಿತ್ತು. ಹೀಗೆ ಸರ್ಕಾರದ ಬಿಗಿಯಾದ ನಿಯಂತ್ರಣವು ಈ ಸ್ಥಳೀಯ ಸಂಸ್ಥೆಗಳನ್ನು ದಮನ ಮಾಡಿದವು. ಸರ್ಕಾರದ ಇಂತಹ ಅನುಪಯುಕ್ತ ಕಾರ್ಯದ ಮೇಲೆ ಟೀಕಿಸುತ್ತಾ ಡ್ರುಮಂಡ್‌ರವರು ಇದಕ್ಕೆ ಕಾರಣವೆಂದರೆ ರಾಜ್ಯಾಡಳಿತಕ್ಕೆ ತಳಹದಿಯಾಗಿದ್ದ ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಪ್ರಾರಂಭದಿಂದಲೂ ತೀರ ಉದಾಸೀನದಿಂದ ಕಂಡದ್ದು, ಶಾಸನ ರೂಪಿಸುವವರು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕ್ರಮಪಡಿಸಿದ ಭಾವಣೆಯನ್ನು ರೂಪಿಸಿದರು. ಆದರೆ ಗೋಡೆಗಳನ್ನು ದುರ್ಬಲವಾಗಿ ನಿರ್ಮಿಸಿ ತಳಹದಿಯನ್ನು ಬಿಟ್ಟರು" ಎಂಬುದಾಗಿ ನುಡಿದಿದ್ದಾರೆ.

ದೊರೆ ಎಡವರ್ಡ್-VIIನಿಂದ ವಿಕೇಂದ್ರೀಕರಣದ ಮೇಲೆ ನೇಮಕ ಮಾಡಲ್ಪಟ್ಟ ರಾಯಲ್ ಆಯೋಗವು 1907-08ರಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳ ಸಂಪೂರ್ಣ ವಿಷಯವನ್ನು ಪುನರ್ವಿಮರ್ಶಿಸಿತು. ಈ ಆಯೋಗವು ಐದು ಜನ ಆಂಗ್ಲರನ್ನು ಮತ್ತು ಒಬ್ಬ ಭಾರತೀಯರಾದ ಚಂದ್ರದತ್ತರನ್ನು ಒಳಗೊಂಡಿದ್ದಿತು. ಅವರು ಭಾರತದ ಹೆಚ್ಚು ಭಾಗದಲ್ಲಿ ಗ್ರಾಮವು ಸರ್ಕಾರ ಸಂಘಟನೆಯಲ್ಲಿ ಪ್ರಾಥಮಿಕ ಭೌಗೋಳಿಕ ಘಟಕವಾಗಿ ಸಂಯೋಗವಾಗಿದ್ದಿತು ಮತ್ತು ಅವು ಆಡಳಿತದ ಅಸ್ಥಿತ್ವವನ್ನು ರೂಪಿಸಿದವು ಎಂಬುದನ್ನು ಗುರುತಿಸಿದರು. ಆಯೋಗವು ಹೀಗೂ ಕೂಡ ಗಮನಿಸಿತು :

ಈ ಗ್ರಾಮಗಳು ಪ್ರಾರಂಭದಲ್ಲಿ ಹೆಚ್ಚಿನ ಸ್ವಯಮಾಧಿಕಾರವನ್ನು ಹೊಂದಿದ್ದವು. ಆದರೆ ಸ್ಥಳೀಯ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳ ಸ್ಥಾಪನೆ ಪ್ರಸ್ತುತದ ರೆವಿನ್ಯೂ ಮತ್ತು ಪೋಲೀಸ್ ಸಂಘಟನೆ. ಸಮಾಚಾರ ಮಾಧ್ಯಮಗಳ ಬೆಳವಣಿಗೆ, ವ್ಯಕ್ತಿವಾದದ ಬೆಳವಣಿಗೆ ಮತ್ತು ಉತ್ತರ ಭಾರತದಲ್ಲಿಯೂ ಸಹ ಹರಡಿದಂತಹ ವೈಯಕ್ತಿಕ ರೈತವಾರಿ ಪದ್ಧತಿಯ ಕೃಷಿ ಮುಂತಾದವುಗಳಿಂದಾಗಿ ಅವುಗಳ ಅಧಿಕಾರವು ಅಳಿಸಿಹೋಯಿತು. ಆದರೂ ಗ್ರಾಮವು ಆಡಳಿತದ ಪ್ರಥಮ ಘಟಕವಾಗಿ ಉಳಿಯಿತು. ಗ್ರಾಮದ ಮುಖ್ಯ ಅಧಿಕಾರಿಗಳಾದ, ಪ್ರಮುಖ ವ್ಯಕ್ತಿ (ನಾಯಕ) ಲೆಕ್ಕಿಗ ಮತ್ತು ಗ್ರಾಮದ ಕಾವಲುಗಾರರನ್ನು ಸರ್ಕಾರವು ಬಳಸಿಕೊಂಡು ಅವರಿಗೆ ಸಂಭಾವನೆಯನ್ನು ಕೊಟ್ಟಿತು ಹೀಗಿದ್ದರೂ ಇನ್ನೂ ಕೂಡ ಸ್ವಲ್ಪ ಪ್ರಮಾಣದಲ್ಲಿ ಗ್ರಾಮದ ಸಾಂಘಿಕ ಭಾವನೆ ಮತ್ತು ಹಿತಾಸಕ್ತಿಯೂ ಉಳಿಯಿತು.

ಆಯೋಗವು ಗಮನಿಸಿದಂತೆ ಭಾರತದಲ್ಲಿ ಗ್ರಾಮ ಸಮುದಾಯಗಳು ಹೆಚ್ಚು ಐಕ್ಯತೆಯನ್ನು ಹೊಂದಿಲ್ಲ ಮತ್ತು ಅವುಗಳು ಇನ್ನೂ ಕೂಡ ಸರ್ಕಾರದ ಗಮನಾರ್ಹ ಘಟಕಗಳಾಗಿಲ್ಲ. ಹೀಗಿದ್ದಾಗ್ಯೂ ಹೆಚ್ಚು ಜನರ ಅಭಿಪ್ರಾಯದಂತೆ ಪುನಃ ಮೊದಲಿನ ಹಾಗೆಯೇ ಪಂಚಾಯತಿಗಳನ್ನು ಪುನರುಜ್ಜೀವನಗೊಳಿಸುವುದರ ಅವಶ್ಯಕತೆ ಇದೆ. ಈ ಎರಡು ಅಭಿಪ್ರಾಯಗಳನ್ನು ತುಲನೆಮಾಡಿ ಗ್ರಾಮೀಣ ಆಡಳಿತಕ್ಕೆ ಪಂಚಾಯತಿಗಳನ್ನು ಸಂಯೋಜಿಸುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಿತು. ಇದು ಗಮನಿಸಿದಂತೆ :

"ಸಮುದಾಯದ ಪ್ರತಿಯೊಬ್ಬ ಸದಸ್ಯರಿಗೂ ಜವಾಬ್ದಾರಿಯಾಗಿರುವಂತಹ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಮತ್ತು ಪ್ರತಿಯಾಗಿ ಅವನ ವರ್ತನೆಯನ್ನು ನಿಯಂತ್ರಿಸುವ ಯಥೋಚಿತವಾದಂತಹ ಪ್ರಾಚೀನ ಗ್ರಾಮೀಣ ವ್ಯವಸ್ಥೆಯನ್ನು ಪುನಃ ಸ್ಥಾಪಿಸುವುದು ಸಾಧ್ಯ ಎಂದು ನಾವು ಯೋಚಿಸುವ ಹಾಗಿಲ್ಲ. ಆದರೆ ನಾವು ಜನರನ್ನು ಸ್ಥಳೀಯ ಆಡಳಿತದಲ್ಲಿ ಭಾಗಿಯಾಗುವಂತೆ ವಿಕೇಂದ್ರೀಕರಣ ವ್ಯವಸ್ಥೆ ಹೊಂದಬೇಕಾದುದು ಹೆಚ್ಚು ಅಪೇಕ್ಷಣೀಯವಾದುದು ಗ್ರಾಮೀಣ ಪಂಚಾಯತಿಗಳನ್ನು ನಿಯೋಜಿಸಲು ಮತ್ತು ಅಭಿವೃದ್ಧಿ ಪಡಿಸಲೋಸುಗ ಪ್ರಯತ್ನವೊಂದನ್ನು ಮಾಡಬೇಕಾಗಿದೆ'' ಆಯೋಗವು ಹೀಗೆ ಹೇಳುತ್ತಾ :

''ಜನರು ಆಡಳಿತದೊಂದಿಗೆ ಭಾಗವಹಿಸುವಿಕೆಯು ಯಾವುದೇ ಸದನದ ಭದ್ರ ತಳಹದಿಯು ಗ್ರಾಮವಾಗಿರಬೇಕು. ತಪಸಿಲ್‌ಗಳು ಮುಂತಾದವುಗಳ ಆಡಳಿತದ ಸೃಷ್ಟಿಗಿಂತಲೂ ಹೆಚ್ಚಿನ ಪ್ರಾಚೀನತೆ ಪಡೆದ ಸಂಸ್ಥೆಯಾಗಿದ್ದು ಮತ್ತು ಜನರಲ್ಲಿ ಪರಸ್ಪರ ಗೊತ್ತಿದ್ದು, ನೀರು ಪೂರೈಕೆ, ನಾಲೆಗಳ ವ್ಯವಸ್ಥೆ ಮುಂತಾದ ನಿರ್ದಿಷ್ಟ ಮತ್ತು ಸುಸಂಘಟಿತ ಗುರಿಗಳನ್ನು ನೆರವೇರಿಸಲು ಜನರು ಪರಸ್ಪರ ಪರಿಚಯವಿರಬೇಕು ಮತ್ತು ಒಂದೇ ರೀತಿಯ ಹಿತಾಸಕ್ತಿಗಳನ್ನು ಹೊಂದಿರಬೇಕು ಎಂದು ನಾವು ಅಭಿಪ್ರಾಯಪಡಬಹುದು. ನಿಜವಾಗಿಯೂ ಇಂದು ಸ್ವಯಂ ಸರ್ಕಾರ ಪದ್ಧತಿಯು ಯಶಸ್ವಿಯಾಗದಿರಲು ಕಾರಣವೆಂದರೆ ಅವುಗಳನ್ನು ನಾವು ತಳಹದಿಯಿಂದ ನಿರ್ಮಿಸಿರುವುದಿಲ್ಲ.''

ಜಾತಿ ಮತ್ತು ಧಾರ್ಮಿಕ ವಿವಾದಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮತ್ತು ಗ್ರಾಮೀಣ ಪಂಗಡಗಳಿಂದ ಉಂಟಾಗುವ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಕಷ್ಟಗಳಿರುವುದನ್ನು ಆಯೋಗವು ವಿಶ್ಲೇಷಿಸಿತು. ಆದಾಗ್ಯೂ ಆಯೋಗವು ಈ ಕಷ್ಟಗಳು ಎದುರಿಸಲು ಸಾಧ್ಯವಾಗದಂತಹವುಗಳೇನಲ್ಲ ಎಂಬುದನ್ನು ಒಪ್ಪಿಕೊಂಡಿತು. ಆಯೋಗವು ಒಂದು ಹಳ್ಳಿಯು ಪಂಚಾಯತಿಯ ಸಾಮಾನ್ಯ ಘಟಕವಾಗಿರಬೇಕು ಮತ್ತು ಸದಸ್ಯರ ಸಂಖ್ಯೆ ಸರಾಸರಿ 5 ಇರಬೇಕೆಂದು ಶಿಫಾರಸ್ಸು ಮಾಡಿತು. ಆದರೂ ಸ್ಥಳೀಯ ಮಾರ್ಪಾಟುಗಳಿಗೆ ಅವಕಾಶವಿದ್ದಿತು ಮತ್ತು ಗ್ರಾಮ ಪ್ರಮುಖನನ್ನು ಪಂಚಾಯತಿಯ ಅಧಿಕಾರಯುಕ್ತ ಅಧ್ಯಕ್ಷ ಮತ್ತು ಗ್ರಾಮದ ಹೆಚ್ಚು ಪ್ರಭಾವಿ ವ್ಯಕ್ತಿಯಾಗಿರಬೇಕು ಎಂಬುದಾಗಿಯೂ ಸಹ ಶಿಫಾರಸ್ಸು ಮಾಡಿತು. ಆಯೋಗವು ಗ್ರಾಮೀಣ ಸಮಿತಿಯ ಸದಸ್ಯರು ಅಧಿಕಾರಿಗಳ ಮಾರ್ಗದರ್ಶನದಲ್ಲಿ ಗ್ರಾಮದಿಂದ ಅನೌಪಚಾರಿಕವಾಗಿ ಆಯ್ಕೆಯಾಗಬೇಕೆಂದು ನಿರ್ಧರಿಸಿತು.

ಪಂಚಾಯಿತಿಗಳ ಅಧಿಕಾರಾವಧಿಯನ್ನು ಗೊತ್ತುಪಡಿಸಿರಲಿಲ್ಲ. ಆದರೆ ಆಗಾಗ್ಗೆ ಚುನಾವಣೆಗಳನ್ನು ನಡೆಸುವುದು ಅಪೇಕ್ಷಣೀಯ ಎಂಬುದಾಗಿ ಅಭಿಪ್ರಾಯಪಡಲಾಯಿತು. ಪಂಚಾಯತಿಗಳ ಕಾರ್ಯಗಳು ಅನುಕ್ರಮವಾಗಿ ಮತ್ತು ಮುಂಜಾಗ್ರತವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇರಬೇಕೆಂದು ಶಿಫಾರಸ್ಸು ಮಾಡಿತು. ಕಾರ್ಯಗಳನ್ನು ಈ ಕೆಳಕಂಡಂತೆ ನಿರ್ದಿಷ್ಟ ಪಡಿಸಿತು.

1) ಸಣ್ಣ ಮೊಕದ್ದಮೆಗಳ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಧಿಕಾರ

2) ಗ್ರಾಮೀಣ ನೈರ್ಮಲ್ಯ ಮತ್ತು ಕೆಲವು ಅಪ್ರಧಾನ ಕೆಲಸಗಳ ಮೇಲಿನ ಖರ್ಚು.

3) ಶಾಲಾ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ ಸ್ಥಳೀಯ ನಿಯಂತ್ರಣ.

4) ಆಯ್ಕೆಗೊಂಡ ಪಂಚಾಯಂತಿಗಳಿಗೆ ಸಣ್ಣ ಪ್ರಮಾಣದ ಇಂಧನ ನಿರ್ವಹಣೆಯ ಅಧಿಕಾರ ಮತ್ತು ದನಕರುಗಳ ಮೇವಿಗೆ ಭೂಮಿಯನ್ನು ಕಾಯ್ದಿರಿಸುವುದು.

5) ಗ್ರಾಮದ ದನಗಳ ದೊಡ್ಡಿಯ ನಿರ್ವಹಿಸುವಿಕೆ ಮತ್ತು ಸಂಪೂರ್ಣವಾಗಿ ಸ್ಥಳೀಯ ಮಾರುಕಟ್ಟೆಗಳ ನಿರ್ವಹಣೆಯನ್ನು ನೋಡಿಕೊಳ್ಳುವುದು.

ಕಂದಾಯ ಕೃಷಿ ಸಾಲಗಳು ಅಥವಾ ವ್ಯವಸಾಯದ ನೀರಿನ ಹಂಚಿಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಆಯೋಗವು ಇವು ಯಾವಾಗಲೂ ಪಂಚಾಯಿತಿ ವ್ಯಾಪ್ತಿಯ ಹೊರಗೆ ಉಳಿಯಬಾರದೆಂದು ಅಭಿಪ್ರಾಯಪಟ್ಟಿತು. ಇದು ಕೆಲವು ನಿರ್ದಿಷ್ಟ ಕಾರ್ಯಗಳನ್ನು ಸಂಪೂರ್ಣವಾಗಿ ಇಟ್ಟುಕೊಂಡು ಇತರೆ ಕೆಲವನ್ನು ಬಿಡಬಹುದೆಂದು ಯೋಚಿಸಿತು. ಆಯೋಗವು ಕೆಲವು ಪ್ರಾಂತ್ಯಗಳ ಸರಕಾರ ಗ್ರಾಮೀಣ ಕಾರ್ಯಗಳಿಗೆ ಹೆಚ್ಚು ಗಮನ ಕೊಡುತ್ತಿಲ್ಲ ಮತ್ತು ಅಧಿಕಾರಿಗಳು ಭ್ರಷ್ಟರಾಗಿದ್ದರು ಎಂಬುದನ್ನು ತೋರಿಸುವುದಕ್ಕೂ ಸಾಕಷ್ಟು ಆಧಾರಗಳನ್ನು ಹೊಂದಿದ್ದಿತು ಎಂಬುದಾಗಿ ಹೇಳಿತು ಮತ್ತು ಪಂಚಾಯಂತಿಯ ಕೆಲಸದಲ್ಲಿ ಸರ್ಕಾರ ಪ್ರವೇಶಿಸಕೂಡದೆಂದು ಹಾಗೂ ಇದು ಪಂಚಾಯಂತಿಗಳನ್ನು ಜಿಲ್ಲಾ ಮತ್ತು ಉಪಜಿಲ್ಲಾ ಮಂಡಳಿಗಳಿಗೆ ಸೇರಿಸಬಾರದೆಂಬುದಾಗಿ ಶಿಫಾರಸ್ಸು ಮಾಡಿತು. ಗ್ರಾಮೀಣ ಅಧಿಕಾರಗಳ ನೇಮಕಾತಿ ಮತ್ತು ತೆಗೆಯುವುದನ್ನು ಉಪವಿಭಾಗಾಧಿಕಾರಿ ನಿರ್ವಹಿಸಬೇಕು. ಇವನ ಆದೇಶಗಳ ವಿರುದ್ಧ ಮೇಲ್ಮನವಿಯು ಕಲೆಕ್ಟರ್‌ಗಿಂತ ಮುಂದೆ ಹೋಗುವ ಹಾಗಿಲ್ಲ.

ಪಂಚಾಯಿತಿಗಳ ಆದಾಯಕ್ಕೆ ಸಂಬಂಧಿಸಿದಂತೆ ಆಯೋಗವು ಅಸ್ತಿತ್ವದಲ್ಲಿರುವ ಸಂಘಟನೆಗಳು ಮತ್ತು ನೈರ್ಮಲ್ಯ ಸಮಿತಿಗಳು ಅತಿಯಾದ ತೆರಿಗೆಯ ಹೇರುವಿಕೆಯಿಂದಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಚ್ಚು ಕುಖ್ಯಾತಿ ಹೊಂದಿವೆ. ಎಂಬುದಾಗಿ ಅಭಿಪ್ರಾಯಪಟ್ಟಿದೆ ಮತ್ತು ಪಂಚಾಯತಿ ವ್ಯವಸ್ಥೆಯು ಹೊಸ ತೆರಿಗೆ ವಿಧಿಸಬಾರದು ಎಂಬುದಾಗಿ ಶಿಫಾರಸ್ಸು ಮಾಡಿತು. ಪಂಚಾಯತಿಯ ಕಂದಾಯವು ಈ ಕೆಳಕಂಡ ಮೂಲಗಳಿಂದ ಬರಬೇಕೆಂಬುದಾಗಿ ಸಲಹೆ ನೀಡಿದೆ.

1) ಗ್ರಾಮೀಣ ಸ್ಥಳೀಯ ಮಂಡಳಿಗಳ ಉದ್ದೇಶಗಳಗಾಗಿ ತೆರಿಗೆಯ ಸ್ವಲ್ಪ ಭಾಗವನ್ನು ವರ್ಗಾವಣೆ ಮಾಡುವುದು.

2) ಸ್ಥಳೀಯ ಅಭಿವೃದ್ಧಿಯ ಗುರಿಗಳಿಗೆ ವಿಶೇಷ ಧನ ಸಹಾಯವನ್ನು ಉಪಜಿಲ್ಲಾ ಮಂಡಳಿ ಕಲೆಕ್ಟರರುಗಳಿಂದ ಪಡೆಯುವುದು.

3) ದನಗಳ ದೊಡ್ಡಿಯಿಂದ ಬರುವ ಹಣ ಅಥವಾ ಮಾರುಕಟ್ಟೆಗಳಿಂದ ಬರುವ ಹಣವನ್ನು ಅವುಗಳ ನಿರ್ವಹಣೆಗೆ ವಹಿಸುವುದು.

4) ಪಂಚಾಯತಿಗಳ ಮುಂದೆ ಬರುವಂತಹ ವ್ಯಾಜ್ಯಗಳ ಮೇಲಿನ ಶುಲ್ಕವನ್ನು ವಸೂಲಿಮಾಡುವುದು.

ಆಯೋಗದ ಈ ಶಿಫಾರಸ್ಸುಗಳು ಭವಿಷ್ಯತ್ತಿನ ಸಮಸ್ಯೆಗಳಿಗೆ ನಿರ್ಣಾಯಾತ್ಮಕವಾದಂತಹವುಗಳಾಗಿದ್ದವು ಅದು ಭಾರತದಲ್ಲಿ ಗ್ರಾಮೀಣ ಪಂಚಾಯತಿಗಳ ಸಂಘಟನೆಗೆ ತಳಹದಿಯಾಯಿತು.

ಆದರೆ ಆಯೋಗದ ಬಹುಮುಖ್ಯವಾದಂತಹ ಶಿಫಾರಸ್ಸು ಎಂದರೆ ಪಂಚಾಯತಿಗಳು ಸಂಪೂರ್ಣವಾಗಿ ಕಲೆಕ್ಟರರ ಅಧೀನಕ್ಕೆ ಬರಬೇಕೆಂಬುದಾಗಿತ್ತು. ಇದರಿಂದಾಗಿ ವ್ಯತಿರಿಕ್ತ ಪರಿಣಾಮ ಉಂಟಾಯಿತು. ಇದು ಕಟುವಾದ ಟೀಕೆಗೆ ಒಳಗಾಯಿತು. ಡಾ. ಅನಿಬೆಸೆಂಟ್‌ರವರು 1917ರಲ್ಲಿ ಕಲ್ಕತ್ತದ ಕಾಂಗ್ರೆಸ್ ಅಧ್ಯಕ್ಷೀಯ ಭಾಷಣದಲ್ಲಿ ಹೀಗೆ ಹೇಳಿದರು "ಮಗುವಿನ ಕೈ ಮತ್ತು ಕಾಲನ್ನು ಕಟ್ಟಿಹಾಕಿ ತನ್ನಷ್ಟಕ್ಕೆ ತಾನು ನಡೆಯುವಂತೆ ಹೇಳಿ ನಡೆಯಲು ಬಿಡಿ. ಅದು ಯಶಸ್ವಿಯಾಗದಿದ್ದಲ್ಲಿ ಮಗುವನ್ನು ನಿಂದಿಸಿ. ಸ್ವತಂತ್ರವಾಗಿ ಬಿಟ್ಟ ಮಗು ಏಳುತ್ತಾ. ಬೀಳುತ್ತ ಸಮತೋಲನವನ್ನು ಕಲಿಯುತ್ತದೆ. ಬಂಧಿತವಾದ ಮಗುವು ಶಕ್ತಿಹೀನವಾಗಿ ನಡೆಯಲಾರದಂತಾಗುತ್ತದೆ.'' ಅವರು ಈ ನೀತಿಯನ್ನು ಹಳೆಯ ಗ್ರಾಮೀಣ ವ್ಯವಸ್ಥೆಯನ್ನು ಕೊಲ್ಲುವುದು ಎಂಬುದಾಗಿ ನಿಂದನೆ ಮಾಡಿದರು. ಗ್ರಾಮೀಣ ಸರ್ಕಾರವನ್ನು ನೋಡಿಕೊಳ್ಳುತ್ತಿದ್ದ ಮತ್ತು ಉತ್ತೇಜಿಸುತ್ತಿದ್ದ ಅಧಿಕಾರಿಗಳು ಗ್ರಾಮದ ಸೇವಕರಾಗದೆ ಗ್ರಾಮದ ಸರ್ವಸ್ವವೂ ಅವರೇ ಆಗಿ ಸರ್ವಾಧಿಕಾರಿಗಳಾದರು. ಗ್ರಾಮದ ಸೋದರತ್ವದ ಭಾವನೆ ಅಳಿಸಿಹೋಯಿತು. ಈ ಯೋಜನೆಯೂ ಸಹ ಹೆಚ್ಚು ಉದಾಸೀನ ರೀತಿಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೆರವೇರಿಸಲ್ಪಟ್ಟಿತ್ತು. ಉದಾಹರಣೆಗೆ ಭಾರತ ಸರ್ಕಾರವು ಕಳೆದ ಅನೇಕ ವರ್ಷಗಳಿಂದಲೂ ಅಧಿಕಾರ ವಿಕೇಂದ್ರೀಕರಣ ಸಮಿತಿಯ ಶಿಫಾರಸ್ಸಿನ ಬಗ್ಗೆ ತಟಸ್ಥವಾಗಿದ್ದಿತು. ಈ ಸಂಬಂಧಿಸಿದಂತೆ ಬ್ರಿಟಿಷರ ಪ್ರಾಮುಖ್ಯವಾದ ಕೊಡುಗೆಯೆಂದರೆ ಭಾರತ ಸರ್ಕಾರದ ಸ್ಥಳೀಯ ಸ್ವಯಂ ಸರ್ಕಾರಗಳ ಮಸೂದೆಯ ಮೇಲೆ ರಾಯಲ್ ಕಮಿಷನ್‌ನ 1915ರ ವರದಿ. ಅನಂತರ ಒಂದು ಸಾಮಾನ್ಯ ಶಿಫಾರಸ್ಸಿನ ಮೇರೆಗೆ ಭಾರತ ಸರ್ಕಾರವು ಸ್ಥಳೀಯ ಸರ್ಕಾರಗಳಿಗೆ ಆಡಳಿತವನ್ನು ಬಿಟ್ಟುಕೊಡುವುದರ ಬಗೆಗೆ ತೃಪ್ತಿಯನ್ನು ವ್ಯಕ್ತಪಡಿಸಿತು.

ಆದರೂ 1918ರ ಮೇಯಲ್ಲಿ ಇನ್ನೊಂದು ಮಸೂದೆಯು ಜಾರಿಗೆ ಬಂದಿತು. ಮಾಂಟೆಗೂ ಚೆಲ್ಮ್ಸ್‌ಫರ್ಡ್ ವರದಿಯು ಸಹ ಗ್ರಾಮಗಳಲ್ಲಿ ಪಂಚಾಯತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಗಮನಹರಿಸುವಂತೆ ನಿರ್ದೇಶಿಸಿತು. ಈ ಪ್ರಯತ್ನಗಳಿಂದ ಯಾವುದೇ ರೀತಿಯ ಬದಲಾವಣೆ ಕಂಡುಬರಲಿಲ್ಲ. ಆದಾಗ್ಯೂ ನಿಸ್ಸಂದೇಹವಾಗಿ ಗ್ರಾಮಪಂಚಾಯತಿಗಳ ಮೇಲೆ ಹೆಚ್ಚು ಮಸೂದೆಗಳು ಶಾಸನ ಪುಸ್ತಕಗಳನ್ನು ಅಲಂಕರಿಸಿದ್ದವು. ಹೀಗೆ ಅಲಕಂರಿಸಿದ್ದವುಗಳಲ್ಲಿ 1920ರ ಮದ್ರಾಸ್ ಪಂಚಾಯತಿ ಕಾಯ್ದೆ XIV ಮತ್ತು 1920ರ ಬೊಂಬಾಯಿಯ ಗ್ರಾಮಪಂಚಾಯತಿ ಕಾಯ್ದೆ IX, 1919ರ ಬಂಗಾಳದ ಸ್ವಯಂ ಸರ್ಕಾರ ಕಾಯ್ದೆ V. 1920ರ ಉತ್ತರಪ್ರದೇಶದ ಪಂಚಾಯತಿ ಕಾಯ್ದೆ IV, ಮತ್ತು 1920ರ ಬಿಹಾರದ ಸ್ವಯಂ ಸರ್ಕಾರ ಕಾಯ್ದೆ V, 1920ರ C.P. ಪಂಚಾಯತಿ ಕಾಯ್ದೆ VI 1922ರ ಪಂಜಾಬ್ ಪಂಚಾಯತಿ ಕಾಯ್ದೆ III ಮತ್ತು 1925ರ ಅಸ್ಸಾಮಿನ ಸ್ವಯಂ ಸರ್ಕಾರ ಕಾಯಿದೆ ಮುಂತಾದವುಗಳು ಜಾರಿಗೆ ಬಂದವು. ಅನಂತರದ ವರ್ಷಗಳಲ್ಲಿ ರಾಜರುಗಳ ಆಳ್ವಿಕೆಗೆ ಒಳಪಟ್ಟಿದ್ದ ರಾಜ್ಯಗಳು ಈ ನಿಟ್ಟಿನಲ್ಲಿ ಮಸೂದೆಯನ್ನು ಜಾರಿಗೆ ತಂದವು.

ಅಷ್ಟರಲ್ಲಿ ದೇಶದಲ್ಲಿ ಗಾಂಧೀಜಿಯವರ ನಾಯಕತ್ವದಲ್ಲಿ ರಾಜಕೀಯ ಚಳುವಳಿ ಪ್ರಾರಂಭವಾಗಿತ್ತು. ಗಾಂಧೀಜಿಯು ಪಂಚಾಯತಿಗಳನ್ನು ಹೋರಾಟದ ಘೋಷಣೆಗಳಾಗಿ ಪುನರುಜ್ಜೀವನಗೊಳಿಸಿದರು. 1920ರ ಸೆಪ್ಟೆಂಬರ್ 4 ರಿಂದ 9ರವರೆಗೆ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ಸ್‌ನ ವಿಶೇಷ ಅಧಿವೇಶನದಲ್ಲಿ ಗಾಂಧಿಯವರ ಅಸಹಕಾರ ಗೊತ್ತುವಳಿಯು ನಿರ್ಣಯಾತ್ಮಕ ಸಂಖ್ಯೆಯ ಬೆಂಬಲ ಪಡೆಯಿತು. ಇತರೆ ವಿಷಯಗಳ ಪೈಕಿ ಗೊತ್ತುವಳಿಯು ಬ್ರಿಟಿಷ್ ನ್ಯಾಯಾಲಯಗಳನ್ನು ವಕೀಲರು ಮತ್ತು ಕಕ್ಷಿಗಾರರು ಬಹಿಷ್ಕರಿಸಬೇಕೆಂಬುದಾಗಿ ಸಲಹೆ ನೀಡಿತು. ಮತ್ತು ಖಾಸಗಿ ವ್ಯಾಜ್ಯಗಳನ್ನು ಇತ್ಯರ್ಥ ಮಾಡಲು ಖಾಸಗಿ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ಸಲಹೆ ನೀಡಿತು. ಪರಿಣಾಮವಾಗಿ ಗ್ರಾಮೀಣ ವ್ಯಾಜ್ಯಗಳನ್ನು ಇತ್ಯರ್ಥಮಾಡಲು ಮತ್ತು ವ್ಯರ್ಥವಾದ ಮೊಕದ್ದಮೆಗಳನ್ನು ತಡೆಯುವ ಮತ್ತು ನ್ಯಾಯಾಲಯಗಳನ್ನೇ ಅವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಂಬಿಸಿದಂತೆ ಪಂಚಾಯತಿಗಳ ಪುನರುಜ್ಜೀವನಕ್ಕೆ ಕರೆಯಾಯಿತು, ಯಂಗ್ ಇಂಡಿಯ ಪತ್ರಿಕೆಯನ್ನು ಒಂದು ಅಂಕಣವನ್ನು ಪಂಚಾಯತಿಗಳ ಸೃಷ್ಟಿಗೆ ಸಂಬಂಧಿಸಿದಂತೆ ನಿತ್ಯವೂ ಬರೆಯುತ್ತಿದ್ದರು. ರಾಜೇಂದ್ರಪ್ರಸಾದ್‌ರವರಂತಹ ಹೆಸರಾಂತ ಕಾನೂನು ತಜ್ಞರು ಗಾಂಧೀಜಿಯವರ ಹೋರಾಟದಲ್ಲಿ ಅವರೊಂದಿಗೆ ಸೇರಿದ್ದರು.

ಗ್ರಾಮಪಂಚಾಯತಿಗಳನ್ನು ಕಟ್ಟುವಲ್ಲಿನ ಕಾಂಗ್ರೆಸ್‌ನ ಪ್ರಯತ್ನವು ವಿಫಲವಾಯಿತು. ಈ ವಿಫಲತೆಯು ಅಂದಿನ ಸಂದರ್ಭದೊಳಗೆ ಅಂತರ್ಗತವಾಗಿದ್ದಿತು. ವಿದೇಶಿ ಆಡಳಿತಗಾರರಿಂದ ಶೋಷಣೆ ಮಾಡುವ ಭೂಒಡೆತನದ ವ್ಯವಸ್ಥೆಯ ಅಸ್ತಿತ್ವವು ಗ್ರಾಮೀಣ ಜನತೆಯನ್ನು ಪೀಡಿಸುತ್ತಿದ್ದರು. ಭ್ರಷ್ಟವಾದ ಕಂದಾಯ, ನ್ಯಾಯಿಕ ಮತ್ತು ಆಡಳಿತಾತ್ಮಕ ಕಾರ್ಯಚರಣೆ ಮತ್ತು ಇತರೆ ಅಸಂಖ್ಯ ಕ್ಲಿಷ್ಟತೆಗಳು, ವಿವಾದಗಳನ್ನು ಇತ್ಯರ್ಥ ಮಾಡಲು ಸರ್ಕಾರಿ ಅಧಿಕಾರಿಗಳಿಲ್ಲದ ಪಂಚಾಯತಿಗಳನ್ನು ಸ್ಥಾಪಿಸುವಲ್ಲಿನ ಪ್ರಯತ್ನಗಳು ವಿಫಲತೆಗೆ ಕಾರಣವಾದವು. ಆದರೆ ಗ್ರಾಮಪಂಚಾಯತಿಯ ಕಲ್ಪನೆ ರಾಷ್ಟ್ರೀಯ ಕಾರ್ಯಕ್ರಮದ ಒಂದು ಭಾಗವಾಯಿತು. ಹಾಗೂ ರಾಷ್ಟ್ರೀಯ ಚಿಂತನೆಯ ಸಮಗ್ರ ಭಾಗವಾಯಿತು. ತದನಂತರ ಇದು ಗಾಂಧಿಯ ಚಿತನೆಯಲ್ಲಿ ಪ್ರಬಲವಾಗಿ ಸರ್ವೋದಯ ಕಾರ್ಯಕ್ರಮದ ಬಹುಮುಖ್ಯವಾದ ಭಾಗವಾಯಿತು. ಗಾಂಧೀಯವರು ತಮ್ಮ ಕ್ರಿಯಾಶೀಲ ರಾಜಕೀಯ ಜೀವನದಲ್ಲಿ, ಸಾವಿನವರೆಗೂ ಸಂಪೂರ್ಣವಾಗಿ ಗ್ರಾಮಪಂಚಾಯತಿಗಳ ಮುಖೇನ ಗ್ರಾಮೀಣ ಸಮುದಾಯಗಳ ಪುನರುಜ್ಜೀವನವನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಅವರು ತಮ್ಮ ಜೀವನ ಜೀವನದುದ್ದಕ್ಕೂ ಪ್ರತಿಪಾದಿಸಿದಂತಹ ಪಂಚಾಯತಿಗಳಿಗೆ ಶೋಭೆ ತರುವ ಹಾಗೆ ಅವರು ಸಹಿ ಮಾಡಿದ ಕೊನೆಯ ದಸ್ತಾವೇಜು ಎಂದರೆ 1948ರ ಜನವರಿ 30ರ ದುರಂತಮಯ ಸಂಜೆಯಲ್ಲಿ ಮಾಡಿದ ಪಂಚಾಯತಿಗಳನ್ನು ಆಧರಿಸಿದ ಸಂವಿಧಾನ.

ಗಾಂಧೀಜಿಯವರ ನಂತರ ನೆಹರೂರವರು ಅವರ ರಾಜಕೀಯ ಉತ್ತರಾಧಿಕಾರಿಯಾಗಿ ಇಡೀ ದೇಶದ ನಾಯಕತ್ವವನ್ನು ವಹಿಸಿಕೊಂಡರು. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾಗಿ ಅವರು ಭಾರತದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಕಟ್ಟಲು ಅಪಾರವಾಗಿ ಶ್ರಮಿಸಿದರು. ಅವರು ತಂತ್ರತುದಿಯಲ್ಲಿರುವ ಪ್ರಜಾಪ್ರಭುತ್ವವು ಕೆಳಗಿನ ತಳಹದಿಯಾಗಿ ಕಟ್ಟುವವರೆಗೂ ಯಶಸ್ವಿಯಾಗುವುದಿಲ್ಲ ಎಂಬುದನ್ನು ಮನಗಂಡರು. ಗಾಂಧೀಯವರಂತೆ ನೆಹರೂ ಕೂಡ ಪ್ರಜಾಭುತ್ವವು ಯಶಸ್ವಿಯಾಗಲು ಜನತೆಗೆ ಪ್ರಜಾಸತ್ತಾತ್ಮಕ ಹಾದಿಯಲ್ಲಿ ಶಿಕ್ಷಣ ಅವಶ್ಯಕ ಎಂಬುದನ್ನು ಪ್ರತಿಪಾದಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ. ಅಂಬೇಡ್ಕರ್‌ರವರ ಮಾರ್ಗದರ್ಶನದಲ್ಲಿ ತಯಾರಾದ ಸಂವಿಧಾನದ ಕರಡಿನಲ್ಲಿ ಗ್ರಾಮೀಣ ಸಮುದಾಯಗಳನ್ನು ಪರಿಣಾಮಕಾರಿ ಘಟಕಗಳಾಗಿ ಸೇರಿಸದಿಲ್ಲದಿರುವಿಕೆಯು ದೇಶದಲ್ಲಿ ವಿವಾದಕ್ಕೆ ಒಳಗಾಯಿತು. ಬಹಿರಂಗ ವೇದಿಕೆ ಮತ್ತು ಸಂವಿಧಾನ ರಚನಾ ಸಭೆಯು ಒಳಗೆ ಹೀಗೆ ಎಲ್ಲಾ ರೀತಿಯ ವಿವಾದಗಳಿಗೂ ಒಳಗಾದ ನಂತರ ರಾಜ್ಯವು ಗ್ರಾಮಪಂಚಾಯತಿಗಳನ್ನು ಸಂಘಟಿಸಿ, ಸ್ವಯಂ ಸರ್ಕಾರ ಘಟಕಗಳಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಕೆಲವು ಹಕ್ಕುಗಳನ್ನು ದೊರಕಿಸಿಕೊಡಲು ಒಂದು ಹೊಸ ವಿಧಿಯನ್ನು ಘೋಷಿಸುವ ತೀರ್ಮಾನವಾಯಿತು. ಡಾ|| ಅಂಬೆಡ್ಕರ್ ಈ ತಿದ್ದುಪಡಿಯನ್ನು ಒಪ್ಪಿಕೊಂಡರು. ಆದ್ದರಿಂದ ಭಾರತದ ಸಂವಿಧಾನದಲ್ಲಿ 40ನೇ ವಿಧಿಯ 9ನೇ ಭಾಗವು ರಾಜ್ಯ ನಿರ್ದೇಶಕ ತತ್ವಗಳ ತಲೆಬರಹದ ಕೆಳಗೆ ಹೀಗೆ ಹೇಳಿದೆ.

'ರಾಜ್ಯವು ಗ್ರಾಮಪಂಚಾಯತಿಗಳನ್ನು ಸಂಘಟಿಸುವ ಮತ್ತು ಅವುಗಳಿಗೆ ಸ್ವಯಂ ಸರ್ಕಾರದ ಘಟಕಗಳಾಗಿ ಕಾರ್ಯನಿರ್ವಹಿಸಲು ಸಹಾಯವಾಗುವಂತೆ ಕೆಲವು ಅಧಿಕಾರ ಮತ್ತು ಜವಾಬ್ದಾರಿಗಳನ್ನು ಬಿಟ್ಟುಕೊಡಲು ಒಂದು ನಿರ್ಧಾರವನ್ನು ತೆಗೆದುಕೊಳ್ಳಬಹುದು'

ಭಾರತದ ಸಂವಿಧಾನದಲ್ಲಿ ಪಂಚಾಯತಿಗಳ ಸಂಯೋಜನೆಯು ರಾಜ್ಯದ ನಿಜವಾದ ರಚನೆಯಲ್ಲಿ ಅಪಾರ ಮತ್ತು ವಿಶಾಲ ವ್ಯಾಪ್ತಿಯ ಪರಿಣಾಮಗಳೊಂದಿಗೆ ತೀವ್ರ ಪ್ರಾಮುಖ್ಯತೆಯನ್ನು ಗಳಿಸಿದ ಒಂದು ಘಟನೆಯಾಯಿತು. ಸಂವಿಧಾನ ರಚನಾ ಸಭೆಯ ತೀರ್ಮಾನವು ನಿಸ್ಸಂದೇಹವಾಗಿ ವಿವಿಧ ರಾಜ್ಯಗಳಲ್ಲಿ ಪಂಚಾಯತಿಯ ಸಂಘಟನೆಗೆ ಚಾಲನೆಯನ್ನು ಕೊಟ್ಟಿತು. ಸಂವಿಧಾನಾತ್ಮಕ ನಿರ್ದೇಶನಕ್ಕಿಂತಲೂ ಮೊದಲೇ ಕೆಲವು ರಾಜ್ಯಗಳು ಪಂಚಾಯತಿ ಮಸೂದೆಯನ್ನು ಜಾರಿಗೆ ತರುವ ತೀರ್ಮಾನವನ್ನು ತೆಗೆದುಕೊಂಡಿದ್ದವು. 1947ರ ಪ್ರಾರಂಭದಲ್ಲಿ ಉತ್ತರಪ್ರದೇಶ ಸರ್ಕಾರವು ಮೊಟ್ಟ ಮೊದಲನೆಯ ಬಾರಿಗೆ ವ್ಯಾಪಕವಾದ ಮಸೂದೆಯನ್ನು ಜಾರಿಗೆ ತಂದಿತು. ಹೀಗೆ ಇತರೆ ರಾಜ್ಯಗಳಿಗೆ ನಿದರ್ಶನವಾಯಿತು.

ಬೊಂಬಾಯಿ ಸರ್ಕಾರವು ಸಹ ಗ್ರಾಮಪಂಚಾಯತಿಗೆ ಸಾಕಷ್ಟು ಅಧಿಕಾರ ಮತ್ತು ಹಣಕಾಸಿನ ನೆರವನ್ನು ನೀಡುವ ಉದ್ದೇಶದಿಂದ ಬೊಂಬಾಯಿಯ ಗ್ರಾಮ ಪಂಚಾಯತಿಯ ಕಾಯ್ದೆಯನ್ನು ತಿದ್ದುಪಡಿಮಾಡಲು ಸಂವಿಧಾನ ರಚನಾ ಸಭೆಯ ತೀರ್ಮಾನಕ್ಕಿಂತಲೂ ಮೊದಲೆ ನಿರ್ಧಾರವನ್ನು ತೆಗೆದುಕೊಂಡಿದ್ದಿತು. ಅನಂತರದ ವರ್ಷಗಳಲ್ಲಿ ಎಲ್ಲಾ ರಾಜ್ಯಸರ್ಕಾರಗಳು ಪಂಚಾಯತಿ ಮಸೂದೆಯನ್ನು ಜಾರಿಗೆ ತಂದವು. ಹೀಗೆ ಗ್ರಾಮಪಂಚಾಯತಿಗಳು ಭಾರತದ ಎಲ್ಲಾ ಭಾಗಗಳಲ್ಲಿಯೂ ಚೈತನ್ಯ ಪಡೆಯಲು ಪ್ರಾರಂಭವಾದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾತಂತ್ರ್ಯ ನಂತರ ರಾಜಕಾರಣಿಗಳು ಪ್ರತಿಯೊಂದು ಗ್ರಾಮಗಳಲ್ಲಿಯೂ ಸಹ ಶಕ್ತಿಶಾಲಿ ಪಂಚಾಯತಿಗಳೊಂದಿಗೆ ಭಾರತವನ್ನು ರಾಮರಾಜ್ಯವನ್ನಾಗಿ ಮಾಡಂತ್ತೆವೆಂಬ ಧ್ವನಿ ಹೊರಡಿಸಿದರು. ಆಗ ಸ್ವಲ್ಪವೇ ಮಾತ್ರ ಅನುಷ್ಠಾನವಾಯಿತು. ಗ್ರಾಮ ಪಂಚಾಯತಿಗಳು ಕ್ಷೀಣಿಸುತ್ತ ಹೋಗಿ, ಅವುಗಳ ಉತ್ಕಾಂಕ್ಷೆಗಳ ಕಾರ್ಯನಿರ್ವಹಣೆ ಬಹಳ ಕಡಿಮೆ ಕಾಲ ನಡೆಯಿತು, ಅವು ಸ್ವಾತಂತ್ರ್ಯ ಪೂರ್ವದ ಯುಗದ ಅಪೂರ್ಣವಾದ ಮತ್ತು ಭ್ರಷ್ಟವಾದ ಮಾದರಿಯಲ್ಲೆ ಮುಂದುವರಿದವು. ಅಧಿಕಾರ ಶಾಹಿಯ ಅಧಿಕವಾದ ಒತ್ತಡದಡಿಯಲ್ಲಿ ಜಜ್ಜಿಹೋಗಿ ಅವು ರಾಷ್ಟ್ರ ನಿರ್ಮಾಣ ಚಟು ವಟಿಕೆಗಳಲ್ಲಿ ಯಾವುದೇ ಪ್ರಮುಖ ಪಾತ್ರವನ್ನು ವಹಿಸುವಲ್ಲಿ ಅಸಮರ್ಥವಾದವು.

ಮೆಹತಾ ಆಯೋಗ 1957

ಯೋಜನಾ ಮೇಲಿನ ಸಮಿತಿಯು ಪಂಚಾಯತಿಗಳ ಸಂಪೂರ್ಣವಾಗಿ ಮಂಕು ಕವಿದಂತಹ ಮತ್ತು ಉತ್ಸಾಹ ರಹಿತವಾದಂತಹ ಚಿತ್ರಣವನ್ನು ಕಂಡುಕೊಂಡಿದ್ದು ಸ್ವಾಭಾವಿಕವಾದುದು. ಮೊದಲನೆಯ ಪಂಚವಾರ್ಷಿಕ ಯೋಜನೆ ಮತ್ತು ಸಾಮು ದಾಯಿಕ ಅಭಿವೃದ್ಧಿ ಯೋಜನೆಯು ಕಾರ್ಯಾಚರಣೆಯು ಈ ವ್ಯವಸ್ಥೆಯಲ್ಲಿ ಮೂಲ ಭೂತ ತಪ್ಪಾಗಿದೆ. ಆದುದರಿಂದ ಕೆಲವು ಸಂಪೂರ್ಣವಾದ ಬದಲಾವಣೆಗಳು ಅವಶ್ಯ ಕವಾಗಿವೆ ಎಂಬುದಾಗಿ, ತಿಳಿಸಿತು. ಈ ಅಭಿಪ್ರಾಯವು ಯಾವ ಶಿಫಾರಸ್ಸುಗಳು ಭಾರತದ ಗ್ರಾಮೀಣ ಸರ್ಕಾರದ ಹೊಸ ಯುಗಕ್ಕೆ ಕಾರಣವಾಯಿತೋ ಅಂತಹ ಬಲ ವಂತರಾಯ್ ಮೆಹತಾ ಆಯೋಗದ ನೇಮಕಾತಿಗೆ ಕಾರಣವಾಯಿತು.

ಡಾ. ಮೆಹತಾರವರ ಅಧ್ಯಕ್ಷತೆಯಲ್ಲಿ ಆಯೋಗವು 1957ರ ಪ್ರಾರಂಭದಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಿ ಅವರ ವರದಿಯು 1957ರ ನವಂಬರ್ 2 ರಂದು ಪ್ರಕಟವಾಯಿತು.

ಈ ಆಯೋಗವು ಭಾರತಾದ್ಯಂತ ಅನೇಕ ವಿಭಾಗಗಳಿಗೆ ಭೇಟಿಕೊಟ್ಟಿತು ಹಾಗೂ ಸ್ಥಳೀಯ ಜನರೊಂದಿಗೆ ಸಮಾಜ ಸೇವಕರೊಂದಿಗೆ, ಜನರ ಪ್ರತಿನಿಧಿ ಗಳೊಂದಿಗೆ ಸ್ಥಳೀಯ ಸಂಘಟನೆಗಳ ನಾಯಕರೊಂದಗೆ, ಕಲೆಕ್ಟರರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಮುಂತಾದ ಸರ್ಕಾರಿ ಅಧಿಕಾರಿಗಳೊಂದಿಗೆ ಸುಧೀರ್ಘ ಚರ್ಚೆ ನಡೆಸಿ ಭಾರತದಲ್ಲಿ ಪಂಚಾಯತಿ ರಾಜ್ಯದ ವ್ಯವಸ್ಥೆಯ ಬಗ್ಗೆ ಚಾರಿತ್ರಿಕ ವರದಿಯನ್ನು ತಯಾರುಮಾಡಿತು.

ಆಯೋಗದ ಶೋಧನೆಗಳು

1. ಆಯೋಗವು ಪ್ರಾರಂಭದ ಪ್ರೋತ್ಸಾಹ ಮತ್ತು ಸಾಮುದಾಯಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿವೃದ್ಧಿ ಯೋಜನೆಯು ಭಾಗವಹಿಸುವಿಕೆಯು ಕೊರತೆಯಿಂದಾಗಿ ಕೆಳಹಂತದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಗೈರುಹಾಜರಿಯುಂಟಾಗಿದೆ ಎಂಬ ತೀರ್ಮಾನಕ್ಕೆ ಬಂದಿತು.

2. ಸಾಮುದಾಯಿಕ ಅಭಿವೃದ್ಧಿ ಯೋಜನೆಯು ಕಾರ್ಯಾಚರಣೆಗೆ ಸ್ಥಳೀಯ ಪ್ರೋತ್ಸಾಹವನ್ನು ಕೊಡುವ ಉದ್ದೇಶದಿಂದ ಕೆಲವು ನಾಮಕರಣ ಮಾಡಲ್ಪಟ್ಟ ಮತ್ತು ಅಧಿಕಾರಿಗಳನ್ನು ಒಳಗೊಂಡಂತ ತಾತ್ಕಾಲಿಕ ಮಂಡಳಿಗಳನ್ನು ಸ್ಥಾಪಿಸಬೇಕೆಂದು ಹೇಳಿತು.ಆದರೆ ಆಯೋಗವು ಈ ಹಿತಾಸಕ್ತಿಗಳನ್ನು ತಾತ್ಕಾಲಿಕ ಮಂಡಳಿಗಳು ತಾಲ್ಲೋಕು ಮಟ್ಟದಲ್ಲಿ ಸಾಮಾಜಿಕ ಹಿತಾಶಕ್ತಿಗಳನ್ನು ಕಾಪಾಡುವಲ್ಲಿ ಅಸಮರ್ಥವಾಗಿವೆ ಎಂದು ಅಭಿಪ್ರಾಯಪಟ್ಟಿತು. ಅವುಗಳು ಉತ್ಸಾಹದಿಂದ ಮೇಲೆ ಬರುವಲ್ಲಿ ವಿಫಲವಾಗಿವೆ.

3. ಜಿಲ್ಲಾ ಮಂಡಳಿಗಳು ತಮ್ಮ ಉಪಯುಕ್ತತೆಯನ್ನು ಚಾಲನೆಗೊಳಿಸಿ ಪರಿಣಾಮಕಾರಿಯಾಗಬೇಕು. ಜಿಲ್ಲಾಮಂಡಳಿಗಳು ಯಾವ ಉದ್ದೇಶಕ್ಕೆ ಸ್ಥಾಪಿತವಾದವೋ ಆ ಉದ್ದೇಶ ಸಾಧನೆಗಾಗಿ ಸೇವೆ ಸಲ್ಲಿಸಬೇಕಾಗಿದೆ. ಅಂದರೆ ಸ್ವಯಂ ಸರ್ಕಾರದ ಬಗ್ಗೆ ನಮ್ಮ ಯುವ ಜನತೆಗೆ ಶಿಕ್ಷಣ ಕೊಡಬೇಕಾದುದು ಮುಖ್ಯ. ಆದರೆ ಅವುಗಳು ಈ ಕೆಲಸವನ್ನು ಕಾರ್ಯಗತಗೊಳಿಸುವ ಸಂಪ್ರದಾಯವನ್ನಾಗಲಿ ಅಥವಾ ಸಾಧನಗಳನ್ನಾಗಲಿ ಹೊಂದಿರಲಿಲ್ಲ ಹಾಗೂ ಅವುಗಳು ಗಮನಹರಿಸುವಲ್ಲಿ ಅನೇಕ ತಡೆಗಳಿದ್ದವು. ಜಿಲ್ಲಾಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರು ಪರ್ಯಾಲೋಚಿಸಬಹುದಾದಂತ ಸಮಯದ ಹೆಚ್ಚು ಭಾಗವನ್ನು ಇಂತಹ ವಿಶಾಲ ಪ್ರದೇಶದ ವ್ಯವಹಾರಗಳಲ್ಲಿ ತೊಡಗಿಸುವಂತಹ ಪರಿಸ್ಥಿತಿಯುಲಿಲ್ಲ. ಅವುಗಳ ವಿಶಾಲ ವ್ಯಾಪ್ತಿಯು ಜವಾಬ್ದಾರಿಯ ವರ್ಗಾವಣೆ ಮತ್ತು ಆದರ ಸ್ವಂತ ಅಧಿಕಾರಿಗಳನ್ನು ಇಚ್ಛಾನುಸಾರವಾಗಿ ಬಿಡುವುದು, ಇದರಿಂದಾಗಿ ರಾಜ್ಯದ ಅಧಿಕಾರಿಗಳನ್ನು ವಿಶಾಲವಾದ ಜವಾಬ್ದಾರಿಯಿಂದ ಇಳಿಸಿ ನಿರ್ಬಂಧಿತ ಕ್ಷೇತ್ರಗಳಿಗೆ ಇರಿಸಿದಂತಾಗುತ್ತದೆ. ಈ ಪ್ರವೃತ್ತಿಯಿಂದಾಗಿ ಜಿಲ್ಲಾ ಮಂಡಳಿಯ ಅನೇಕ ಕಾರ್ಯಗಳನ್ನು ರಾಜ್ಯವು ವಹಿಸಿಕೊಂಡಂತಾಗುತ್ತದೆ ಆದರೂ ಸಹ ಒಂದು ಬಗೆಯ ಸ್ವತಂತ್ರ ಅಧಿಕಾರವರ್ಗಗಳಿಂದ ನಡೆಯುವ ಪ್ರಭುತ್ವ ವ್ಯಾಪಿಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

4. ಆಯೋಗವು ಜಿಲ್ಲಾಶಾಲಾ ಮಂಡಳಿಗಳು ಮತ್ತು ವಿಭಾಗ ಸಲಹಾ ಸಮಿತಿಗಳು ಕೆಲಸವು ತೃಪ್ತಿಕರವಾಗಿಲ್ಲದಿರುವುದನ್ನು ಕಂಡುಕೊಂಡಿತು. ಇದಕ್ಕೆ ಸಂಬಂಧಿಸಿದಂತೆ ಆಯೋಗವು ಈ ಕೆಳಕಂಡಂತೆ ಗಮನಿಸಿತು.

ಅನೇಕ ರಾಜ್ಯಗಳ ಪ್ರಾಥಮಿಕ ಶಿಕ್ಷಣವನ್ನು ಜಿಲ್ಲಾ ಶಾಲಾ ಮಂಡಳಿಗಳ ಅಧಿಕಾರ ವ್ಯಾಪ್ತಿಗೆ ವಹಿಸಿವೆ. ಇವು ಪುನಹ ಇತರರಿಂದ ಕಂದಾಯವನ್ನು ವಸೂಲಿ ಮಾಡುವ ಮಂಡಳಿಗಳಾದವು. ಆದ್ದರಿಂದ ಆರ್ಥಿಕವಾಗಿ ಮುಖ್ಯವಾಗಿ ಸರ್ಕಾರವನ್ನೇ ಅವಲಂಬಿಸಿದವು ಇದರಿಂದಾಗಿ ಅವು ಸ್ವಲ್ಪವೇ ಉತ್ಸಾಹವನ್ನು ತೋರಿಸಿದವು. ವಿಭಾಗ ಸಲಹಾ ಸಮಿತಿಗಳು ಸಾಮಾನ್ಯವಾಗಿ ನಾಮಕರಣ ಮಾಡಲ್ಪಟ್ಟಿದ್ದು ಅವರ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವಂತಿದ್ದರೂ ಕಾರ್ಯಗತ ಹೊಂದಿರಲಿಲ್ಲ.

ಇಂತಹ ನ್ಯೂನತೆಗಳಿರುವುದರಿಂದ ಸಮಿತಿಯು ಕೆಲವು ಮುಖ್ಯವಾದ ಶಿಫಾರಸ್ಸುಗಳನ್ನು ಮಾಡಿತು. ಅವುಗಳಲ್ಲಿ ಕೆಲವುಗಳು :-

1. ಗ್ರಾಮಪಂಚಾಯಿತಿ ಮತ್ತು ಮೇಲ್ಮಟ್ಟದ ಆಡಳಿತಾತ್ಮಕ ಸಾಧನಗಳೊಂದಿಗೆ ಜೈವಿಕ (ಅನ್ಯೋನ್ಯ) ಸಂಬಂಧವನ್ನು ಸ್ಥಾಪಿಸುವಸಲುವಾಗಿ ಮೂರು ಶ್ರೇಣಿ ವ್ಯವಸ್ಥೆಯ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣವನ್ನು ಜಾರಿಗೊಳಿಸಬೇಕು.

2. ವಿಕೇಂದ್ರಿಕರಣವು ಅಧಿಕಾರ ಮತ್ತು ಆದಾಯ ಎರಡಕ್ಕೂ ಅನ್ವಯಿಸಬೇಕು.

3. ಸಮಿತಿಯು ಗ್ರಾಮ ಆಡಳಿತದ ಅತೀ ಸಣ್ಣ ಘಟಕ ಮತ್ತು ಜಿಲ್ಲೆಯು ಅತೀ ದೊಡ್ಡ ಘಟಕ ಎಂದು ಅಭಿಪ್ರಾಯಪಟ್ಟಿತು. ಆದ್ದರಿಂದ ಇದು ಯೋಜನೆ ಮತ್ತು ಸಂಘಟನೆಯ ಘಟಕವಾಗಬೇಕೆಂದು ಅಭಿಪ್ರಾಯಪಟ್ಟಿತು. ವಿಭಾಗ ಸಮಿತಿಯು ಅತೀ ದೊಡ್ಡದಾಗಲಿ ಅಥವಾ ಅತೀ ಚಿಕ್ಕದಾಗಲಿ ಆಗಿರಬಾರದು.

4. ಜಿಲ್ಲಾ ಮಂಡಳಿಗಳ ಬದಲಿಗೆ ಜಿಲ್ಲಾ ಪರಿಷತ್‌ಗಳು ಮತ್ತು ವಿಭಾಗ ಸಲಹಾ ಮಂಡಳಿಗಳ ಬದಲಿಗೆ ಪಂಚಾಯುತಿ ಸಮಿತಿಗಳು ಬರಬೇಕು.

ಪಂಚಾಯುತಿರಾಜ್

ಮೊದಲನೆಯ ಶ್ರೇಣಿ : ಗ್ರಾಮಪಂಚಾಯುತಿ

ಗ್ರಾಮಪಂಚಾಯಂತಿಯು ಒಂದು ಅಥವಾ ಹೆಚ್ಚು ಗ್ರಾಮಗಳನ್ನು ಒಳಗೊಂಡು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸರಾಸರಿ ಜನಸಂಖ್ಯೆಯು 1500ರಿದ್ದು ಸುಮಾರು 6 ಚದರ ಮೈಲುಗಳ ಪ್ರದೇಶ (ವ್ಯಾಪ್ತಿ)ವನ್ನು ಹೊಂದಿರುವಂತಹ ಶಾಸನಬದ್ಧವಾದಂತಹ ಸಂಸ್ಥೆ.

ಸದಸ್ಯತ್ವ

ಪಂಚಾಯತಿಯು ವಯಸ್ಕರ ಮತದಾನ ಪದ್ಧತಿಯ ಆಧಾರದ ಮೇಲೆ ನೇರ ಚುನಾವಣೆಯ ಮೂಲಕ ಚುನಾಯಿತರಾದಂತ ಸುಮಾರು 12 ಜನ ಸದಸ್ಯರನ್ನು ಒಳಗೊಂಡಿರಬೇಕು. ಇಲ್ಲಿಯೂ ಸಹ ಇಬ್ಬರು ಮಹಿಳಾ ಸದಸ್ಯರು ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ವಿಶೇಷ ಅವಕಾಶ ಉಂಟು, ಅಧ್ಯಕ್ಷನನ್ನು ಪಂಚಾಯಂತಿಯ ಸದಸ್ಯರು ಚುನಾಯಿಸಬಹುದು ಇಲ್ಲವೇ ಪಂಚಾಯಂತಿ ಪ್ರದೇಶದ ಮತದಾರರಿಂದ ನೇರವಾಗಿ ಚುನಾಯಿಸಿ ಬರಬಹುದು.

ಇದು ಪಂಚಾಯಂತಿಗೆ ದೊರೆಯಬೇಕಾದ ಕೆಲವು ಬಾಬ್ತುಗಳನ್ನು ಸೂಚಿಸಿದೆ ಆಯೋಗವು ಆಡಳಿತ ಮತ್ತು ಅಭಿವೃದ್ಧಿ ಕೆಲಸಗಳಲ್ಲಿ ಕನಿಷ್ಟ ದಕ್ಷತೆಯನ್ನು ಹೊಂದಿರುವಂತಹ ಪಂಚಾಯಂತಿಗಳನ್ನು ಭೂಕಂದಾಯವನ್ನು ದಳ್ಳಾಳಿ ಆಧಾರದ ಮೇಲೆ ಕಂದಾಯ ವಸೂಲಿಮಾಡುವ ನಿಯೋಗಿಗಳಾಗಿ ಬಳಸಿಕೊಳ್ಳಬಹುದು ಎಂಬುದಾಗಿ ಶಿಫಾರಸ್ಸು ಮಾಡಿದೆ. ಪ್ರತಿಯೊಂದು ಗ್ರಾಮಪಂಚಾಯಂತಿಯು ಪಂಚಾಯುತಿ ಸಮಿತಿಗೆ ಒಟ್ಟು ಕಂದಾಯದ ಸುಮಾರು ಶೇ. 75ರಷ್ಟನ್ನು ಬಿಟ್ಟುಕೊಡಬೇಕು. ಜೊತೆಗೆ ಪಂಚಾಯಂತಿಗಳು ಕೆಲವು ನಿರ್ದಿಷ್ಟ ಶಾಸನಬದ್ಧವಾದ ಕರ್ತವ್ಯಗಳನ್ನು ನಿರ್ವಹಿಸಬೇಕು ಮತ್ತು ಅವುಗಳಿಗೆ ವಹಿಸಿದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪಂಚಾಯಂತಿ ಸಮಿತಿಗಳ ಪ್ರತಿನಿಧಿಗಳಾಗಿ ವರ್ತಿಸಬೇಕು.

ಎರಡನೆಯ ಶ್ರೇಣಿ

ಪಂಚಾಯುತಿ ಸಮಿತಿ

ವಿಭಾಗ ಮಟ್ಟದಲ್ಲಿ ಪಂಚಾಯಂತಿ ಸಮಿತಿಯು ಎರಡನೇ ಶ್ರೇಣಿಯ ರಚನೆಯಾಗಿದೆ. ಇದು 250 ಚದರ ಮೈಲಿ ಪ್ರದೇಶವನ್ನು ಸುತ್ತುವರಿದು 80,000 ಜನಸಂಖ್ಯೆಯನ್ನು ಒಳಗೊಂಡಿರುತ್ತದೆ.

ಈ ಸಮಿತಿಯು ಗ್ರಾಮಪಂಚಾಯಂತಿಯಿಂದ ಪರೋಕ್ಷವಾಗಿ ಚುನಾಯಿಸಲ್ಪಟ್ಟಂತಹ ಸದಸ್ಯರನ್ನು ಒಳಗೊಂಡಿರುತ್ತದೆ. ಜೊತೆಗೆ ಹಿಂದುಳಿದ ವರ್ಗಗಳು, ಸ್ತ್ರೀಯರು, ಸಹಕಾರ ಸಂಘಗಳು, ಮುನಿಸಿಪಾಲಿಟಿಗಳು, ವಿಧಾನಸಭಾ ಸದಸ್ಯರುಗಳು ಮುಂತಾದವರ ವಿಶೇಷ ಪ್ರತಿನಿಧಿತ್ವಕ್ಕೆ ಅವಕಾಶವುಂಟು. ಸದಸ್ಯರು ನೇರವಾಗಿಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಡ ಚುನಾಯಿತರಾಗಬಹುದು. ಸದಸ್ಯರು ತಮ್ಮಲ್ಲಿಯೇ ಒಬ್ಬ ಅಧ್ಯಕ್ಷನನ್ನು ಚುನಾಯಿಸುತ್ತಾರೆ.

ಈ ಸಮಿತಿಯು ಕೆಲವು ನಿರ್ದಿಷ್ಟ ಕಾರ್ಯಗಳನ್ನು ಮತ್ತು ನಿರ್ದಿಷ್ಟ ಕಂದಾಯದ ಬಾಬ್ತುಗಳನ್ನು ವಹಿಸಿಕೊಂಡಿರುತ್ತದೆ.

ಮೂರನೆಯ ಶ್ರೇಣಿ

ಜಿಲ್ಲಾ ಪರಿಷದ್ :

ಜಿಲ್ಲಾಪರಿಷದ್ ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತದೆ ಇದು ಪಂಚಾಯಿತಿ ಸಮಿತಿಗಳ ಅಧ್ಯಕ್ಷರುಗಳನ್ನು ರಾಜ್ಯ ಶಾಸಕಾಂಗದ ಸದಸ್ಯರುಗಳನ್ನು, ಪಾರ್ಲಿಮೆಂಟ್ ಸದಸ್ಯರನ್ನು ಮತ್ತು ಅಭಿವೃದ್ಧಿ ಇಲಾಖೆಗಳ ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಜಿಲ್ಲೆಯ ಕಲೆಕ್ಟರನು ಇದರ ಕಾರ್ಯದರ್ಶಿಯಾಗಿರುತ್ತಾನೆ, ಅಧ್ಯಕ್ಷನು ಅದರ ಸದಸ್ಯರಿಂದಲೇ ಚುನಾಯಿಸಲ್ಪಡುತ್ತಾನೆ.

ಜಿಲ್ಲಾಪರಿಷದ್ ಇತರೆ ವಿಭಾಗಗಳ ಸಹಾಯಧನದ ಬೇಡಿಕೆಯನ್ನು ಕ್ರೋಢಿಕರಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು, ಸರ್ಕಾರವು ಗೊತ್ತು ಪಡಿಸಿದ ವಿಭಾಗಗಳಿಗೆ ಹಂಚಿದ ನಿಧಿಯನ್ನು ವಿತರಣೆಮಾಡಲು, ವಿಭಾಗಗಳ ಯೋಜನೆಗಳನ್ನು ಸಂಘಟಿಸಲು ಮತ್ತು ಸಮಿತಿಯ ಚಟುವಟಿಕೆಗಳನ್ನು ಮಾರ್ಗದರ್ಶಿಸಲು ತನ್ನ ನ್ಯಾಯಾಧಿಕಾರದ ವ್ಯಾಪ್ತಿಯಲ್ಲಿ ಪ್ರತಿಯೊಂದು ಪಂಚಾಯತಿ ಸಮಿತಿಯ ವಾರ್ಷಿಕ ಆಯುವ್ಯಯವನ್ನು ಅನುಮೋದಿಸುತ್ತದೆ.

ಹೀಗೆ ಆಯೋಗವು ಗ್ರಾಮೀಣ. ಪ್ರದೇಶಗಳಲ್ಲಿ ಎಲ್ಲಾ ಅಂಶಗಳ ಅಭಿವೃದ್ಧಿ ಕೆಲಸವನ್ನು ವಹಿಸಿಕೊಳ್ಳುವಂತಹ ಪ್ರತಿನಿಧಿತ್ವದ ಮತ್ತು ಬಲವಾದ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ವಿಶ್ಲೇಷಿಸಿತು. ಈ ಶಾಸನೀಯ ಸಂಸ್ಥೆಗಳು ಚುನಾಯಿಸುವ ಹಕ್ಕಿಗೆ ಸಂಬಂಧಿಸಿದ್ದವು. ತಮ್ಮ ಕರ್ತವ್ಯ ಮತ್ತು ಕಾರ್ಯಗಳಲ್ಲಿ ವ್ಯಾಪಕ ಮತ್ತು ಅವಶ್ಯಕವಾದಂತಹ ಕಾರ್ಯನಿರ್ವಾಹಕ ವ್ಯವಸ್ಥೆಯೊಂದಿಗೆ ರಚನೆಗೊಂಡು ಮತ್ತು ಸಮೃದ್ಧಿಯಾದ ಸಂಪನ್ಮೂಲಗಳನ್ನು ಹೊಂದಿದ್ದವು, ಆದರೂ ಸರ್ಕಾರ ಅಥವಾ ಇತರೆ ಏಜೆನ್ಸಿಗಳು ಅವುಗಳ ಚಟುವಟಿಕೆಗಳ ಮೇಲೆ ನಿಯಂತ್ರಣ ಹೇರಿ ನಿರ್ಬಂಧಿಸಲಾಗುತ್ತಿರಲಿಲ್ಲ. ಈ ಸಮಿತಿಗಳು ತಮ್ಮ ಅಧಿಕಾರದಿಂದ ತಪ್ಪು ಮಾಡಿದರೆ ಆ ತಪ್ಪಿನಿಂದ ಪಾಠಕಲಿಯಲು ಅವಕಾಶ ಮಾಡಿಕೊಡಬೇಕು. ಹೀಗೆ ಅಂತಿಮವಾಗಿ ಸ್ಥಳೀಯ ಜನತೆಯ ಆಸೆ ಆಕಾಂಕ್ಷೆಗಳನ್ನು ಅಭಿವ್ಯಕ್ತಗೊಳಿಸುವ ಸಾಧನಗಳಾಗಿದ್ದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೊತೆಗೆ ಕಾರ್ಯನಿರ್ವಾಹಕ ಸಮಿತಿಯು ಅಂದರೆ ಪಂಚಾಯತಿ ರಾಜ್ಯವು ಪಂಚಾಯತಿ ವ್ಯಾಪ್ತಿಯ ಸಂಪೂರ್ಣ ವಯಸ್ಕ ಜನಸಂಖ್ಯೆಯನ್ನು ಒಳಗೊಂಡಿರು ವಂತಹ ಗ್ರಾಮಸಭೆಗೆ ಅವಕಾಶ ಮಾಡಿಕೊಡುತ್ತದೆ.

ಪ್ರಮುಖ ಅಂಶಗಳು

ಮೆಹತಾ ಸಮಿತಿಯು ತನ್ನ ವರದಿಯನ್ನು 1957ರ ನವಂಬರ್ 24ರಂದು ಒಪ್ಪಿ ಸಿತು. ಕೇಂದ್ರ ಸರ್ಕಾರವು ಇದನ್ನು ಪರಿಶೀಲಿಸಿತು. ನಂತರ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲ್‌ನ ಸಭೆಯಲ್ಲಿ ಆಳವಾಗಿ ಚರ್ಚಿಸಲ್ಪಟ್ಟಿತು. ಸಮಿತಿಯ ಶೋಧನೆಗಳು ಮತ್ತು ಶಿಫಾರಸ್ಸುಗಳು ಕೌನ್ಸಿಲ್‌ನಿಂದ ಸಮ್ಮತಿಸಲ್ಪಟ್ಟವು. ನಂತರ ಕೇಂದ್ರ ಸರ್ಕಾರವು ಅವುಗಳ ಕಾರ್ಯಾಚರಣೆಯನ್ನು ಕೈಗೊಳ್ಳಲು ರಾಜ್ಯಸರ್ಕಾರಗಳಿಗೆ ಸೂಚಿಸಿತು. ಎಲ್ಲಾ ರಾಜ್ಯ ಸರ್ಕಾರಗಳು ಸಮಿತಿಯ ಶಿಫಾರಸ್ಸುಗಳನ್ನು ಅನ್ವಯಿಸಿದವು. ಆದ್ದರಿಂದ ಯಾವುದೇ ನಿರ್ದಿಷ್ಟವಾದ ಮಾದರಿಯ ಬಗ್ಗೆ ಸಂಪೂರ್ಣವಾಗಿ ಕಠಿಣತೆ ಇಲ್ಲ. ಪ್ರತಿಯೊಂದು ರಾಜ್ಯವು ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವಂತಹ ಶಿಫಾರಸ್ಸುಗಳನ್ನು ತನ್ನದೇ ಆದ ರೀತಿಯಲ್ಲಿ ಕಾರ್ಯಗತಗೊಳಿಸಲು ಸ್ವಾತಂತ್ರ್ಯ ಹೊಂದಿದೆ. ಆದರೂ ಪಂಚಾಯತಿ ರಾಜ್ಯ ಅತ್ಯವಶ್ಯಕ ಸೂತ್ರಗಳನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲ್ಪಟ್ಟಿದೆ.

(ಎ) ಗ್ರಾಮೀಣ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ಸ್ಥಳೀಯ ಸ್ವಯಂ ಸರ್ಕಾರ ಸಮಿತಿಗಳ ಮೂರು ಶ್ರೇಣಿಯ ರಚನೆಯಿದ್ದು, ಆ ಸಂಸ್ಥೆಗಳು ಪರಸ್ಪರಾವ ಲಂಬಿತವಾಗಿರಬೇಕು.

(ಬಿ) ಅವುಗಳಿಗೆ ಅಧಿಕಾರ ಮತ್ತು ಜವಾಬ್ದಾರಿಯ ನಿಜವಾದ ವರ್ಗಾವಣೆಯಿ ರುತ್ತದೆ.

(ಸಿ) ಈ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಸಹಾಯವಾಗುವಂತೆ ಸಾಕಷ್ಟು ಸಂಪನ್ಮೂಲಗಳನ್ನು ವರ್ಗಾವಣೆ ಮಾಡಲಾಗಿರುತ್ತದೆ.

(ಡಿ) ಈ ಹಂತಗಳಲ್ಲಿ ಎಲ್ಲಾ ಕಲ್ಯಾಣ ಮತ್ತು ಅಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳು ಈ ಸ್ಥಳೀಯ ಸಂಸ್ಥೆಗಳ ಮೂಲಕವೇ ಕಾರ್ಯರೂಪಕ್ಕೆ ಬರುತ್ತವೆ.

(ಇ) ಈ ಸಂಸ್ಥೆಗಳು ವಿವಿಧ ಕರ್ತವ್ಯಗಳು ಮತ್ತು ಕಾರ್ಯಗಳನ್ನು ವಹಿಸಿ ಕೊಂಡಿರುತ್ತವೆ. ಕೆಳಹಂತದ ಸಂಸ್ಥೆಗಳು ಮಾಡುವಂತಹದ್ದನ್ನು ಮೇಲಿನ ಹಂತದ ಸಂಸ್ಥೆಯು ಮಾಡುವ ಅವಕಾಶವಿರಬಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಎಫ್) ಮೂರು ಶ್ರೇಣಿ ವ್ಯವಸ್ಥೆಯು ಮುಂದೆ ಅಧಿಕಾರ ಮತ್ತು ಜವಾಬ್ದಾರಿಗಳ ಬದಲಾವಣೆಯುಂಟಾಗಿ ವಿಕಾಸಹೊಂದಲು ಅನುಕೂಲವಾಯಿತು.

ವಿವಿಧ ರಾಜ್ಯಸರ್ಕಾರಗಳು ಸ್ಥಳೀಯ ಪರಿಸ್ಥಿತಿಗನುಸಾರವಾಗಿ ಈ ತತ್ವಗಳನ್ನು ಅಳವಡಿಸಿಕೊಂಡಿವೆ, ಮಿಗಿಲಾಗಿ ಮಾದರಿಯಲ್ಲಿ ಕಠಿಣತೆಯಿಲ್ಲದ ಕಾರಣದಿಂದ ಪ್ರತಿಯೊಂದು ರಾಜ್ಯವು ಅನುಭವದಿಂದ ಹೆಚ್ಚಿನದನ್ನು ಸೇರಿಸಿ, ಮಾರ್ಪಡಿಸುವಂತಹ ಬದಲಾವಣೆ ಮಾಡಬಹುದು ಮತ್ತು ಅತ್ಯುನ್ನತ ದಕ್ಷತೆಯನ್ನು ಪಡೆಯಲು ಸಜ್ಜಾಯಿತು. ಮೇಲಾಗಿ ಪಂಚಾಯತಿರಾಜ್ ಆಯೋಗದಿಂದ ಬೆಳೆಯುತ್ತಿರುವ ಕಲ್ಪನೆಯಾಗಿ ಭಾವಿಸಿಕೊಂಡಿದ್ದರಿಂದ ಅದರ ಬಗ್ಗೆ ಸಾಕಷ್ಟು ನಿರೀಕ್ಷಿಸಲಾಗಿತ್ತು.

ಪರಿಸಮಾಪ್ತಿಯಲ್ಲಿ ಎಸ್.ಕೆ.ಡೇ. ಅವರ ಪಂಚಾಯತಿ ರಾಜ್ಯದ ಮೂಲ ತತ್ವದ ಆಧಾರದ ಮೇಲಿನ ಉತ್ಸಾಹಪೂರಿತ ಪ್ರತಿಪಾದನೆಯನ್ನು ದಾಖಲು ಮಾಡುವುದು ಸಮಂಜಸವಾದುದು. ಅವರು ಹೀಗೆ ಬರೆಯುತ್ತಾರೆ :

ಮೂಲಭೂತವಾಗಿ ಒಬ್ಬನು ಮೇಲೆ ಹತ್ತಬೇಕೆಂದು ಬಯಸಿದರೆ ಅವನು ತನ್ನ ನಿಯಂತ್ರಿಸಲಾರದಂತ ಭಾರವನ್ನು ತನ್ನ ತೋಳುಗಳ ಮೇಲೆ ಬಿಡಬೇಕು. ಶಿಖರವನ್ನು ಹತ್ತುವ ಜನರಿಗೆ ಇದು ಚೆನ್ನಾಗಿ ಗೊತ್ತಿರುತ್ತದೆ. ನಮ್ಮ ಕೇಂದ್ರ ಸರ್ಕಾರವು ಅದರ ಗಾತ್ರ, ಸಂಸ್ಕೃತಿ ಮತ್ತು ಸಮೃದ್ಧ ಸಂಪ್ರದಾಯಗಳಿಗನುಸಾರವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಕೆಲವು ಜವಾಬ್ದಾರಿಗಳನ್ನು ರಾಜ್ಯಸರ್ಕಾರಗಳೇ ವಹಿಸಿಕೊಳ್ಳಲು ಸಮರ್ಥವಾಗಿದ್ದರೆ ಕೇಂದ್ರಸರ್ಕಾರವು ಅದಕ್ಕೆ ಅವಕಾಶ ಮಾಡಿಕೊಡಬೇಕು. ಅದೇ ರೀತಿ ರಾಜ್ಯಸರ್ಕಾರಗಳು ಜವಾಬ್ದಾರಿಗಳನ್ನು ಪಂಚಾಯತಿರಾಜ್ ಸಂಸ್ಥೆಗಳಾದ ಜಿಲ್ಲಾಪರಿಷದ್, ವಿಭಾಗ ಪಂಚಾಯಿತಿ ಸಮಿತಿ, ಪಂಚಾಯತಿ, ಸಂಬಂಧಪಟ್ಟ ಸ್ವಯಂಸೇವಕ ಸಂಘಗಳು ಮತ್ತು ಕುಟುಂಬ ಇವುಗಳಿಗೆ ವಹಿಸಿಕೊಡಬೇಕು. ಪಂಚಾಯತಿ ರಾಜ್ಯವು ಹೀಗೆ ಜೀವನದ ರೀತಿಯಾಗಿ ಬೆಳೆಯುತ್ತದೆ ಮತ್ತು ಘಟಕ ಸರ್ಕಾರದ ವಿರುದ್ಧವಾಗಿ ಸರ್ಕಾರಕ್ಕೆ ಒಂದು ಹೊಸ ಮಾರ್ಗವಾಗುತ್ತದೆ. ಇದು ನಮ್ಮ ಜನತೆಯನ್ನು ಗ್ರಾಮಸಭೆಯಿಂದ ಲೋಕಸಭೆಯವರೆಗೂ ಸಂಪೂರ್ಣ ಸಂಬಂಧವನ್ನು ತರುತ್ತದೆ. ನಮ್ಮ ಪ್ರಜಾಪ್ರಭುತ್ವದ ಮೊದಲ ಘಟಕವು ಕುಟುಂಬವಾಗಿದೆ. ಕುಟುಂಬಕ್ಕೆ ದೊರೆಯಬೇಕಾದ ಮಾರ್ಗದರ್ಶನವನ್ನು ಪಾರ್ಲಿಮೆಂಟಿನಿಂದ ಕೆಳಗಿನ ಹಂತದವರೆಗೂ ಪಂಚಾಯತಿ ರಾಜ್ಯವು ದೊರಕಿಸುತ್ತದೆ. ಇದು ಜನತೆಯನ್ನು ನಿರ್ದಿಷ್ಟ ಮಟ್ಟದಲ್ಲಿ ಇತರರ ನಿಯಂತ್ರಣದ ಭಾರದಿಂದ ರಕ್ಷಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಂಚಾಯತಿರಾಜ್

ಜಿಲ್ಲಾ ಪರಿಷದ್
(ಜಿಲ್ಲಾ ಮಟ್ಟದಲ್ಲಿ)

ಸದಸ್ಯರು : ಪಂಚಾಯತಿ ಸಮಿತಿಗಳ ಅಧ್ಯಕ್ಷರುಗಳು ಮತ್ತು ಸೂಚಿತ ಸದಸ್ಯರುಗಳು.

ಅಧ್ಯಕ್ಷ : ಸದಸ್ಯರುಗಳಿಂದ ಚುನಾಯಿಸಲ್ಪಡುತ್ತಾನೆ.

ಛೇರ್‌ಮೆನ್ : ಜಿಲ್ಲಾ ಕಲೆಕ್ಟರರು.

ಉಪಸಮಿತಿ ಉಪಸಮಿತಿ

ಪಂಚಾಯತಿ ಸಮಿತಿ
(ಒಂದು ಬ್ಲಾಕ್ ಅಥವಾ ತಾಲ್ಲೋಕು ಮಟ್ಟದಲ್ಲಿ)

ವಿಸ್ತೀರ್ಣ : 250 ಚದರ ಮೈಲಿಗಳು

ಸದಸ್ಯರುಗಳು ; ಗ್ರಾಮಪಂಚಾಯತಿಗಳ ಅಧ್ಯಕ್ಷರುಗಳು ಮತ್ತು ಸೂಚಿತ ಸದಸ್ಯರು.

ಅಧ್ಯಕ್ಷರು : ನೇರವಾಗಿ ಚುನಾಯಿತರಾಗಿರುತ್ತಾರೆ ಅಥವಾ ಸದಸ್ಯರುಗಳಿಂದ ಚುನಾಯಿಸಲ್ಪಡುತ್ತಾರೆ.

ಉಪಸಮಿತಿ ಉಪಸಮಿತಿ

ಗ್ರಾಮ ಪಂಚಾಯತಿ
(ಗ್ರಾಮ ಅಥವಾ ಗ್ರಾಮಗಳ ಸಮೂಹ ಮಟ್ಟದಲ್ಲಿ)

ವಿಸ್ತೀರ್ಣ : 6 ಚದರ ಮೈಲಿಗಳು

ಜನಸಂಖ್ಯೆ : 1500

ಸದಸ್ಯರುಗಳು : 9ರಿಂದ 15 ಮತದಾರರಿಂದ ನೇರವಾಗಿ ಚುನಾಯಿಸಲ್ಪಡುತ್ತಾರೆ.

ಅಧ್ಯಕ್ಷರು : ಮತದಾರರಿಂದ ನೇರವಾಗಿ ಚುನಾಯಿಸಲ್ಪಡುತ್ತಾರೆ ಅಥವಾ ಚುನಾಯಿತ ಸದಸ್ಯರಿಂದ ಚುನಾಯಿಸಲ್ಪಡುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಾಮರ್ಶನ ಮತ್ತು ಟಿಪ್ಪಣಿಗಳು

1. ರಾಧಾ ಕುಮುದ ಮುಖರ್ಜಿ, **ಲೋಕಲ್ ಗವರ್ನಮೆಂಟ್ ಇನ್ ಎನ್ಸಿಯೆಂಟ್ ಇಂಡಿಯಾ** (ಆಕ್ಸ್‌ಫರ್ಡ್ : 1920), ಇಂಟ್ರೊಡಕ್ಷನ್.

1. ಹೆನ್ರಿಮೇಯ್ನ್, **ದಿ ಅರ್ಲಿ ಹಿಸ್ಟರಿ ಆಫ್ ಇನ್‌ಸ್ಟಿಟ್ಯೂಶನ್ಸ್**, (ಲಂಡನ್ : 1880) ಪು, 220-222. ಹೆನ್ರಿ ಮೇಯ್ನ್‌ರವರು ಪ್ರಾಚೀನ ಸಮಾಜದಲ್ಲಿ '5' ಅಂಕಿಯು ಮಹತ್ವವನ್ನು ವಿವರಿಸಿದ್ದಾರೆ. ಈ ಅಂಕಿಯು ಪ್ರಾತನಿಧಿಕವಾದುದು, ಮಾನವನ ಕೈಯೊಂದಕ್ಕೆ 5 ಬೆರಳುಗಳಿವೆ ಎಂಬ ವಿಷಯುವನ್ನು ಹೊರತು ಪಡಿಸಿ ಇನ್ನಾವದೇ ತಾರ್ಕಿತ ವಿವರಣೆಗಳಿಲ್ಲ. ಟೈಲರ್ ಅವರ ಅಭಿಪ್ರಾಯದಲ್ಲಿ "ಅತೀ ಪ್ರಾಚೀನ ಕಾಲದಲ್ಲಿ ವ್ಯಕ್ತಿಗಳು ಲೆಕ್ಕಾಚಾರ ಮಾಡುವಾಗ ಬೆರಳುಗಳನ್ನೇ ಉಪಯೋಗಿಸುತ್ತಿದ್ದರು. ಇಂದಿಗೂ ಈ ರೂಢಿಯು ಚಲಾವಣೆಯಲ್ಲಿರುವದನ್ನು ಕಾಣಬಹುದು. ಹಿಂದಿನ ಕಾಲದಲ್ಲಿ ಬ್ರಿಟನ್ನಿನ ನಗರಗಳ ಮೇಲ್ವಿಚಾರಕರ ಸಂಖ್ಯೆಯೂ 5 ಇತ್ತು. ಪೌರ್ವಾತ್ಯ ದೇಶಗಳಲ್ಲಿ ಕೂಡ ನ್ಯಾಯಾಧೀಶರ ಮತ್ತು ಸಂಧಾನ ಸಮಿತಿಯ ಸದಸ್ಯರ ಸಂಖ್ಯೆಯೂ ಐದೇ ಆಗಿರುತ್ತಿತ್ತು. ಐರ್ಲೆಂಡ್‌ನ ಪ್ರಾತಿನಿಧಿಕ ಕುಟುಂಬದ ಸಂಖ್ಯೆಯೂ ಐದೇ ಆಗಿರುತ್ತಿತ್ತು."

3. ಪಟ್ಟಿಯಲ್ಲಿ ಪಂಚಾಯತ ಎಂಬ ಶಬ್ದವಿಲ್ಲದಿರುವದನ್ನು ಗಮನಿಸಬೇಕು. ಪಂಚಾಯತಗಳು ತುಂಬ ಪ್ರಾಚೀನವಾದುದು ಎಂಬ ವಾದವನ್ನು ಇದು ತಳ್ಳಿಹಾಕುತ್ತದೆ.

4. ಎ. ಎಸ್. ಅಲ್ಟೇಕರ್, ಹೆಚ್. ಡಿ. ಮಾಲವೀಯ, ಅವರ **ವಿಲೇಜ್ ಪಂಚಾಯತ ಇನ್ ಇಂಡಿಯಾ** (ನ್ಯೂದೆಹಲಿ : 1956), ಪು. 53.

5. ಎಂ. ಪಣಿಕ್ಕರ್, **ಎ ಸರ್ವೆ ಆಫ್ ಇಂಡಿಯನ್ ಹಿಸ್ಟರಿ** (ಬಾಂಬೆ : 1954), ಪು, 17.

6. ಟಿ.ಡಬ್ಲ್ಯೂ. ರ್ಹೈಸ್, ಡೇವಿಸ್, **ಬುದ್ಧಿಸ್ಟ ಇಂಡಿಯಾ** (ಕಲ್ಕತ್ತಾ, 1939) ಪು. 35

7. ಕೌಟಿಲ್ಯ. (ಚಾಣಕ್ಯನೆಂಬ ಇನ್ನೊಂದು ಹೆಸರೂ ಇದೇ ವ್ಯಕ್ತಿಗಿದೆ) ಕ್ರಿ.ಪೂ. 321-300ರಲ್ಲಿ ಅರ್ಥಶಾಸ್ತ್ರವೆಂಬ ಗ್ರಂಥದ ಲೇಖಕ.

8. ಹೆನ್ರಿ ಮೇಯ್ನ್, **ವ್ಹಿಲೇಜ ಕಮ್ಯುನಿಟೀಜ್ ಇನ್ ದಿ ಈಸ್ಟ್ ಆ್ಯಂಡ್ ವೆಸ್ಟ್** (ಲಂಡನ್ : 1876) ಲೆಕ್ಚರ್ 5

9. ಮುಸ್ಲಿಂ ಕಾಯಿದೆಯು ಈ ವಿಚಾರವನ್ನು ನಿಜವಾದ ಅರ್ಥದಲ್ಲಿ ಬೆಂಬಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವದಿಲ್ಲ. ಕೆಲವರು ತಮ್ಮ ಅನುಕೂಲತೆಗೆ ತಕ್ಕಂತೆ ಅವುಗಳನ್ನು ಅರ್ಥೈಸಿದರು.

10. ಮ್ಯಾಕ್ಸ ವೇಬರ್, **ರಿಲೀಜನ್ ಆಫ್ ಇಂಡಿಯಾ** (ಗ್ಲೆನ್‌ಕ್ಯೊ ; 1958) ಪು. 130-131.

11. ಹೆನ್ರಿಮೇಯ್ನ್, **ವ್ಹಿಲೇಜ್ ಕಮ್ಯುನಿಟೀಜ್ ಇನ್ ದಿ ಈಸ್ಟ ಅಂಡ್ ವೆಸ್ಟ** (ಲಂಡನ್ : 1876) ಲೆಕ್ಚರ್ 111

12. ಜೇಮ್ಸ ಕೇರ್ಡ ಅವರು ಗ್ರಾಮ ಪಂಚಾಯಂತಿಗಳು ಅವನತಿಗೊಂಡ ಬಗೆಗಿನ ವಿವರಣೆಯನ್ನು ಹೆನ್ರಿಮೇಯ್ನ ಅವರು ಬರೆದ **ಲೈಫ್ ಆ್ಯಂಡ್ ಸ್ಪೀಚೆಸ್ ಆಫ್ ಹೆನ್ರಿ ಮೇಯ್ನ** (ಲಂಡನ್ : 1892) ಪು. 412-425ದರಲ್ಲಿ ಕಾಣ ಬಹುದು.

13. ಸ್ಯಾಂಡರ್ಸನ್ ಅವರನ್ನು ಡಬ್ಲ್ಯೂ.ಹೆಚ್. ವೈಸರ್. **ದಿ ಹಿಂದೂ ಜಾಜಮನಿ ಸಿಸ್ಟಂ** ಪು. 112ರಲ್ಲಿ ಉಲ್ಲೇಖಿಸಲಾಗಿದೆ.

14. 1907ರಲ್ಲಿ ವಿಕೇಂದ್ರೀಕರಣದ ಬಗೆಗಿನ ರಾಯಲ್ ಕಮಿಶನ್‌ನ ಸಲಹೆಗಳ ಸಂಕ್ಷಿಪ್ತರೂಪವನ್ನು ಹೆಚ್.ಡಿ. ಮಾಲವೀಯವರು ಬರೆದ **ವಿಲೇಜ್ ಪಂಚಾಯತ್ಸ ಇನ್ ಇಂಡಿಯಾ** (ನ್ಯೂ ಡೆಹಲಿ ; 1956) ಮತ್ತು ಆರ್.ವ್ಹಿ ಜತ್ತಾರ್ ಬರೆದ **ಎವ್ಹಲೂಶನ್ ಆಫ್ ಪಂಚಾಯತ ರಾಜ್ ಇನ್ ಇಂಡಿಯಾ**, (ಧಾರವಾಡ : 1964)ಗಳಿಂದ ಪಡೆಯಲಾಗಿದೆ.

15. ಆ್ಯನಿ ಬೆಸೆಂಟ್, ಹೆಚ್.ಡಿ. ಮಾಲವೀಯ ಅವರ ಈಗಾಗಲೇ ಮೇಲೆ ಉಲ್ಲೇಖಿಸಿದ ಪುಸ್ತಕದ ಪುಟ 223ರಲ್ಲಿ ವಿವರಣೆಯನ್ನು ಕಾಣಬಹುದು.

16. ಡಾ. ಬಿ. ಆರ್. ಅಂಬೇಡ್ಕರರು ಪಂಚಾಯಂತಗಳ ಪುನರುಜ್ಜೀವನದ ಬಗೆಗೆ ವ್ಯಕ್ತಗೊಳಿಸಿದ ವಿಚಾರಗಳು ಸುಪ್ರಸಿದ್ಧವಾದವು. ಪಂಚಾಯತಗಳು ಮತ್ತು ಇತರ ಪುರಾತನ ಸಂಸ್ಥೆಗಳನ್ನು ಪುನರುಜ್ಜೀವಗೊಳಿಸುವದರಿಂದ ಜನಸಾಮಾನ್ಯರಿಗೆ ಅದರಲ್ಲೂ ವಿಶೇಷವಾಗಿ ಶೋಷಿತ ಕೆಳಜಾತಿಯ ಜನರಿಗೆ ತುಂಬ ಕೆಡಕುಂಟಾಗುವದು ಎಂದು ಅವರು ನಂಬಿದ್ದರು. "ಗ್ರಾಮ ಸ್ವರಾಜ್ಯಗಳು ಈಗಾಗಲೇ ಭಾರತವನ್ನು ನಾಶ ಗೊಳಿಸಿವೆ. ಪ್ರಾದೇಶಿಕತೆ, ಕೋಮುವಾರುಗಳನ್ನು ವಿರೋಧಿಸುವ ಗ್ರಾಮಗಳ ಪರವಾಗಿ ಹೋರಾಡುವವರು ನನ್ನ ಮುಂದೆ ಬನ್ನಿ. ಸ್ಥಾನೀಯ ದಬ್ಬಾಳಿಕೆ, ಅಜ್ಞಾನದ ಆಗರ, ಸಂಕುಚಿತ ಮನೋಭಾವದ, ಜಾತೀಯತೆಯನ್ನೇ ತುಂಬಿಕೊಂಡಿರುವ ತಾಣಗಳು. ಕುಡು ಸಂವಿದಾನದಲ್ಲಿ ಗ್ರಾಮಗಳನ್ನು ಕಡೆಗಣಿಸಿ ವ್ಯಕ್ತಿಯನ್ನು ಯುನಿಟ್ ಆಗಿ ಪರಿಗಣಿಸಿದ್ದು ಒಳ್ಳೆಯದೆ" ಎಂದು ಅವರು ವಾದಿಸಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

17. ಬಲವಂತರಾಯ್ ಮೆಹ್ತಾ, ವಿಕೇಂದ್ರೀಕರಣ ಆಯೋಗದ ವರದಿ 1957, ಈ ವರದಿಯ ಸಂಕ್ಷಿಪ್ತ ವಿವರಣೆಯನ್ನು ಆರ್.ಭ. ಜತಾರ್ ಬರೆದ **ಎವ್ಹಲೂಶನ್ ಆಫ್ ಪಂಚಾಯತಿ ರಾಜ್ ಇನ್ ಇಂಡಿಯಾ** (ಧಾರವಾಡ : 1964) ಗಳಿಂದ ಪಡೆಯಲಾಗಿದೆ.

18. ಎಸ್.ಕೆ.ಡೇ ; **ಪಂಚಾಯತಿ ರಾಜ್** (ಬಾಂಬೆ : 1962) ಪು. 4—5.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ—9

ಸಮುದಾಯ ಅಭಿವೃದ್ಧಿ ಯೋಜನೆ

ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಆಧಾರಗಳಾದ ಸಾಮಾಜಿಕ ಸುಧಾರಣೆ ಮತ್ತು ಪುನಶ್ಚೇತನ ತತ್ವಗಳು ಕೈಗಾರಿಕಾ ಕ್ರಾಂತಿಯ ಫಲಸ್ವರೂಪಗಳು, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ರಂಗಗಳಲ್ಲಿನ ಹೊಸ ಸಂಶೋಧನೆ, ಆವಿಷ್ಕಾರಗಳು ಕೈಗಾರಿಕಾ ಕ್ರಾಂತಿಗೆ ಕಾರಣಗಳೂ ಮತ್ತು ಪರಿಣಾಮವಾಗಿ ಅದರಿಂದ ಶೀಘ್ರ ಸಾಮಾಜಿಕ ಪರಿವರ್ತನೆಗೆ ಕಾರಣವಾದುದು ಮಾನವನ ಇತಿಹಾಸದ ಬಹುಮುಖ್ಯ ಹಂತ.

ಕೈಗಾರಿಕಾ ಕ್ರಾಂತಿ ಕೇವಲ ಅಭಿವೃದ್ಧಿ, ಶ್ರೀಮಂತಿಕೆಯನ್ನಷ್ಟೇ ತರಲಿಲ್ಲ. ಅನಿಷ್ಟಗಳನ್ನೂ ತಂದಿತ್ತು. ಈ ಕ್ರಾಂತಿಯಿಂದ ಉತ್ಪಾದನೆ ವ್ಯವಸ್ಥೆಯಲ್ಲಿ ಎಂದೂ ಕೇಳರಿಯದ ಸುಧಾರಣೆಗಳಾಗಿ ಮಾನವನ ಮೈಮುರಿದು ದುಡಿಯುವ ಶ್ರಮವನ್ನೇನೋ ಕಡಿಮೆ ಮಾಡಿತು. ಆದರೆ ಜೊತೆ–ಜೊತೆಗೆ ಅತಿಯಾದ ಕಷ್ಟಕೋಟಲೆಗಳನ್ನೂ ಆತನ ಬೆನ್ನಿಗೆ ಅಂಟಿಸಿತು. ಮಾನವನ ಸಂಕಟಗಳು ಅನೇಕ ಜಿಜ್ಞಾಸುಗಳನ್ನು ಚಿಂತನೆಗೆ ಒಳಪಡಿಸಿದವು. ಈ ಚಿಂತನೆಗಳು ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆ ಹಾಗೂ ಪುನಶ್ಚೇತನ ಯೋಜನೆಗಳು ಸಮಾಜದ ಖಚಿತ ಜ್ಞಾನವಿರದಿದ್ದರೆ ಸಾಮಾಜಿಕ ಪರಿವರ್ತನೆಯಾಗಲಿ, ಆರ್ಥಿಕ ಪುನಶ್ಚೇತನವನ್ನಾಗಲಿ ಸಾಧಿಸಲು ಅಸಾಧ್ಯವೆಂಬ ಅರಿವು ಚಿಂತಕರಲ್ಲಿ ಉಂಟಾಯಿತು. ಈ ಅರಿವೇ ನವ ಸಾಮಾಜಿಕ ವಿಜ್ಞಾನ ಸಮಾಜ ಶಾಸ್ತ್ರದ ಉಗಮಕ್ಕೆ ಕಾರಣವಾಯಿತು.

ಸಮಾಜ ಶಾಸ್ತ್ರವನ್ನು ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಅಭಿವೃದ್ಧಿಯ ವಿಜ್ಞಾನವೆಂದು ವ್ಯಾಖ್ಯಾನಿಸಿದ ಆಗಸ್ಟ ಕೊಮ್ಟೆಯು ಮಾನವನು ಸಾಮಾಜಿಕ ವ್ಯವಸ್ಥೆ ಹಾಗೂ ಅಭಿವೃದ್ಧಿ ಸಾಧಿಸುವ ಶಕ್ತಿಹೊಂದಿರುವ ಬಗ್ಗೆ ಅಸೀಮ ಆಶಾವಾದಿಯಾಗಿದ್ದ. ಆತ ತನಗಿಂತ ಹಿರಿಯ ತತ್ವಜ್ಞಾನಿಗಳಾದ ಸೇಂಟ್ ಸೈಮನ್, ಅಬೆಚಾರ್ಲ್ಸ್ ಡಿ ಸೇಂಟ್ ಪಿರೆ, ಟರ್ಗಾಟ್, ಕಾಂಡರ'ಸೆಟ್'ರಂತೆ ಸಾಮಾಜಿಕ ವಿಕಾಸವನ್ನು ಮಾನವನ ಬುದ್ಧಿಮಂತಿಕೆ ಮತ್ತು ಜಾಣ್ಮೆಗಳನ್ನು ಉಪಯೋಗಿಸಿ ತೀವ್ರಗೊಳಿಸಲೂ ಮತ್ತು ಅಭಿವೃದ್ಧಿಯತ್ತ ತಿರುಗಿಸಲು ಸಾಧ್ಯವೆಂದು ನಂಬಿದ್ದ. ಆತನು ಮಾನವನ ಸಮಾಜದ ಉದ್ದೇಶವನ್ನು ಸಾರ್ಥಕಪಡಿಸಲು ಮಾರ್ಗದರ್ಶನ ನೀಡುವ ಸಲುವಾಗಿ ಬುದ್ಧಿ ಜೀವಿಗಳ, ಗಣ್ಯರ ಆಳ್ವಿಕೆಯನ್ನು ಪ್ರತಿಪಾದಿಸಿದನು.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸಾಮಾಜಿಕ ಯೋಜನೆಯನ್ನು ಪ್ರತಿಪಾದಿಸಿದ ಆಧುನಿಕ ಸಾಮಾಜಿಕ ವಿಜ್ಞಾನಿಗಳ ಬರವಣಿಗೆಗಳಲ್ಲಿ ಆಗಸ್ಟ ಕೊಪ್ಟೆಯವರ ತತ್ವಜ್ಞಾನವೇ ಪ್ರತಿಧ್ವನಿಸಿತು. ಇಂತಹ ಆಧುನಿಕ ಸಾಮಾಜಿಕ ವಿಜ್ಞಾನಿಗಳಲ್ಲಿ ಎಸ್. ಕೆ. ಡೇ[1] ಅವರು ಒಬ್ಬರು. ಅವರನ್ನು ಭಾರತದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಮುಖ್ಯ ಶಿಲ್ಪಿ ಎಂದು ಕರೆಯ ಲಾಗಿದೆ. ಅವರು ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಕಲ್ಪನೆಯನ್ನು ತಮ್ಮ ವೈಯಕ್ತಿಕ ಅನುಭವದ ತಳಹದಿಯ ಮೇಲೆ ರೂಪಿಸಿದರು. ಈ ಮೊದಲು ಡೇ ಅವರು ನಿಲೋಖೆರಿಯ ಪುನರ್‌ವ್ಯವಸ್ಥೆ ಕೇಂದ್ರದಲ್ಲಿ ಕೆಲಸಮಾಡಿದ್ದರು. ಯೋಗ್ಯ ವೈಜ್ಞಾನಿಕ ಯೋಜನೆ ಮತ್ತು ಸಾರ್ವಜನಿಕರ ಸಹಯೋಗದಿಂದ ಆಶ್ಚರ್ಯಕರವಾದ ಯಶಸ್ಸು ಪಡೆಯಲು ಸಾಧ್ಯವೆಂದು ನಿಲೋಖೆರಿಯ ಪ್ರಯೋಗದಿಂದ ಕಂಡುಕೊಂಡ ಅವರು ಭಾರತದ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮದ ಜಾರಿ ಹಾಗೂ ಅದರ ಯಶಸ್ಸಿಗಾಗಿ ಹಗಲಿರುಳೂ ದುಡಿದರು.

ನಿಲೋಖೆರಿಯ ಪ್ರಯೋಗದ ಹಾಗೆಯೇ ಕವಿಗಳಾದ ರವೀಂದ್ರನಾಥ ಠಾಗೋರರೂ 1921ರಲ್ಲಿ ಶ್ರೀನಿಕೇತನದಲ್ಲೂ, ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಅಭಿವೃದ್ಧಿಗಾಗಿಯೂ. ಎಫ್. ಎಲ್. ಬ್ರಾಯೆನ್‌ರವರು ಪಂಜಾಬದ ಗುರುಗಾಂವದಲ್ಲಿ ಸ್ಪೆನ್ಸರ್ ಹ್ಯಾಚ್‌ರವರು ಕೇರಳದ ಮಾರ್ತಾಂಡಂನಲ್ಲಿಯೂ ಪ್ರಯೋಗ ಕೈಗೊಂಡು ಯಶಸ್ಸನ್ನು ಸಾಧಿಸಿದ್ದರು. ಈ ವ್ಯಕ್ತಿಗಳು ತಮ್ಮ ಸೇವೆಯೊಂದಿಗೆ ಇಡೀ ಪ್ರಯೋಗದ ಅನುಭವ ವಿವರವಾದ ವಿವರಣೆಯ ದಾಖಲೆಯನ್ನು ಬರೆದಿಟ್ಟಿದ್ದರು. ಈ ವಿವರಣೆಗಳು ಮುಂದೆ ಮಾರ್ಗದರ್ಶನ ನೀಡಿದವು. ಭಾರತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳು ರೂಪಗೊಳ್ಳಲು ಈ ವಿವರಗಳು ಬಹುಮುಖ್ಯ ಪಾತ್ರವಹಿಸಿದವು.

ಸರಕಾರದ ಪರವಾಗಿಯೂ ಉತ್ತೇಜನವಿತ್ತು. ಆಗಿನ ಪ್ರಧಾನಮಂತ್ರಿಗಳಾದ ಪಂಡಿತ ಜವಾಹರಲಾಲ್[2] ಅವರು ಈ ಯೋಜನೆಯನ್ನೂ ಪ್ರಾರಂಭಿಸಲು ಉತ್ಸುಕತೆ ತೋರಿದರು.

ಕೃಷ್ಣಮಾಚಾರಿ ಕಮಿಟಿ

ಭಾರತ ಸರಕಾರವು 'ಹೆಚ್ಚು ಆಹಾರಧಾನ್ಯ ಬೆಳೆಯಿರಿ' ಎಂಬ ಕ್ಯಾಂಪೇನ್ ಪ್ರಾರಂಭಿಸಿ ಶೋಚನೀಯ ಸೋಲು ಅನುಭವಿಸಿತು. ಈ ಸೋಲಿನ ಕಾರಣಗಳನ್ನು ತಿಳಿಯಲು ವಿ. ಟಿ. ಕೃಷ್ಣಮಾಚಾರಿಯವರ ಅಧ್ಯಕ್ಷತೆಯಲ್ಲಿ ಕಮೀಟಿಯೊಂದನ್ನು ನೇಮಿಸಿತು. ಅದರ ಮುಖ್ಯ ಉದ್ದೇಶವು ಈ ಕಾರ್ಯಕ್ರಮ ವಿಫಲಗೊಳ್ಳಲು ಕಾರಣಗಳನ್ನು ಕಂಡು ಹಿಡಿಯುವುದರೊಂದಿಗೆ ಮುಂದೆ ಹಮ್ಮಿಕೊಳ್ಳಬಹುದಾದ ಯೋಜನೆಗಳ ಬಗ್ಗೆ ಸಲಹೆ ನೀಡುವುದೂ ಆಗಿತ್ತು. ಈ ಕಮೀಟಿಯ ವರದಿಯು ಸಮುದಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿವೃದ್ಧಿ ಕಾರ್ಯಕ್ರಮದ ಸ್ಥಾಪನೆಗೆ ದಾರಿಮಾಡಿಕೊಟ್ಟಿತು. ಗ್ರಾಮೀಣ ಜೀವನದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಪರಸ್ಪರ ಆಶ್ರಯಿಸಿಕೊಂಡಿರುವುದರಿಂದ ಕೇವಲ ಆರ್ಥಿಕ ಅಭಿವೃದ್ಧಿಗೆ ಮಾತ್ರ ಒತ್ತುಕೊಡುವುದು ಅಸಮಂಜಸ. ಆದುದರಿಂದ ಗ್ರಾಮೀಣ ಅಭಿವೃದ್ಧಿ ಸಾಧಿಸಲು ಸಮಗ್ರ ದೃಷ್ಟಿಕೋನದ ಆವಶ್ಯಕತೆಯಿದೆ ಎಂದು ಕೃಷ್ಣಮಾಚಾರಿ ಕಮಿಟಿ ವರದಿಯು ಅಭಿಪ್ರಾಯಪಟ್ಟಿತು. ಹಳ್ಳಿಗಾಡುಗಳು ಉಳಿದ ಸಮಸ್ಯೆಗಳನ್ನು ಬದಿಗೊತ್ತಿ ಕೇವಲ ಕೃಷಿ ವಿಧಾನಗಳಲ್ಲಿ ಸುಧಾರಣೆ ತರುವುದೂ ಕೂಡ ತಪ್ಪು. ಸರಕಾರದ ಕಾರ್ಯಕ್ರಮಗಳು ವಿಫಲವಾಗಲು ಜನರ ನಿರಾಸಕ್ತಿ ಮತ್ತು ಅಸಹಕಾರಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಆದುದರಿಂದ ಸರಕಾರ ರೂಪಿಸಿದ ಯೋಜನೆಗಿಂತಲೂ ಜನರೇ ರೂಪಿಸಿದ ಯೋಜನೆಗಳು ಯಶಸ್ವಿಯಾಗುವವು ಎಂದು ಈ ವರದಿಯು ಅಭಿಪ್ರಾಯಪಟ್ಟಿತು. ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿಯೂ ಕೂಡ ಗ್ರಾಮೀಣ ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನೂ ಹಾಕಿಕೊಂಡಿದ್ದರೂ ಕೂಡ ಅವುಗಳಿಂದ ಯಾವುದೇ ಉಪಯೋಗವಾಗಲಿಲ್ಲ. ಕಾರಣವಿಷ್ಟೆ ಅವು ಕೇವಲ ಸರಕಾರಿ ಯೋಜನೆಗಳಾಗಿದ್ದು ಜನರ ಬೇಡಿಕೆ ಅಥವಾ ಆವಶ್ಯಕತೆಯ ಬಗ್ಗೆ ಯಾವ ಯೋಜನೆಕಾರರೂ ತಲೆಕೆಡಿಸಿಕೊಳ್ಳದೇ ಈ ಕಾರ್ಯಕ್ರಮಗಳನ್ನೂ ರೂಪಿಸಿದ್ದು. ಗ್ರಾಮೀಣ ಜನ ಈ ಯೋಜನೆಗಳನ್ನು ನಿರಾಸಕ್ತಿಯಿಂದ ಗಮನಿಸಿ ಅಸಹಕಾರ ನೀಡಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದರು. ಇದರಿಂದ ಸರಕಾರದ, ಸಮಾಜದ ಸಾಕಷ್ಟು ಸಮಯ ಮತ್ತು ಸಂಪನ್ಮೂಲ ಪೋಲಾಯಿತು ಅಷ್ಟೆ.

ಆದುದರಿಂದ ಕೃಷ್ಣಮಾಚಾರಿ ಕಮಿಟಿ ವರದಿಯು ಹಿಂದಿನ ತಪ್ಪುಗಳಿಂದ ಪಾಠ ಕಲಿಯಲು ಸರ್ಕಾರಕ್ಕೆ ಎಚ್ಚರಿಕೆ ನೀಡಿತು. ಯೋಜನೆಗಳು ದೆಹಲಿಯಲ್ಲಿ ರೂಪಗೊಂಡು ಹಳ್ಳಿಯತ್ತ ಸಾಗುವುದಕ್ಕಿಂತ ಹಳ್ಳಿಯಲ್ಲಿ ರೂಪಿಸಿ ದೆಹಲಿಯ ಒಪ್ಪಿಗೆಗೆ ಹೋಗುವುದೇ ಒಳಿತು. ಇಂತಹ ಯೋಜನೆಗಳನ್ನು ರೂಪಿಸುವಾಗ ಗ್ರಾಮೀಣ ಜನರ ಆವಶ್ಯಕತೆಗಳನ್ನು ಮತ್ತು ಅವರ ಅಭಿಪ್ರಾಯಗಳಿಗೆ ಹೆಚ್ಚಿನ ಮಹತ್ವ ನೀಡಬೇಕು. ಈ ಮೊದಲು ಯೋಜನೆಗಳು ಸರಕಾರದ ಯೋಜನೆಗಳಾಗಿದ್ದು ಜನಸಾಮಾನ್ಯರ ಭಾಗವಹಿಸುವಿಕೆ ತತ್ವ ಹೊಂದಿದ್ದವು ಆದರೆ ಇನ್ನುಮುಂದೆ ಈ ಯೋಜನೆಗಳು ಜನಸಾಮಾನ್ಯರ ಯೋಜನೆಗಳಾಗಿದ್ದು ಸರಕಾರ ಅವುಗಳ ಜಾರಿಯಲ್ಲಿ ಭಾಗವಹಿಸುವಂತೆ ಮಾಡುವದು ಅತೀ ಆವಶ್ಯವೆಂದು ಕೃಷ್ಣಮಾಚಾರಿ ಕಮಿಟಿಯ ವರದಿಯು ಸಲಹೆ ನೀಡಿತು[3].

ಈ ಕಮಿಟಿಯು ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವ ಕಾರ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತ ಯಂತ್ರದ ಮೇಲೆ ಅತಿಯಾದ ಅವಲಂಬನೆ ಸೂಕ್ತವಲ್ಲವೆಂದು ಆದರಿಂದ ಒಂದೆಡೆ ಸರಕಾರಗಳ ಮೇಲೆ ಹೆಚ್ಚಿನ ಒತ್ತಡ ಬೀಳ ಬಹುದು ಮತ್ತೊಂದೆಡೆ ಜನರು ಯಾವಾಗಲೂ ಸರಕಾರದ ಮೇಲೆಯೇ ಅವಲಂಬಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುವುದರಿಂದ ಅವರಲ್ಲಿ ಉತ್ಸಾಹ ಹುಮ್ಮಸ್ಸನ್ನು ಹೆಚ್ಚಿಸುವಂತೆ ಮಾಡಬಹುದೆಂದು ಅಭಿಪ್ರಾಯಪಟ್ಟರು.

ಈ ಎಲ್ಲ ಅಂಶ ಗಣನೆಗೆ ತೆಗೆದುಕೊಂಡು ಮುಂಬರುವ ಎಲ್ಲ ಯೋಜನೆಗಳಲ್ಲೂ ಸರಕಾರದ ಪಾತ್ರವನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಿ ಗ್ರಾಮೀಣ ಜನರ ಸಂಪೂರ್ಣ ಭಾಗವಹಿಸುವಿಕೆಗೆ ಪ್ರೋತ್ಸಾಹಿಸಬೇಕೆಂದು ಹೀಗೆ ಮಾಡುವುದರಿಂದ ಮಾತ್ರ ಜನರು ಸ್ವಾವಲಂಬಿಗಳಾಗುವುದು ಎಂದು ಕೃಷ್ಣಮಾಚಾರಿ ಕಮೀಟಿಯು ಅಭಿಪ್ರಾಯಪಟ್ಟಿತು. ಅದರಂತೆ ಸಮುದಾಯ ಅಭಿವೃದ್ಧಿಯನ್ನಾಗಿಸದೇ ಅಭಿವೃದ್ಧಿಯನ್ನು ಪ್ರಚೋದಿಸಿ ಶೀಘ್ರಗೊಳಿಸುವ ಒಂದು ನಿಯೋಗದಂತೆ ರೂಪಿಸಲಾಯಿತು. ಇದರಿಂದ ಅಭಿವೃದ್ಧಿ ತ್ವರಿತಗೊಂಡು ಗ್ರಾಮೀಣ ಜನರು ಸ್ವಾವಲಂಬಿಗಳಾದಾಗ ಇಡೀ ಯೋಜನೆಯನ್ನೇ ವಾಪಸ್ಸುಪಡೆದು ಗ್ರಾಮೀಣ ಜನರಲ್ಲಿ ಯೋಜನೆಗಳನ್ನೂ ವಿವಿಧ ಅಭಿವೃದ್ಧಿ ಕಾರ್ಯ ಕ್ರಮಗಳನ್ನೂ ತಾವೇ ರೂಪಿಸಿಕೊಂಡು ಕಾರ್ಯಗತ ಮಾಡುವ ಸ್ಥಿತಿಯನ್ನುಂಟು ಮಾಡು ವುದೇ ಈ ಯೋಜನೆಯ ಮುಖ್ಯ ಗುರಿಯಾಗಿತ್ತು.

ಈ ಕಾರ್ಯಕ್ರಮವನ್ನು ಮೂರು ಹಂತಗಳಲ್ಲಿ ಜಾರಿಗೆ ತರಲು ಯೋಜಿಸಲಾ ಯಿತು.

1. ರಾಷ್ಟ್ರೀಯ ವಿಸ್ತರಣಾ ಸೇವೆಯ ಹಂತ
2. ಸಮುದಾಯ ಯೋಜನೆ ಅಭಿವೃದ್ಧಿ ಹಂತ
3. ಅಭಿವೃದ್ಧಿ ಸಾಧನೆಯ ನಂತರದ ಹಂತ

ಮೊದಲನೆಯ ಹಂತದ ಯೋಜನೆಯನ್ನು ಜಾರಿಗೆ ತರುವುದಕ್ಕಿಂತ ಪೂರ್ವ ಭಾವಿಯ ಹಂತ : ಈ ಹಂತದಲ್ಲಿ ಕೆಲವೇ ವಿಸ್ತೀರ್ಣ ಕಾರ್ಯಕ್ರಮದ ಸಿಬ್ಬಂದಿ ಆಯ್ದ ಹಳ್ಳಿಗಳ ಸರ್ವೆಕ್ಷಣೆಯನ್ನು ಕೈಗೊಂಡು ನಂತರದ ಸಮುದಾಯ ಅಭಿವೃದ್ಧಿ ಯೋಜ ನೆಯ ಬಗೆಗೆ ಚರ್ಚೆ, ಸಂವಾದಗಳನ್ನು ನಡೆಸಿ ಭಿತ್ತಿಪತ್ರ, ಸಿನೇಮಗಳನ್ನು ಪ್ರದರ್ಶಿಸಿ, ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಜನಾಭಿಪ್ರಾಯ ಮೂಡಿಸುವುದು.

ಮೊದಲನೆಯ ಹಂತದ ನಂತರವೇ ಮುಖ್ಯ ಘಟ್ಟ. ಈ ಸಂದರ್ಭದಲ್ಲಿ ಅಭಿ ವೃದ್ಧಿ ಯೋಜನೆಯ ಪೂರ್ಣಕಾಲದ ಎಲ್ಲ ಸಿಬ್ಬಂದಿಯ ನೇಮಕವಾಗುವುದು. ಒಂದು ಬ್ಲಾಕ್ ಮಟ್ಟದಲ್ಲಿ ಒಬ್ಬ ಅಭಿವೃದ್ಧಿ ಅಧಿಕಾರಿಯನ್ನು (ಬ್ಲಾಕ್ ಡೆವ್ಹಲಪ್‌ಮೆಂಟ್ ಆಫೀಸರ್) ನೇಮಿಸಿಕೊಳ್ಳಲು, ಈತನ ಸಹಾಯಕರಿಗೆ ಸಾಮಾಜಿಕ ಶಿಕ್ಷಣ, ವ್ಯವಸಾಯ, ಪಂಚಾಯತ, ಸಹಕಾರ, ಪಶುಸಂಗೋಪನೆಗಳಂತಹ ವಿಷಯಗಳಲ್ಲಿ ಅನುಭವವುಳ್ಳ ವಿಸ್ತರಣಾಧಿಕಾರಿಗಳನ್ನು ನೇಮಿಸಿಕೊಳ್ಳಲಾಗುತ್ತದೆ. ಇವರೆಲ್ಲ ಬ್ಲಾಕ್ ಮಟ್ಟದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧಿಕಾರಿಗಳು. ಇನ್ನು ಗ್ರಾಮದ ಮಟ್ಟದಲ್ಲಿ ಗ್ರಾಮ ಸೇವಕನೆಂಬ ಅಧಿಕಾರಿಯ ನೇಮಕ. ಇವನು ವಿವಿಧ ಶಾಖೆಗಳ ಅನುಭವವುಳ್ಳವನಿದ್ದು ಜನರ ಸರಕಾರದ ನಡು ವಿನ ಸಂಯೋಜಕನಾಗಿ ಕೆಲಸ ಮಾಡಬೇಕಾಗುತ್ತದೆ. ಗ್ರಾಮೀಣ ಜನರಿಗೆ ಈತನು ಸ್ನೇಹಿತ, ಮಾರ್ಗದರ್ಶಕ ಮತ್ತು ಸೇವಕನಾಗಿ ಕೆಲಸ ಮಾಡಬೇಕೆಂದು ಆಶಿಸಲಾಗಿತ್ತು.

ಮೂರನೆಯ ಹಂತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯು ಎಲ್ಲ ಸರಕಾರಿ ಯಂತ್ರವನ್ನೂ, ಸಿಬ್ಬಂದಿಯನ್ನು ಹಿಂತೆಗೆದುಕೊಂಡು ನೆಪಮಾತ್ರಕ್ಕೆ ಬೇಕಾಗಿರುವ ಷ್ಟನ್ನು ಕಾಯ್ದುಕೊಂಡು ಗ್ರಾಮೀಣ ಜನತೆಗೆ ಕೇವಲ ಉಸ್ತುವಾರಿ ಹಾಗೂ ಮಾರ್ಗ ದರ್ಶನವನ್ನಷ್ಟೇ ನೀಡುವುದಾಗಿತ್ತು. ಹೀಗೆ ಪ್ರತಿಯೊಂದು ಬ್ಲಾಕೂ ಸಹ ಮೂರು ಹಂತಗಳ ಅನುಭವ ಹೊಂದಿರಬೇಕಿತ್ತು.

ಈ ಯೋಜನೆಗಿಂತ ಮೊದಲು ಕೂಡ ಅನೇಕ ಮಹತ್ವದ ಉದ್ದೇಶಗಳುಳ್ಳ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತಾದರೂ ಅವು ವಿಫಲಗೊಂಡಿದ್ದವು. ಇಂತಹ ಯೋಜನೆಗಳಿಗೆ ಹಳ್ಳಿಗಳಲ್ಲಿನ ಸಂಪ್ರದಾಯ ತತ್ವಗಳು ಮತ್ತು ಇತರೆ ಹಳೆಯ ತಲೆ ಮಾರಿನ ನಾಯಕರ ವಿರೋಧವಿತ್ತು. ಈ ಹಳೆಯ ತಲೆಮಾರಿನ ಮುಖಂಡರುಗಳ ಮಾತಿನ ಬಗ್ಗೆ ಗೌರವವಿರುವುದರಿಂದ ಹೊಸತನ್ನು ತರುವ ಸಾಮಾಜಿಕ ಬದಲಾವಣೆಗೆ ಬದ್ಧವಾಗಿರುವ ಯೋಜನೆಗಳನ್ನು ಪಟ್ಟಭದ್ರ ಸನಾತನಿಗಳು ಸಹಿಸಲಿಲ್ಲ. ಆದ್ದರಿಂದ ಕ್ರಾಂತಿಕಾರಕ ಯೋಜನೆಗಳೆಲ್ಲಾ ವಿಫಲಗೊಳಿಸಲು ಹೊಂಚುಹಾಕಿ ಸಫಲತೆ ಹೊಂದಿರು ವುದನ್ನು ಮರೆಯುವಂತಿರಲಿಲ್ಲ, ಸಮುದಾಯ ಅಭಿವೃದ್ಧಿ ಯೋಜನೆಯು ಈ ಸಮಸ್ಯೆಯನ್ನು ಎದುರಿಸಲೇಬೇಕಿತ್ತು. ಆದುದರಿಂದ ಈ ಯೋಜನೆಯು ಹೊಸ ಗ್ರಾಮೀಣ ಮುಖಂಡತ್ವವನ್ನು ಪ್ರೋತ್ಸಾಹಿಸಲೇಬೇಕಿತ್ತು. ಅದಕ್ಕಾಗಿ ಪ್ರತಿಯೊಂದು ಗ್ರಾಮಗಳಲ್ಲಿಯೂ ಯುವ ಪ್ರತಿಭೆಯನ್ನು ಗುರುತಿಸಿ, ಗ್ರಾಮೀಣ ಪ್ರಗತಿಯ ಚಟುವಟಿಕೆಯಲ್ಲಿ ಅವರ ಪಾತ್ರವಹಿಸುವಿಕೆಯನ್ನು ಪ್ರೋತ್ಸಾಹಿಸಲು ಯುವಕ ಸಂಘ, ಮನೋರಂಜನೆಯ ಕೇಂದ್ರ, ಯುವ ರೈತರ ಸಂಘಗಳನ್ನು ಸ್ಥಾಪಿಸಿತು. ಒಮ್ಮೆ ಯುವ ಶಕ್ತಿಯನ್ನು ಪ್ರೋತ್ಸಾಹಿಸಿದರೆ ಕಾಲಕ್ರಮೇಣ ಯುವಕರು ಹೊಸ ಜವಬ್ದಾರಿಗಳನ್ನು ಹೊರಲು ಅಣಿಯಾಗಬಹುದು ಎಂಬ ಆಶಯ ಈ ಕಾರ್ಯಕ್ರಮದಲ್ಲಿತ್ತು.

ಸಮುದಾಯ ಅಭಿವೃದ್ಧಿ ಯೋಜನೆಯು ಸ್ವೀಕರಿಸಿದ ಇನ್ನೊಂದು ಸವಾಲು : ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ ಶೋಷಣೆಗೆ ಒಳಗಾದ ಹಿಂದುಳಿದ ಗುಂಪುಗಳ ಕಲ್ಯಾಣ. ಅನೇಕ ಸಂದರ್ಭಗಳಲ್ಲಿ ಭಾರತದ ಗ್ರಾಮೀಣ ಸಮುದಾಯವನ್ನು ನೀರಿ ನಲ್ಲಿ ತೇಲುವ ಮಂಜುಗಡ್ಡೆಗೆ ಹೋಲಿಸಲಾಗುತ್ತದೆ. ಈ ಮಂಜುಗಡ್ಡೆಯು ಕಾಲು ಭಾಗದಷ್ಟು ಮಾತ್ರ ಗೋಚರವಾಗಿದ್ದು ಉಳಿದದ್ದು ಅದರಡಿಯ ನೀರಿನಲ್ಲಿ ಮುಳುಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರುತ್ತದೆ.[7] ಗ್ರಾಮಾಂತರ ಪ್ರದೇಶದಲ್ಲಿನ ಸಮುದಾಯಗಳನ್ನು ಗಮನಿಸಿದಾಗ ಎಲ್ಲ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಶಕ್ತಿಯು ಕೆಲವೇ ಜಾತಿಗಳಲ್ಲಿ ಕೇಂದ್ರೀಕೃತ ವಾಗಿದ್ದು ಉಳಿದ ಜಾತಿಯ ಜನರು ಯಾವುದೇ ಹಕ್ಕುಗಳಿಲ್ಲದೆ ಗುಲಾಮರಾಗಿರು ವಂತಹ ಸ್ಥಿತಿ ಕಾಣಬಹುದು, ಇಂತಹ ನಿಷ್ಠಾವಂತ ಸೇವಕ ಸ್ಥಾನದಲ್ಲಿರುವ ಜನರು ತಮ್ಮ ಯಜಮಾನರ ಅಭಿವೃದ್ಧಿಯಾದರೆ ಮಾತ್ರ ತಮ್ಮ ಪರಿಸ್ಥಿತಿಯಲ್ಲಿ ಸುಧಾರಣೆ ಯಾಗಬಹುದೆಂಬ ನಂಬಿಕೆ ಹೊಂದಿರುವುದರಿಂದ ಗ್ರಾಮೀಣ ಅಭಿವೃದ್ಧಿ ಚಟುವಟಿಕೆ ಯಲ್ಲಿ ಅವರು ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಲು ಅಸಾಧ್ಯ. ಇಂತಹ ಜನರೇ ಇಲ್ಲಿ ಬಹುಪಾಲು. ಈ ಬಹುಪಾಲು ಜನರ ಭಾಗವಹಿಸುವಿಕೆಯು ಸಮುದಾಯ ಅಭಿ ವೃದ್ಧಿ ಯೋಜನೆಗೆ ಅಲಭ್ಯವಾಗುವುದನ್ನು ತಪ್ಪಿಸಲೇ ಬೇಕಾಗುವುದರಿಂದ ಮೊದಲು ಜಮೀನ್ದಾರಿ ಅಥವಾ ಪಾಳೆಗಾರಿಕೆ ಪದ್ಧತಿಯ ಸಾಮಾಜಿಕ ಸಂಘಟನೆಯನ್ನೇ ಧ್ವಂಸ ಮಾಡುವ ಅವಶ್ಯಕತೆ ಇರುತ್ತದೆ. ಆದುದರಿಂದ ಈ ಉದ್ದೇಶ ಸಾಧನೆಗಾಗಿ ಸಮು ದಾಯ ಅಭಿವೃದ್ಧಿ ಯೋಜನೆಯಲ್ಲೂ ಇಂತಹ ಸಮೂಹಗಳಿಗೆ ಸಹಾಯಕವಾಗು ವಂತಹ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು.

ಸಮುದಾಯ ಅಭಿವೃದ್ಧಿ ಯೋಜನೆಯು ನಮ್ಮ ಯೋಜನಾ ವಿಶೇಷಜ್ಞರು ಬಹುಕಾಲದ ಕನಸಾದ ಸಮತಾವಾದಕ್ಕೆ ಬದ್ಧವಾದ ಸಮಾಜದ ಸ್ಥಾಪನೆಯ ಉದ್ದೇಶ ವನ್ನು ಹೊಂದಿತ್ತು.[8] ಸಮಾಜದ ವಿವಿಧ ಸಾಮಾಜಿಕ ಸ್ತರಗಳ ನಡುವಿನ ಅಂತರವು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಲೇ ನಡೆದಿದೆ. ಈ ಅಂತರವು ಒಂದೇ ಸಮಾಜ ಒಂದೇ ಸಂಸ್ಕೃತಿ, ಒಂದೇ ವಾತಾವರಣದಲ್ಲಿ ಏಕ ಕಾಲಕ್ಕೆ ಎರಡು ವಿಭಿನ್ನ ಜಗತ್ತನ್ನು ಸೃಷ್ಟಿಸುವ ಮಟ್ಟಿಗೆ ಮುಂದುವರಿದಿದೆ.[9] ಇಂತಹ ಸಂದಿಗ್ಧ ಪರಿಸ್ಥಿತಿಯು ಪ್ರಗತಿಪರ ದತ್ತ ಸಾಗುತ್ತಿರುವ ರಾಷ್ಟ್ರಕ್ಕೆ ಹಾನಿಕಾರಕವಾದುದು. ಇದನ್ನು ತಪ್ಪಿಸಿ ಪ್ರಜಾಸತ್ತಾ ತ್ಮಕ, ಸಮಾನತೆಯ ಸಮಾಜದ ಸ್ಥಾಪನೆಗಾಗಿ, ಶೋಷಿತ, ಹಿಂದುಳಿದ ವರ್ಗಗಳಿಗೆ ವಿಶೇಷ ಸೌಲಭ್ಯಗಳನ್ನು ಹೊಡೆಯುವಂತೆ ಮಾಡಿ ಅವರನ್ನು ಸಮಾಜದ ಮುಖ್ಯ ಪ್ರವಾಹಕ್ಕೆ ಕೂಡಿಸುವುದು ಅತ್ಯವಶ್ಯವೆಂದು ಅದನ್ನು ಸಾಧಿಸುವ ಉದ್ದೇಶವನ್ನು ಸಮುದಾಯ ಅಭಿವೃದ್ಧಿ ಯೋಜನೆಯು ಹೊಂದಿತ್ತು.

ಮೊದಲ ಹೆಜ್ಜೆ

ಸಮುದಾಯ ಅಭಿವೃದ್ಧಿ ಯೋಜನೆಯನ್ನು ಅಕ್ಟೋಬರ್ 2. 1952ರಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯಲ್ಲಿ ಆಡಳಿತದ ಕೇಂದ್ರಗಳಾಗಿ ಸಮುದಾಯ ಅಭಿವೃದ್ಧಿಯ ಕೆಲವು ಬ್ಲಾಕ್‌ಗಳನ್ನಾಗಿ ಮಾಡಲಾಯಿತು. ಒಂದು ಸಾಮಾನ್ಯ ಬ್ಲಾಕ್ 60 ಸಾವಿರದಿಂದ 80 ಸಾವಿರದವರೆಗೂ ಜನಸಂಖ್ಯೆ ಹೊಂದಿರುತ್ತಿತ್ತು. ಮರಳು ಗಾಡು ಮತ್ತು ಗುಡ್ಡಬೆಟ್ಟಗಳ ಪ್ರದೇಶದಲ್ಲಿ 20 ರಿಂದ 30 ಸಾವಿರ ಜನಸಂಖ್ಯೆ ಇದ್ದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಕು ಅದನ್ನು ಬ್ಲಾಕನ್ನಾಗಿ ಮಾಡಿದರು. ಗುಡ್ಡಗಾಡು ಪ್ರದೇಶಗಳಲ್ಲಿನ ಬುಡಕಟ್ಟು ಜನರಿಗಾಗಿಯೇ ಪ್ರತ್ಯೇಕ ಬ್ಲಾಕ್‌ಗಳನ್ನಾಗಿಯೂ ಮಾಡಲಾಯಿತು. ಪ್ರತಿಯೊಂದು ಬ್ಲಾಕ್‌ಗಳಿಗೂ ಒಬ್ಬ ಬ್ಲಾಕ್ ಅಭಿವೃದ್ಧಿ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಯಿತು. ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಕೃಷಿ, ಪಶುಸಂಗೋಪನೆ, ಕುಟೀರ ಉದ್ಯೋಗ, ಆರೋಗ್ಯ, ಸಾಮಾಜಿಕ ಶಿಕ್ಷಣ, ಸಹಕಾರ ಮತ್ತು ಮಹಿಳೆ ಹಾಗೂ ಮಕ್ಕಳ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗಲು ನೇಮಕವಾದ ವಿಸ್ತೀರ್ಣಾಧಿಕಾರಿಗಳ ಚಟುವಟಿಕೆಗಳನ್ನು ಸಂಯೋಜಿಸುವ ಜವಾಬ್ದಾರಿಯೂ ಬ್ಲಾಕ್ ಮಟ್ಟದ ಅಧಿಕಾರಿಯು ಹೊಂದಿದ್ದು, ವಿಸ್ತೀರ್ಣಾಧಿಕಾರಿಗಳು ಗ್ರಾಮಮಟ್ಟದ ಸುಮಾರು ಹತ್ತು ವಿವಿದ್ದೋದ್ದೇಶ ಗ್ರಾಮಸೇವಕರ ಚಟುವಟಿಕೆಯನ್ನು ಸಂಯೋಜಿಸ ಬೇಕಾಗುತ್ತಿತ್ತು. ಇದರೊಂದಿಗೆ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ ಗಳನ್ನು ನೋಡಿಕೊಂಡು ಹೋಗಲು ಗ್ರಾಮಮಟ್ಟದಲ್ಲಿ ಗ್ರಾಮಸೇವಕಿಯರೂ ಹಾಗೂ ಗ್ರಾಮಸೇವಕಿಯರ ಚಟುವಟಿಕೆಗೆ ಪರಿವೀಕ್ಷಣೆ ಹಾಗೂ ಮಾರ್ಗದರ್ಶನಕ್ಕಾಗಿ ಬ್ಲಾಕ್‌ಮಟ್ಟದಲ್ಲಿ ಒಬ್ಬ ಮುಖ್ಯ ಸೇವಕಿಯೂ ಇರಬೇಕಾಗಿತ್ತು. ವಿಶೇಷ ಧನ ಸಹಾಯ ಮತ್ತು ಆವಶ್ಯಕ ಸಲಕರಣೆಗಳು ಬ್ಲಾಕ್ ಮಟ್ಟದಲ್ಲಿರಿಸಲಾಗುತ್ತಿತ್ತು. ಇವೆ ರಡನ್ನೂ ಈ ಅಭಿವೃದ್ಧಿ ಯೋಜನೆಯ ಸಂಪನ್ಮೂಲ ಕೇಂದ್ರವೆಂದು ಕರೆಯಲಾಗು ತ್ತಿತ್ತು.

1952ರಲ್ಲಿ ಸೀಮಿತ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭವಾದ ಕೂಡಲೇ ನಮ್ಮ ದೇಶದ ಉಳಿದೆಡೆಯಲ್ಲೆಲ್ಲ ತಮ್ಮ ಪ್ರದೇಶಗಳಲ್ಲಿಯೂ ಈ ಯೋಜನೆಯನ್ನು ಪ್ರಾರಂಭಿಸಲು ಬೇಡಿಕೆ ಪ್ರಾರಂಭವಾಯಿತು. ಸಮುದಾಯ ಅಭಿವೃದ್ಧಿ ಯೋಜನೆ ಗಾಗಿ ಬಂದ ಒತ್ತಾಸೆಗಳನ್ನು ನಿರ್ಲಕ್ಷಿಸಲಾಗದೆ ಅದನ್ನು ರಾಷ್ಟ್ರದ ಉಳಿದ ಭಾಗಕ್ಕೂ ವಿಸ್ತರಿಸಲು ಉದ್ದೇಶಿಸಲಾಯಿತು. ಇದನ್ನು ಕೂಡಲೇ ಜನರಿಗೆ ತಲಪಬೇಕಾಗಿದ್ದರಿಂದ ಮೂಲ ಯೋಜನೆಯಲ್ಲಿ ಮಾರ್ಪಾಟು ಮಾಡಿ ಅದನ್ನು ಸಂಕ್ಷಿಪ್ತ ರೂಪಕೊಟ್ಟು ರಾಷ್ಟ್ರೀಯ ವಿಸ್ತೀರ್ಣ ಯೋಜನೆ ಎಂಬ ಹೊಸ ಹೆಸರಿನೊಂದಿಗೆ ಜಾರಿಗೆ ತರಲಾಯಿತು. ಈ ಯೋಜನೆಯಲ್ಲಿ ಕೇವಲ ಅತೀ ಮುಖ್ಯ ಅಧಿಕಾರಿಗಳ ನೇಮಕವಾಯಿತು. ಹಾಗೂ ಧನಸಹಾಯದ ಮೊತ್ತದಲ್ಲಿ ಕಡಿತವನ್ನುಂಟು ಮಾಡಲಾಯಿತು. ಈ ಯೋಜನೆ ಯನ್ನು 8-10 ವರ್ಷಗಳಲ್ಲಿ ರಾಷ್ಟ್ರವ್ಯಾಪಿಯಾಗಿ ಜಾರಿಗೆ ತರುವ ಉದ್ದೇಶ ಆಗಿನ ಸರ್ಕಾರ ಹೊಂದಿತು.

ಭಾರತ ಸರಕಾರವು ಈ ಬದಲಾದ ಸಂದರ್ಭದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಸಲಹೆ ಸೂಚನೆ ನೀಡಲು ಒಂದು ಅಧ್ಯಯನ ಸಮಿತಿಯನ್ನು ನೇಮಿಸಿತು.[10] ಈ ಅಧ್ಯಯನ ಸಮಿತಿಯು 1958ರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನ್ನ ವರದಿಯನ್ನು ಸಲ್ಲಿಸಿತು. ಅದು ಈ ಯೋಜನೆಯ ಧೋರಣೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನೂ ಸೂಚಿಸಿತು. ಹೊಸದಾಗಿ ಜಾರಿಗೆ ತರಲು ಬಯಸಿದ ರಾಷ್ಟ್ರೀಯ ವಿಸ್ತೀರ್ಣ ಸೇವೆಯನ್ನು ಮೊದಲಿನ ಸಮುದಾಯ ಅಭಿವೃದ್ಧಿ ಯೋಜನೆಯಲ್ಲಿ ಜಾರಿಗೆ ತರಬೇಕು. ಇದಕ್ಕಾಗಿ ಸಾಕಷ್ಟು ಹಣವನ್ನು ತೆಗೆದಿಡಬೇಕು ಎಂದು ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

ಪರಿಷ್ಕೃತ ಸಮುದಾಯ ಅಭಿವೃದ್ಧಿ ಯೋಜನೆಯಡಿಯಲ್ಲೂ ಒಂದೊಂದು ಬ್ಲಾಕುಗಳು 100 ಗ್ರಾಮಗಳನ್ನು ಹೊಂದಿದ್ದು ಸುಮಾರು 60 ರಿಂದ 70 ಸಾವಿರ ಜನಸಂಖ್ಯೆ ಹೊಂದಿರಬೇಕೆಂದು ವರದಿಯಲ್ಲಿ ತಿಳಿಸಲಾಗಿತ್ತು. ಈ ಯೋಜನೆಯು 1963ರೊಳಗಾಗಿ ಕ್ಷೇತ್ರದ ಎಲ್ಲೆಡೆಯೂ ಜಾರಿಗೆ ಬರಬೇಕೆಂದು ಆಶಿಸಲಾಗಿತ್ತು. ಅಧ್ಯಯನ ತಂಡವು ಈ ಯೋಜನೆಯನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಜನ ಸತ್ತಾತ್ಮಕ ಸಂಸ್ಥೆಗಳಿಗೆ ವಹಿಸುವಂತೆ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳಲಾ ಯಿತು. ಈ ವರದಿಯ ಸಲಹೆಯ ಮೇರೆಗೆ 'ಪಂಚಾಯತಿ ರಾಜ' ಪರಿಕಲ್ಪನೆಯು ಹೆಚ್ಚು ಪ್ರಚಲಿತವಾಯಿತು. ಸರಕಾರದ ಈ ಯೋಜನೆಗೆ ಪಂಚಾಯತಿಯ ಎರಡು ಹಂತಗಳ ಸಹಕಾರ (ಒಂದು ಕೇಂದ್ರ ಸರಕಾರಕ್ಕೂ ಎರಡನೇಯದು ರಾಜ್ಯಮಟ್ಟಕ್ಕೂ) ಸಿಗತೊಡಗಿತು, ರಾಜ್ಯಮಟ್ಟದಲ್ಲಿ ಜಿಲ್ಲೆ ತಾಲ್ಲೂಕು ಮತ್ತು ಗ್ರಾಮಗಳ ಮಟ್ಟದಲ್ಲಿಯೂ ಪಂಚಾಯತ ರಾಜ್ಯದ 3 ಹಂತಗಳು ಈ ಯೋಜನೆಯೊಂದಿಗೆ ಬೆಳೆದು ಅದರ ಯಶಸ್ವಿ ಗಾಗಿ ಸಹಕಾರ ಸಿಗತೊಡಗಿತು. ಗ್ರಾಮ ಸಭೆಯು ಆಯಾ ಗ್ರಾಮದ ಎಲ್ಲ ಸದಸ್ಯರು ಒಂದೆಡೆ ಸೇರಿ ಚರ್ಚೆ ಸಂವಾದ ನಡೆಸುವ ವೇದಿಕೆಯೂ ಪಂಚಾಯತಿಯು ಗ್ರಾಮದ ಆಡಳಿತ ಯಂತ್ರವಾಯಿತು.

ಗ್ರಾಮಪಂಚಾಯತಿಗಳು ಅದರ ತಾಲ್ಲೂಕಾ ಮಟ್ಟದ ಹಂತವಾದ ಬ್ಲಾಕ್ ಪಂಚಾಯತ್ ಸಮಿತಿಯೊಂದಿಗೆ ಸಂಬಂಧ ಹೊಂದಿ ಇಡೀ ಬ್ಲಾಕಮಟ್ಟದಲ್ಲಿ ಸಮು ದಾಯ ಅಭಿವೃದ್ಧಿ ಯೋಜನೆಗೆ ಅವಶ್ಯಕ ಮಾರ್ಗದರ್ಶನ ಮತ್ತು ನಿರ್ದೇಶನ ನೀಡುವ ಜವಾಬ್ದಾರಿ ಹೊಂದಿದ್ದವು. ಸಮುದಾಯ ಅಭಿವೃದ್ಧಿಯ ಬ್ಲಾಕ್‌ಗಳು ಜಿಲ್ಲಾಮಟ್ಟದ ಜಿಲ್ಲಾ ಪರಿಷತ್‌ಗಳಿಗೆ ಸಂಬಂಧ ಹೊಂದಿ ಇವುಗಳಿಗೆ ಬ್ಲಾಕ್ ಪಂಚಾಯತ್ ಸಮಿತಿಯ ಸದಸ್ಯರು ಪ್ರತಿನಿಧಿಸುತ್ತಿದ್ದರು. ಜಿಲ್ಲೆಯಿಂದ ಚುನಾಯಿತರಾದ ಶಾಸಕರೂ ಹಾಗೂ ಪಾರ್ಲಿಮೆಂಟಿನ ಸದಸ್ಯರೂ ಪರಿಷತ್‌ನ ವಿಶೇಷ ಆಮಂತ್ರಿತರಾಗಿರಬೇಕಾಗಿತ್ತು.

ಪ್ರತಿಯೊಂದು ಬ್ಲಾಕ್ ಮಟ್ಟದಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಬಜೆಟನ್ನು ತಯಾರು ಮಾಡಲಾಗಿತ್ತು. ಈ ಯೋಜನೆಯ ಮೊದಲನೆಯ ಹಂತಕ್ಕಾಗಿ 12 ಲಕ್ಷ ಮತ್ತು ಎರಡನೆಯ ಹಂತಕ್ಕೆ 5 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋಚಿಸಲಾಯಿತು. ಮೂರನೆಯ ಪಂಚವಾರ್ಷಿಕ ಯೋಜನೆಯ ಮುಕ್ತಾಯದವರೆಗೂ ಈ ಯೋಜನೆಗಳ ಧನಸಹಾಯದ ಹೊಣೆಯು ಕೇಂದ್ರ ಸರ್ಕಾರವೇ ವಹಿಸಿಕೊಳ್ಳಬೇಕಾಯಿತು. ಆದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಅಂದರೆ 1969ರ ಏಪ್ರಿಲ್ ತಿಂಗಳಿನಿಂದ ಕೇಂದ್ರ ಸರಕಾರವು ಕೇವಲ ಸಹಾಯಧನ ಮತ್ತು ಸಾಲವಾಗಿ ಪ್ರತಿಯೊಂದು ರಾಜ್ಯಗಳಿಗೆ ಕೊಟ್ಟು ಈ ಮೂಲಕ ಧನಸಹಾಯವನ್ನು ಸಮುದಾಯ ಅಭಿವೃದ್ಧಿಯೋಜನೆಯ ಅವಶ್ಯಕತೆಗೆ ಉಪಯೋಗಿಸಿಕೊಳ್ಳಲು ಸೂಚಿಸಿತು, ಹೀಗಾಗಿ ಪ್ರತಿಯೊಂದು ಬ್ಲಾಕ್‌ಗಳಲ್ಲಿನ ಸಮುದಾಯ ಅಭಿವೃದ್ಧಿ ಯೋಜನೆಗೆ ಹಣವನ್ನು ಹೊಂದಿಸುವ ಹೊಣೆಯು ರಾಜ್ಯ ಸರ್ಕಾರದ ಮೇಲೆಯೇ ಬಿದ್ದಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ದಿನಗಳಲ್ಲಿ ಒಟ್ಟು 5265 ಸಮುದಾಯ ಅಭಿವೃದ್ಧಿ ಯೋಜನೆಯ ಬ್ಲಾಕ್‌ಗಳು ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿದ್ದವು. ಕೆಲವು ರಾಜ್ಯಗಳಲ್ಲಿ ಪುನರ್ ಸಂಘಟನೆ ಕ್ರಮದಿಂದ ಈ ಸಂಖ್ಯೆಯು 4893ಕ್ಕೆ ಇಳಿದವು. ಆಗ ಅಂದರೆ ಏಪ್ರಿಲ್ 2,1971, ಈ ಮುಂದೆ ತಿಳಿಸಿದ ಒಟ್ಟು ಸಂಖ್ಯೆ 492 ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳೂ ಸೇರಿದ್ದವು. ಈ ಕೆಳಗಿನ ಪಟ್ಟಿಯು ಹೆಚ್ಚಿನ ವಿವರಣೆಯನ್ನು ನೀಡುತ್ತದೆ.

ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳು (ರಾಜ್ಯವಾರು ಹಂಚಿಕೆ 1971ರಲ್ಲಿ)

ರಾಜ್ಯ	ಜನಸಂಖ್ಯೆ (ಲಕ್ಷಗಳಲ್ಲಿ) ಗುರಿ-ಸಾಧನೆ	ಹಳ್ಳಿಗಳು (100ರಲ್ಲಿ)	ಪ್ರದೇಶ (100 ಚ.ಕಿ.ಮೀ ಗಳಲ್ಲಿ)
1 ಆಂಧ್ರಪ್ರದೇಶ	324-334	271	2749
2 ಅಸ್ಸಾಂ	139-111	208	996
3. ಬಿಹಾರ	587-452	667	1739
4. ಗುಜರಾತ	218-194	186	1870
5. ಹರಿಯಾನ	82-70	71	436
6. ಹಿಮಾಚಲಪ್ರದೇಶ	69-45	117	448
9. ಜಮ್ಮು ಮತ್ತು ಕಾಶ್ಮೀರ	73-32	66	1233
8. ಕೇರಳ	143-162	16	387
9. ಮಧ್ಯಪ್ರದೇಶ	457-309	704	4431
10. ಮಹಾರಾಷ್ಟ್ರ	425-328	359	3066

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

11. ಮಣಿಪುರ	14-6.7	19	223
12. ಮೇಘಾಲಯ	24-7.7	49	224
13. ಕರ್ನಾಟಕ	175-217	264	1920
14. ನಾಗಾಲ್ಯಾಂಡ	21-4	8	165
15. ಒರಿಸಾ	314-174	465	1558
16. ಪಂಜಾಬ	116-91	129	617
17. ರಾಜಸ್ಥಾನ	232-189	322	3423
18. ತಮಿಳನಾಡು	224-303	141	1302
19. ತ್ರಿಪುರ	17-9.4	49	105
20. ಉತ್ತರಪ್ರದೇಶ	678-690	1126	2936
21. ಪ. ಬಂಗಾಳ	335-301	385	874
22, ಅರುಣಾಚಲಪ್ರದೇಶ	43-3.4	22	814
23. ಅಂಡಮಾನ+ನಿಕೋಬಾರ್	5-0.6	4	83
24. ಚಂದಿಗಡ	1-0.2	ಮಾಹಿತಿ ಇಲ್ಲ	ಮಾಹಿತಿಇಲ್ಲ
25. ದಾದರ್, ನಗರ್‌ಹವೇಲಿ	2-0.6	1	5
26. ದೆಹಲಿ	5-3.0	3	15
27. ಪಾಂಡಿಚೇರಿ	4-3.7	4	5
28. ಗೋವಾ, ದಮನ್, ದೀವ್	12-5.5	2.5	37
29. ಲಕ್ಷದೀಪ್, ಮಿನಿಕಾಯ್ ಅಮೀನ್‌ದೀವ್	4 ಮಾಹಿತಿ ಇಲ್ಲ	ಮಾಹಿತಿ ಇಲ್ಲ	ಮಾಹಿತಿ ಇಲ್ಲ

ಆಧಾರ : ಇಂಡಿಯಾ 1973.

ಈ ಕಾರ್ಯಕ್ರಮಕ್ಕಾಗಿ ಮೂರು ಯೋಜನೆಯಲ್ಲಿ ಜನತೆಯ ಪಾಲಿನ ಧನ ಸಹಾಯದ ಪ್ರಮಾಣವು ಅನುಕ್ರಮವಾಗಿ ಈ ರೀತಿಯಾಗಿತ್ತು. 1ನೇ ಯೋಜನೆಯಲ್ಲಿ ರೂ. 25.1 ಕೋಟಿ, 2ನೇ ಯೋಜನೆಯಲ್ಲಿ 77.3 ಕೋಟಿ ಮತ್ತು 3ನೇ ಯೋಜನೆಯಲ್ಲಿ 48.9 ಕೋಟಿಯಾಗಿತ್ತು. ಕ್ರಮೇಣ ಜನರು ನೀಡಿದ ಹಣದ ಪ್ರಮಾಣವು ಕಡಿಮೆಯಾಯಿತು. ಇದಕ್ಕೆ ಕಾರಣ ಸಮುದಾಯ ಸೌಲಭ್ಯಗಳಿಗಾಗಿ ಸರಕಾರದ ವೆಚ್ಚದ ಪ್ರಮಾಣದಲ್ಲಿ ಕಡಿಮೆಯಾದದ್ದು ಹಾಗೂ ಪಂಚಾಯತ ರಾಜ್ಯದ ಅಂಗ ಸಂಸ್ಥೆಗಳು ವಿಧಿಸುವ ತೆರಿಗೆಯ ಪ್ರಮಾಣದಲ್ಲಿ ಹೆಚ್ಚಳ.

ಸಮುದಾಯ ಅಭಿವೃದ್ಧಿಗಾಗಿ ಮೊದಲೆರಡು ಯೋಜನೆಗಳಿಗಾಗಿ ಒಟ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

233.1 ಕೋಟಿ ಹಾಗೂ ಮೂರನೇಯ ಯೋಜನೆಯಲ್ಲಿ 267.32 ಕೋಟಿ ರೂಪಾಯಿಗಳಾಗಿತ್ತು. ಪ್ರತಿ ವರ್ಷದ ವೆಚ್ಚದ ವಿವರ ಈ ಕೆಳಗಿನಂತಿದೆ,

ವರ್ಷ	ವೆಚ್ಚ (ಕೋಟಿ ರೂ.ಗಳಲ್ಲಿ)
1967-68	30.47
1968-69	20.81
1969-70	18.08
1970-71	11.68
1971-72	25.97
1972-73	21.47

ಭಾರತ ಸರ್ಕಾರದ ವ್ಯವಸಾಯ ಇಲಾಖೆಯು ಸಮುದಾಯ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಧೋರಣೆ ಮತ್ತು ವೆಚ್ಚದ ಬ್ಲಾಕ್‌ವಾರು ಅಂದಾಜು ಪತ್ರವನ್ನು ತಯಾರಿಸುವ ಹೊಣೆಯನ್ನು ಹೊಂದಿತ್ತು. ಕಾರ್ಯಕ್ರಮವನ್ನು ಜಾರಿಗೆ ತಂದು ನಿಯಂತ್ರಿಸುವ ಜವಾಬ್ದಾರಿಯು ಆಯಾ ರಾಜ್ಯ ಸರಕಾರಗಳಿಗೆ ವಹಿಸಲಾಗಿತ್ತು.

ಅಭಿವೃದ್ಧಿ ಕಮೀಷನರ್ ಎಂಬ ಹಿರಿಯ ಅಧಿಕಾರಿಯು ಪ್ರತಿಯೊಂದು ರಾಜ್ಯದಲ್ಲಿನ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಮೇಲ್ವಿಚಾರಕನಿರುತ್ತಾನೆ. ವಿವಿಧ ಇಲಾಖೆಗಳು ಹಮ್ಮಿಕೊಂಡಿರುವ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಸಂಯೋಜಿಸುವವನೂ ಈತನೆ, ಕೆಲವು ರಾಜ್ಯಗಳಲ್ಲಿ ಸಂಯೋಜಿತ ಕೃಷಿ ಉತ್ಪನ್ನಗಳ ಇಲಾಖೆಯ ಕಮೀಷನರ್ ಈ ಜವಾಬ್ದಾರಿ ಹೊಂದಿದ್ದು ಸಮುದಾಯ ಅಭಿವೃದ್ಧಿ ಯೋಜನೆಯೊಂದಿಗೆ ಪಂಚಾಯತರಾಜ ಮತ್ತು ಸಹಕಾರಗಳಂತಹ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಹೊಂದಿರುತ್ತಿದ್ದ.

ಜಿಲ್ಲೆಯ ಮಟ್ಟದಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಸಂಚಾಲನೆ ಮತ್ತು ಜಾರಿಗೆ ತರುವ ಜವಾಬ್ದಾರಿಯನ್ನು ಜಿಲ್ಲಾ ಪರಿಷದ್‌ಗಳು ಹೊಂದಿರುತ್ತಿದ್ದವು. ಜಿಲ್ಲೆಯ ಜನಪ್ರತಿನಿಧಿಗಳು ಬ್ಲಾಕುಗಳ ಪಂಚಾಯಿತಿ ಅಧ್ಯಕ್ಷರು ಹಾಗೂ ಆಯಾ ಜಿಲ್ಲೆಗಳಿಂದ ಚುನಾಯಿತ ಪಾರ್ಲಿಮೆಂಟಿನ ಸದಸ್ಯರು ಮತ್ತು ರಾಜ್ಯ ಶಾಸನಸಭೆಯ ಸದಸ್ಯರು ಜಿಲ್ಲಾ ಪರಿಷದ್‌ಗಳ ಸದಸ್ಯರಾಗಿರುತ್ತಾರೆ.

ಬ್ಲಾಕು ಮಟ್ಟದಲ್ಲಿ ಬ್ಲಾಕ್ ಪಂಚಾಯತ್ ಸಮಿತಿ ಈ ಕಾರ್ಯಕ್ರಮದ ಉಸ್ತುವಾರಿಯನ್ನು ಹೊಂದಿರುತ್ತವೆ. ಬ್ಲಾಕ್ ಪಂಚಾಯತ ಸಮಿತಿಗಳಲ್ಲಿ ಒಬ್ಬ ಚುನಾಯಿತ

13

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರಪಂಚ ಮತ್ತು ಕೆಲವು ಸದಸ್ಯರುಗಳಿರುತ್ತಾರೆ. ಪರಿಶಿಷ್ಟ ಜನಾಂಗ ಮತ್ತು ಬುಡಕಟ್ಟು ಹಾಗೂ ಮಹಿಳೆಯರನ್ನು ಪ್ರತಿನಿಧಿಸಲು ಕೆಲವು ಸದಸ್ಯರನ್ನು ನಾಮನಿರ್ದೇಶನದ ಮೂಲಕ ಪಡೆಯಲಾಗುತ್ತದೆ. ಆಡಳಿತದ ಸಲುವಾಗಿ ಪ್ರತಿಯೊಂದು ಬ್ಲಾಕ್ ಮಟ್ಟದಲ್ಲಿ ಒಬ್ಬ ಬ್ಲಾಕ್ ಅಭಿವೃದ್ಧಿ ಅಧಿಕಾರಿ (ಬ್ಲಾಕ್ ಡೆವಲೆಪ್‌ಮೆಂಟ್ ಆಫೀಸರ್) ಮತ್ತು ಎಂಟು ಜನ ವಿವಿಧ ರಂಗಗಳಾದ ಕೃಷಿ, ಸಹಕಾರ, ಪಶುಸಂಗೋಪನೆಗಳಂತಹವುಗಳಲ್ಲಿ ವಿಶೇಷ ಪರಿಣತಿ ಪಡೆದ ವಿಸ್ತರಣಾಧಿಕಾರಿಗಳು ಬ್ಲಾಕ್ ಪಂಚಾಯತ್ ಸಮಿತಿಯ ನಿರ್ದೇಶನದ ಪ್ರಕಾರ ಕಾರ್ಯನಿರ್ವಹಿಸುತ್ತಾರೆ. ಸ್ವಯಂ ಸೇವಾ ಸಂಸ್ಥೆಗಳು, ಯುವಕ ಸಂಘಗಳು ಕೃಷಿಕರ ವಿವಿಧ ವೇದಿಕೆಗಳು ಮತ್ತು ಮಹಿಳಾ ಮಂಡಳಿಗಳು ಪಂಚಾಯತ ಸಮಿತಿಯ ಕೆಲಸಕ್ಕೆ ಸಹಕಾರ ನೀಡುತ್ತವೆ. ಗ್ರಾಮ ಮಟ್ಟದಲ್ಲಿರುವ ಗ್ರಾಮಪಂಚಾಯತವು ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಇಡೀ ಗ್ರಾಮ ಮಟ್ಟದ ಒಟ್ಟಾರೆ ಯೋಜನೆಯ ಮೇಲ್ವಿಚಾರಣೆ ಮಾಡುತ್ತದೆ. ಗ್ರಾಮಸೇವಕನು ವಿವಿದೋದ್ದೇಶ ವಿಸ್ತರಣಾ ನಿಯೋಗಿಯಾಗಿ ಹತ್ತು ಗ್ರಾಮಗಳಲ್ಲಿ ತನ್ನ ಸೇವೆ ಸಲ್ಲಿಸಬೇಕಿತ್ತು.

ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಮೌಲ್ಯಮಾಪನ :

ಇಂತಹ ಕಾರ್ಯಕ್ರಮಗಳ ಮೌಲ್ಯಮಾಪನಕ್ಕೆ ಅನೇಕ ಸಮಸ್ಯೆಗಳು ಎದುರಾಗುವುವು. ಅವುಗಳಲ್ಲಿ ಮೊದಲನೇಯದಾಗಿ ಈ ಯೋಜನೆಯು ಪ್ರಾರಂಭವಾದುದು 1952ರಲ್ಲಿ ಅಂದರೆ ಕೆಲವೇ ದಶಕಗಳ ನಂತರ, ಅದರ ಪರಿಣಾಮವನ್ನು ಪರೀಕ್ಷಿಸುವುದು ಮೌಲ್ಯಮಾಪನ ಮಾಡುವುದು ಸೂಕ್ತವಲ್ಲವೆಂದು ಅನೇಕ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಸುಮಾರು ಐದೂವರೆ ಲಕ್ಷಗಳಷ್ಟು ಗ್ರಾಮಗಳುಳ್ಳ ವಿಶಾಲವಾದ ಭಾರತದಲ್ಲಿ ಶತ-ಶತಮಾನಗಳ ಇತಿಹಾಸವುಳ್ಳ ವಿವಿಧ ಜನಾಂಗ, ಸಂಸ್ಕೃತಿ ಹೊಂದಿರುವ ಈ ದೇಶದಲ್ಲಿ ಕೇವಲ ಕೆಲವೇ ದಶಕಗಳ ಹಿಂದೆ ಜಾರಿಗೆ ಬಂದ ಯೋಜನೆಯ ಪ್ರಭಾವ ಅಷ್ಟೊಂದು ಆಗಲಿಕ್ಕಿಲ್ಲ. ಎನ್ಸ್‌ಮಿಂಗ್‌ರವರ ಪ್ರಕಾರ ಸಮುದಾಯ ಅಭಿವೃದ್ಧಿ ಕಾರ್ಯಕ್ರಮವು ಮೂರು ತಲೆಮಾರುಗಳ ಯೋಜನೆ. ಈಗ ಬಿತ್ತಿದ ಅಭಿವೃದ್ಧಿಯ ಬೀಜಗಳು ಮೊಳಕೆಯೊಡೆದು ಫಲ ನೀಡುವುದು ಮೂರು ತಲೆಮಾರುಗಳ ನಂತರವೆ. ಆದುದರಿಂದ ಯೋಜನೆಯ ಸಫಲತೆಯ ಬಗ್ಗೆ ಕೊಂಕು ಮಾತುಗಳನ್ನು ಈಗಲೇ ಆಡುವದು ಒಳ್ಳೆಯದಲ್ಲವೆಂದೂ ಈ ಯೋಜನೆಯನ್ನು ಟೀಕೆ ಮಾಡುವವರಿಗೆ ಹೇಳಿದ್ದಾರೆ.

ಸಮುದಾಯ ಅಭಿವೃದ್ಧಿ ಯೋಜನೆಯ ಮೌಲ್ಯಮಾಪನದ ಇನ್ನೊಂದು ಸಮಸ್ಯೆಯಿಂದೆ. ನಮ್ಮ ದೇಶದ ಹಳ್ಳಿಗಾಡುಗಳು ಅನೇಕ ಸಾಮಾಜಿಕ ಪರಿವರ್ತನೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಯೋಗಗಳಿಂದ ಪ್ರಭಾವಿತವಾಗಿವೆ. ಈ ಎಲ್ಲ ಪ್ರಭಾವದಿಂದ ಗ್ರಾಮಗಳ ಸಾಮಾಜಿಕ ಬದಲಾವಣೆಯಾಗುತ್ತಿರುವಾಗ ಬದಲಾವಣೆ, ಅಭಿವೃದ್ಧಿ ಯಾವ ವಿಶಿಷ್ಟ ಯೋಜನೆ ಯಿಂದ ಉಂಟಾಗಿದೆ ಎಂಬುದನ್ನು ಹೇಳುವುದು ತುಂಬ ಕಷ್ಟ.

ಈ ಮೇಲೆ ತಿಳಿಸಿದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡೇ ನಾವು ಸಮು ದಾಯ ಅಭಿವೃದ್ಧಿ ಯೋಜನೆಯ ಸಫಲತೆಯ ಬಗ್ಗೆ ಮೌಲ್ಯಮಾಪನ ಮಾಡಬೇಕಾಗು ವುದು.

ಭಾರತದಲ್ಲಿನ ಗ್ರಾಮೀಣ ಸಮಾಜವು ಧರ್ಮ ಮತ್ತು ಜಾತೀಯತೆಗಳಂತಹ ಮತ್ತು ಪ್ರಾದೇಶಿಕತೆಗಳಿಂದ ಸಮುದಾಯ ಜೀವನದಿಂದ ವಂಚಿತವಾಗಿದೆ. ಸಮು ದಾಯ ಜೀವನವಿಲ್ಲದಿದ್ದರೆ ಅಭಿವೃದ್ಧಿಯೂ ಅಸಾಧ್ಯ. ಇದಕ್ಕಾಗಿ ಗ್ರಾಮೀಣ ಪ್ರದೇಶ ಗಳಲ್ಲಿನ ಜನರಲ್ಲಿ ಅರಿವು ಮೂಡಿಸಿ ತಮ್ಮ ಗ್ರಾಮ ಸಮುದಾಯಗಳ ಬಗ್ಗೆ ಅದರ ಅಭಿವೃದ್ಧಿಯ ಬಗ್ಗೆ ಹಮ್ಮಿಕೊಳ್ಳಬಹುದಾದ ಎಲ್ಲ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗವಹಿಸುವಂತೆ ಮಾಡುವುದು ಅವಶ್ಯಕ. ಹಳ್ಳಿಗಳು ಅಭಿವೃದ್ಧಿ ಹೊಂದಿದರೆ ದೇಶವು ಅಭಿವೃದ್ಧಿ ಹೊಂದುವುದು. ಆದುದರಿಂದ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಸಮುದಾಯಗಳನ್ನು ಉತ್ಪತ್ತಿ ಮಾಡುವ ಯೋಜನೆಯಾಗಬೇಕು ಎಂದು ಆಶಿಸಲಾ ಗಿತ್ತು.

ಸಮುದಾಯ ಅಭಿವೃದ್ಧಿ ಯೋಜನೆಯ ಸಾಧನೆಯ ಬಗ್ಗೆ ಮೆಚ್ಚಿಗೆ ಸೂಚಿಸುವ ಕೆಲವರು ಈ ದಿಶೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ವಾದಿಸುವರು. ಈ ಯೋಜನೆಯು ಪ್ರಾರಂಭದ ಘಟ್ಟದಿಂದ ಜಾರಿಗೆ ತರುವವರಗೂ ಆಯಾ ಗ್ರಾಮೀಣ ಪ್ರದೇಶಗಳ ಎಲ್ಲ ಜಾತಿಯ ಜನತೆಯನ್ನು ಅದರಲ್ಲಿ ತೊಡಗಿಸಿಕೊಂಡಿರುವುದರಿಂದ ಮತ್ತು ಪ್ರತಿಯೊಂದು ಹಂತದಲ್ಲಿಯೂ ಪ್ರಜಾಪ್ರಭುತ್ವದ ತತ್ವವನ್ನೇ ಅಳವಡಿಸಿ ಕೊಂಡಿರುವುದರಿಂದ ಎಲ್ಲರ ಸಹಭಾಗಿತ್ವವನ್ನು ಸಾಧಿಸಲಾಯಿತು. ಹೀಗಾಗಿ ಮೊದಲಿನ ಜಾತಿ ಪಂಚಾಯಿತಿಗಳ ವಿಶೇಷ ಅಧಿಕಾರವನ್ನು ಮೊಟಕುಗೊಳಿಸಲಾಯಿತು. ಅವುಗಳ ಬದಲಾಗಿ ಗ್ರಾಮಪಂಚಾಯತಿಗಳಂತಹ ಪ್ರಜಾಸತ್ತಾತ್ಮಕ ಕ್ಷೇತ್ರದ ಮೇಲೆ ಎಲ್ಲರ ಧ್ವನಿಗೂ ಮಹತ್ವ ನೀಡುವ ಆಧುನಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ಸಮಾನತೆ ಮತ್ತು ಅಭಿವೃದ್ಧಿಗೆ ನಾಂದಿಯಾಯಿತು. ಇವೆಲ್ಲವುಗಳಿಂದ ತಳ ಜಾತಿಯವರಿಗೆ ಲಭ್ಯವಿಲ್ಲದ ಸಾರ್ವಜನಿಕ ಸೌಲಭ್ಯಗಳಾದ ಬಾವಿ, ಕೆರೆ, ದೇವಾಲಯಗಳು ತದನಂತರ ಅವರಿಗೂ ಲಭ್ಯವಾಗತೊಡಗಿತು.

ಹಿಂದಿನ ಕಾಲದಲ್ಲಿ ಶಿಕ್ಷಣವು ಕೇವಲ ಉನ್ನತ ಜಾತಿಯ ಮಕ್ಕಳ ಸ್ವತ್ತಾಗಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಳ ಜಾತಿಯ ಮಕ್ಕಳಿಗೆ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಪಡೆಯುವುದಂತೂ ಅಸಾಧ್ಯವಾಗಿತ್ತು. ಆದರೆ ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಜಾತಿಭೇದಗಳಿಲ್ಲದೆ ಶಾಲೆಗಳಿಗೆ ಪ್ರವೇಶ ಕೊಡಲು ಪ್ರಾರಂಭವಾಯಿತು. ದಲಿತ ವಿದ್ಯಾರ್ಥಿಗಳಿಗಾಗಿ ವಿಶೇಷ ವಿದ್ಯಾರ್ಥಿ ವೇತನಗಳನ್ನೂ ಮತ್ತು ಇತರ ಶೈಕ್ಷಣಿಕ ಸೌಲಭ್ಯಗಳ ವ್ಯವಸ್ಥೆ ಮಾಡಲಾಯಿತು. ಶತಶತಮಾನಗಳ ಜಾತಿಯುತೆಯು ಕಡಿಮೆಯಾಯಿತು. ಇದೆಲ್ಲವೂ ಸಮುದಾಯ ಅಭಿವೃದ್ಧಿ ಯೋಜನೆಯಲ್ಲಿ ಸೇವೆ ಸಲ್ಲಿಸಿದ ದಕ್ಷ ಕಾರ್ಯಕರ್ತ ರಿಂದ ಸಾಧ್ಯವಾಯಿತು ಎಂದು ಸರಕಾರಿ ವಕ್ತಾರರು ಹೆಮ್ಮೆಯಿಂದ ಹೇಳಿಕೊಳ್ಳತೊಡಗಿ ದರು.

ಆದರೆ ಸತ್ಯಶೋಧನಾ ಸಮಿತಿಯ ತಂಡದ ಅಭಿಪ್ರಾಯವು ಇದಕ್ಕೆ ವ್ಯತಿರಿಕ್ತ ವಾಗಿದೆ. ಈ ತಂಡದ ಸದಸ್ಯರು ಸರಕಾರಿ ವಕ್ತಾರರು ಹೇಳಿಕೊಳ್ಳುವ ಯಶಸ್ಸು ಕೇವಲ 'ಬುರಡೆ' ಎಂದು ಟೀಕಿಸಿದ್ದಾರೆ. ಅವರ ಪ್ರಕಾರ ಸಮುದಾಯಗಳ ಸಂಘಟ ನೆಯ ಉದ್ದೇಶವಂತೂ ಈಡೇರಲಿಲ್ಲ ಹಾಗೂ ಇದೊಂದು ಗಾಳಿಯನ್ನು ಗುದ್ದಿ ಮೈನೋಯಿಸಿಕೊಂಡ ಅನುಭವದಂತೆ ಆಗಿದೆ ಅಭಿಪ್ರಾಯಪಟ್ಟಿದ್ದಾರೆ ಎಂಬ ಹೊರ ಜಾತಿಪದ್ಧತಿಯೂ ಈ ಯೋಜನೆಯಿಂದ ಇನ್ನಷ್ಟು ಪ್ರಭಲವಾಗಿ ಪಂಚಾಯತದ ಹೊಮ್ಮಿತು. ಪ್ರಜಾಪ್ರಭುತ್ವವು ಜಾತಿಯ ಆಧಾರದ ಮೇಲೆ ನಿರ್ಮಿತವಾಗಿ ಚುನಾವಣೆಗಳು ಕೂಡ ಜಾತಿವಾರು ಆಧಾರದ ಮೇಲೆ ನಡೆಯುತ್ತಿರುವುದೊಂದು ವಿಪರ್ಯಾಸ. ಇದರಿಂದ ಇಂದಿಗೂ ಪ್ರಧಾನ ಜಾತಿಗಳೇ ಮಹತ್ವದ ಅಧಿಕಾರಗಳನ್ನು ಪಡದಿದ್ದು ಸತ್ಯಸಂಗತಿ. ಇಂತಹ ಪ್ರಧಾನ ಜಾತಿಯ ನಾಯಕರು ತಮ್ಮ ಕುಲ ಬಾಂಧವರಿಗೆ ಉಪಯೋಗವಾಗುವ ಹಾಗೆ ಯೋಜನೆಯನ್ನೇ ತಿರುಚಿ ಲಾಭಪಡೆದದ್ದೂ ಉಂಟು. ಸಮುದಾಯ ಅಭಿವೃದ್ಧಿ ಯೋಜನೆಯ ಕಾರ್ಯಕರ್ತರು ಹೇಳುವ ಸಾರ್ವ ಜನಿಕ ಸೌಲಭ್ಯಗಳು ದಲಿತರಿಗೂ ಲಭ್ಯವಿರುವ, ಜಾತೀಯತೆ ಮಾಯವಾಗಿರುವ ವಿಷಯ ಗಳು ಕೇವಲ ಬೊಗಳೆಮಾತ್ರ. ಪ್ರಧಾನ ಜಾತಿಯ ಜನರಲ್ಲಿ ಇನ್ನೂ ತಳವರ್ಗದ ಜಾತಿಯವರ ಬಗ್ಗೆ ಹೀನಾಯವಾದ ಅಭಿಪ್ರಾಯ ಉಳಿದಿದೆ. ಉನ್ನತ ಅಧಿಕಾರಿಗಳು ಪೋಲಿಸರೊಂದಿಗೆ ಗ್ರಾಮಗಳಲ್ಲಿನ ಸಾಧನೆಗಳನ್ನು ಗಮನಿಸಲು ಬಂದಾಗ ಮಾತ್ರ ಸಮಾನತೆಯ ನಾಟಕವನ್ನು ತುಂಬಾ ಚೆನ್ನಾಗಿ ಅಭಿನಯಿಸಲಾಗುತ್ತದೆ. ಅಧಿಕಾರಿಗಳು ಮತ್ತು ಪೋಲಿಸರು ತಮ್ಮ ವಾಹನಗಳೊಂದಿಗೆ ಗ್ರಾಮದ ಗಡಿ ದಾಟಿದ ಕೂಡಲೇ ಮತ್ತೆ ಯಥಾಸ್ಥಿತಿ ಹಿಂದಿರುಗುತ್ತದೆ.

ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆಯೇ ಇಂತಹದೇ ಕಟು ಸತ್ಯಗಳನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. ತಳಜಾತಿಯ ವಿದ್ಯಾರ್ಥಿಗಳು ಉಳಿದ ಜಾತಿಯ ವಿದ್ಯಾರ್ಥಿಗಳಿಂದ ದೂರವೇ ಇರಬೇಕಾಗಿರುವ ಅನಿವಾರ್ಯತೆ ಶಾಲೆಗಳಲ್ಲಿ ಇದೆ. ಎಲ್ಲ ವಿದ್ಯಾರ್ಥಿಗಳಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಗಿ ಕುಡಿಯಲು ಇಟ್ಟ ನೀರಿನ ಕೊಡ-ಪಾತ್ರೆಗಳನ್ನು ಎಲ್ಲ ಜಾತಿಯ ಮಕ್ಕಳು ಮುಟ್ಟುವುದಿಲ್ಲ. ಶಾಲೆಗಳಲ್ಲಿಯೇ ಹಮ್ಮಿಕೊಳ್ಳಲಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಳಜಾತಿಯ ವಿದ್ಯಾರ್ಥಿಗಳು ಭಾಗವಹಿಸುವಂತಿಲ್ಲ. ಮಧ್ಯಾಹ್ನದ ಊಟದ ಸಮಯದಲ್ಲಿಯಂತೂ ಜಾತಿಯತೆಯ ನಿಜವಾದ ರೂಪವು ಸ್ಪಷ್ಟವಾಗಿ ನೋಡಬಹುದು. ಇದೆಲ್ಲವನ್ನು ಗಮನಿಸಿದ ಸತ್ಯಶೋಧನಾ ತಂಡವು ಅಭಿವೃದ್ಧಿ ಕಾರ್ಯಕರ್ತರು ಹೇಳಿಕೊಂಡ ಭಾರತೀಯ ಗ್ರಾಮೀಣ ಪ್ರದೇಶದಲ್ಲಿ 'ಜಾತಿಯು ನಶಿಸಿಹೋಗುತ್ತಿದೆ' ಎಂಬ ಮಾತನ್ನು ಕಟುವಾಗಿ ಟೀಕಿಸಿದ್ದಾರೆ.

ಪ್ರಜಾಸತ್ತಾತ್ಮಕ ಯೋಜನೆಯನ್ನು ರೂಪಿಸುವ ಉದ್ದೇಶವನ್ನು ಕೂಡಲೆ ಈ ಕಾರ್ಯಕ್ರಮಹೊಂದಿತ್ತು. ಅದಕ್ಕಾಗಿ ಅಭಿವೃದ್ಧಿ ಯೋಜನೆಯಲ್ಲಿ ಸೇವೆಸಲ್ಲಿಸಲಿರುವ ಅಧಿಕಾರಿಗಳು ಮತ್ತು ಕಾರ್ಯಕರ್ತರನ್ನು ಪ್ರಜಾಸತ್ತಾತ್ಮಕ ತತ್ವಗಳ ಮೇಲೆ ಸೇವೆ ಸಲ್ಲಿಸಲು ವಿಶೇಷ ತರಬೇತಿ ನೀಡಲು ದೇಶದ ವಿವಿಧ ಭಾಗಗಳಲ್ಲಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಅಧಿಕಾರಶಾಹಿಯಲ್ಲಿ ಸೇವೆಯ ಮನೋಭಾವನೆ ಬೆಳೆಸುವುದು ಆದ್ಯ ಕರ್ತವ್ಯ ಎಂಬ ನೀತಿ ಈ ತರಬೇತಿಯದಾಗಿತ್ತು, ಈ ಯೋಜನೆಯನ್ನು ಹಾಡಿಹೊಗಳುವವರು ಈ ದಿಶೆಯಲ್ಲಿ ಸಾಕಷ್ಟು ಸಾಧನೆಯಾಗಿದೆಯೆಂದು ಹೇಳಿಕೊಳ್ಳುತ್ತಾರೆ.

ಆದರೆ ಟೀಕಾಕಾರರು ಅಧಿಕಾರಿಗಳಲ್ಲಿನ ಮನೋಭಾವನೆ ಮೊದಲಿನಂತೆಯೇ ಇದೆ ಆವರೆಂದೂ ಗ್ರಾಮೀಣ ಜನಸಾಮಾನ್ಯರ ಮನವನ್ನು ಗೆಲ್ಲಲು ಪ್ರಯತ್ನವೇ ಮಾಡಿಲ್ಲ, ಅವರು ತಮ್ಮನ್ನು 'ಆಳುವವರೇ' ಎಂಬ ಅಹಂನಿಂದಲೇ ವರ್ತಿಸುವರು. ಸೇವಾ ಮನೋಭಾವ ಅವರಲ್ಲಿ ಇಲ್ಲವೇ ಇಲ್ಲ.

ನೌಕರ ಶಾಹಿಗಳಲ್ಲಿರುವ ಅಹಂ ಹಳ್ಳಿಗಾಡುಗಳಲ್ಲಿನ ಜನರು ಸುಳ್ಳು ವಿಧೇಯತೆ ನಟಿಸಲು ಪ್ರೋತ್ಸಾಹಿಸುತ್ತದೆ. ಈ ಅಧಿಕಾರಿಗಳು ಹಳ್ಳಿಯಲ್ಲಿ ಯಾವುದೇ ಕಾರ್ಯಕ್ರಮದ ಮೇಲ್ವಿಚಾರಣೆಗೆ ಬಂದಾಗ ಮಾತ್ರ ತುಂಬ ವಿಧೇಯತೆ ತೋರಿದ ಹಾಗೆ ಅಭಿನಯಿಸಿ ತಮಗೆ ಬೇಕಾದ ಕೆಲಸ ಮಾಡಿಕೊಳ್ಳುತ್ತಾರೆ. ನಿಜವಾದ ಮನ್ನಣೆ ಅವರು ನೀಡಲಾರರು.

ಸಮುದಾಯ ಅಭಿವೃದ್ಧಿ ಯೋಜನೆಯ ವೈಶಿಷ್ಟ್ಯವೆಂದರೆ ಅದೊಂದು ಸ್ಥಾಯಿ ಯೋಜನೆಯಾಗಿದೆ. ಟಿ.ಆರ್. ಬ್ಯಾಟನ್‌ರವರು ಅಭಿಪ್ರಾಯ ಪಡುವಂತೆ "ಅಭಿವೃದ್ಧಿ ಯೋಜನೆಯ ಕಾರ್ಯಕರ್ತನ ಸಾಮರ್ಥ್ಯವು ಆತನು ಎಷ್ಟರ ಮಟ್ಟಿಗೆ ಅಪ್ರಸ್ತುತನಾಗುತ್ತಾನೆಯೋ ಅದರ ಮೇಲೆ ಅವಲಂಬಿಸಿದೆ" ಅಂದರೆ ಒಬ್ಬ ಅತ್ಯುತ್ತಮ ವೈದ್ಯನು ತನ್ನ ರೋಗಿಯ ಶುಶ್ರೂಷೆ ಅತ್ಯುತ್ತಮವಾಗಿ ಮಾಡಿದರೆ ಆ ರೋಗಿಗೆ ವೈದ್ಯನ ಅವಶ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕತೆಯೇ ಇರುವುದಿಲ್ಲ. ಇದೇ ರೀತಿಯಾಗಿ ಅಭಿವೃದ್ಧಿ ಕಾರ್ಯಕರ್ತರು ಗ್ರಾಮೀಣ ಜನರಲ್ಲಿ ಸ್ವಾವಲಂಬನೆಯನ್ನು ಬೆಳಸಿ ಅಭಿವೃದ್ಧಿಯನ್ನು ತಾವೇ ಸಾಧಿಸುವುದನ್ನು ತರಬೇತಿ ಕೊಡುವುದು ಅತ್ಯಂತ್ಯವಾದುದು."

ಸಮುದಾಯ ಅಭಿವೃದ್ಧಿ ಯೋಜನೆಯುನೋ ತುಂಬ ಉನ್ನತ ಉದ್ದೇಶ ಹೊಂದಿತ್ತು. ಆದರೆ ಈ ದಿಶೆಯಲ್ಲಿ ಅದು ಶೋಚನೀಯವಾಗಿ ಅಪಯಶಸ್ಸು ಹೊಂದ ಬೇಕಾಯಿತು. ದುಬೆ, ಲೇವಿಜ್ ಅವರು ಅಭಿವೃದ್ಧಿ ಯೋಜನೆಯ ಕಾರ್ಯಕರ್ತರ ಪಾತ್ರವನ್ನು ಕಟುವಾಗಿ ಟೀಕಿಸಿದ್ದಾರೆ. ಅಧಿಕಾರಿಗಳು ತಮ್ಮ ಅಧಿಕಾರಶಾಹಿಯನ್ನು ಇನ್ನೂ ಆಳವಾಗಿ ಬೇರೂರಿಸಿ ತಾವೇ ಆಳುವವರು ಎಂಬ ಅಭಿಪ್ರಾಯ ಮೂಡುವಂತೆ ಮಾಡಿದರು. ತಮ್ಮ ಅಧಿಕಾರ ಉಳಿಯಲು ಗ್ರಾಮೀಣ ಜನರನ್ನು ಹೆಚ್ಚು ಹೆಚ್ಚಾಗಿ ಅವಲಂಭಿತರನ್ನಾಗಿ ಮಾಡಿದರು

ಯುವ ನಾಯಕತ್ವವನ್ನು ಪ್ರಚೋದಿಸುವ ಉದ್ದೇಶದಲ್ಲಿಯೂ ಸಫಲತೆ ಸಾಧಿಸ ಲಾಗಲಿಲ್ಲ. ಗ್ರಾಮ ಪಂಚಾಯತಿ ಮತ್ತು ಸಹಕಾರ ಚಳುವಳಿಯಲ್ಲಿ ಹೆಚ್ಚಾಗಿ ತರುಣ ರೇನೋ ಭಾಗವಹಿಸಲಾರಂಭಿಸಿದರು ಆದರೆ ಕೆಲವು ಅಧ್ಯಯನಗಳು ಈ ಬದಲಾವಣೆ ಕೇವಲ ಮೇಲ್ಮೈಯಲ್ಲಿ ಮಾತ್ರ ಆಳದಲ್ಲಿ ಸಾಂಪ್ರದಾಯಕ ನಾಯಕತ್ವವೇ ಮುಂದು ವರೆದಿದೆ ಎಂಬುದನ್ನು ಸ್ಪಷ್ಟಪಡಿಸಿವೆ[17] ವಿವಿಧ ಕಮಿಟಿಗಳಲ್ಲಿ ಯುವಕರು ಭಾಗವ ಹಿಸಿದರೂ ಕೂಡಾ ಹಲವು ಮಹತ್ವದ ವಿಷಯಗಳ ಬಗ್ಗೆ ಹಳೆಯ ತಲೆಮಾರಿನ ಹಿರಿಯ ನಾಯಕರೇ ಎಲ್ಲ ನಿರ್ಣಯ ತೆಗೆದುಕೊಂಡು ಅವುಗಳನ್ನು ಯುವ ನಾಯಕರ ತಲೆಯಲ್ಲಿ ತುಂಬಿ ಸಮಿತಿಗಳಾ ನಿರ್ಣಯಗಳ ಮೇಲೆ ಪ್ರಭಾವ ಬೀರುತ್ತಾರೆ. ಅಂದರೆ ಯುವಕರು ಕೇವಲ ಹಿಂದಿನ ತಲೆಮಾರಿನ ನಾಯಕರುಗಳ ನೆರಳುಗಳಾಗಿ ವರ್ತಿಸುವುದರಿಂದ ಹಿಂದಿಗೂ ಸಹ ನಿರ್ಣಯ ಧೋರಣೆಗಳನ್ನು ರೂಪಿಸುವ ಅಧಿಕಾರವೆಲ್ಲವೂ ಸಾಂಪ್ರದಾ ಯಿಕ ಹಳೆ ತಲೆಮಾರುಗಳಲ್ಲಿಯೇ ಕೇಂದ್ರೀಕೃತವಾಗಿವೆ. ಈ ಸಂಪ್ರಾದಾಯಿ ಹಳೆ ತಲೆ ಮಾರಿನ ನಾಯಕರುಗಳು ತರುಣರನು ಮುಂದೆ ಮಾಡಿ ತಮ್ಮ ಅಧಿಕಾರ ನಡೆಸಲು ಕೆಲವು ಕಾರಣಗಳಿವೆ. ಮೊದಲನೇಯದಾಗಿ ಇಂದಿನ ವಿವಿಧ ಸಂಸ್ಥೆಗಳ ಸದಸ್ಯತ್ವಕ್ಕೆ ಕನಿಷ್ಟ ಮಟ್ಟದ ಔಪಚಾರಿಕ ಶಿಕ್ಷಣದ ಅವಶ್ಯಕತೆ ಮತ್ತು ಎರಡನೇಯದಾಗಿ ಆಧುನಿಕ ಚುನಾವಣೆಗಳಲ್ಲಿ ಸ್ಪರ್ಧಿಸಲು ಹಿರಿಯರಿಗಿರುವ ಹಿಂಜರಿತ. ಚುನಾವಣೆಗಳಲ್ಲಿ ಎಲ್ಲ ಜಾತಿಯವರ ಮನೆ-ಮನೆಗೂ ಹೋಗಿ ಮತ ಯೋಚನೆ ಮಾಡುವುದು ಅವರಿಗೆ ಒಗ್ಗದು. ವಿವಿಧ ಸಂಸ್ಥೆ-ಸಂಘಗಳಲ್ಲಿ ತಮಗಿಂತ ಕೀಳು ಜಾತಿಯ ಜನರೊಂದಿಗೆ ಒಂದೆಡೆ ಸೇರುವುದು ತುಂಬಾ ಮುಜುಗರದ ಸಂಗತಿ. ತಾವೇನಾದರೂ ಗ್ರಾಮ ಸಭೆಯ ಮುಖ್ಯಸ್ಥರಾದರೆ ಅಧಿಕಾರಿಗಳು ಗ್ರಾಮಕ್ಕೆ ಸಂದರ್ಶಿಸಿದಾಗ ಅವರನ್ನು ಮನೆಗೆ ಆಮಂತ್ರಿಸಬೇಕಾಗಬಹುದು. ಅಧಿಕಾರಿಗಳೇನಾದರು ತಳಜಾತಿಯವರಾದರೇನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡುವುದು ? ಈ ಎಲ್ಲ ಸಮಸ್ಯೆಗಳನ್ನು ಅವರು ಎದುರಿಸಲು ಇನ್ನು ಸಿದ್ಧರಾಗಿಲ್ಲ.

ಬಡವ-ಶ್ರೀಮಂತರ ನಡುವಿನ ಅಂತರವನ್ನು ಕಡಿಮೆ ಮಾಡುವ ದಿಶೆಯಲ್ಲೂ ಈ ಯೋಜನೆಯು ಯಶಸ್ಸು ಅಷ್ಟಕಷ್ಟೇ ಎಂದು ಹೇಳಬಹುದು. ಈ ಕಾರ್ಯಕ್ರಮದ ಫಲಾನುಭವಿಗಳ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸಿದರೆ ಕೇವಲ ಪ್ರಧಾನ ಜಾತಿಯ ಶ್ರೀಮಂತರಿಗೆ ಹೆಚ್ಚಿನ ಸಹಾಯವಾಗಿರುವುದನ್ನು ಕಾಣಬಹುದು. ಶ್ರಮದಾನಗಳಂತಹ ಕಾರ್ಯಕ್ರಮದಲ್ಲಿ ಗ್ರಾಮದ ತಳಜಾತಿಯ ಹಾಗೂ ಬಡವರನ್ನು ತೊಡಗಿಸಿಕೊಂಡ ಸಾಂಪ್ರದಾಯಿಕ ಪದ್ಧತಿಗಳಾದ 'ಬಿಟ್ಟಿ' 'ಬೇಗರ್'ಗಳು ಅಂದರೆ ಗ್ರಾಮದ ಬಡವರು ಶ್ರೀಮಂತರಿಗಾಗಿ ಪುಕ್ಕಟೆಯಾಗಿ ದುಡಿಯುವ ವ್ಯವಸ್ಥೆಯನ್ನು ಪುನಸ್ಥಾಪಿಸಲಾಯಿತು.

ಈ ರೀತಿಯಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ತುಂಬ ಮಹತ್ವಕಾಂಕ್ಷೆಯ ಈ ಯೋಜನೆಯು ತುಂಬ ನಿರಾಶಜನಕವಾಗಿ ವಿಫಲಗೊಂಡಿತು. ಕೆಲವು ರಾಜ್ಯಗಳು ಇದನ್ನು ನಿಲ್ಲಿಸಬಿಡಬೇಕೆಂದು ವಿಚಾರ ಮಾಡುತ್ತಿದ್ದರೆ ಕೆಲವರು ಈಗಾಗಲೇ ಇದಕ್ಕೆ ಇತಿಶ್ರೀ ಹಾಡಿದ್ದಾರೆ.

ಪರಾಮರ್ಶನ ಮತ್ತು ಟಿಪ್ಪಣಿಗಳು

1. ಎಸ್.ಡೇ. **ಕಮ್ಯುನಿಟಿ ಡೆವ್ಹಲಪ್‌ಮೆಂಟ್** (ಅಲಹಬಾದ : 1970)

2. ಜವಹರಲಾಲ್ ನೆಹರೂ ಬಿ. ಮುಕರ್ಜಿಯವರು ಬರೆದ **ಕಮ್ಯುನಿಟಿ ಡೆವ್ಹಲಪ್‌ಮೆಂಟ್ ಇನ್ ಇಂಡಿಯಾ**, (**ಮುಂಬೈ ; 1971**) ಪುಸ್ತಕದಿಂದ ಉಲ್ಲೇಖ ಪು. 18.

3. ವಿ.ಟಿ. ಕೃಷ್ಣಮಚಾರಿ. ಬಿ. ಮುಕರ್ಜಿಯವರ ಮೇಲೆ ಉಲ್ಲೇಖಿಸಲಾದ ಪುಸ್ತಕದ ಪು. 18–19ರಿಂದ

4. ರಾಜೇಶ್ವರ ದಯಾಳ್, **ಕಮ್ಯುನಿಟಿ ಡೆವ್ಹಲಪ್‌ಮೆಂಟ್ ಪ್ರೋಗ್ರಾಂ ಇನ್ ಇಂಡಿಯಾ** (ಅಲಹಬಾದ : 1960) ಪುಟ 17.

5. ಕಾರ್ಲ ಟೈಲರ್ ಅವರ ಅಭಿಪ್ರಾಯ ಹೀಗಿದೆ : "ಭಾರತದಲ್ಲಿ ಈ ಕಾರ್ಯಕ್ರಮವು ಸಮುದಾಯ ಅಭಿವೃದ್ಧಿ ಹಾಗೂ ವಿಸ್ತರಣಾ ಸೇವೆ ಎರಡನ್ನೂ ಜೊತೆಜೊತೆಗೆ ಕೈಗೊಂಡಿರುವದು ಒಂದು ವೈಶಿಷ್ಟ್ಯ. ಸಮುದಾಯ ಅಭಿವೃದ್ಧಿ ಯೋಜನೆಯು ತಾತ್ವಿಕ ಆಧಾರ ಮತ್ತು ಕಾರ್ಯಯೋಜನೆಯನ್ನು ನೀಡಿದರೆ. ಅದನ್ನು ಬಳಸಿಕೊಂಡು ವಿಸ್ತರಣಾ ಸೇವೆಯು ಸಂಘಟಿತಗೊಂಡ ಹಳ್ಳಿಗಾಡುಗಳ ಅಭಿವೃದ್ಧಿ ಸಾಧಿಸಲು ಸಹಾಯ ನೀಡುವದು."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

6. ಹೆನ್ರಿಮೇಯ್ನ್, **ವ್ಹಿಲೇಜ್ ಕಮ್ಯುನಿಟೀಜ್ ಇನ್ ದಿ ಈಸ್ಟ ಆ್ಯಂಡ್ ವೆಸ್ಟ್** (ಲಂಡನ್ : 1867) ಉಪನ್ಯಾಸ.

7. ಡಿ.ಎನ್. ಮಜುಂಮ್‌ದಾರ್ **ರೂರಲ್ ಪ್ರೊಫೈಲ್ಸ** (ಲಕ್ನೋ ; 1955) ಪು. 4.

8. ಬಿ. ಮುಖರ್ಜಿಯವರ ಮೇಲೆ ತಿಳಿಸಿದ ಗ್ರಂಥದ ಪು. 22-23

9. ಯಂ.ಸಿ. ಫಿಲ್‌ದಯೊಲ್ "ದಿ ಇಕಾಲಜಿ ಆಫ್ ಕಮ್ಯುನಿಟಿ ಡೆವ್ಹಲಪ್‌ಮೆಂಟ್ ಇನ್ ಇಂಡಿಯಾ. **ಕಮ್ಯುನಿಟಿ ಡೆವ್ಹಲಪ್‌ಮೆಂಟ್ ಆಂಡ್ ಪಂಚಾಯತಿರಾಜ್ ಡೈಜೆಸ್ಟ** (ಸಿ. ಡಿ. ವಿಶೇಷ ಸಂಚಿಕೆ, ಆಕ್ಟೋಬರ್ 1970)ಪು. 97.

10, ಸಮುದಾಯ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳ ಅಧ್ಯಯನ ತಂಡ (ಇದು ಬಳವಂತರಾಯ್ ಮೇಹ್ತಾ ಆಯೋಗವೆಂದೇ ಪ್ರಸಿದ್ಧಿ ಪಡೆದಿದೆ) ಇದರ ವರದಿ. ಭಾರತ ಸರಕಾರ, 1958.

11. **ಇಂಡಿಯಾ, ಎ ರೆಫರೆನ್ಸ ಆ್ಯನುವಲ್** 1973, ಪು.224.

12. ಡಗ್ಲಸ್ ಎನ್‌ಸ್ಮಿಂಗರ್, **ಎ ಗೈಡು ಟು ಕಮ್ಯುನಿಟಿ ಡೆವ್ಹಲಪ್‌ಮೆಂಟ್** (ಗವ್ಹರ್ನಮೆಂಟ್ ಇಫ್ ಇಂಡಿಯಾ : 1957) ಪು. 198.

13. ಆಚಾರ್ಯ, 'ಟೆಕ್ನಿಕ್ಸ್ ಆಫ್ ಇವ್ಯಾಲ್ಯುವೇಶನ್ ಆಫ್ ಪ್ರೋಗ್ರಾಮ್ಸ್ ರೂರಲ್ ಡೆವ್ಹಲಪ್‌ಮೆಂಟ್' ಇದನ್ನು ಗುನ್ನರ್ ಮಿರ್ಡಾಲ್ ಅವರು ತಮ್ಮ ಗ್ರಂಥ– **ಏಷಿಯನ್ ಡ್ರಾಮಾ** (ಲಂಡನ್ : 1968) ಪುಟ 1340ರಲ್ಲಿ ಉಲ್ಲೇಖಿಸಿದ್ದು.

14, ಕೆ. ಚಂದ್ರಶೇಖರಯ್ಯ. ಎಜಕೇಷನಲ್ ಪ್ರಾಬ್ಲಮ್ಸ್ ಆಫ್ ಷೆಡೂಲ್ಡ ಕಾಸ್ಟ್ಸ (ಎನ್.ಸಿ.ಇ.ಆರ್.ಟಿ.ಯ ಅಪ್ರಕಟಿತ ವರದಿ)

15. ಟಿ. ಆರ್. ಬ್ಯಾಟನ್, **ಕಮ್ಯುನಿಟೀಜ್ ಆ್ಯಂಡ್ ಚೇಂಜಿಂಗ್ ವ್ಹಿಲೇಜೆಸ್**

16. ಎಸ್. ಸಿ. ದುಬೆ, **ಇಂಡಿಯಾಜ ಚೇಂಜಿಂಗ್ ವ್ಹಿಲೇಸ್** (ಲಂಡನ್; 1958) ಮತ್ತು ಆಸ್ಕರ್ ಲೇವಿಜ್, **ವ್ಹಿಲೇಜ್ ಲೈಫ್ ಇನ್ ನಾರ್ದರ್ನ ಇಂಡಿಯಾ,** (ಅರ್ಬಾನಾ : 1958)

17. ಎ. ಈ. ಪುನೀತ್, **ಲೀಡರ್‌ಸಿಪ್ ಡೈಮೆನ್ಸನ್ಸ ಆಫ್ ರೂರಲ್ ಇಂಡಿಯಾ** (ಧಾರವಾಡ : 1973) ಪು. 143.147.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ–10

ಸರ್ವೋದಯ

ಸರ್ವೋದಯ ಎಂಬುದು ಗಾಂಧೀಜಿಯವರ ಸೃಷ್ಟಿಯಾಗಿದೆ. ಇದರ ಸೈದ್ಧಾಂತಿಕ ಅರ್ಥವು ಸರ್ವರ ಪ್ರಗತಿ ಅಥವಾ ಅಭ್ಯುದಯವಾಗಿದೆ. ಈ ಚಳುವಳಿಯು ಹೊರ ನೋಟಕ್ಕೆ ಒಂದು ಜನಪರವಾದಂತಹ ಚಳುವಳಿಯಾಗಿ ಕಂಡುಬಂದರೂ ವಾಸ್ತವಿಕವಾಗಿ ಬದಲಾವಣೆಗೆ ಅವಕಾಶಮಾಡಿಕೊಡದಂತಹ ಮೌಲ್ಯವನ್ನು ಭದ್ರಪಡಿಸುವುದಾಗಿದ್ದಿತು. ಒಟ್ಟಿನಲ್ಲಿ ಈ ಚಳುವಳಿಯು ಸೈದ್ಧಾಂತಿಕತೆ, ಆದರ್ಶ ಮತ್ತು ಅದರ ಗುರಿ ಹಾಗೂ ಸಫಲತೆಯನ್ನು ಅರ್ಥಮಾಡಿಕೊಳ್ಳಬೇಕಾದುದು ರಾಜಕೀಯ ಮಹತ್ವವನ್ನಲ್ಲದೆ ಸಾಮಾಜಿಕ ಮಹತ್ವ ಕೂಡ ಹೊಂದಿದೆ.

ಸರ್ವೋದಯ ಸಮಾಜದ ಆಧಾರ ಸತ್ಯ ಮತ್ತು ಅಹಿಂಸೆ. ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಸತ್ಯ, ಶಾಂತಿ ಹಾಗೂ ಅಹಿಂಸೆಗಳನ್ನು ಆಧಾರವಾಗಿ ಹೊಂದಿದ್ದರೆ ಅಂತಹ ವ್ಯಕ್ತಿಗಳ ನಡುವೆ ಶೋಷಣೆಗೆ ಅವಕಾಶವಿರುವುದಿಲ್ಲ. ಹಾಗೂ ಸರ್ವೋದಯ ಸಮಾಜದಲ್ಲಿ ಜಾತಿಮತಗಳಿಗೆ ಮನ್ನಣೆಯಿಲ್ಲ. ಯಾರಿಗೂ ಯಾರನ್ನೂ ಶೋಷಣೆ ಮಾಡುವ ಅವಕಾಶವಿಲ್ಲ. ವ್ಯಕ್ತಿತ್ವದ ವಿಕಾಸಕ್ಕೆ ಸಂಪೂರ್ಣ ಅವಕಾಶವಿದೆ. ಪ್ರತಿಯೊಬ್ಬರೂ ತಮ್ಮ ದೈಹಿಕ ಶ್ರಮದಿಂದ ಆಹಾರಗಳಿಸಿಕೊಳ್ಳುವುದೆಂದರೆ ವರ್ಗಭೇದವೇ ಇರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕಲ್ಯಾಣಕ್ಕಾಗಿ ದುಡಿಯುವುದೇ ಅಲ್ಲದೆ ಇಡೀ ಸಮಾಜ ಕಲ್ಯಾಣಕ್ಕೆ ದುಡಿಯಬೇಕು. ಎಲ್ಲಾ ವೃತ್ತಿಗಳಿಗೂ ಸಮಾನವಾದ ಮಹತ್ವವಿರಬೇಕು. ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಸ್ಥಾನಮಾನಗಳಿರಬೇಕೆಂದು ಗಾಂಧೀಜಿಯವರು ಬಯಸಿದರು. ಸರ್ವೋದಯ ಸಮಾಜವನ್ನು ಸೃಷ್ಟಿಸುವಾಗ ಅನುಸರಿಸುವಂತಹ ಮಾರ್ಗಗಳು ಗುರಿಯಷ್ಟೇ ಒಳ್ಳೆಯವಾಗಿರಬೇಕು. ನಮ್ಮ ಸಾಧನಮಾರ್ಗಗಳು ಎಷ್ಟೆಷ್ಟು ಪರಿಶುದ್ಧವಾಗಿ, ನಿರ್ಮಲವಾಗಿರುತ್ತವೆಯೋ ಅಷ್ಟಷ್ಟು ನಾವು ಗುರಿಯಲ್ಲಿ ಪ್ರಗತಿಯನ್ನು ಹೊಂದಬಹುದು ಎಂಬ ವಿಚಾರಗಳನ್ನು ಗಾಂಧೀಜಿಯವರು ವ್ಯಕ್ತಪಡಿಸಿದರು. ಇಂತಹ ಆದರ್ಶಗಳನ್ನು ಹೊಂದಿ ಸರ್ವರ ಏಳಿಗೆ ಸಾಧಿಸಬೇಕೆಂದು ಸರ್ವೋದಯದ ಚಳುವಳಿಯ ಗುರಿಯನ್ನು ಮುಟ್ಟಲು ಕೆಲವು ಪ್ರಮುಖ ಕಾರ್ಯಕ್ರಮವನ್ನು ಗಾಂಧೀಜಿಯವರು ರೂಪಿಸಿಕೊಟ್ಟರು.

ಖಾದಿಯ ಪ್ರಚಾರ, ಅಸ್ಪೃಶ್ಯತೆಯ ನಿವಾರಣೆ, ವಿವಿಧ ಧಾರ್ಮಿಕ ಸಂಘಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಯಾಯಿಗಳಲ್ಲಿ ಪರಸ್ಪರ ಮೈತ್ರಿ, ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಮಧ್ಯಪಾನ ನಿಷೇಧ, ಗ್ರಾಮ ಅನೈರ್ಮಲ್ಯವನ್ನು ತೊಡೆಯುವಿಕೆ, ಮೂಲಶಿಕ್ಷಣ, ಆರ್ಥಿಕ ಸಮಾನತೆ. ವ್ಯವಸಾಯ ಶಿಕ್ಷಣ, ಆರ್ಥಿಕ ಸಮಾನತೆ, ವ್ಯವಸಾಯ ಅಭಿವೃದ್ಧಿ, ಕಾರ್ಮಿಕರ ಸಂಘಟನೆ, ಆದಿವಾಸಿಗಳ ಕಲ್ಯಾಣ, ವಿದ್ಯಾರ್ಥಿಗಳ ಸಂಘಟನೆ, ಕುಷ್ಠ ರೋಗಕ್ಕೆ ಉಪಚಾರ, ತೊಂದರೆಗಳಿಗೆ ಒಳಗಾದವರಿಗೆ ಪರಿಹಾರ, ಪ್ರಕೃತಿ ಚಿಕಿತ್ಸೆ, ರಾಷ್ಟ್ರಭಾಷೆಯ ಅಭಿವೃದ್ಧಿ ಮತ್ತು ಸ್ತ್ರೀ ಪುರುಷರ ಸ್ಥಾನಮಾನಗಳ ಮತ್ತು ಹಕ್ಕುಗಳ ಉದ್ದೇಶ ಸಮಾನತೆ ಮುಂತಾದವುಗಳು ಪ್ರಮುಖವಾದವುಗಳಾಗಿದ್ದವು.

ಇಂತಹ ಉದ್ದೇಶಗಳನ್ನು ಹೊಂದಿದ್ದ ಸರ್ವೋದಯ ಸಮಾಜದ ಸೃಷ್ಟಿ ಕಾರ್ಯ ಚರಣೆಯಲ್ಲಿ ವಿಫಲವಾಯಿತೆಂದೇ ಹೇಳಬಹುದು. ಇವು ಕೆಲವು ಆದರ್ಶಗಳು, ವಾಸ್ತವಿಕ ಸಮಾಜದಲ್ಲಿ ಆದರಲ್ಲೂ ಭಾರತದಂತಹ ಸಮಾಜಕ್ಕೆ ಒಗ್ಗದಿರುವ ಆದರ್ಶ ಗಳಾಗಿ ಸರ್ವೋದಯ ಇದೊಂದು ಕಲ್ಪನೆಯಾಗಿಯೇ ಉಳಿದಿದೆ.

ಸರ್ವೋದಯದ ಆರ್ಥಿಕ ವ್ಯವಸ್ಥೆ :

ಗಾಂಧೀಜಿಯವರು ಸರ್ವೋದಯದಲ್ಲಿ ಕಾಣಬಯಸಿದ ಆರ್ಥಿಕ ವ್ಯವಸ್ಥೆ ಮಾನವನ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುವುದೇ ಆಗಿದ್ದಿತು. ಪ್ರತಿಯೊಬ್ಬನು ಸಹ ಭೌತಿಕ ಪ್ರಗತಿಯನ್ನು ಮುಖ್ಯಗುರಿಯಾಗಿ ಹೊಂದದೆ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಬೇಕು. ಈ ಗುರಿಯನ್ನು ಮುಟ್ಟಲು ಪ್ರತಿಯೊಂದು ಕ್ಷೇತ್ರ ದಲ್ಲಿಯೂ ದೊರೆಯುವ ಮೂಲಾಧಾರಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಿ ಅದನ್ನು ಸಮರ್ಪಕವಾದ ರೀತಿಯಲ್ಲಿ ಉಪಯೋಗಿಸಬೇಕು. ಉತ್ತಮ ಜೀವನದ ಮಟ್ಟ ಹಾಗೂ ಜೀವನದ ಮೌಲ್ಯಗಳನ್ನು ಜೊತೆಯಾಗಿರಬೇಕು. ಮಾನವ ಪ್ರಗತಿ, ನೈತಿಕ ಹಾಗೂ ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಳ್ಳುವುದನ್ನು ಅವಲಂಬಿಸಿದೆ ಎಂಬುದು ಗಾಂಧಿ ಯವರ ವಾದ.

ಗಾಂಧೀಜಿಯವರು ಶೋಷಣೆ ರಹಿತ ಮತ್ತು ಆರ್ಥಿಕ ವಿಷಮತೆ ಇಲ್ಲದ ಸಮಾಜ ವನ್ನು ಬಯಸಿ ಅಹಿಂಸಾಮಾರ್ಗದ ಮೂಲಕ ಈ ವಿಚಾರಗಳನ್ನು ಕಾರ್ಯಗತ ಮಾಡುವು ವುದಕ್ಕಾಗಿ ಧರ್ಮದರ್ಶಿತ್ವದ ಮೂರು ತತ್ವಗಳನ್ನು ಪ್ರಸ್ತುತಗೊಳಿಸಿದರು :

1) ದೇವರೇ ಸಮಾಜದ ಎಲ್ಲಾ ಸಂಪತ್ತಿಗೂ, ಭೂಮಿಗೂ ಒಡೆಯ. ಪ್ರತಿ ಯೊಬ್ಬನೂ ತನ್ನ ಅವಶ್ಯಕತೆಗೆ ತಕ್ಕಂತೆ ಸಂಪತ್ತನ್ನು ವಿನಿಯೋಗಿಸಬೇಕು. ತನಗೆ ಬೇಕಾದುದಕ್ಕಿಂತ ಹೆಚ್ಚು ಸಂಗ್ರಹಿಸುವುದು ನೀತಿ ಬಾಹಿರ.

2) ಸಂಪತ್ತುಳ್ಳವರು ಅದರ ಒಡೆಯರಾಗಿರದೆ ಧರ್ಮದರ್ಶಿಗಳಾಗಿರಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

3) ಪ್ರತಿಯೊಬ್ಬನೂ ತನ್ನ ಜ್ಞಾನ ಹಾಗೂ ನೈಪುಣ್ಯತೆಯನ್ನು ಸಮಾಜದ ಕಲ್ಯಾಣಕ್ಕೆ ವಿನಿಯೋಗಿಸಬೇಕು.

ಪ್ರತಿಯೊಬ್ಬನೂ ಸರ್ವರ ಸುಖದ ಬಗ್ಗೆ ವಿಚಾರ ಮಾಡದಿದ್ದರೆ ಸಮಾಜದ ಪ್ರಗತಿಯು ಸಾಧ್ಯವಾಗುವುದಿಲ್ಲ. ಆದ್ದರಿಂದ ಎಲ್ಲ ನಾಗರೀಕರು ಇತರರ ಕಲ್ಯಾಣಕ್ಕಾಗಿ ದುಡಿಯುವುದೇ ತನ್ನ ಕರ್ತವ್ಯವೆಂದು ಭಾವಿಸಬೇಕು. ಹೀಗೆ ಗಾಂಧೀಜಿಯವರ ಸರ್ವೋದಯದ ಅರ್ಥಶಾಸ್ತ್ರ ಕೇವಲ ಉತ್ಪಾದನೆಯ ಶಾಸ್ತ್ರವಲ್ಲ. ಸಮಾಜದಲ್ಲಿ ಉತ್ಪಾದನೆಯು ಸಹಜೀವನಕ್ಕೆ ಸಹಕಾರಿ ಆಗಬೇಕೆಂಬುದೇ ಇದರ ಗುರಿಯಾಗಬೇಕು ಎಂದು ಅಭಿಪ್ರಾಯಪಟ್ಟಿದ್ದರು.

ಭಾರತ ಹಳ್ಳಿಗಳ ನಾಡು, ಬ್ರಿಟೀಷರ ಆಗಮನದಿಂದ ಗ್ರಾಮಗಳ ಸ್ಥಿತಿ ಶೋಚನೀಯವಾಗಿದೆ. ಅವುಗಳನ್ನು ಸರಿಪಡಿಸಿ ಗ್ರಾಮಗಳು ಹಿಂದಿನಂತೆ, ಸ್ವತಂತ್ರವಾಗಿ ಸ್ವಾವಲಂಬಿಗಳಾಗುವಂತೆ ಮಾಡುವುದೇ ಇದರ ಗುರಿ. ಕೈಗಾರಿಕಾ ಕ್ರಾಂತಿಯಾಗಿ ಭಾರತದ ಗ್ರಾಮಗಳ ಸ್ವರೂಪವೇ ಬದಲಾಗಿದೆ. ಗ್ರಾಮೀಣ ಕೈಗಾರಿಕೆಗಳು ಮೂಲೆಗುಂಪಾಗಿ ಜನತೆಯು ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಯಿತು. ಹೀಗೆ ಔದ್ಯೋಗೀಕರಣ ಗ್ರಾಮ ಪ್ರಗತಿಗೆ ಪ್ರತಿಕೂಲ ಪರಿಣಾಮವನ್ನು ಬೀರಿತು. ಆದ್ದರಿಂದ ಗ್ರಾಮಗಳ ನಾಡಾಗಿರುವ ಭಾರತದಲ್ಲಿ ಕುಶಲ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿದಲ್ಲಿ ಈ ಅಭಿಪ್ರಾಯವು ಆಧುನಿಕ ರಾಷ್ಟ್ರಗಳಿಗೆ ಸರಿಹೊಂದುವುದಿಲ್ಲ ಎಂದು ಹೇಳಬಹುದು.

ಹಾಗೂ ಸರ್ವೋದಯದ ಆರ್ಥಿಕ ವ್ಯವಸ್ಥೆಯ ಮತ್ತೊಂದು ಲಕ್ಷಣವೆಂದರೆ ಭೂಸುಧಾರಣೆ, ಸರ್ವೋದಯ ತತ್ವದ ಪ್ರಕಾರ ಭೂಮಿಯು ಸರ್ವರಿಗೂ ಸೇರಿದೆ. ಆದುದರಿಂದಲೇ ವಿನೋಬಾ ಭಾವೆಯವರು ಭೂದಾನ, ಸಂಪತ್ತಿನ ದಾನ ಮತ್ತು ಶ್ರಮದಾನ ಚಳುವಳಿಗಳನ್ನು ಪ್ರಾರಂಭಿಸಿದರು. ತಮ್ಮ ಅವಶ್ಯಕತೆಗಿಂತ ಹೆಚ್ಚಾಗಿ ಹೊಂದಿರುವ ಶ್ರೀಮಂತರು ಸ್ವಲ್ಪ ಭಾಗವನ್ನು ಬಡವರಿಗೆ ದಾನಮಾಡಬೇಕೆಂದು ಅವರು ಕರೆ ನೀಡಿದರು,

ಹೀಗೆ ಸರ್ವೋದಯದ ಆರ್ಥಿಕ ಪ್ರತಿಪಾದನೆಯು ಧರ್ಮದರ್ಶಿ ತತ್ವವನ್ನು ಆಧರಿಸಿದ್ದು ಗ್ರಾಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿ ಪ್ರತಿಯೊಂದು ಮನೆಯೂ ಉತ್ಪಾದನಾ ಕೇಂದ್ರವಾಗಬೇಕು ಹಾಗೂ ವಿಜ್ಞಾನವನ್ನು ರಚನಾತ್ಮಕ ಕಾರ್ಯಗಳಿಗೆ ಮಾತ್ರ ಉಪಯೋಗಿಸುವುದಕ್ಕೆ ಬದಲಿಗೆ ಬಡವರ ಶಿಕ್ಷಣ, ಆರೋಗ್ಯ ಸುಧಾರಣೆಗಾಗಿಯೇ ಉಪಯೋಗಿಸಬೇಕು. ಹೀಗೆ ಸರ್ವೋದಯ ಚಳುವಳಿಯಲ್ಲಿ ಆರ್ಥಿಕ ಅಭಿವೃದ್ಧಿ ಸಾಧಿಸಲು ಪ್ರತಿಪಾದಿಸಿದಂತಹ ಮಾರ್ಗಗಳು ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯ ಆರ್ಥಿಕ ವ್ಯವಸ್ಥೆಗೆ ಭಿನ್ನವಾಗಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೋದಯ ಮತ್ತು ಸಮತಾವಾದ

ಸರ್ವೋದಯದ ಗುರಿ ಸರ್ವರ ಅಭ್ಯುದಯ ಅಥವಾ ಏಳಿಗೆ ಸಮತಾವಾದದ ಮುಖ್ಯ ಗುರಿ ಆರ್ಥಿಕ ಸಮಾನತೆ, ಪ್ರತಿಯೊಬ್ಬನು ದುಡಿಯಬೇಕು ಹಾಗೂ ಯಾರು ಉತ್ತಮನಲ್ಲ ಯಾರೂ ಕೀಳಲ್ಲ ಎಲ್ಲರೂ ಸಮಾನರು ಎಂಬ ತತ್ವವನ್ನು ಸಮತಾವಾದ ಆಧರಿಸಿದೆ. ಭಾರತದಲ್ಲಿ ಪ್ರಾರಂಭವಾದ ಈ ಸರ್ವೋದಯ ಚಳುವಳಿಯ ಸಿದ್ಧಾಂತವು ಕೇವಲ ಒಂದು ಆದರ್ಶಾತ್ಮಕವಾದಂತಹ ತತ್ವಗಳ ಕಂತೆಯಾಗಿದ್ದು ವಾಸ್ತವಿಕವಾಗಿ ಸಾಧಿಸಿದ್ದು ಶೂನ್ಯ. ಸಮತಾವಾದದ ತತ್ವಗಳನ್ನು ಹಲವಾರು ರಾಷ್ಟ್ರಗಳು ಒಪ್ಪಿ ಕೊಂಡು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗಿವೆ. ಹೊರನೋಟಕ್ಕೆ ಇವೆರಡರ ಗುರಿ ಒಂದೇ ಎಂಬಂತೆ ಕಂಡುಬರುತ್ತವೆ. ಆ ಗುರಿಯನ್ನು ಸಾಧಿಸಲು ಇವೆ ರಡೂ ಅನುಸರಿಸುವ ಮಾರ್ಗಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಒಂದು ದೃಷ್ಟಿಯಲ್ಲಿ ಭಾರತದಲ್ಲಿ ಸಮತಾದದ ಚಳುವಳಿಯು ಪ್ರಾರಂಭವಾದ ಸಂದರ್ಭದಲ್ಲಿ ಭೀತರಾಗಿ ಭಾರತೀಯ ಪುರಾತನ ಮೌಲ್ಯಗಳನ್ನು ಹಾಗೆಯೇ ಭದ್ರಪಡಿಸಲು ಬಯಸಿದಂತಹ ವ್ಯಕ್ತಿಗಳು ಪ್ರತಿಯಾಗಿ ಸರ್ವೋದಯ ಚಳುವಳಿಯನ್ನು ಪ್ರಾರಂಭಿಸಿದವರು ಎಂದು ಹೇಳಬಹುದು. ಸರ್ವೋದಯದಲ್ಲಿ ಮುಖ್ಯವಾದುದು ಅಧಿಕಾರದ ವಿಕೇಂದ್ರೀಕರಣ, ಸಮತಾವಾದದಲ್ಲಿ ಮುಖ್ಯವಾದುದು ಕೇಂದ್ರೀಕರಣ. ಸಮತಾವಾದಿಗಳು ಅನುಸರಿಸುವ ಮಾರ್ಗ ಬಲಪ್ರಯೋಗ, ಘರ್ಷಣೆ ಮತ್ತು ರಕ್ತಪಾತ. ಆದರೆ ಸರ್ವೋದಯ ಆಧ್ಯಾ ತ್ಮಿಕ ಅಡಿಪಾಯವನ್ನು ಹೊಂದಿ ಅಹಿಂಸೆ ಹಾಗೂ ಸತ್ಯಮಾರ್ಗಗಳನ್ನು ಅನುಸರಿಸುವು ದರ ಮೂಲಕ ತನ್ನ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತದೆ. ಮಂದಗಾಮಿಗಳು ಸರ್ವೋದಯವನ್ನು ಒಪ್ಪಿಕೊಂಡರೆ ಉಗ್ರಗಾಮಿಗಳು ಸಮತಾವಾದವನ್ನು ಒಪ್ಪಿಕೊ ಳ್ಳುತ್ತಾರೆ.

ಹೊಸ ವ್ಯವಸ್ಥೆ ಬದಲಾಗಬೇಕಾದರೆ ಪುರಾತನ ಮೌಲ್ಯಗಳು ಬದಲಾಗಬೇಕು. ಮೌಲ್ಯಗಳು ಬದಲಾಗಬೇಕಾದರೆ ಘರ್ಷಣೆ ಆಗಲೇಬೇಕು, ಘರ್ಷಣೆಯಿಂದ ರಕ್ತಪಾತ, ಹಿಂಸೆ ಅನಿವಾರ್ಯವಾಗಿ ಉಂಟಾಗುತ್ತದೆ. ಆಗ ಮಾತ್ರ ಒಂದು ಹೊಸ ವ್ಯವಸ್ಥೆ ಯನ್ನು ಹುಟ್ಟು ಹಾಕಿ ಆ ಮೂಲಕ ಆರ್ಥಿಕ ಸಮಾನತೆಯನ್ನು ಕಾಣಬಹುದು. ಸಮಾ ನತೆಯಿದ್ದಾಗ ಮಾನವರಲ್ಲಿ ಪರಸ್ಪರ ಪ್ರೀತಿ ಅನುಕಂಪ, ಸೌಹಾರ್ದತೆ ಬೆಳೆದು ವಿಶ್ವ ಮಾನವ ಪ್ರಜ್ಞೆಯು ಬೆಳೆಯುತ್ತದೆ. ಒಂದೆಡೆ ಅಸಮಾನತೆಯನ್ನು ಒಪ್ಪಿಕೊಂಡು, ಇನ್ನೊಂದೆಡೆ ಎಲ್ಲರೂ ಸಮಾನರು ಎಂದು ಹೇಳುವ ಆಧ್ಯಾತ್ಮಿಕ ಅಡಿಪಾಯವನ್ನು ಹೊಂದಿರುವ ಸರ್ವೋದಯದಂತಹ ವ್ಯವಸ್ಥೆಯಲ್ಲಿ ಬದಲಾವಣೆಗೆ ಅವಕಾಶವಿಲ್ಲ. ಪರಿ ಣಾಮವಾಗಿ ಅಸಮಾನತೆ, ಪ್ರೀತಿ ಹಗೆತನಗಳ ಮತ್ತೊಂದು ಮುಖಕ್ಕೆ ಕಾರಣವಾಗು ತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೋದಯ ಮತ್ತು ಭೂದಾನ

ಭಾರತದಲ್ಲಿ ರಾಮರಾಜ್ಯ ಅಥವಾ ಸರ್ವೋದಯದ ಪ್ರತಿಷ್ಠಾಪನೆ ಮಾಡುವುದು ಗಾಂಧೀಜಿಯವರ ಗುರಿಯಾಗಿದ್ದಿತು. 1948ರಲ್ಲಿ ಗಾಂಧೀಜಿಯವರು ನಿಧನರಾದ ಮೇಲೆ, ಅವರಿಂದ ಪ್ರಭಾವಿತರಾಗಿದ್ದ ವಿನೋಬಾ ಭಾವೆಯವರು ಗಾಂಧೀಜಿಯವರ ಅಹಿಂಸೆಯ ಆದರ್ಶದ ಅವರ ಕನಸನ್ನು ನನಸು ಮಾಡಬೇಕೆಂದು ಬಯಸಿದ್ದರು. ಅವರ ಅಹಿಂಸೆಯ ತತ್ವವನ್ನು ಆರ್ಥಿಕ ಕ್ಷೇತ್ರಕ್ಕೆ ಅನ್ವಯಿಸಿ 1951ರಲ್ಲಿ ಭೂದಾನ ಚಳುವಳಿಯನ್ನು ಪ್ರಾರಂಭಿಸಿದರು.

ಭೂದಾನ ಚಳುವಳಿಯಲ್ಲಿ ವಿನೋಬಾ ಭಾವೆಯವರು ಹೆಚ್ಚು ಭೂಮಿಯನ್ನು ಹೊಂದಿರುವ ಭೂ ಒಡೆಯರನ್ನು ಬಡವರಿಗಾಗಿ ಸ್ವಲ್ಪ ಭೂಮಿಯನ್ನು ದಾನ ಮಾಡುವಂತೆ ಬೇಡಿದರು. ಹೆಚ್ಚು ಭೂಮಿಯನ್ನು ಹೊಂದಿದ್ದವರು ಸ್ವಲ್ಪ ಭಾಗವನ್ನು ದಾನ ಮಾಡುವುದು ಧರ್ಮ ಮತ್ತು ಪುಣ್ಯದ ಕೆಲಸ ಎಂದೂ ಭೂ ಒಡೆಯರ ಮನ ಪರಿವರ್ತಿಸಲು ಪ್ರಯತ್ನಿಸಿದರು. ಭೂರಹಿತ ಕಾರ್ಮಿಕರ ಸುಧಾರಣೆಯನ್ನು ಮಾಡಿ ಆ ಮೂಲಕ ಸ್ಥಾಪಿಸ ಬಯಸುವ ಸಮಾಜಕ್ಕೂ ನಾನು ಸಂಯೋಗಿ ಸಮಾಜ ಎಂದು ಹೆಸರು ಕೊಟ್ಟಿದ್ದೇನೆ ಎಂದು ವಿನೋಬಾಭಾವೆಯವರು ಹೇಳಿದರು. ಸಂಯೋಗಿ ಸಮಾಜದ ಮುಖ್ಯ ಲಕ್ಷಣವೆಂದರೆ ಎಲ್ಲಾ ಭೂಮಿ ಆಸ್ತಿ ಮತ್ತು ಸಂಪತ್ತು ಸಮಾಜಕ್ಕೆ ಸೇರಿದ್ದು.

ವಿನೋಬಾ ಭಾವೆಯವರು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯನ್ನು ಭೂದಾನ ಚಳುವಳಿಯಿಂದ ಬದಲಾಯಿಸಬಹುದೆಂದು ಯೋಚಿಸಿದರು. ಭೂರಹಿತರಿಗೆ ಭೂ ವಿತರಣೆಯ ಸಮಸ್ಯೆಯನ್ನು ಭೂದಾನದಿಂದ ಹೋಗಲಾಡಿಸಬಹುದೆಂದು ನಂಬಿದ್ದರು. ವಿನೋಬಾ ಭಾವೆಯುವರ ಪ್ರಕಾರ ಭೂದಾನ ಚಳುವಳಿಯು ಏಕಮುಖ ಚಳುವಳಿಯಲ್ಲ. ಇದು ಯಶಸ್ವಿಯಾದಾಗ ರಾಜ್ಯ ವ್ಯವಸ್ಥೆ ಬದಲಾಗುತ್ತದೆ. ಸರ್ಕಾರ ಬದಲಾಗುತ್ತದೆ ಮತ್ತು ಸಮಗ್ರ ಪರಿವರ್ತನೆಯಾಗುತ್ತದೆ.

ಭೂದಾನ ಚಳುವಳಿಯ ಮೂಲತತ್ವವೆಂದರೆ ಭೂಮಿಯನ್ನು ಹೊಂದಿದ್ದಂತಹ ವರ್ಗದವರಲ್ಲಿ ತಮ್ಮ ಜಮೀನಿನ ಸ್ವಲ್ಪ ಭಾಗವನ್ನು ಭೂರಹಿತರಿಗಾಗಿ ದಾನಮಾಡುವಂತೆ ಅವರಲ್ಲಿ ಮಾಡುವ ನೈತಿಕ ಮನವಿ. ಈ ಚಳುವಳಿಯ ಮುಖ್ಯ ಸೂತ್ರಗಳು ಈ ಕೆಳಕಂಡಂತಿವೆ :

1) ಭೂಮಿಯು ದೇವರ ಕೊಡುಗೆ. ಆದ್ದರಿಂದ ದೇವರ ಇತರೆ ಕೊಡುಗೆಯಾದ ಸೂರ್ಯನ ಬೆಳಕು, ಗಾಳಿ, ನೀರು ಮೊದಲಾದವುಗಳು ಹೇಗೆ ಸಾರ್ವತ್ರಿಕವಾಗಿ ಉಪಯೋಗಿಸಲಾಗುವದೋ ಹಾಗೆಯೇ ಭೂಮಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾರ್ವತ್ರಿಕವಾಗಿ ಉಪಯೋಗಿಸಲ್ಪಡಬೇಕು. ಭೂಮಿಯು ಹೊಂದುವಿಕೆಯು ವೈಯಕ್ತಿಕತೆಯನ್ನು ನಾಶಮಾಡಲಿಕ್ಕಾಗದಿದ್ದರೂ ಕಡಿಮೆ ಮಾಡುವುದು.

2) ಜನರು ಅತೀ ಹೆಚ್ಚು ಭೂಮಿಯನ್ನು ಹೊಂದಿದ್ದಾಗ (ಅವರು ಸಾಗುವಳಿ ಮಾಡುವುದಕ್ಕಿಂತಲೂ ಹೆಚ್ಚಾಗಿ) ಅಗತ್ಯಕ್ಕಿಂತ ಹೆಚ್ಚಾಗಿ ಸಾಗುವಳಿ ಮಾಡುತ್ತಿದ್ದಾಗ ಅದನ್ನು ಭೂರಹಿತರೊಂದಿಗೆ ಹಂಚಿಕೊಳ್ಳಬೇಕು.

3) ಆರ್ಥಿಕ ಅಸಮಾನತೆಯನ್ನು ನಿರ್ಮೂಲನ ಮಾಡಲು ಅಗತ್ಯವಾದ ವಾತಾವರಣವನ್ನು ಸೃಷ್ಟಿಸಲು ಭೂಮಿಯ ಒಡೆಯರನ್ನು ಭೂರಹಿತ ಸಹೋದರರೊಂದಿಗೆ ಹಂಚಿಕೊಳ್ಳುವಂತೆ ಮನವಿಯನ್ನು ಮಾಡುವುದು.

4) ಈ ಸಂಪೂರ್ಣ ಕಾರ್ಯವನ್ನು ಪ್ರೀತಿ, ಅಹಿಂಸೆ ಮತ್ತು ಶಾಂತಿಯಿಂದ ಮಾಡಲಾಗುವುದು ಹಾಗೂ ಒಳ್ಳೆಯ ರೀತಿಯಲ್ಲಿ ಮನವಿ ಮಾಡಿಕೊಳ್ಳುವುದು ಉದಾರತ್ವ ಮತ್ತು ಭ್ರಾತೃತ್ವ ಭಾವನೆಯಿಂದ ಹೊರತು ಬಲಾತ್ಕಾರ ಅಥವಾ ಕಾನೂನಿಂದಲ್ಲ.

ಸಂಪೂರ್ಣವಾಗಿ ಭೂರಹಿತರಾಗಿ ಬಹಳ ಕಷ್ಟದಾಯಕವಾಗಿ ಜೀವನ ನಡೆಸುತ್ತಿರುವ ಜನತೆಯ ಜೀವನವನ್ನು ಉತ್ತಮಪಡಿಸುವುದೇ ಈ ಚಳುವಳಿಯ ಗುರಿ. ಭಾರತದಲ್ಲಿ 50 ಮಿಲಿಯನ್ ಜನ ಭೂರಹಿತರಾಗಿದ್ದರು. ಪ್ರತಿಯೊಬ್ಬ ಭೂರಹಿತ ರೈತನಿಗೂ ಎಕರೆ ಭೂಮಿಯನ್ನು ಕೊಡುವ ಉದ್ದೇಶದಿಂದ 50 ಮಿಲಿಯನ್ ಎಕರೆ ಭೂಮಿಯನ್ನು ಕೊಡುಗೆಯಾಗಿ ಸಂಗ್ರಹಿಸುವ ಗುರಿಯನ್ನು ಹೊಂದಿದ್ದರು. ಗಾಂಧಿಯವರು ಭೂಮಿಯನ್ನು ಹೊಂದಿದ್ದಂತಹ ಶ್ರೀಮಂತ ಭೂರಹಿತ ಜನರ ಧಾರುಣಸ್ಥಿತಿಗೆ ಅನುಕಂಪ ತೋರಿಸಿ, ಚಳುವಳಿಗೆ ತಾವು ಹೊಂದಿರುವ ಭೂಮಿಯಲ್ಲಿ 1/6 ಭಾಗವನ್ನು ಕೊಡುವುದರ ಮೂಲಕ ತೋರಿಸಿ ಎಂದು ಹೇಳಿದರು.

ಭೂದಾನ ಚಳುವಳಿಯು ಪ್ರಾರಂಭದಲ್ಲಿ ಯಶಸ್ವಿಯನ್ನು ಹೊಂದುತ್ತದೆಂದು ಕಂಡುಬಂದರೂ ಅದರ ಪ್ರಗತಿಯು ತೃಪ್ತಿಕರವಾಗಿರಲಿಲ್ಲ. ಕೇವಲ 42,64,096 ಎಕರೆ ಭೂಮಿಯು ಮಾರ್ಚ್ 1968 ರವರೆಗೆ ದಾನವಾಗಿ ಕೊಡಲ್ಪಟ್ಟಿತ್ತು. ಆದರೆ ಗುರಿಯನ್ನು ಹೊಂದಿದ್ದು 50 ಮಿಲಿಯನ್ ಎಕರೆ ಅದರಲ್ಲೂ ಕೇವಲ 11,90,718 ಎಕರೆ ಭೂಮಿಯನ್ನು ಭೂರಹಿತರಿಗಾಗಿ ಹಂಚಲಾಯಿತು. ಸುಮಾರು 40 ಪ್ರತಿಶತ ಭೂಮಿಯು ಸಾಗುವಳಿ ಮಾಡಲು ಯೋಗ್ಯವಾಗಿಲ್ಲದಿದ್ದ ಕಾರಣದಿಂದಾಗಿ ಹಿಂದಿರುಗಿ ಕೊಡಲಾಯಿತು. ಭೂಮಿಯನ್ನು ಹೆಚ್ಚು ದಾನ ಮಾಡಿದ್ದು ಬಿಹಾರ ರಾಜ್ಯ. ಇಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಮಾರು 21, 21, 462 ಎಕರೆ ದಾನವಾಗಿ ಸಂಗ್ರಹಿಸಲಾಯಿತು. ಅದರಲ್ಲಿಯೂ ಸಹ 50 ಪ್ರತಿಶತ ಭಾಗ ಭೂಮಿಯು ಸಾಗುವಳಿಗೆ ಯೋಗ್ಯವಾಗಿರಲಿಲ್ಲ. ಕಾಲ ಕಳೆದಂತೆ ಈ ಚಳುವಳಿಯು ತಾನು ಹೊಂದಿದ್ದ ಗುರಿಯನ್ನು ಮುಟ್ಟಲು ವಿಫಲವಾಯಿತು.

ಭೂದಾನ ಚಳುವಳಿಯ ಸೈದ್ಧಾಂತಿಕತೆಯು ಹೊಸದೇನಾಗಿರಲಿಲ್ಲ. ಕಮ್ಯುನಿಷ್ಟ್ ಚಳುವಳಿಯಿಂದ ಇದು ಸ್ಫೂರ್ತಿಯನ್ನು ಪಡೆದಿದೆ. ಆಂಧ್ರದಲ್ಲಿ ತೆಲಂಗಾಣ ಚಳುವಳಿಯು ಪ್ರಾರಂಭವಾದ ಮೇಲೆ ಈ ಚಳುವಳಿಯು ಪ್ರಾರಂಭವಾಯಿತು. ಮೂಲಭೂತವಾಗಿ ಈ ಚಳುವಳಿಯು ಭಾರತದಲ್ಲಿ ಕಮ್ಯೂನಿಷ್ಟ್ ಚಳುವಳಿಯನ್ನು ಹತೋಟಿಯಲ್ಲಿಡುವ ಅಗೋಚರ ಮುಖವನ್ನು ಹೊಂದಿದ್ದಿತು ಎಂದು ಹೇಳಬಹುದು. ಈ ಚಳುವಳಿಯು ಭೂರಹಿತರ ಸುಧಾರಣೆಯನ್ನು ಭೂ ಒಡೆಯರ ಮನವೊಲಿಸಿ ಅವರಿಂದ ಭೂಮಿಯನ್ನು ಬೇಡಿ ಮಾಡಬಹುದೆಂಬ ನಿಲುವನ್ನು ಹೊಂದಿತ್ತು. ಇದು ಕೇವಲ ಭೂರಹಿತರಿಗೆ ಆಮಿಷವನ್ನು ತೋರಿಸಿ ವ್ಯವಸ್ಥೆಯೊಂದನ್ನು ಬದಲಾಗದ ಸ್ಥಿತಿಯಲ್ಲಿಯೇ ನೆಲೆಗೊಳಿಸುವ ಕರಾಳ ಕಾರಸ್ಥಾನ ಎಂದು ಹೇಳಬಹುದು. ಈ ಚಳುವಳಿಯು ಸಾಧಿಸಿದ್ದಾದರೂ ಏನು ? ಈ ಚಳುವಳಿಗೆ ಪ್ರೋತ್ಸಾಹವಿತ್ತ ಭೂ ಒಡೆಯರು ದಾನ ಮಾಡಿದ ಭೂಮಿಯು ಕೇವಲ ನಾಮುಮಾತ್ರ. ಸಾಗುವಳಿಗೆ ಅಯೋಗ್ಯ ಬಂಜರು ಅಥವಾ ಜವಳು ಭೂಮಿಯನ್ನು ಅವರು ದಾನ ಮಾಡಿದರು. ಇನ್ನೂ ಕೆಲವರು ನ್ಯಾಯಾಲಯದಲ್ಲಿ ಮೊಕದ್ದಮೆಗಳಿಗೆ ಒಳಗಾಗಿದ್ದ ಭೂಮಿಯನ್ನು ದಾನ ಮಾಡಿದರು.

ಕೆಲವರು ಭೂಮಿಯನ್ನು ಕೊಡುವುದಾಗಿ ಒಪ್ಪಿ ಚಳುವಳಿಯ ಕಾರ್ಯಕರ್ತರು ಅವರನ್ನು ಭೇಟಿಯಾದಾಗ ಮಾತಿನಿಂದ ತಪ್ಪಿಸಿಕೊಳ್ಳುತ್ತಿದ್ದರು. ಸಂಗ್ರಹಿಸಿದ ಭೂಮಿಯನ್ನು ಪುನಹ ವಿತರಣೆ ಮಾಡುವ ಕ್ರಮವು ಸಹ ಸರಿಯಾಗಿರಲಿಲ್ಲ. ಭೂದಾನ ಚಳುವಳಿಯ ಮೂಲಭೂತ ದೌರ್ಬಲ್ಯವೆಂದರೆ ಇದು ಶ್ರೀಮಂತರಲ್ಲಿ ಮಾಡಿಕೊಂಡ ನೇರ ಮನವಿಯೇ ಹೊರತು ಬಡವರನ್ನು ಅಲ್ಲ. ಒಳ್ಳೆಯ ಸೌಲಭ್ಯಗಳನ್ನು ಹೊಂದಿ ಭೂ ಒಡೆಯರಾಗಿ ವಿಲಾಸಿ ಜೀವನವನ್ನು ನಡೆಸುತ್ತಿರುವ ಶ್ರೀಮಂತರು ಸಮಾನತೆಯನ್ನು ಬಯಸುವರೆ ? ಶೋಷಣೆಯ ಮೇಲೆ ನಿಂತಿರುವ ಬಂಡವಾಳಶಾಹಿ ಸಮಾಜ ಎಲ್ಲರ ಸಮಾನತೆಯನ್ನು ಬಯಸಲಾರದು. ಶೋಷಿತ ಜನರಲ್ಲಿ ಸ್ವಾಭಿಮಾನ ಮೂಡಿ ಶೋಷಣೆಯ ವಿರುದ್ಧ ಹೋರಾಟದಿಂದ ಮಾತ್ರ ಬದಲಾವಣೆ ಸಾಧ್ಯ. ಭಾರತದ ಗಂಭೀರವಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ ಎಂದರೆ ಬಡತನ, ಇದನ್ನು ಸ್ವಲ್ಪವಾದರೂ ನಿವಾರಿಸುವಲ್ಲಿ ಭೂದಾನ ಚಳುವಳಿಯು ವಿಫಲವಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಾಮದಾನ :

ಗ್ರಾಮದಾನ ಚಳುವಳಿಯು ಖಾಸಗಿ ಆಸ್ತಿಯ ನಿರ್ಮೂಲನೆಯ ಉದ್ದೇಶವನ್ನು ಹೊಂದಿದ್ದ ಭೂದಾನ ಚಳುವಳಿಯ ನಂತರದ ಬೆಳವಣಿಗೆ. ವಿನೋಭಾ ಭಾವೆಯವರು ಪಾದಯಾತ್ರೆಯಿಂದ ಇದು ಗುಜರಾತಿನಲ್ಲಿ ಪ್ರಾರಂಭವಾಯಿತು. ಇದರ ಗುರಿ ಸಮಾನತೆ ಮತ್ತು ಸಹಕಾರವನ್ನು ಆಧರಿಸಿದ ವ್ಯವಸ್ಥೆಯನ್ನು ನಿರ್ಮಿಸಲು ಸಾಮಾಜಿಕ ಪುನರ್ರಚನೆಯ ಮತ್ತು ಆರ್ಥಿಕ ಏಳಿಗೆಯ ಸಾಧ್ಯತೆಯನ್ನು ಹೆಚ್ಚಿಸುವುದಾಗಿತ್ತು. ಗಾಡ್ಗಿಳ್‌ರವರ ಪ್ರಕಾರ ಭೂದಾನ ಮತ್ತು ಗ್ರಾಮದಾನದ ವ್ಯತ್ಯಾಸವೆಂದರೆ ಭೂದಾನ ಚಳುವಳಿಯು ಭೂರಹಿತರ ಪರವಾಗಿ ಭೂಮಿಯನ್ನು ಹೊಂದಿದ್ದವರಲ್ಲಿ ಭೂರಹಿತರಿಗಾಗಿ ಅನುಕಂಪ ತೋರಿಸಿ ಸ್ವಲ್ಪ ಭೂಮಿಯನ್ನು ದಾನಮಾಡಿ ಎಂದು ಕೇಳಿಕೊಳ್ಳುವ ನೈತಿಕ ಮನವಿ. ಗ್ರಾಮದಾನವು ತಾವು ಹೊಂದಿರುವಂತಹದ್ದೆನ್ನೆಲ್ಲಾವನ್ನು ಒಟ್ಟಾಗಿ ಸೇರಿಸಿ ಒಂದು ಸಾಮಾನ್ಯ ತೀರ್ಮಾನಕ್ಕನುಸಾರವಾಗಿ ನಡೆಯಬೇಕು ಎಂದು ಹೇಳುತ್ತದೆ. ಇದು ಚೀನಾದಲ್ಲಿ ಸಂಭವಿಸಿದ್ದ ಕಮ್ಯುನಿಷ್ಟ್ ಕ್ರಾಂತಿಯು ಘರ್ಷಣೆ ಮತ್ತು ಮತ್ಸರವನ್ನು ಹೊಂದಿದ್ದರೆ, ಭಾರತದಲ್ಲಿ ಸಂಭವಿಸಿದ ಗ್ರಾಮದಾನ ಚಳುವಳಿಯು ಅಹಿಂಸಾಮಾರ್ಗವನ್ನು ಹೊಂದಿತ್ತು.

ಗ್ರಾಮದಾನ ಚಳುವಳಿಗೆ ಸಂಬಂಧಿಸಿದ ಸಾಮಾಜಿಕ ಪುನರ್ರಚನೆಯ ಸಿದ್ಧಾಂತವು ಕೆಲವು ಮೂಲಭೂತ ದೃಷ್ಟಿಕೋನಗಳನ್ನು ಹೊಂದಿದ್ದಿತು. ಅವುಗಳೆಂದರೆ ಮೊದಲನೆಯದಾಗಿ ಅಂತಿಮ ಗುರಿಯು ಕೇವಲ ಭೌತಿಕ ಸಂವ್ಯವಸ್ಥೆಯಲ್ಲಿ ಆದರೆ ಮಾನವನ ವ್ಯಕ್ತಿತ್ವದ ಎಲ್ಲಾ ರೀತಿಯ ಬೆಳವಣಿಗೆ, ಎರಡನೆಯದಾಗಿ ವ್ಯಕ್ತಿಗಳ ಸ್ವತಂತ್ರ ಸಮಾಜವನ್ನು ನಿರ್ಮಿಸಲು ಸ್ವಇಚ್ಛೆಯಿಂದ ಮುಕ್ತವಾಗಿ ಸರ್ವರ ಕಲ್ಯಾಣಕ್ಕಾಗಿ ಒಟ್ಟಾಗಿ ಕೆಲಸ ಮಾಡುವುದು.

ಮೇಲಿನ ಗುರಿಯನ್ನು ಸಾಧಿಸಲು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಅವುಗಳೆಂದರೆ 1) ಭೂರಹಿತರಾಗಿದ್ದವರು ಸ್ವಲ್ಪ ಭೂಮಿಯನ್ನು ಪಡೆದುದರಿಂದ ಅವರಿಗೆ ಉಳುಮೆ ಮಾಡಲು ಎತ್ತುಗಳು ಮತ್ತು ಉಪಕರಣಗಳನ್ನು ಒದಗಿಸುವುದು 2) ಸಹಕಾರಿ ಅಂಗಡಿಗಳನ್ನು ಸಂಘಟಿಸುವುದು 3) ನೀರಾವರಿಯ ಸೌಲಭ್ಯ 4) ಖಾದಿಯ ಉತ್ಪಾದನೆ ಅಭಿವೃದ್ಧಿಪಡಿಸುವುದು ಹಾಗೂ ವಿದ್ಯಾಭ್ಯಾಸ, ಗ್ರಾಮೀಣ ಕೈಗಾರಿಕೆಗಳು ಹಾಗೂ ಆರೋಗ್ಯ ಮತ್ತು ನೈರ್ಮಲ್ಯ ಕಾರ್ಯಕ್ರಮಗಳಗನ್ನು ಅಭಿವೃದ್ಧಿಪಡಿಸುವುದು.

ಭೂದಾನ ಚಳುವಳಿಯತತ್ವಗಳಲ್ಲಿ ಮುಖ್ಯವಾದುದು ಒಟ್ಟಾರೆ ರಕ್ಷಣೆ: ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ರಕ್ಷಣೆಯನ್ನು ಒದಗಿಸುವುದು, ಎಲ್ಲರೂ ಐಕ್ಯತೆಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒದಗಿಸುವ ಸಾಮಾಜಿಕ ಪುನರ್ರಚನೆಯನ್ನು ಸ್ಥಾಪಿಸುವುದಾಗಿದ್ದಿತು. ಪುನರ್ ಹಂಚಿಕೆ ಇಲ್ಲದೇ ಭೂದಾನ ಚಳುವಳಿಯಿಂದ ದಾನವಾಗಿ ಕೊಡಲ್ಪಟ್ಟ ಭೂಮಿಯ ಸಾಮೂಹಿಕ ಸಾಗುವಳಿಯಿಂದಾಗಿ ಭೂದಾನ ಮತ್ತು ಸಹಕಾರಿ ಕೃಷಿಯ ತತ್ವಗಳ ನಡುವೆ ಘರ್ಷಣೆ ಉಂಟಾಯಿತು.

ಹೀಗೆ ಸರ್ವೋದಯ ಚಳುವಳಿಯು ಆಧ್ಯಾತ್ಮಿಕ ತಳಹದಿಯ ಮೇಲೆ ರೂಪುಗೊಂಡು ಗಾಂಧೀಜಿಯವರ ಸತ್ಯ ಮತ್ತು ಅಹಿಂಸಾ ಮಾರ್ಗವನ್ನು ಅನುಸರಿಸಿತು. ಈ ಚಳುವಳಿಯಲ್ಲಿ ಉಳ್ಳವರು ಪ್ರಧಾನವಾಗಿದ್ದರೆ ವಿನಹ ಉಳ್ಳದವರಲ್ಲ. ಸರ್ವರ ಅಭ್ಯುದಯವನ್ನು ಸಾಧಿಸಬೇಕು ಎಂದು ಹೊರಟ ಈ ಚಳುವಳಿಯು ವಿಫಲವಾಯಿತು. ಸರ್ವೋದಯದ ಭೂದಾನ ಮತ್ತು ಗ್ರಾಮದಾನ ಚಳುವಳಿಯಲ್ಲಿ ಭೂಮಿಯನ್ನು ಪಡೆದು ಭೂರಹಿತರಿಗೆ ವಿತರಣೆ ಮಾಡಲು ಉಳ್ಳವರಲ್ಲಿ ಭೂಮಿ ಬೇಡಿಕೆಯ ನೈತಿಕ ಮನವಿಯು ವ್ಯವಸ್ಥೆಯನ್ನು ಬದಲಾಯಿಸಲಾರದು. ವ್ಯವಸ್ಥೆ ಬದಲಾಗಬೇಕಾದರೆ ಕಮ್ಯುನಿಸ್ಟರ ಚಳುವಳಿಗಳು ಅನಿವಾರ್ಯ. ಕೆಲವರು ಸರ್ವೋದಯ ಚಳುವಳಿಯನ್ನು ಮಾರ್ಕ್ಸ್ ವಾದಕ್ಕೆ ಹೋಲಿಸಿ ಪರಿಶೀಲಿಸಿದ್ದಾರೆ. ಇನ್ನೂ ಕೆಲವರು ಸರ್ವೋದಯದ ತಾತ್ವಿಕತೆಯನ್ನು ಅಭ್ಯಸಿಸಿದರೆ ಇತರೆ ಕೆಲವರು ಅದರ ವಿಧಾನ ಮತ್ತು ಆದರ್ಶಗಳ ಕಡೆಗೆ ಗಮನಹರಿಸಿದ್ದಾರೆ. ಕೆಲವರು ಸರ್ವೋದಯದ ಮತ್ತು ಮಾರ್ಕ್ಸ್ ವಾದದ ನಡುವೆ ನಿಕಟವಾದ ಸಾಮ್ಯತೆಯನ್ನು ಕಂಡಿದ್ದಾರೆ, ಕೆಲವರು ಅದರ ಸಾಮಾಜಿಕ ಪ್ರಭಾವದ ಕಡೆಗೆ ಕಡಿಮೆ ಮಹತ್ವವನ್ನು ಕೊಟ್ಟಿದ್ದಾರೆ. ಕಮ್ಯುನಿಸ್ಟ್ ಚಿಂತನೆಯ ಪ್ರಭಾವದಿಂದಾಗಿ ಸರ್ವೋದಯದ ಚಳುವಳಿಯಾದರೂ ವರ್ಗರಹಿತ ಆದರ್ಶ ಸಮಾಜವನ್ನು ಬಯಸಿತು. ಆದರೆ ಅದೇ ಸಮಾಜದಲ್ಲಿ ಅವರು ಆ ಸೂತ್ರದ ಮೇಲಿನ ರಾಜಕೀಯ ಹೋರಾಟವನ್ನು ನಿರಾಕರಿಸಿದರು. ವರ್ಗ ಅಸ್ತಿತ್ವವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಸರ್ವೋದಯ ಚಳುವಳಿಗಾರರು ಜನರ ಹೃದಯಗಳನ್ನು ಪರಿವರ್ತಿಸುವುದರ ಕಡೆಗೆ ಮಾತ್ರಗಮನಹರಿಸಿದರು. ರಾಜ್ಯದ ವಿರುದ್ಧ ಹೋರಾಡಲು ಅವರು ಬಯಸಲಿಲ್ಲ. ಆದರೂ ಅದನ್ನು ಅವರು ನಿರ್ಮೂಲನ ಮಾಡಲು ನೋಡುತ್ತಿದ್ದರು. ಸಾಮಾಜಿಕ ಬದಲಾವಣೆಯ ಪ್ರೋತ್ಸಾಹಕ ಶಕ್ತಿಯ ಸಾಮೂಹಿಕ ಹೋರಾಟವನ್ನು ನಿರಾಕರಿಸಿದರು. ಇದರಿಂದಾಗಿ ಭೂದಾನ ಮತ್ತು ಗ್ರಾಮದಾನ ಚಳುವಳಿಗಳು ವಿಫಲವಾದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ — 11

ಭೂ ಸುಧಾರಣೆ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳು

ಭೂ ಸುಧಾರಣೆಯೆಂದರೆ ಕೃಷಿಯ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಕ್ರಾಂತಿಕಾರಕ ಯೋಜನೆಯನ್ನು ರೂಪಿಸಿ ಅಸ್ತಿತ್ವದಲ್ಲಿರುವ ಭೂ ಒಡೆತನದ ನ್ಯೂನತೆಯ ರಚನೆಯನ್ನು ನಿರ್ಮೂಲನ ಮಾಡುವುದು. ಭಾರತದಲ್ಲಿ ಕೃಷಿಯು ಹೆಚ್ಚಿನ ಜನರ ಉದ್ಯೋಗವಾಗಿದ್ದು ಅವರೇ ಈ ದೇಶದ ಬೆನ್ನೆಲುಬು. ಶತಮಾನಗಳಿಂದಲೂ ಭಾರತದ ಕೃಷಿಯಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗಿರಲಿಲ್ಲ. ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದ ನಂತರ ಕೃಷಿ ವಿಧಾನ, ಯಾಂತ್ರೀಕರಣ, ರಸಗೊಬ್ಬರ ಗಳನ್ನು ಉಪಯೋಗಿಸುವುದು ಇವುಗಳನ್ನು ಅಳವಡಿಸಿ, ಅಭಿವೃದ್ಧಿಪಡಿಸಿದುದರಿಂದ ತಲಾ ಎಕರೆಯ ಉತ್ಪಾದನೆಯು ಅಧಿಕವಾಯಿತು. ಹಿಂದೆ ಭೂಮಿಯನ್ನು ಸಾಗುವಳಿ ಮಾಡುವಂತಹವರು ತಮ್ಮ ಕೃಷಿಯ ಅಭದ್ರತೆಯಿಂದಾಗಿ ಅತೃಪ್ತಿ ಹೊಂದಿದ್ದರು. ಗೈರುಹಾಜರಿ ಭೂ ಒಡೆತನ ಮತ್ತು ಜಮೀನ್ದಾರಿ ಪದ್ಧತಿಗಳು ರೈತರ ಉತ್ಸಾಹದ ಮೇಲೆ ಕೆಟ್ಟ ಪರಿಣಾಮವನ್ನು ಬೀರಿದ್ದವು.

ಭೂ ಸುಧಾರಣೆಯ ಕಲ್ಪನೆ :

ಆಸ್ತಿ ಒಡೆತನಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಉಳುಮೆ ಮಾಡುವವರ ಹಿತ ದೃಷ್ಟಿಯಿಂದ ಸಾಂಸ್ಥಿಕ ಬದಲಾವಣೆಗಳನ್ನು ತಂದು ಭೂ ಹಿಡುವಳಿಯ ಗಾತ್ರವನ್ನು ಹೆಚ್ಚು ಮಾಡಿ ಭೂಮಿ ಉಳುವವರ ಜೀವನವನ್ನು ಉತ್ತಮಪಡಿಸುವುದು, ಹೀಗೆ ಭೂ ಸುಧಾರಣೆಯು ಎರಡು ರೀತಿಯ ಸಾಂಸ್ಥಿಕ ಬದಲಾವಣೆಗಳನ್ನು ಒಳಗೊಂಡಿದೆ, ಒಂದು ಕೃಷಿಗೆ ಸಂಬಂಧಿಸಿದ್ದರೆ ಮತ್ತೊಂದು ಹಿಡುವಳಿಯ ಗಾತ್ರಕ್ಕೆ ಸಂಬಂಧಿಸಿದ್ದಿತು.

ಭೂ ಸುಧಾರಣೆಯ ಅವಶ್ಯಕತೆ ಮತ್ತು ಪ್ರಾಮುಖ್ಯತೆ :

ಭಾರತದಲ್ಲಿ ಭೂ ಸುಧಾರಣೆಯು ಅನೇಕ ದೃಷ್ಟಿಯಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ಸುಧಾರಿತ ಕೃಷಿಯ ರಚನೆಯು ಕೇವಲ ಕೃಷಿಯ ಅಭಿವೃದ್ಧಿಗೆ ಸಹಾಯ ಮಾಡುವುದಲ್ಲ, ಜೊತೆಗೆ ಜನರ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಉತ್ತಮಪಡಿಸುತ್ತದೆ. ಭೂ ಸುಧಾರಣೆಯ ಅವಶ್ಯಕತೆ ಮತ್ತು ಪ್ರಾಮುಖ್ಯತೆಯು ಈ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕೆಳಕಂಡಂತಿವೆ.

1) **ಪ್ರಗತಿಗೆ ಪ್ರೋತ್ಸಾಹಿಸುವುದು** : ಭಾರತದ ಕೃಷಿಯು ಹಿಂದುಳಿದಿದೆ. ಆದರೂ ಭಾರತದ ಆರ್ಥಿಕತೆಯು ಮುಖ್ಯವಾದ ಮೂಲವಾಗಿದೆ. ಜೊತೆಗೆ ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರವನ್ನು ಒದಗಿಸುತ್ತದೆ ಮತ್ತು ಉದ್ದಿಮೆಗಳಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತದೆ.

ಕೆಲವು ಅರ್ಥಶಾಸ್ತ್ರಜ್ಞರು ಮತ್ತು ತಾಂತ್ರಿಕ ಶಾಸ್ತ್ರಜ್ಞರು ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಲು ಉತ್ತಮವಾದ ಬೀಜಗಳು, ರಸಗೊಬ್ಬರಗಳು, ನೀರು ಪೂರೈಕೆ ಉಪಕರಣಗಳು ಮತ್ತು ಇತರೆ ಕೃಷಿಸಂಪನ್ಮೂಲಗಳನ್ನು ಸರಿಯಾಗಿ ಬಳಸಿದಾಗ ಮಾತ್ರ ಉತ್ಪಾದನೆಯು ಅಧಿಕವಾಗುತ್ತದೆ. ಆದರೆ **ವಾಸ್ತವಿಕವಾಗಿ ಹಾಗಾಗಲಿಲ್ಲ.** ನಮ್ಮ ದೇಶದಲ್ಲಿ ತಾಂತ್ರಿಕತೆಯ ಕೊರತೆ ಇದೆ. ಹಾಗೆಯೇ ದುರಾದೃಷ್ಟವಶಾಹತ್ ದೊರೆಯುತ್ತಿರುವ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಲಾಗಲಿಲ್ಲ. ಇದಕ್ಕೆ ಎರಡು ಕಾರಣಗಳುಂಟು. ಒಂದು ಹೆಚ್ಚು ಸಂಖ್ಯೆಯ ರೈತರು ಕಡಿಮೆ ವಿಸ್ತೀರ್ಣದ ಭೂಮಿಯನ್ನು ಅಂದರೆ ತುಂಡು ಭೂಮಿಯನ್ನು ಹೊಂದಿರುವಂತಹದ್ದು ಹಾಗೂ ಚಿಕ್ಕರೈತರಾಗಿರುವುದರಿಂದ ಸಾಕಾಗುವಷ್ಟು ಕೃಷಿ ಅವಶ್ಯಕತೆಗಳನ್ನು ಕೊಳ್ಳುವಂತಹ ಶಕ್ತಿ ಇರಲಿಲ್ಲ. ಎರಡನೆಯದಾಗಿ ಗೇಣಿಯಲ್ಲಿದ್ದ ಸಾಗುವಳಿದಾರರು ಕೃಷಿ ಸಂಪನ್ಮೂಲಗಳನ್ನು ಸರಿಯಾಗಿ ಬಳಸಲು ಅನುಕೂಲವಾಗುವ ಪ್ರೋತ್ಸಾಹಗಳಿರಲಿಲ್ಲ. ಇದರಿಂದ ಈ ಸಾಗುವಳಿದಾರರು ತಮ್ಮ ಪರಿಶ್ರಮಕ್ಕೆ ತಕ್ಕ ಫಲವನ್ನು ಪಡೆಯಲು ಮತ್ತು ಉಳಿತಾಯ ಮಾಡಲು ಸಾಧ್ಯವಾಗಲಿಲ್ಲ.

ಉತ್ಪಾದನೆಯನ್ನು ಹೆಚ್ಚಿಸಲು ಒಬ್ಬ ಸಾಗುವಳಿದಾರನಿಗೆ ಎರಡು ರೀತಿಯ ಪ್ರೋತ್ಸಾಹದ ಅವಶ್ಯಕತೆ ಇದೆ. ಒಂದು ರೀತಿಯ ಪ್ರೋತ್ಸಾಹವೆಂದರೆ ಹೆಚ್ಚು ಶ್ರಮವಹಿಸಿ ಕೆಲಸಮಾಡಿ ಕೃಷಿ ಕಾರ್ಯದ ಮೇಲೆ ಹೆಚ್ಚು ಎಚ್ಚರಿಕೆಯನ್ನು ವಹಿಸುವಂತೆ ಪ್ರೋತ್ಸಾಹಿಸುವುದು ಮತ್ತು ಉತ್ತಮ ಕೃಷಿಗೆ ದೊರೆಯುವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಬಳಸುವಂತೆ ಪ್ರೋತ್ಸಾಹಿಸುವುದು. ಇಂತಹ ಪ್ರೋತ್ಸಾಹವನ್ನು ಕೊಟ್ಟಾಗ ಕೃಷಿ ವ್ಯವಸ್ಥೆಯಲ್ಲಿ ಸಾಗುವಳಿದಾರರು ತನ್ನ ಶ್ರಮ ಮತ್ತು ಹೂಡಿಕೆಗೆ ತಕ್ಕ ಲಾಭವನ್ನು ಪಡೆಯುತ್ತಾರೆ.

2) **ಉತ್ಪಾದನೆಯನ್ನು ಹೆಚ್ಚಿಸಲು ಮಿತವ್ಯಯದ ವಿಧಾನಗಳನ್ನು ಅನುಸರಿಸುವುದು** : ಕೃಷಿಯೇತರ ಉದ್ದಿಮೆಗಳನ್ನು ಸ್ಥಾಪಿಸಿ ಆ ಮೂಲಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉತ್ಪಾದನೆಯನ್ನು ಹೆಚ್ಚಿಸಿ ಬಂಡವಾಳ ಹೂಡುವಿಕೆಯು ಮೂಲಭೂತ ಅವಶ್ಯಕತೆಯಾಗಿದೆ. ಬಂಡವಾಳದ ಕೊರತೆಯಿರುವುದರಿಂದ ಉತ್ಪಾದನೆಯನ್ನು ಹೆಚ್ಚಿಸಲು ಭೂಸುಧಾರಣೆಯೂ ಮಿತವ್ಯಯದ ವಿಧಾನವೆಂಬುದನ್ನು ಕಾಣಬಹುದು. ಇದು ಸಾಗುವಳಿದಾರನು ಹೆಚ್ಚು ಶ್ರಮವಹಿಸಿ ದುಡಿದು ಮತ್ತು ಕೃಷಿ ಕಾರ್ಯದಲ್ಲಿ ಹೆಚ್ಚು ಆಸಕ್ತಿ ವೆಸುವಂತಹ ವಾತಾವರಣವನ್ನು ಸೃಷ್ಟಿಮಾಡುತ್ತದೆ. ಸರಿಯಾದ ಸಮಯದಲ್ಲಿ ಉಳುಮೆ ಮಾಡಿಬಿತ್ತನೆ ಮಾಡುವುದು. ಸರಿಯಾದ ಸಮಯದಲ್ಲಿ ಮತ್ತು ಸಾಕಾಗುವಷ್ಟು ನೀರನ್ನು ಒದಗಿಸುವುದು, ಬೆಳೆಯನ್ನು ಪ್ರಾಣಿಗಳಿಂದ ರಕ್ಷಿಸುವುದು ಸಮಯಕ್ಕೆ ಸರಿಯಾಗಿ ಕೊಯ್ಲು ಮಾಡುವುದು, ಕೊಯ್ಲುಮಾಡಿದ ಬೆಳೆಯನ್ನು ಹಿತಕರವಲ್ಲದ ಹವಾಮಾನದಿಂದ ರಕ್ಷಿಸುವುದು ಮುಂತಾದ ಕ್ರಮಗಳ ಕಡೆಗೆ ಗಮನ ಹರಿಸಬೇಕು. ಯಾರು ಹೆಚ್ಚು ಶ್ರಮವಹಿಸಿ ದುಡಿಯುವರೋ ಅಂತಹವರು ಈ ಕಾರ್ಯಗಳನ್ನು ಮಾಡಬಹುದು. ಈ ಚಟುವಟಿಕೆಗಳಿಗೆ ಅಧಿಕ ವೆಚ್ಚವಾಗಲಿ ಅಥವಾ ಯಾವುದೇ ಉಳಿತಾಯವಾಗಲಿ ಬೇಕಾಗುವುದಿಲ್ಲ. ಇದಕ್ಕೆ ಕೇವಲ ಸಾಗುವಳಿದಾರನು ಭೂಮಿಯೊಂದಿಗೆ ಹೊಂದಿರುವ ಸಂಬಂಧವು ಮುಖ್ಯವಾಗಿರುತ್ತದೆ.

3. ಯೋಜಿತ ಬೆಳೆ

ವಿವೇಕಯುಕ್ತ ಸತ್ವಯುತವಾದ ಮತ್ತು ಉತ್ಸಾಹದ ಕೃಷಿಪದ್ಧತಿಯು ಯೋಜಿತ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತದೆ. ಮೊದಲನೆಯದಾಗಿ ಇದು ಯೋಜನೆಯನ್ನು ರೂಪಿಸುವ ಜವಾಬ್ದಾರಿ ಹೊತ್ತವರಿಗೆ ಕೃಷಿ ಆರ್ಥಿಕತೆಯನ್ನು ಯೋಜನೆಯ ಪ್ರತಿಯೊಂದು ಅಂತದೊಂದಿಗೆ ಐಕ್ಯತೆತರಲು ಸಹಾಯ ಮಾಡುತ್ತದೆ. ಇಂತಹ ಐಕ್ಯತೆಯ ಸಾದ್ಯತೆ ಇದೆ. ಏಕೆಂದರೆ ಸಾಗುವಳಿದಾರನು ಸರ್ಕಾರದೊಂದಿಗೆ ನೇರ ಸಂಬಂಧವನ್ನು ಹೊಂದಿರುತ್ತಾನೆ. ಎರಡನೆಯದಾಗಿ ವಿಭಿನ್ನವಾದ ಮತ್ತು ವಿಶಾಲವಾದ ಹಿಡುವಳಿ ಸಂಬಂಧಗಳು ಇಡೀ ದೇಶದಲ್ಲಿ ವ್ಯವಸ್ಥೆಯ ಏಕರೂಪತೆಗೆ ಕಾರಣವಾಗುತ್ತದೆ. ಇದು ಯೋಜನೆಯನ್ನು ರೂಪಿಸುವಂತಹವರಿಗೆ ಏಕರೂಪಯೋಜನೆಗಳನ್ನು ರಚಿಸಿ ಕಾರ್ಯರೂಪಕ್ಕೆ ತರಲು ಅನುಕೂಲವಾಗುತ್ತದೆ.

4. ಸಾಮಾಜಿಕ ನ್ಯಾಯ ;

ಭೂಸುಧಾರಣೆಯು ಎಲ್ಲಾ ಸಾಗುವಳಿದಾರರಿಗೂ ನ್ಯಾಯವನ್ನು ತಂದುಕೊಡುತ್ತದೆ. ಸಾಗುವಳಿದಾರರ ಪರವಾದ ಭೂಗೇಣಿ ಸಂಬಂಧಗಳಲ್ಲಿನ ಬದಲಾವಣೆಗಳು ಅವರಿಗೆ ಶ್ರಮ ಮತ್ತು ಹೂಡಿಕೆಯಲ್ಲಿ ಪ್ರತಿಫಲದ ಭರವಸೆಯನ್ನು ತಂದುಕೊಡುತ್ತವೆ. ಪುನಃ ಭೂಮಿತಿಯ ಯೋಜನೆಯು ಭೂರಹಿತರಿಗೆ ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡುವಂತೆ ಮಾಡಿ ಸಣ್ಣ ರೈತರ ಸಂಪತ್ತಿನ ಮತ್ತು ಆದಾಯದ ಅಸಮಾನತೆಯನ್ನು ಕಡಿಮೆಗೊಳಿಸುತ್ತದೆ. ಹಾಗೂ ಚದುರಿರುವ (ತುಂಡು, ತುಂಡಾಗಿರುವ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಡುವಳಿಗಳನ್ನು ಒಟ್ಟಿಗೆ ಸೇರಿಸಿ ಸಾಗುವಳಿಯ ಘಟಕದಲ್ಲಿನ ಹೆಚ್ಚಿಸುವಿಕೆಯು ಸಾಗುವಳಿದಾರನ ಆದಾಯವನ್ನು ಹೆಚ್ಚಿಸುತ್ತದೆ.

ಹೀಗೆ ಭೂಸುಧಾರಣೆಯು ಒಂದು ಕಡೆ ಸಾಗುವಳಿದಾರನಿಗೆ ಅವನಿಗೆ ಬರಬೇಕಾದದ್ದನ್ನು ಪಡೆಯಲು ಅನುಕೂಲಮಾಡಿಕೊಟ್ಟರೆ ಇನ್ನೊಂದೆಡೆ ಆತನ ಆರ್ಥಿಕ ಸ್ಥಾನಮಾನವನ್ನು ಹೆಚ್ಚಿಸುತ್ತದೆ. ದೇಶದಲ್ಲಿ ಆತನ ಆರ್ಥಿಕ ಸ್ಥಾನಮಾನವನ್ನು ಹೆಚ್ಚಿಸುವುದಲ್ಲದೆ ದೇಶದಲ್ಲಿ ಅಧಿಕ ಸಂಖ್ಯೆಯ ಜನರು ಭೂಮಿಯ ಮೇಲೆ ಕೆಲಸಮಾಡುತ್ತಿರುವುದರಿಂದ ಈ ಭೂಸುಧಾರಣೆಗಳು ಹೆಚ್ಚು ಸಂಖ್ಯೆಯ ಜನರ ಸಾಮಾಜಿಕ ಸ್ಥಾನಮಾನವನ್ನು ಬದಲಾಯಿಸುತ್ತವೆ. ಇಂತಹ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿನ ಏಳಿಗೆಯು ಇದೇ ಭಾರತೀಯರ ಜೀವನದ ಮೇಲೆ ತೀವ್ರವಾದ ಮತ್ತು ಆರೋಗ್ಯಕರವಾದ ಪರಿಣಾಮವನ್ನು ಬೀರುತ್ತದೆ.

ಭೂಸುಧಾರಣೆಯ ಗುರಿಗಳು ;

1. ಮಧ್ಯವರ್ತಿಗಳ ನಿರ್ಮೂಲನೆ.
2. ಗೇಣಿ ಶಾಸನ, ಗೇಣಿದಾರರ ಗೇಣಿಯ ರಕ್ಷಣೆಯ ಕಾಯಿದೆ ಮತ್ತು ಅವುಗಳ ಮೇಲೆ ಮಾಲಿಕತ್ವವನ್ನು ಗೊತ್ತು ಪಡಿಸುವುದು.
3. ಭೂಹಿಡುವಳಿಗಳನ್ನು ಮಿತಿಗೊಳಿಸುವುದು.
4. ಸಹಕಾರಿ ಬೇಸಾಯ

ಮಧ್ಯವರ್ತಿಗಳ ನಿರ್ಮೂಲನೆ :

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು 1948ರಲ್ಲಿ ಜಮೀನ್ದಾರಿ ಪದ್ಧತಿ ಮತ್ತು ಜಾಗಿರ್‌ದಾರಿ ಪದ್ಧತಿ ಮುಂತಾದ ಮಧ್ಯವರ್ತಿಗಳ ನಿರ್ಮೂಲನೆಯ ಪ್ರತಿಪಾದನೆಯನ್ನು ಮಾಡಿತು. ಇದರ ಪ್ರಕಾರವಾಗಿ ರಾಜ್ಯ ಸರ್ಕಾರವು ಕೃಷಿಕರಿಗೆ ತಮ್ಮ ಕಠಿಣ ಶ್ರಮ ಮತ್ತು ಹೂಡಿಕೆಗೆ ತಕ್ಕಂತೆ ಪ್ರತಿಫಲ ದೊರೆಯುವಂತೆ ಮಾಡಲು ಜಮೀನ್ದಾರಿ ಹಕ್ಕುಗಳನ್ನು ನಿರ್ಮೂಲನ ಮಾಡಲು ನಿರ್ಧರಿಸಿತು. ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯೊಂದಿಗೆ ಸುಮಾರು 20ಮಿಲಿಯನ್ ಗೇಣಿದಾರರು ಭೂಮಿಯ ಮಾಲಿಕರಾದರು ಮತ್ತು ಭೂಒಡೆಯರ ಶೋಷಣೆಯು ಕೊನೆಗೊಂಡಿತು. ಉಳುವವರಿಗೆ ಭೂಮಿಯ ಮಾಲೀಕತ್ವವನ್ನು ಖಚಿತಪಡಿಸಿತು ಇದು ಅವನಿಗೆ ಉತ್ತಮ ಸಾಗುವಳಿ ಮಾಡಲು ಪ್ರೋತ್ಸಾಹ ನೀಡಿತು. ಕೃಷಿ ಉತ್ಪಾದಕತ್ವವು ಗಣನೀಯವಾಗಿ ಅಭಿವೃದ್ಧಿ ಹೊಂದಿತು. ಇದು ಕ್ರಮೇಣವಾಗಿ ಭಾರತೀಯ ಕೃಷಿ ಕ್ಷೇತ್ರದಲ್ಲಿ ಸಹಕಾರಿ ಬೇಸಾಯಕ್ಕೆ ಅವಕಾಶ ಮಾಡಿಕೊಟ್ಟಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೇಣಿ ಶಾಸನ :

ಈ ಶಾಸನಗಳಿಂದಾಗಿ ಆಕ್ರಮಿಂತ ಗೇಣಿದಾರರು ಮಾಲೀಕರ ರೀತಿಯಲ್ಲಿಯೇ ಭೂಮಿಯ ಮೇಲೆ ಅಧಿಕಾರಗಳನ್ನು ಹೊಂದಿದರು. ಎಲ್ಲಿಯವರೆಗೆ ಅವನು ಗೇಣಿಯನ್ನು ತಪ್ಪದೆ ಪಾವತಿಸುತ್ತಾನೋ ಅಲ್ಲಿಯವರೆಗೆ ಅವನು ಭೂಮಿಯನ್ನು ಸಾಗುವಳಿ ಮಾಡುವಂತಹ ಹಕ್ಕುಗಳು ಶಾಸ್ವತವಾದವು. ಆಕ್ರಮಿಸಿಲ್ಲದ ಗೇಣಿ ಪದ್ಧತಿ ಅಥವಾ ಉಪಗೇಣಿ ಪದ್ಧತಿಯ ಗೇಣಿಯನ್ನು ನಿಗದಿಪಡಿಸಲ್ಪಟ್ಟಿತು. ಗೇಣಿದಾರರು ಮಾಲೀಕರು ವಶಪಡಿಸಿಕೊಳ್ಳುವುದರಿಂದ ರಕ್ಷಣೆ ಪಡೆದರು ಮತ್ತು ಕೊನೆಗೆ ಭೂಮಿಯ ಮಾಲೀಕರಾದರು. ಗೇಣಿಯನ್ನು ಕಡಿಮೆಗೊಳಿಸುವಿಕೆ ಮತ್ತು ನಿಯಂತ್ರಣವು ಎಲ್ಲಾ ವರ್ಗದ ಗೇಣಿದಾರರಿಗೆ ಸಹಾಯ ಮಾಡಿತು ಮತ್ತು ಗೇಣಿಯು ಶೇಖಡಾವಾರು ವಿವಿಧ ರಾಜ್ಯಗಳಲ್ಲಿ ಪ್ರಗತಿಪರ ಶಾಸನಗಳಿಂದ ನಿಯಂತ್ರಿಸಲ್ಪಟ್ಟಿತು.

ಜನಸಂಖ್ಯೆಯ ಹೆಚ್ಚಳದ ಪರಿಣಾಮವಾಗಿ ಕೃಷಿಯ ಮೇಲಿನ ಒತ್ತಡವು ಗೇಣಿಯಲ್ಲಿ ನಿರಂತರವಾಗಿ ಹೆಚ್ಚಳವಾಗುವ ಪ್ರವೃತ್ತಿಗೆ ಕಾರಣವಾಯಿತು. ಗ್ರಾಮೀಣ ಕರಕುಶಲ ಕೈಗಾರಿಕೆಯ ಅವನತಿಯು ಸಹಾ ಭೂಮಿಯ ಮೇಲಿನ ಅವಲಂಬನೆಯನ್ನು ಅಧಿಕಗೊಳಿಸಿತು. ಆದರೆ ಭೂಮಿಯ ಪೂರೈಕೆಯು ಮಿತವಾಗಿರುತ್ತದೆ. ಭೂಮಿಯ ಬೇಡಿಕೆಯು ಅಧಿಕವಾದುದರಿಂದ ಗೇಣಿಯ ಪ್ರಮಾಣ ಮೇಲೆ ತಳ್ಳಿತು. ಆದ್ದರಿಂದ ಹಿಡುವಳಿಯ ಮೇಲೆ ಮಾಲೀಕತ್ವವನ್ನು ಖಚಿತಪಡಿಸಲು ಭೂಮಿಯನ್ನು ಉಳುಮೆ ಮಾಡುವವರಿಗೆ ಪರಿಹಾರ ಕೊಡುವ ಉದ್ದೇಶ ಪ್ರಾಮುಖ್ಯತೆ ಪಡೆಯಿತು. ಎಲ್ಲಾ ಭೂಸುಧಾರಣೆಗಳ ಹಿಂದಿನ ನಿರ್ದಿಷ್ಟವಾದ ಗುರಿಯೆಂದರೆ ಭೂಹಿಡುವಳಿಯ ಮೇಲೆ ಸಾಧ್ಯವಾದಷ್ಟು ಮಟ್ಟಿಗೆ ಮಾಲೀಕತ್ವದ ಹಕ್ಕುಗಳನ್ನು ಖಚಿತಪಡಿಸುವುದಾಗಿದ್ದಿತು. ವಿವಿಧ ಯೋಜನೆಗಳ ಅವಧಿಯಲ್ಲಿ ಈ ದಿಕ್ಕಿನಲ್ಲಿ ಸಾಕಷ್ಟು ಪ್ರಗತಿಯನ್ನು ಗಳಿಸಲಾಯಿಯಿತು.

ಭೂ ಹಿಡುವಳಿಯ ಮೇಲಿನ ಮಿತಿ

ಭಾರತದ ಭೂಸುಧಾರಣೆಗಳಲ್ಲಿನ ಮುಖ್ಯವಾದ ಅಂಶವೆಂದರೆ ಭೂಹಿಡುವಳಿಯನ್ನು ಮಿತಿಗೊಳಿಸಿದುದು. ಹೊಸದಾಗಿ ಗಳಿಸಿದ ಭೂಮಿಯ ಮೇಲೆ ಹಾಗೂ ಅಸ್ತಿತ್ವದಲ್ಲಿರುವ ಹಿಡುವಳಿಗಳ ಮೇಲೆಯೂ ಮಿತಿಯನ್ನು ವಿಧಿಸಿತು. ಭೂ ಒಡೆಯರಿಗೆ ಸೇರಿರುವ ನಿರ್ದಿಷ್ಟ ಪಡಿಸಿದ ಮಿತಿಯನ್ನು ದಾಟಿದ ಭೂಮಿಯನ್ನು ರಾಜ್ಯಗಳು ತೆಗೆದುಕೊಂಡು ಭೂರಹಿತ ಕಾರ್ಮಿಕರಿಗೆ ಅದನ್ನು ಹಂಚಿದವು. ಭೂಮಿತಿಯ ಶಾಸನಗಳುಹೆಚ್ಚು ಅನುಕೂಲಕರವಾದ ಭೂಹಿಡುವಳಿಯ ಹಿತವಾದ ಗಾತ್ರವನ್ನು ಸೃಷ್ಟಿಸುವ ಗುರಿಯನ್ನು ಹೊಂದಿದ್ದವು. ಎರಡನೆಯ ಪಂಚವಾರ್ಷಿಕ ಯೋಜನೆಯು ಪ್ರತಿಯೊಂದು ರಾಜ್ಯವು ಕೃಷಿ ಹಿಡುವಳಿಗಳ ಮೇಲೆ ಮಿತಿಯನ್ನು ವಿಧಿಸುವ ಕ್ರಮಗಳನ್ನು ತೆಗೆದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಳ್ಳಬೇಕೆಂದು ಶಿಫಾರಸ್ಸು ಮಾಡಿತು. ಇದರಿಂದ ಪ್ರತಿಯೊಂದು ರಾಜ್ಯವು ಸ್ಥಳೀಯ ಪರಿಸ್ಥಿತಿಗಳಿಗನುಗುಣವಾಗಿ ಭೂಮಿತಿಯನ್ನು ಗೊತ್ತುಪಡಿಸಲು ಶಾಸನಗಳನ್ನು ಜಾರಿಗೆ ತರಲು ನಿರ್ಧರಿಸಿದವು. 1961–62ರ ಅವಧಿಯ ಪೇಳಿಗೆ ಎಲ್ಲಾ ರಾಜ್ಯಗಳಲ್ಲಿಯೂ ಭೂಮಿತಿಯ ಶಾಸನಗಳು ಜಾರಿಗೊಳಿಸಲ್ಪಟ್ಟವು. ಭೂಮಿತಿಯ ಮಟ್ಟವು ರಾಜ್ಯದಿಂದ ರಾಜ್ಯಕ್ಕೆ ಮತ್ತು ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳಿಗೆ ವ್ಯತ್ಯಾಸ ಹೊಂದುತ್ತದೆ. ಪಂಜಾಬ್‌ನಲ್ಲಿ ಭೂಮಿತಿಯು 27 ಎಕರೆಯಿಂದ 100 ಎಕರೆಗೆ ಗೊತ್ತುಪಡಿಸಲ್ಪಟ್ಟಿತು. ರಾಜಸ್ಥಾನದಲ್ಲಿ 22 ಎಕರೆಯಿಂದ 336 ಎಕರೆವರೆಗೆ ಮತ್ತು ಮಧ್ಯಪ್ರದೇಶದಲ್ಲಿ 25 ಎಕರೆಯಿಂದ 75 ಎಕರೆವರೆಗೆ, ಮಹಾರಾಷ್ಟ್ರದಲ್ಲಿ 18 ಎಕರೆಯಿಂದ 126 ಎಕರೆವರೆಗೆ, ಕರ್ನಾಟಕದಲ್ಲಿ 27 ಎಕರೆಯಿಂದ 276 ಎಕರೆವರೆಗೆ, ಗುಜರಾತಿನಲ್ಲಿ 19 ರಿಂದ 132 ಎಕರೆವರೆಗೆ ನಿಗದಿಪಡಿಸಲ್ಪಟ್ಟಿತು. ಆದರೆ ಕೆಲವು ಗುಂಪಿನ ರೈತರು ಅಂದರೆ ಟೀ, ಕಾಫಿ, ರಬ್ಬರ್ ಮತ್ತು ಹಣ್ಣಿನ ತೋಟ ಹೊಂದಿರುವವರು ಪಡೆದರು. ಭೂಮಿತಿಯಿಂದ ವಿನಾಯಿತಿ ಭೂ ಒಡೆಯರಿಂದ ಭೂಮಿಯನ್ನು ಕಳೆದುಕೊಂಡಿದ್ದ ಗೇಣಿದಾರರು ಆದಾಯವಿಲ್ಲದ ರೈತರು ಮತ್ತು ಭೂರಹಿತ ಕಾರ್ಮಿಕರಿಗೆ ಹೆಚ್ಚುವರಿ ಭೂಮಿಯನ್ನು ಹಂಚುವಲ್ಲಿ ಆದ್ಯತೆಯನ್ನು ಕೊಡಲಾಯಿತು.

ಆದರೆ ಭೂ ಹಿಡುವಳಿಯ ಮೇಲಿನ ಮಿತಿಯು ಹೆಚ್ಚು ವಿವಾದವನ್ನು ಸೃಷ್ಟಿ ಮಾಡಿತು ಮತ್ತು ಹೆಚ್ಚು ಪ್ರಖ್ಯಾತಿ ಪಡೆದ ಭೂಮಿತಿಯ ಮಸೂದೆಯು ಹೆಚ್ಚು ಭೂಮಿಯನ್ನು ಹೊಂದಿರುವಂತಹವರು ಭೂಮಿ ಖೋಟಾ ಮತ್ತು ವರ್ಗಾವಣೆಯನ್ನು ಮಾಡಲು ಪ್ರಾರಂಭಿಸಿದರು. ಹೀಗೆ ಭೂಮಿಯಮೇಲಿನ ಭೂಮಿತಿಯು ಉದ್ದೇಶವು ಹೆಚ್ಚು ಯಶಸ್ವಿಯಾಗಲಿಲ್ಲ.

ಸಹಕಾರಿ ಬೇಸಾಯ :

ಭಾರತದ ಭೂಸಂಧಾರಣೆಯ ಮತ್ತೊಂದು ಬಹು ಮುಖ್ಯವಾದಂತಹ ಅಂಶವೆಂದರೆ ಭಾರತದಾದ್ಯಂತ ಸಹಕಾರಿ ಬೇಸಾಯದ ಸ್ಥಾಪನೆ ಮತ್ತು ಕೃಷಿ ಕ್ಷೇತ್ರದ ಎಲ್ಲಾ ರೀತಿಯ ಸಮಸ್ಯೆಗಳಿಗೆ ಅಂತಿಮ ಪರಿಹಾರವೆಂದು ಕೊಂಡಿದ್ದ ಸಹಕಾರಿ ಗ್ರಾಮೀಣ ಆರ್ಥಿಕತೆಯನ್ನು ಸ್ಥಾಪಿಸಿದ್ದು, ಕೃಷಿಗೆ ಸಹಕಾರ ನೀಡುವ ಸೂತ್ರಗಳ ಮೇಲೆ ಸಂಘಟಿತಗೊಂಡ ರೈತರ ಸಂಘಟನೆಯೇ ಸಹಕಾರಿ ಬೇಸಾಯ. ಇದರಲ್ಲಿ ಪ್ರತಿಯೊಬ್ಬ ಸಾಗುವಳಿದಾರನು ತನ್ನ ಸ್ವಂತ ಬೇಸಾಯ ಭೂಮಿಯ ಮೇಲೆ ಹಕ್ಕನ್ನು ಉಳಿಸಿಕೊಂಡಿರುತ್ತಾನೆ, ಆದರೆ ಸಾಗುವಳಿ ಕಾಯಕವು ಒಟ್ಟಿಗೆ ನಡೆಯುತ್ತವೆ. ಈ ರೀತಿಯ ಮನೋಭಾವನೆ ಮತ್ತು ಹಂಚಿಕೊಳ್ಳುವ ಮನಸ್ಸು ಈ ಚಳುವಳಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಖ್ಯ ಸೂತ್ರ. ಸ್ವಾತಂತ್ರ್ಯಕ್ಕೆ ಬಹಳ ಹಿಂದೆಯೇ ಗಾಂಧೀಜಿಯವರು ಭಾರತದಲ್ಲಿ ಸಹಕಾರಿ ಬೇಸಾಯದ ಪ್ರಾಮುಖ್ಯತೆಯನ್ನು ಗುರುತಿಸಿದ್ದರು. ಮೊದಲನೆ ಮತ್ತು ಎರಡನೆ ಪಂಚವಾರ್ಷಿಕ ಯೋಜನೆಗಳು ಭಾರತದ ಗ್ರಾಮೀಣ ಪುನರ್ರಚನೆಯಲ್ಲಿ ಸಹಕಾರಿ ಬೇಸಾಯದ ಪಾತ್ರವನ್ನು ಪ್ರತಿಪಾದಿಸಿದವು ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಸಹಕಾರಿ ಬೇಸಾಯವನ್ನು ಅಭಿವೃದ್ಧಿಪಡಿಸಲು ವಿವರ ವಾದ ಕಾರ್ಯಕ್ರಮವನ್ನು ಹಾಕಿಕೊಂಡಿತು.

ಭಾರತೀಯ ರೈತನ ಮತ್ತು ಭಾರತದ ಆರ್ಥಿಕತೆಯ ಅಭಿವೃದ್ಧಿಗೆ ಭೂ ಸುಧಾರಣೆಗಳು ಹೆಚ್ಚು ಆವಶ್ಯಕ. ಆದರೆ ಇದು ತೆಗೆದುಕೊಂಡಂತಹ ವಿವಿಧ ಸಾಧನೆಗಳು ಮತ್ತು ಇದರ ಕಾರ್ಯ ವೈಖರಿಗಳು ಪ್ರಬಲವಾದ ನ್ಯೂನತೆಗಳನ್ನು ಹೊಂದಿದ್ದಿತು. ಸೈದ್ಧಾಂತಿಕವಾಗಿ ಶಾಸನೀಯ ಸುಧಾರಣೆಗಳು ಹೆಚ್ಚು ಪ್ರಶಂಸಾರ್ಹವಾಗಿದ್ದರೂ ಅವು ಕಾರ್ಯಗತಗೊಳಿಸಲ್ಪಟ್ಟಾಗ ಪರಿಣಾಮಕಾರಿಯಾದ ಫಲಿತಾಂಶವನ್ನೇನೂ ಮಾಡಲಿಲ್ಲ, ಗೇಣಿ ಶಾಸನದ ಜಾರಿಯಿಂದ ದೊರೆಯುತ್ತಿದ್ದಂತಹ ಹೆಚ್ಚುವರಿ ಭೂಮಿಯನ್ನು ಪುನಃ ಹಂಚುವಂತೆ ಮಾಡಲಿಲ್ಲ. ಭೂಮಿತಿಯ ಉದ್ದೇಶ ಕೂಡ ತಪ್ಪಿಸಿಕೊಂಡಿತು ಕೇವಲ ಸ್ವಲ್ಪ ಮಾತ್ರ ಹೆಚ್ಚುವರಿ ಭೂಮಿಯು ಪುನರ್ ಹಂಚಿಕೆಗೆ ಉಳಿಯಿತು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಲಿಲ್ಲ ಎಂಬುದನ್ನು ಸರಕಾರ ಸ್ಪಷ್ಟವಾಗಿ ಒಪ್ಪಿಕೊಂಡಿದೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ

ಭಾರತವು ಗ್ರಾಮಗಳ ನಾಡು. ಭಾರತದಲ್ಲಿ ಸುಮಾರು 5,75,000 ಹಳ್ಳಿಗಳಿವೆ. ಆದ್ದರಿಂದ ಭಾರತದ ಪ್ರಗತಿಯು ಗ್ರಾಮಗಳ ಅಭಿವೃದ್ಧಿಯನ್ನು ಅವಲಂಬಿಸಿದೆ. ಈ ದೃಷ್ಟಿಯಲ್ಲಿ ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಆದ್ಯತೆಯನ್ನು ಕೊಡಲಾಯಿತು. ಭಾರತದಲ್ಲಿ ಹಳ್ಳಿಗಳು ಬಡತನವನ್ನು ಎದುರಿಸುತ್ತಿವೆ. ಗ್ರಾಮೀಣ ಪುನರ್ರಚನೆಯ ಸಚಿವಾಲಯವು ರಾಷ್ಟ್ರಪತಿಯವರ ಘೋಷಣೆಯೊಂದಿಗೆ 1979ರ ಆಗಸ್ಟ್ 19ರಂದು ರಚನೆಯಾಯಿತು. ಹಾಗೂ ಇದು 1982ರ ಜನವರಿ 23ರವರೆಗೂ ಮುಂದುವರಿಯಿತು. ಪುನಃ ಇದು 1985ರ ಜನವರಿ 4ರಂದು ಗ್ರಾಮೀಣ ಅಭಿವೃದ್ಧಿಯ ಸಚಿವಾಲಯ ಎಂದು ಹೆಸರನ್ನು ಹೊಂದಿತು. 1985ರ ಜನವರಿ 4ರಂದು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವಾಲಯದಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆ ಎಂದು ಹೆಸರು ಬದಲಾವಣೆ ಮಾಡಿಕೊಂಡು ಗ್ರಾಮೀಣ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನಹರಿಸಿತು.

ಈ ಇಲಾಖೆಯ ಕಾರ್ಯಕ್ರಮದ ಮುಖ್ಯವಾದ ಉದ್ದೇಶವೆಂದರೆ ಗ್ರಾಮೀಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರದೇಶದ ಸಾಮಾಜಿಕ ಆರ್ಥಿಕ ಪೂರಕಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಗ್ರಾಮೀಣ ಬಡತನವನ್ನು ಕಡಿಮೆ ಮಾಡುವುದು ಆಗಿದ್ದಿತು. ಇದು 6ನೇ ಯೋಜನೆಯ ಮುಖ್ಯ ಗುರಿಯು ಸಹ ಆಯಿತು. ಸಣ್ಣ ಮತ್ತು ಅತಿ ಸಣ್ಣ ರೈತರ, ಭೂರಹಿತ ಕೃಷಿ ಕಾರ್ಮಿಕರನ್ನು ಮುಂತಾದವರನ್ನು ಬಡತನದಿಂದ ಪಾರುಮಾಡಲು 1985-86ರಲ್ಲಿ ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ಮುಂದುವರಿಸಿತು. ಅವುಗಳೆಂದರೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ.) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (ಎನ್.ಆರ್.ಈ.ಪಿ) ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಕಾರ್ಯಕ್ರಮ, ಬರಪೀಡಿತ ಪ್ರದೇಶಗಳ ಪರಿಹಾರ ಕಾರ್ಯಕ್ರಮ ಮರು ಭೂಮಿ ಅಭಿವೃದ್ಧಿ ಯೋಜನೆ, ಕೆಲವು ನಿಯಂತ್ರಿತ ಮಾರುಕಟ್ಟೆಗಳ ಅಭಿವೃದ್ಧಿ ಕಾರ್ಯ, ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯು ದೇಶದಲ್ಲಿನ ಎಲ್ಲಾ ಕ್ಷೇತ್ರ (ವಿಭಾಗ ಬ್ಲಾಕ್)ಗಳನ್ನು ವ್ಯಾಪಿಸುತ್ತದೆ. ಕುಟುಂಬದ ಅಭಿವೃದ್ಧಿಯು ಮೂಲ ಭೂತ ಘಟಕವಾಗಿದ್ದು ಗ್ರಾಮೀಣ ಬಡವರಿಗೆ ಈ ಕಾರ್ಯಕ್ರಮ ಮೀಸಲಾಗಿದೆ. ಸುಮಾರು ಶೇಖಡ 30 ರಷ್ಟು ಪರಿಶಿಷ್ಟ ಜಾತಿ ಮತ್ತು ವರ್ಗದ ಕುಟುಂಬಗಳು ಈ ಯೋಜನೆಯ ಸಹಾಯವನ್ನು ಪಡೆದಿವೆ ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ಕ್ಷೇತ್ರಕ್ಕೆ 3000 ಕುಟುಂಬಗಳನ್ನು ಸೇರಿಸಲಾಯಿತು. ಈ ಯೋಜನೆಯಲ್ಲಿ 15 ಮಿಲಿಯನ್ ಕುಟುಂಬಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಹಾಯ ಪಡೆಯುತ್ತಿದ್ದು ಈ ಯೋಜನೆಯ ಅಂತಿಮ ಗುರಿಯು ಅವರ ಆದಾಯ ವನ್ನು ಬಡತನದ ರೇಖೆಯ ಮೇಲೆ ಹೆಚ್ಚಿಸಿಕೊಳ್ಳಲು ಸಹಾಯ ಮಾಡುವುದಾಗಿದ್ದಿತು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ಮುಖ್ಯ ಉದ್ದೇಶವು ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸುವುದಾಗಿದ್ದಿತು. ಜೊತೆಗೆ ಕೂಲಿಯ ಒಂದು ಭಾಗವನ್ನು ಗ್ರಾಮೀಣ ಜನರಿಗೆ ಆಹಾರ ಧಾನ್ಯಗಳ ರೂಪದಲ್ಲಿ ಕೊಟ್ಟು ಗ್ರಾಮೀಣ ಜನತೆಯ ಆಹಾರದ ಪೌಷ್ಟಿಕತೆಯನ್ನು ಉತ್ತಮಪಡಿಸುವ ಗುರಿ ಯನ್ನು ಹೊಂದಿದ್ದಿತು. ಈ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಅರೆ ಉದ್ಯೋಗದ ಸಮಸ್ಯೆಯನ್ನು ಎದುರಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿತು.

ಗ್ರಾಮೀಣ ಭೂರಹಿತರಿಗೆ ಉದ್ಯೋಗ ಭರವಸೆ ಕಾರ್ಯಕ್ರಮವು ಇಡೀ ದೇಶ ವನ್ನು ವ್ಯಾಪಿಸಿದ್ದು ಇದು ಮತ್ತೊಂದು ಬಡತನದ ವಿರುದ್ಧದ ಕಾರ್ಯಕ್ರಮ ವಾಗಿದೆ. ಇದರ ಗುರಿಯು ಭೂರಹಿತ ಕಾರ್ಮಿಕರಿಗೆ ಉದ್ಯೋಗವಕಾಶಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲ್ಪಿಸುವುದಾಗಿದ್ದಿತು. ಅದರಲ್ಲೂ ವಿಶೇಷವಾಗಿ ಕೃಷಿ ಕೆಲಸ ಮುಂಗಿದು ಕೆಲಸದ ಕೊರತೆಯಿದ್ದಂತಹ ಸಂದರ್ಭದಲ್ಲಿ ಉದ್ಯೋಗ ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿತ್ತು. ಇದು ಕೊನೆಯ ಪಕ್ಷ ಪ್ರತಿಯೊಂದು ಭೂರಹಿತ ಕಾರ್ಮಿಕ ಕುಟುಂಬದ ಒಬ್ಬನಿಗಾದರೂ ಒಂದು ವರ್ಷದಲ್ಲಿ 100 ದಿನಗಳವರೆಗೆ ಉದ್ಯೋಗವನ್ನು ಒದಗಿಸುವ ಗುರಿಯನ್ನು ಹೊಂದಿದ್ದಿತು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯು ಪ್ರಾರಂಭದಲ್ಲಿ ಸಣ್ಣ ರೈತರ ಏಜೆನ್ಸಿ, ಬರಪರಿಹಾರ ಕಾರ್ಯಕ್ರಮ, ಮುಂತಾದವುಗಳಲ್ಲಿ ಸೇರಿರುತ್ತಿದ್ದಂತಹ 2300 ಕ್ಷೇತ್ರಗಳನ್ನು ನಂತರ ವಹಿಸಿಕೊಂಡಿತು. ಈ ಯೋಜನೆಯು ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಿಗೂ ವಿಸ್ತರಿಸಿ 1980 ಅಕ್ಟೋಬರ್ 2 ರಂದು ಕಾರ್ಯಾಚರಣೆಗೆ ಬಂದಿತು. ಈ ಯೋಜನೆಯು ಹೊಸ 20 ಅಂಶಗಳ ಕಾರ್ಯಕ್ರಮದ ಒಂದು ಭಾಗವಾಯಿತು.

ಬಡತನ ನಿರ್ಮೂಲನದ ಮುಖ್ಯ ಕಾರ್ಯಕ್ರಮವಾಗಿ, ಬಡತನದ ರೇಖೆಯ ಕೆಳಗೆ ಇರುವಂತಹ ಕುಟುಂಬಗಳು ತಮ್ಮ ಆದಾಯದ ಮಟ್ಟವನ್ನು ಉತ್ತಮ ಪಡಿಸಿಕೊಂಡು ಬಡತನ ರೇಖೆಯನ್ನು ದಾಟುವಂತೆ ಸಹಾಯ ಮಾಡುವ ಗುರಿಯನ್ನು ಹೊಂದಿತ್ತು. ಇದನ್ನು ಗುರುತಿಸಲ್ಪಟ್ಟ ಕೆಲವು ಕುಟುಂಬಗಳಿಗೆ ಉತ್ಪಾದನಾ ಸಂಪನ್ಮೂಲಗಳನ್ನು ಒದಗಿಸುವುದರ ಮೂಲಕ ಸಾಧಿಸುವುದಾಗಿದ್ದಿತು. ಬಂಡವಾಳದಲ್ಲಿ ಶೇ 25ರಷ್ಟನ್ನು ಬಡರೈತರಿಗೂ ಮತ್ತು ಶೇ. 33.5ರಷ್ಟನ್ನು ಅತಿ ಸಣ್ಣ ರೈತರಿಗೂ ಮತ್ತು ಭೂರಹಿತ ಕೃಷಿಕಾರ್ಮಿಕರು ಮತ್ತು ಗ್ರಾಮೀಣ ಕರಕುಶಲಗಾರರಿಗೂ ಮತ್ತು ಶೇಖಡ 50ರಷ್ಟನ್ನು ಬುಡಕಟ್ಟು ಜನಾಂಗದವರಿಗೂ ಮೀಸಲಿರಿಸಿತು. ಒಂದು ಕುಟುಂಬವು ಸಹಾಯ ಧನ ರೂಪದಲ್ಲಿ 3000 ರೂಪಾಯಿಯವರೆಗೂ ಪಡೆಯುತ್ತಿತ್ತು.

ಬರಪೀಡಿತ ಪ್ರದೇಶಗಳಿಗೆ ಸಹಾಯಧನದ ರೂಪದಲ್ಲಿ 4000 ರೂವರೆಗೂ ದೊರೆಯುತ್ತಿತ್ತು. ಬುಡಕಟ್ಟು ಕುಟುಂಬಗಳು ಸಹಾಯಧನದ ರೂಪದಲ್ಲಿ 5000 ರೂ.ಗಳವರೆಗೂ ಪಡೆಯುತ್ತಿದ್ದವು. ಚರಾಸ್ತಿಯ ವೆಚ್ಚಗಳನ್ನು ಸರಿದೂಗಿಸಲು ಸಾಲವನ್ನು ಬ್ಯಾಂಕುಗಳ ಮೂಲಕ ಕೊಡಲಾಗುತ್ತಿತ್ತು. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ರಮಕ್ಕೆ 1500 ಕೋಟಿ ರೂಪಾಯಿಗಳನ್ನು ಸಮವಾಗಿ ರಾಜ್ಯ ಮತ್ತು ಕೇಂದ್ರಸರ್ಕಾರಗಳಿಗೆ ಹಂಚಲಾಯಿತು. ಇದರ ಜೊತೆಗೆ 3000ರೂ. ಕೋಟಿ ರೂಗಳವರೆಗೂ ಹೆಚ್ಚಿಸಲಾಯಿತು. ಹೀಗೆ ಈ ಕಾರ್ಯಕ್ರಮಕ್ಕೆ ಹೂಡಿದ ಒಟ್ಟು ಬಂಡವಾಳವು ಅಂದಾಜು 4500 ಕೋಟಿ ರೂಪಾಯಿಗಳಾಗಿದ್ದಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

6ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅದು 1985ರ ಮಾರ್ಚ್ 31 ರಲ್ಲಿ ಕೊನೆಗೊಂಡಾಗ ಗುರಿಹೊಂದಿದ್ದ 15 ಮಿಲಿಯನ್ ಕುಟುಂಬಗಳಿಗೆ ವಿರುದ್ಧವಾಗಿ 16,562 ಮಿಲಿಯನ್ ಕುಟುಂಬಗಳು ಸಮಗ್ರ ಗ್ರಾಮೀಣ ಭೂಅಭಿವೃದ್ಧಿ ಯೋಜನೆ ಯಡಿಯಲ್ಲಿ ಸಹಾಯ ಪಡೆದಿದ್ದವು. ಸಹಾಯ ಪಡೆದ ಪರಿಶಿಷ್ಟ ಜಾತಿ ಮತ್ತು ವರ್ಗ ಗಳ ಕುಟುಂಬಗಳ ಸಂಖ್ಯೆ 4.5 ಮಿಲಿಯನ್‌ಗೆ ಬದಲಾಗಿ 6.453 ಮಿಲಿಯನ್ ಕುಟುಂಬಗಳು ಸಹಾಯ ಪಡೆದಿದ್ದವು. ಈ ವ್ಯವಸ್ಥೆಯ ಒಟ್ಟು ಬಂಡವಾಳ ಹೂಡಿಕೆಯು 4.76268ಕೋಟಿ ರೂಪಾಯಿಯಾಗಿದ್ದಿತು. ಇದರಲ್ಲಿ 31.0035 ಕೋಟಿ ರೂಗಳ ಬ್ಯಾಂಕುಗಳ ಸಾಲವು ಸೇರಿದ್ದಿತು.

7ನೇ ಪಂಚವಾರ್ಷಿಕ ಯೋಜನೆಯಲ್ಲಿ ಆಳವಡಿಸಿದಂತಹ ತಂತ್ರವು ಎರಡು ರೀತಿ ಯಾಗಿದ್ದಿತು. ಮೊದಲನೆಯದಾಗಿ 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಾಯ ಪಡದಂತಹ ಕುಟುಂಬಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದರ ಮೂಲಕ ಲಾಭ ಗಳನ್ನು ಏಕೀಕರಿಸುವುದು. ಎರಡನೆಯದು ಹೊಸ ಕುಟುಂಬಗಳನ್ನು ಈ ಯೋಜನೆ ಯಡಿಯಲ್ಲಿ ಸೇರಿಸಿಕೊಳ್ಳುವುದು.

ಗ್ರಾಮೀಣ ಪ್ರದೇಶಗಳಲ್ಲಿನ ಸ್ತ್ರೀ ಮತ್ತು ಮಕ್ಕಳ ಅಭಿವೃದ್ಧಿಯು ತುಲನಾತ್ಮಕ ಹೊಸ ಯೋಜನೆಯಾಗಿದ್ದು ಈ ಇಲಾಖೆಯಿಂದ ಪ್ರಾರಂಭವಾಗಿ 1982ರ ಸೆಪ್ಟೆಂಬರ್ ನಲ್ಲ ಜಾರಿಗೆ ಬಂದಿತು. ಆಯ್ಕೆಗೊಂಡ ವಿವಿಧ ರಾಜ್ಯಗಳ ಹಿಂದುಳಿದ 50 ಜಿಲ್ಲೆಗಳು ಈ ಐಆರ್‌ಡಿಪಿ ಯೋಜನೆಯ ಒಂದು ಭಾಗವಾಗಿ ಕಾರಿಯರ್ ಯೋಜನೆಯಡಿಯಲ್ಲಿ ಸೇರಿದವು. ಆದ್ದರಿಂದ ಎಲ್ಲಾ ರೀತಿಯ ವಿಶೇಷ ಪ್ರಯತ್ನಗಳನ್ನು ನಡೆಸಿ ಆವಶ್ಯಕ ವಾದ ಎಲ್ಲಾ ನೆರವುಗಳನ್ನು ನೀಡಿ ಈ ಯೋಜನೆಯು ಗ್ರಾಮೀಣ ಸ್ತ್ರೀಯರು ಪರಿಣಾಮ ಕಾರಿಯಾಗಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಲು ಹಾಗೂ ನಿರ್ದಿಷ್ಟವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಯಲ್ಲಿ ಭಾಗವಹಿಸುವಂತೆ ಮಾಡಲು ಪ್ರಯತ್ನಿಸಿತು.

ಕೃಷಿಯ ಮೇಲಿನ ರಾಷ್ಟ್ರೀಯ ಆಯೋಗದ ಶಿಫಾರಸ್ಸುಗಳ ಮೇರೆಗೆ 1975-76 ರಲ್ಲಿ ವಿಶೇಷ ಪಶುಉತ್ಪಾದನಾ ಕಾರ್ಯಕ್ರಮವು ಪ್ರಾರಂಭವಾಯಿತು.

ಈ ಕಾರ್ಯಕ್ರಮದ ಯೋಜನೆಯು 21 ರಾಜ್ಯಗಳ 183 ಜಿಲ್ಲೆಗಳಲ್ಲಿ ಮತ್ತು 4 ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಕಾರ್ಯರೂಪದಲ್ಲಿದ್ದಿತು. ಈ ಕಾರ್ಯ ಯೋಜನೆಯು ಎರಡು ಭಾಗಗಳನ್ನು ಹೊಂದಿದ್ದಿತು. ಅವುಗಳೆಂದರೆ (1) ಮಿಶ್ರತಳಿ ಹಸುಗಳನ್ನು ಬೆಳೆಸುವುದು. (2) ಕುರಿ ಕೋಳಿ ಮತ್ತು ಹಂದಿ ಸಂಗೋಪನಾ ಘಟಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳನ್ನು ಸ್ಥಾಪಿಸುವುದು (3) ಈ ಯೋಜನೆಯಲ್ಲಿ 4 ರಿಂದ 32 ತಿಂಗಳುಗಳ ವಯಸ್ಸಿನ ಮಿಶ್ರ ತಳಿಯ ಕರುಗಳನ್ನು ಬೆಳೆಸಲು 50% ದರದಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೂ ಮತ್ತು 66% ಸಹಾಯ ಧನವನ್ನು ಭೂರಹಿತ ಕೃಷಿ ಕಾರ್ಮಿಕರಿಗೂ ನೀಡಲಾಯಿತು.

ಈ ಯೋಜನೆಯಡಿಯಲ್ಲಿ ಕುರಿ. ಕೋಳಿ ಮತ್ತು ಹಂದಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ನೀಡಲ್ಪಟ್ಟ ಸಹಾಯಧನದಲ್ಲಿ ಶೇ. 25ರಷ್ಟನ್ನು ಸಣ್ಣ ರೈತರು ಮತ್ತು ಶೇ. 33.5 ಅತೀ ಸಣ್ಣ ರೈತರು ಮತ್ತು ಭೂರಹಿತ ಕೃಷಿಕಾರ್ಮಿಕರಿಗೂ ನೀಡಿದ್ದು, ಒಂದು ಕುಟುಂಬಕ್ಕೆ ನೀಡಿದ ಗರಿಷ್ಟ ಮೊತ್ತವು 3000 ರೂ ಗಳಗಿದ್ದಿತು. ಬುಡಕಟ್ಟು ಜನಾಂಗದವರಾಗಿದ್ದಲ್ಲಿ ಸಹಾಯಧನದ ದರವು ಶೇ 50 ಆಗಿದ್ದು ಗರಿಷ್ಟ 5000 ರೂ.ಗಳವರೆಗೂ ಇದ್ದಿತು.

ಈ ಕಾರ್ಯಕ್ರಮದಡಿಯಲ್ಲಿ ಸಹಾಯ ಪಡೆದಂತಹ ಕುಟುಂಬಗಳಲ್ಲಿ ಶೇ. 30ರಷ್ಟು ಪರಿಶಿಷ್ಟ ಜಾತಿ ಮತ್ತು ವರ್ಗದ ಸಮುದಾಯದವರಾಗಿದ್ದರು. ಈ ಕಾರ್ಯಕ್ರಮದ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50—50ರ ಪ್ರಮಾಣದಲ್ಲಿಯೂ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಶೇ. 100 ರಷ್ಟನ್ನು ಹಂಚಿಕೊಂಡವು.

ಗ್ರಾಮೀಣ ಯುವಕರ • ಸ್ವಯಂ ಉದ್ಯೋಗ ತರಬೇತಿ ರಾಷ್ಟ್ರೀಯ ಯೋಜನೆಯು 1979ರ ಅಗಸ್ಟ್ 15 ರಂದು ಪ್ರಾರಂಭವಾಯಿತು. ಈ ಯೋಜನೆಯ ಮುಖ್ಯ ಉದ್ದೇಶವು18–35 ವರ್ಷ ವಯೋಗುಂಪಿನ ಗ್ರಾಮೀಣ ಯುವಕರನ್ನು ಅವಶ್ಯಕ ಕುಶಲತೆ ಮತ್ತು ತಾಂತ್ರಿಕತೆಯೊಂದಿಗೆ ಸ್ವಯಂ ಉದ್ಯೋಗ ವೃತ್ತಿಗಳನ್ನು ನಡೆಸಲು ಸಹಾಯವಾಗುವಂತೆ ತರಬೇತಿಕೊಟ್ಟು ಸಹಾಯ ಮಾಡುವುದಾಗಿದ್ದಿತು.

ಈ ಯೋಜನೆಯು ಒಂದು ಕ್ಷೇತ್ರದಲ್ಲಿ ಶೇ. 40 ರಂತೆ ಒಟ್ಟು 2,00,000 ಗ್ರಾಮೀಣ ಯುವಕರನ್ನು ಪ್ರತಿವರ್ಷವೂ ತರಬೇತಿಗೊಳಿಸುವ ಗುರಿಯನ್ನು ಹೊಂದಿತ್ತು. ಈ ಯೋಜನೆಯೂ ಸಹ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಒಂದು ಭಾಗವಾಯಿತು.

ಸಹಾಯ ಪಡೆಯುವ ಕುಟುಂಬಗಳ ಆಯ್ಕೆಯು ಆದಾಯದ ನಿಯಮದ ಆಧಾರವನ್ನು ಹೊಂದಿದ್ದಿತು. ಅಂದರೆ ಒಂದು ಕುಟುಂಬದ ವಾರ್ಷಿಕ ಆದಾಯವು 3500ರೂಗಳಿಗೂ ಕಡಿಮೆ ಇರುವಂತಹ ಕುಟುಂಬಗಳನ್ನು ಆಯ್ಕೆ ಮಾಡಲಾಗುತ್ತಿತ್ತು. ಮೊದಲನೆಯ ಆದ್ಯತೆಯನ್ನು ಬಡವರಲ್ಲಿನ ಬಡವರಿಗೆ ನೀಡಲಾಯಿತು. ಮತ್ತು ಪ್ರತಿ ಆಯ್ಕೆಗೊಂಡ ಕುಟುಂಬದ ಒಬ್ಬ ಸದಸ್ಯನನ್ನು ಮಾತ್ರ ಈ ಕಾರ್ಯಕ್ರಮದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇರಿಸಿಕೊಳ್ಳಲಾಯಿತು. ಸಾಹಸದ ಉದ್ಯಮಗಳನ್ನು ನಡೆಸಲು ಸಾಮರ್ಥ್ಯ ಹೊಂದಿದ್ದಂತಹವರಿಗೂ ಆಯ್ಕೆಯಲ್ಲಿ ಪ್ರಾಶಸ್ತ್ಯ ನೀಡಲಾಯಿತು ಮತ್ತು ಆಯ್ಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು, ಮಿಲಿಟರಿ ಸೇವೆಯಿಂದ ನಿವೃತ್ತಿ ಹೊಂದಿದವರು ಮತ್ತು ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ 9 ತಿಂಗಳು ಭಾಗವಹಿಸಿದ್ದಂತಹ ವ್ಯಕ್ತಿಗಳಿಗೂ ಆದ್ಯತೆಯನ್ನು ನೀಡಲಾಯಿತು. ಹಾಗೂ ಗ್ರಾಮೀಣ ಯುವಕರ ಸ್ವಯಂ ಉದ್ಯೋಗ ತರಬೇತಿಯು ರಾಷ್ಟ್ರೀಯ ಯೋಜನೆಯಲ್ಲಿ 1 : 3ರಷ್ಟು ಮಹಿಳೆಯರನ್ನು ತರಬೇತಿಗೊಳಿಸುವ ಗುರಿಯನ್ನು ಸಹ ಹೊಂದಿದ್ದಿತು.

ತರಬೇತಿಯು ಔದ್ಯೋಗಿಕ ತಾಂತ್ರಿಕ ಸಂಸ್ಥೆಗಳಿಂದ, ತರಬೇತಿ ಹೊಂದಿ ಪಾರಂಗತರಾದವರಿಂದಲೂ, ನುರಿತ ಕರಕುಶಲಗಾರರೂ, ಪರಿಣಿತ ಕಸುಬುದಾರರಿಂದಲೂ ಮತ್ತು ಔದ್ಯೋಗಿಕ ಘಟಕಗಳಿಂದಲೂ ವಾಣಿಜ್ಯ ಮತ್ತು ವ್ಯವಹಾರ ಸಂಸ್ಥೆಗಳ ಮೂಲಕ ನಡೆಯುತ್ತಿತ್ತು.

ಈ ಯೋಜನೆಯಲ್ಲಿ ಎರಡು ರೀತಿಯ ಹಣಕಾಸಿನ ನೆರವು ದೊರೆಯುತ್ತಿತ್ತು. 1) ಅಲ್ಪಾವಧಿ ನೆರವು ಮತ್ತು 2) ದೀರ್ಘಾವಧಿ ನೆರವು.

ಅಲ್ಪಾವಧಿ ಹಣಕಾಸಿನ ನೆರವು : 6ನೇ ಪಂಚವಾರ್ಷಿಕ ಯೋಜನೆಯಲ್ಲಿ ತರಬೇತಿಯ ಪೂರಕಾಂಶಗಳನ್ನು ಬಲಯುತಗೊಳಿಸಲು ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 5 ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿತು. ಇದಕ್ಕಾಗಿ ಒಂದು ವಿಶೇಷವಾದ ಆಯವ್ಯಯದ ಅವಕಾಸವಿದ್ದಿತು, ತರಬೇತಿಯ ಪೂರಕಗಳನ್ನು ಬಲಯುತಗೊಳಿಸಲು ಭಾರತ ಸರ್ಕಾರ ಮಾತ್ರ ನೆರವು ನೀಡುತ್ತಿತ್ತು. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಈ ಬಗ್ಗೆ ವರದಿಗಳು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತಿತ್ತು. ಕೇಂದ್ರ ಸರ್ಕಾರ ಹಣದ ರೂಪದಲ್ಲಿ ನೆರವನ್ನು ನೀಡುತ್ತಿತ್ತು. ಇದು ಒಂದೇ ಸಮಯದ ಸಹಾಯಧನವಾಗಿದ್ದಿತು. ಗಿದ್ದ ಸಂಸ್ಥೆಗಳು ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗದ ವೃತ್ತಿಗೆ ತರಬೇತಿ ಕೊಡಲು ಸಮರ್ಥವಾಗಿತಮ್ಮ ತರಬೇತಿಯ ಪೂರಕಾಂಶಗಳನ್ನು ಬಲಪಡಿಸಿಕೊಳ್ಳಲು ಹಣಕಾಸಿನ ನೆರವನ್ನು ಪಡೆಯಲು ಅರ್ಹವಾಗಿರುತ್ತಿದ್ದವು.

ಕೇಂದ್ರೀಯ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಸ್ಥೆಗಳು ಭಾರತ ಸರ್ಕಾರದಿಂದ ಸಂಪೂರ್ಣ ನೆರವನ್ನು ಪಡೆಯುತ್ತಿದ್ದವು. ಇತರೆ ಎಲ್ಲಾ ಸಂಸ್ಥೆಗಳು ಸಹಾಯಧನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ 50 : 50ರ ಪ್ರಮಾಣದಲ್ಲಿ ಪಡೆಯುತ್ತಿದ್ದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಂಸ್ಥಿಕ ಸಾಲ : 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮೂಲಕ 15 ಮಿಲಿಯನ್ ಕುಟುಂಬಗಳಿಗೆ ಸಹಾಯ ಮಾಡುವ ಹೊಂದಿದ್ದ ಗುರಿಯನ್ನು ಮುಟ್ಟಲಾಯಿತು. 6ನೇ ಪಂಚ ವಾರ್ಷಿಕ ಯೋಜನೆಯು ಹಣಕಾಸಿನ ಹಂಚಿಕೆಯು 1500 ಕೋಟಿ ರೂಪಾಯಿಗಳಾಗಿದ್ದು ಒಟ್ಟು ಸಾಂಸಿ ಕ ಸಾಲವು 3000 ಕೋಟಿ ರೂಪಾಯಿಗಳಷ್ಟಾಗಿದ್ದಿತು. ಹೀಗೆ ಈ ಯೋಜನೆಯು 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡತನದ ರೇಖೆಯ ಕೆಳಗಿರುವ ಜನರಿಗೆ ಹಣಕಾಸಿನ ನೆರವನ್ನು ನೀಡಲು ಒಟ್ಟು 4500 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯನ್ನು ಮಾಡಿದ್ದಿತು.

ಗ್ರಾಮೀಣ ಪ್ರದೇಶಗಳ ಸಾಂಸ್ಥಿಕ ಹಣಕಾಸಿನ ಕ್ಷೇತ್ರದಲ್ಲಿನ ಪ್ರಮುಖ ಅಭಿವೃದ್ಧಿ ಎಂದರೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ ಸ್ಥಾಪನೆ (NABARD). ಇದು 1982ರ ಜುಲೈ 12 ರಂದು ರಿಸರ್ವ್ ಬ್ಯಾಂಕಿನ ಕೆಲವು ಕಾರ್ಯಗಳನ್ನು ವಹಿಸಿಕೊಳ್ಳುವುದರೊಂದಿಗೆ ARDCಯ ಎಲ್ಲಾ ಕಾರ್ಯಗಳನ್ನು ವಹಿಸಿಕೊಂಡಿತು. ನಬಾರ್ಡ್, ಎಆರ್‌ಡಿಸಿಗಿಂತಲೂ ವಿಶಾಲವಾದಂತಹ ಲಕ್ಷಣಗಳನ್ನು ಹೊಂದಿದೆ. ಈ ಬ್ಯಾಂಕು ಗ್ರಾಮೀಣ ಹಣಕಾಸಿನ ಅಭಿವೃದ್ಧಿಯಲ್ಲಿ ಸಮಗ್ರವಾದ ರೀತಿಯಲ್ಲಿ ಪಾತ್ರವನ್ನು ವಹಿಸುವಲ್ಲಿ ಸಮರ್ಥವಾಗಿದೆ. ಎ ಆರ್ ಡಿ ಸಿಯ ರೀತಿಯಲ್ಲಿ ರದೆ ನಬಾರ್ಡ್ ಗ್ರಾಮೀಣ ಪ್ರದೇಶಗಳಲ್ಲಿ ದ್ವಿತೀಯ ಮತ್ತು ತೃತೀಯ ವಿಭಾಗಗಳಿಗೆ ಪುನರ್ ಹಣಕಾಸು ಒದಗಿಸುತ್ತದೆ. ಇದು ಸಮಗ್ರವಾದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಹುಮುಖ್ಯವಾದ ಭಾಗವಾಗಿದೆ.

ಗ್ರಾಮೀಣ ಉದ್ಯೋಗ :

ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಮತ್ತು ಅರೆ ಉದ್ಯೋಗಗಳನ್ನು ನಿವಾರಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಬದಲಿಗೆ 1980 ರಲ್ಲಿ ಅಕ್ಟೋಬರ್‌ನಲ್ಲಿ ಪ್ರಾರಂಭವಾದ ಕೆಲಸಕ್ಕೆ ಪ್ರತಿಫಲವಾಗಿ ಆಹಾರಧಾನ್ಯ ಕಾರ್ಯಕ್ರಮ ಅಸ್ತಿತ್ವಕ್ಕೆ ಬಂದಿತು. ಇದು 1981ರ ನಂತರ ಪಂಚವಾರ್ಷಿಕ ಯೋಜನೆಯ ಒಂದು ವ್ಯವಸ್ಥಿತವಾದ ಕಾರ್ಯಕ್ರಮವಾಯಿತು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50 ; 50 ಪ್ರಮಾಣದಲ್ಲಿ ಹಂಚಿಕೊಳ್ಳುವಂತಹ ಕೇಂದ್ರೀಯ ಕಾರ್ಯಕ್ರಮವಾಯಿತು.

ಇದು ಗ್ರಾಮೀಣ ಪ್ರದೇಶಗಳಲ್ಲಿ ಮತ್ತಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಿ ಪ್ರತಿ ವರ್ಷದಲ್ಲೂ 300-400 ಮಿಲಿಯನ್ ಮಾನವ ದಿನಗಳನ್ನು ಸೃಷ್ಟಿಮಾಡುವ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಗುರಿಯನ್ನು ಹೊಂದಿತ್ತು ಅದೇ ಕಾಲದಲ್ಲಿ ಗ್ರಾಮೀಣ ಪೂರಕಾಂಶಗಳನ್ನು ಬಲಪಡಿಸಲು ಮತ್ತು ಗ್ರಾಮೀಣ ಬಡಜನರ ಆಹಾರದ ಪೌಷ್ಟಿಕಾಂಶವನ್ನು ಹೆಚ್ಚಿಸುವುದರ ಮೂಲಕ ಸಾಮುದಾಯಿಕ ಸಂಪತ್ತನ್ನು ಹೆಚ್ಚಿಸಲು ಪ್ರಯತ್ನಪಟ್ಟಿತು.

6ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮಕ್ಕೆ ಒಟ್ಟು 1620 ಕೋಟಿ ರೂಪಾಯಿಗಳನ್ನು ತೆಗೆದಿರಿಸಿತು. ಕೇಂದ್ರೀಯ ವಿಭಾಗ ಮತ್ತು ರಾಜ್ಯ ವಿಭಾಗಗಳ ಪಾಲು ಕ್ರಮವಾಗಿ 980 ಕೋಟಿ ಮತ್ತು 640 ಕೋಟಿ ರೂಗಳಾಗಿದ್ದಿತು. 1980-81ರ ಅವಧಿಯಲ್ಲಿ ಇದೇ ವೆಚ್ಚವು ಕೇಂದ್ರ ಸರ್ಕಾರದಿಂದ ಕೊಡಲ್ಪಟ್ಟಿತು. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 1834. 2 ಕೋಟಿ ರೂಗಳು ಹಣದ ರೂಪದಲ್ಲಿಯೂ ಮತ್ತು 1.71ಲಕ್ಷದಷ್ಟು ಮೆಟ್ರಿಕ್ ಟನ್ ಆಹಾರ ಪದಾರ್ಥಗಳು ವಿನಿಯೋಗಿಸಲ್ಪಟ್ಟಿತು. ಹಾಗೂ 1250.81 ಕೋಟಿ ರೂಗಳಷ್ಟು ವೆಚ್ಚವು ಕೇಂದ್ರ ವಿಭಾಗದಿಂದ 7ನೇ ಯೋಜನೆಯಲ್ಲಿ ಒದಗಿಸಲ್ಪಟ್ಟಿದೆ,

ಭೂ ಸುಧಾರಣೆಗಳ ಯಶಸ್ಸು :

ಸ್ವಾತಂತ್ರ್ಯ ನಂತರ ಕೈಗೊಂಡ ಭೂಸುಧಾರಣೆಗಳ ಮುಖ್ಯ ಯಶಸ್ಸು ಉದ್ದೇಶವೆಂದರೆ ಕೃಷಿಯ ಆಧುನೀಕರಣದ ಹಾದಿಯಲ್ಲಿ ಮತ್ತು ಹೆಚ್ಚು ಸಮಾನ ಸಾಮಾಜಿಕ ರಚನೆಯಲ್ಲಿ ಸಾಂಸ್ಥಿಕ ಮತ್ತು ಚಲನೆಗೆ ಅಡ್ಡಿಯಾಗಿರುವಂತಹವುಗಳನ್ನು ನಿರ್ಮೂಲನ ಮಾಡುವುದಾಗಿದ್ದಿತು. ಈ ಗುರಿಯನ್ನು ಮುಟ್ಟುವ ಕೆಲವು ಪ್ರಮುಖ ಭೂಸುಧಾರಣಾ ಸಾಧನಗಳನ್ನು ಕಾರ್ಯಗತಗೊಳಿಸಿತು.

ಅ) ಗೇಣಿಯ ಮಧ್ಯವರ್ತಿಗಳ ನಿರ್ಮೂಲನೆ
ಆ) ಗೇಣಿದಾರರಿಗೆ ಭೂಮಾಲೀಕತ್ವದ ಹಕ್ಕನ್ನು ದೊರಕಿಸುವ ಅಂತಿಮ ಗುರಿಯೊಂದಿಗೆ ಗೇಣಿದಾರರಿಗೆ ರಕ್ಷಣೆಯನ್ನು ದೊರಕಿಸಿಕೊಡುವುದು.
ಇ) ಕೃಷಿ ಹಿಡುವಳಿಗಳ ಭೂಮಿತಿಯನ್ನು ಹೇರುವುದು ಮತ್ತು ಹೆಚ್ಚುವರಿ ಭೂಮಿಯನ್ನು ಭೂರಹಿತ ಕೃಷಿ ಕೆಲಸಗಾರರಿಗೆ ಹಾಗೂ ಸಣ್ಣ ಹಿಡುವಳಿದಾರರಿಗೆ ಹಂಚುವುದು.
ಈ) ಭೂ ದಾಖಲೆಗಳನ್ನು ತಯಾರುಮಾಡಿ ಕಾಪಾಡಿಕೊಂಡು ಬರುವುದು,
ಉ) ಭೂಹಿಡುವಳಿಗಳನ್ನು ಏಕೀಕರಿಸುವುದು.

ಇವುಗಳನ್ನು ನಿರ್ವಹಿಸಲು ಶಾಸನಗಳು ಇಡೀ ದೇಶದಲ್ಲಿ 1950ರಿಂದ ಇಲ್ಲಿಯವರೆಗೂ ಜಾರಿಗೊಳಿಸಲ್ಪಟ್ಟವು. ಜಮೀನ್ದಾರರು, ಜಾಗೀರ್. ಇನಾಮುದಾರರು ಮುಂತಾದ ಗೇಣಿ ಮಧ್ಯವರ್ತಿಗಳನ್ನು ನಿರ್ಮೂಲನ ಮಾಡಲಾಯಿತು. ಇವುಗಳ ಪರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಣಾಮವಾಗಿ 20 ಮಿಲಿಯನ್‌ಗಿಂತಲೂ ಹೆಚ್ಚು ಗೇಣಿದಾರರು ರಾಜ್ಯದೊಡನೆ ನೇರ ಸಂಪರ್ಕವನ್ನು ಪಡೆಯುವಂತಾದರು. ಇದರ ಜೊತೆಗೆ ಪಾಳು ಮತ್ತು ಇತರೆ ವರ್ಗದ ಸರ್ಕಾರಿ ಭೂಮಿಯನ್ನು ಅಂದರೆ ಸುಮಾರು 20 ಎಕರೆ ಮಿಲಿಯನ್ನಷ್ಟನ್ನು ಭೂರಹಿತ ರಿಗೂ ಮತ್ತು ಅತೀ ಸಣ್ಣ ಹಿಡುವಳಿಗಾರರಿಗೂ ಹಂಚಲಾಯಿತು.

ಶಾಸನೀಯ ಅವಕಾಶಗಳಿಂದಾಗಿ ದೇಶದ ಹೆಚ್ಚು ಪ್ರದೇಶಗಳಲ್ಲಿ ಗೇಣಿದಾರರಿಗೆ ಭೂಮಾಲೀಕತ್ವದ ಹಕ್ಕನ್ನು ಖಚಿತ ಪಡಿಸಲು ಅಥವಾ ಸಾಗುವಳಿ ಮಾಡುತ್ತಿರುವ ಗೇಣಿದಾರರು ಭೂ ಒಡೆಯರಿಗೆ ನ್ಯಾಯಯುತವಾದ ಪರಿಹಾರವನ್ನು ಪಾವತಿಸಿ ತಾವು ಸಾಗುವಳಿ ಮಾಡುತ್ತಿದ್ದಂತಹ ಭೂಮಿಯನ್ನು ವಶಪಡಿಸಿಕೊಳ್ಳುವ ಮಾಲೀಕತ್ವದ ಹಕ್ಕುಗಳನ್ನು ನೀಡಲಾಯಿತು. ಕೆಲವು ರಾಜ್ಯಗಳು ಭೂ ಒಡೆಯರಿಂದ ಮಾಲೀಕತ್ವವನ್ನು ವಶಪಡಿಸಿಕೊಂಡು ಯಾರು ನಿರ್ಧಿಷ್ಟವಾದಂತಹ ಪರಿಹಾರವನ್ನು ರಾಜ್ಯಕ್ಕೆ ಕೊಡು ತ್ತಾರೋ ಅಂತಹವರಿಗೆ ಮಾಲೀಕತ್ವವನ್ನು ವರ್ಗಾವಣೆ ಮಾಡಿತು.

ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಗೇಣಿದಾರರಿಗೆ ಭೂಮಾಲೀಕತ್ವದ ಹಕ್ಕು ಗಳನ್ನು ದೊರಕಿಸಿದಂತಹ ರಾಜ್ಯಗಳೆಂದರೆ ಆಂಧ್ರಪ್ರದೇಶ (ತೆಲಂಗಾಣ ಪ್ರದೇಶ), ಮಹಾರಾಷ್ಟ್ರ, ಮಣಿಪುರ, ಒರಿಸ್ಸಾ, ರಾಜಸ್ಥಾನ, ತ್ರಿಪುರ, ಉತ್ತರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಕೇರಳ ಮತ್ತು ಮಧ್ಯಪ್ರದೇಶ. ಇದರ ಪರಿ ಣಾಮವಾಗಿ ಒಟ್ಟು 8 ಮಿಲಿಯನ್ ಗೇಣಿದಾರರು 7.2ಮಿಲಿಯನ್ ಹೆಕ್ಟೇರ್ ಭೂಮಿಯ ಮಾಲೀಕತ್ವವನ್ನು ಹೊಂದಿದರು.

ಕ್ಷಾಮಪೀಡಿತ ಪ್ರದೇಶಗಳ ಅಭಿವೃದ್ಧಿ ಯೋಜನೆ :

ದೇಶದ ಕೆಲವು ಭಾಗಗಳಲ್ಲಿ ಕ್ಷಾಮವು ಮರುಕಳಿಸುವ ಪ್ರವೃತ್ತಿಯನ್ನು ಹೊಂದಿದೆ. ಈ ಪ್ರದೇಶಗಳು ನೈಸರ್ಗಿಕ ಸಂಪನ್ಮೂಲಗಳ ಕೊರತೆಯನ್ನು ಹೊಂದಿವೆ, ಅವುಗಳ ಆರ್ಥಿಕತೆಯು ಇತಿಹಾಸದುದ್ದಕ್ಕೂ ಜಡವಾಗಿದ್ದು ಇನ್ನೂ ಕೂಡ ಕೊರತೆ ಯನ್ನು ಅನುಭವಿಸುತ್ತಿವೆ. ಕ್ಷಾಮ ಪರಿಹಾರ ಮಾಡಿ ಸ್ಥಳೀಯ ಜನರನ್ನು ಹಸಿವಿ ನಿಂದ ರಕ್ಷಿಸಲು ಹೆಚ್ಚು ವೆಚ್ಚ ಮಾಡಲಾಗಿದೆ. ನಿರಂತರವಾಗಿ ಕ್ಷಾಮಕ್ಕೆ ಒಳಗಾಗುವಂತಹ ಪ್ರದೇಶಗಳ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಆ ಪ್ರದೇಶದಲ್ಲಿ ವಾಸಿಸುವಂತಹವರಿಗೆ ರಕ್ಷಣೆಯನ್ನು ನೀಡಲು ಸರ್ಕಾರವು ಪ್ರಯತ್ನಿಸುತ್ತಲೇ ಬಂದಿದೆ. ಬರವನ್ನು ತಡೆಯಲು ಸಾಧ್ಯವಾಗದಿದ್ದರೂ ಅದರ ಪರಿಣಾಮವನ್ನು ಕಡಿಮೆಗೊಳಿಸುವ ವಿವಿಧ ಯೋಜನೆಗಳ ಮೂಲಕ ಪ್ರಯತ್ನಗಳನ್ನು ಮಾಡಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ –12

ರೈತ ಹೋರಾಟಗಳು

ಭಾರತ ಹಳ್ಳಿಗಳ ನಾಡು. ಹಳ್ಳಿಗಳಲ್ಲಿನ ಮುಖ್ಯ ಉದ್ಯೋಗ ಬೇಸಾಯ, ಬೇಸಾಯಕ್ಕೆ ಹೊಂದಿಕೊಂಡಂತೆ ಅನೇಕ ಕಸುಬುಗಳಿವೆ. ಇಂತಹ ಕಸುಬನ್ನು ಅವಲಂಬಿಸಿರುವವರು ಸಂಖ್ಯೆಯು ಅಧಿಕವಾಗಿದೆ. ಜೊತೆಗೆ ಭೂರಹಿತರಾಗಿ ಕೃಷಿ ಕೆಲಸ ಮಾಡುವವರು ಸಹ ಗಣನೀಯ ಪ್ರಮಾಣದಲ್ಲಿದ್ದಾರೆ. ಹೀಗೆ ಬೇಸಾಯಗಾರರು, ಗ್ರಾಮೀಣ ಕಸುಬುದಾರರು ಹಾಗೂ ಬೇಸಾಯ ಕೂಲಿಗಾರರು ಈ ಮೂರು ವರ್ಗಗಳ ಜನರನ್ನು ಒಂದುಗೂಡಿಸಿ ರೈತರು ಎಂಬುದಾಗಿ ಸಾಮಾನ್ಯವಾಗಿ ಕರೆಯುತ್ತಾರೆ.

ಗ್ರಾಮಗಳಲ್ಲಿ ಯಥೇಚ್ಛವಾಗಿ ಭೂಮಿಯನ್ನು ಹೊಂದಿದ್ದು ತಾವು ದುಡಿಮೆ ಮಾಡದೆ ಕೂಲಿಯಾಳುಗಳ ಸಹಾಯದಿಂದ ಕೃಷಿ ಕೆಲಸ ಮಾಡಿಸಿ ವಾಣಿಜ್ಯ ಬೆಳೆ ತೆಗೆಯುವ ಶ್ರೀಮಂತ ರೈತರೂ ಸಹ ಇದ್ದಾರೆ. ಇವರನ್ನು ರೈತರು ಎನ್ನಬಹುದೆ ಎಂಬುದರ ಬಗ್ಗೆ ಗೊಂದಲವಿದೆ. ಹಾಗೆಯೇ ಭೂಮಿಯ ಕಂದಾಯ, ಗೇಣಿ, ಬಾಡಿಗೆಗಳನ್ನು ಪಡೆಯುವ ಭೂ ಮಾಲೀಕರು ಸಹ ರೈತರಲ್ಲ. ರೈತರು ಬೆಳೆದ ಬೆಳೆಯನ್ನು ಮಂಡಿಗಳಿಗೆ ಮಾರಿ ಜೀವಿಸುವವರು ಅಥವಾ ಕಾರ್ಖಾನೆ ನಡೆಸುವವರು ಸಹ ರೈತರಲ್ಲ. ಗ್ರಾಮದಲ್ಲಿರುವ ಇನ್ನೊಂದು ವರ್ಗ ಕೃಷಿ ಮಾಡದೆ ಬಂಡವಾಳ ಹೂಡಿ ವಾಣಿಜ್ಯ ಬೆಳೆ ತೆಗೆಯುತ್ತಾರೆ. ಇವರು ಸಹ ರೈತ ವರ್ಗದ ಗುಂಪಿಗೆ ಸೇರುವುದಿಲ್ಲ ಇವರನ್ನು ಮಾರ್ಕ್ಸ್ಸರ ಶಬ್ದಗಳಲ್ಲಿ 'ಬೂರ್ಜ್ವಾ' ಎಂದು ಕರೆಯಬಹುದು.

ಒಟ್ಟಿನಲ್ಲಿ ರೈತರೆಂದರೆ ತೀರ ಸಂಕುಚಿತ ಅರ್ಥದಲ್ಲಿ ತಾವೇ ಪ್ರತ್ಯಕ್ಷವಾಗಿ ಬೇಸಾಯದಲ್ಲಿ ತೊಡಗಿರುವವರು, ಚಿಕ್ಕ ಹಿಡುವಳಿದಾರರು, ಗೇಣಿರೈತರೂ, ತಮ್ಮ ಬೆಳೆಯಲ್ಲಿ ಪಾಲು ಕೊಡುವ ಕೋರಪಾಲು ರೈತರೂ, ಸ್ವಲ್ಪ ಭೂಮಿಯನ್ನು ತಾವು ಉಳುಮೆ ಮಾಡಿ ಉಳಿದುದನ್ನು ಲಾವಣಿ ಮಾಡಿಸುವ ಮಧ್ಯಮ ರೈತರೂ ಸೇರಿರುತ್ತಾರೆ. ಅವರು ದೊಡ್ಡ ಬಂಡವಾಳ ಹೂಡುವುದಿಲ್ಲ ಮತ್ತು ತಾಂತ್ರಿಕ ಜ್ಞಾನ ಬಳಸುವುದಿಲ್ಲ. ರೈತರ ವರ್ಗದ ಪರಿಕಲ್ಪನೆಯನ್ನು ಸ್ವಲ್ಪ ವಿಶಾಲಿಸಿದರೆ ಗ್ರಾಮೀಣ ಕಸುಬುದಾರರನ್ನು ಈ ವರ್ಗದಲ್ಲಿ ಸೇರಿಸಬಹುದು ಹಾಗೆಯೇ ಮತ್ತಷ್ಟು ವಿಶಾಲಾರ್ಥದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೃಷಿ ಕೂಲಿ ಮಾಡುವ ಜನರನ್ನೂ ಈ ವರ್ಗದಲ್ಲಿ ಸೇರಿಸಬಹುದು.

ಬಡರೈತರು ಗ್ರಾಮೀಣ ಜಮೀನ್ದಾರರ ಹಾಗೂ ಬಡ್ಡಿ ವ್ಯವಹಾರ ಮಾಡುವ ಸಾಹುಕಾರರ ಕೃಪಾ ಛತ್ರದಲ್ಲಿ ಇರುತ್ತಿದ್ದರು. ಅದೇ ರೀತಿಯಲ್ಲಿ ನಗರದಲ್ಲಿ ವಾಸ ಮಾಡುವ ಭೂಮಾಲೀಕರನ್ನು ಸರಕಾರಿ ಅಧಿಕಾರಿಗಳನ್ನು ಆಶ್ರಯಿಸಿಕೊಂಡಿರಬೇಕಾಗು ತ್ತಿತ್ತು. ಒಟ್ಟಿನಲ್ಲಿ ರೈತರು ಗ್ರಾಮೀಣ ಜಮೀನ್ದಾರರ, ಸಾಹುಕಾರರ, ಮಧ್ಯವರ್ತಿಗಳ ಮತ್ತು ಸರಕಾರಿ ಅಧಿಕಾರಿಗಳ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಾ ಬಂದಿದ್ದಾರೆ. ಇಂತಹ ಶೋಷಣೆಯ ವಿರುದ್ಧ ರೈತರು ಸಂಘಟಿತರಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಕೆಲವು ರೈತ ಬಂಡಾಯಗಳೂ ಕ್ರಾಂತಿಯ ಪ್ರಯತ್ನಗಳೂ ನಡೆದು ಅವುಗಳಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಸೋವಿಯತ್ ರಷ್ಯಾ, ಕಮ್ಯುನಿಸ್ಟ್ ಚೀನಾ, ಕ್ಯೂಬಾ, ಮೆಕ್ಸಿಕೋ, ಅಲ್ಜೀರಿಯಾ ವಿಯೆಟ್ನಾಂ ಮುಂತಾದ ಕ್ರಾಂತಿಗಳು ಇದಕ್ಕೆ ನಿದರ್ಶನವಾಗಿದೆ. ಉಳಿದೆಡೆ ನಡೆದ, ಹೋರಾಟಗಳನ್ನು ರೈತರ ಬಂಡಾಯ, ದಂಗೆ ಮುಷ್ಕರ, ಸತ್ಯಾಗ್ರಹ ಇತ್ಯಾದಿ ಹೆಸರುಗಳಿಂದ ಕರೆಯಬಹುದು. ಕ್ರಾಂತಿ, ಬಂಡಾಯ ಮತ್ತು ದಂಗೆ ಇವುಗಳು ಒಂದಕ್ಕೊಂದು ಭಿನ್ನವಾಗಿವೆ.

ಕ್ರಾಂತಿಯಿಂದ ಒಂದು ವ್ಯವಸ್ಥೆಯ ಶೀಘ್ರ ಬದಲಾವಣೆ ಎಂದು ಹೇಳಬಹುದು. ಕ್ರಾಂತಿಯ ಪರಿಣಾಮವಾಗಿ ಸಾಮಾಜಿಕ ರಚನೆಯಲ್ಲಿ ಮಹತ್ತರವಾದಂತಹ ಬದಲಾವಣೆಯುಂಟಾಗುತ್ತದ. ಕ್ರಾಂತಿಯಿಂದುಂಟಾಗುವ ಬದಲಾವಣೆಗಳು ಶಾಂತಿಯಿಂದ ಒಗ್ಗಿಸಿಕೊಳ್ಳುವಷ್ಟು ಸುಲಭವಾಗಿರುವುದಿಲ್ಲ. ರಷ್ಯಾದಲ್ಲಿ ಝಾರ್ ಕಾಲದ ಊಳಿಗ ಮಾನ್ಯ ಪದ್ಧತಿಯಿಂದ ರೋಸಿ ಹೋದ ಜನರು ನಡೆಸಿದ ಹೋರಾಟ ಕ್ರಾಂತಿಕಾರಕವಾದುದು, ಹಾಗೆಯೇ ಮಾವೋ ನೇತೃತ್ವದಲ್ಲಿ ಚೀನಾದಲ್ಲಿ ನಡೆದ ಹೋರಾಟವು ಸಹಾ ಮಹತ್ತರವಾದ ಬದಲಾವಣೆಯನ್ನು ತಂದಿತು. ಹೀಗೆ ಹೋರಾಟವು ಬದಲಾವಣೆಯ ಉದ್ದೇಶವನ್ನು ಹೊಂದಿರುತ್ತದೆ. ಈ ಬದಲಾವಣೆಯನ್ನು ತರಲು ಅನುಸರಿಸುವ ಮಾರ್ಗವು ಶಾಂತಿಯುತವಾಗಿರಬಹುದು ಇಲ್ಲವೇ ಹಿಂಸೆ ಮತ್ತು ರಕ್ತಪಾತದಿಂದ ಕೂಡಿರಬಹುದು. ಕ್ರಾಂತಿಯು ತುಂಬಾ ವ್ಯಾಪಕವಾಗಿರುತ್ತದೆ ಹಾಗೂ ಕ್ರಾಂತಿಗಳಿಗೆ ವೈಚಾರಿಕ ಅಥವಾ ಸೈದ್ಧಾಂತಿಕ ಹಿನ್ನೆಲೆ ಇರುತ್ತದೆ.

ದಂಗೆ ಮತ್ತು ಬಂಡಾಯಗಳು ಕ್ರಾಂತಿಯಿಂದ ಸ್ವಲ್ಪ ಭಿನ್ನವಾಗಿವೆ. ಇವುಗಳಿಗೆ ಸ್ವಲ್ಪ ಪ್ರೇರಣೆ ಮಾತ್ರ ಸಾಕು, ಇವುಗಳಲ್ಲಿ ಜನರು ತಮಗಾಗುವ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಾರೆ. ಈ ಪ್ರತಿಭಟನೆಯು ಮಂತ ಪ್ರದರ್ಶನ, ಬಹಿಷ್ಕಾರ, ಲೂಟಿ, ಕೊಳ್ಳೆ, ಹಿಂಸಾಚಾರಗಳನ್ನು ಒಳಗೊಂಡಿರುತ್ತದೆ. ದಂಗೆ, ಬಂಡಾಯಗಳಿಗೆ ಸೈದ್ಧಾಂತಿಕ ನಿಲುವು ಇರುವುದಿಲ್ಲ. ಪ್ರತೀಕಾರ ಮಾಡುವುದೇ ದಂಗೆಕಾರರ ಗುರಿಯಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಾಂತಿಯಲ್ಲಿ ಇಡೀ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆ ಕಂಡುಬಂದರೆ, ದಂಗೆ ಬಂಡಾಯಗಳು ಉಂಟಾದ ಪ್ರದೇಶಗಳಲ್ಲಿ ಸ್ಥಳೀಯ ಬದಲಾವಣೆಗಳುಂಟಾಗಿ ಉಳಿದಂತೆ ಯಥಾಸ್ಥಿತಿ ಇರುತ್ತದೆ. ಇವುಗಳು ಕ್ಷಿಪ್ರವಾಗಿ ಸಂಭವಿಸಿದರೂ, ಹಿಂಸೆ ಮತ್ತು ಬಲಪ್ರಯೋಗಗಳನ್ನು ಅನುಸರಿಸಿದರೂ ವ್ಯಾಪ್ತಿ ಮತ್ತು ಪರಿಣಾಮಗಳು ಸೀಮಿತವಾಗಿರುತ್ತವೆ. ನಮ್ಮ ದೇಶದಲ್ಲಿ ಕಂಡುಬರುತ್ತಿರುವ ರೈತ ಹೋರಾಟಗಳು ಸಹ ಕ್ರಾಂತಿಯಾಗಿರದೆ ಕೇವಲ ದಂಗೆ ಮತ್ತು ಬಂಡಾಯಗಳಾಗಿವೆ. ಇವುಗಳಿಗೆ ಸೈದ್ಧಾಂತಿಕತೆಯೇ ಇಲ್ಲವೆಂದು ಹೇಳಬಹುದು. ಭಾರತದಲ್ಲಿ ನಡೆದಿರುವಂತಹ ಬಂಗಾಲದ ನೀಲಿ ಬೆಳೆಗಾರರು ಸಂತಾಲ ಆದಿವಾಸಿಗಳು ಅಥವಾ ಡೆಕ್ಕನ್ ಪ್ರದೇಶದ ರೈತರು ನಡೆಸಿದ ಹೋರಾಟಗಳು ಕ್ರಾಂತಿಗಳಾಗಿರದೆ ದಂಗೆ ಅಥವಾ ಬಂಡಾಯಗಳಾಗಿವೆ.

ಹೀಗೆ ನ್ಯಾಯಕ್ಕಾಗಿ ಶೋಷಿತ ರೈತರು ನಡೆಸುವ ಹೋರಾಟಗಳು ರೈತ ಹೋರಾಟಗಳಾಗಿವೆ. ಬದಲಾವಣೆಯೇ ಈ ಹೋರಾಟದ ಗುರಿಯಾಗಿರುತ್ತದೆ. ಬದಲಾವಣೆಯ ಗುರಿಯನ್ನು ಹೊಂದಿ ಇಡೀ ಸಾಮಾಜಿಕ ರಚನೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತರುವಂತಹ ಹೋರಾಟಗಳನ್ನು ಕ್ರಾಂತಿಗಳೆಂದರೆ ಕೇವಲ ಸೀಮಿತ ಬದಲಾವಣೆಯನ್ನು ತರುವಂತಹ ರೈತರ ಹೋರಾಟಗಳನ್ನು ದಂಗೆ ಮತ್ತು ಬಂಡಾಯಗಳೆನ್ನಬಹುದು.

ರೈತರು ಔದ್ಯೋಗಿಕ ಕಾರ್ಮಿಕರಂತೆ ಕ್ರಾಂತಿಕಾರರಲ್ಲ, ಅವರು ಶಾಂತಿಪ್ರಿಯರು, ಅವರು ಹೆಚ್ಚೆಂದರೆ ಚಿಕ್ಕಪುಟ್ಟ ಪ್ರದರ್ಶನ ನಡೆಸಿ ಸುಮ್ಮನಾಗುವರು ಎಂಬ ಅಭಿಪ್ರಾಯವು ಪ್ರಾರಂಭದಲ್ಲಿತ್ತು. ಮಾರ್ಕ್ಸ್ ರೈತರು ಕ್ರಾಂತಿಗೆ ಅರ್ಹರೆಂದು ನಂಬಿದ್ದರೂ ಫ್ರೆಂಚ್ ಕ್ರಾಂತಿಯ ನಂತರ ಸಂಶಯ ಭಾವನೆಯನ್ನು ಹೊಂದಿದ, ಹಾಗೂ ಅನೇಕ ಸಮತಾವಾದಿಗಳು ಸಹ ರೈತರು ಕ್ರಾಂತಿಗೆ ಯೋಗ್ಯರಲ್ಲರೆಂದು ನಂಬಿದ್ದರು. ಲೆನಿನ್ ಮತ್ತು ಮಾವೋರವರ ನೇತೃತ್ವದಲ್ಲಿ ನಡೆದಂತಹ ಕ್ರಾಂತಿಗಳ ನಂತರ ಈ ಭಾವನೆ ಬದಲಾವಣೆಗೊಂಡಿತು. ಚೀಣಾ, ಸೋವಿಯತ್ ರಷ್ಯಾ, ಆಲ್ಜೀರಿಯಾ, ಕ್ಯೂಬಾ, ವಿಯಟ್ನಾಂ, ಕಂಪೂಚಿಯಾ ಮುಂತಾದ ದೇಶಗಳಲ್ಲಿನ ದೊಡ್ಡ ಕ್ರಾಂತಿಗಳಾಗಿವೆ, ಇದರಿಂದ ರೈತರು ಕ್ರಾಂತಿಕಾರರು ಎಂದು ಹೇಳಬಹುದು.

ಹಾಗೆಯೇ ಭಾರತೀಯ ರೈತರೂ ಕ್ರಾಂತಿಗೆ ಅರ್ಹರೆ ಎಂಬ ಪ್ರಶ್ನೆಯು ಉದ್ಭವಿಸಿ ಅನೇಕ ವಾದ ವಿವಾದಗಳಾಗಿವೆ. ಭಾರತೀಯ ರೈತರೂ ಸಹಾ ಭೂ ಮಾಲೀಕರನ್ನು ಅವಲಂಬಿಸಿರುವವರು ಮತ್ತು ಸಂಪ್ರದಾಯಶೀಲರು. ಮೂಢಮತಿಗಳು ಆದಿರುವುದರಿಂದ ಅವರು ಕ್ರಾಂತಿಗೆ ಅರ್ಹರಲ್ಲವೆಂದು ವಾದವಿದೆ. ಭಾರತೀಯ ಪರಿಸ್ಥಿತಿ ಗಮನಿಸಿದಾಗ ಇದರಲ್ಲಿ ಒಂದಿಷ್ಟು ಸತ್ಯಾಂಶವಿದೆ ಎಂದು ಹೇಳಬಹುದು. ಭಾರತದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೈತ ಚಳುವಳಿಯು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡು ಬಂದ ಹಾಗೆ ಹೆಚ್ಚು ಕ್ರಾಂತಿ ಕಾರಕವಾಗಿರದಿದ್ದರೂ ದಂಗೆ ಬಂಡಾಯಗಳ ರೂಪವನ್ನು ತಾಳಿದ್ದು ರೈತರು ಅನ್ಯಾಯದ ವಿರುದ್ಧ ಹೋರಾಡುತ್ತಾ ಬಂದಿದ್ದಾರೆ ಎಂದು ಹೇಳಬಹುದು.

ರೈತ ಹೋರಾಟಗಳ ಐತಿಹಾಸಿಕ ನೋಟ :

ಭಾರತದ ಇತಿಹಾಸದುದ್ದಕ್ಕೂ ರೈತ ಹೋರಾಟಗಳು ನಡೆದಿರುವುದನ್ನು ಕಾಣಬಹುದು. ಆದರೂ ಪರಿಣಾಮಕಾರಿಯಾಗಿ ನಡೆದಂತಹ ರೈತ ಹೋರಾಟಗಳನ್ನು ಮೊಘಲರ ಕೊನೆಯ ದಿನಗಳಿಂದ ಗುರುತಿಸಬಹುದು. ಈ ಅವಧಿಯಲ್ಲಿ ಸುಮಾರು 77 ರೈತ ಹೋರಾಟಗಳು ನಡೆದಿವೆ ಎಂಬುದಾಗಿ ಕ್ಯಾಥಲೀನ್ ಗಾಫ್ ಹೇಳಿರುವುದನ್ನು ಸ್ಮರಿಸಬಹುದು. ಭಾರತೀಯ ರೈತರು ಚೀಣಾ ಮತ್ತು ಸೋವಿಯತ್ ರಷ್ಯಾದಲ್ಲಿ ರೈತರು ನಡೆಸಿದಂತಹ ರೀತಿಯಲ್ಲಿ ಚಳುವಳಿಯನ್ನು ನಡೆಸದಿದ್ದರೂ ಅವರಿಗೆ ಅಂತಹ ಚಳುವಳಿಯನ್ನು ನಡೆಸುವುದು ಅಸಾಧ್ಯವೆಂದು ಮಾತ್ರ ಹೇಳಲಾಗುವುದಿಲ್ಲ. ಕಳೆದ ಸುಮಾರು 200 ವರ್ಷಗಳಿಂದಲೂ ದೇಶದ ವಿವಿಧ ಭಾಗಗಳಲ್ಲಿ ರೈತ ಹೋರಾಟ ನಡೆದಿರುವುದು ವಾಸ್ತವ ಸಂಗತಿ. ಈ ದಿಸೆಯಲ್ಲಿ ಕೆಲವು ಭಾಗಗಳು ಪ್ರಮುಖ ಪಾತ್ರ ವಹಿಸಿವೆ. ರೈತರ ಹೋರಾಟಗಳನ್ನು ನಡೆಸಿದಂತಹ ಪ್ರಮುಖ ಪ್ರದೇಶಗಳಲ್ಲಿ ಬಂಗಾಳವು ಮೊದಲನೆಯ ಸ್ಥಾನವನ್ನು ಪಡೆಯುತ್ತದೆ. ಹಿಂದೆಯೂ ಸಹ ಬಂಗಾಳ ರೈತ ಹೋರಾಟದ ಕೇಂದ್ರವಾಗಿದ್ದಿತು, ಮೈಮೇನ್‌ಸಿಂಗ್, ದೀನಾಜಪುರ, ರಂಗಪೂರ್, ಪಾಟ್ನಾ ಜಿಲ್ಲೆಗಳಲ್ಲಿ ಪರಿಣಾಮಕಾರಿಯಾದ ರೈತ ಹೋರಾಟಗಳು ನಡೆದಿವೆ.

ಬ್ರಿಟೀಷರ ಕಾಲವನ್ನು ರೈತ ದಂಗೆಗಳ ಸುಗ್ಗಿ ಎಂದು ಕರೆಯಬಹುದು, ಬ್ರಿಟೀಷರ ಆಳ್ವಿಕೆಯಲ್ಲಿ ಕೆಲವೊಂದು ದಂಗೆಗಳು ಬ್ರಿಟೀಷ್ ಆಧಿಪತ್ಯದ ವಿರುದ್ಧ ಅಥವಾ ಕೆಲವು ವಿಶಿಷ್ಟ ಅಧಿಕಾರಗಳ ವಿರುದ್ಧ ನಡೆದಿರಬಹುದಾದರೂ ಅವುಗಳನ್ನು ಸ್ಥೂಲವಾಗಿ ಶೋಷಿತರು ಶೋಷಕರ ವಿರುದ್ಧ ನಡೆಸಿದ ದಂಗೆಗಳೆಂದು ವರ್ಣಿಸಬಹುದು. ಹಾಗೂ ಅನೇಕ ದಂಗೆಗಳು ಸರಕಾರದ ವಿರುದ್ಧ ಇರದೆ ಜಮೀನ್ದಾರರ, ಕಂದಾಯ ವಸೂಲಿ ಅಧಿಕಾರಿಗಳ, ಬಡ್ಡಿಕೋರರ ಅಥವಾ ವ್ಯಾಪಾರಿಗಳ ವಿರುದ್ಧ ನಡೆದಿದ್ದವು. ಒಟ್ಟಿನಲ್ಲಿ ಬ್ರಿಟೀಷರ ಕಾಲದಲ್ಲಿ ಹೋರಾಟಗಳು ಹೆಚ್ಚಾಗಲು ಕಾರಣಗಳು ಅನೇಕ ಬ್ರಿಟೀಷರು ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿ ವ್ಯಾಪಾರದ ಮೂಲಕ ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದರು ಹಾಗೂ ಕೃಷಿಕರ ಮೇಲೆ ವಿಪರೀತ ತೆರಿಗೆ ಹೇರಿದರು. ಇಂಗ್ಲೆಂಡಿನ ರಾಣಿಯ ಬೊಕ್ಕಸ ತುಂಬಿಸಲು ಇಲ್ಲಿಯ ಹಣ ಎತ್ತಿದರು, ಬ್ರಿಟೀಷರ ಈ ಕೊಳ್ಳೆಯಲ್ಲಿ ಭಾರತೀಯ ರೈತರು ತುಂಬಾ ನಷ್ಟ ಅನುಭವಿಸಿ ನೊಂದರು. ತೆರಿಗೆ ಪದ್ಧತಿ ಮುಂದೆ ಸುಧಾರಿಸಿತಾದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಮೀನ್ದಾರರು ಜಹಗೀರುದಾರರು, ಇನಾಂದಾರರು ಮುಂತಾದ ವಿವಿಧ ಮಧ್ಯವರ್ತಿಗಳು ಹುಟ್ಟಿಕೊಂಡರು. ಹಾಗೂ ಬ್ರಿಟೀಷರು ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದೆ ಭೂಮಿಯು ಜಮೀನ್ದಾರರ ಪಾಲಾಯಿತು. ಕೃಷಿಕರು ಗೇಣಿದಾರರಾದರು ಕೆಲವರು ಕೋರುಪಾಲು ರೈತರಾಗಿ ತಾವು ಬೆಳೆದಿದ್ದರಲ್ಲಿ ದೊಡ್ಡಪಾಲನ್ನು ಧಣಿಗಳಿಗೆ ಕೊಡಬೇಕಾಯಿತು. ಕೆಲವರು ಭೂಮಿಯುನ್ನು ಕಳೆದುಕೊಂಡು ಕೃಷಿಕೂಲಿಕಾರರಾದರು. ಆದಿವಾಸಿ ರೈತರಂತೂ ಎಲ್ಲಾ ರೀತಿಯಲ್ಲೂ ತುಂಬಾ ಶೋಷಣೆಗೆ ಒಳಗಾದರೂ. ಇವರು ಗಣಿಗಳಿಗಾಗಿ ಬಿಟ್ಟಿ ದುಡಿಯುಬೇಕಾಯಿತು. ಜೀತದಾಳುಗಳಾದರು. ಈ ನೋವಿನ ಪರಿಣಾಮ ಅನೇಕ ದಂಗೆಗಳುಂಟಾದವು.

ಬ್ರಿಟೀಷರು ಇಂಗ್ಲೆಂಡಿನ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಭಾರತದ ಗುಡಿಕೈಗಾರಿಕೆಗಳನ್ನು ನಾಶ ಮಾಡಿದರು. ಇದರಿಂದಲೂ ಸಹ ರೈತರಿಗೆ ಅನ್ಯಾಯವಾಯಿತು. ಹಾಗೂ ಬ್ರಿಟೀಷರು ಎಲ್ಲಾ ರೈತರೂ ಕಡ್ಡಾಯವಾಗಿ ವಾಣಿಜ್ಯ ಬೆಳೆಯನ್ನು ಸ್ವಲ್ಪ ಪ್ರಮಾಣದಲ್ಲಾದರೂ ಬೆಳೆಯುಬೇಕೆಂದು ರೈತರ ಮೇಲೆ ಒತ್ತಾಯ ತಂದರು. ಇದರಿಂದ ರೈತರ ಮುಖ್ಯ ಬೆಳೆಗೆ ಪೆಟ್ಟು ಬಿದ್ದು ದಾರಿದ್ರ್ಯ ಅಧಿಕವಾಗುತ್ತ ಹೋಯಿತು. ದೊಡ್ಡ ರೈತರು ಮತ್ತು ಸಣ್ಣ ರೈತರ ನಡುವೆ, ರೈತರು ಮತ್ತು ಕೂಲಿಗಾರರ ನಡುವೆ, ರೈತರು ಮತ್ತು ವಿವಿಧ ಕಸುಬುದಾರರ ನಡುವೆ ಅನ್ಯೋನ್ಯ ಸಂಬಂಧ ಅಳಿದುಹೋಗಿ ಅವರ ನಡುವೆ ಅಂತರ ಉಂಟಾಯಿತು. ಬ್ರಿಟೀಷರ ಕಾಲದಲ್ಲಿ ಸಾರಿಗೆ ಸಂಪರ್ಕ ಅಭಿವೃದ್ಧಿ, ಸಾಂಕ್ರಮಿಕ ರೋಗಗಳನ್ನು ತಡೆಗಟ್ಟಿದ ಮತ್ತು ಉತ್ತಮ ವೈದ್ಯಕೀಯ ಸೌಲಭ್ಯ ಮುಂತಾದ ಕಾರಣಗಳಿಂದಾಗಿ ಜನಸಂಖ್ಯೆ ಅಧಿಕವಾಯಿತು. ಇದರಿಂದ ರೈತರ ಮೇಲೆ ಪ್ರತಿಕೂಲ ಪರಿಣಾಮವಾಯಿತು. ಗೇಣಿಯುದರ ಹೆಚ್ಚಿತು. ಹಿಡುವಳಿಗಳು ಸಣ್ಣದಾದವು. ರೈತರ ಸಾಲದ ಹೊರೆ ಹೆಚ್ಚಾಯಿತು. ಜೀತಪದ್ಧತಿ ಬೆಳೆಯಿತು ಕೂಲಿಕಾರರು ಮತ್ತು ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಯಿತು. ಬರಗಾಲಗಳೂ ಸಹ ಕಾಡಿದವು. ಇಂತಹ ವಿಷಮ ಸ್ಥಿತಿಯಲ್ಲಿ ದಂಗೆಗಳು ಅನಿವಾರ್ಯವಾದವು. ಹೀಗೆ ಬ್ರಿಟೀಷರ ಕಾಲದಲ್ಲಿ ಆಡಳಿತದ ನ್ಯೂನತೆ, ಅವರು ಭಾರತೀಯ ರೈತರ ಬಗ್ಗೆ ತಾಳಿದ ಧೋರಣೆ. ಅವರು ಜಾರಿಗೆ ತಂದ ಕಾನೂನುಗಳು ಒಂದಲ್ಲ ಒಂದು ರೀತಿಯಲ್ಲಿ ಭಾರತೀಯ ರೈತರನ್ನು ಶೋಷಿಸಿದವು. ಶೋಷಣೆಯಿಂದ ನೊಂದ ರೈತರು ಕ್ರಾಂತಿಯ ಧ್ವನಿ ಹೊರಡಿಸಿದರು. ರೈತರಿಗೆ ತಮಗಾಗುತ್ತಿರುವ ಅನ್ಯಾಯ ಅರಿವಾಗಿ ಸಂಘಟಿತರಾಗಿ ಹೋರಾಡಲು ಪ್ರಾರಂಭಿಸಿದರು. ಅದರಲ್ಲೂ ಕಮ್ಯೂನಿಸ್ಟ್–ಮಾರ್ಕ್ಸಿಸ್ಟ್ ಪಕ್ಷಗಳು ಪ್ರಬುದ್ಧವಾದ ನಂತರ ನಿಜವಾದ ಹೋರಾಟ ಪ್ರಾರಂಭವಾಯಿತೆಂದು ಹೇಳಬಹುದು.

ಬ್ರಿಟೀಷರ ಕಾಲದಲ್ಲಿ ಕ್ರಾಂತಿಯ ಬೀಜಗಳು ಬಿತ್ತಲ್ಪಟ್ಟವು. ಈ ಪರಿಸ್ಥಿತಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾತಂತ್ರ್ಯ ನಂತರವೂ ಸಹ ಮುಂದುವರಿಯಿತು. ಯಾವೊಂದು ಕ್ರಾಂತಿಯು ಯಾವುದೋ ಒಂದು ಕ್ಷಣದಲ್ಲಿ ಕಾಣಿಸಿ ಹಾಗೆಯೇ ಮರೆಯಾಗುವುದಿಲ್ಲ. ಕ್ರಾಂತಿಗೆ ಕಾರಣವಾಗುವ ಅಂಶಗಳು ಸುದೀರ್ಘ ಕಾಲದಿಂದಲೂ ಮರೆಯಲ್ಲಿ ಕೆಲಸ ಮಾಡುತ್ತಲೇ ಇರುತ್ತವೆ. ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ರೈತರ ಅಶಾಂತಿಗೆ ಕಾರಣವಾದಂತಹ ಪರಿಸ್ಥಿತಿಗಳು ಸ್ವಾತಂತ್ರ್ಯನಂತರ ಸಂಪೂರ್ಣವಾಗಿ ಬದಲಾಗಲಿಲ್ಲ. ಉತ್ತರ ಪ್ರದೇಶದ ಬಸ್ತಿಯಲ್ಲಿ ನಡೆದ ಭೂಮಿ ಕಸಿಯುವ ಚಳುವಳಿ, ತೆಲಂಗಾಣ ರೈತ ಹೋರಾಟ ಶ್ರೀಕಾಕುಲಂ ಎಡಪಂಥೀಯ ಹೋರಾಟ ಇದಕ್ಕೆ ನಿದರ್ಶನವಾಗಿವೆ.

ಉತ್ತರಪ್ರದೇಶದ ಬಸ್ತಿಯಲ್ಲಿ (ಜಿಲ್ಲಾ ಕೇಂದ್ರ) ನಿಜೈಬೋಲ್ ಚಳುವಳಿಯು ನಡೆಯಿತು. ಇದು ಅಹೀರ ಮತ್ತು ಕೂರ್ಮಿ ಎಂಬ ಕೆಳಜಾತಿಯವರು ಭೂಮಾಲೀಕರಾದ ರಜಪೂತರ ವಿರುದ್ಧ ಅವರ ಭೂಮಿಯನ್ನು ಪಡೆಯಲು ನಡೆಸಿದ ಹೋರಾಟವಾಗಿದ್ದಿತು. ಕಾಂಗ್ರೆಸ್ ಈ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿತ್ತು. ಇದರಿಂದ ಹೋರಾಟಗಾರರು ರಜಪೂತರಿಂದ ಭೂಮಿಯನ್ನು ಕಸಿದುಕೊಂಡರು. ಆದರೆ ಅಹೀರ್ ಮತ್ತು ಕೂರ್ಮಿ ಜನಾಂಗದವರು ಮಾತ್ರ ಈ ಭೂಮಿಯನ್ನು ಪಡೆದುಕೊಂಡರು. ಇತರೆ ಭಾಗೀದಾರರಾದ ಅಸ್ಪೃಶ್ಯರಿಗೆ ಮತ್ತು ಭೂರಹಿತ ಕೂಲಿಕಾರರಿಗೆ ಇದರ ಪ್ರಯೋಜನ ದೊರೆಯಲಿಲ್ಲ. ಹೀಗಾಗಿ ಈ ಚಳುವಳಿಯು ಹುಟ್ಟಿಕೊಂಡು ನಶಿಸುತ್ತಿದ್ದಂತೆ ಅದರ ಗರ್ಭದಲ್ಲಿಯೇ ಮತ್ತೊಂದು ಚಳುವಳಿಯು ಹುಟ್ಟಿಕೊಂಡಿತು. ಅದೇ ಭೂಮಿ ಕಸಿಯುವ ಚಳುವಳಿ. ಅಸ್ಪೃಶ್ಯ ಜಾತಿಯವರೆಲ್ಲರೂ ಈ ಚಳುವಳಿಯ ಮೂಲಕ ಮೇಲ್ಜಾತಿಯವರಿಂದ ಭೂಮಿಯನ್ನು ಕಸಿಯಲು ಪ್ರಾರಂಭಿಸಿದರು. ಕಾಂಗ್ರೆಸ್, ಕೂರ್ಮಿ ಮತ್ತು ಅಹೀರ ಜನರನ್ನು ಬೆಂಬಲಿಸಿದರೆ, ಸಮಾಜವಾದಿಗಳು ಮತ್ತು ಕಮ್ಯುನಿಷ್ಟರು ಅಸ್ಪೃಶ್ಯರನ್ನು ಮತ್ತು ಕೂಲಿಕಾರರನ್ನು ಬೆಂಬಲಿಸಿದರು. ಅಹೀರ್, ಕೂರ್ಮಿ, ಅಸ್ಪೃಶ್ಯರ ಮಧ್ಯೆ ದ್ವೇಷ ಬೆಳೆಯಿತು. ಅಹೀರ್ ಮತ್ತು ಕೂರ್ಮಿಗಳ ಒಂದು ಗುಂಪಾದರೆ, ಅಸ್ಪೃಶ್ಯರು ಮತ್ತು ಬಡ ಮುಸಲ್ಮಾನರು ಮತ್ತೊಂದು ಗುಂಪಾದರು. ಹೀಗೆ ಜಾತಿಧರ್ಮಗಳ ಹೆಸರಿನಲ್ಲಿ ಬಿರುಕು ಹುಟ್ಟಿದ ಕಾರಣದಿಂದಾಗಿ ಈ ಚಳುವಳಿಯು ವಿಫಲವಾಯಿತು.

ಸ್ವಾತಂತ್ರ್ಯದ ನಂತರ ನಡೆದ ಮತ್ತೊಂದು ಪ್ರಮುಖ ಚಳುವಳಿ ನಕ್ಸಲಬಾರಿ ಚಳುವಳಿ. ಬಂಗಾಲದ ನಕ್ಸಲ್‌ಬಾರಿ ಪ್ರದೇಶವಲ್ಲಿ ಪ್ರಾರಂಭವಾದ ಈ ಚಳುವಳಿಯು ಕಮ್ಯುನಿಸ್ಟ್ ತತ್ವಗಳನ್ನು ಆಧರಿಸಿತ್ತು. ಕನು ಸನ್ಯಾಲ ಮತ್ತು ಚಾರು ಮುಜುಮದಾರ ಎಂಬ ಕಮ್ಯುನಿಷ್ಟರ ನೇತೃತ್ವದಲ್ಲಿ ಪ್ರಾರಂಭವಾದ ಈ ಚಳುವಳಿಯು ಕ್ರಮೇಣ ಬಂಗಾಲದೆಲ್ಲೆಡೆಯಲ್ಲಿಯೂ ಹರಡಿತು. ಇದು ಹಿಂಸೆಯನ್ನು ಒಪ್ಪಿಕೊಂಡಿತು. ಕೊನೆಗೆ ಈ ಚಳುವಳಿಯು ಚೀನಾಪರ ಮತ್ತು ರಶ್ಯಾಪರ ಎಂಬ ಎರಡು ಪಂಗಡಗಳಾಗಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವಿಭಜನೆಗೊಂಡಿತು. ಈ ಚಳುವಳಿಯು ಮೊದಮೊದಲು ಯಶಸ್ಸು ಕಂಡು ಕ್ರಮೇಣ ಆಂಧ್ರದ ಶ್ರೀಕಾಕುಲಂ ಜಿಲ್ಲೆಗೂ ಮತ್ತು ದೇಶದ ಇತರ ಕೆಲವು ಭಾಗಗಳಿಗೂ ಸಹ ಹರಡಿತು.

ಸ್ವಾತಂತ್ರ್ಯಾನಂತರ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಡೆದ ರೈತ ಚಳುವಳಿಗಳು ವಾದವಿವಾದಕ್ಕೆ ಒಳಗಾಗಿವೆ. 1981ರಲ್ಲಿ ನಡೆದ ಕಬ್ಬು ಬೆಳೆಗಾರರ ಚಳುವಳಿಯನ್ನು ಗೈಲ್ ಓಮ್‌ವೆಡ್ ಆದು ರೈತರ ಚಳುವಳಿಯೇ ಅಲ್ಲ ಎಂದು ಕರದಿದ್ದಾರೆ. ಟೀಕಾಕಾರರು ಈ ಚಳುವಳಿಯು ಶ್ರೀಮಂತ ಭೂ ಮಾಲೀಕರ ಪ್ರತಿಗಾಮಿ ಚಳುವಳಿಯಾಗಿ ಅವರು ಮೂರು ಮುಖ್ಯ ಅಂಶಗಳನ್ನು ಗುರುತಿಸಿದ್ದಾರೆ. ಮೊದಲನೆಯದಾಗಿ ಈ ಚಳುವಳಿಯಲ್ಲಿ ಭಾಗವಹಿಸಿದ ಶೇ 85ರಷ್ಟು ಜನರು ಶ್ರೀಮಂತರು. ಬಂಡವಾಳಶಾಹಿ ರೈತರೂ ಸೇರಿದ್ದಾರೆ. ಎರಡನೆಯದಾಗಿ ಇದರ ಬೇಡಿಕೆಗಳೂ ರೈತಾಪಿ ಜನರ ವಿರುದ್ಧವಾಗಿವೆ ಮೂರನೆಯದಾಗಿ ; ಈ ಚಳುವಳಿಯು ವಾಸ್ತವಿಕವಾಗಿ ಗ್ರಾಮೀಣ ಬೂರ್ಜ್ವಾ ಮತ್ತು ನಗರದ ಬೂರ್ಜ್ವಾರಗಳ ನಡುವಿನ ಹೋರಾಟವೇ ಹೊರತು ರೈತರ ಹೋರಾಟವಲ್ಲ. ಈ ಚಳುವಳಿಯಲ್ಲಿ ಭಾಗವಹಿಸಿದ ಬಡ ರೈತರು ಶ್ರೀಮಂತ ರೈತರ ಆಶ್ವಾಸನೆಗೆ ಒಳಗಾಗಿದ್ದರು.

ಕರ್ನಾಟಕದ ಧಾರವಾಡ ಜಿಲ್ಲೆಯ ನರಗುಂದ ಮತ್ತು ನವಲುಗುಂದ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯಾನಂತರ ರೈತ ಹೋರಾಟಗಳು ನಡೆದಿವೆ. ಇವುಗಳೆಲ್ಲವೂ ಸಹ ರೈತರ ಹೋರಾಟ ಎಂದೆನಿಸಿದರೂ ಇದರ ಉಪಯೋಗವನ್ನು ಪಡೆದದ್ದು ಶ್ರೀಮಂತ ರೈತರೇ ಹೊರತು ಸಣ್ಣ ರೈತರಲ್ಲ. ಮುಷ್ಕರ, ಮತ ಪ್ರದರ್ಶನಗಳನ್ನು ಸೇರಿಕೊಳ್ಳುವ ಬಡರೈತರಿಗೆ ತಾವೇನು ಮಾಡುತ್ತಿದ್ದೇವೆಂಬುದು ಗೊತ್ತಾಗುವುದಿಲ್ಲ. ಇತ್ತೀಚೆಗೆ ಕರ್ನಾಟಕದಲ್ಲಿ ರೈತ ಸಂಘವು ಹುಟ್ಟಿಕೊಂಡಿದೆ. ರೈತರ ಆಶೋತ್ತರಗಳಿಗೆ ಹೋರಾಡುವ ಗುರಿಯನ್ನು ಇದು ಹಮ್ಮಿಕೊಂಡಿದೆ. ಹೀಗೆ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ರೈತ ಸಂಘಟನೆಗಳು ಸೃಷ್ಟಿಗೊಂಡು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಿವೆ, ಹೀಗೆ ಸ್ವಾತಂತ್ರ್ಯ ಪೂರ್ವದಿಂದಲೂ ಇಂದಿನವರೆವಿಗೂ ರಾಷ್ಟ್ರದ ವಿವಿಧ ಭಾಗದಲ್ಲಿ ರೈತ ಹೋರಾಟಗಳು ನಡೆಯುತ್ತಲೇ ಬಂದಿವೆ. ಈ ಎಲ್ಲಾ ಚಳುವಳಿಗಳು ಮಹತ್ತರವಾದ ಕ್ರಾಂತಿಯನ್ನುಂಟು ಮಾಡದೇ ಕೇವಲ ದಂಗೆ ಮತ್ತು ಬಂಡಾಯದ ರೀತಿಯಲ್ಲಿದ್ದು ಭಾರತದ ಬಡ ರೈತರ, ಕೃಷಿಕಾರ್ಮಿಕರ, ಭೂರಹಿತರ ಬದುಕನ್ನು ಸುಧಾರಿಸುವ ಮಹತ್ತರವಾದಂತಹ ಬದಲಾವಣೆಯನ್ನೇನನ್ನು ತಂದಿಲ್ಲ ಎಂದು ಹೇಳಬಹುದು. ಬಡ ರೈತರ ಮತ್ತು ಭೂರಹಿತರ ಬದುಕಿನಲ್ಲಿ ಒಂದಿಷ್ಟು ಬದಲಾವಣೆಯನ್ನು ತಂದಾಗ ಮಾತ್ರ ರೈತ ಹೋರಾಟಕ್ಕೆ ಒಂದು ಅರ್ಥವಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೈತ ಚಳುವಳಿಯ ವಿಧಗಳು :

ಭಾರತದ ರೈತ ಹೋರಾಟಗಳು ಏಕರೂಪವಾಗಿಲ್ಲ. ಸಂತಾಲ ಆದಿವಾಸಿಗಳು ನಡೆಸಿದ ಹೋರಾಟವು ಬಾರ್ಡೋಲಿಯ ರೈತರ ಅಸಹಕಾರ ಚಳುವಳಿಗಿಂತ ಭಿನ್ನವಾದುದು. ಕೇರಳದ ಮಾಪಿಳ್ಳೆಗಳ ದಂಗೆಯಲ್ಲಿ ಧರ್ಮಗುರುಗಳ ಪ್ರಭಾವ ಕಂಡುಬಂದಿದ್ದರೆ ಬಂಗಾಲದ ನಕ್ಸಲಬಾರಿ ಚಳುವಳಿಯಲ್ಲಿ ಅದು ಕಂಡುಬರುವುದಿಲ್ಲ. ಹೀಗೆ ರೈತ ಹೋರಾಟಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಚಳುವಳಿಗಳ ಉದ್ದೇಶವು ಒಂದು ಚಳುವಳಿಯಿಂದ ಮತ್ತೊಂದು ಚಳುವಳಿಗೆ ಬೇರೆಯಾಗಿರುತ್ತದೆ. ರೈತ ಹೋರಾಟಗಳ ಉದ್ದೇಶ, ವಿಚಾರಧಾರಿ ಮತ್ತು ಸಂಘಟನೆಯನ್ನು ಆಧರಿಸಿ ಕ್ಯಾಥಲೀನ್ ಗಾಫ್‌ರವರು ಸ್ಥೂಲರೂಪವಾಗಿ 5ಪ್ರಕಾರಗಳಾಗಿ ವಿಂಗಡಿಸಿದ್ದಾನೆ.

1. ಪುನಸ್ಥಾಪನಾ ದಂಗೆಗಳು
2. ಧಾರ್ಮಿಕ ಚಳುವಳಿಗಳು
3. ಸಮಾಜ ನಿಷ್ಟ ದರೋಡೆಗಳು.
4. ಭಯೋತ್ಪಾದಕ ಪ್ರತೀಕಾರಗಳು ಮತ್ತು
5. ಜನತಾ ವಿಪ್ಲವಗಳು

ಡಾ. ಡಿ. ಎನ್. ಧನಗರೆಯವರು ಈ ಪಟ್ಟಿಗೆ ಉದಾರ ಸುಧಾರಹೋಣಾರಾಟವಾದಿ ಎಂಬುದೊಂದನ್ನು ಸೇರಿಸಿದ್ದಾರೆ.

ಪುನಸ್ಥಾಪನ ದಂಗೆಗಳು :

ಈ ಚಳುವಳಿಯ ಮುಖ್ಯ ಗುರಿ ಬ್ರಿಟೀಷರನ್ನು ಹೊಡೆದೋಡಿಸಿ ಹೊಸ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುವುದಾಗಿದ್ದಿತು. 1765 ರಿಂದ 1857ರ ನಡುವೆ ಇಂತಹ 29 ಹೋರಾಟಗಳು ನಡೆದಿವೆ ಎಂಬುದಾಗಿ ಕಾಥಲೀನ್ ಗಾಫ್ ಹೇಳುತ್ತಾರೆ. ಬ್ರಿಟೀಷರ ಕಾಲದಲ್ಲಿ ದಿವಾಳಿಯೆದ್ದ ರೈತರು, ಕೈಕಸಬುದಾರರು, ತಮ್ಮ ಸ್ಥಾನಮಾನ ಮತ್ತು ಆಸ್ತಿಪಾಸ್ತಿಗಳನ್ನು ಕಳೆದುಕೊಂಡ ಜಹಗೀರುದಾರು, ಪಾಳೆಯಗಾರು ಆದಿವಾಸಿ ಮುಖಂಡರು, ಧರ್ಮಗುರುಗಳು, ಕೆಳ ಜಾತಿಯ ಪ್ಲಾಂಟೇಷನ್ ಕೂಲಿಕಾರರು ಮತ್ತು ಕಾರ್ಮಿಕರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು ಇದು ಬ್ರಿಟೀಷ್ ಸರ್ಕಾರದ, ಅಧಿಕಾರಿಗಳು, ಪ್ಲಾಂಟೇಷನ್ ಮಾಲೀಕರ, ಬ್ರಿಟೀಷ್ ಸೈನ್ಯ ಮತ್ತು ಭೂಕಂದಾಯ ವಸೂಲಿಗಾರರು ಹಾಗೂ ಜಮೀನುದಾರರ ವಿರುದ್ಧ ನಡೆದ ಹೋರಾಟವಾಗಿದ್ದಿತು. ಇವರೆಲ್ಲರನ್ನೂ ಲೂಟಿ ಮಾಡಿ, ವಸ್ತು ಒಡವೆ ದೋಚಿ ಹಿಂಸಿಸುವುದು ಈ ಚಳುವಳಿಯ ವಿಧಾನವಾಗಿದ್ದಿತು, ಆದರೆ ಈ ಚಳುವಳಿಯು ವಿಫಲವಾಯಿತು. ಇದರ ವಿಫಲತೆಗೆ ಕಾರಣ ದೇಶದ ಇತರ ಭಾಗಗಳಿಗೆ ಇದು ಹರಡುವುದು ತಡವಾಯಿತು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಮತ್ತು ಎರಡನೆಯದಾಗಿ ಈ ಹೋರಾಟವನ್ನು ನಿಯಂತ್ರಿಸುವಂತಹ ಕೇಂದ್ರ ಶಕ್ತಿಯ ಕೊರತೆ ಇತ್ತು.

ಧಾರ್ಮಿಕ ಚಳುವಳಿಗಳು :

ಈ ಚಳುವಳಿಗಳು ಧಾರ್ಮಿಕ ಮುಖಂಡರುಗಳನ್ನು ಒಳಗೊಂಡು ಧಾರ್ಮಿಕ ಉದ್ದೇಶಗಳನ್ನು ಹೊಂದಿರುತ್ತವೆ. ತಮ್ಮ ವಿಜಯದೊಂದಿಗೆ ಹೊಸ ರಾಮರಾಜ್ಯವನ್ನು ಕಟ್ಟುತ್ತೇವೆಂಬುದು ಈ ಚಳುವಳಿಗಾರರ ನಂಬಿಕೆ, ಸಾವಿರಾರು ವರ್ಷಗಳ ಸುಖ ಶಾಂತಿ ನೆಲೆಸುವುದೆಂಬ ನಂಬಿಕೆಯನ್ನು ಹೊಂದಿರುವದರಿಂದ ಇದನ್ನು ಸಹಸ್ರವಾರ್ಷಿಕ ಚಳುವಳಿ ಎಂತಲೂ ಹಾಗೂ ತಮ್ಮನ್ನು ರಕ್ಷಿಸಲು ಒಬ್ಬ ದೇವದೂತ ಬರುತ್ತಾನೆಂಬ ನಂಬಿಕೆ ಇರುವುದರಿಂದ ಇದನ್ನು ಅವತಾರೀಯ ಚಳುವಳಿ ಎಂತಲೂ ಕರೆಯಲಾಗಿದೆ. ಇದಕ್ಕೆ ಕೇರಳದ ಮಲಬಾರಿನ ಮಾಪಿಳ್ಳೆ ಮುಸಲ್ಮಾನ ರೈತರ ಚಳುವಳಿಯನ್ನು ಉದಾಹರಿಸಬಹುದು. ಇಂತಹ ಚಳುವಳಿಗಳನ್ನು ಅಧ್ಯಯನ ಮಾಡಿದಂತಹ ಹಾಬ್ಸ್ ಬಾಸ್, ಕೋಹ್ನ ಮುಂತಾದ ವಿದ್ವಾಂಸರು ಈ ಕೆಳಕಂಡ ಮೂರು ಮುಖ್ಯ ಲಕ್ಷಣಗಳನ್ನು ಗುರುತಿಸಿದ್ದಾರೆ.

1 ಚಳುವಳಿಕಾರರು ತಾವು ಬದುಕಿರುವ ಕಾಲವನ್ನು ಅನಿಷ್ಟಕರ ಯುಗವೆಂದು ತಿಳಿದಿರುತ್ತಾರೆ ಮತ್ತು ಮುಂದೆ ಚಿರಶಾಂತಿ ಸಂತೃಪ್ತಿಗಳು ಬರುವುದೆಂದು ನಂಬಿರುತ್ತಾರೆ

2. ಅಲೌಕಿಕ ಹಾಗೂ ಕರೀಶ್ಮಾ ವ್ಯಕ್ತಿತ್ವವಿರುವ ನಾಯಕನು ತಮ್ಮನ್ನು ಪಾರು ಮಾಡುತ್ತಾನೆ ಎಂದು ನಂಬಿರುತ್ತಾರೆ.

4. ಈ ಚಳುವಳಿಗಳು ಕ್ರೈಸ್ತೀಯ ಅಥವಾ ಯಹೂದಿ ಪರಧಿಗಳಲ್ಲಿ ಹೆಚ್ಚು ಕಂಡುಬಂದು ಹಿಂದೂ ಧರ್ಮದಲ್ಲಿ ಕಂಡುಬರುವುದಿಲ್ಲ.

ಭಾರತದಲ್ಲಿ ಇಂತಹ ಚಳುವಳಿಗಳಲ್ಲಿ ಆದಿವಾಸಿಗಳು ಹಾಗೂ ಮುಸಲ್ಮಾನರು ಹೆಚ್ಚು ಸಂಖ್ಯೆಯಲ್ಲಿದ್ದು ಇವರು ಬ್ರಿಟೀಷ್ ಅಧಿಕಾರಿಗಳು. ಸೈನ್ಯ, ಜಮೀನ್ದಾರರು, ಭೂ ಮಾಲೀಕರು, ವ್ಯಾಪಾರಿಗಳು, ಪೋಲಿಸ್ ಇವರ ವಿರುದ್ಧ ಹೋರಾಡಿದ್ದಾರೆ.

ಸಮಾಜನಿಷ್ಟ ದರೋಡೆಗಳು :

ಗ್ರಾಮೀಣ ಭೂಮಾಲೀಕರ ಮತ್ತು ಶ್ರೀಮಂತ ಜಮೀನ್ದಾರರ ಸಂಪತ್ತನ್ನು ಬಡಹಳ್ಳಿಗರಿಗೆ ಹಂಚುವ ದರೋಡೆಗಳನ್ನು ಸಮಾಜನಿಷ್ಟ ದರೋಡೆಗಳು ಎಂದು ಕರೆಯಬಹುದು ಚಳುವಳಿಗಾರರು ಹೊಟ್ಟೆಪಾಡಿಗಿಂತ ವಿಂಗಿಲಾಗಿ ಒಂದು ವರ್ಗದ ಮೇಲಿನ ಆದರಲ್ಲೂ ಬಡವರನ್ನು ಶೋಷಿಸುವ ವರ್ಗದ ವಿರುದ್ಧ ಈ ಕೃತ್ಯವನ್ನು ಮಾಡುತ್ತಾರೆ. 17 ಮತ್ತು 18ನೆಯ ಶತಮಾನದಲ್ಲಿ ಮಧ್ಯಭಾರತದ ಠಕ್ಕರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸನ್ಯಾಸಿ ಫಕೀರರ ದರೋಡೆಗಳು. ಆಂಧ್ರದ ಕರ್ನೂಲಿನ ನರಸಿಂಹರೆಡ್ಡಿ ತಂಡದವರು 1947-48ರಲ್ಲಿ ನಡೆಸಿದ ದರೋಡೆಗಳು ಹಾಗೂ ಮದ್ರಾಸ್ ರಾಜ್ಯದಲ್ಲಿ ಕಳ್ಳರ್ ಎಂಬ ಜನಾಂಗದವರು ನಡೆಸಿದ ಹೋರಾಟಗಳು ಸಮಾಜ ನಿಷ್ಠ ದರೋಡೆಗಳಾಗಿವೆ. ಇಂತಹ ದರೋಡೆಗಳು ಬಹುಕಾಲ ಉಳಿಯುವುದಿಲ್ಲ. ದರೋಡೆಕಾರರು ಮತ್ತು ಹಳ್ಳಿಗರ ನಡುವಿನ ವಿರಸದಿಂದ ಇವುಗಳು ಕೊನೆಗೊಳ್ಳುತ್ತವೆ.

ಭಯೋತ್ಪಾದಕ ಪ್ರತೀಕಾರಗಳು :

ಶೋಷಣೆ ಮಾಡುವ ವರ್ಗದ ವಿರುದ್ಧ ಸೇಡು ತೀರಿಸಿಕೊಳ್ಳುವುದೇ ಈ ಚಳು ವಳಿಯ ಮುಖ್ಯ ಗುರಿ. ರೈತರು ಭೂಮಾಲೀಕರ ವಿರುದ್ಧ ಅಥವಾ ಸಾಹುಕಾರ, ಸರ್ಕಾರಿ ಅಧಿಕಾರಿ ಮುಂತಾದವರ ವಿರುದ್ಧ ಪ್ರತಿಭಟಿಸುತ್ತಾರೆ. ಮುಯ್ಯಿಗೆಮುಯ್ಯಿ, ಹಿಂಸೆಗೆಹಿಂಸೆಯೇ ಉತ್ತರ ಎಂಬ ತತ್ವ ಇಲ್ಲಿದೆ.ಮುಂದಾಲೋಚನೆಯಿಲ್ಲದ ಈ ಚಳುವಳಿ ಗಾರರು ಹಿಂಸಿಸುವುದು ಮತ್ತು ಕೊಲ್ಲುವುದರಲ್ಲೂ ಸಹ ತೊಡಗುತ್ತಾರೆ. ಆದರೆ ಅವು ಕಡಿಮೆ ಫಲಪ್ರದವಾಗಿವೆ. ನಕ್ಸಲೀಯ ಚಳುವಳಿಗಳನ್ನು ಇದಕ್ಕೆ ಉದಾಹರಿಸ ಬಹುದು.

ಜನತಾ ವಿಪ್ಲವಗಳು :

ಜನತಾ ವಿಪ್ಲವಗಳು ದೀರ್ಘಕಾಲ ಪರಿಹಾರ ಕಾಣದಿರುವ ಸಮಸ್ಯೆಗಳಿಂದ ಉದ್ಭವಿಸುತ್ತವೆ. ಇವು ಏಕಾಏಕಿ ಸ್ಫೋಟಿಸುವ ಗುಣವುಳ್ಳವು. ಅವು ಹೆಚ್ಚುಕಾಲ ಮುಂದುವರಿಯುವುದು ವಿರಳ. ಇಂತಹ ವಿಪ್ಲವಗಳು ಪ್ರಾರಂಭದಲ್ಲಿ ಮುಷ್ಕರ, ಅಸಹಕಾರ, ಘೋಷಣೆ ಕೂಗುವುದು, ಬಹಿಷ್ಕಾರ ಮುಂತಾದ ರೂಪತಾಳುತ್ತವೆ. ಇವು ಗಳನ್ನು ಹತ್ತಿಕ್ಕಲು ಬಲ ಪ್ರಯೋಗ ಮಾಡಿದಲ್ಲಿ ಇವು ಹಿಂಸಾತ್ಮಕ ರೂಪತಾಳುತ್ತವೆ. ರೈತರ ಸಾಲದ ಹೊರೆ, ವಿಪರೀತ ಬಡ್ಡಿ ಇಂತಹ ಹೋರಾಟಕ್ಕೆ ಕಾರಣ ವಾಗುತ್ತವೆ. ಇವುಗಳಿಗೆ ಸೈದ್ಧಾಂತಿಕ ಹಿನ್ನಲೆಯಾಗಲೀ ಅದ್ಭುತ ಶಕ್ತಿಯ ಚಮತ್ಕಾರಿ ನಾಯಕರಾಗಲಿ ಇರುವುದಿಲ್ಲ.

ಉದಾರ ಸುಧಾರಣಾವಾದಿ ಚಳುವಳಿಗಳು :

ಈ ಚಳುವಳಿಗಳು ಗಾಂಧೀಜಿಯವ ಸೂತ್ರಗಳಾದ ಸ್ವರಾಜ್ಯ. ರಾಮರಾಜ್ಯ ಮುಂತಾದವುಗಳನ್ನು ಆಧರಿಸಿರುತ್ತವೆ. ಗಾಂಧೀಜಿ ಮತ್ತು ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ರೈತ ಹೋರಾಟಗಳು ಈ ವಿಧಧ ಚಳುವಳಿಗಳಾಗಿವೆ. ಬಿಹಾರ ರಾಜ್ಯದ ಚಂಪಾರಣ ಸತ್ಯಾಗ್ರಹ, ಗುಜರಾತ್‌ನಲ್ಲಿ ನಡೆದ ಖೇಡಾ ಮತ್ತು ಬಾರ್ಡೋಲಿ ಚಳುವಳಿಗಳಲ್ಲೂ ಮತ್ತು ಉತ್ತರ ಪ್ರದೇಶದಲ್ಲಿ 1921 ಮತ್ತು 31 ರ ಅವಧಿಯಲ್ಲಿ ನಡೆದ ರೈತ ಚಳುವಳಿಗಳನ್ನು ಉದಾಹರಿಸಬಹುದು. ಇವು ಭವಿಷತ್ತಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರ್ಶ ರಾಜ್ಯದ ಬಗ್ಗೆ ಮಾತನಾಡುತ್ತವೆ. ಯಾವ ಮೂಲಭೂತ ಬದಲಾವಣೆಯನ್ನು ಪ್ರತಿಪಾದಿಸದೇ ಇವು ಕೇವಲ ಸಾಂಕೇತಿಕವಾಗಿರುತ್ತವೆ.

ರೈತ ಹೋರಾಟಕ್ಕೆ ಕಾರಣಗಳು :

ಕೃಷಿ ಪ್ರದಾನವಾದ ಭಾರತವು ರೈತರ ಸಂಖ್ಯೆಯನ್ನು ಅಧಿಕವಾಗಿ ಹೊಂದಿದೆ. ಬೃಹತ್ ಸಂಖ್ಯೆಯಲ್ಲಿರುವ ಈ ರೈತರು ಇತರರಿಂದ ವಂಚಿಸಲ್ಪಟ್ಟಾಗ ಇತರ ಸಮುದಾಯಗಳಿಗೆ ಅಥವಾ ವರ್ಗಗಳಿಗೆ ಲಭ್ಯವಿರುವ ಸಂಪತ್ತು, ಸ್ಥಾನಮಾನಗಳು ಅವರಿಗೆ ಲಭ್ಯವಾಗದಿದ್ದಾಗ ಪ್ರತಿಭಟನೆಯ ಕೂಗು ಧ್ವನಿಸುತ್ತದೆ. ಬೇರೊಂದು ಸಮೂಹದ ಜನರು ಮಾತ್ರ ಅಧಿಕಾರ, ಸ್ಥಾನಮಾನ ಸವಲತ್ತುಗಳನ್ನು ಹೊಂದಿ ರೈತವರ್ಗ ಇವುಗಳಿಂದ ವಂಚಿತರಾದಾಗ ಆ ಸವಲತ್ತುಗಳನ್ನು ಪಡೆಯಲೋಸುಗ ರೈತರು ಸಂಘಟಿತರಾಗುತ್ತಾರೆ. ಸಂಘಟಿತರಾದ ರೈತರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರತಿಭಟಿಸುತ್ತಾರೆ. ಭೂಮಾಲೀಕರು ಮತ್ತು ಜಮೀನ್ದಾರರ ಶೋಷಣೆ, ಕೃಷಿಗೆ ಸಂಬಂಧಿಸಿದಂತೆ ಸರ್ಕಾರದ ಧೋರಣೆ, ಅಧಿಕ ಕಂದಾಯದ ಹೇರಿಕೆ, ಋಣಭಾದೆ, ಅಧಿಕ ಬಡ್ಡಿಯನ್ನು ಹೇರುವುದು, ತಾವು ಬೆಳೆದ ಬೆಳೆಗೆ ಸರಿಯಾದ ಪ್ರತಿಫಲ ಸಿಗದಿರುವುದು ಮುಂತಾದವುಗಳು ರೈತರ ಹೋರಾಟಕ್ಕೆ ಕಾರಣವಾಗುತ್ತವೆ

ಬ್ರಿಟೀಷರ ಕಾಲದಲ್ಲಿ ಜಾರಿಗೆ ತಂದ ಜಮೀನ್ದಾರಿ ಪದ್ಧತಿ ಜಗೀರ್‌ದಾರ್ ಪದ್ಧತಿಯಿಂದಾಗಿ ಜಮೀನ್ದಾರರು, ಜಹಗೀರ್‌ದಾರರು, ಇನಾಂದಾರರು ಮುಂತಾದ ವಿವಿಧ, ಮಧ್ಯವರ್ತಿಗಳು ಬಡ್ಡಿ ವ್ಯವಹಾರ ಮಾಡುತ್ತಾ ರೈತರನ್ನು ಕೂಲಿಕಾರರನ್ನು ಶೋಷಣೆ ಮಾಡುತ್ತಿದ್ದ ಪರಿಸ್ಥಿತಿ ರೈತರನ್ನು ಪ್ರತಿಭಟಿಸುವಂತೆ ಮಾಡಿತು. ಜಮೀನ್ದಾರಿ ಪದ್ಧತಿಯಿಂದಾಗಿ ಭೂಮಾಲೀಕರ ವರ್ಗ ಸೃಷ್ಟಿಯಾಯಿತು. ಹಿಂದೆ ಉತ್ತು ಬೆಳೆದು ಕೃಷಿ ಮಾಡುತ್ತಿದ್ದವರ ಭೂಮಿಯು ಜಮೀನ್ದಾರರ ಪಾಲಾಯಿತು. ಈ ಕೃಷಿಕರು ಗೇಣಿ ರೈತರಾದರು. ಕೆಲವರು ಕೋರುಪಾಲು ರೈತರಾಗಿ ಬೆಳೆದದ್ದರಲ್ಲಿ ದೊಡ್ಡ ಪಾಲನ್ನು ಧಣಿಗಳಿಗೆ ಕೊಡುವಂತಹ ಪರಿಸ್ಥಿತಿಯುಂಟಾಯಿತು. ಪ್ಲಾಂಟೇಶನ್ ಕೆಲಸಗಾರರ ಜೀವನವಂತು ಮತ್ತಷ್ಟು ದುಸ್ತರವಾಯಿತು. ಹಾಗೂ ಬ್ರಿಟೀಷರು ಗುಡಿ ಕೈಗಾರಿಕೆಗಳನ್ನು ನಾಶ ಮಾಡಿದರು. ಹಾಗೂ ರೈತರು ತಮ್ಮ ಭೂಮಿಯಲಿ ಕಡ್ಡಾಯವಾಗಿ ವಾಣಿಜ್ಯ ಬೆಳೆಯನ್ನು ಬೆಳೆಯಬೇಕು ಎಂದು ಕಟ್ಟುಪಾಡು ಹಾಕಿದರು. ಹೀಗೆ ಬ್ರಿಟೀಷರ ಕಾಲದಲ್ಲಿ ಅನೇಕ ಕಾರಣಗಳಿಂದಾಗಿ ಶೋಷಿತರಾದ ರೈತರು ಹೋರಾಟದ ಹಾದಿ ಹಿಡಿದರು.

ಸ್ವಾತಂತ್ರ್ಯ ನಂತರವೂ ಸಹ ರೈತರ ಸ್ಥಿತಿಯು ಸುಧಾರಿಸಿಲ್ಲ. ಭಾರತೀಯ ರೈತರು ಅಧಿಕ ಸಾಲದ ಹೊರೆಯಿಂದ ನರಳುತ್ತಿದ್ದಾರೆ, ಬಡ್ಡಿಯ ದರವು ಅಧಿಕವಾಗಿದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಗೂ ಅವರು ಕಷ್ಟಪಟ್ಟು ಬೆಳೆದ ಬೆಳೆಗೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಮಧ್ಯವರ್ತಿಗಳ ಹಾವಳಿಯು ಸಹ ಅಧಿಕವಾಗಿದೆ. ಬದಲಾಗದ ಎಂದಿನಂತಿರುವ ಈ ಪರಿಸ್ಥಿತಿಯೇ ರೈತರ ಹೋರಾಟಕ್ಕೆ ಕಾರಣವಾಗುತ್ತದೆ ಎಂದು ಹೇಳಬಹುದು. ಸರ್ಕಾರ ರೈತರ ಪರಿಸ್ಥಿತಿಯನ್ನು ಅರಿತು ಮಾನವೀಯತೆಯ ದೃಷ್ಟಿಯಿಂದ ಅವರನ್ನು ಸುಧಾರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದಾಗ ಹೋರಾಟಗಳು ಸಂಭವಿಸುವುದಿಲ್ಲ. ಎಲ್ಲಿಯವರೆಗೂ ರೈತರ ಸುಧಾರಣೆಯು ಸಾಧ್ಯವಿಲ್ಲವೊ ಅಲ್ಲಿಯವರೆಗೂ ಚಳುವಳಿಗಳೂ ನಾಯಿಕೊಡೆಗಳಂತೆ ಹುಟ್ಟುತ್ತಲೇ ಇರುತ್ತವೆ.

ರೈತ ಹೋರಾಟದ ಕೆಲವು ಮುಖ್ಯ ಬೇಡಿಕೆಗಳು :

ಭಾರತದ ರೈತ ಹೋರಾಟಕ್ಕೆ ಸುಮಾರು 200 ವರ್ಷಗಳ ಇತಿಹಾಸವಿದ್ದರೂ ಅದು ವ್ಯಾಪಕವಾದದ್ದು ಇತ್ತೀಚೆಗೆ ಮಾತ್ರ ಎಂದು ಹೇಳಬಹುದು. 1930ರ ಹಿಂದೆ ನಡೆದಂತಹ ಚಳುವಳಿಗಳು ಕೇವಲ ಸ್ಥಳೀಯವಾಗಿ ಪರಿಣಾಮಕಾರಿಯಾಗಿದ್ದು ಇಡೀ ದೇಶದ ಮೇಲೆ ಪರಿಣಾಮ ಬೀರಲಿಲ್ಲ. 1935ರ ನಂತರ ರೈತ ಚಳುವಳಿಗಳು ಬಿಹಾರ, ಉತ್ತರ ಪ್ರದೇಶ, ಕೇರಳದ ಮಲಬಾರ, ಆಂಧ್ರ ಮತ್ತು ಬಂಗಾಲಗಳಲ್ಲಿ ಪ್ರಾರಂಭಗೊಂಡವು. 1936ರಲ್ಲಿ ಇಡೀ ರೈತರನ್ನು ಶೋಷಿಯಲಿಸ್ಟ್ ಪಕ್ಷ ಮತ್ತು ಪಕ್ಷೇತರ ವ್ಯಕ್ತಿಗಳಿಂದ ಇದು ಚಾಲನೆ ಪಡೆಯಿತು. ಇದು ಅಖಿಲಭಾರತ ಕಿಸಾನ್ ಮಹಾಸಭಾ ಎಂಬ ಹೆಸರು ಪಡೆದು ಹಲವಾರು ಬೇಡಿಕೆಗಳನ್ನು ಇಟ್ಟುಕೊಂಡು ಹೋರಾಟ ಪ್ರಾರಂಭಿಸಿತು. ಆ ಬೇಡಿಕೆಗಳೆಂದರೆ ಜಮೀನ್ದಾರಿ ನಿರ್ಮೂಲನೆ, ಉಳುವವನಿಗೆ ಭೂಮಿ ಕೊಡುವುದು, ಗೇಣಿ ಮತ್ತು ಕಂದಾಯ ರದ್ದತಿ, ಬಡ್ಡಿ ವ್ಯವಹಾರದ ಮೇಲೆ ಲೈಸನ್ಸ್ ನಿರ್ಬಂದ ಹೇರುವುದು, ಕೃಷಿ ಕೂಲಿಕಾರರಿಗೆ ಕನಿಷ್ಟ ವೇತನ, ಕಬ್ಬು ಮತ್ತು ವಾಣಿಜ್ಯ ಬೆಳೆಗಳಿಗೆ ಯೋಗ್ಯ ಬೆಲೆ ನಿಗಧಿ, ನೀರಾವರಿ ಸೌಕರ್ಯ ಒದಗಿಸುವುದು, ಪ್ರಗತಿಪರ ಆದಾಯವನ್ನು ಕೃಷಿಕ್ಷೇತ್ರಕ್ಕೂ ವಿಸ್ತರಿಸುವುದು. ಈ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಎಲ್ಲಾ ರೈತರನ್ನು ಒಗ್ಗೂಡಿಸುವುದಕ್ಕೆ ಕಿಸಾನ್ ಸಭೆ ಪ್ರಯತ್ನಿಸಿತು. 1945ರಿಂದ ಈಚೆಗೆ ಈ ಸಂಘಟನೆಯನ್ನು ಕಮ್ಯುನಿಸ್ಟರೇ ನಿಯಂತ್ರಿಸುತ್ತಿದ್ದಾರೆ. ನಂತರ ಇದರಲ್ಲಿ ಬಿರುಕು ಉಂಟಾಗಿ ಭಾರತೀಯ ಕಮ್ಯುನಿಸ್ಟ್ ಪಕ್ಷ ಮತ್ತು ಕಮ್ಯುನಿಸ್ಟ್ ಮಾರ್ಕಿಸ್ಟರು ಪ್ರತಿಸ್ಪರ್ಧಿಗಳಾದರು.

1979ರ ವಾರಣಾಸಿ ಅಧಿವೇಶನದ ನಂತರ ಕಮ್ಯುನಿಸ್ಟ್ ಮಾರ್ಕಿಸ್ಟರು ರೈತರ ಬದುಕನ್ನು ಸುಧಾರಿಸಲು ಹಲವಾರು ಬೇಡಿಕೆಗಳನ್ನು ಇಟ್ಟುಕೊಂಡು ಹೋರಾಟ ಪ್ರಾರಂಭಿಸಿದರು. ಬೇಡಿಕೆಗಳೆಂದರೆ 1) ಸರ್ವಾಧಿಕಾರವನ್ನು ವಿರೋಧಿಸಿ ಪ್ರಜಾಪ್ರಭುತ್ವದ ಶಕ್ತಿಗಳನ್ನು ಬಲಪಡಿಸುವುದು. 2) ಉಳುವವನಿಗೆ ಭೂಮಿ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕೊಟ್ಟು ಹೆಚ್ಚುವರಿ ಭೂಮಿಯನ್ನು ಭೂಹೀನರಲ್ಲಿ ಹಂಚುವುದು. 3) ಗೇಣಿದಾರ ಮತ್ತು ಕೋರಪಾಲು ರೈತರ ಹಿತ ಸಂರಕ್ಷಣೆ 4) ಲಾಭದಾಯಕ ಬೆಲೆಗಾಗಿ ಹೋರಾಟ 5) ಗ್ರಾಮೀಣ ಸಾಲದ ಹೊರೆಯಿಂದ ವಿಮುಕ್ತಿ 6) ಕೇಂದ್ರ ಮತ್ತು ರಾಜ್ಯಗಳು ಹೊರಿಸುವ ತೆರಿಗೆ, ಲೇವಿ, ಸರ್‌ಚಾರ್ಜುಗಳ ವಿರುದ್ಧ ಚಳುವಳಿ 7) ಕೃಷಿ ಕೂಲಿಕಾರರಿಗೆ ಕನಿಷ್ಠ ವೇತನ ಹೆಚ್ಚಿಸುವುದು 8) ಭೂಹೀನರಿಗೆ ಭೂ ನಿವೇಶನ 9) ರೈತರು ಮತ್ತು ಕೃಷಿ ಕೂಲಿಕಾರರ ಏಕತೆಗಾಗಿ ಸರ್ವ ಪ್ರಯತ್ನ ಮಾಡುವುದು.

ಇತ್ತೀಚೆಗೆ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಡೆದ ರೈತರ ಚಳುವಳಿಗಳು 'ಲಾಭದಾಯಕ' ಬೆಲೆಯನ್ನು ಚಳುವಳಿಯ ಮುಖ್ಯ ಬೇಡಿಕೆಯನ್ನಾಗಿ ಇಟ್ಟುಕೊಂಡಿದ್ದವು. ಹಾಗೂ ರೈತರು ಸಾಲದ ಹೊರೆಯಿಂದ ಬಳಲುತ್ತಿರುವುದರಿಂದ ಇಂದಿನ ರೈತ ಚಳುವಳಿಗಳು ಸಾಲವನ್ನು ಮನ್ನಾ ಮಾಡಬೇಕೆಂಬುದಾಗಿಯೂ ಸಹಾ ಬೇಡಿಕೆ ಹಾಕಿಕೊಂಡಿವೆ.

ಒಟ್ಟಿನಲ್ಲಿ ರೈತರು ಹಾಕಿಕೊಂಡಿರುವ ಬೇಡಿಕೆಗಳು ಭೂಮಿಯ ಉತ್ಪತ್ತಿ ಮತ್ತು ಉತ್ಪತ್ತಿ ಮಾಡಿದ ಬೆಳೆಗೆ ದೊರೆಯುವ ಪ್ರತಿಫಲ ಇವುಗಳಿಗೆ ಸಂಬಂಧಿಸಿರುವುದನ್ನು ಕಾಣಬಹುದು. ರೈತ ಹೋರಾಟವು ಎಲ್ಲಾ ಶ್ರಮಿಕ ವರ್ಗದ ಹೋರಾಟದ ಒಂದು ಅಂಗ ಮಾತ್ರ. ರೈತರನ್ನು ಒಳಗೊಂಡ ಎಲ್ಲಾ ಶ್ರಮಿಕರ ರಾಜ್ಯ ಅದರ ಅಂತಿಮ ಗುರಿ.

ರೈತ ಹೋರಾಟದ ಪರಿಣಾಮಗಳು :

ಭಾರತದಲ್ಲಿ ಪ್ರಾರಂಭದಿಂದಲೂ ರೈತ ಹೋರಾಟಗಳು ನಡೆಯುತ್ತಲೇ ಬಂದಿದೆ. ಆದರೆ ಅವು ಚೀನಾ ಮತ್ತು ಸೋವಿಯತ್ ರಷ್ಯಾಗಳಂತಹ ಕ್ರಾಂತಿಕಾರಿ ಚಳುವಳಿಗಳಲ್ಲ. ಭಾರತದ ಈ ಹೋರಾಟಗಳ ಗುರಿ ಸೀಮಿತವಾಗಿತ್ತು, ಮೇಲ್ವರ್ಗ ಮತ್ತು ಮೇಲ್ಜಾತಿಗಳ ಏಕಸ್ವಾಮ್ಯತೆಯನ್ನು ಮುರಿಯುವ ಹಾಗೂ ಅವರ ವಿಶೇಷ ಅಧಿಕಾರ ಮತ್ತು ಸವಲತ್ತುಗಳನ್ನು ನಿರಾಕರಿಸಲು ಚಳುವಳಿಗಳು ಮಾತ್ರ ನಡೆದಿವೆ. ಕಾಂಗ್ರೆಸ್ ಪಕ್ಷವು ಸಮತಾವಾದದ ಹೆಸರಿನಲ್ಲಿ ಕೆಲವು ಭೂಸುಧಾರಣೆಗಳನ್ನು ಮಾಡಿತಾದರೂ ಅವುಗಳ ಲಾಭ ಬಡವರಿಗೂ ಕೃಷಿ ಕೂಲಿಕಾರರಿಗೂ ಇನ್ನೂ ಸಹ ಮುಟ್ಟಿಲ್ಲ. ಕೃಷಿ ಬಂಡವಾಳ ಬೆಳೆಯುತ್ತಿದೆ. ಎಡ ಪಂಥೀಯ ಸವಾಲು ಇನ್ನೂ ಯಶಸ್ವಿಯಾಗಿಲ್ಲ. ಈಗ ಉಳುವವನಿಗೆ ಭೂಮಿ, ಕೃಷಿ ಕೂಲಿ ದರದಲ್ಲಿ ಹೆಚ್ಚಳ, ಲಾಭದಾಯಕ ಬೆಲೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ರೈತ ಹೋರಾಟಗಳು ನಡೆಯುತ್ತಿದ್ದರೂ ಪ್ರಯೋಜನ ಮಾತ್ರ ತೀರ ಕಡಿಮೆ. ಅನೇಕ ರೈತ ಚಳುವಳಿಗಳಲ್ಲಿ ನಿಜವಾದ ರೈತರು ತೀರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಡಿಮೆ. ಹಾಗೂ ಕೆಲವು ಮುಗ್ಧ ರೈತರನ್ನು ರಾಜಕಾರಣಿಗಳು ಮತ್ತು ಶ್ರೀಮಂತ ರೈತರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ರೈತ ಹೋರಾಟಗಳು ನಡೆಯುತ್ತಿದ್ದರೂ ಸಹ, ಇಂದಿನ ರೈತರ ಪರಿಸ್ಥಿತಿಯು ಸುಧಾರಿಸಿಲ್ಲ ಭೂಮಿ ಹೀನ ರೈತರು ಮತ್ತು ಕೃಷಿ ಕೂಲಿಕಾರರ ಸಂಖ್ಯೆಯು ಹೆಚ್ಚಾಗುತ್ತಿದೆ. ರೈತರಲ್ಲಿ ಹೆಚ್ಚು ಜನರು ನಿರ್ಗತಿಕರಾಗುತ್ತಿದ್ದಾರೆ. ಕೋರೆಪಾಲು ರೈತರನ್ನು ಗೇಣಿರೈತರನ್ನು ಒಕ್ಕಲೆಬ್ಬಿಸುವುದು ನಿಂತಿಲ್ಲ. ಕೈಗಾರಿಕಾ ಮತ್ತು ಬಳಕೆದಾರ ಸಾಮುಗ್ರಿಗಳ ಬೆಲೆ ಏರುತ್ತಿದ್ದಾಗ್ಯೂ ಕೃಷಿ ಬೆಲೆಗಳು ಏರುತ್ತಿಲ್ಲ. ಬೇಸಾಯದ ಖರ್ಚು ಅಧಿಕವಾಗಿ ಲಾಭ ಕಡಿಮೆಯಾಗಿದೆ. ಹೆಚ್ಚು ಭಾಗ ರೈತರ ಆರ್ಥಿಕ ಸ್ಥಿತಿಯು ಶೋಚನೀಯವಾಗಿದೆ. ಗ್ರಾಮೀಣ ನಿರುದ್ಯೋಗ ಮತ್ತು ಅರೆ ಉದ್ಯೋಗ ಅಧಿಕವಾಗುತ್ತಿದೆ. ತಂತ್ರಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿದರೂ ಅದು ಸಾಮಾನ್ಯ ರೈತರಿಗೆ ದೊರೆಯುತ್ತಿಲ್ಲ. ಬರಗಾಲ ರೈತರನ್ನು ಪೀಡಿಸುತ್ತಿದ್ದರೂ ಪರಿಹಾರ ಕಾರ್ಯಕ್ರಮಗಳು ನಡೆಯುತ್ತಿಲ್ಲ.

ರೈತ ಹೋರಾಟಗಳು ದಿನೇ ದಿನೇ ಉಲ್ಬಣಿಸುತ್ತಿವೆಯಾದರೂ ಕ್ರಾಂತಿಕಾರಕವಾದಿಲ್ಲ. ಎಡಪಂಥೀಯರು ರೈತರನ್ನು ಸಂಘಟಿಸುತ್ತಿದ್ದಾರೆ ಆದರೆ ವಿಶಾಲ ಪ್ರದೇಶವಾಗಿರುವ ಭಾರತದಲ್ಲಿ ಎಲ್ಲಾ ರೈತರನ್ನು ಸಂಘಟಿಸುವುದು ಸಾಧ್ಯವಾಗಿಲ್ಲ. ರೈತ ಹೋರಾಟಗಳಲ್ಲಿ ಸಮರ್ಥವಾದ ನಾಯಕತ್ವದ ಕೊರತೆ ಇದೆ. ಆದರೂ ಇಂದಿನ ಪರಿಸ್ಥಿತಿಯನ್ನು ಗಮನಿಸಿದರೆ ಚಳುವಳಿಗಳ ಹೆಚ್ಚು ಸೈದ್ದಾಂತಿಕೆಯನ್ನು ಅಳವಡಿಸಿಕೊಂಡು ಮುಂದಾದರೂ ಪರಿಣಾಮಕಾರಿಯಾದ ರೈತ ಕ್ರಾಂತಿನಡೆಯಬಹುದೆಂಬುದು ಗೋಚರಿಸುತ್ತದೆ.

गुरुकुल कांगड़ी विश्वविद्यालय पुस्तकालय
100826

ಪರಾಮರ್ಶನಗಳು

ಹೆಚ್. ವಿ. ನಾಗೇಶ್ ಮತ್ತು ಪುನೀತ್ ಆ. ಈ ರೈತ ಹೋರಾಟಗಳು.

Presented free of cost with compliments from the Central Institute of Indian Languages (Govt. of India). Mysore-570 006

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

GURUKUL KANGRI LIBRARY
Signature Date
Access on 12-7-33
Class on
Cat on
Tag
Filing
E.A.R.
Any other
Checked

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗ್ರಾಮಸಮಾಜ

ಜೀವ ಪ್ರಕಾಶನ

“ಅನುಭವಿ ಅಧ್ಯಾಪಕರೂ, ಸಂವೇದನಾಶೀಲ ಸಂಶೋಧಕರೂ ಆದ ಡಾ॥ ಜೋಗನ್ ಶಂಕರ್ ಅವರ ‘ಗ್ರಾಮ ಸಮಾಜ’ ಕೃತಿ ಒಂದು ಅಮೂಲ್ಯವಾದ ಜ್ಞಾನಮೂಲವಾಗುವುದರಲ್ಲಿ ಸಂದೇಹವಿಲ್ಲ.”

– ಆರ್. ಇಂದಿರಾ
ಸಮಾಜಶಾಸ್ತ್ರದ ಪ್ರಾಧ್ಯಾಪಕರು
ಮಾನಸಗಂಗೋತ್ರಿ

“ಗ್ರಾಮೀಣ ಸಮಾಜದ ವಿಷಯ ವಿಸ್ತಾರವಾದದ್ದು, ಅಲ್ಲಿನ ಸಮಸ್ಯೆಗಳು ಬಹುಮುಖವಾದುವು, ವಾದ-ವಿವಾದಗಳು ಸಂಕೀರ್ಣವಾದವುಗಳು. ಜನ ಸಾಮಾನ್ಯರಿಗೆ ಇಂತಹ ಪ್ರಮುಖ ವಿಷಯವನ್ನು ಸುಲಭ ಮತ್ತು ಸರಳವಾಗಿ ವಿವರಿಸಲು ಡಾ॥ ಜೋಗನ್ ಶಂಕರ್ ಪ್ರಯತ್ನಿಸಿದ್ದಾರೆ.”

– ಡಾ॥ ಸತ್ಯನಾರಾಯಣ

“ಸಮಾಜಶಾಸ್ತ್ರಜ್ಞರಾದ ಡಾ॥ ಜೋಗನ್ ಶಂಕರ್ ಅವರು ತಮ್ಮ ಬೆಚ್ಚಗಿನ ಅಂತ:ಕರಣದಿಂದಾಗಿ ನಮ್ಮನ್ನೂ ಸಮಾಜವನ್ನೂ ಕರಳುಬಳ್ಳಿ ಸಂಬಂಧದೋಪಾದಿಯಲ್ಲಿ ಮುಟ್ಟುತ್ತಾರೆ. ಇಂದಿನ ಪರಿಸ್ಥಿತಿಯಲ್ಲಿ ಗೊಡ್ಡಾಗಿರುವ ಶಾಸ್ತ್ರವಿಜ್ಞಾನಕ್ಕೆ ಕಳಕಳಿ ಅಂತ:ಕರಣವನ್ನೂ ಬರೇ ಸ್ಫೋಟವಾಗಬಹುದಾದ ಕಳಕಳಿ ಅಂತ:ಕರಣಗಳಿಗೆ ಶಾಸ್ತ್ರೀಯ ಚೌಕಟ್ಟನ್ನೂ ಏಕೀಭವಿಸಿ ನೀಡುವ ಸಾಮರ್ಥ್ಯಕ್ಕೆ ಅವರ ಕೃತಿಗಳು ಉದಾಹರಣೆಯಾಗಿವೆ.”

– ದೇವನೂರ ಮಹಾದೇವ

ಬೆಲೆ : ರೂ. 50/-

CC-0. In Public Domain. Gurukul Kangri Collection, Haridwar

ಗ್ರಾಮಸಮಾಜ

ಡಾ || ಜೋಗನ್ ಶಂಕರ್

aj Foundation C
n. Gurukul Kang